1926 ರ ನಂ೦ಬಿಕೆ

ಇರುವುದಿಲ್ಲ

ಸ್ಥಾಪನೆ : ೧೮೬೫ ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯು
ಶತಮಾನೋತ್ತರ ಬೆಳ್ಳಿ ಹಬ್ಬವ

ಪುಸ್ತಕ ಪ್ರದರ್ಶನ ೧೯೮೯

ಶತಮಾನೋತ್ತರ ಬೆಳ್ಳಿ ಹಬ್ಬ
(ಎಸ್ಸೆಲ್ಸಿ ಗಿರಣಿ ರಿಂದ)
ವರ್ಷ

ಜೆ.ಚನ್ನಬಸಪ್ಪನವರು
(೧೮೫೩–೧೯೪೫)
ನೆಯ ಸಂಪುಟ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ವೃತ್ತ. ರೊದ್ದರಸ್ತೆ. ಧಾರವಾಡ – ೮



3ಲ೬

1927

ಸಿದ್ಧನಾಥ ವಾಚನ ಮಂದಿರ.
ಸೊರಬ. ಜಿ. ಧಾರವಾಡ.

Reg. No. B 1445.

ಕನ್ನಡ ಶಾಲಾಪತ್ರಿಕ

Kannada Shala Patraka

JANUARY 1927.

ಸಂಪಾದಕ— ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಏ

ಸಂಪುಟ ೬ನೇ. | ಜನವರಿ ೧೯೨೭. | ಸಂಚಿಕೆ ೧೦

ವಿಷಯಾನುಕ್ರಮಣಿಕೆ

೧	ಬಡೋದೆಯ ಪ್ರಾಥಮಿಕ ಶಿಕ್ಷಣ	೧—೭
೨	ಆಡಳಿತೆಯ ಅಧಿಕಾರಗಳು ಟ್ರೇನಿಂಗ ಸ್ಕೂಲಿನ ಸಂಸ್ಥೆಯನ್ನು ನೋಡಲಿಕ್ಕೆ ಬಂದದ್ದು	೭—೯
೩	ಪ್ರಾ. ಸ್ಕೂಲಿನಲ್ಲಿ ಇತಿಹಾಸದ ಕೋಣೆಯು	೯—೧೩
೪	ಧಾರವಾಡ ಪ್ರಾ. ಸ್ಕೂ. ವಾರ್ಷಿಕ ಪರೀಕ್ಷೆಯ ಪರಿಣಾಮ	೧೩—೧೫
೫	ಗ್ರಂಥವಿಮರ್ಶೆ	೧೫—೧೬
೬	ಉದ್ಯೋಗವಿಲ್ಲದವರು ಏನು ಮಾಡತಕ್ಕದ್ದು	೧೬—೧೮
೭	ಪತ್ರಗಳ ಸಾರಾಂಶ	೧೮—೨೧
೮	ಪ್ರಕಟನೆ	೨೧—೨೪
೯	ಹಿಂದುಸ್ತಾನದ ಇತಿಹಾಸ	೨೧—೨೮

Printed by M. K. Joshi at the Karnatak Printing Works, Dharwar
Published by H. G. Deshpande, B. A.,
Head-master, Training College for Men, Dharwar, at his ce

ಶಾಲಾಪತ್ರಕದ ಹೊಸವರ್ಷವು ಎಪ್ರಿಲ್ ತಿಂಗಳಿನಿಂದ ಪ್ರಾರಂಭವಾಗುವದ
ಪ್ರತಿವರ್ಷ ವರ್ಗಣಿಯ ಹಣವನ್ನು ಮುಂಗಡವಾಗಿಯೇ ವಸೂಲ ಮಾಡುವ ರೂ
ಇರುವದು. ಅದರಿಂದ ಎಲ್ಲ ಆಫಿಸರರಿಗೆ ಬಿಲ್ಲು ಹಾಗು ಪಾವತಿಗಳನ್ನು ಮೊದಲ
ಕಳಿಸಿರುತ್ತದೆ. ಕೆಲವರಿಗೆ ೨-೩ ಸಾರೆ ರಿಮಾಯಂಡರ ಸಹ ಕಳಿಸಿರುವದು. ಮತ
ಖಾಸಗೀ ಜನರಿಗೆ ಪತ್ರದ್ವಾರದಿಂದ ತಿಳಿಸಿರುತ್ತದೆ. ಹೀಗಿದ್ದು ಎಷ್ಟೋ ಜನರ ಕ
ಯಿಂದ ೧೯೨೬-೨೭ನೇ ವರ್ಷದ ವರ್ಗಣೀ ಹಣವು ಇನ್ನೂ ಬಂದಿರುವದಿಲ್ಲ. ಯಾ
ಹಣವು ಬಾಕಿ ಉಳಿದಿರುವದೋ ಅವರು ೧೯೨೭ನೇ ಮಾರ್ಚ ೧೫ನೇ ತಾ॥ ಒಳಗಾ
ತಮ್ಮ ಹಣವನ್ನು ಕಳಿಸಬೇಕಾಗಿ ವಿನಂತಿ ಅದೆ.

ಹೊಸ ವರ್ಗಣೀದಾರರಾಗಲಿಚ್ಛಿಸುವವರು ವ್ಹಿ. ಪಿ. ಯಿಂದ ಅಂಕವನ್ನು ಬೇಡ
ಬರೂ. ಮುನಿ ಆರ್ಡರ ಮಾಡಬೇಕು. ಅದರಿಂದ ಉಭಯತರಿಗೂ ಲಾಭವಾಗುವದ

— ಸಂ. ಕ. ಶಾ ಪ.]

ಜಾಹೀರಾತು.

ಕನ್ನಡ ೬।೭ನೆಯ ಇಯತ್ತೆಗಳ ಮತ್ತು ವ್ಹ-ಫಾ-ಪರೀಕ್ಷೆಯ
ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ

ಏತದ್ದೇಶಿಯ ಸೋಪಪತ್ತಿಕ ಜಮಾ ಖರ್ಚಿನ ಪದ್ಧತಿ

ಗ್ರಂಥಕರ್ತರು:—ಓಂಕಾರ ಬಾಳಕೃಷ್ಣ ಬೋಠೆ

ಜಮಾಖರ್ಚಿನ ವಿಷಯವು ತಲೆಬೇಸರಿಕೆಯಾಗಿದ್ದರೂ ಈ ಪುಸ್ತಕವನ್ನು ಓ
ವದಕ್ಕೆ ಹುರುಪು ಹುಟ್ಟುವದು; ಇದಲ್ಲದೆ ಈ ಪುಸ್ತಕವು ಹೊಸ ಶಿಕ್ಷಣ ಕ್ರಮಕ್ಕ
ಸರಿಸಿ, ಸುಲಭರೂಪದಿಂದ ರಚಿಸಲ್ಪಟ್ಟಿರುವದು. ಅದರಿಂದ ಇದು ವಿದ್ಯಾರ್ಥಿಗಳಿಗ
ಶಿಕ್ಷಕರಿಗೂ ಬಲು ಉಪಯುಕ್ತವಾಗಿರುವದು. ಈ ಮಾತಿನ ಮನವರಿಕೆಯ ಬ
(೧೯೨೬ಇಸ್ವಿಯ) ಜೂನ ತಿಂಗಳ ಶಾಲಾಪತ್ರಕದಲ್ಲಿ, ಜುಲೈ ತಿಂಗಳ ಸುಧಾರಕದ
ಈ ಪುಸ್ತಕದ ಸಂಬಂಧವಾಗಿ ಪ್ರಕಟಿಸಲ್ಪಟ್ಟಿರುವ ಅಭಿಪ್ರಾಯಗಳನ್ನು ಓದಬಹುದ
ಅಂಗೈ ನೋಡಿಕೊಳ್ಳುವದಕ್ಕೆ ಕನ್ನಡಿಯೇತಕ್ಕೆ? ಪುಸ್ತಕ ತರಿಸಿ ನೋಡಿದರೆ ತಾನಾ
ತಿಳಿಯುವದು. ಇದು "**ಟೀಕ್ಸ್ಟ ಬುಕ್ಕು**"ಎಂದು ಮಂಜೂರಾಗಿರುವದು. ಬೆಲೆ ೧೦
ಬುಕ್ ಸೇಲ್ಲರರಿಗೂ ಶಿಕ್ಷಕರಿಗೂ ಹೆಚ್ಚು ಪ್ರತಿಗಳನ್ನು ತೆಗೆದುಕೊಂಡಲ್ಲಿ ಯೋಗ್ಯಕ
ಶನ್ನು ಕೊಡಲ್ಪಡವದು.

ಸಿಗುವ ಸ್ಥಳ

೧ ಚಿದಂಬರ ಓಂಕಾರ ಬೋಠೆ ಹೆಡ್‌ಮಾಸ್ತರ ಶಾಲಾ ದೇವಲತ್ತಿ. ತಾಲೂ
ಖಾನಪೂರ ಜಿ. ಬೆಳಗಾಂವ.

೨ ದತ್ತಾಜಿರಾವ ಸಾವಂತ ರಾಮತತ್ವಪ್ರಕಾಶ ಬುಕ್‌ಡಿಪೊ ಬೆಳಗಾವ.

೩. ಶಂಕರ ಪುಸ್ತಕ ಭಾಂಡಾರ ಧಾರವಾಡ.

ಕನ್ನಡ

ಶಾಲಾಪತ್ರಿಕೆ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬೩	ಜನವರಿ. ೧೯೨೭.	ಸಂ. ೧೦.

ಬಡೋದೆಯ ಪ್ರಾಥಮಿಕ ಶಿಕ್ಷಣ.

ಈ ಸಂಸ್ಥಾನದಲ್ಲಿ ಒತ್ತಾಯದ ಪ್ರಾ. ಶಿ. ವು ೧೯೦೬ನೇ ಇಸವಿಯಲ್ಲಿ ಪ್ರಾರಂಭಿಸಲ್ಪಟ್ಟಿತು. ಮೊದಲಿನ ೧೦ ವರ್ಷಗಳ ಅವಧಿಯಲ್ಲಿ ೬ನೇ ವರ್ಷದಿಂದ ೧೨ವರ್ಷದ ವಯಸ್ಸಿನಲ್ಲಿದ್ದ ಎಲ್ಲ ಬಾಲಕರೂ ೬ರಿಂದ ೧೮ವರ್ಷದ ಬಾಲಿಕೆಯರೂ ಕಲಿಯಬೇಕೆಂಬ ನಿರ್ಬಂಧವಿತ್ತು. ಈ ಕಾಲವಲ್ಲಿ ಒತ್ತಾಯದ ನೇಮವನ್ನು ಸರಿಯಾಗಿ ಪಾಲಿಸಿದ್ದರಿಂದ ೧೯೧೬ರಲ್ಲಿ ೩೦೪೪ ಶಾಲೆಗಳಿದ್ದು ೨ ಲಕ್ಷ ೩೯ ಸಾವಿರ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಒಟ್ಟು ವೆಚ್ಚವು ೧೪ ಲಕ್ಷ ೬೫ ಸಾವಿರ ರು. ಇತ್ತು. ಆದರೆ ಆ ವರ್ಷವೇ ಒತ್ತಾಯದ ಶಿಕ್ಷಣದ ವಿಷಯವನ್ನು ಪರೀಕ್ಷಿಸುವದಕ್ಕಾಗಿ ಒಂದು ಕಮಿಟಿಯು ನೇಮಿಸಲ್ಪಟ್ಟಿತು. ಈ ಕಮಿಟಿಯವರ ಶೋಧದಿಂದ ಎಷ್ಟೋ ಶಾಲೆಗಳಲ್ಲಿ ಸಾಕಷ್ಟು ಬಾಲರಿಲ್ಲದೂ, ಬಹಳ ದಿವಸ ಗೈರಹಾಜರಿದ್ದ ಬಾಲಕರ ಹೆಸರನ್ನಿಟ್ಟು ಹುಡುಗರ ಸಂಖ್ಯೆಯನ್ನು ಬೆಳಿಸಿದ್ದೂ, ೬ನೇ ಇಯತ್ತೆ ಪಾಸಾಗದ ಅನನುಭವಿಕ ಶಿಕ್ಷಕರನ್ನು ಎಷ್ಟೋ ಶಾಲೆಗಳಿಗೆ ನೇಮಿಸಿದ್ದೂ ಕಂಡು ಬಂದವರಿಂದ ಹೆಸರಿಗೆ ಮಾತ್ರ ನಡೆದಂಥ ೪೭೦ ಶಾಲೆಗಳನ್ನು ಬಂದು ಮಾಡಬೇಕಾಯಿತು. ಆದದರಿಂದ ಹೊರಗಿನಿಂದ ನೋಡುವವರಿಗೆ ಪ್ರಾ. ಶಿ. ದ ಪ್ರಗತಿಯು ಕುಗ್ಗಿದಂತೆ ಕಂಡು ಬಂತು. ಆದರೆ ನಿಜವಾದ ವಸ್ತುಸ್ಥಿತಿಯನ್ನು ನಿರೀಕ್ಷಿಸಿದಲ್ಲಿ ಹೀಗೆ ಮಾಡಿದೇ ಸರಿಯಾಯಿತೆಂದು ತಿಳಿಯುವದು. ೧೯೨೬ರಲ್ಲಿ ಶಾಲೆಗಳ ಸಂಖ್ಯೆಯು ೨೬೨೪ ಇದ್ದು ವಿದ್ಯಾರ್ಥಿಗಳ ಸಂಖ್ಯೆಯು ೧,೯೬,೧೧೪ ಇತ್ತು. ಅಂಪರೆ ಈಚೆಯ ೧೮ ವರ್ಷಗಳಲ್ಲಿ ಶಾಲೆಗಳ ಸಂಖ್ಯೆಯು ೬೬೦ ರಿಂದಲೂ ವಿದ್ಯಾರ್ಥಿಗಳ ಸಂಖ್ಯೆಯು ೪೩ ಸಾವಿರದಿಂದಲೂ ಕಡಿಮೆಯಾಯಿತು. ಹೀಗೆ ಪ್ರಾ. ಶಿ. ದ ಪ್ರಗತಿಯು ಹಿಮ್ಮೆಟ್ಟಿದ್ದರಿಂದ ೧೯೨೬ ರ ಕೊನೆಗೆ ಇದರ ಕಾರಣಗಳನ್ನು

ಶೋಧಿಸುವಕಕ್ಕಾಗಿ ಶಿಕ್ಷಣ ಮಂತ್ರಿಗಳಾದ ರಾ. ಬ. ಗೋವಿಂದ ಭಾಯಿ ದೇಸಾಯಿ ಇವರಿಗೆ ಮಹಾರಾಜರು ಅಪ್ಪಣೆ ಮಾಡಿದರು ಶಿಕ್ಷಣ ಮಂತ್ರಿಗಳು ವಸ್ತುಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿ ಶಿಕ್ಷಣದ ಅವನತಿಯ ಕಾರಣಗಳನ್ನು ಕಂಡು ಹಿಡಿದು ಸವಿಸ್ತಾರವಾದ ವರದಿಯನ್ನು ಪ್ರಸಿದ್ಧಪಡಿಸಿದ್ದಾರೆ.

ಆ ಕಾರಣಗಳು ಯಾವವೆಂದರೆ:—

(೧) ಸಂಸ್ಥಾನದಲ್ಲಿ ಒಟ್ಟು ೨೯೦೨ ಹಳ್ಳಿಗಳಿದು ೧೪೪೪ ಹಳ್ಳಿಗಳಲ್ಲಿ ಮಾತ್ರ ಶಾಲೆಗಳಿವೆ. ಕೆಲವು ಹಳ್ಳಿಗಳಲ್ಲಿ ಒಂದಕ್ಕಿಂತ ಹೆಚ್ಚು ಶಾಲೆಗಳಿವೆ. ಉಳಿದ ಹಳ್ಳಿಗಳಲ್ಲಿ ಶಾಲೆಗಳೇ ಇಲ್ಲ.

(೨) ೧೯೧೬ರಲ್ಲಿ ಶಾಲೆಗೆ ಹೋಗತಕ್ಕ ಕನಿಷ್ಠಾವಧಿಯು ೬ ವರ್ಷವಿತ್ತು. ಅದನ್ನು ೧೯೧೬ರಲ್ಲಿ ಬದಲಿಸಿ ೭ ವರ್ಷವೆಂದು ಮಾಡಿದ್ದರಿಂದ ಬಾಲಕರ ಸಂಖ್ಯೆಯು ಕಡಿಮೆಯಾಯಿತು.

(೩) ಪ್ಲೇಗ, ಇನಫ್ಲುಯೆಂಜಾ, ದುಷ್ಕಾಳ ಮೊದಲಾದ ಕಾರಣಗಳಿಂದ ಕೆಲವು ಪ್ರದೇಶಗಳಲ್ಲಿ ಒತ್ತಾಯದ ನೇಮವನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಯಿತು.

(೪) ಒತ್ತಾಯದ ನೇಮವನ್ನು ಪಾಲಿಸುವದರಲ್ಲಿ ಸ್ಥಾನಿಕ ಸಂಘಗಳೂ ಶಿಕ್ಷಣ ಖಾತೆಯವರೂ ತೋರಿಸಿದ ಅನಾಸ್ಥೆ.

(೫) ಶಾಲೆಗೆ ಬಾಲಕರನ್ನು ಕಳಿಸದಂಥ ಪಾಲಕರಿಗೆ ತಪ್ಪುಗಾರರೆಂದು ದಂಡ ಮಾಡುವದರಲ್ಲಿಯೂ, ದಂಡದ ಹಣವನ್ನು ವಸೂಲ ಮಾಡುವದರಲ್ಲಿಯೂ ಅಧಿಕಾರಿಗಳು ತೋರಿಸಿದ ಅನಾಸ್ಥೆ.

(೬) ಕೂಲಿಯನ್ನು ಹಾಗೂ ಒಕ್ಕಲತನವನ್ನು ಮಾಡುವ ಅಶಿಕ್ಷಿತ ಪಾಲಕರ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವದನ್ನು ಬಿಟ್ಟು ದಂಡ ಕೊಡಲಿಕ್ಕೆ ಸಿದ್ಧರಾದದ್ದರಿಂದ ಎಷ್ಟೋ ಬಾಲಕರು ಶಾಲೆಗೆ ಹೋಗದಿರುವದು.

(೭) ಜಮೇದಾರರು ತಮ್ಮ ಭೂಮಿಗಳನ್ನು ಸಾಗುಮಾಡುವ ಒಕ್ಕಲಿಗರ ಮಕ್ಕಳು ಶಾಲೆಗೆ ಹೋಗಬಾರದೆಂಬ ಇಚ್ಛೆಯಿಂದ ಗುಪ್ತವಾಗಿ ಒಕ್ಕಲಿಗರಿಗೆ ಮಾಡುತ್ತಿದ್ದ ದುರುಪದೇಶ.

(೮) ಅಯೋಗ್ಯ ಶಿಕ್ಷಕರನ್ನು ನೇಮಿಸುವದರಿಂದ ಉಂಟಾದ ಅನಾಸ್ಥೆ.

ಈ ಸ್ಥಿತಿಯನ್ನು ಸುಧಾರಿಸಲಿಕ್ಕೆ ಶಿಕ್ಷಣಮಂತ್ರಿಗಳು ಸೂಚಿಸಿದ ಉಪಾಯಗಳು ಯಾವವೆಂದರೆ: —

(೧) ಶಾಲೆಯ ವಯಸ್ಸಿನ ಬಾಲಕರನ್ನು ಶಾಲೆಗೆ ಕಳಿಸದೆ ಇದ್ದ ಪಾಲಕರು ಶಿಕ್ಷೆಗೆ ಪಾತ್ರರಾಗುವಂತೆ ಆ ಬಾಲಕರನ್ನು ಏನಾದರೂ ಕೆಲಸಕ್ಕೆ ಹಚ್ಚಿಕೊಳ್ಳುವ

ಶ್ರೀಮಂತರೂ ದಂಡಕ್ಕೆ ಪಾತ್ರ ರಾಗತಕ್ಕದ್ದೆಂಬ ಕಲನುನ್ನು ಪ್ರಾ. ಶಿ. ದ ಆಕ್ಟಿನಲ್ಲಿ ಸೇರಿಸಬೇಕು.

(೨) ಶಿಕ್ಷಕರ ಪಗಾರವನ್ನು ಹೆಚ್ಚಿಸಿ ಯೋಗ್ಯ ಜನರು ಶಿಕ್ಷಣದ ಕೆಲಸಕ್ಕೆ ಸಿಗು ನಂತೆ ಮಾಡಬೇಕು.

(೩) ಶಿಕ್ಷಕರಿಗೆ ಶಾಲೆಯ ಹತ್ತ್ರವೇ ಇರಲಿಕ್ಕೆ ಮನೆಯನ್ನು ಕಟ್ಟಿಸಿಕೊಡಬೇಕು. ಶಾಲೆಯ ಕಟ್ಟಡವು ದೊಡ್ಡದಿದ್ದರೆ ಶಿಕ್ಷಕನಿಗೆ ಇರಲಿಕ್ಕೆ ಅಲ್ಲಿ ಸ್ಥಳವನ್ನು ಕೊಡಬೇಕು.

(೪) ಸರಿಯಾಗಿ ಕೆಲಸ ಮಾಡುವ ಶಿಕ್ಷಕರನ್ನು ಅಪರ ಸ್ವಸ್ಥಳದಲ್ಲಿಯೇ ಇರ ಕೊಡಬೇಕು.

(೫) ಒಂದನೇ ವರ್ಷದ ಟ್ರೇಂಡ ಶಿಕ್ಷಕರು ೧೦ ವರ್ಷ ಸಮಾಧಾನಕರವಾಗಿ ಕೆಲಸ ಮಾಡಿದ ನಂತರ ೨ನೇ ವರ್ಷದ ಟ್ರೇಂಡರಂತೆ ಅವರಿಗೆ ಪಗಾರ ಕೊಡಬೇಕು. ಇದರಂತೆ ೨ನೇ ವರ್ಷದವರಿಗೆ ೧೦ ವರ್ಷಗಳ ನಂತರ ೩ನೇ ವರ್ಷದ ಸ್ಕೇಲು ಕೊಡ ಬೇಕು.

(೬) ಪ್ರಾ. ಶಿ. ದ ಆಕ್ಟಿನಲ್ಲಿದ್ದ ಶಾಲೆಗೆ ಹೋಗತಕ್ಕ ಕನಿಷ್ಠಾವಧಿಯು ೭ರ ಬದಲು ೬ ವರ್ಷವೆಂದೂ ಪರಮಾವಧಿಯು ೧೨ರ ಬದಲು ೧೧ ವರ್ಷವೆಂದೂ ಇರತ ಕ್ಕದ್ದು.

(೭) ಯಾವದಾದರೊಂದು ಗ್ರಾಮದಲ್ಲಿ ಕೂಡಿಸಿದ ದಂಡದ ಹಣವನ್ನು ಆ ಗ್ರಾಮದ ಶಿಕ್ಷಣಕ್ಕಾಗಿಯೇ ವೆಚ್ಚಮಾಡಬೇಕು.

(೮) ಆರಂಭದ ಬಾಲಕರ ವರ್ಗವನ್ನು ದಿವಸದಲ್ಲಿ ಮೂರು ತಾಸು ಹಾಕಿದರೆ ಸಾಕು. ಈ ಅವಧಿಯಲ್ಲಿ ಕಥೆ, ಆಟ, ಮೊದಲಾದ ಮನೋರಂಜಕ ವಿಷಯಗಳಿಗೆ ಒಂದು ತಾಸಾದರೂ ಇರತಕ್ಕದ್ದು.

(೯) ಹಳ್ಳಿಯ ಶಾಲೆಗಳಿಗೆ ಬೇರೆ ಕ್ರಮಿಕ ಪುಸ್ತಕಗಳನ್ನು ಹಳ್ಳಿಯ ಸ್ಥಿತಿಗನು ಗುಣವಾಗಿ ಸಿದ್ಧಮಾಡತಕ್ಕದ್ದು.

(೧೦) ಯಾವ ಗ್ರಾಮದಲ್ಲಿ ಜನರು ಶಾಲೆಯ ಕಟ್ಟಡದ ದೆಶೆಯಿಂದ ಹಣವನ್ನು ಕೂಡಿಸಿ ಕೊಡುವರೋ ಆ ಗ್ರಾಮಕ್ಕೆ ಮೊದಲು ಕಟ್ಟಡವನ್ನು ಕಟ್ಟಿಸಿಕೊಡಬೇಕು.

(೧೧) ಮಧ್ಯಮ ಹಾಗೂ ಉಚ್ಚ ಶಿಕ್ಷಣಕ್ಕೆ ಹೆಚ್ಚು ಹಣವನ್ನು ವೆಚ್ಚಮಾಡುವ ದನ್ನು ಉಳಿಸಿ ಪ್ರಾಥಮಿಕ ಶಿಕ್ಷಣದ ಸುಧಾರಣೆಗಾಗಿ ಆ ಹಣವನ್ನು ವೆಚ್ಚಮಾಡತ ಕ್ಕದ್ದು.

(೧೨) ಕೃಷಿಕರ್ಮ ವಿದ್ಯೆಯ ಒಲವು ಇದ್ದ ಶಾಲೆಗಳನ್ನು ಪ್ರಾರಂಭಿಸಬೇಕು.

(೧೩) ಸ್ವತಂತ್ರ ಉರ್ದು ಶಾಲೆಗಳ ಅವಶ್ಯಕತೆ ಇಲ್ಲ. ಬೇಕಾದರೆ ಮುಸಲ್ಮಾನ ಹುಡುಗರಿದ್ದಲ್ಲಿ ಒಬ್ಬ ಉರ್ದು ಬಲ್ಲ ಶಿಕ್ಷಕನನ್ನಿಟ್ಟರೆ ಸಾಕು.

(೧೪) ಶಾಲೆಯಲ್ಲಿ ನಡೆಯುವ ಶಿಕ್ಷಣ ಪದ್ಧತಿಯನ್ನು ಸುಧಾರಿಸಲಿಕ್ಕೆ ಇನಸ್ಪೆಕ್ಟರರೂ ಡಿಪೂಟಿ ಇನಸ್ಪೇಕ್ಟರರೂ, ಟ್ರೇ. ಕಾ. ದ ಗರುಗಳೂ ಪ್ರಾ. ಶಾಲೆಗಳಿಗಿದ್ದ ಸೂಟಿಗಳಲ್ಲಿ ಅಲ್ಲಲ್ಲಿ ಶಿಕ್ಷಣದ ವರ್ಗಗಳನ್ನು ಇಡಬೇಕು; ಮತ್ತು ಶಿಕ್ಷಕರ ಸಮ್ಮೇಲನಗಳನ್ನು ಮಾಡಬೇಕು.

(೧೫) ಶಾಲೆಯು ಜನತೆಯ ಸುಧಾರಣೆಯ ಸಲುವಾಗಿ ಇಡಲ್ಪಟ್ಟ ಬೇಸಾಯದ ಸಹಕಾರದ ವಾಚನಾಲಯದ ಖಾತೆಗಳ ಮುಖ್ಯ ಕೇಂದ್ರವಾಗುವಂತೆ ಮಾಡತಕ್ಕದ್ದು. ಮತ್ತು ಪ್ರಾಥಮಿಕ ಶಿಕ್ಷಕರು ಇಂಥ ಸುಧಾರಣೆಯ ವಿಷಯಗಳಿಗೆ ಹೆಚ್ಚು ಗಮನ ಕೊಡಬೇಕು.

೨ ವಿದ್ಯಾರ್ಥಿಗಳ ವರ್ಗೀಕರಣ:— ಸದ್ಯಕ್ಕೆ ಕಲಿಯುತ್ತಿದ್ದ ೧ ಲಕ್ಷ ೯೫ ಸಾವಿರ ವಿದ್ಯಾರ್ಥಿಗಳ ವರ್ಗೀಕರಣವು ಕೆಳಗೆ ಕೊಡಲ್ಪಟ್ಟಿದೆ.

ಬಾಲಕರ ವರ್ಗ	೬೫, ೯೧೯	ಬಹಳ ಮಕ್ಕಳು ಬಾಲಕರ ವರ್ಗದಲ್ಲಿಯೇ ೨–೩ ವರ್ಷ ಕೊಳೆಯು ಬೇಕಾಗುವದರಿಂದ ಒತ್ತಾಯದ ಅವಧಿಯಲ್ಲಿ ಶಿಕ್ಷಣದ ಲಾಭವು ಅವರಿಗೆ ದೊರೆಯುವದಿಲ್ಲ.
೧ನೇ ಇಯತ್ತೆ	೩೪, ೪೩೪	
೨ನೇ ,,	೨೪, ೨೮೫	
೩ನೇ ,,	೨೯, ೯೯೮	
೪ನೇ ,,	೨೩, ೬೪೯	
೫ನೇ ,,	೧೦, ೯೭೮	
೬ನೇ ,,	೬, ೧೬೦	
	೧, ೯೪, ೯೫೩	

ಸಂಸ್ಥಾನದ ಜನಸಂಖ್ಯೆಯು ಒಟ್ಟು ೨೧ ಲಕ್ಷಕ್ಕಿಂತ ಹೆಚ್ಚಿದ್ದು, ೧೦೦ಕ್ಕೆ ೧೫ ರಂತೆ ಅಂದರೆ ೩ ಲಕ್ಷ ವಿದ್ಯಾರ್ಥಿಗಳಾದರೂ ಪ್ರಾ. ಶಾ. ಗಳಲ್ಲಿ ಇರಬಹುದಾಗಿತ್ತು. ಈ ಸಂಖ್ಯೆಯ ೫ ದಷ್ಟು ಬಾಲಕರು ಇದ್ದದರಿಂದ ಒತ್ತಾಯದ ಶಿಕ್ಷಣದ ಪ್ರಸಾರವು ಒತ್ತರದಿಂದ ಸಾಗುವದು ಅವಶ್ಯವಿದೆ.

೩. ಶಿಕ್ಷಣದ ವೆಚ್ಚವು:–ಬೇರೆ ಬೇರೆ ಪಂಚವಾರ್ಷಿಕ ಅವಧಿಯಲ್ಲಿ ಶಿಕ್ಷಣದ ಸಲುವಾಗಿ ಕೆಳಗೆ ತೋರಿಸಿದಂತೆ ವೆಚ್ಚವಾಯಿತು.

೧೯೦೬	೪, ೪೪, ೨೦೦	ರೂ.
೧೯೧೧	೮, ೮೪, ೨೫೭	,,
೧೯೧೬	೧೦, ೮೯, ೫೧೪	,,
೧೯೨೧	೧೬, ೨೩, ೬೬೯	,,
೧೯೨೪	೧೮, ೧೯. ೨೦೪	

೪. **ಶಿಕ್ಷಿತರ ಸಂಖ್ಯೆಯು**:–೧೯೦೧ನೇ ಇ. ಯ. ಖಾನೇಸುಮಾರಿಯ ಕಾಲಕ್ಕೆ ಸಂಸ್ಥಾನದಲ್ಲಿ ಶಿಕ್ಷಿತರ ಸಂಖ್ಯೆಯು ಸಾಮಿರಕ್ಕೆ ಗಂಡಸರಲ್ಲಿ ೧೬೨. ಹೆಂಗಸರಲ್ಲಿ ೭. ಈ ಪ್ರಮಾಣದಿಂದ ಇತ್ತು. ಅದು ೧೯೨೧ ರಲ್ಲಿ ಗಂಡಸರ ಪ್ರಮಾಣವು ೨೭೭ ಮತ್ತು ಹೆಂಗಸರ ಪ್ರಮಾಣವು ೫೧ ಆಯಿತು. ಒಟ್ಟಿನಮೇಲೆ ಈ ಸಂಖ್ಯೆಯು ೨, ೭೨, ೪೧೮ ಇತ್ತು. ಈಚೆಯ ೫ ವರ್ಷಗಳಲ್ಲಿ ಈ ಸಂಖ್ಯೆಯು ೩೧ ಲಕ್ಷವಾಗಿರಬಹುದು. ಅಂದರೆ ಸಂಸ್ಥಾನದಲ್ಲಿ ೧೫ ಜನರು ಮಾತ್ರ ಶಿಕ್ಷಿತರಾಗಿರುವರು. ಒತ್ತಾಯದ ಶಿಕ್ಷಣದಿಂದ ಅರ್ಧ ದಷ್ಟು ಜನರಾದರೂ ಶಿಕ್ಷಿತರಾಗತಕ್ಕದ್ದಿತ್ತು.

ಶಾಲೆಗೆ ಬಂದ ಬಾಲಕರಲ್ಲಿ ೧೦೦ಕ್ಕೆ ೨೭ ಮಂದಿ ನಾಲ್ಕನೇ ಇಯತ್ತೆಯ ಅಭ್ಯಾಸವನ್ನು ಮುಗಿಸುವರು. ಮತ್ತು ೨ನೇ ೩ನೇ ಇಯತ್ತೆಗಳಲ್ಲಿದ್ದ ಬಾಲಕರಲ್ಲಿ ೧೦೦ಕ್ಕೆ ೨೫ ಜನರಿಗೆ ಮಾತ್ರ ಓದುಬರೆಯುಲಿಕ್ಕೆ ಬರುತ್ತದೆ. ಇನ್ನುಳಿದ ೪೮ ಜನರಿಗೆ ಯಾವ ಪ್ರಕಾರದ ಶಿಕ್ಷಣವೂ ಉಳಿಯುವದಿಲ್ಲ. ಆದದರಿಂದ ಶಾಲೆಗೆ ಬರುತ್ತಿದ್ದ ಬಾಲಕನು ವರ್ಷಕ್ಕೊಮ್ಮೆ ಮೇಲಿನ ಇಯತ್ತೆಗೆ ಹೋಗಲಿಕ್ಕೆ ತಕ್ಕವನಾಗದಿದ್ದರೆ ಶಿಕ್ಷಣದ ಲಾಭವು ಅವನಿಗೆ ಏನೂ ದೊರೆತಂತಾಗುವದಿಲ್ಲ. ಹಳ್ಳಿಗಳಲ್ಲಿ ಇದೇ ಪ್ರಕಾರದ ವಿಪನ್ನಾವಸ್ಥೆಯು ಬಹಳ ಕಡೆಗೆ ಕಂಡುಬರುತ್ತದೆ. ಪ್ರಾಥಮಿಕ ಶಾಲೆಗಳಲ್ಲಿ ೪ ಇಯತ್ತೆಗಳನ್ನು ಕಲಿತವರಲ್ಲಿ ೫ ವರ್ಷಗಳಾದ ನಂತರ ೧೦೦ಕ್ಕೆ ೩೧ ಜನರು ಓದುಬರಹವನ್ನು ಮರೆಯುವರು. ಆದರೆ ಬಡೋದೆಯಲ್ಲಿ ವಾಚನಾಲಯದ ವ್ಯವಸ್ಥೆಯಿಂದ ಓದುವ ರೂಢಿಯು ಜನರಲ್ಲಿ ಉಳಿಯಲಿಕ್ಕೆ ಸಹಾಯವಾಗಿದೆ. ೧೯೨೫ರಲ್ಲಿ ಪಟ್ಟಣಿಗರು ೧ ಲಕ್ಷ ೬೩ ಸಾವಿರ ಪುಸ್ತಕಗಳನ್ನೂ ಹಳ್ಳಿವಾಡದವರು ೭೭ ಸಾವಿರ ಪುಸ್ತಕಗಳನ್ನೂ ಓದಿದರು.

೫. **ಪ್ರಾಥಮಿಕ ಶಿಕ್ಷಕರು**:–ಸಂಸ್ಥಾನದಲ್ಲಿ ಪ್ರಾ. ಶಿ. ರ ಸಂಖ್ಯೆಯು ೬೨೮೧ ಇದ್ದು ಅವರಲ್ಲಿ ೩೨೫ ಜನರು ಮಾತ್ರ ಹೆಂಗಸರಿರುವರು. ಅವರಲ್ಲಿ ೨೬೯೫ ಜನರು ಅಂದರೆ ೧೦೦ಕ್ಕೆ ೪೩ರಂತೆ ಅಂಟ್ರೇಂಡರಿರುವರು. ಒಟ್ಟು ೨೨೨೬ ಶಾಲೆಗಳಲ್ಲಿ ೪೦೨ ಶಾಲೆಗಳು ಅಂದರೆ ನೂರಕ್ಕೆ ೧೮ರಂತೆ ಒಬ್ಬ ಮಾಸ್ತರನ ಶಾಲೆಗಳಾಗಿರುವವು. ಅಂಟ್ರೇಂಡ ಶಿಕ್ಷಕರಲ್ಲಿ ಸ್ವಲ್ಪ ಜನರು ಸಮಾಧಾನಕರವಾಗಿ ಕೆಲಸ ಮಾಡುತ್ತಿದ್ದರೂ ಬಹಳ ಜನರು ನಿರರ್ಥಕರಿರುವರು. ಅವರಿಂದ ಶಿಕ್ಷಣದ ಕಾರ್ಯವು ಸರಿಯಾಗಿ ಸಾಗಲಾರದು. ಯಾಕಂದರೆ "ಡಾಕ್ಟರರಿಗೆ ರೋಗಿಗಳ ಉಪಚಾರ ಮಾಡುವದರ ದೆಶೆಯಿಂದ ಸುವ್ಯವಸ್ಥಿತವಾದ ಶಿಕ್ಷಣ ಕೊಡುವಂತೆ ಉತ್ಸಾಹವುಳ್ಳ ಕೋಮಲ ಮನಸ್ಸಿನ ಬಾಲಕರ ಶಿಕ್ಷಣವನ್ನು ಕೊಡುವ ಶಿಕ್ಷಕನಿಗೆ ಟ್ರೇನಿಂಗ ಕೊಡುವದು ಅತ್ಯವಶ್ಯವು." ಶಿಕ್ಷಕನಿಗೆ ಮೂರು ಸಂಗತಿಗಳ ಜ್ಞಾನವು ಅಗತ್ಯವಾದದ್ದು. ಅವನಿಗೆ ವಿಷಯ ಜ್ಞಾನವು ಬೇಕು. ಯಾಕಂದರೆ ಅದು ಇಲ್ಲದೆ ಅವನಿಗೆ ಕಲಿಸಲಿಕ್ಕೆ ಬಾರದು. ಅವನಿಗೆ ಪದ್ಧತಿಗಳ ಜ್ಞಾನವೂ ಬೇಕು. ಹೇಗೆ ಕಲಿಸಬೇಕೆಂಬದು ತಿಳಿಯದೆ ಅವನು ಕಲಿಸಲಾರನು. ಮತ್ತು ಅವನಿಗೆ ಬಾಲ

ಕರ ಸ್ವಭಾವದ ಪೂರ್ಣಜ್ಞಾನವಿರಬೇಕು. ಅದು ಇಲ್ಲದಿದ್ದರೆ ಬಾಲಕರ ಸ್ವಭಾವವು ಅವನಿಗೆ ತಿಳಿಯವ್ದರಿಂದ ಅವನಿಂದ ಶಿಕ್ಷಣದ ಸಾಫಲ್ಯವು ಉಂಟಾಗದು. ಆದದರಿಂದ ಈ ಎಲ್ಲ ಗುಣಗಳನ್ನು ಸಂಪಾದಿಸಲಿಕ್ಕೆ ಶಿಕ್ಷಕನು ಟ್ರೇನಿಂಗ ಹೊಂದಲೇಬೇಕು.

೬. **ಒತ್ತಾಯದ ಪದ್ಧತಿ**:—ಶಾಲೆಯಿದ್ದ ಗ್ರಾಮದ ಸುತ್ತಲು ೧ ಮೈಲು ಪರಿಘದಲ್ಲಿದ್ದ ಪ್ರದೇಶಕ್ಕೆ ಮಾತ್ರ ಒತ್ತಾಯದ ನೇಮವಿರುವದು. ಅಂದರೆ ಶಾಲೆಯಿಲ್ಲದ ಪ್ರದೇಶಗಳನ್ನು ಸವ್ಯಕ್ಕೆ ಹಾಗೇ ಬಿಟ್ಟುಂತಾಗಿದೆ. ವಿದ್ಯೆಯಲ್ಲಿ ಹಿಂದುಳಿದ ಭಿಲ್ಲ, ಅಂತ್ಯಜ ಮೊದಲಾದವರ ಬಗ್ಗೆ ಅನೇಕ ಶಾಲೆಗಳಿರುವವು. ಒತ್ತಾಯದ ಹೆಚ್ಚು ಹಿತಕರವಾದ ಪದ್ಧತಿಯೆಂದರೆ ಒಂದೊಂದು ತಾಲೂಕಿಗೆ ಒತ್ತಾಯದ ನೇಮವನ್ನು ಪ್ರಾರಂಭಿಸಿ ಆ ಭಾಗದಲ್ಲಿದ್ದ ಶಾಲೆಯ ವಯಸ್ಸಿನ ಎಲ್ಲ ಬಾಲಕರನ್ನು ಶಾಲೆಗೆ ಬರಮಾಡಿಕೊಳ್ಳುವದು; ಮತ್ತು ಅದಕ್ಕೆ ತಕ್ಕಂತೆ ಹೊಸ ಶಾಲೆಗಳ ಅವಶ್ಯಕತೆ ಇದ್ದಲ್ಲಿ ಅವುಗಳನ್ನು ಪ್ರಾರಂಭಿಸುವದು.

೭. **ತಪ್ಪುಗಾರರಿಗೆ ದಂಡ**:—ಶಾಲೆಗೆ ಬಾಲಕರನ್ನು ಆರಂಭದಲ್ಲಿ ಕಳಿಸದವರಿಗೆ ತಿಂಗಳೊಂದಕ್ಕೆ ಪರಮಾವಧಿ ದಂಡವೆಂದರೆ ಒಂದು ರೂಪಾಯಿ, ನಿಯಮಿತವಾಗಿ ಶಾಲೆಗೆ ಬಾಲಕರನ್ನು ಕಳಿಸದವರಿಗೆ ಪರಮಾವಧಿ ದಂಡವು ೫ ರೂಪಾಯಿ, ಮತ್ತು ಕನಿಷ್ಠ ದಂಡವು ೬ ಆಣೆ. ಬಾಲಕನು ಶಾಲೆಯ ವಯಸ್ಸಿನವನಾದ ನಂತರ ಒಂದು ತಿಂಗಳೊಳಗೆ ಪಾಲಕನು ಆ ಬಾಲಕನನ್ನು ಶಾಲೆಗೆ ಕಳಿಸಿ ಹೆಸರು ಹಚ್ಚಿಸಬೇಕು. ತಿಂಗಳಲ್ಲಿ $\frac{1}{4}$ ಕ್ಕಿಂತ ಹೆಚ್ಚು ದಿವಸ ಗೈರಹಾಜರ ಇದ್ದ ಬಾಲಕನು ಅನಿಯಮಿತತನ ಕ್ಕಾಗಿ ದಂಡಕ್ಕೆ ಪಾತ್ರನಾಗುವನು ಈ ಅಪರಾಧಗಳು ಬಡ ಪಾಲಕರ ಅಜ್ಞಾನದಿಂದಲೂ ಅಶಿಕ್ಷಿತತನದಿಂದಲೂ ಉಂಟಾಗುತ್ತವೆ. ೧೯೨೩ರ ಮುಂಬೈ ಇಲಾಖೆಯ ಪ್ರಾ. ಶಿ. ಪ ಕಾಯಿದೆಯಲ್ಲಿ ಶಾಲೆಯ ವಯಸ್ಸಿನ ಬಾಲಕರನ್ನು ಕೆಲಸಕ್ಕೆ ಇಟ್ಟುಕೊಳ್ಳುವ ಶ್ರೀಮಂತರಿಗೆ ಒಬ್ಬ ಬಾಲಕನ ಸಲುವಾಗಿ ೨೫ ರು. ಗಳವರೆಗೆ ದಂಡ ಮಾಡಬಹುದೆಂಬ ನಿಯಮವಿರುವದು. ಬಡೋದೆಯಲ್ಲಿ ವರ್ಷಕ್ಕೆ ದಂಡದ ಹಣವು ೧ ಲಕ್ಷ ೨೫ ಸಾವಿರ ರು. ಗಳವರೆಗೆ ಕೂಡುತ್ತದೆ. ಅದರಲ್ಲಿ ೧೦೦ಕ್ಕೆ ೫ರಂತೆ ದಂಡ ವಸೂಲ ಮಾಡುವ ಗೌಡರಿಗೆ, ೩೫ ರಂತೆ ಬಡ ಹೆಣ್ಣುಮಕ್ಕಳಿಗೆ ಸ್ಕಾಲರಶಿಪ್ಪಿನ ದೆಶೆಯಿಂದ, ಉಳಿದ ೬೦ನ್ನು ಶಾಲೆಗಳ ಕಟ್ಟಡಗಳಿಗೆ ಉಪಯೋಗಿಸುವರು.

೮. **ಸೂಚನೆಗಳು**:—ಮೇಲೆ ಬರೆದ ವರದಿಯ ಬಗ್ಗೆ ಬಡೋದೆಯ ಶಿಕ್ಷಣಮಂತ್ರಿಗಳು ನಮ್ಮ ಅಭಿಪ್ರಾಯವನ್ನು ಕೇಳಿದ್ದರಿಂದ ಕೆಳಗೆ ಬರೆದ ಸೂಚನೆಗಳು ಅವಶ್ಯವೆಂಬ ಅಭಿಪ್ರಾಯವನ್ನು ಕೊಟ್ಟಿವು.

(೧) ಒತ್ತಾಯದ ಶಿಕ್ಷಣದ ವ್ಯವಸ್ಥೆಯ ಸಲುವಾಗಿ ಚಟುವಟಿಕೆಯುಳ್ಳ ಕಾರ್ಯಕ್ಷಮನಾದ ಸ್ವತಂತ್ರ ಅಧಿಕಾರಿಯಿರತಕ್ಕದ್ದು. ಅವನು ಶಿಕ್ಷಣಮಂತ್ರಿಗಳ ಕೈಕೆಳಗಿನವನಾಗಿರಬೇಕಲ್ಲದೆ ಸಂಸ್ಥಾನದ ನಿದ್ಯಾಧಿಕಾರಿಯಿಂದ (ಎಜ್ಯುಕೇಶನಲ್ ಕಮಿಶನರ) ಸ್ವ

ತಂತ್ರನಾಗಿರಬೇಕು. ಮಧ್ಯಮ ಮತ್ತು ಉಚ್ಚ ಶಿಕ್ಷಣದ ವ್ಯವಸ್ಥೆಯು ವಿದ್ಯಾಧಿಕಾರಿಯ ಕಡೆಗಿರುವದರಿಂದ ಅವನು ಪ್ರಾ. ಶಿ. ದ ಕಡೆಗೆ ಸಾಕಷ್ಟು ಲಕ್ಷವನ್ನು ಪೂರೈಸಲಾರನು. ಪ್ರಾ. ಶಿ. ದ ಅಧಿಕಾರಿಯು ಜನರೊಳಗೆ ಕಲೆತು ಅವರಿಗೆ ಒದಗುತ್ತಿವ್ವ ತೊಂದರೆಗಳನ್ನೂ ಸಂಶಯಗಳನ್ನೂ ಪರಿಹಾರ ಮಾಡಬೇಕು. ಮತ್ತು ಜನತೆಯಲ್ಲಿ ವಿಶ್ವಾಸವನ್ನು ಹುಟ್ಟಿಸಿ ಒತ್ತಾಯದ ಶಿಕ್ಷಣವು ಸಫಲವಾಗುವಂತೆ ಮಾಡತಕ್ಕದ್ದು. ಇದಲ್ಲದೆ ಕಲಿತು ಬಿಟ್ಟ ಪ್ರೌಢಜನರಿಗೆ ಸಹ ಶಿಕ್ಷಣದ ಸಂಸ್ಕಾರವು ಮಾಜಿ ಹೋಗದಂತೆ ಹೊಸ ಹೊಸ ಯೋಜನೆಗಳನ್ನು ಕಲ್ಪಿಸಿ ಅವುಗಳ ಪ್ರಯೋಗವನ್ನು ಮಾಡಬೇಕು.

(೨) ಜನರಿಂದ ನಡೆಸಲ್ಪಟ್ಟ ಗಾಂವಠೀ ಶಾಲೆಗಳಿಗೆ ಗ್ರಾಂಟಿನ ಹಣವನ್ನು ಹೆಚ್ಚಿಸಬೇಕು. ಮತ್ತು ಹೊಸ ಶಾಲೆಗಳನ್ನು ರಜಿಸ್ಟರ ಮಾಡಿಕೊಳ್ಳಬೇಕು.

(೩) ಜನರು ಬಡತನದ ಮೂಲಕವಾಗಿಯೇ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲಿಕ್ಕೆ ಹಿಂದು ಮುಂದು ನೋಡುತ್ತಾರೆ. ಆದದರಿಂದ ಅಂಥ ಬಾಲಕರಿಗೆ ದಂಡದ ಹಣದೊಳಗಿಂದ ಸ್ಕಾಲರಶಿಪ್ಪುಗಳನ್ನು ಕೊಡಬೇಕು. ಸಂಸ್ಥಾನದಲ್ಲಿ ೧ ಲಕ್ಷ ೨೫ ಸಾವಿರ ದಂಡದ ಹಣವು ಕೂಡುತ್ತಿದ್ದು ೬೪ ಸಾವಿರ ರು. ಗಳನ್ನು ಹೊಸ ಕಟ್ಟಡಗಳಿಗಾಗಿ ವೆಚ್ಚ ಮಾಡುವರು. ಅದರ ಬದಲು ಈ ಹಣವನ್ನು ಸಹ ಸ್ಕಾಲರಶಿಪ್ಪಿನ ಬಗ್ಗೆ ವೆಚ್ಚ ಮಾಡಿದರೆ ತೀರ ಬಡ ಹುಡುಗರಿಗೆ ಸ್ವಲ್ಪ ಮಟ್ಟಿಗೆ ಶಾಲೆಗೆ ಬರುವದಕ್ಕೆ ಉತ್ತೇಜನವಾಗುವದು.

ಅಡಳತೆಯ ಅಧಿಕಾರಿಗಳು ಟ್ರೇನಿಂಗಸ್ಕೂಲ ಸಂಸ್ಥೆಯನ್ನು ನೋಡಲಿಕ್ಕೆ ಬಂಡದ್ದು.

ಕಳೆದ ಅಗಸ್ಟ ಮತ್ತು ಸಪ್ಟಂಬರ ತಿಂಗಳುಗಳ ಶಾಲಾಪತ್ರಿಕೆಯಲ್ಲಿ ಬೇರೆ ಬೇರೆ ಜಿಲ್ಲೆಯ ಇನ್‌ಸ್ಪೆಕ್ಟಿಂಗ ಆಫೀಸರರು ಟ್ರೇನಿಂಗಸ್ಕೂಲಿಗೆ ಬಂದ ವಿಷಯವಯನ್ನು ಬರೆದಿರುವೆವಷ್ಟೇ! ಅದರಂತೆ ಮೊನ್ನಿನ ಜನವರಿ ೧೭, ೧೮, ೧೯ ನೇ ತಾರೀಖುಗಳ ದಿವಸ ನಮ್ಮ ನಾಲ್ಕೂ ಕನ್ನಡ ಜಿಲ್ಲೆಗಳ ಸ್ಕೂಲ್ ಬೋರ್ಡಿನ ಕೆಳಗೆ ಹೇಳಿದ ಆಡ್ಮಿನಿಸ್ಟ್ರೇಟಿವ್ವ ಆಫೀಸರರು (ಮೊದಲಿನ ಡೆ. ಎ. ಇನಸ್ಪೆಕ್ಟರರು) ಟ್ರೇನಿಂಗಸ್ಕೂಲು ಪ್ರಾಕ್ಟೀಸಿಂಗ ಸ್ಕೂಲುಗಳನ್ನು ನೋಡಲಿಕ್ಕೆ ಬಂದಿದ್ದರು.

ಮಿ.	ಜಿ.	ಬಿ.	ಜಮಖಂಡಿ	ಧಾರವಾಡ.
„	ಎಚ್.	ಕೆ.	ಗೋಕುಲೆ	ವಿಜಾಪುರ.
„	ಆರ್.	ಎನ್.	ಪೆರೂರ	ಕಾರವಾರ.
„	ಎನ್.	ಟಿ.	ಜಗತಾಪ	ಬೆಳಗಾವ.

ಸೋಮವಾರ ತಾರೀಖು ೧೮–೧–೧೯೨೭ನೇ ದಿನವು ಟ್ರೇನಿಂಗಸ್ಕೂಲಿನ ಹೆಡ್ ಮಾಸ್ತರರಾದ ಮಿ. ಎಚ್. ಜಿ. ದೇಶಪಾಂಡೆಯವರು ಶಿಕ್ಷಣ ಪ್ರಪಂಚದಲ್ಲಿ ದಿನದಿನಕ್ಕೆ ಪ್ರಸಾರವಾಗುತ್ತ ನಡೆದಿರುವ ಹೊಸಹೊಸ ಸುಧಾರಣೆಗಳ ಹಾಗು ವಿಚಾರ ಕ್ರಾಂತಿಗಳ ವಿವರಣೆಯುಳ್ಳ ಒಂದು ಟಿಪ್ಪಣಿಯನ್ನು ಇವರೆಲ್ಲರಿಗೂ ಕೊಟ್ಟರು. ಬಳಿಕ ಎಲ್ಲರೂ ಪ್ರ್ಯಾಕ್ಟಿಸಿಂಗಸ್ಕೂಲಿಗೆ ಹೋಗಿ ಅಲ್ಲಿಯ ಎಲ್ಲ ವರ್ಗಗಳಲ್ಲಿ ನಡೆದಿರುವ ಪಾಠಗಳನ್ನು ನೋಡಿದರು. ಮತ್ತು ಅಲ್ಲಿಯ ಶಿಕ್ಷಕರು ಕಲಿಸುತ್ತಿದ್ದ ಬೇರೆ ಬೇರೆ ಪಾಠಗಳ ಪದ್ಧತಿಗಳನ್ನು ನೋಡಿ ವಿದ್ಯಾರ್ಥಿಗಳಿಗೆ ಹಲಕೆಲವು ಜಾಣತನದ ಪ್ರಶ್ನೆಗಳನ್ನು ಮಾಡಿ ಅವರ ಯೋಗ್ಯತೆಯನ್ನು ಪರೀಕ್ಷಿಸಿದರು. ಬಿನ್ ಇಯತ್ತ್ತೆಯೊಳಗಿನ ವಿದ್ಯಾರ್ಥಿಗಳಲ್ಲಿ ಕೆಲವರು ಆರೇ ತಿಂಗಳ ಅವಧಿಯಲ್ಲಿ ಮೊದಲನೆಯ ಇಯತ್ತ್ತೆಯವರೆಗೆ ಅಭ್ಯಾಸ ಮುಗಿಸಿರುವದನ್ನೂ ವಿಕ್ಕುಳಿದ ಕೆಲವರು ತಾವು ಶಾಲೆಯಲ್ಲಿ ಇದ್ದ ಕಾಲಾವಧಿಗೆ ಅನುಗುಣವಾಗಿ, ತಕ್ಕಷ್ಟು ಅಭ್ಯಾಸವನ್ನು ಸರಿಯಾಗಿ ಮುಗಿಸಿರುವದನ್ನು ನೋಡಿದರು. ಆದ್ದರಿಂದ ಈ ವರ್ಗದ ಬಗ್ಗೆ ಅವರೆಲ್ಲರ ಲಕ್ಷ್ಯವು ಹೆಚ್ಚಾಗಿ ಹೋದದ್ದು ಸ್ವಾಭಾವಿಕವೇ ಸರಿ. ಬಳಿಕ ಮಾಂಟೆಸೂರಿ ಪದ್ಧತಿಗೆ ಸಂಬಂಧಿಸಿದ ಹಲಕೆಲವು ಉಪಕರಣಗಳನ್ನು (ಆಕಾರ, ಅಳತೆ, ನಾದ, ತೂಕ, ಬಣ್ಣ ಮುಂತಾದವುಗಳನ್ನು ಕಂಡು ಹಿಡಿದು ವರ್ಗೀಕರಿಸುವದಕ್ಕಾಗಿ ಉಪಯೋಗಿಸುವ ಬೇರೆಬೇರೆ ಉಪಕರಣಗಳನ್ನು) ಇಲ್ಲಿಯೇ ತಯಾರಿಸಿದ್ದನ್ನು ನೋಡಿದರು. ಆ ಬಳಿಕ ಮಿ. ಕುರಡಿಯವರು ಬಾಲಕರ ವರ್ಗಕ್ಕೆ ಒಂದು ಕಿಂಡರ್‌ಗಾರ್ಟನ್ ಪಾಠವನ್ನು ಕಲಿಸಿದರು. ತರುವಾಯ ಮಿ. ನೆರ್ಲಿಕರ ಇವರ ಮೇಲ್ವಿಚಾರಣೆಯ ಕೆಳಗೆ ೩ನೇ ಇಯತ್ತ್ತೆಗೆ ಒಂದು ಚಿತ್ರಕಲೆಯ ಪಾಠವು ಕಲಿಸಲ್ಪಟ್ಟಿತು. ಆಮೇಲೆ ಪ್ರ್ಯಾಕ್ಟಿಸಿಂಗಸ್ಕೂಲಿನ ವಿದ್ಯಾರ್ಥಿಗಳ ಬರಹ ಕೈಕೆಲಸಗಳನ್ನು ಪರೀಕ್ಷಿಸಿದರು. ಮಧ್ಯಾಹ್ನದ ಮೇಲೆ ಮಿ. ಕುಂಬಾರ ಇವರು ನಾಲ್ಕನೆಯ ಇಯತ್ತ್ತೆಗೆ ಒಂದು ಇತಿಹಾಸದ ಪಾಠವನ್ನು ಕಲಿಸಿದರು. ಮತ್ತು ಸಾಯಂಕಾಲದಲ್ಲಿ ಪ್ರ್ಯಾಕ್ಟಿಸಿಂಗಸ್ಕೂಲಿನ ಎಲ್ಲ ವರ್ಗಗಳ ಡ್ರಿಲ್ಲು, ಆಟ, ಸ್ಕೌಟ ಆಟಗಳು ಇವುಗಳನ್ನು ತೋರಿಸುವದಾಯಿತು.

ಮಂಗಳವಾರ (ತಾ ೧೯–೧–೨೭) ಮಿ. ಕಾಳಪ್ಪನವರು ಹಳ್ಳಿಯ ಶಾಲೆಗಳಲ್ಲಿರುವಂತೆ (ಬಿನ್–೧–೨ ಇಯತ್ತ್ತೆಗಳು) ಮೂರು ವರ್ಗಗಳಿಗೆ ಒಬ್ಬನೇ ಶಿಕ್ಷಕನು ಏಕಕಾಲಕ್ಕೆ ಹೇಗೆ ಪಾಠ ಸಾಗಿಸಬಹುದೆಂಬದನ್ನು ಕಲಿಸಿ ತೋರಿಸಿದರು. ಮತ್ತು ಮಿ. ಜೋಶಿಯವರು ೭ನೆಯ ಇಯತ್ತ್ತೆಗೆ ಒಂದು ವ್ಯಾಕರಣ ಪಾಠವನ್ನು ಕಲಿಸಿದರು.

ಬುಧವಾರ (ತಾರೀಖು ೧೯–೧–೨೭)ದಿವಸ ಈ ಆಡಳಿತೆಯ ಅಧಿಕಾರಿಗಳು ತೋರಿಸಿದ ಇಚ್ಛೆಯಂತೆ ಮಿ. ಕುರಡಿಯವರು ಹಳ್ಳಿಯ ಸಾಲೆಗಳ ಪರಿಸ್ಥಿತಿಯಲ್ಲಿರುವ ಹಾಗೆ (ಬಿನ್ ಇಯತ್ತ್ತೆಯ ಎರಡು ವಿಭಾಗಗಳು ಮತ್ತು ಮೊದಲನೇ ಎರ

ಡನೇ ಇಯತ್ತೆಗಳು ಅಂತೂ ನಾಲ್ಕು) ನಾಲ್ಕು ವರ್ಗಗಳನ್ನು ಒಬ್ಬನೇ ಶಿಕ್ಷಕನು ಏಕ ಕಾಲಕ್ಕೆ ಹೇಗೆ ಕೆಲಸದಲ್ಲಿ ತೊಡಗಿಸಿ ಪಾಠ ಸಾಗಿಸಬಹುದೆಂಬದನ್ನು ಕಲಿಸಿ ತೋರಿಸಿದರು. ತರುವಾಯ ೩ನೆಯ ಇಯತ್ತೆಗೆ ಭೂಗೋಲ ವಿಷಯದ ಒಂದು ಪಾಠವು ಕಲಿಸಲ್ಪಟ್ಟಿತು. ಮತ್ತು ಮೊದಲನೇ ಮೂರನೇ ಇಯತ್ತೆಗಳ ಎಲ್ಲ ವಿದ್ಯಾರ್ಥಿಗಳು ಸ್ವರಮೇಲನದಿಂದ ತನ್ನ ತನ್ನ ವರ್ಗಗಳ ಕವಿತೆಗಳನ್ನು ಅಂದು ತೋರಿಸಿದರು. ತರುವಾಯ ಬಿನ್ ಇಯತ್ತೆಯ ಬಾಲಕರ ಸಾಭಿನಯ ಗೀತ ಮತ್ತು ಡ್ರಿಲ್ಲು ಇವು ತೋರಿಸಲ್ಪಟ್ಟವು. ತರುವಾಯ ಇವರೆಲ್ಲರೂ 'ಡಾಲ್ಟನ್' ಎಂಬ ಶಿಕ್ಷಣದ ಪದ್ಧತಿಗ ನುಗುಣವಾಗಿ ಏರ್ಪಡಿಸಿದ ಇತಿಹಾಸ ಕಲಿಸುವ ಕೋಣೆಯನ್ನು ನೋಡಿ ಅದರೊಳ ಗಿನ ಬೇರೆ ಬೇರೆ ಐತಿಹಾಸಿಕ ವ್ಯಕ್ತಿಗಳ ಚಿತ್ರ ಹಾಗು ಅವುಗಳ ಕೆಳಗೆ ಬರೆದಿರುವ ವರ್ಣನೆ ಇವುಗಳನ್ನು ಪ್ರಶಂಸೆ ಮಾಡಿದರು. ಸಾಯಂಕಾಲದಲ್ಲಿ ಟ್ರೇನಿಂಗಸ್ಕೂಲಿನ ವಿದ್ಯಾರ್ಥಿ ಶಿಕ್ಷಕರ ವೆಬರನ ಹೊಸ ಪದ್ಧತಿಯ ಡ್ರಿಲ್ಲು, ಸ್ಕೌಟಿನ ಆಟಗಳು ತೋರಿಸ ಲ್ಪಟ್ಟವು.

ಈ ಪ್ರಕಾರ ಆಡಳಿತೆಯ ಅಧಿಕಾರಿಗಳು ಟ್ರೇನಿಂಗಸ್ಕೂಲಿಗೆ ಬರುವದರಿಂದ ಪರ ಸ್ಪರ ವಿಚಾರ ವಿನಿಮಯಕ್ಕೂ,ಹಳ್ಳಿಯ ಸಾಲೆಗಳಲ್ಲಿ ಎಂಥ ಸುಧಾರಣೆಗಳನ್ನು ಕೈಕೊಳ್ಳ ಬಹುದೆಂಬ ವಿಚಾರಕ್ಕೂ ಮತ್ತು ಹಳ್ಳಿಯೊಳಗಿನ ಮೇಲ್ತರದ ಸಾಲೆಗಳಲ್ಲಿ ಇನ್ನೂ ಹೆಚ್ಚಿಗೆ ಏನೇನು ಸುಧಾರಣೆಗಳನ್ನು ಮಾಡಬಹುದೆಂಬದಕ್ಕೂ ತುಂಬಾ ಅನುಕೂಲ ವಾಗುವದೆಂದು ನಾವು ನಂಬುವೆವು.

ಈ ಸಮಯದಲ್ಲಿ ನಮಗೆ ಇನ್ನೂ ಒಂದು ಹೆಚ್ಚಿನ ಸಂಗತಿಯನ್ನು ಹೇಳಬೇ ಕೆಂದು ತೋರುವದು. ಅದೇನಂದರೆ—ಸದ್ಯಕ್ಕೆ ಬೇರೆ ಬೇರೆ ಸ್ಕೂಲಬೋರ್ಡುಗಳ ಚೇಅರಮನ್ನರೇ ಆಯಾ ಸ್ಥಾನಿಕ ಸಂಘಗಳ ಕಾರ್ಯಕಲಾಪಗಳ ಮಾರ್ಗದರ್ಶಕರೂ ಆಯಾ ಸ್ಥಾ. ಸಂ. ಗಳ ಕೆಳಗಿನ ಸಾಲೆಗಳ ಮೇಲಧಿಕಾರಿಗಳೂ ಆಗಿರುವದರಿಂದ ಆ ಎಲ್ಲ ಚೇಅರಮನ್ನರು ಒಮ್ಮೆ ಇದೇ ರೀತಿಯಾಗಿ ಟ್ರೇನಿಂಗಸ್ಕೂಲಿಗೆ ಬಂದು ಹೋಗುವ ದರಿಂದ ಹೆಚ್ಚು ಪ್ರಯೋಜನವಾಗಬಹುದೆಂದು ನಮಗೆ ಅನಿಸುವದು.

ಪ್ರಾಥ. ಸ್ಕೂ. ನಲ್ಲಿ ಇತಿಹಾಸದ ಕೋಣೆಯು.

ಮೊದಮೊದಲು ನಮ್ಮ ಪ್ರಾಥಮಿಕ ಸಾಲೆಗಳಲ್ಲಿ ಇತಿಹಾಸವನ್ನು ಕಲಿಸುವ ಸಾಧ ನಗಳೆಂದರೆ ಬರೆ ಅಚ್ಚುಹಾಕಿದ ಪುಸ್ತಕಗಳು. ಆದರೆ ಪ್ರೌಢ ವಿದ್ಯಾರ್ಥಿಗಳಿಗೂ ಇತಿ ಹಾಸವನ್ನೇ ಐಚ್ಛಿಕವೆಂದು ಅಥವಾ ಪ್ರೀತಿಯ ವಿಷಯವೆಂದು ಅಭ್ಯಾಸಮಾಡುವ ಇತಿ ಹಾಸಭಕ್ತರಿಗೂ ಅವುಗಳಿಂದ ಸಂಪೂರ್ಣವಾದ ಇತಿಹಾಸದ ಜ್ಞಾನವು ಆಗಲಾರದು. ಆದರೆ ಅದೇ ಹೊಸದಾಗಿ ಇತಿಹಾಸವನ್ನು ಪ್ರಾರಂಭಿಸುವ ಚಿಕ್ಕ ಬಾಲಕರಿಗೆ ಅಚ್ಚಿನ

ಪುಸ್ತಕಳು, ಮನೋರಂಜನವನ್ನುಂಟುಮಾಡಿ ಅವರ ಕೋಮಲ ಹೃದಯದಲ್ಲಿ ಇತಿಹಾಸಪ್ರೇಮದ ಅಂಕುರವನ್ನು ಹುಟ್ಟಿಸಲಾರವು. ಈ ಮರ್ಮವನ್ನು ತಿಳಿದು ಇತ್ತೀಚ್ಚೆ ಸಾಲೆಯೊಳಗಿನ ಇತಿಹಾಸ ಪುಸ್ತಕಗಳಲ್ಲಿ ಶೂರ ಪುರುಷರ, ಸ್ತ್ರೀಯರ, ಮುತ್ಸದ್ದಿಗಳ, ದೇಶಭಕ್ತರ ಚಿತ್ರಗಳನ್ನೂ, ಅಲ್ಲಲ್ಲಿ ಐತಿಹಾಸಿಕ ಸ್ಥಳಗಳನ್ನು ತೋರಿಸುವದಕ್ಕಾಗಿ ನಕಾಶಗಳನ್ನೂ, ಬೇರೆ ಬೇರೆ ಕಾರಣಗಳಿಂದ ಹೆಸರಾದ ಕಟ್ಟಡಗಳ ದೃಶ್ಯಗಳನ್ನೂ, ಪ್ರಾಚೀನ ನಾಣ್ಯ, ಆಯುಧ, ಪ್ರತಿಮೆ, ನೆಲದಲ್ಲಿ ಸಿಕ್ಕ ಅಪೂರ್ವವಾದ ಒಡವೆಗಳು ಇವುಗಳ ಚಿತ್ರಗಳನ್ನೂ ಸೇರಿಸುವ ಯತ್ನವು ನಡೆದದೆ. ಇದು ಸ್ತುತ್ಯವಾದದ್ದು. ಕಿವಿಯಿಂದ ಕೇಳಿದ ಸಂಗತಿಗಳಿಗಿಂತ ಕಣ್ಣಿನಿಂದ ನೋಡಿದಂಥವು ಬಹಳಕಾಲ ನಮ್ಮ ಮನಸ್ಸಿನಲ್ಲಿ ಉಳಿಯುವವು.

ಆದರೆ ಪುಸ್ತಕಗಳಲ್ಲಿಯ ಚಿತ್ರ ಮುಂತಾದವು ಎಷ್ಟು ಅಂದವಾಗಿದ್ದರೂ ಅವುಗಳ ಅಳತೆಯು ಅಥವಾ ಉದ್ದಗಲಗಳು ಪುಸ್ತಕಗಳ ಆಕಾರಮಾನದಂತೆ ನಿಯಮಿತ ಪ್ರಮಾಣದವಿರುವದರಿಂದ ಅಂಥ ಚಿತ್ರ-ನಕಾಶಗಳಿಂದ ಚಿಕ್ಕಮಕ್ಕಳ ಮನಸ್ಸನ್ನು ಇತಿಹಾಸದ ಕಡೆಗೆ ಎಳೆಯುವದು ದುಸ್ತರವಾಗಿರುವದು. ಚಿತ್ರವು ಸಣ್ಣದಿದ್ದಂತೆ ಅದರ ಎಲ್ಲ ಭಾಗಗಳು ಸೂಕ್ಷ್ಮವಾಗಿರುವದು ಸ್ವಾಭಾವಿಕವದೆ. ಅಂಥ ಸೂಕ್ಷ್ಮ ಭಾಗಗಳಿಂದ ಸಣ್ಣ ಮಕ್ಕಳ ಮನಸ್ಸಿನ ಮೇಲೆ ಪರಿಣಾಮವಾಗಲಾರದು. ಎಷ್ಟೋ ಮಕ್ಕಳಿಗೆ ಅವರು ಓದುವ ಪುಸ್ತಕದಲ್ಲಿ ಇಂಥಿಂಥ ಚಿತ್ರಗಳಿರುತ್ತವೆ ಎಂದು ಹೇಳಿದರೆ ಮಾತ್ರ ತಿಳಿಯುವದಲ್ಲದೆ ಅವರು ತಾವಾಗಿ ಆ ಚಿತ್ರಗಳನ್ನು ನೋಡಿ ವಿಷಯವನ್ನು ತಿಳಿದುಕೊಳ್ಳಲಿಕ್ಕೆ ಯತ್ನಿಸುವದಿಲ್ಲ. ಇದು ಹುಡುಗರ ತಪ್ಪೆಂದು ಯಾರೂ ಅನ್ನಲಾರರು. ಆದ್ದರಿಂದ ಇತಿಹಾಸವಿಷಯವನ್ನು ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳಿಗೆ ಪ್ರಿಯವಾದದ್ದನ್ನಾಗಿ ಮಾಡಲಿಕ್ಕೆ ಮೇಲಿಹೇಳಿದ ಅನೇಕ ಉಪಕರಣಗಳನ್ನು ದೊಡ್ಡ ಪ್ರಮಾಣದಿಂದ ತಯಾರಿಸಿ ಅವು ಚಿಕ್ಕ ಹುಡುಗರ ಮನಸ್ಸನ್ನು ಆಕರ್ಷಿಸುವಂತೆ ಮಾಡಿದರೆ ಹುಡುಗರು ಇತಿಹಾಸಕ್ಕೆ ಮೆಚ್ಚುವರಲ್ಲದೆ ಅವರು ಅವುಗಳ ಮೂಲಕ ತಿಳಿಕೊಂಡ ಇತಿಹಾಸವನ್ನು ಮರೆಯಲಾರರು.

ಇತಿಹಾಸವನ್ನು ಕಲಿಸುವವಕ್ಕೆ ಬೇಕಾಗುವ ಉಪಕರಣಗಳನ್ನು ಸಾಮಾನ್ಯವಾಗಿ ಹೀಗೆ ವರ್ಗೀಕರಿಸಬಹುದು:—

೧. ಐತಿಹಾಸಿಕ ವ್ಯಕ್ತಿಗಳ ಚಿತ್ರಗಳು.

೨. ಮಹತ್ವದ ಐತಿಹಾಸಿಕ ಸಂಗತಿಯನ್ನು ತೋರಿಸುವ ಚಿತ್ರಗಳು. ಉದಾಹರಣಾರ್ಥವಾಗಿ—

ಅ. ಶಿವಾಜಿ ಅಫಝುಲ್‌ಖಾನರ ಭೆಟ್ಟಿಯು.

ಬ. ಯುದ್ಧ ಕ್ಷೇತ್ರಗಳು (ಪಾಣಿಪತದ ರಣಭೂಮಿ ಇ.)

೩. ಐತಿಹಾಸಿಕ ನಕಾಶೆಗಳು (ಉದಾ:—ಅಶೋಕನ ಸಾಮ್ರಾಜ್ಯವನ್ನು ತೋರಿಸುವ ನಕಾಶೆ ಮುಂ.)

೪. ಶಿಲಾಲೇಖ, ತಾಮ್ರಪಟ, ಪ್ರಾಚೀನ ನಾಣ್ಯಗಳು, ಐತಿಹಾಸಿಕ ಪುರುಷರ ಕತ್ತಿ ಢಾಲು ಮುಂತಾದ ವಸ್ತುಗಳು ಇ. ಐತಿಹಾಸಿಕ ಕಟ್ಟಡಗಳ ದೃಶ್ಯಗಳು.

೫. ಭಾಷೆ, ಗ್ರಂಥಗಳ ಬೆಳವಣಿಗೆಯನ್ನು ತೋರಿಸುವಂಥ ತಾಡವಾಲೆಯ ಪುಸ್ತಕಗಳು ಮು.

ಇವುಗಳಲ್ಲಿ ಐತಿಹಾಸಿಕ ವ್ಯಕ್ತಿಗಳ ಚಿತ್ರಗಳು ದೊರೆಯುವಂತಿರುತ್ತವೆ. ೨ನೆ ಭಾಗದಲ್ಲಿ ಬರುವ ದೃಶ್ಯಗಳು ಹಿಂದಿನಕಾಲದವು ಸಿಗುವದು ದುರ್ಲಭವು. ಆದರೆ ಚಿತ್ರಕಾರರು ಆ ಸಂಗತಿಗಳನ್ನು ಇತಿಹಾಸದಲ್ಲಿ ಓದಿ ತಮ್ಮ ಕಲ್ಪನಾಬಲದಿಂದ ರೂಪಿಸಬಲ್ಲರು. ಅಂಥವು ದೊರೆಯುವ ಸಂಭವವಿರುತ್ತದೆ.

೩ನೆಯ ಐತಿಹಾಸಿಕ ನಕಾಶೆಗಳನ್ನು ತಯಾರಿಸುವದು ಕಠಿನವಲ್ಲ. ಒಂದು ಮೇಳೆ ಇಂಥವು ಸಣ್ಣ ಆಕಾರದವು ದೊರೆತರೆ ಅವುಗಳ ಮೇಲಿಂದ ದೊಡ್ಡ ಆಕಾರದಿಂದ ಅವನ್ನು ತಯಾರಿಸಿಕೊಳ್ಳಲಿಕ್ಕೆ ಬರುತ್ತದೆ. ೪ನೆಯವಾದ ಶಿಲಾಲೇಖ, ತಾಮ್ರಪಟ ಮುಂತಾದವು ಬೇಕುಬೇಕಾದಷ್ಟು ದೊರೆಯುವದು ಅಸಂಭವವೇ ಸರಿ. ಅಪರೂಪವಾಗಿ ಸಿಕ್ಕ ಒಂದೆರಡು, ದೊಡ್ಡ ದೊಡ್ಡ ಪಟ್ಟಣಗಳೊಳಗಿನ ವಸ್ತು ಸಂಗ್ರಹಾಲಯಗಳಲ್ಲಿ ಮಾತ್ರ ನೋಡಲಿಕ್ಕೆ ಸಿಗುವವು. ಇಂಥವು ಈಗಾದರೂ ಸಂದಿಮೂಲೆಗಳಲ್ಲಿ ಕೂತಿದ್ದು ಇನ್ನೂ ನಮ್ಮ ಕಣ್ಣಿಗೆ ಬೀಳದವು ಬಹಳ ಇರುವವು. ಪ್ರಸಂಗಾನುಸಾರ ಅಂಥವು ಕಣ್ಣಿಗೆ ಬಿದ್ದರೆ ದುರ್ಲಕ್ಷ್ಯಮಾಡದೆ ಸಂಗ್ರಹಿಸಿಕೊಳ್ಳಲಿಕ್ಕೆ ಬರುವಂತೆ ಉಂಟು. ೫ನೇ ತಾಡವಾಲೆಯ ಗ್ರಂಥಗಳು, ಈಗಿನ ಅಚ್ಚಿನ ಕಾರಖಾನೆಯಂಥ ಅದ್ಭುತ ಶಕ್ತಿಯಮುಂದೆ ತೀರ ಲೋಪವಾಗಿ ಹೋಗುವ ಸ್ಥಿತಿಯಲ್ಲಿರುವವು. ಈಗಾಗಲೇ ಎಷ್ಟೋ ಹೋದವು. ಆದ್ದರಿಂದ ನಮಗೆ ಐತಿಹಾಸಿಕ ಮಹತ್ವದ ದೃಷ್ಟಿಯಿಂದಲೇ ಅವು ಬೇಕಾಗಿದ್ದರೆ ಅವನ್ನು ಸಂಪಾದಿಸುವದು ದುರ್ಘಟವಲ್ಲ. ನಮೂನೆಗಾಗಿ ಕೆಲವನ್ನು ಪ್ರಯತ್ನದಿಂದ ದೊರಕಿಸಬಹುದು. ಇರಲಿ.

ಈ ಪ್ರಕಾರ ಮೇಲೆ ಸ್ಥೂಲವಾನದಿಂದ ಹೇಳಿದ ಉಪಕರಣಗಳನ್ನು ಕೂಡಿಸಿ ಇತಿಹಾಸಕ್ಕೆ ಜೀವಂತ ಸ್ವರೂಪವನ್ನು ಕೊಡುವದಕ್ಕೆ ಒಂದು ಯೋಜನೆಯು ನಮ್ಮ ಶಾಲೆಯ ಪ್ರಾ. ಸ್ಕೂ. ನಲ್ಲಿ ನಡೆದಿರುವದು. ಇತಿಹಾಸದ ಉಪಕರಣಗಳನ್ನು ಇಡುವದಕ್ಕೆ ಒಂದು ಕೋಣೆಯು ವಿನಿಯೋಗಿಸಲ್ಪಟ್ಟಿದೆ. ಅದರಲ್ಲಿ ಈಗ ಸಂಗ್ರಹವಾದಂಥವು:—

ವ್ಯಕ್ತಿಗಳ ಚಿತ್ರಗಳು

ಛತ್ರಪತಿ ಶಿವಾಜಿ
ವೆಂಕೋಜಿ
ಸಂಭಾಜಿ
ಶಾಹು
ಮಲ್ಹಾರರಾವ ಹೋಳಕರ
ಮಹದಾಜಿ ಸಿಂಡೆ
ಆಫ್‌ಝುಲ್‌ಖಾನ,
ಗನೇ ಬಾಜಿರಾಯನಿಂದ
ಕಡೆಯ ಬಾಜೀರಾಯನ ವರೆಗೆ
ಎಲ್ಲ ಪೇಶವೆಗಳು.
ರಾಘೋಬಾ
ನಾನಾಫಡಣವೀಸ
ಹರಿಪಂತ ಫಡಕೆ (ಸಾಡೇತೀನ ಶಹಾಣೆರಲ್ಲಿ ಒಬ್ಬನು)

ಸ್ತ್ರೀಯರು

ತಾರಾಬಾಯಿ (ರಾಜಾರಾಮನ ಹೆಂಡತಿಯು)
ಅಹಲ್ಯಾಬಾಯಿ ಹೋಳಕರ
ಲಕ್ಷ್ಮೀಬಾಯಿ ಝಾಂಸಿ
ಯಶೋದಾಬಾಯಿ, (ಸವಾಯಿಮಾಧವರಾವಯನ ಹೆಂಡತಿ)

ನಕಾಶಗಳು

ಹಿಂದುಸ್ಥಾನದ ೮
ಐತಿಹಾಸಿಕ ನ. ಗಳು
ದಕ್ಷಿಣ ಹಿಂದುಸ್ಥಾನದ
೪ ಐತಿಹಾಸಿಕ ನ. ಗಳು.

ರಣಕ್ಷೇತ್ರಗಳು

ಪಾಣಿಪತದ ರಣಭೂಮಿ.
(೧೭೬೧ರಲ್ಲಿ ಆದ ಯುದ್ಧದ
ದೃಶ್ಯ)
ತಾಳೀಕೋಟೆಯ ರಣಭೂಮಿ.

ಈ ಎಲ್ಲ "ಚಿತ್ರ" ಗಳು ಬಣ್ಣದವಿದ್ದು,
ಆಕಾರವು ೨೪×೧೫ ಇಂಚು ಇರುವವು.

ನಾರಾಯಣರಾವ ಪೇಶವೆಯು ಕೊಲೆಯ ಚಿತ್ರ

ವಿಜಾಪುರ ಗೋವಳಕೊಂಡಗಳ ಬಾದಶಹರಲ್ಲಿ

ಯುಸಫ ಆದಿಲಶಹ, ೨ನೇ ಅಲ್ಲಿಆದಿಲ್‌ಶಹ, ೨ನೇ ಇಸ್ಮಾಯಿಲಶಹ, ಇಬ್ರಾಹಿಮಶಹ, ಸಿಕಂದರ ಆದಿಲ್‌ಶಹ, ಮಹಮ್ಮದ ಸುಲ್ತಾನ.

ಮೊಗಲ ಬಾದಶಹರಲ್ಲಿ

ಬಾಬರನಿಂದ ಔರಂಗಜೇಬನ ವರೆಗಿನ ಆರುಮಂದಿ.

ಮೈಸೂರ ಇತಿಹಾಸದಲ್ಲಿ

ಹೈದರಅಲ್ಲಿ, ಟೀಪು, ಈಗಿನ ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರು.

ಬ್ರಿಟಿಶ ಇತಿಹಾಸದಲ್ಲಿ

ಕ್ಲೈವನಿಂದ ಎಲ್ಲ ಗವರ್ನರ, ಗವರ್ನರ ಜನರಲ್

ಸ್ಟ್ಹಯಿಸರಾಯರು. ಇಂಗ್ಲಂಡದ ರಾಜಕುಟುಂಬ, ಹಿಂದುಸ್ತಾನದ ರಾಜ್ಯದಾ
ತಳಿತದ ಪಟ.

ಈ ಉಪಕರಣಗಳ ಹೊರತು ಇತಿಹಾಸ ಪುಸ್ತಕಗಳೂ ಬೇಕಾಗುತ್ತವೆ. ಇವು
ಇತಿಹಾಸದ ಕೋಣೆಯಲ್ಲಿಯೇ ಚಿತ್ರ ಮುಂತಾದವುಗಳೊಡನೆ ಒತ್ತಟ್ಟಿಗೆ ಇಡುವದ
ಂದ ಹೆಚ್ಚಿನ ವಿಷಯವನ್ನೇನಾದರೂ ಪುಸ್ತಕದಲ್ಲಿ ಓದಿ ತಿಳಕೊಳ್ಳಬೇಕೆಂಬ ಉತ್ಸು
ತೆಯನ್ನು ತೃಪ್ತಿಗೊಳಿಸಲಿಕ್ಕೆ ಬರುವದು. ಪ್ರಾ. ಸ್ಕೂ. ನಲ್ಲಿ ಅಂಥ ಪುಸ್ತಕಗಳು
ಕೆಲವು ಸಂಗ್ರಹವಾಗಿವೆ. ಹೈದರನ ಚರಿತ್ರೆ, ಅಕಬರಬಾದಶಹನ ಚರಿತ್ರೆ, ನಾನಾ
ಫಡಣವೀಸನ ಚರಿತ್ರೆ, ಹಿಂದುಸ್ತಾನದೊಳಗಿನ ಧರ್ಮಸ್ಥಾಪಕರು ಮುಂತಾದ
ಕೆಲವು ಕನ್ನಡ ಪುಸ್ತಕಗಳು ಇತಿಹಾಸದ ಕೋಣೆಯಲ್ಲಿಯೇ ಇಡಲ್ಪಟ್ಟಿವೆ. ಮರಾ
ಠಿಯಲ್ಲಿ ಇದಕ್ಕೂ ಹೆಚ್ಚು ಪುಸ್ತಕಗಳು ದೊರೆಯುವವು. ಮರಾಠಿ ಬಲ್ಲ ಹುಡು
ಗರ ಉಪಯೋಗಾರ್ಥವಾಗಿ ಅವನ್ನೂ ಇಡಬಹುದು ಈ ಮಾರ್ಗವನ್ನು ಅವಲಂ
ಬಿಸಿ ಈಗ ಪ್ರಾ. ಸ್ಕೂಲಿನಲ್ಲಿ ಇತಿಹಾಸ ಕಲಿಸುವದೊಂದು ಕೋಣೆಯನ್ನು ತೆರೆದಿರು
ತ್ತದೆ. ಇದು ಬರಬರುತ್ತ ಎಲ್ಲ ಉಪಕರಣಗಳಿಂದ ಸಜ್ಜಾಗಿ ಹಿಂದುಸ್ತಾನದ ಸಂ
ಪೂರ್ಣ ಇತಿಹಾಸವನ್ನು ಅನಾಯಾಸವಾಗಿ ಪ್ರತ್ಯಕ್ಷರೂಪದಿಂದ ತಿಳಿಸುವ ಸುದಿನವು
ಬೇಗ ಪ್ರಾಪ್ತವಾಗಬೇಕೆಂದು ಹಾರೈಸುತ್ತೇವೆ.

ಧಾರವಾಡ ಟ್ರೇನಿಂಗ ಸ್ಕೂಲಿನ ವಾರ್ಷಿಕ ಪರೀಕ್ಷೆಯ ಪರಿಣಾಮವು.

(೧೯೨೬)

ಧಾರವಾಡ ಜಿಲ್ಲೆ

ನಂ.	ಹೆಸರು	ಗುಣಗಳು.
೧	ರಾಜಪುರೋಹಿತ ಭೀಮಾಜಿ ಬಂಡೊ	೭೪೦
೨	ಕರಡಿ ಫಕ್ಕೀರಪ್ಪ ಚನ್ನಪ್ಪ	೭೧೪
೩	ಪೋತದಾರ ಭೀಮಾಜಿ ರಾವಜಿರಾವ	೬೭೪
೪	ರಜಪೂತ ಭೀಮಸಿಂಗ ಮೋತಿಸಿಂಗ	೬೩೨
೫	ಬಸವರಡ್ಡಿ ಸೋಮಪ್ಪ ರುದ್ರಪ್ಪ	೬೧೪
೬	ಬೀರಣ್ಣವರ ನಿಂಗಪ್ಪ ಬೀರಪ್ಪ	೫೮೯
೭	ತಳವಾರ ಹಣಮಂತ ತಾಯಿ ಕೆಂಚವ್ವಾ	೫೫೩
೮	ದುಶಿ ಧರ್ಮಾಜಿ ಮಲ್ಹಾರ	೫೪೯

೯	ಮಾದರ ಲಿಂಗಪ್ಪ ಮರಿಯಪ್ಪ	೫೪೧
೯	ಮೊಖಾಶಿ ನಬೀಸಾಹೇಬ ಹಸನಸಾಹೇಬ	೫೪೧
೧೧	ಆರೇರ ನರಸಪ್ಪ ರಾಮುಪ್ಪ	೫೨೮

ಧಾರವಾಡ ಮುನಸಿಪಾಲಟಿ

೧	ಚಿಕ್ಕಮಠ ಅಡಿವೆಯ್ಯಾ ಮಡಿವಾಳಯ್ಯಾ	೬೪೦

ಹುಬ್ಬಳ್ಳಿ ಮುನಸಿಪಾಲಿಟಿ

೧	ಗಿರಿಮಠ ನೀಲಕಂಠಯ್ಯಾ ಚನಬಸಯ್ಯಾ	೫೯೦
೨	ನಲವಡಿ ಶಿದ್ಲಿಂಗಯ್ಯಾ ನಾಗಯ್ಯಾ	೫೫೧
೩	ಗಾಣಿಗೇರ ದರಿಯಪ್ಪಾ ಅಡಿವೆಪ್ಪಾ	೫೪೧
೪	ಗೊಡಚಿ ಶಿವಪ್ಪಾ ಗದಿಗೆಪ್ಪಾ	೫೩೬
೫	ಅಕ್ಕೂರ ಹುಸೇನಸಾಹೇಬ ವ। ಮವಲಾಸಾಹೇಬ	೫೨೮

ಗದಗ ಮುನಸಿಪಾಲಿಟಿ

೧	ರೋಣ ಬಸಲಿಂಗಪ್ಪಾ ವೀರಪ್ಪಾ	೬೪೨
೨	ಹಂಚಾಟೆ ಬಾಬು ಲಕ್ಷ್ಮಣ	೬೧೬
೩	ಶಿದ್ಲಿಂಗ ಅಂಬೋಸಾ ಮಾದೋಸಾ	೬೦೩
೪	ಹಳೇಮನಿ ಕಾಯಪ್ಪಾ ಮಲ್ಲಪ್ಪಾ	೬೯೨
೫	ಅನಸಾರಿ ಬುಡಣಸಾಹೇಬ ವ। ಕಾಶಿಮಸಾಹೇಬ	೫೬೭

ವಿಜಾಪೂರ ಮುನಸಿಪಾಲಿಟಿ

೧	ಮುಧೋಳ ಕುಷ್ಣಪ್ಪಾ ಶಿದಬಸಪ್ಪಾ	೫೧೪

ಬಾಗಲಕೋಟ ಮುನಸಿಪಾಲಿಟಿ

೧	ಬೂದಿಹಾಳ ಮುದಾರಸಾಹೇಬ ವ। ಹುಶೇನಸಾಹೇಬ (ಉರ್ದು)	೬೯೨

ಏಡೆಡ್ ಸ್ಕೂಲ್ಸ

೧	ಕುಲಕರ್ಣಿ ಶ್ರೀಪಾದ ಹಣಮಂತ	೫೯೭
೨	ಗಂಗಾಧರ ತಿಪ್ಪಣ್ಣಾ ಯಲ್ಲಪ್ಪಾ	೫೭೮

ಮಿರಜ (ಜುನಿಅರ) ಸಂಸ್ಥಾನ

೧	ಪಾಟೀಲ ಮಾಧವ ವಿರುಪಾಕ್ಷ	೫೫೭

ಸಾಂಗಲಿ ಸಂಸ್ಥಾನ

೧	ಪುರೋಹಿತ ಮಧ್ವ ತನುಣಾಚಾರ್ಯ	೫೫೨

ಸೂ:—ರಾಜಪುರೋಹಿತ ಎಂಬ ವಿದ್ಯಾರ್ಥಿಗೆ ಜನರಲ್ ಪ್ರಾಯಿಜಿನ ಬಾ॥ ೮ ರೂ. ಹಾಗು ಜಾಯಿಲ್ಸ ಪ್ರಾಯಿಜಿನ ಬಾ॥ ೭ ರೂ. ರೋಣ ಎಂಬ ವಿದ್ಯಾರ್ಥಿಗೆ ಜನರಲ್ ಪ್ರಾಯಿಜಿನ ಬಾ॥ ೧೨ ರೂ. ಇನಾಮು ದೊರೆತಿವೆ.

H. G. Deshpande
ಹೆಡ್‌ಮಾಸ್ತರ ಟ್ರೇನಿಂಗಸ್ಕೂಲ
ಧಾರವಾಡ.

ಗ್ರಂಥವಿಮರ್ಶೆ

ವೇದಾಂತಶಾಸ್ತ್ರದ ಪೂರ್ವಪೀಠಿಕೆ

ಅಥವಾ

ಉಪನಿಷತ್ಪ್ರಕಾಶದ ಪ್ರಸ್ತಾವನೆ.

ಬೆಲೆ ೪ಆಣೆ. ' ಕರ್ನಾಟಕ ಪ್ರಿಂಟಿಗ ವರ್ಕ್ಸ್ ' ಮುದ್ರಣಾಲಯದ ಮುದ್ರಣ, ಪ್ರಕಾಶಕರು–ರಂಗನಾಥ ರಾಮಚಂದ್ರ ದಿವಾಕರ ಎಂ. ಎ. ಪುಸ್ತಕದ ಮೇಲೆ ಗ್ರಂಥ ಕರ್ತರ ಹೆಸರಿನ ಉಲ್ಲೇಖವಿಲ್ಲ.

ಗ್ರಂಥದಲ್ಲಿ ವೇದಾಂತವೆಂದರೇನು, ವೇದಾಂತ ಮತ್ತು ವ್ಯವಹಾರ, ಮುಕ್ತಿಯ ಕಲ್ಪನೆ, ಮುಕ್ತಿಯ ಇಲ್ಲವೆ ಆತ್ಮಸುಖದ ಶ್ರೇಷ್ಠತೆ, ವೇದಗಳಲ್ಲಿ ಹೇಳಿದ ಮುಖ್ಯ ವಿಷಯ, ವೇದಾಂತ (ಉಪನಿಷತ್ತು)ಗಳು, ಉಪನಿಷತ್ತುಗಳಲ್ಲಿಯ ಕೆಲವು ಸಿದ್ಧಾಂತಗಳು ಇವು ಮೊದಲಾದ ವಿಷಯಗಳು ಮೂರ್ಮಿಕವಾಗಿಯೂ ಸಮಂಜಸವಾಗಿಯೂ ವಿವೇಚಿಸಲ್ಪಟ್ಟಿರುವವು. ಪ್ರಕೃತ ಪುಸ್ತಕವನ್ನೋದುವದರಿಂದ ವೇದಾಂತಗಳೆಂದರೇನು, ಅವುಗಳಿಗೆ ಶ್ರೇಷ್ಠತೆಯು ಏಕೆ, ವೇದಾಂತಿಯು ವ್ಯವಹಾರವನ್ನು ಮಾಡಬಹುದೇ ಮಾಡಬಾರದೇ, ವೇದ–ಉಪನಿಷತ್ತುಗಳಲ್ಲಿ ಪ್ರತಿಪಾದ್ಯವಾದುದು ಏನು ಮೊದಲಾದ ವಿಷಯಗಳಲ್ಲಿ ಸಾಮಾನ್ಯ ಜನರ ಮೂಢ ಗ್ರಹಗಳು ಅಡಗುವವಲ್ಲದೆ ವೇದ, ಉಪನಿಷತ್ತುಗಳ ವಿಷಯವಾಗಿ ಪೂಜ್ಯಬುದ್ಧಿಯೂ, ಜಿಜ್ಞಾಸೆಯೂ ಪಾಠಕರಲ್ಲಿ ಉಂಟಾಗದಿರಲಾರವು.

ವೇದಾಂತಿಯು ವ್ಯವಹಾರವನ್ನು ಮಾಡಬಹುದು ಇಲ್ಲವೆ ಬಿಡಬಹುದು ಈ ಎರಡೂ ಮಾರ್ಗಗಳೂ ಅನಾದಿಕಾಲದಿಂದ ಇರುವವೆಂದೂ, ಎರಡೂ ಮಾರ್ಗಗಳ ಉದಾಹರಣಗಳೂ ಇರುವವೆಂದೂ ಪ್ರತಿಪಾದಿಸುವದಕ್ಕೆ ಹೊರಟಾಗ ಆರಂಭದಲ್ಲಿ— "ವೇದಾಂತದ ಬೆನ್ನುಹತ್ತಿದಕೂಡಲೆ ವ್ಯವಹಾರ ಬಿಡುವ ದುಷ್ಪ್ರಚಟವು ನಮಗೆ ಇತ್ತಿತ್ತ ಲಾಗಿ ಅಂದರೆ ನಮ್ಮ ಅಧೋಗತಿಯ ಕಾಲದಲ್ಲಿ ನಮ್ಮ ತಾಮಸವೃತ್ತಿಯ ಮೂಲಕ

ಗಂಟುಬಿದ್ದಿತು" ಎಂದು ಬರೆದಿದ್ದಾರೆ. ಈ ಚಟವು ದುಷ್ಟವೂ, ತಾಮಸವೃತ್ತಿ ಮೂಲಕವೂ ಆಗಿದ್ದರೆ ವ್ಯವಹಾರವನ್ನು ಬಿಡುವದು ಗ್ರಂಥಕಾರರಿಗೆ ಹೇಗೆ ಸಮ್ಮತವಾಗುವದೋ ಅರಿಯೆವು. (ಪುಟ ೯. ೧೦. ೧೧.)

" ವೇದಗಳು ಪುರುಷಕೃತವಲ್ಲ, ದೇವಕೃತವಲ್ಲ, ಪುರುಷೋತ್ತಮನ ಪ್ರೇರಣೆಯಿಂದ ಋಷಿಗಳ ಮನೋಭೂಮಿಕೆಯಲ್ಲಿ ಮೂಡಿದ ಮಾತುಗಳು " ಎಂದು ಗ್ರಂಥಕಾರರು ವೇದಗಳ ವಿಷಯವಾಗಿ ಅಪೌರುಷೇಯತ್ವವನ್ನು ಹೇಳಿ (ಪು. ೪೦) ಮುಂದೆ "ವೇದಗಳು ಮೊದಲು, ಆಮೇಲೆ ಉಪನಿಷತ್ತುಗಳು **ರಚಿಸಲ್ಪಟ್ಟವೆಂಬಲ್ಲಿ** ಯಾವ ಸಂಶಯವೂ ಇಲ್ಲ." (ಪು. ೪೩.) " ಬರಬರುತ್ತ ಈ ಆಧ್ಯಾತ್ಮ ದೃಷ್ಟಿಯು ಅಳಿಯಿತು. ಋಗ್ವೇದಾದಿಗಳಲ್ಲಿ ಗೂಢವಾಗಿದ್ದ ತತ್ವಜ್ಞಾನವನ್ನು ಸ್ಪಷ್ಟ ಭಾಷೆಯಲ್ಲಿ **ಹೇಳುವ** ಪ್ರಸಂಗವು ಬಂದಿತು, ಆಗ್ಗೆ ಉಪನಿಷತ್ತುಗಳ ಅವತಾರವಾಯ್ತು " (ಪು. ೪೪.) " ಉಪನಿಷತ್ತುಗಳು ದೈವೀ ಸ್ಫುರಣದಿಂದ **ನಿರ್ಮಿತವಾದ** ಗ್ರಂಥಗಳೆಂಬುವಲ್ಲಿ ಯಾವ ಸಂಶಯವೂ ಇಲ್ಲ. " ಋಷಿಗಳು ಸರಲ ಸುಲಭ ಶುದ್ಧ ಭಾಷೆಯಲ್ಲಿ **ಬರೆದಿಟ್ಟ** ಗ್ರಂಥಗಳೇ ಉಪನಿಷತ್ತುಗಳೆನಿಸುವವು. (ಪು. ೪೬.) ಮೊದಲಾದ ಕಡೆಗಳಲ್ಲಿ ರಚನಾಕರ್ತೃತ್ವ ದ್ಯೋತಕ ಶಬ್ದ ಪ್ರಯೋಗ ಮಾಡಿದ್ದು ಉಚಿತವಾಗಲಾರದು.

ಈ ಪುಸ್ತಕದ ಭಾಷೆಯು ಪ್ರವಾಹರೂಪವಾಗಿ ಪರಿಣಾಮಕಾರಕವಾಗಿ ಇದೆ. ಆದರೆ ಅದಕ್ಕೆ ತಕ್ಕ ಸಂಸ್ಕಾರವು ಇಲ್ಲ. ಉಪನ್ಯಾಸರೂಪವಾಗಿ ಮಾತನಾಡುವದಕ್ಕೆ ತಕ್ಕ ಭಾಷೆಯೇ ಹೊರತು ತತ್ವಜ್ಞಾನದಂಥ ಮಹತ್ವದ ವಿಷಯವನ್ನು ವಿವೇಚಿಸುವ ಗ್ರಂಥಕ್ಕೆ ಈ ಭಾಷೆಯು ತಕ್ಕದ್ದಾಗಿಲ್ಲ. ಶಬ್ದರೂಪಗಳ ಶುದ್ಧತೆಯು ಕಾಯಲ್ಪಟ್ಟಿಲ್ಲ. ಉದಾ. ಬಂಡವು, ಗಂಟೇ ಬಡೆಯುತ್ತ, 'ವರೆಗಲ್ಲಿನ' ಚಿತ್ಯಕ್ಕಿಯು, ದೇಹೇಂದ್ರಿಯ ಮನಾದಿಗಳ, ಮರಣಪಶ್ಚಾತ್, ತರಹದ್ದು, ಸನ್ಯಾಟೆರಂತೆ; ಹಳ್ಳುಒಗೆದು, ಮುಂತಾದವು. ವ್ಯಾಕರಣಮರ್ಯಾದೆಗೆ ಲಕ್ಷ ಕೊಟ್ಟಿಲ್ಲ:—ನಾನಾ ಅಸಹ್ಯ ಹಾಗು ದೇಶಘಾತಕವಾದ, ಅನ್ಯ ಯಾವದೇ ಕ್ಷುದ್ರ ವಿಷಯಗಳ, ನಾನು...ಒಳಗಾದ ದೇಹ ಮನ ಬುದ್ಧಿಯಲ್ಲ, ರೂಢಿಗಳೂ ಮೂರ್ಖ ತಿಳುವಳಿಕೆಗಳೂ .....ತೇಜ ಮುಂದಾದವುಗಳನ್ನು ಹೀರಿ ಅದನ್ನು ನಿಃಸತ್ವ ನಿರ್ಬಲವನ್ನಾಗಿ, ಇಂಥ ಈ ಅತ್ಯಂತ ವ್ಯಾಪಕ, ಎಲ್ಲೆಲ್ಲಿಯೂ ತುಂಬಿದ ಮು. ಅನಾವಶ್ಯಕ ಮರಾಠಿ ಶಬ್ದಗಳು ಉಪಯೋಗಿಸಲ್ಪಟ್ಟಿವೆ:—ಅವಾಢವ್ಯ. ವ್ಯಾಪ, ಮುಂತಾದವುಗಳು.

ಪುಸ್ತಕದ ಮುದ್ರಣವು ಅಷ್ಟೊಂದು ಚೆನ್ನಾಗಿಲ್ಲ. ಅಚ್ಚಿನ ದೋಷಗಳು ಮಿತಿಮೀರಿವೆ.

ತತ್ವಜ್ಞಾನ ವಿಷಯಕವಾದ ತಿಳಿಗನ್ನಡ ಗ್ರಂಥಗಳು ಕನ್ನಡ ಭಾಷೆಯಲ್ಲಿ ಅಪೂರ್ವವಾಗಿವೆ. ಈ ಸಮಯದಲ್ಲಿ ಈ ತರದ ಪುಸ್ತಕಗಳಿಂದ ಪ್ರಯೋಜನವಾಗುವದರಲ್ಲಿ ಸಂಶಯವಿಲ್ಲ. ಆದರೆ ಭಾಷಾ ಶುದ್ಧಿ ಮೊದಲಾದವುಗಳ ಕಡೆಗೆ ಲಕ್ಷವನ್ನು ಕೊಟ್ಟು ಮುಂದಿನ ಗ್ರಂಥಗಳನ್ನು ಸರ್ವಾಂಗ ಸುಂದರವಾಗಿ ಮಾಡುವರೆಂದು ನಂಬಿದ್ದೇವೆ.

ಮ. ಪ್ರ. ಪೂ.

ಉದ್ಯೋಗವಿಲ್ಲದವರು ಏನುಮಾಡತಕ್ಕದ್ದು.

ಇತ್ತಲಾಗಿ ನಮ್ಮ ದೇಶದಲ್ಲಿ ಅನುದ್ಯೋಗಿತನವು ಮೈದೋರುತ್ತಲಿದೆ. ಇಲ್ಲಿ ೨ದು ಸ್ಥಿರವಾಗಿ ನಿಂತು ಎಲ್ಲ ಚಳವಳದ ಮಧ್ಯಕೇಂದ್ರವಾಗಿರುತ್ತದೆ. ಇದನ್ನು ಹಿಮ್ಮೆ ಟ್ಟಿಸಲಿಕ್ಕೆ ಎಷ್ಟು ಉಪಾಯಗಳನ್ನು ಕಂಡುಹಿಡಿದಾಗ್ಯೂ ಇದು ಈಗ ತೀರ ಗಡಚಾದ ಪ್ರಶ್ನೆಯಾಗಿದು ಇದಕ್ಕೆ ಸರಿಯಾದ ಉಪಾಯಗಳನ್ನು ಕೈಕೊಳ್ಳುವದು ಅಸಾಧ್ಯ ಕೋಟಿಯಲ್ಲಿ ಬಂದದೆ. ಬಹುತರ ಎಲ್ಲ ದೇಶಗಳಲ್ಲಿ ಪ್ರಾಯಸ್ಥರಾದವರಲ್ಲಿ ಗಿಂಕ್ಕೆ ೦ರಂತೆ ಅನುದ್ಯೋಗಿ ಜನರಿರುತ್ತಾರೆ. ಉದ್ಯೋಗಕ್ಕೆ ಹಾತೊರೆಯುವಂಥ, ಯೋಗ್ಯ ೆಯುಳ್ಳ ಜನರಲ್ಲಿಯೂ ಕೆಲವರು ಉದ್ಯೋಗವನ್ನೇ ಒಲ್ಲದವರಿದ್ದಾಗ್ಯೂ ಅನುದ್ಯೋಗಿ ಳ ಸಂಖ್ಯೆಯು ಅಲಕ್ಷ್ಯಮಾಡುವಷ್ಟು ಚಿಕ್ಕದಿಲ್ಲ. ಬಹಳ ಜನರು ಸ್ವಭಾವದಿಂದಲೂ ಪ್ರಕೃತಿಯಿಂದಲೂ ಸುದೃಢರಿದ್ದಾಗ್ಯೂ ಯಾವ ಉದ್ಯೋಗವನ್ನೂ ಕೈಕೊಳ್ಳದವರಾಗಿ ್ದಾರೆ. ಅವರು ಸಂಪಾದಿಸಿದ ವಿದ್ಯೆಯು ಅವರನ್ನು ಯಾವದೊಂದು ಉದ್ಯೋಗಕ್ಕೆ ಪ್ರೇರಿಸುತ್ತಿದ್ದರೂ ಅವರು ಆ ಸ್ಫೂರ್ತಿಯನ್ನು ಬದಿಗೊತ್ತಲಿಕ್ಕೆ ಸಿದ್ಧರಾಗುತ್ತಾರೆ. ಇದರಿಂದಲೂ ಅನುದ್ಯೋಗಿಗಳ ಸಂಖ್ಯೆಯು ಬೆಳೆಯುತ್ತಬಂದದೆ.

ಶಾರೀರಿಕ ಶ್ರಮವನ್ನು ಮಾಡುವ ವರ್ಗದವರಲ್ಲಿಯೂ ಅನೇಕರು ಹಿಡಿದ ುದ್ಯೋಗವನ್ನು ಬಿಟ್ಟುಕೊಟ್ಟು ತಮ್ಮ ಸಂಬಂಧಿಕರನ್ನು ಅವಲಂಬಿಸಿಕೊಂಡು ಜೀವಿ ುತ್ತಾರೆ. ಅವರನ್ನು ಒತ್ತಾಯ ಪಡಿಸಿದರೆ ಅವರು ಉದ್ಯೋಗದಲ್ಲಿ ತೊಡಗುವ ಂಬದು ನಿಜವು. ಅಂಥವರು ಸೋಮಾರಿಗಳೂ ನಿರ್ಧಾರದ ಸ್ವಭಾವವಿಲ್ಲದವರೂ ಇದ್ದು ಅವರ ಸಾಧಾರಣ ಒಲವು, ಜನರು ಕೊಡುವ ದಾನ ಭಿಕ್ಷೆಗಳ ಮೇಲೆ ಬದುಕ ೀಕೆಂದಿರುತ್ತದೆ. ಎಲ್ಲೆಲ್ಲಿಯೂ ಈ ತಿರುಕರ ಸಂಖ್ಯೆಯು ಬೆಳಿಗೆಯಲ್ಲಿರುವದು. ಉದ್ಯೋ ಗದ ಅಭಾವದಿಂದಲೋ ಅವರಿಗೆ ಉದ್ಯೋಗವು ಬೇಡಾಗಿದೆಯೆಂತಲೋ ಪೃಥಕ್ಕರಿಸಿ ಕೇಳುವದು ಕಠಿಣವದೆ. ಒಟ್ಟಿಗೆ ಈ ವರ್ಗದ ಬಗ್ಗೆ ನಮಗಿರುವ ಸಹಾನುಭೂತಿಯು ೨ಸ್ಥಾನದಲ್ಲಿರುತ್ತದೆಂದು ಹೇಳಲು ತಪ್ಪಾಗದು.

ಉದ್ಯೋಗಕ್ಕೆ ತಕ್ಕವರಿಸಿಸುವವರಲ್ಲಿ ಅನೇಕರು ಉದ್ಯೋಗದ ಒಲವು ಇದ್ದೂ ುದ್ಯೋಗವು ದೊರೆಯದ್ದರಿಂದ ಏನೂ ಮಾಡಲಾರದವರಾಗಿದ್ದಾರೆ. ಅವರು ಹಾರೈ ುವ ಉದ್ಯೋಗವೆಂದರೆ ಕಚೇರಿಗಳಲ್ಲಿಯ ಬರವಣಿಗೆಯ ಕೆಲಸ. ಆದರೆ ಕೆಲಸ ಕಡಿವೆ, ನರು ಹೆಚ್ಚು ಆದ್ದರಿಂದ ಹೊಸಹೊಸದಾಗಿ ಕೆಲಸಬೇಡುವವರಿಗೆ ಅದು ದೊರೆಯುವ ಅವಕಾಶ ಕಡಿಮೆಯಾಗುವದು ಸ್ವಾಭಾವಿಕ. ಉದ್ಯೋಗವು ಸಿಗುವದಿಲ್ಲೆಂಬ ನಿರಾ ಶೆಯು ತೋರಿದರೂ ಅವರು ಅದನ್ನು ಹಿಂಬಾಲಿಸುವದನ್ನು ಬಿಡುವದಿಲ್ಲ. ತನ್ನ ಹೊಟ್ಟೆ ಗೋಸುಗ ಪರರನ್ನು ಒಲ್ಲಿಸುವದಕ್ಕೆ ದಾಸ್ಯವೆನ್ನಬಹುದು. ಅದೊಂದು ಅಂಟು

ರೋಗವು. ವಿಶ್ವವಿದ್ಯಾಲಯದಲ್ಲಿ ಶಿಕ್ಷಣಹೊಂದಿದ ಜನರು ಈ ಉದ್ಯೋಗಕ್ಕೆ ಬಹಳ ವ್ಯೋಹಗೊಳ್ಳುತ್ತಾರೆ. ಅವರ ಸಂಖ್ಯೆಯು ಬೆಳೆಯುತ್ತಿರುವದರಿಂದ ಈ ಕೆಲಸಕ್ಕೆ ಜನಸ್ತೋಮ ಬಹಳವಾಗಿದೆ. ಯಾರಲ್ಲಿ ಸ್ವಪ್ರತಿಷ್ಠೆಯೂ ಕಲ್ಪಕತೆಯೂ ಇರುವವೋ ಅವರು ಆ ಹವ್ಯಾಸವನ್ನು ಬಿಟ್ಟುಕೊಟ್ಟು ಬೇರೊಂದು ಕಡೆಗೆ ತಮ್ಮ ಶಕ್ತಿಯನ್ನು ತೊಡಗಿಸುವದು ಉಚಿತವು. ಅವರು ಇನ್ನೊಬ್ಬರ ಸೂಚನೆ ಅಥವಾ ವಿಚಾರದ ಹಾದಿಯನ್ನು ನೋಡಬಾರದು. ಅದರೆ ಅಂಥವರು ಬೀದಿಯೊಳಗಿನ ಹರಕು ಕಾಗದಗಳನ್ನು ಆರಿಸಿ, ಬರಿದಾದ ಸೀಸೆಗಳನ್ನು ಹೊತ್ತುಕೊಂಡು, ಹಳೇ ವರ್ತಮಾನ ಪತ್ರಗಳನ್ನು ಮಾರಿ, ಹಣಗಳಿಸಿ, ಲಕ್ಷಾಧೀಶರಾಗುವರೆಂದು ಹೇಳಲಿಕ್ಕೆ ಅತಿಸ್ವಲ್ಪ ಉದಾಹರಣೆಗಳಿರಬಹುದು.

ಶಾರೀರಿಕ ಶ್ರಮದ ಕಡೆಗೆ ತೋರಿಸಿದ ಅನಾಸ್ಥೆಯಿಂದಲೇ ನಮ್ಮ ಮನಃಸ್ಥಿತಿಯು ಅನುದ್ಯೋಗಿತನಕ್ಕೆ ಆಶ್ರಯಕೊಟ್ಟಿರುತ್ತದೆ. ವಿದ್ಯೆಯಿಂದ ಕಲ್ಪಕತೆಯೂ ಹುರುಪೂ ಹುಟ್ಟದಿದ್ದರೆ ಅದು ಅಷ್ಟರಮಟ್ಟಿಗೆ ದುರ್ಬಲವಾದದ್ದೆಂದು ಹೇಳಬೇಕಾಗುವದು. ವಿದ್ಯೆ ಬಹಳ ಕಲಿಯದವರೇ ಬೇಗ ಹಣಗಾರರಾಗುವರು. ಯಾಕಂದರೆ ಅವರು ಶಾರೀರಿಕ ದುಡತಕ್ಕೆ ಹಿಂಜರಿಯುವದಿಲ್ಲ. ಎಲ್ಲರೂ ಕಚೇರಿಯ ಕೆಲಸಕ್ಕೆ ಕೈಯೊಡ್ಡಬಾರದು. ಅವರು ಮೊದಲು ಆ ಕೆಲಸಕ್ಕೆ ತಕ್ಕವರಾಗಬೇಕು, ಆ ಮೇಲೆ ಅದರಲ್ಲಿ ಸೇರಬೇಕು. ಅನುದ್ಯೋಗಿಗಳು ವ್ಯಾಪಾರಿ ಶಿಕ್ಷಣವನ್ನು ಹೊಂದಿ ತಮ್ಮ ಸುಕುಮಾರತ್ವವನ್ನು ಸ್ವಲ್ಪಹೊತ್ತು ಮರೆತು ಹಾಕಿದರೆ ಈ ಪ್ರಶ್ನವು ತಡವಿಲ್ಲದೆ ಬಿಚ್ಚಿ ಹೋಗುವದು. ವ್ಯಾಪಾರೋದ್ಯೋಗಗಳಲ್ಲಿ ಸೇರುವ ಮನಸ್ಸುಳ್ಳವರು ಬಂಡವಲಿನ ಕೊರತೆಯನ್ನು ತೋರಿಸುತ್ತಾರೆ. ಆದರೆ ಸಂತೋಷದಿಂದ ಕೆಲಸಮಾಡುವವರಿಗೆ ಇದು ತೊಂದರೆ ಎನಿಸದು. ಜಗತ್ತಿನಲ್ಲಿ ಈ ಹೊತ್ತಿಗೆ ಧನಿಕರೆಂದೆನಿಸುವವರು ಆರಂಭದಲ್ಲಿ ಅಲ್ಪ ವೇತನದ ಉದ್ಯಮದಲ್ಲಿ ತೊಡಗಿದ್ದರೆಂದು ತಿಳಿಯುವದು. ವ್ಯಾಪಾರವು ಯಶಸ್ಸಿಗೆ ರಾಜಮಾರ್ಗವು. ಕಾರಖಾನೆಗಳು ಅದಕ್ಕೂ ಮೇಲಾದ ಹಾದಿಯು. ಬೇಸಾಯವು ಮೂರನೇದು. ಚಾಕರಿಯು ತೀರಕಡೆಯದು. ಯಾಚನೆಯು ಮನುವಿನ ಆಜ್ಞೆಯಂತೆ ಜೀವನೋಪಾಯಕ್ಕೆ ನಿಷಿದ್ಧವಾದ ಹಾದಿಯು. ನಮ್ಮಲ್ಲಿ ಹೊಸದಾಗಿ ಉದ್ಯೋಗದಲ್ಲಿ ಸೇರಿದವರನ್ನು ತಿದುವ ಪದ್ಧತಿಗಳಿಲ್ಲ. ಆದರೂ ಹುಟ್ಟಾ ಚತುರರಾದವರು ವಿದ್ಯೆ, ಬಂಡವಲುಗಳ ಸಂಗ್ರಹಕ್ಕೆ ಹೋಗದೆ. ಸ್ವಸಾಮರ್ಥ್ಯದಿಂದಲೇ ಅನುದ್ಯೋಗವನ್ನು ಹೊಡೆದು ಓಡಿಸಬಲ್ಲರು.

ವೆ. ರಾ. ಪ್ರಭು

ಸ್ಯುಕೇಶನಲ್ ರಿವ್ಯೂ

ಪತ್ರಗಳ ಸಾರಾಂಶ

ಹಳ್ಳೀಕೇರಿ (ತಾ॥ ನವಲಗುಂದ):— ರಾ॥ ರಾ॥ ದೊಡ್ಡಗೂಳಪ್ಪಾ ಚಿಪ್ಪಾಡಿ ಎಂಬವರು ತಿಳಿಸುವದೇನಂದರೆ— ನಮ್ಮ ಊರ ಶಾಲೆಯಲ್ಲಿ ಮು॥ ರಾ॥ ಬಾಳಾಜಿ ನರಸಿಂಹ ಪಾಟೀಲ ಇವರ ಅಧ್ಯಕ್ಷತೆಯ ಕೆಳಗೆ ಸಭೆಯು ನೆರೆದಿತ್ತು. ಆ ಕಾಲಕ್ಕೆ ಪರೀಕ್ಷೆಯಲ್ಲಿ ಮೇಲು ನಂಬರು ಪಡೆದು ವಿದ್ಯಾರ್ಥಿಗಳಿಗೆ ಸ್ಕೂಲ ಪಂಚರಾದ ಹನು ಮಪ್ಪಾ ಜಕರಡ್ಡಿ ಮತ್ತು ದತ್ತಾತ್ರಯ ಶಂಕರ ಪಾಟೀಲ ಇವರು ತಮ್ಮ ಖರ್ಚಿನಿಂದ ೮ ರೂ. ಗಳ ಪುಸ್ತಕಗಳನ್ನು ಇನಾಮುಕೊಟ್ಟರು. ಮತ್ತು ಎಲ್ಲ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚಲ್ಪಟ್ಟಿತು.

ಮುದ್ದೇಬಿಹಾಳ (ಜಿ॥ ವಿಜಾಪೂರ):— ಇಲ್ಲಿಯ ವಿದ್ಯಾರ್ಥಿವಾಚನಾಲಯವನ್ನು ಧಾರವಾಡದ ಎ. ವ್ಹಿ. ಗರ್ಲ್ಸ ಸ್ಕೂಲ ಮಿಸ್ಟ್ರೆಸ್‌ರಾದ ರಮಾಬಾಯಿ ಪಾರಗಾಂವಕರ ಎಂಬವರು ನೋಡಿ ತುಂಬಾ ಸಂತೋಷಪಟ್ಟು ೧೧ ರೂ. ಬಹುಮಾನವಾಗಿ ಕೊಟ್ಟರೆಂದು ಸದರ ವಾಚನಾಲಯದ ಕಾರ್ಯ ದರ್ಶಿಗಳಾದ ಟಿ. ಆರ್. ಕುಲಕರ್ಣಿ ಎಂಬವರು ತಿಳಿಸುತ್ತಾರೆ.

ಶಿವಾಪೂರ (ತಾ॥ ಗೋಕಾಕ):— ಈ ಊರ ಸ್ಕೂಲ ಪಂಚರಾದ ಅಲ್ಲಪ್ಪಾ ಕುಡಚಿ ಎಂಬವರು ಸಾಲೆಯ ಉಪಯೋಗಕ್ಕಾಗಿ ಒಂದು ಗಡಿಯಾರವನ್ನು ಕೊಟ್ಟಿದ್ದಲ್ಲದೆ ಶಾಲೆಯ ವಿಷಯವಾಗಿ ಕಾಲಕಾಲಕ್ಕೆ ಒದಗುವ ತೊಂದರೆಗಳನ್ನು ದೂರಮಾಡುವದಕ್ಕೆ ಆಶ್ವಾಸನ ಕೊಟ್ಟಿರುವರು ಎಂಬದಾಗಿ ಗಿರಿಮಲ್ಲಪ್ಪಾ ಎಂಬ ಸ್ಕೂಲ ಪಂಚರು ಬರೆಯುತ್ತಾರೆ.

ಕೊಟಬಾಯಿಗಿ (ತಾ॥ ಧಾರವಾಡ):— ಇಲ್ಲಿ ಹೊಸದಾಗಿ ಕಟ್ಟಿದ ಶಾಲಾ ಗೃಹದ ಬಾಗಿಲ ತೆರೆಯುವ ಸಮಾರಂಭವು ಮೆ॥ ಕಲೆಕ್ಟರ ಸಾ॥ ಬ॥ ರವರ ಅಧ್ಯಕ್ಷತೆಯ ಕೆಳಗೆ ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಮೆ॥ ಅಸಿ॥ ಕಲೇಕ್ಟರರೇ ಮೊದಲಾದ ಮುಲಕೀಖಾತೆಯ ಅಮಲದಾರರೂ ಲೋ. ಬೋ. ನ ಚಿಕ್ಕದೊಡ್ಡ ಅಧಿಕಾರಸ್ಥರೂ ವಿ. ಬಾ. ರೊದ್ದರಾಯರೇ ಮೊದಲಾದ ಸದ್ಗೃಹಸ್ಥರೂ ಸಭೆಗೆ ದಯ ಮಾಡಿಸಿದ್ದರು. ಪ್ರಾರಂಭವಲ್ಲಿ ಸ್ವಾಗತಪದ್ಯವಾದ ಬಳಿಕ ಡಿ. ಲೋ. ಬೋ. ಪ್ರೈ. ರಾದ ಶ್ರೀ. ಹುಲಕೋಟಿಯವರು ಸಭೆಯ ಉದ್ದೇಶವನ್ನು ಇಂಗ್ಲಿಷ ಭಾಷೆಯಿಂದ ಹೇಳಿದರು; ಬಳಿಕ ತಾ. ಲೋ. ಬೋ. ಪ್ರೈ. ರಾದ ಶ್ರೀ. ಹೊನ್ನಾಪೂರಮಠ ಇವರು ಅದರ ಸಾರವನ್ನು ಕನ್ನಡದಿಂದ ತಿಳಿಸಿದರು. ಆ ಮೇಲೆ ಮೆ॥ ಕಲೇಕ್ಟರ ಸಾ. ರವರ ಹಸ್ತದಿಂದ ಕೀಲಿಯನ್ನು ತೆಗೆಯುವ ಸಮಾರಂಭವಾದ ಬಳಿಕ ಮೆ॥ ರವರು ಉಪದೇಶಪರವಾದ ಭಾಷಣಮಾಡಿದರು. ಡಿ. ಲೋ. ಬೋ. ವ್ಹಾ. ಪ್ರೈ. ರಾದ ಶ್ರೀ. ಡಿ. ಎಲ್ ಪಾಟೀಲ ಇವರು ಮೆ॥ ರವರ ಭಾಷಣವನ್ನು ಕನ್ನಡದಿಂದ ಎಲ್ಲ ಜನರಿಗೆ ಹೇಳಿದರು.

ಈ ಊರ ಸಭ್ಯಗೃಹಸ್ಥರು ೨೮ ರೂ. ಬೆಲೆಬಾಳುವ ಒಂದು ಗಡಿಯಾರವನ್ನೂ ಮಾ. ದೇವಪ್ಪಾ ಚಿಟ್ಟಿ ಎಂಬವರು ಒಂದು ಜಾಗುಟಿಯನ್ನೂ ನೆರೆದ ಸಭೆಯಲ್ಲಿ ಸಾಲೆಯ ಉಪಯೋಗಕ್ಕಾಗಿ ಕೊಟ್ಟರು. ಮತ್ತು ೫ನೇ ೬ನೇ ಇಯತ್ತೆಯ ಪರೀಕ್ಷೆಯಲ್ಲಿ ಉತ್ತಮ ರೀತಿಯಿಂದ ತೇರ್ಗಡೆಹೊಂದಿ ಮೊದಲನೆಯ ನಂ॥ ಪಡೆದ ವಿದ್ಯಾರ್ಥಿಗಳಿಗೆ ಹತ್ತು ಹತ್ತು ರೂ. ಇನಾಮು ಕೊಡುವದಕ್ಕಾಗಿ ಖಾ. ಕರಾಕಾ ಇವರು ಇಪ್ಪತ್ತು ರೂ. ಗಳನ್ನೂ ನಾಲ್ಕನೆಯ ಇಯತ್ತೆಯಲ್ಲಿ ತೇರ್ಗಡೆಹೊಂದಿದ ಎಲ್ಲ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಇನಾಮು ಕೊಡುವದಕ್ಕಾಗಿ ಮು॥ ವೀರಪ್ಪಾ ದೊಡ್ಡಮನಿ (ಗರಗ) ಎಂಬವರು ನಾಲ್ಕು ರೂಪಾಯಿಗಳನ್ನೂ ಪ್ರೇಮಪೂರ್ವಕವಾಗಿ ಕೊಟ್ಟರು ಎಂಬದಾಗಿ ಅಸಿ॥ ಮಾ. ರಾದ ಮುರಾಶೆ ಎಂಬವರು ತಿಳಿಸುತ್ತಾರೆ.

ಮುಡ್ಲೂರ:— (ಜಿ. ಧಾರವಾಡ):— ಇಲ್ಲಿಯ ಪೋಲೀಸ ಪಾಟೀಲರು ಬರೆಯುವದೇನಂದರೆ— ನಮ್ಮೂರ ಸಾಲೆಗೆ ಬ. ಭೀ. ಇಂಗಳಗೊಂದಿ ಎಂಬವರು ಬರುವದಕ್ಕಿಂತ ಮೊದಲು ಸಾಲೆಯಲ್ಲಿ ನಾಲ್ಕನೇ ಇಯತ್ತೆಯವರೆಗೆ ಮಾತ್ರ ಕ್ಲಾಸುಗಳಿದ್ದವು. ಇವರು ಬಂದ ಬಳಿಕ ಮುಲ್ಕೀ ಪರೀಕ್ಷೆಯವರೆಗೆ ಕ್ಲಾಸುಗಳನ್ನಿಟ್ಟು ಹುಡುಗರ ಸಂಖ್ಯೆಯನ್ನು ಬೆಳಿಸಿ ಕಳಕಳಿಯಿಂದ ಕೆಲಸಮಾಡುತ್ತಿರುವರು. ಊರ ಜನರು ೧೫ ರೂ. ಬೆಲೆಯುಳ್ಳ ಒಂದು ಗಡಿಯಾರವನ್ನು ಸಾಲೆಯ ಉಪಯೋಗಕ್ಕಾಗಿ ಕೊಟ್ಟರುತ್ತೇವೆ.

ಜೂಗಳ (ಜಿ. ಬೆಳಗಾಂವ:— ಈ ಊರ ಸಾಲೆಯಲ್ಲಿ ಹುಡುಗರ ಸಂಖ್ಯೆಯು ಬೆಳೆದ್ದರಿಂದ ಕೆಲವು ಹುಡುಗರು ಸಾಲೆಯ ಬೈಲು ಮಳಿಗೆಯಲ್ಲಿ ಕೂಡ್ರುತ್ತಿದ್ದರು. ಈ ತೊಂದರೆಯನ್ನು ನೋಡಿ ಬಾವಾ ಸಾ॥ ಮಿರಜಕರ, ಬಸಪ್ಪಾ ಬಳ್ಳೂರ, ಆಬಾ ಸಮುಗಾರ ಈ ಮೂವರು ಸದ್ಗೃಹಸ್ಥರು ೨೫–೩೦ ರೂ. ಗಳನ್ನು ಖರ್ಚುಮಾಡಿ ಕಂಪೌಂಡ ಗೋಡೆ ಮೊದಲಾದವುಗಳನ್ನು ಕಟ್ಟಿಸಿಕೊಟ್ಟರೆಂದು ೧೯೮ ಅಸಿ॥ ಶೇಡಬಾಳಕರ ಎಂಬವರು ತಿಳಿಸುತ್ತಾರೆ.

ಶಿಂದೀ ಕುರುಬಿಟ್ಟ:— (ಜಿ॥ ಬೆಳಗಾಂವ):— ಇಲ್ಲಿಯ ಹೆ. ಮಾ. ರಾದ ರಾಮದುರ್ಗ ಎಂಬವರು ಬರೆಯುವದೇನಂದರೆ— ಶ್ರೀ. ಕೊಚ್ಚರಿಗಿ, ದಪ್ತರದಾರ, ಕುಲಕರ್ಣಿ, ಬಡದಾಳಿ, ಗಾಣಿಗೇರ, ದಂಡಿಗಿ ಎಂಬ ಆರು ಜನ ಸದ್ಗೃಹಸ್ಥರು ೭ ರೂ. ವರ್ಗಣೀ ಕೂಡಿಸಿ ಜೀರ್ಣವಾದ ಸಾಲೆಯ ಕಿಡಿಕೆಗಳನ್ನು ದುರಸ್ತು ಮಾಡಿಸಿ ಕೊಟ್ಟರು. ಕಳೆದ ೧೫ ವರ್ಷಗಳಲ್ಲಿ ಇಲ್ಲಿಯ ಸಭ್ಯಗೃಹಸ್ಥರು ಸಾಲೆಯ ಸಲುವಾಗಿ ೩೫೭ ರೂ. ಗಳ ಸಹಾಯವನ್ನು ಮಾಡಿರುವರು. ಸ್ತುತ್ಯ.

ಕರಜಿಗಿ (ಜಿ॥ ಧಾರವಾಡ):— ಈ ಭಾಗದ ಡಿ. ಡಿ. ಕಲೇಕ್ಟರರಾದ ಮೆ॥ ಭದ್ರಾಪೂರ ಸಾ॥ರು ಸಾಲೆಯನ್ನು ತಪಾಸುಮಾಡಿ ವಿದ್ಯಾರ್ಥಿಗಳ ಕೈಕೆಲಸ, ಸಹಕಾರಿ ಸಂಘ, ಅಂಗಸಾಧನೆ, ಸಾಲೆಯ ವ್ಯವಸ್ಥೆ ಮೊದಲಾದವುಗಳನ್ನು ನೋಡಿ ತುಂಬಾ ಸಂತೋಷಪಟ್ಟು ವಿದ್ಯಾರ್ಥಿಗಳಿಗೆ ನಾಲ್ಕು ಉಪದೇಶದ ಮಾತುಗಳನ್ನು ಹೇಳಿ ಶಿಕ್ಷ

ಣಕ್ಕೆ ಬೇಕಾಗುವ ಉಪಕರಣಗಳ ಸಲುವಾಗಿ ೫ ರೂ. ಗಳನ್ನು ತಮ್ಮ ಉದಾರ ಹಸ್ತದಿಂದ ಕೊಟ್ಟರು. ಮತ್ತು ಹೆ. ಮಾ. ರೂ. ಅಸಿ॥ ಮಾ. ರೂ ಒಮ್ಮನಸ್ಸಿನಿಂದಲೂ ಕಳಕಳಿಯಿಂದಲೂ ಕೆಲಸವನ್ನಾಡುತ್ತಿರುವದನ್ನು ನೋಡಿ ತಮ್ಮ ಆನಂದವನ್ನು ವ್ಯಕ್ತ ಪಡಿಸಿದರು. ಎಂಬದಾಗಿ ಸ್ಕೂಲ ಪಂಚರಾದ ತಿಪ್ಪಣ್ಣಾ ಗುತ್ತಿ ಎಂಬವರು ಬರೆಯುತ್ತಾರೆ.

ಕುಡುಪಲಿ (ತಾ॥ ಕೋಡ):— ಇಲ್ಲಿಯ ಎ. ಕೆ. ಪಾಟೀಲ ಎಂಬವರು ಬರೆಯುವದೇನಂದರೆ– ಮೆ॥ ಮಾಮಲೇದಾರ ಸಾ॥ ರ ಅಧ್ಯಕ್ಷತೆಯ ಕೆಳಗೆ ಸಾಲೆಯಲ್ಲಿ ಇನಾಮಿನ ಸಮಾರಂಭವು ಜರುಗಿತು. ಈ ಕಾಲಕ್ಕೆ ಸಂಭಾಷಣೆ, ನಾಟಕ ಮುಂತಾದವುಗಳಿಂದ ವಿದ್ಯಾರ್ಥಿಗಳು ಸಭಿಕರನ್ನು ಆನಂದಗೊಳಿಸಿದರು. ರಾ. ಚನಬಸಪ್ಪಾ ಮುದ್ದಿ ಎಂಬವರು ಕೆಲವು ಇನಾಮಿನ ಪದಾರ್ಥಗಳನ್ನು ಕೊಟ್ಟದ್ದಲ್ಲದೆ ಎಲ್ಲ ವಿದ್ಯಾರ್ಥಿಗಳಿಗೆ ಮಿಠಾಯಿಯನ್ನು ಹಂಚಿದರು. ರಾ॥ ಚನಬಸಪ್ಪಾ ಮುದರಡ್ಡಿ ಎಂಬವರು ಹೊಸ ಸಾಲೆಯನ್ನು ಕಟ್ಟುವದಕ್ಕಾಗಿ ತಮ್ಮ ಮಾಲಿಕಿಯ ಸ್ಥಳವನ್ನು ಪುಕ್ಕಟೆಯಾಗಿ ಕೊಡುತ್ತೇವೆಂದು ನೆರೆದ ಸಭೆಯಲ್ಲಿ ಹೇಳಿದರು. ಮೆ॥ ಮಾಮಲೇದಾರ ಸಾ॥ ರು ತಮ್ಮ ಭಾಷಣದಲ್ಲಿ "ಈ ತಾಲೂಕಿನಲ್ಲಿ ನಾನು ನೋಡಿದ ಸಾಲೆಗಳಲ್ಲಿ ಈ ಸಾಲೆಯ ಸ್ಥಿತಿಯು ಚೆನ್ನಾಗಿದೆ. ಹೆ. ಮಾ. ದ. ಶ್ರೀ. ಕುಲಕರ್ಣಿ ಇವರು ಉತ್ಸಾಹಿಗಳೂ ಜನಪ್ರಿಯರೂ ಕಾರ್ಯದಕ್ಷರೂ ಇರುವರು. ನಿಮ್ಮ ಊರ ಹೊಸ ಸಾಲೆಯು ತೀವ್ರ ಆಗುವ ಸಲುವಾಗಿ ನಾನು ಯತ್ನಿಸುತ್ತೇನೆ" ಎಂಬದಾಗಿ ಹೇಳಿದರು.

ಪ್ರಕಟನೆ ೧

ವ್ಹ. ಫಾ. ಪರೀಕ್ಷೆಯ ಪುರವಣಿ ಪರಿಣಾಮವು.

(೧೯೨೬)

ಧಾರವಾಡ ಸೆಂಟರ

ನಂ.	ಹೆಸರು	ಗುಣಗಳು
೧೧೯	ಸಂಗಪ್ಪಾ ರಾಮಪ್ಪಾ ಹವಾಲದಾರ	೨೭೨
೧೪೧	ಮಲ್ಲಪ್ಪಾ ಸಂಗಪ್ಪಾ ಜಾವೂರ	೨೪೫

ನಂ ೧೦೧೩ }
ತಾ॥ ೨೭–೧–೧೯೨೭ }

G. K. Puranik
ಆ. ಹೆಡ್‌ಮಾಸ್ತರ ಹಾಯಸ್ಕೂಲ ಮತ್ತು ಪ್ರೆಸಿಡೆಂಟ
ವ್ಹ. ಫಾ. ಸ. ಕ. ಧಾರವಾಡ ಸೆಂಟರ

ಪ್ರಕಟನೆ ೨

ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆ

ದಕ್ಷಿಣಭಾಗ

೧೯೨೭ ನೇ ಇ. ಯಲ್ಲಿ ಆಗತಕ್ಕ ವ್ಹ. ಫಾ. ಪರೀಕ್ಷೆಯು ೧೯೨೭ ನೇ ಇಸವಿ ಎಪ್ರಿಲ್ ತಿಂಗಳ ೭ನೇ ತಾರೀಕು ಗುರುವಾರ ಮತ್ತು ಅದರ ಮುಂದಿನ ದಿವಸಗಳಲ್ಲಿ (೧) ಧಾರವಾಡ (೨) ಬೆಳಗಾಂವ (೩) ವಿಜಾಪುರ (೪) ಕಾರವಾರ (೫) ಕೊಲ್ಹಾಪುರ (೬) ಹುಬ್ಬಳ್ಳಿ(ಧಾರವಾಡ ಜಿಲ್ಲೆಯೊಳಗಿನ ಉರ್ದು ಉಮೇದವಾರರ ಬಗ್ಗೆ)ಸೆಂಟರುಗಳಲ್ಲಿ ನಡೆಯುವದು.

೨. ಪ್ರತಿಯೊಂದು ಸೆಂಟರಿನಲ್ಲಿ ಒಂದು ಕವಿಂಟಿಯಿಂದ ಪರೀಕ್ಷೆಯು ತೆಗೆದುಕೊಳ್ಳಲ್ಪಡುವದು. ಧಾರವಾಡ, ಬೆಳಗಾಂವ, ವಿಜಾಪುರ, ಕಾರವಾರ ಗವ್ಹರ್ನಮೆಂಟ ಹಾಯಸ್ಕೂಲುಗಳ ಮತ್ತು ಹುಬ್ಬಳ್ಳಿ ಉರ್ದು ಹಾಯಸ್ಕೂಲಿನ ಹೆಡ್‌ಮಾಸ್ತರರು ಪರೀಕ್ಷಾ ಕವಿಂಟಿಗಳ ಅಧ್ಯಕ್ಷರಿರುವರು. ಕೊಲ್ಲಾಪುರಕ್ಕೆ ಆ ಸಂಸ್ಥಾನದ ಎಜ್ಯುಕೇಶನಲ್ ಇನಸ್ಪೆಕ್ಟರರು ಅಧ್ಯಕ್ಷರಾಗುವರು.

೩. ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿ ದೊರೆಯಲಿಕ್ಕೆ ಮಾಡತಕ್ಕ ಅರ್ಜಿಗಳನ್ನು ಆಯಾ ಪರೀಕ್ಷಾ ಕವಿಂಟಿಯ ಅಧ್ಯಕ್ಷರಕಡಿಗೆ ೧೫ನೇ ಮಾರ್ಚ ೧೯೨೭ ರೊಳಗಾಗಿ ಮುಟ್ಟುವಂತೆ ಕಳಿಸತಕ್ಕದ್ದು. ಅದರ ಮುಂದೆ ಬಂದ ಅರ್ಜಿಗಳ ವಿಚಾರವಾಗಲಿಕ್ಕಿಲ್ಲ. ಅರ್ಜಿಯಲ್ಲಿ ಉಮೇದವಾರನ ಹೆಸರು, ಆತನು ಕಲಿತ ಸಾಲೆಯ ಹೆಸರು ಪೂರ್ಣವಾಗಿ ತೋರಿಸಲಿಕ್ಕೆಬೇಕು.

ಅರ್ಜಿಯ ಟಪಾಲಿ ಫಾರ್ಮುಗಳು ಕವಿಂಟಿಯ ಅಧ್ಯಕ್ಷರ ಕಡಿಗೆ ಬೆಲೆಯಿಲ್ಲದೆ ಶಿಗುವವು.

೪. ಉಮೇದವಾರನ ವಯಸ್ಸು ೧೯೨೭ನೇ ಎಪ್ರಿಲ್ ೧ನೇ ತಾರೀಖಿಗೆ ೨೫ ವರ್ಷಕ್ಕೆ ಮಿರಿರಬಾರದು. ಆತನು ಯಾವ ಜಿಲ್ಲೆಯಲ್ಲಿ ಪರೀಕ್ಷೆಗೆ ಕೂಡ್ರತಕ್ಕವನೋ ಆ ಜಿಲ್ಲೆಯಲ್ಲಿ ಪರೀಕ್ಷೆಗೆ ಮೊದಲು ೬ ತಿಂಗಳು ವಾಸಮಾಡಿದವನಿರಬೇಕು. ಈ ಬಗ್ಗೆ ಆತನು ತಾನು ಕಲಿತ ಸಾಲೆಯ ಮಾಸ್ತರನ ಸರ್ಟಿಫಿಕೇಟನ್ನು ಹಾಜರ ಪಡಿಸಬೇಕು. ಆತನು ಸಾಲೆಯಲ್ಲಿ ಕಲಿಯದಿದ್ದರೆ ಆ ಬಗ್ಗೆ ಯಾವನೊಬ್ಬ ಸರಕಾರಿ ಸಾಲೆಯ ಮಾಸ್ತರನ (ಮಾಸ್ತರನ ಹೆಸರು ಡಿರೆಕ್ಟರಿಯಲ್ಲಿರಬೇಕು) ಇಲ್ಲವೆ ಪಾಟೇಲನಿಗಿಂತ ಕಡಿಮೆ ಯೋಗ್ಯತೆ ಇಲ್ಲದ ಸರಕಾರಿ ನೌಕರನ ಸರ್ಟಿಫಿಕೇಟನ್ನು ಹಾಜರ ಮಾಡಬೇಕು.

ಹೆಣ್ಣು ಮಕ್ಕಳಿಗೆ ವಯಸ್ಸಿನ ನಿರ್ಬಂಧವಿಲ್ಲ.

೫. ಧಾರವಾಡ, ಕಾನಡಾ ಜಿಲ್ಹೆಗಳಲ್ಲಿ ದೇಶಭಾಷೆಯು ಕನ್ನಡ, ಬೆಳಗಾಂವ ವಿಜಾಪುರಗಳಲ್ಲಿ ಕನ್ನಡ ಮತ್ತು ಮರಾಠಿ ಎಂದು ಗೊತ್ತು ಮಾಡಲ್ಪಟ್ಟಿದೆ.

ಧಾರವಾಡ, ಕಾನಡಾ ಜಿಲ್ಲೆಗಳ ಮರಾಠಿ ಉಮೇದವಾರರು ಬೆಳಗಾಂವ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರುತಕ್ಕದ್ದು.

೬. ಪರೀಕ್ಷೆಗೆ ನೇಮಿಸಿದ ಪುಸ್ತಕಗಳು ಸರಕಾರಿ ಗ್ಯಾಜೇಟ ಭಾಗ ೨ ತಾ॥ ೨೮–೧–೧೯೨೬ ಪಾನು ೧೪೫ ರಲ್ಲಿ ಪ್ರಸಿದ್ಧವಾಗಿರುತ್ತವೆ.

೭. ಪರೀಕ್ಷೆಯ ಫೀ ಮುಂತಾದ ಎಲ್ಲ ಸಂಗತಿಗಳ ಮಾಹಿತಿಯು ಮೇಲಿನ ಗ್ಯಾಜಿಟಿನಲ್ಲಿ ಸಿಗುವದು.

೮. ಕಾನಡಾ ಜಿಲ್ಲೆಯ ಹಲ್ಯಾಳ ತಾಲೂಕಿನ ಹಾಗು ಶಿರ್ಶಿ ತಾಲೂಕು ಬನವಾಸಿಯ ಉಮೇದವಾರರು ಧಾರವಾಡ ಸೆಂಟರಿನಲ್ಲಿಯೂ, ಸಾಂಗಲಿ ಸಂಸ್ಥಾನದ ಕುಚಿ ತಾಲೂಕಿನವರು ಸಾತಾರಾ ಸೆಂಟರಿನಲ್ಲಿಯೂ, ಔಂಧ ಸಂಸ್ಥಾನದ ಕುಂಡಲ ತಾಲೂಕಿನವರು ವಿಜಾಪೂರ ಸೆಂಟರಿನಲ್ಲಿಯೂ ಪರೀಕ್ಷೆಗೆ ಕೂಡ್ರಬಹುದು.

೯. ಒಕ್ಕಲತನದ ವಿಷಯಗಳನ್ನು ತೆಗೆದುಕೊಂಡು ವ್ಹ. ಫಾ. ಪರೀಕ್ಷೆಗೆ ಕೂಡ್ರುವ ಉಮೇದವಾರರ ಪರೀಕ್ಷೆಯು, ಧಾರವಾಡ, ಬೆಳಗಾಂವ, ವಿಜಾಪೂರ, ಕಾರವಾರ ಸೆಂಟರಿನಲ್ಲಿ ಆಗುವದು.

ಧಾರವಾಡ
೨೦ನೇ ಜನವರಿ ೧೯೨೭

H. A. Sadarangani
ಎಜ್ಯುಕೇಶನಲ್ ಇನಸ್ಪೆಕ್ಟರ ದ. ಭಾ.

ಪ್ರಕಟನೆ ೩

ಉರ್ದು ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆ.

೧೯೨೭

ದಕ್ಷಿಣಭಾಗ.

ನಂ, ೬೨-ಬಿ-೪೦೭೭

ಈ ಮೊದಲು ಪ್ರಸಿದ್ಧಪಡಿಸಿದಂತೆ ಮೌಲವಿ ಸಯ್ಯದ ಅಹಮ್ಮದ ಅಶ್ರಫ್ ಅಶ್ರಫಿಯವರ ಸರಮಯಾ ಇ. ಉರ್ದು, ಎಂಬ ಪುಸ್ತಕಕ್ಕೆ ವಿಕಲ್ಪವಾಗಿ ಟೆಕ್ಸ್ಟ್ ಬುಕ್ಕಿನಂತೆ ಮಂಜೂರ ಮಾಡಿದ ಮೌಲವಿ ಮಹಮ್ಮದ ಇಸ್ಮಾಯಿಲ್ ಇವರ ಉರ್ದು ೫ನೇ ಪುಸ್ತಕದೊಳಗಿನ ಕೆಳಗೆ ಹೇಳಿದ ಪಾಠಗಳು ಉರ್ದು ೧ ನೇ ಸದರಿನ ಕೆಳಗೆ ಮಂಜೂರ ಮಾಡಲ್ಪಟ್ಟಿರುತ್ತವೆ.

(ಅ) ಗದ್ಯ—೨, ೩, ೫, ೭, ೯, ೧೧, ೧೨, ೧೫, ೧೮, ೨೧, ೨೩, ೨೫, ೨೭, ೨೯, ೩೨, ೩೪, ೩೫, ೩೬, ಮತ್ತು ೫೬ ನೇ ಪಾಠಗಳು (ಒಟ್ಟು ೨೦ ಪಾಠಗಳು.)

(ಬ) ಪದ್ಯಃ— ೧, ೪, ೬, ೮, ೧೩, ೧೪, ೧೭, ೧೯, ಮತ್ತು ೨೦ ನೇ ಪಾಠಗಳು (ಒಟ್ಟು ಒಂಬತ್ತು ಪಾಠಗಳು)

ಧಾರವಾಡ
೧೭ ನೇ ಜನವರಿ ೧೯೨೭

H. A. Sadarangani
ಆಕ್ಟಿಂಗ ಎಜ್ಯುಕೇಶನಲ್ ಇನಸ್ಪೆಕ್ಟರ ದ. ಭಾ.

೧೯೨೭ ನೇ ಇಸವಿಯ ವ್ಹ. ಫಾ. ಪರೀಕ್ಷೆಯ ಕಾರ್ಯಕ್ರಮವು.

ವಾರ ಮತ್ತು ತಾ॥	ವೇಳೆ		ವಿಷಯ			ಶರಾ
	ಎಲ್ಲಿಂದ	ಎಲ್ಲಿಯವರೆಗೆ	ಕನ್ನಡ ಮತ್ತು ಮರಾಠಿ	ಉರ್ದು	ಅಗ್ರಿಕಲ್ಚರಲ್	
ಗುರುವಾರ	೧೧–೩೦	೨–೩೦	ಉಮೇದವಾರರ ಹೆಸರು ಹಚ್ಚುವದು	ಉಮೇದವಾರರ ಹೆಸರು ಹಚ್ಚುವದು	ಉಮೇದವಾರರ ಹೆಸರು ಹಚ್ಚುವದು	*ವ್ಹ. ಫೈ. ಮತ್ತು ಡಿ॥ ಅಭ್ಯರ್ಥಿಗಳ ಹೆಸರು ಸಿಲಬಸ್ಸಿನ ಪ್ರಕಟಣೆಯ ಸಂಗಡ ಸೇರಿಸಲ್ಪಡುವದು.
೭–೪–೧೯೨೭	೩–೩೦	೫–೩೦	ನಿಬಂಧ ಅಥವಾ ರಿಪೋರ್ಟ	ನಿಬಂಧ ಅಥವಾ ರಿಪೋರ್ಟ	ನಿಬಂಧ ಅಥವಾ ರಿಪೋರ್ಟ	
ಶುಕ್ರವಾರ	೩–೦	೬–೦	ಆ. ವಿಜ್ಞಾನ ಮತ್ತು ಶಾಸ್ತ್ರೀಯ ವಿ.	ಆ. ವಿಜ್ಞಾನ ಮತ್ತು ಶಾಸ್ತ್ರೀಯ ವಿ	... ...	
೮–೪–೧೯೨೭	೩–೦	೫–೦	... ...	... ...	ಆ. ವಿಜ್ಞಾನ ಮತ್ತು ಶಾಸ್ತ್ರೀಯ ವಿ.	
ಶನಿವಾರ	೧೧–೦	೨–೦	ಅಂಕಗಣಿತ	ಅಂಕಗಣಿತ	ಅಂಕಗಣಿತ, ಕ್ಷೇತ್ರಫಲ, ಜಮಾಖರ್ಚು	
೯–೪–೧೯೨೭	೩–೦	೬–೦	ಇತಿಹಾಸ ಮತ್ತು ಭೂಗೋಲ	ಇತಿಹಾಸ ಮತ್ತು ಭೂಗೋಲ	ಆಡ್‌ವಾನ್ಸ್ಡ್ ॥, ಸಹಕಾರ, ಭೂಗೋಲ	
ಸೋಮವಾರ	೧೧–೦	೨–೦	ಭೂಮಿತಿ ಮತ್ತು ಜಮಾಖರ್ಚು	ಭೂಮಿತಿ ಮತ್ತು ಜಮಾಖರ್ಚು	ಒಕ್ಕಲತನ ಮತ್ತು ನೇಚರಸ್ಟಡಿ	
೧೧–೪–೧೯೨೭	೩–೦	೬–೦	ಭಾಷಾವಿಷಯ	ವ್ಹರ್ನ್ಯಾಕ್ಯುಲರ್ ಅಥವಾ ಉರ್ದು	ಭಾಷಾವಿಷಯ	
ಮಂಗಳವಾರ	೧೧–೦	೧೨–೦	... ...	ಪತ್ರಬರಹ ಅಥವಾ ರಿಪೋರ್ಟ	ಪ್ರ್ಯಾಕ್ಟಿಕಲ್ *	
೧೨–೪–೧೯೨೭	೧೧–೦	೩–೦	... ...	ಉರ್ದು ಅಥವಾ ವ್ಹರ್ನ್ಯಾಕ್ಯುಲರ್	... ...	

§ ೧೬. ಭೂಗೋಲಜ್ಞಾನ:—ಭಾರತಕಾಲದ ಜನರಿಗೆ ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ಎಲ್ಲ ಪ್ರದೇಶಗಳ ಜ್ಞಾನವಿತ್ತು. ಇದಲ್ಲದೆ ಚೀನ, ತಿಬೇಟ, ಇರಾಣ, ತುರ್ಕಸ್ತಾನ, ಗ್ರೀಸ, ಇತಲಿ, ಮೊದಲಾದ ಹಿಂದುಸ್ತಾನದ ಹೊರಗಿನ ದೇಶಗಳ ಬಗ್ಗೆ ಎಷ್ಟೋ ಸಂಗತಿಗಳು ಗೊತ್ತಿದ್ದವು. ಹಿಮಾಲಯದ ಉತ್ತರಕ್ಕಿರುವನೆಂದು ಹೇಳಿದ ಹೇಮಕೂಟ, ನಿಷಧ ಪರ್ವತಗಳು ಈಗಿನ ಕುವೆಲನ್ ಮತ್ತು ಅಲತಾಯಿ ಪರ್ವತಗಳ ಪೂರ್ವ, ಪಶ್ಚಿಮ ಶಾಖೆಗಳೆಂಬದು, ಸ್ಪಷ್ಟವಾಗುವದು. ಪಾಂಡವರು ಹಿಮಾಲಯದ ಉತ್ತರಕ್ಕೆ ಹೋದಾಗ ಉಸುಬಿನ ಸಮುದ್ರವು ಹತ್ತಿತ್ತೆಂದು ವರ್ಣನೆಯಿರುವದು. ಅದೇ ಗೋಬಿಯ ಉಸುಬಿನ ಬೈಲು. ಹಿಮಾಲಯದ ಹೊರತಾಗಿ ಮಹೇಂದ್ರ (ಪೂರ್ವಘಟ್ಟ) ಮಲಯ, ಸಹ್ಯ, ಶುಕ್ತಿಮಾನ (ಗಿರಿನಾರ), ಋಕ್ಷವಾನ (ಅರವಲಿ), ವಿಂಧ್ಯ, ಪಾರಿಯಾತ್ರ (ಸುಲೈಮಾನ) ಇವು ಏಳು ಕುಲಪರ್ವತಗಳು. ರೈವತಕ ಪರ್ವತವೆಂಬುದು ದ್ವಾರಕೆಯ ಸವಿೂಪದಲ್ಲಿ ಶುಕ್ತಿಮಾನ ಪರ್ವತದ ಶಾಖೆಯಾಗಿರುವುದು. ಹಿಂದುಸ್ತಾನದಲ್ಲಿ ಒಟ್ಟು ೧೫೬ ದೇಶಗಳಿದ್ದವು. ಅವುಗಳಲ್ಲಿ ೫೦ ದಕ್ಷಿಣಕ್ಕೆ, ಉಳಿದ ದೇಶಗಳು ಉತ್ತರದ ಕಡೆಗಿದ್ದವು. ಈಗಿದ್ದ ನದಿಗಳೆಲ್ಲ ಭಾರತದ ಕಾಲಕ್ಕೆ ಗೊತ್ತಿದ್ದವು. ಆದರೆ ಜಗತ್ತಿನ ವಿಷಯವಾಗಿ ಅವರಿಗಿದ್ದ ಜ್ಞಾನವು ಕಲ್ಪನೆಯಿಂದ ಸಂಗ್ರಹವಾದದ್ದರಿಂದ ವಸ್ತುಸ್ಥಿತಿಗೆ ಅನುರೂಪವಾಗಿದ್ದಿಲ್ಲ.

§ ೧೭. ಧರ್ಮ:—ಆಗಿನ ಕಾಲದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ದಿನಾಲು ಸಂಧ್ಯಾವಂದನೆಯನ್ನು ಮಾಡಿ ಅಗ್ನಿಯನ್ನು ಪೂಜಿಸುತ್ತಿದ್ದರು. ಸಂಧ್ಯಾವಂದನೆಯಿಂದ ಋಷಿಗಳಿಗೆ ದೀರ್ಘಾಯುಷ್ಯವುಂಟಾಗಿತ್ತು. ದೇವತೆಗಳಲ್ಲಿ ವಿಷ್ಣು ಶಿವರಿಗೆ ಮಹತ್ವವು ಉಂಟಾಗಿತ್ತು. ವೈದಿಕ ಕಾಲದಲ್ಲಿ ಇಂದ್ರನಿಗಿದ್ದ ಶ್ರೇಷ್ಠತೆಯುಕಡಿಮೆಯಾಗಿ ವಿಷ್ಣುವಿಗೆ ಪ್ರಾಧಾನ್ಯವುಂಟಾಯಿತು. ಬ್ರಹ್ಮ, ವಿಷ್ಣು, ಮಹೇಶ್ವರರು ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯ ಈ ವ್ಯಾಪಾರಗಳನ್ನು ನಡಿಸುತ್ತಾರೆಂದು ಮಹಾಭಾರತದಲ್ಲಿ ವರ್ಣನೆಯುದೆ. ವಿಷ್ಣುವಿನ ಅವತಾರ ಜ್ಞಾನವು ಆಗಿನ ಕಾಲಕ್ಕೆ ರೂಢವಾಗಿತ್ತು. ಆಗಿನ ಜನರು ಶ್ರಾದ್ಧವನ್ನು ಮಾಡುತ್ತಿದ್ದರು. ಧರ್ಮಜ್ಞಾನವನ್ನುಮಾಡಿಕೊಳ್ಳುವದಕ್ಕಾಗಿ ತಪ ಉಪವಾಸಗಳನ್ನು ಆಚರಿಸುತ್ತಿದ್ದರು. ಆಗಿನ ಉಪವಾಸದ ದಿನಗಳೆಂದರೆ ಪಂಚಮಿ, ಷಷ್ಠಿ, ಪದ್ಯ ಪಕ್ಷದ ಅಷ್ಟಮಿ ಮತ್ತು ಚತುರ್ದಶಿ. ಈಗಿನಂತೆ ವಿಕಾದಶಿಯ ಉಪವಾಸವು ಮಹಾಭಾರತ ಕಾಲದಲ್ಲಿದ್ದಿಲ್ಲ. ಭಾರತ ಕಾಲದ ಕೊನೆಗೆ ಜನರಿಗೆ ಅಹಿಂಸೆಯು ಮಹತ್ವವು ಸಂಪೂರ್ಣವಾಗಿ ಗೊತ್ತಾಗಿತ್ತು. ಸ್ವರ್ಗ ನರಕಗಳ ಕಲ್ಪನೆಯು ಸ್ವಲ್ಪ ಭಿನ್ನವಾಗಿತ್ತು. ಅದು ಹೇಗಂದರೆ:—ಇಹ ಜನ್ಮದಲ್ಲಿ ಯಾರ ಪುಣ್ಯವು ಹೆಚ್ಚಿರುವುದೋ ಪಾಪವು ಅಲ್ಪವಿರುವುದೋ ಅವರು ಮೊದಲು ಸ್ವಲ್ಪ ಕಾಲ ನರಕ ವಾಸವನ್ನು ಭೋಗಿಸಿದ ನಂತರ ಸ್ವರ್ಗ ಸುಖವನ್ನು ಬಹು ದಿವಸ ಭೋಗಿಸುವರು. ಮತ್ತು ಯಾರ ಪುಣ್ಯವು ಅಲ್ಪವಿದ್ದು ಪಾಪವು ಹೆಚ್ಚಿರುವದೋ ಅವರು ಮೊದಲು ಅಲ್ಪಕಾಲ ಸ್ವರ್ಗಸುಖವನ್ನು ಭೋಗಿಸಿ ನಂತರ ನರಕ ಯಾತನೆಯನ್ನು ಹೊಂದುವರು.

§ ೧೮. **ತತ್ವಜ್ಞಾನ**:—ಭಾರತೀಯರು ಜಗತ್ತಿನ ಉಳಿದ ಎಲ್ಲ ಜನಾಂಗಗಳಿಗಿಂತ ತತ್ವಜ್ಞಾನದಲ್ಲಿ ಒಳ್ಳೇ ಹೆಸರು ಪಡೆದಿರುವರು; ಈತತ್ವಜ್ಞಾನವೆಂದರೆ ವೇದಾಂತ ಜ್ಞಾನವು. ಮಹಾಭಾರತದಲ್ಲಿ ಅಲ್ಲಲ್ಲಿಗೆ ತತ್ವಜ್ಞಾನದ ವಾದವಿವಾದಗಳಿರುವದರಿಂದ ಓದುವವರಿಗೆ ಮನೋರಂಜನವೂ ಜ್ಞಾನವೂ ಉಂಟಾಗುವವು. ಈ ವಾದವಿವಾದಗಳಲ್ಲಿ ಭಗವದ್ಗೀತೆಯು ಅತ್ಯುತ್ತಮವಾಗಿರುವದು. ಇದಲ್ಲದೆ ಶಾಂತಿಪರ್ವದೊಳಗಿನ ಮೋಕ್ಷಧರ್ಮ, ಉದ್ಯೋಗಪರ್ವದೊಳಗಿನ ಸನತ್ಸುಜಾತೀಯ ಸಂವಾದ, ವನಪರ್ವದಲ್ಲಿಯ ಧರ್ಮ-ವ್ಯಾಧ ಸಂವಾದ ಮತ್ತು ಇತರ ಆಖ್ಯಾನಗಳು ಕೂಡಿ ತತ್ವಜ್ಞಾನದ ಮಹತ್ವದ ಗ್ರಂಥಸಮುದಾಯವೇ ಆಗುವದು. ರಾಮಾಯಣದಲ್ಲಿ ತತ್ವಜ್ಞಾನದ ವಿಷಯವು ವಿಶೇಷವಾಗಿ ಕಂಡುಬರುವದಿಲ್ಲ. ಉಪನಿಷತ್ತುಗಳ ತರುವಾಯದಲ್ಲಿ ರಚಿತವಾದ ತತ್ವಜ್ಞಾನದ ಗ್ರಂಥವೆಂದರೆ ಮಹಾಭಾರತವು. ಪ್ರಾಚೀನಕಾಲದಿಂದ ತತ್ವಜ್ಞಾನದ ವಿಚಾರದಲ್ಲಿ ಹೇಗೆ ಹೇಗೆ ಪ್ರಗತಿಯಾಯಿತೆಂಬದನ್ನು ನೋಡುವದಕ್ಕೆ ಮಹಾಭಾರತಗ್ರಂಥವೇ ಸಾಧನವಾಗಿರುವದು. ಜೈನ ಬೌದ್ಧಮತಗಳ ವಿಚಾರವು ಮಹಾಭಾರತದಲ್ಲಿ ಪ್ರತ್ಯಕ್ಷವಾಗಿರದಿದ್ದರೂ ಅಪ್ರತ್ಯಕ್ಷವಾಗಿ ಕಂಡುಬರುವದು.

ತತ್ವಜ್ಞಾನದ ವಿಷಯವನ್ನು ವಿಚಾರಮಾಡುವಾಗ ದೇವರ ಅಸ್ತಿತ್ವದ ಬಗ್ಗೆ ಸಂಶಯವನ್ನು ವ್ಯಕ್ತಮಾಡುವಂಥ ಕೆಲವು ಮತುಗಳು ಇರುವವೆಂದು ಕಂಡುಬರುವದು. ಕಪಿಲ ಮತ್ತು ಚಾರ್ವಾಕ ಇವರು ಈ ಮತಗಳ ಪ್ರಸಾರವನ್ನು ಮಾಡಿದರು. ಪಂಚಮಹಾಭೂತಗಳು ಮತ್ತು ಪಂಚೇಂದ್ರಿಯಗಳು ತತ್ವಜ್ಞಾನದ ಮೂಲಾಕ್ಷರಗಳು. ಪಂಚಮಹಾಭೂತಗಳು ಯಾವವೆಂದರೆ---ಪೃಥ್ವಿ, ಅಪ್, ತೇಜ, ವಾಯು, ಆಕಾಶ. ಪಂಚೇಂದ್ರಿಯಗಳು ಯಾವವೆಂದರೆ—ತ್ವಕ್, ರಸನ, ಘ್ರಾಣ, ಶ್ರೋತ್ರ, ಚಕ್ಷು. ಇವುಗಳ ಗುಣಗಳು ಅನುಕ್ರಮವಾಗಿ ಸ್ಪರ್ಶ, ರಸ, ಗಂಧ, ಶಬ್ದ, ಮತ್ತು ರೂಪ.

೪ ನೇ ಅಧ್ಯಾಯ

ಸಂಹಿತೆಗಳೂ ಬ್ರಾಹ್ಮಣಗಳೂ ಆರಣ್ಯಕಗಳೂ.

೧ ಸಾಮಾನ್ಯ ವಿವೇಚನೆ:—ಋಕ್, ಸಾಮ, ಯಜುರ್, ಅಥರ್ವ ವೇದಗಳ ಮೂಲಗಳಿಗೆ ಸಂಹಿತೆ ಎನ್ನುವರು. ಋಗ್ವೇದ ಸಂಹಿತೆಯಲ್ಲಿ ೧೦೧೭ ಋಕ್ಕುಗಳಿದ್ದು ಮಂಡಲಗಳೆಂಬ ೧೦ ಭಾಗಗಳಿವೆ. ಯಜುರ್ವೇದ ಸಂಹಿತೆಯಲ್ಲಿ ಶುಕ್ಲ ಕೃಷ್ಣಗಳೆಂಬ ಎರಡು ಭಾಗಗಳಿರುವವು. ಸಾಮವೇದದಲ್ಲಿ ಒಂದು ಸಾವಿರ ಸೂಕ್ತಗಳಿದ್ದು ಅರ್ಚಕಗಳೆಂಬ ಎರಡು ಭಾಗಗಳಿವೆ. ಅಥರ್ವ ವೇದದಲ್ಲಿಯೂ ಅಥರ್ವನ್, ಅಂಗಿರಸ ಎಂಬ ಎರಡು ಭಾಗಗಳಿರುವವು. ಸಂಹಿತೆಗಳಲ್ಲಿ ಸ್ತೋತ್ರಗಳೂ, ಪ್ರಾರ್ಥನೆಗಳೂ ಯಜ್ಞದ ಮಂತ್ರಗಳೂ ಇರುವವು.

ಬ್ರಾಹ್ಮಣಗಳೆಂದರೆ ಸಂಹಿತೆಗಳ ಗದ್ಯವಿವರಣೆಯು. ಈ ಬ್ರಾಹ್ಮಣಗಳಲ್ಲಿ ಯಜ್ಞಕರ್ಮದ ವಿಚಾರವೂ ಜಗದುತ್ಪತ್ತಿಯ ವಿಷಯವೂ ಚಿಕ್ಕ ಚಿಕ್ಕ ಕಥೆಗಳೂ ಇರುವವು.

ತತ್ವಜ್ಞಾನಕ್ಕೆ ಸಂಬಂಧಿಸಿದ ವಿವೇಚನವೂ ಅದನ್ನು ಉದಹರಿಸುವ ಕಥೆಗಳೂ ಇದ್ದ ಭಾಗಕ್ಕೆ ಆರಣ್ಯಕವೆನ್ನುವರು. ಋಷಿಗಳು ತಮ್ಮ ಶಿಷ್ಯರಿಗೆ ಅರಣ್ಯದಲ್ಲಿಯೇ ಆಧ್ಯಾತ್ಮಿಕ ಜ್ಞಾನವನ್ನು ಉಪದೇಶಿಸಿದ್ದರಿಂದ ಈ ಗ್ರಂಥಗಳಿಗೆ ಆರಣ್ಯಕ ಅಥವಾ ಉಪನಿಷತ್ತುಗಳೆನ್ನುವರು. ಉಪನಿಷತ್ ಎಂದರೆ ಸವಿೀಪದಲ್ಲಿ ಕೂಡ್ರುವದು. ಗುರುಗಳು ಯೋಗ್ಯರಾದ ತಮ್ಮ ಶಿಷ್ಯರನ್ನು ತಮ್ಮ ಹತ್ತರ ಕೂಡ್ರಿಸಿಕೊಂಡು ಆಧ್ಯಾತ್ಮಜ್ಞಾನದ ತತ್ವಗಳನ್ನು ಉಪದೇಶಿಸಿದ್ದರಿಂದ ಈ ಗ್ರಂಥಗಳಿಗೆ ಉಪನಿಷತ್ತುಗಳೆಂಬ ಹೆಸರು ಉಂಟಾಯಿತು. ಉಪನಿಷತ್ತುಗಳು ಒಟ್ಟು ೧೦೮ ಇರುವವು. ಅವುಗಳಲ್ಲಿ ಬೃಹದಾರಣ್ಯಕ, ಛಾಂದೋಗ್ಯಗಳು ಬಹು ಪ್ರಾಚೀನ ಕಾಲದವು. ಉಪನಿಷತ್ತುಗಳಲ್ಲಿ ಅನೇಕ ಮನೋವೇಧಕವಾದ ಕಥೆಗಳಿರುವವು. ಅವುಗಳಲ್ಲಿಯ ೨ ಕಥೆಗಳನ್ನು ಮುಂದೆ ಕೊಟ್ಟಿದ್ದೇವೆ.

§ ೨ ಸಂಹಿತೆಗಳು:—ಋಗ್ವೇದ ಸಂಹಿತೆಯ ೧ನೇ ಮತ್ತು ೧೦ ನೇ ಮಂಡಲದಲ್ಲಿ ಅಷ್ಟಷ್ಟೇ ಅಂದರೆ ೧೯೧ ಸೂಕ್ತಗಳಿರುವವು. ೨ ರಿಂದ ೭ ಮಂಡಲಗಳು ಬಹು ಪ್ರಾಚೀನವಾದವುಗಳು. ೪ ನೇ ಮಂಡಲವು ಕಣ್ವ ಋಷಿಯಿಂದ ಪ್ರಣೀತವಾದದ್ದು. ೯ನೇ ಮಂಡಲದಲ್ಲಿ ಪವಮಾನ ಸೋಮಕ್ಕೆ ಉದ್ದೇಶಿಸಿದ ಋಕ್ಕುಗಳಿರುವವು. ೧೦ ನೇ ಮಂಡಲದಲ್ಲಿ ಬೇರೆ ಬೇರೆ ದೇವತೆಗಳ ಸ್ತವನವಲ್ಲದೆ ತತ್ವಜ್ಞಾನದ ಸೂಕ್ತಗಳೂ ಯಂತ್ರ, ಮಂತ್ರ, ಗೃಹ್ಯ ಸಂಸ್ಕಾರಗಳಿಗೆ ಸಂಬಂಧಿಸಿದ ಸೂಕ್ತಗಳೂ ಇರುವವು. ಶುಕ್ಲ ಯಜುರ್ವೇದ ಸಂಹಿತೆಯಲ್ಲಿ ಪದ್ಯವೂ ಗದ್ಯವೂ ಕೂಡಿಯೇ ಒಂದು ಭಾಗವಿದೆ. ಆದಕ್ಕೆ ವಾಜಸನೇಯಿ ಸಂಹಿತೆ ಎನ್ನುವರು. ಬರೀ ಗದ್ಯವಿದ್ದ ಭಾಗಕ್ಕೆ ಶತಪಥಬ್ರಾಹ್ಮಣವೆನ್ನುವರು. ಕೃಷ್ಣಯಜುರ್ವೇದ ಸಂಹಿತೆಯಲ್ಲಿಯೂ ಗದ್ಯಪದ್ಯ

ಗಳೆರಡೂ ಇದ್ದು ತೈತ್ತಿರೀಯ, ಕಾಠಕ, ಮೈತ್ರಾಯಣಿ ಎಂಬ ಮೂರು ಬೇರೆ ಬೇರೆ ಪಾಠಾಂತರಗಳಿರುವವು.

§ ೩ ಬ್ರಾಹ್ಮಣಗಳು:— ಋಗ್ವೇದದ ಬ್ರಾಹ್ಮಣಗಳೆಂದರೆ ಐತರೇಯ ಮತ್ತು ಕೌಶೀತಕೀ ಅಥವಾ ಸಾಂಖ್ಯಾಯನ ಬ್ರಾಹ್ಮಣಗಳು. ಸಾಮವೇದದ ಬ್ರಾಹ್ಮಣಕ್ಕೆ ಪಂಚವಿಂಶವೆನ್ನುವರು. ಅಥರ್ವವೇದದ ಬ್ರಾಹ್ಮಣಕ್ಕೆ ಗೋಪಥ ಬ್ರಾಹ್ಮಣವೆನ್ನುವರು. ಬ್ರಾಹ್ಮಣಗಳಲ್ಲಿ ತತ್ವಜ್ಞಾನಕ್ಕೆ ಸಂಬಂಧಿಸಿದ ಭಾಗಗಳನ್ನು ಜನಸಮ್ಮರ್ದದಿಂದ ದೂರವಾಗಿ ಶಾಂತವಾದ ಅರಣ್ಯದಲ್ಲಿಯೇ ಅಭ್ಯಾಸಿಸಬೇಕಾದ್ದರಿಂದ ಈ ಭಾಗಗಳಿಗೆ ಆರಣ್ಯಕಗಳೆಂಬ ಹೆಸರು ಬಂತು. ಐತರೇಯ, ಕೌಶಿತಕೀ, ತೈತ್ತಿರೀಯ ಆರಣ್ಯಕಗಳು ಆಯಾ ಹೆಸರಿನ ಬ್ರಾಹ್ಮಣಗಳ ಭಾಗಗಳು. ಬ್ರಾಹ್ಮಣಗಳಲ್ಲಿ ಅನೇಕ ಮನೋವೇಧಕವಾದ ಕಥೆಗಳಿರುವವು.

೪. ಶುನಃಶೇಪನಕಥೆ:— ಐತರೇಯ ಬ್ರಾಹ್ಮಣದಲ್ಲಿ ಶುನಃ ಶೇಪನ ಕಥೆಯು ಮನೋರಂಜಕವಾಗಿರುವದು. ಅದು ಹೇಗಂದರೆ— ಹರಿಶ್ಚಂದ್ರ ರಾಜನಿಗೆ ಬಹು ದಿವಸ ಮಕ್ಕಳಾಗಲಿಲ್ಲ. ಆಗ ಅವನು ವರುಣನ ಉಪಾಸನೆಯನ್ನು ಮಾಡಿದನು. ವರುಣನು ಅವನ ಉಪಾಸನೆಗೆ ಮೆಚ್ಚಿ 'ಒಂದು ವರ್ಷದಲ್ಲಿ ಪುತ್ರೋತ್ಸವವಾಗುವದೆಂದೂ ಆ ಪುತ್ರನನ್ನು ತನ್ನ ಪ್ರೀತ್ಯರ್ಥವಾಗಿ ಯಜ್ಞಮಾಡಬೇಕೆಂದೂ' ಹೇಳಿದನು. ಅದಕ್ಕೆ ಹರಿಶ್ಚಂದ್ರನು ಒಪ್ಪಿಕೊಂಡನು. ಮುಂದೆ ಕೆಲವು ಕಾಲದನಂತರ ಹರಿಶ್ಚಂದ್ರನ ಹೆಂಡತಿಯಾದ ತಾರಾಮತಿಯು ಒಬ್ಬ ಮಗನನ್ನು ಪಡೆದಳು. ಆ ಮಗನಿಗೆ ರೋಹಿತನೆಂಬ ಹೆಸರನ್ನಿಟ್ಟರು. ರೋಹಿತನು ದೊಡ್ಡವನಾಗಲು ವರುಣನು ಆತನನ್ನು ತನಗೆ ಅರ್ಪಿಸಬೇಕೆಂದು ಕೇಳಿದನು. ರೋಹಿತನಿಗೆ ಈ ಸಂಗತಿಯು ತಿಳಿಯಲು ಅವನು ಅಂಜಿ ಕಾಡಿಗೆ ಓಡಿ ಹೋದನು. ಇತ್ತ ಹರಿಶ್ಚಂದ್ರನಿಗೆ ಉದರ ರೋಗವಾಯಿತು. ವರುಣನಿಗೆ ಮನುಷ್ಯಬಲಿಯನ್ನು ಕೊಡದೆ ತಂದೆಯ ರೋಗವು ಪರಿಹಾರವಾಗಲಿಕ್ಕಿಲ್ಲೆಂದು ತಿಳಿದು ರೋಹಿತನು ಯಾರನ್ನು ಕೊಡಬೇಕೆಂದು ಹುಡುಕತೊಡಗಿದನು. ಅಜೀಗರ್ತನೆಂಬ ಒಬ್ಬ ಬ್ರಾಹ್ಮಣನು ಬಡತನದಿಂದ ಬಳಲುತ್ತಿರುವದನ್ನು ಕಂಡು ರೋಹಿತನು ಆತನ ಒಬ್ಬ ಮಗನನ್ನು ವರುಣನ ಬಲಿಗೆ ಕೊಂಡುಕೊಳ್ಳಬೇಕೆಂದು ನಿಶ್ಚಯಿಸಿ ನೂರು ಗೋವುಗಳಿಗೆ ನಿನ್ನ ಒಬ್ಬ ಮಗನನ್ನು ಕೊಡು ಎಂದು ಕೇಳಿದನು. ದ್ರವ್ಯದ ಆಶೆಗಾಗಿ ಅಜೀಗರ್ತನು ಒಪ್ಪಿಕೊಂಡನು. ಆದರೆ ಜ್ಯೇಷ್ಠ ಪುತ್ರನಾದ ಶುನಃಪುಚ್ಛನನ್ನು ಕೊಡಲಾರೆನೆಂದು ಹೇಳಿದನು. ಆತನ ಹೆಂಡತಿಯು ಕನಿಷ್ಠ ಪುತ್ರನಾದ ಶುನೋಲಾಂಗೂಲನನ್ನು ನಾನು ಕೊಡುವದಿಲ್ಲೆಂದು ಹೇಳಿದಳು. ನಡುವಿನವನಾದ ಶುನಃಶೇಪನನ್ನು ತಾಯಿ ತಂಡೆಗಳಿಬ್ಬರೂ ನೂರು ಗೋವುಗಳಿಗೆ ಮಾರಿಬಿಟ್ಟರು. ಮುಂದೆ ಶುನಃಶೇಪನನ್ನು ಯಜ್ಞದಲ್ಲಿ ಯೂಪಸ್ತಂಭಕ್ಕೆ ಕಟ್ಟಲಿಕ್ಕೆ ಯಾರೂ ಒಪ್ಪದಿರಲು ಅಜೀಗರ್ತನೇ ಮತ್ತೆ ನೂರು ಗೋವುಗಳನ್ನು ತೆಗೆದುಕೊಂಡು ಮಗನನ್ನು

ಯೂಪಸ್ತಂಭಕ್ಕೆ ಕಟ್ಟಿದನು. ಬಳಿಕ ಶುನಃಶೇಪನನ್ನು ಕೊಲ್ಲುವದಕ್ಕೆ ಯಾರೂ ಒಪ್ಪದಿರಲು ಅಜೀಗರ್ತನು ಮತ್ತೆ ನೂರು ಗೋವುಗಳನ್ನು ತೆಗೆದುಕೊಂಡು ಆ ಕೆಲಸಕ್ಕೂ ಸಿದ್ಧನಾದನು. ಆದರೆ ಶುನಃಶೇಪನು ಇಂದ್ರಾದಿ ದೇವತೆಗಳಿಗೆ ಮರಿಹೊಕ್ಕು ಈ ಸಂಕಟದಿಂದ ಬಿಡುಗಡೆ ಹೊಂದಿದನು.

೫. **ನಚಿಕೇತನ ಕಥೆ**—ಕಠೋಪನಿಷತ್ತಿನಲ್ಲಿದ್ದ ನಚಿಕೇತನ ಕಥೆಯು ಬಹು ಪ್ರಸಿದ್ಧವದೆ. ಉದ್ದಾಲಕನೆಂಬ ಋಷಿಗೆ ನಚಿಕೇತನೆಂಬ ಒಬ್ಬ ಬುದ್ಧಿವಂತನೂ ಸ್ಥೈರ್ಯಶಾಲಿಯೂ ಆದ ಮಗನಿದ್ದನು, ಉದ್ದಾಲಕನು ಒಮ್ಮೆ ಯಜ್ಞ ಮಾಡುತ್ತಿರುವಾಗ ಸರ್ವಸ್ವವನ್ನೂ ಋತ್ವಿಜರಿಗೆ ದಾನ ಮಾಡಿದನು. ತನ್ನನ್ನೂ ದಾನವಾಡುವದರಿಂದ ತಂದೆಗೆ ಹೆಚ್ಚಿನ ಪುಣ್ಯವಾಗುವದೆಂದು ನಂಬಿ ನಚಿಕೇತನು ತಂದೆಗೆ "ತಾತನೇ ನನ್ನನ್ನು ಯಾರಿಗೆ ಕೊಡುವೆ" ಎಂದು ಪದೇ ಪದೇ ಕೇಳ ತೊಡಗಿದನು. ಇದನ್ನು ಕೇಳಿ ಉದ್ದಾಲಕನು ಸಿಟ್ಟಿಗೆದ್ದು ' ನಿನ್ನನ್ನು ಮೃತ್ಯುವಿಗೆ ಕೊಡುವೆನು' ಎಂದು ನಚಿಕೇತನನ್ನು ಗದ್ದರಿಸಿದನು. ಆದರೆ ನಚಿಕೇತನು ಹೆದರದೆ ಯಮನಗರಕ್ಕೆ ಹೋಗಿ ಅಲ್ಲಿ ಮೂರು ದಿವಸ ಊಟವಿಲ್ಲದೆ ಉಪವಾಸವಾಗಿ ಕೂತನು. ಆಗ ಯಮನು ಮನೆಯಲ್ಲಿ ಇದ್ದಿಲ್ಲ. ಅವನು ಬಂದ ನಂತರ ನಚಿಕೇತನನ್ನು ಕಂಡು ಬಹಳ ಸಂತೋಷ ಬಟ್ಟು ನೀ ಕಾದ ವರಗಳನ್ನು ಬೇಡಿಕೋ ಎಂದು ಹೇಳಿದನು. ಆಗ ನಚಿಕೇತನು " ನನಗೂ ನನ್ನ ತಂದೆಗೂ ತಿರುಗಿ ಭೆಟ್ಟಿಯಾಗಬೇಕು. ನಾನು ಮರಣವನ್ನು ಗೆಲ್ಲಬೇಕು. ಮರಣದ ನಂತರ ಆತ್ಮದ ಸ್ಥಿತಿಯು ಏನಾಗುವದೆಂಬದರ ಜ್ಞಾನವನ್ನು ನನಗೆ ಉಪದೇಶಿಸಬೇಕು" ಎಂದು ಮೂರು ವರಗಳನ್ನು ಬೇಡಿಕೊಂಡನು. ಯಮನು ಅದರಂತೆ ಆಗಲೆಂದು ಆಶೀರ್ವದಿಸಿದನು. ಬಳಿಕ ನಚಿಕೇತನು ತಂದೆಯ ಬಳಿಗೆ ಬಂದು ಎಲ್ಲ ವೃತ್ತಾಂತವನ್ನು ಹೇಳಿದನು. ಹೀಗೆ ಅಪರಾವಿದ್ಯೆಯ ಪ್ರತೀತಿಯನ್ನು ಅನುಭವದಿಂದ ದೊರಕಿಸುವ ಬಾಲಕರು ಸಹ ಆ ಕಾಲಕ್ಕೆ ಇದ್ದರೆಂದು ಗೊತ್ತಾಗುವದು. ಈ ಕಾಲಕ್ಕೆ ಯೋಗೀಶ್ವರ ಯಾಜ್ಞವಲ್ಕ್ಯರಂಥ ತೇಜಸ್ವಿಗಳಾದ ಋಷಿಗಳೂ ಗಾರ್ಗಿ, ಮೈತ್ರೇಯಿಯರಂಥ ಪವಿತ್ರ ಮಹಿಳೆಯರೂ ಇದ್ದರು.

೬. **ಸತ್ಯಕಾಮ ಜಾಬಾಲಿಯ ಕಥೆ**:— ಛಾಂದೋಗ್ಯ ಉಪನಿಷತ್ತಿನಲ್ಲಿ ಬಹು ಸುಂದರವಾದ ಸತ್ಯಕಾಮ ಜಾಬಾಲಿಯ ಕಥೆಯಿರುವದು. ಈ ಕಥೆಯಿಂದ ಆ ಕಾಲದಲ್ಲಿ ಜಾತಿನಿರ್ಬಂಧವು ಇದ್ದಿಲ್ಲವೆಂದೂ ಸತ್ಯ ಪ್ರೀತಿಯೂ ಜ್ಞಾನಾಪೇಕ್ಷೆಯೂ ಇದ್ದವರಿಗೆ ಗುರುಗಳಲ್ಲಿ ಆಶ್ರಯವು ದೊರೆಯುತ್ತಿತ್ತೆಂದೂ ಗೊತ್ತಾಗುತ್ತದೆ. ಸತ್ಯಕಾಮನು ತನ್ನ ತಾಯಿಯಾದ ಜಾಬಾಲಿಯ ಬಳಿಗೆ ಹೋಗಿ—"ಅವ್ವಾ ನಾನು ಜ್ಞಾನ ಸಂಪಾದನೆಗಾಗಿ ಗುರುಗಳ ಕಡೆಗೆ ಹೋಗಲಿಚ್ಛಿಸುತ್ತೇನೆ. ಆದುದರಿಂದ ನನ್ನ ಗೋತ್ರವು ಯಾವುದು ಹೇಳು" ಎಂಬದಾಗಿ ಕೇಳಿದನು. ಅದಕ್ಕೆ ಅವಳು—"ಮಗುವೇ ಪ್ರಾಯದಲ್ಲಿ ನಾನು ಹೆರವರ ಮನೆಯಲ್ಲಿ ದಾಸಿಯಾಗಿದ್ದಾಗ ಗರ್ಭತಾಳಿ ನಿನ್ನನ್ನು

ಹೆತ್ತೆನು. ಆದ್ದರಿಂದ ನಿನ್ನ ಗೋತ್ರವು ನನಗೆ ಗೊತ್ತಿಲ್ಲ. ನನ್ನ ಹೆಸರು ಜಾಬಾಲಾ. ನಿನ್ನ ಹೆಸರು ಸತ್ಯಕಾಮ. ಆದದರಿಂದ ನೀನು ಸತ್ಯಕಾಮ ಜಾಬಾಲಿಯೆಂದು ಕರೆಯಲ್ಪಡುತ್ತೀ" ಎಂದು ಹೇಳಿದಳು.

ಬಳಿಕ ಸತ್ಯಕಾಮನು ಗೌತಮನ ಶಿಷ್ಯನಾದ ಹಾರಿದ್ರುಮತನ ಕಡೆಗೆ ಹೋಗಿ— " ಆರ್ಯರೇ ನಾನು ತಮ್ಮಲ್ಲಿ ಬ್ರಹ್ಮಚಾರಿಯಾಗಿ ವಿದ್ಯಾಭ್ಯಾಸ ಮಾಡಲಿಕ್ಕೆಂದು ಬಂದಿರುವೆನು. ನನ್ನನ್ನು ಅನುಗ್ರಹಿಸಬೇಕು " ಎಂದು ಹೇಳಿಕೊಂಡನು. ಆಗ ಆ ಋಷಿಯು " ತಮ್ಮಾ ನಿನ್ನ ಕುಲಗೋತ್ರವು ಏನುದು " ಎಂದು ಕೇಳಿದನು. ಅದಕ್ಕೆ ಸತ್ಯಕಾಮನು ' ಅದನ್ನು ನಾನರಿಯೆನು. ' ಈ ವಿಷಯವಾಗಿ ತಾಯಿಯನ್ನು ಕೇಳಲು ಆಕೆಯು ಹೀಗೆಂದಳು— " ನಾನು ಜನರ ಮನೆಯಲ್ಲಿ ದಾಸಿಯಿದ್ದಾಗ ಗರ್ಭತಾಳಿ ನಿನ್ನನ್ನು ಹೆತ್ತೆನು. ಕುಲಗೋತ್ರವು ನನಗೆ ಗೊತ್ತಿಲ್ಲ;ನನ್ನ ಹೆಸರು ಜಾಬಾಲಾ. ನಿನ್ನ ಹೆಸರು ಸತ್ಯಕಾಮನೆಂದು ಇದ್ದದರಿಂದ ನಿನಗೆ ಸತ್ಯಕಾಮ ಜಾಬಾಲಿಯೆಂದು ಅನ್ನುವರು" ಆದದರಿಂದ ನಾನು ಸತ್ಯಕಾಮ ಜಾಬಾಲಿಯು.

ಆಗ ಹಾರಿದ್ರಮತನು ಮನಸ್ಸಿನಲ್ಲಿ ಅಂದದ್ದೇನಂದರೆ—"ಈತನು ಸತ್ಯವನ್ನು ನುಡಿಯುವದರಿಂದ ನಿಜವಾಗಿ ಬ್ರಾಹ್ಮಣನೇ ಆಗಿರಬೇಕು. ಆದದರಿಂದ ಈತನನ್ನು ನನ್ನಲ್ಲಿ ಬ್ರಹ್ಮಚಾರಿಯಂತೆ ಇಟ್ಟುಕೊಂಡು ವಿದ್ಯಾಭ್ಯಾಸವನ್ನು ಮಾಡಿಸುವೆನು. " ಸತ್ಯಕಾಮನನ್ನು ಕುರಿತು—"ಸತ್ಯಕಾಮನೇ ನೀನು ಸತ್ಯವನ್ನು ಹೇಳಿದ್ದರಿಂದ ನಿನ್ನನ್ನು ಇಟ್ಟುಕೊಂಡು ವಿದ್ಯಾಭ್ಯಾಸವನ್ನು ಮಾಡಿಸುವೆನು. ನೀನು ಇಂಧನವನ್ನು ತೆಗೆದುಕೊಂಡು ಬಾ, ಎಂದು ಹೇಳಿದನು.

ಅದರಂತೆ ಸತ್ಯಕಾಮನು ಗುರುವಿನಿಂದ ಬ್ರಹ್ಮಚರ್ಯದ ದೀಕ್ಷೆಯನ್ನು ಹೊಂದಿ ಆಗಿನ ಕಾಲದ ರೂಢಿಯಂತೆ ಗುರುವಿನ ದನಗಳನ್ನು ಕಾಯಹತ್ತಿದನು. ಹೀಗೆ ಅಡವಿಯಲ್ಲಿ ತಿರುಗಾಡುತ್ತಿರುವಾಗ ಸೃಷ್ಟಿಯಿಂದಲೂ ಮೂಕ ಪ್ರಾಣಿಗಳಿಂದಲೂ ಅನೇಕ ಗಹನವಾದ ತತ್ವಗಳನ್ನು ತಿಳಿದುಕೊಂಡನು. ಸಂಜೆಗೆ ತಿರುಗಿಬಂದು ದನಗಳನ್ನು ಕಟ್ಟಿ ಅಗ್ನಿಗೆ ಇಂಧನವನ್ನು ಹಾಕಿ ಗುರುವಿನ ಹತ್ತರ ಬಂದು ಕುಳಿತನು. ಆಗ ಗುರುಗಳು ಒಂದೊಂದೇ ಪ್ರಶ್ನವನ್ನು ಕೇಳಿ ಚರ್ಚಿಸತೊಡಗಲು ಸತ್ಯಕಾಮನು ಸಂಪೂರ್ಣವಾದ ಸಮರ್ಪಕ ಉತ್ತರಗಳನ್ನು ಹೇಳತೊಡಗಲು ಗುರುವಿಗೆ ಪರಮಾಶ್ಚರ್ಯವಾಯಿತು. ಮತ್ತು ಸತ್ಯಕಾಮನು ತಾನೇ ಸ್ವಪ್ರಯತ್ನದಿಂದ ಗೂಢವಾದ ತತ್ವಗಳನ್ನು ತಿಳಿದುಕೊಂಡನೆಂಬದನ್ನು ನೋಡಿ ಗುರುವಿಗೆ ಬಹಳ ಹರ್ಷವಾಯಿತು.

§ ೭ **ಸಾಮಾಜಿಕಸ್ಥಿತಿ**:—ಈ ಕಾಲದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರನೆಂಬ ನಾಲ್ಕು ಮುಖ್ಯ ಜಾತಿಗಳಲ್ಲದೆ ಉದ್ಯೋಗಭೇದದಿಂದ ಅನೇಕ ಸಣ್ಣ ಸಣ್ಣ ಜಾತಿಗಳುಂಟಾಗಿದ್ದವು. ಮಾಂಸಭಕ್ಷಣವು ಇನ್ನೂ ಸಾಮಾನ್ಯವಾಗಿತ್ತು.

ಗಂಡು ಮಕ್ಕಳು ಹುಟ್ಟಬೇಕೆಂಬ ಅಪೇಕ್ಷೆಯು ಜನರಲ್ಲಿ ವಿಶೇಷವಾಗಿ ಕಂಡು ಬರುತ್ತಿತ್ತು.

ಕೃಷಿಕರ್ಮದಲ್ಲಿ ಜನರು ಪ್ರಗತಿಯನ್ನು ಹೊಂದಿದ್ದರು. ಹೊಲಗಳಿಗೆ ನೀರು ಹಾಯಿಸಿ ಪೈರು ಬೆಳೆಸುತ್ತಿದ್ದರು. ಗೊಬ್ಬರದ ಉಪಯೋಗವು ಜನರಿಗೆ ಗೊತ್ತಿತ್ತು. ಒಮ್ಮೊಮ್ಮೆ ರಂಟೆಗೆ ೬ ಎತ್ತುಗಳನ್ನು ಸಹ ಹೂಡುತ್ತಿದ್ದರು.

ಈ ಕಾಲದ ವೈದ್ಯರಿಗೆ ಶಾರೀರಶಾಸ್ತ್ರದ ಜ್ಞಾನವು ಚೆನ್ನಾಗಿತ್ತು. ಜ್ಯೋತಿಷ ಶಾಸ್ತ್ರದಲ್ಲಿ ಸಹ ಪ್ರಗತಿಯಾಗಿ ವರ್ಷಕ್ಕೆ ೩೬೦ ದಿವಸಗಳೆಂಬದು ಗೊತ್ತಾಗಿತ್ತು. ಅಧಿಕ ಮಾಸವೂ ರೂಢಿಯಲ್ಲಿ ಬಂದಿತ್ತು. ಈ ಕಾಲವು ಕ್ರಿ. ಶ. ಪೂ. ೨೦೦೦ ವರ್ಷಗಳಿಂದ ೧೦೦೦ ವರ್ಷಗಳ ವರೆಗೆ ಇರುವದೆಂದು ತಿಳಿಯುತ್ತದೆ.

§ ೮ **ರಾಜ್ಯಪದ್ಧತಿ:**— ಅರಸರು ಜನರ ಸಮಿತಿ ಮತ್ತು ಸಭೆಗಳ ಅನುಮತಿಯಿಂದಲೇ ರಾಜ್ಯಕಾರಭಾರವನ್ನು ಮಾಡುತ್ತಿದ್ದರು. ಈ ಸಮಿತಿಯ ಅಧಿಕಾರವು ಕ್ರಮೇಣ ಹೆಚ್ಚುತ್ತ ಹೋಗಿ ಅರಸನನ್ನು ಪಟ್ಟದಿಂದ ತಳ್ಳುವ ಅಧಿಕಾರವು ಸಹ ಈ ಸಮಿತಿಗೆ ಉಂಟಾಯಿತು. ಸಮಿತಿಯ ಸಭಾಸದರು ಪ್ರಸಂಗಾನುಸಾರವಾಗಿ ಕೂಡಿ ರಾಜ್ಯ ಕಾರಭಾರದ ಬಗ್ಗೆ ವಾದವಿವಾದ ಮಾಡುತ್ತಿದ್ದರು. ಸಭೆಯೆಂಬದು ಚಿಕ್ಕ ಮಂಡಲವು. ಈ ಮಂಡಲದವರು ನಿಯಮಿತವಾಗಿ ಕಲೆತು ಅರಸನಿಗೆ ಆಲೋಚನೆಯನ್ನು ಹೇಳುತ್ತಿದ್ದರು.

೫ನೇ ಅಧ್ಯಾಯ.

ವೇದಾಂಗಗಳೂ ಸೂತ್ರಗಳೂ

೧. ವೇದದ ಅಂಗಗಳಾದ ಆರು ಶಾಸ್ತ್ರಗಳು ಯಾವವೆಂದರೆ—:(೧) **ಶಿಕ್ಷಾ**:—ವೇದಗಳ ಉಚ್ಚಾರವನ್ನು ಹೇಗೆ ಮಾಡಬೇಕೆಂಬ ಬಗ್ಗೆ ನಿಯಮಗಳನ್ನು ಹೇಳುವ ಶಾಸ್ತ್ರವು. ಸಾಮವೇದದ ಹೊರತಾಗಿ ಉಳಿದ ಮೂರು ವೇದಗಳಿಗೂ ಸಂಬಂಧಿಸಿದ ಉಚ್ಚಾರವನ್ನು ಬೋಧಿಸುವ ಪ್ರಾತಿ ಶಾಖ್ಯಗಳೆಂಬ ಶಿಕ್ಷಾ ಶಾಸ್ತ್ರದ ಗ್ರಂಥಗಳಿರುವವು. (೨) **ಛಂದಸ್**—ಋಗ್ವೇದ ಸಾಮವೇದಗಳಲ್ಲಿಯ ಸೂಕ್ತಗಳ ಛಂದಸ್ಸಿನ ವಿಷಯವಾಗಿ ಆರಣ್ಯಕಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಸೂತ್ರಗಳಲ್ಲಿಯೂ ಸಶಾಸ್ತ್ರವಾದ ವಿವೇಚನವಿರುವದು. ಇದನ್ನು ಪಿಂಗಲಾಚಾರ್ಯನು ರಚಿಸಿದನು. (೩) **ವ್ಯಾಕರಣ**—ಈ ಶಾಸ್ತ್ರದ ಉತ್ಪಾದಕನು ಪಾಣಿನಿಯು. ಈತನು ಗಾಂಧಾರ ದೇಶದವನು. ಬುದ್ಧನಕಾಲಕ್ಕಿಂತಲೂ ಮೊದಲು ಇದ್ದನು. (೪) **ನಿರುಕ್ತ**—ವೇದದೊಳಗಿನ ಶಬ್ದಗಳ ವ್ಯುತ್ಪತ್ತಿಯನ್ನು ಹೇಳುವ ಶಾಸ್ತ್ರವು. ಯಾಸ್ಕನು ಇಂಥ ಒಂದು ನಿರುಕ್ತಕ್ಕೆ ಟೀಕೆಯನ್ನು ಬರೆದದರಿಂದ ಪ್ರಸಿದ್ಧನಾಗಿರುವನು. ಯಾಸ್ಕನು ಪಾಣಿನಿಗಿಂತ ಮೊದಲಿನವನು. (೫) **ಕಲ್ಪ**—ವೈದಿಕ ಕರ್ಮಗಳನ್ನು ಮಾಡುವ ಪ್ರಕಾರಗಳನ್ನು ವಿವರಿಸುವ ಶಾಸ್ತ್ರವು. ಇದನ್ನು ಅಶ್ವಲಾಯನ, ಆಪಸ್ತಂಭ, ಬೋಧಾಯನ ಋಷಿಗಳು ರಚಿಸಿದರು. (೬) **ಜ್ಯೋತಿಷ**—ಗರ್ಗಾಚಾರ್ಯನು ಈ ಶಾಸ್ತ್ರದ ಉತ್ಪಾದಕನು. ಯಜ್ಞಗಳ ಯೋಗ್ಯಕಾಲನನ್ನು ಗೊತ್ತು ಮಾಡುವದಕ್ಕಾಗಿ ಗ್ರಹ–ನಕ್ಷತ್ರಗಳನ್ನು ನಿರೀಕ್ಷಿಸಿ ಗ್ರಂಥಗಳನ್ನು ಬರೆದನು. ಅದೇ ಜ್ಯೋತಿಷ ಶಾಸ್ತ್ರವು.

ಇವಲ್ಲದೆ ನಾಲ್ಕು ಉಪವೇದಗಳಿರುವವು. ಅವು ಯಾವವೆಂದರೆ— (೧) ಆಯುರ್ವೇದ (ವೈದ್ಯಶಾಸ್ತ್ರ). (೨) ಧನುರ್ವೇದ (ಯುದ್ಧವಿದ್ಯೆ). (೩) ಗಂಧರ್ವವೇದ (ಸಂಗೀತಶಾಸ್ತ್ರ). (೪) ಅರ್ಥಶಾಸ್ತ್ರ (ಕಲೆ ಮತ್ತು ಶಿಲ್ಪಶಾಸ್ತ್ರ).

೨ ಸೂತ್ರಗಳು—ಗಹನವಾದ ವಿಚಾರಗಳನ್ನು ಅತಿ ಸಂಕ್ಷಿಪ್ತವಾಗಿ ಅಂದರೆ ನಾಲ್ಕೈದು ಅಕ್ಷರಗಳಿಂದ ಹತ್ತಿಪ್ಪತ್ತು ಅಕ್ಷರಗಳಲ್ಲಿಯೇ ತಿಳಿಸುವ ಅಸಾಧಾರಣ ಪದ್ಧತಿಯು ಈ ಕಾಲದಲ್ಲಿ ರೂಢವಾಯಿತು. ಇಂಥ ಅದ್ಭುತವಾದ ಜ್ಞಾನವನ್ನು ನಮ್ಮ ಪ್ರಾಚೀನ ಋಷಿಗಳು ಪಡೆದಿದ್ದರು. ಈ ಕಾಲದಲ್ಲಿ ಧರ್ಮ, ವೇದಾಂತ, ವ್ಯಾಕರಣ ಮೊದಲಾದ ಶಾಸ್ತ್ರಗಳೆಲ್ಲವೂ ಸೂತ್ರರೂಪವಾಗಿಯೇ ರಚಿಸಲ್ಪಟ್ಟವು. ಈ ಸೂತ್ರಗಳ ಸಮರ್ಪಕ ಅರ್ಥವನ್ನು ಮಾಡುವದು ಸಾಮಾನ್ಯರಿಗೆ ಸಾಧ್ಯವಲ್ಲದ್ದರಿಂದ ಇವುಗಳಿಗೆ ಟೀಕೆಯನ್ನು ಬರೆದ ಟೀಕಾಕಾರರು ಸಹ ಬಹು ಪ್ರಸಿದ್ಧರಾಗಿರುವರು. ಬೇರೆ ಬೇರೆ ಮತಸ್ಥಾಪಕರಾದ ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯರು ಬ್ರಹ್ಮಸೂತ್ರಗಳಿಗೆ ವಿಸ್ತೃತವಾದ ಟೀಕೆಯನ್ನು ಬರೆದುದರಿಂದಲೇ ಅವರಿಗೆ ಆಚಾರ್ಯರೆಂಬ ಗೌರವಾಭಿಧಾನವು ಪ್ರಾಪ್ತವಾಗಿದೆ.

ಕನ್ನಡ ಶಾಲಾಪತ್ರಿಕೆ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬೩ | ಫೆಬ್ರುವರಿ ೧೯೨೭. | ಸಂ. ೧೧.

ಸ್ಫುಟವಿಚಾರವು

೧ ವ್ಹಾಯಿಸರಾಯರ ಭಾಷಣ.

ನೇಕ ನಾಮದಾರ ಲಾರ್ಡ ಆಯರವಿನ್ ದೊರೆಗಳು ಳನೇ ಮಾರ್ಚ ೧೯೨೭ ನೇ ದಿವಸ ದಿಲ್ಲಿಯ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದ ಕಾಲಕ್ಕೆ ಅತಿ ಮಹತ್ವದ ಭಾಷಣವನ್ನು ಮಾಡಿದರು. ಅದರಲ್ಲಿಯ ಮುಖ್ಯಾಂಶಗಳನ್ನು ಕೆಳಗೆ ಕೊಟ್ಟಿದ್ದೇವೆ.

ಎಷ್ಟೋ ಜನರು ವಿಶ್ವವಿದ್ಯಾಲಯದ ಪದವೀಧರರಿಗೆ ದೊರೆಯುತ್ತಿದ್ದ ನೌಕರಿಗಳ ಮೇಲಿಂದ ಅಲ್ಲಿಯ ಶಿಕ್ಷಣದ ಯೋಗ್ಯತೆಯನ್ನು ನಿರ್ಣಯಿಸುತ್ತಿರುವರು. ಬಿಲೆಬಾಳದ ಜ್ಞಾನವು ಮುಣಗುಗಂಟೆಂದೂ ವಿಶ್ವವಿದ್ಯಾಲಯದಲ್ಲಿ ದೊರೆತ ವಿದ್ಯೆಯೂ ಸಂಸ್ಕೃತಿಯೂ ರೂಪಾಯಿ-ಆಣೆ-ಪೈಗಳಿಂದ ಬೆಲೆಗಟ್ಟಬೇಕೆಂದೂ ಅವರ ಅಭಿಪ್ರಾಯವು. ವಿಶ್ವವಿದ್ಯಾಲಯವು ಸರಕಾರೀ ನೌಕರರನ್ನು ಮಾಡುವ ತಿಗರಿಯೆಂಬ ತಿಳುವಳಿಕೆಯು ಹಿಂದುಸ್ತಾನದಲ್ಲಿ ಮಾತ್ರ ಇರುವದು. ಮತ್ತು ಅಂಥ ಉದ್ಯೋಗಗಳು ದೊರೆಯದಿದ್ದರೆ ಅಂಥ ವಿದ್ಯೆಯಿಂದ ಮೋಸಹೋದೆವೆಂದು ಅವರು ನಂಬುತ್ತಾರೆ. ಆದರೆ ಈ ತಿಳುವಳಿಕೆಯು ತಪ್ಪಾದದ್ದೆಂದು ಹೇಳುವದು ಅವಶ್ಯವಿಲ್ಲ.

ಪ್ರಾಚೀನಕಾಲದಲ್ಲಿ ವಿದ್ಯಾರ್ಥಿಗಳು ತಂಡತಂಡಗಳಾಗಿ ಪ್ರಸಿದ್ಧರಾದ ಗುರುಗಳ ಕಡೆಗೆ ಹೋಗಿ ಅಧ್ಯಯನ ಮಾಡುತ್ತಿದ್ದರು. ಆದರೆ ಅಚ್ಚುಹಾಕುವ ಯುಕ್ತಿಯು ಶೋಧವಾದಂದಿನಿಂದ ಈ ಸ್ಥಿತಿಯು ಬದಲಾಗಿದೆ. ಮೊದಲು ಗುರುಕೃಪೆಯಿಂದ ಶಮನವಾಗುತ್ತಿದ್ದ ಜ್ಞಾನತೃಷ್ಣೆಯು ಈಗ ಪುಸ್ತಕಗಳಿಂದಲೂ ಮಾಸಪತ್ರಿಕೆಗಳಿಂದಲೂ ಸಮಾಧಾನವಾಗುತ್ತದೆ.

ಹಿಂದುಸ್ತಾನದಲ್ಲಿಯ ವಿಶ್ವವಿದ್ಯಾಲಯಗಳಲ್ಲಿ, ಜಗತ್ತಿನ ವಿಶ್ವವಿದ್ಯಾಲಯಗಳಲ್ಲಿ ಕಂಡುಬರುತ್ತಿದ್ದ ವ್ಯಕ್ತಿತ್ವವು ಕಂಡುಬರುವದಿಲ್ಲ. ಇಂಗ್ಲಂಡ ಸ್ಕಾಟಲಂಡಗಳಲ್ಲಿ ಒಂದೊಂದು ವಿಶ್ವವಿದ್ಯಾಲಯವು ಒಂದೊಂದು ವಿಷಯದಲ್ಲಿ ಹೆಚ್ಚಿನ ಪ್ರಾವೀಣ್ಯತೆಯನ್ನುಂಟುಮಾಡಿಕೊಡುವದಲ್ಲದೆ ಆ ವಿಷಯದಲ್ಲಿ ಹೊಸ ಶೋಧಕ್ಕನುಕೂಲವಾದ ಪರಿಸ್ಥಿತಿಯನ್ನುಂಟುಮಾಡುವದು. ಇಂಗ್ಲಂಡದ ಉತ್ತರದಲ್ಲಿದ್ದ ವಿ. ವಿ. ಗಳು ಅಲ್ಲಿ ನಡೆಯುತ್ತಿದ್ದ ಔದ್ಯೋಗಿಕ ವ್ಯವಸಾಯಗಳಲ್ಲಿ ಪ್ರಾವೀಣ್ಯತೆಯನ್ನು ಪಡೆಯಲಿಕ್ಕೆ ಸಹಾಯ ಮಾಡುತ್ತಿವೆ. ಬ್ರಿಸ್ಟಲದ ವಿ. ವಿ. ದಲ್ಲಿ ಕೃಷಿಕರ್ಮಕ್ಕೆ ಅವಶ್ಯವಾದ ಶೋಧನಕಾರ್ಯವು ಜರಗುತ್ತಿರುವದು. ಎಡಿನಬರೋದಲ್ಲಿ ವೈದ್ಯಕೀಯ ವಿಷಯದ ಶೋಧವು ನಡೆದಿರುವದು. ಆಕ್ಸಫರ್ಡ ಕೆಂಬ್ರಿಜಗಳಲ್ಲಿ ವಾಙ್ಮಯ, ಗಣಿತ, ವಿಜ್ಞಾನಶಾಸ್ತ್ರಗಳಲ್ಲಿ ಉತ್ತಮವಾದ ಬುದ್ಧಿಕ ಪ್ರಗತಿಯಾಗುತ್ತಿರುವದು.

ಇದರಂತೆಯೇ ಈ ದೇಶದಲ್ಲಿಯಾದರೂ ಇಂಗ್ಲಂಡದಂಥ ಪದ್ಧತಿಯನ್ನು ಅನುಸರಿಸುವದು ಲಾಭದಾಯಕವಾಗಿರುವದು. ಪೌರ್ವಾತ್ಯರಾಷ್ಟ್ರಗಳಿಗೆಲ್ಲ ಮುಂಬೈ ವಿ. ವಿ. ವು ನೇಯುವ ಉದ್ಯೋಗದ ಮೂಲದ್ರವ್ಯಗಳ ಮತ್ತು ಯಂತ್ರಗಳ ವಿಷಯದಲ್ಲಿ ಹೊಸ ಶೋಧನನ್ನು ಮಾಡುವ ಕೇಂದ್ರವಾಗಲಿಕ್ಕೆ ಏನೂ ಅಡ್ಡಿಯಿಲ್ಲ. ಪಾಟಣಾದ ವಿ. ವಿ. ದಲ್ಲಿ ಖನಿಜಶಾಸ್ತ್ರ, ಭೂಗರ್ಭಶಾಸ್ತ್ರ, ಶಿಲ್ಪಶಾಸ್ತ್ರಗಳಲ್ಲಿ ಶೋಧವನ್ನು ಮಾಡಲಿಕ್ಕೆ ತಕ್ಕ ಪರಿಸ್ಥಿತಿಯಿರುವದು. ಬಂಗಾಲವು ವಾಙ್ಮಯ, ಲಲಿತಕಲೆಗಳ ಕೇಂದ್ರವಾಗಬೇಕು. ಹೀಗೆ ಇಡೀ ಹಿಂದುಸ್ತಾನ ದೇಶಕ್ಕೆ ಅವಶ್ಯವಾದ ಜ್ಞಾನವನ್ನು ಪೂರ್ತಿಸುವ ಕಾರ್ಯದಲ್ಲಿ ಬೇರೆ ಬೇರೆ ವಿ. ವಿ. ಗಳು ತಮ್ಮ ವ್ಯಕ್ತಿತ್ವವನ್ನು ಕಾದಿಟ್ಟುಕೊಂಡರೆ ಶ್ರಮವಿಭಾಗದ ತತ್ವವನ್ನು ಪಾಲಿಸಿದಂತಾಗುವದು.

ಈ ವ್ಯವಸ್ಥೆಯಿಂದ ಜ್ಞಾನವೃದ್ಧಿಗೆ ಉತ್ತೇಜನವುಂಟಾಗುವದಲ್ಲದೆ ವಿದ್ಯಾರ್ಥಿಗಳು ತಮ್ಮ ತಮ್ಮ ಇಚ್ಛಿಕ ವಿಷಯಗಳನ್ನು ಅಭ್ಯಾಸಿಸಲಿಕ್ಕೆ ಬೇರೆ ಬೇರೆ ಪ್ರಾಂತಗಳಿಗೆ ಹೋಗಬೇಕಾಗುವದರಿಂದ ರಾಷ್ಟ್ರೀಯತ್ವದ ಭಾವನೆಯು ದೃಢವಾಗುವದು.

೨ ವ್ಯಾಖ್ಯಾನ ಮಾಲೆ.

ಈ ವರ್ಷ ಪ್ರಾರಂಭವಾದ ರೀಟ್ರೇನಿಂಗ ವರ್ಗದ ಶಿಕ್ಷಕರ ಸಲುವಾಗಿ ಶಿಕ್ಷಣಕ್ರಮ ಪ್ರಾ. ಶಿ. ರಿಗೂ ಸಂಬಂಧಿಸಿದ ವಿಷಯಗಳ ಮೇಲೆ ತಜ್ಞರಿಂದ ವ್ಯಾಖ್ಯಾನಗಳನ್ನು ಕೊಡಿಸುವ ವ್ಯವಸ್ಥೆಯಾಗಿ ಒಟ್ಟು ಐದು ವ್ಯಾಖ್ಯಾನಗಳು ಕೊಡಲ್ಪಟ್ಟವು.

ವಿಷಯ	ವ್ಯಾಖ್ಯಾತರು	ತಾರೀಖು
೧ ಮಾಂಟೆಸೋರಿಯ ಶಿಕ್ಷಣಕ್ರಮ	ಶ್ರೀ. ಹನುಮಂತರಾವ ದೇಶಪಾಂಡೆ	೫—೩—೧೯೩೭

೨ ಕನ್ನಡವಾಙ್ಮಯ	,, ಮ. ಪ್ರ. ಪೂಜಾರ	೯—೩—೧೯೨೭
೩ ಡೆನ್ಮಾರ್ಕದಲ್ಲಿಯ ಒಕ್ಕಲ ತನ ಹಾಗು ಸಹಕಾರೀ ಸಂಘಗಳು	,, ಶಿ. ಬಿ. ಹೂಲಿ ಅಸಿ ॥ ರಿಜಿಸ್ಟ್ರಾರ, ದ. ಭಾಗ.	೧೦—೩—೧೯೨೭
೪ ಸಂಖ್ಯೆಯ ಕಲ್ಪನೆ	,, ಟಿ. ಎಮ್. ಪಾಟೀಲ ಪ್ರೊ. ಕರ್ನಾಟಕಕಾಲೇಜ	೧೩—೩—೧೯೨೭
೫ ಸಸ್ಯಗಳ ರೋಗಗಳು	ಮಿ. ಜಿ. ಎಸ್. ಕುಲಕರ್ಣಿ ಕಾಟನ್ನ ರಿಸರ್ಚ ಆಫೀಸರ	೧೪—೩—೧೯೨೭

ಶ್ರೀ. ದೇಶಪಾಂಡೆಯವರು ತಮ್ಮ ವ್ಯಾಖ್ಯಾನದಲ್ಲಿ ಮಾಂಟೆಸೋರಿ ಪದ್ಧತಿಯ ಮಹತ್ವ, ಮಾಂಟೆಸೋರಿಯ ಜೀವನ ಚರಿತ್ರ, ಈ ಪದ್ಧತಿಯ ಇತಿಹಾಸ, ಕಲಿಸುವ ಕ್ರಮ, ಇಂದ್ರಿಯ ಶಿಕ್ಷಣ, ಬೌದ್ಧಿಕ ಶಿಕ್ಷಣ, ಹಸ್ತಶಿಕ್ಷಣ, ಬರಹ, ವಾಚನ, ಗಣಿತ, ವ್ಯವಸಾಯಗಳ ಕ್ರಮ, ಮಾಂಟೆಸೋರಿ ಹಾಗು ಕಿಂಡರಗಾರ್ಟನ್ ಪದ್ಧತಿಗಳಲ್ಲಿ ಇರುವ ಸಾಮ್ಯ ವೈಷಮ್ಯಗಳು ಮತ್ತು ಹಿಂದುಸ್ತಾನದಲ್ಲಿ ಈ ಪದ್ಧತಿಯ ಪ್ರಯೋಗ ಎಂಬ ವಿಚಾರಗಳ ಸವಿಸ್ತಾರವಾದ ವಿವೇಚನವನ್ನು ಮಾಡಿದರು. ಆ ವ್ಯಾಖ್ಯಾನದ ಸಾರವನ್ನು ಮುಂದಿನಸಾರಿ ಕೊಡುವೆವು. ಶ್ರೀ. ಹೂಲಿಯವರ ವ್ಯಾಖ್ಯಾನವನ್ನು ಮುಂದೆ ಕೊಟ್ಟಿದ್ದೇವೆ.

ಸಂಪಾದಕರ ಪ್ರವಾಸ

ಅಹಮ್ಮದಾಬಾದ: —ಬಡೋದೆಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ತಿಂಗಳ ನವಂಬರದ ದಿವಸ ಮುಂಜಾನೆ ೧೧—೨೦ರ ಗಾಡಿಯಿಂದ ಅಹಮ್ಮದಾಬಾದಕ್ಕೆ ಹೊರಟು ೩ ಗಂಟೆಗೆ ಅಲ್ಲಿಗೆ ಮುಟ್ಟಿದೆವು. ಇವೆರಡೂ ಪಟ್ಟಣಗಳ ನಡುವೆ ೬೨ ಮೈಲು ಅಂತರವಿರುವದು. ಅಹಮ್ಮದಾಬಾದದಲ್ಲಿ ಗಿರಣಿಗಳೂ ಧೂಳಿಯೂ ಬಹಳ. ಇಲ್ಲಿಯ ಪ್ರದೇಶವೆಲ್ಲ ಉಸುಬಿನದು. ಮಾರ್ಗಗಳನ್ನು ಮಾಡಲಿಕ್ಕೆ ಕಲ್ಲು, ಮುರಮು ಮೊದಲಾದ ಪದಾರ್ಥಗಳು ಸವಿಪದಲ್ಲಿ ಸಿಗುವದಿಲ್ಲ. ಆದದರಿಂದ ಮಾರ್ಗದ ಮೇಲೆ ಧೂಳಿ ವಿಶೇಷ. ಅಹಮ್ಮದಾಬಾದದ ಜನಸಂಖ್ಯೆಯು ಈಗ ೪ ಲಕ್ಷವದೆ. ಮುಂಬೈ ತರುವಾಯ ನಮ್ಮ ಪ್ರಾಂತದಲ್ಲಿ ಇದೇ ದೊಡ್ಡ ಪಟ್ಟಣವು. ಊರಲ್ಲಿ ಲಂ ನೇಯುವ ಗಿರಣಿಗಳವೆ. ಸಾಬರಮತಿ ನದಿಯು ನಗರದ ಮಧ್ಯದಲ್ಲಿ ಹರಿದಿರುವದು. ಪಾತ್ರವು ದೊಡ್ಡದಿದ್ದರೂ ಆಳವಿಲ್ಲ. ನಾವು ಹೋದಾಗ ಕಾಲುಹೊಳೆಯಾಗಿತ್ತು. ನೀರು ಪಾಚಕ. ಇದೇ ನೀರನ್ನೇ ನಗರಕ್ಕೆ ನಳಗಳಿಂದ ಪೊರೈಸುವರು. ಆದದರಿಂದ ಜನರಿಗೆ ನೀರು ವಿಪುಲವಾಗಿ ದೊರೆಯುವದು. ಇದರಂತೆಯೇ ಗುಜರಾಥದೊಳಗಿನ ಎಲ್ಲ ಚಿಲ್ಲೆಗಳ ಮುಖ್ಯ ಪಟ್ಟಣಗಳಿಗೂ ನದಿಗಳಿರುವದರಿಂದ ನೀರಿನ ಕೊರತೆ ಇಲ್ಲ. ಸಾಬರ

ಮತಿಯ ಮೇಲೆ ಎಲಿಸ ಬ್ರಿಜ್ ಎಂಬ ದೊಡ್ಡ ಪೂಲು ಅದೆ. ಒಂದು ಬದಿಗೆ ಹಳೇ ಊರು ಇರುವದು. ಮತ್ತೊಂದು ಬದಿಗೆ ಗುಜರಾಥ ಕಾಲೇಜ ಮತ್ತು ಶ್ರೀಮಂತರ ಬಂಗಲೆಗಳಿರುವವು. ಸ್ಟೇಶನ್ನಿಗೆ ನಮ್ಮ ಸ್ನೇಹಿತರಾದ ಮಿ. ಚಿನುಭಾಯಿ ಅವರೊನರು ಬಂದಿದ್ದರು. ಇವರು ಅಹಮ್ಮದಾಬಾದದ ಇನಕಮಟ್ಯಾಕ್ಸ ಆಫೀಸರರಿರುವರು. ನಾವು ಅವರ ಕೂಡ ಎಲಿಸ ಬ್ರಿಜ್ಜಿನ ಆಚೆಗಿದ್ದ ಅವರ ಬಂಗಲೆಗೆ ಹೋದೆವು. ಅಹಮ್ಮದಾಬಾದದಲ್ಲಿ ಶಿಗ್ರಾಮು ಎಂಬ ಕುದುರೆಯ ಗಾಡಿಗಳಿರುವವು. ಇವು ನಮ್ಮಲ್ಲಿಯ ಧನುನಿಗಳಂತೆ ಇದ್ದು ಹಗುರಾಗಿರುವವು. ಅವಕ್ಕೆ ಒಂದೇ ಕುದರೆಯನ್ನು ಹೂಡುವರು. ಉಪಹಾರವನ್ನು ತೀರಿಸಿಕೊಂಡು ಪಟ್ಟಣವನ್ನು ನೋಡಲಿಕ್ಕೆ ಹೋಟೆವು. ವಿಜಾಪುರದಂತೆ ಈ ಪಟ್ಟಣದಲ್ಲಾದರೂ ಅಲ್ಲಲ್ಲಿಗೆ ಮಸೀದಿಗಳು ಕಂಡುಬರುತ್ತವೆ.

ಇತಿಹಾಸ:—೧೩೯೧ನೇ ಇಸವಿಯಲ್ಲಿ ಜಾಫರಖಾನನೆಂಬ ಒಬ್ಬ ಸುಭೇದಾರನು ಇಲ್ಲಿ ಆಳುತ್ತಿದ್ದನು. ಅವನು ೧೪೦೧ ರಲ್ಲಿ ದಿಲ್ಲಿಯ ಬಾದಶಹರಿಂದ ಸ್ವತಂತ್ರನಾಗಿ ತನ್ನ ಮಗನನ್ನು ಪಟ್ಟದ ಮೇಲೆ ಕೂಡ್ರಿಸಿದನು. ಆದರೆ ೧೪೦೭ರಲ್ಲಿ ಇವನು ತನ್ನ ಮಗನಿಗೆ ವಿಷಹಾಕಿಸಿ ಕೊಲ್ಲಿಸಿ ಮುಜಫರಶಹಾ ಎಂಬ ಬಿರುದು ಧರಿಸಿ, ತಾನೇ ಪಟ್ಟಕ್ಕೆ ಕೂತನು. ಆದರೆ ಇವನ ಮೊಮ್ಮಗನಾದ ಅಲ್ಪಖಾನನು ತನ್ನ ತಂದೆಯ ಕೊಲೆಯ ಬಗ್ಗೆ ಶೇಡು ತೀರಿಸಿಕೊಳ್ಳುವದಕ್ಕಾಗಿ ಮುಜಫರಶಹನಿಗೆ ವಿಷಹಾಕಿಸಿದನು. ಮತ್ತು ತಾನು ಅಹಮ್ಮದಶಹ ಎಂಬ ಬಿರುದು ಧರಿಸಿ ೧೪೧೧ ರಲ್ಲಿ ಪಟ್ಟಕ್ಕೆ ಕೂತನು. ಇವನು ೩೦ ವರ್ಷ ರಾಜ್ಯಕಾರಭಾರ ಮಾಡಿದನು. ಇವನು ಶೂರನೂ, ಚತುರನೂ, ಧರ್ಮಾಭಿಮಾನಿಯೂ ಇದ್ದನು. ಆದದರಿಂದ ಮಾಳವದ ಸುಲ್ತಾನನನ್ನೂ ರಜಪೂತ ಸ್ಥಾನದ ಅರಸರನ್ನೂ ಗೆದ್ದು ತನ್ನ ರಾಜ್ಯವನ್ನು ವಿಸ್ತಾರಪಡಿಸಿದನು. ಅಸಾವಲ ಎಂಬ ಹಳೇ ಪಟ್ಟಣದ ಸವಿೂಪದಲ್ಲಿಯೇ ಪಟ್ಟಣವನ್ನು ಕಟ್ಟಿಸಿ, ಅದಕ್ಕೆ ಅಹಮ್ಮದಾಬಾದ ಎಂಬ ಹೆಸರಿನ್ನಿಟ್ಟನು. ಇವನು ಬಾಮನಿ ವಂಶದ ಬಾದಶಹನಾದ ಫಿರೋಜ ಸುಲ್ತಾನನ ಸ್ನೇಹಿತನಾಗಿದ್ದನು. ಇವನು ಒಂದು ಯುದ್ಧದಲ್ಲಿಯೂ ಸೋಲಲಿಲ್ಲ.

ಅಗಳಾಡುವ ಗೋಪುರ:—ಇಲ್ಲಿಯ ಊರ ಹೊರಗೆ ಇದ್ದ ಒಂದು ಮಸೀದಿಯ ಮೇಲೆ ಅಗಳಾಡುವ ಗೋಪುರವಿರುವದು. ಮೇಲೆ ಹೋಗಿ ಸ್ವಲ್ಪ ಕುಣಿದರೆ ಗೋಪುರವು ಅಗಳಾಡಿದ್ದು ಗೊತ್ತಾಗುವದು. ಈ ಮಸೀದಿಯು ವಿಜಾಪುರದ ಜುಮ್ಮಾ ಮಸೀದಿಯಷ್ಟು ವಿಶಾಲವಾಗದಿದ್ದರೂ ಕಟ್ಟಡವು ಸುಂದರವಾಗಿದೆ. ಕಮಾನುಗಳನ್ನು ಇಟ್ಟಂಗಿಗಳ ಬದಲು ಕಲ್ಲಿನಿಂದಲೇ ಕಟ್ಟಿರುವರು. ವಿಜಾಪುರದ ಇಮಾರತುಗಳನ್ನು ಸುಸ್ಥಿತಿಯಲ್ಲಿಡಲಿಕ್ಕೆ ಸರಕಾರದವರು ಬಹಳ ಹಣ ವೆಚ್ಚಮಾಡುತ್ತಾರೆ. ಆದರೆ ಇಲ್ಲಿಯ ಇಮಾರತುಗಳಿಗೆ ಸಾಕಷ್ಟು ಲಕ್ಷ್ಯ ಕೊಟ್ಟಂತೆ ಕಂಡು ಬರುವದಿಲ್ಲ.

ಗುಜರಾಥ ಕ್ಲಬ್:—ಊರಲ್ಲಿಯ ವಕೀಲರು, ಕಾಮದಾರರು ಮತ್ತು ಇತರ ಸಭ್ಯಗೃಹಸ್ಥರು ಸಂಜೆಗೆ ವಿಶ್ರಾಂತಿ ತೆಗೆದುಕೊಳ್ಳುವದಕ್ಕಾಗಿ ಈ ಕ್ಲಬಿನ ಯೋಜನೆ

ಇರುವದು. ಈ ಕಟ್ಟಡವು ಬಹು ವಿಶಾಲವಾಗಿದ್ದು ಅಲ್ಲಿ ಉತ್ತಮ ವಾಚನಾಲಯವು ಇರುವದು. ಹಿಂದಕ್ಕೆ ಪ್ರಸಿದ್ಧ ಶಾಸ್ತ್ರಜ್ಞರಾದ ಟಿ. ಕೆ. ಗಜ್ಜರ ಇವರ ಅಣ್ಣನ ಮಗನು ಈ ಕ್ಲಬ್ಬಿನ ಸೆಕ್ರೆಟರಿಯಾಗಿರುವನು. ಇದೇ ಸಮಯಕ್ಕೆ ಅಲ್ಲಿ ನೇಕನಾಮದಾರ ಶಾಸ್ತ್ರಿಯವರಿಗೆ ಮಾನಪತ್ರವನ್ನು ಕೊಡುವ ಸಮಾರಂಭವು ಜರಗುವದಿದ್ದದರಿಂದ ಆ ಸಮಾರಂಭಕ್ಕೆ ನಿಂತು ಹೋಗಬೇಕೆಂದು ಸೆಕ್ರೆಟರಿಯವರು ತಿಳಿಸಿದ್ದರಿಂದ ಅಲ್ಲಿ ಕೆಲವು ಹೊತ್ತು ಕೂತೆವು. ನಾವು ಶಾಸ್ತ್ರಿಯವರು ಆಫ್ರಿಕಾಕ್ಕೆ ಶಿಷ್ಟ ಮಂಡಳದ ಸಭಾ ಸದರಾಗಿ ಹೋಗುವವರಿದ್ದದರಿಂದ ಮಹಾತ್ಮಾ ಗಾಂಧಿಯವರಿಗೆ ಬಿಟ್ಟಿಯೂಗಿ ಅವರ ಅಲೋಚನೆಯನ್ನು ತಿಳಿದುಕೊಳ್ಳಿಕ್ಕೆ ಅಹಮ್ಮದಾಬಾದಕ್ಕೆ ಬಂದಿದ್ದರು. ನಾವು. ಶಾಸ್ತ್ರಿಯವರು ಬೇಸೆಯಿಂದ ಹಣ್ಣಾದಂತೆ ಕಂಡುಬಂದರು. ಆದರೂ ಅವರ ವಾಚಾ ಶಕ್ತಿಯು ಕಡಿಮೆಯಾಗಿರಲಿಲ್ಲ. ಅಹಮ್ಮದಾಬಾದದ ವರ್ತಕ ರಾಜರಾದ ಮಂಗಲದಾಸ ಗಿರಿಧರಲಾಲ ಇವರು ಮಾನಪತ್ರವನ್ನು ಓದಿ ಅದನ್ನು ಬೆಳ್ಳಿಯ ಕರಡಿಗೆಯಲ್ಲಿ ಹಾಕಿ ಶಾಸ್ತ್ರಿಗಳಿಗೆ ಕೊಟ್ಟರು. ಮತ್ತು ಗೋಪಾಲ ಕೃಷ್ಣ ಗೋಖಲೆ ಯವರಿಂದ ಸ್ಥಾಪಿಸ ಲ್ಪಟ್ಟ ಪುಣೆಯ ಸರ್ವಂಟ್ ಆಫ್ ಇಂಡಿಯಾ ಎಂಬ ಸಂಘದ ಸಹಾಯಾರ್ಥವಾಗಿ ೩೦೦೦ ರೂ. ಗಳ ಒಂದು ಚೆಕ್ಕನ್ನು ಕೊಟ್ಟರು. ನಾ. ಶಾಸ್ತ್ರಿಗಳು ಅದನ್ನು ಸ್ವೀಕರಿಸಿ ಅಹಮ್ಮದಾಬಾದದ ನಾಗರಿಕರ ಆಭಾರವನ್ನು ಮನ್ನಿಸಿದರು.

ಸತ್ಯಾಗ್ರಹಾಶ್ರಮ—ಮಹಾತ್ಮಾ ಗಾಂಧಿಯವರ ಈ ಆಶ್ರಮವು ಊರಿಂದ ೩ ಮೈಲುಗಳ ಮೇಲೆ ಸಾಬರಮತಿಯ ದಂಡೆಗೆ ಇರುವದು. ಈ ಆಶ್ರಮವು ರಾಜ ಮಾರ್ಗದ ಎರಡೂ ಬದಿಗೆ ಹಬ್ಬಿರುವದು. ಇದರ ವಿಸ್ತಾರವು ೫೦–೬೦ ಎಕರೆಗಳಾಗ ಬಹುದು. ಅದರಲ್ಲಿ ಹೊಲಗಳೂ, ತೋಟಗಳೂ, ವಿದ್ಯಾರ್ಥಿಗ್ರಹವೂ, ಕಾರ್ಯಾಲಯ ಗಳೂ, ಪುಸ್ತಕಾಲಯವೂ, ಮಹಾತ್ಮರ ಮನೆಯೂ ಇರುವವು. ಆಶ್ರಮದಲ್ಲಿ ೨೫೦ ಜನರಿರುವರು. ನೂಲುವದು, ನೇಯುವದು, ಒಕ್ಕಲತನ, ತೋಟಮಾಡುವದು ಇವೇ ಆಶ್ರಮವಾಸಿಗಳ ಉದ್ಯೋಗಗಳು. ಬೇಕಾದವರು ಈ ಆಶ್ರಮದೊಳಗೆ ಹೋಗಿ ಎಲ್ಲ ಸಂಗತಿಗಳನ್ನು ನೋಡಬಹುದು. ಬಾಗಿಲಿಗೆ ಸಮೀಪವಾಗಿ ಆಶ್ರಮದ ಕಚೇರಿ ಇರುವದು. ಅಲ್ಲಿ ಹೋಗಿ ನಾವು ಸೆಕ್ರೆಟರಿಯವರನ್ನು ಕೇಳಲು ಅವರು ಒಬ್ಬ ಪ್ರೌಢ ವಿದ್ಯಾರ್ಥಿಯನ್ನು ನಮ್ಮ ಸಂಗಡ ಕಳಿಸಿಕೊಟ್ಟರು. ಆತನು ಹಿಂದಿಯಲ್ಲಿ ಎಲ್ಲ ಸಂಗ ತಿಗಳನ್ನು ಹೇಳುತ್ತಿದ್ದನು,

ಮಿಸ್ ಸ್ಲೇಡ:—ಒಳಗೆ ಹೋಗಲು ಮಿಸ್-ಸ್ಲೇಡ ಎಂಬ ಇಂಗ್ಲಿಷ ಯುವ ತಿಯು ಚಾಪೆಹೆಣೆಯುವ ಕೆಲಸವನ್ನು ಮಾಡುತ್ತಿದ್ದಳು. ಈಕೆಯ ತಂದೆಯು ಇಂಗ್ಲಂ ಡದ ನೌಕಾಸೇನೆಯ ಒಬ್ಬ ಸೇನಾಪತಿ (ಆಡ್‌ಮಿರಲ್) ಯಾಗಿರುವನು. ಅರಳೆ ಯನ್ನು ಹಿಂಜಿ ಹೊಡೆದು ಕಸಕಡ್ಡಿಯುವಾಗ ಈ ಪ್ರಕಾರದ ಚಾಪೆಯನ್ನು ಹಾಸಿ

ಅದರಮೇಲೆ ಅರಳಿಯನ್ನು ಹೊಡೆಯುವರು. ಈ ಚಾಪೆಯ ಕಡ್ಡಿಗಳನ್ನು ದೂರ ದೂರ ಕಟ್ಟಿರುವದರಿಂದ ಎತ್ತಿದ ಕೂಡಲೆ ಕಸವು ಕೆಳಗೆ ಬೀಳುವದು. ಅಲ್ಲಿಯೇ ಮಹಾತ್ಮಾ ಗಾಂಧಿಯವರ ಪತ್ನಿ ಕಸ್ತೂರಿಬಾಯಿಯವರು ಚಾಪೆ ಹೆಣೆಯಲಿಕ್ಕೆ ಹೇಳುತ್ತಿದ್ದರು. ಮಿಸ್-ಸ್ಲೇಡ ಇವಳಿಗೆ ಆಶ್ರಮದಲ್ಲಿ ಮೀರಾಬಾಯಿ ಎಂಬ ಅಭಿಧಾನವು ಕೊಡಲ್ಪಟ್ಟಿದೆ. ಮೀರಾಬಾಯಿಯು ತನ್ನ ದೇಶದ ಉಡುಪನ್ನು ಬಿಟ್ಟು ನಮ್ಮಲ್ಲಿಯ ಹೆಂಗಸರಂತೆ ಸೀರೆ ಕುಪ್ಪಸಗಳನ್ನು ಉಡುತ್ತಾಳೆ. ತಾನೇ ಅಡಿಗೆ ಮಾಡಿಕೊಂಡು ಊಟಮಾಡುತ್ತಾಳೆ. ಇದೇ ಕ್ರಮದಿಂದಲೇ ಆಯುಷ್ಯ ವೃದ್ಧಿಯುಂಟಾಗುವದೆಂದೂ ಬುದ್ಧಿ ಸಾಮರ್ಥ್ಯವು ಹೆಚ್ಚಾಗುವದೆಂದೂ ಅವಳ ಅಭಿಪ್ರಾಯವು.

ಮಹಾತ್ಮರ ದರ್ಶನ:—ನಾವು ಹೋದ ದಿವಸವು ಸೋಮವಾರವಿದ್ದದರಿಂದ ಮಹಾತ್ಮಾಜಿಯವರು ಮೌನವನ್ನು ತಾಳಿದ್ದರು. ಮತ್ತು ತಮ್ಮ ವಾರಪತ್ರಗಳಿಗೆ ಬರೆಯುವ ಕೆಲಸದಲ್ಲಿ ತೊಡಗಿದ್ದರು. ಒಂದು ವರ್ಷದ ವಿಶ್ರಾಂತಿಯು ದೊರೆತದ್ದರಿಂದ ಅವರು ತೇಜಃಪುಂಜರಾಗಿಯೂ ಚಟುವಟಿಕೆಯುಳ್ಳವರಾಗಿಯೂ ತೋರಿದರು. ಅವರ ಮನೆಯು ಸಾದಾ ಹಂಚಿನ ಚಪ್ಪರದಂತೆ ಇರುವದು. ಮುಂದೆ ಪಡಸಾಲೆ. ಪಡಸಾಲೆಯ ಒಂದು ಬದಿಗೆ ಮಹಾತ್ಮರು ಕೂಡುವ ಕೋಣೆ ಇರುವದು. ಅಲ್ಲಿಯ ಸಾಮಾನುಗಳೆಲ್ಲ ಹಿಂದೂಪದ್ಧತಿಯವು. ಖುರ್ಚಿ ಮೆಜುಗಳ ಗದ್ದಲವಿಲ್ಲ. ಬರೆಯುವಾಗ ಇಳಿಜಾರಾದ ಡೆಸ್ಕನ್ನು ಇಟ್ಟುಕೊಂಡು ಬರೆಯುವರು.

ನೂಲುವಶಾಲೆ:—ಆಶ್ರಮದಲ್ಲಿ ವಿಶಾಲವಾದ ನೂಲುವ ಅನೇಕ ಪ್ರಕಾರದ ರಾಟಿಗಳೂ ನೇಯುವ ವಿಧವಿಧದ ಮಗ್ಗಗಳೂ ಇರುವವು. ಇಲ್ಲಿ ಅನೇಕ ವಿದ್ಯಾರ್ಥಿಗಳು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದ್ದರು. ಅಲ್ಲಿ ಬಿನುಗಾದ ನೂಲನ್ನು ತೆಗೆಯುವ ರೂಢಿಯು ಎಷ್ಟೋ ಜನರಿಗಿರುವದು. ನೆಯಿದ ಬಟ್ಟೆಗಳಿಗೆ ಬಣ್ಣವನ್ನೂ ಇಲ್ಲಿಯೇ ಕೊಡುವರು. ಅದರ ಕಾರಖಾನೆಯು ಸಹ ಇಲ್ಲಿರುವದು.

ಪುಸ್ತಕ ಸಂಗ್ರಹ:—ಆಶ್ರಮದಲ್ಲಿ ಒಂದು ಉತ್ತಮವಾದ ಪುಸ್ತಕ ಸಂಗ್ರಹವಿರುವದು. ಅದರಲ್ಲಿ ಮರಾಠಿ, ಗುಜರಾಥಿ, ಹಿಂದಿ, ಸಂಸ್ಕೃತ, ಇಂಗ್ಲಿಷ ಗ್ರಂಥಗಳಿರುವವು. ಈ ವಾಚನಾಲಯವು ಒಂದು ದೊಡ್ಡ ನೆಲಮನೆಯಲ್ಲಿರುವದು. ಅಲ್ಲಿ ಹವೆಯೂ ಬೆಳಕೂ ಸಾಕಷ್ಟು ಇರುವದು. ಅದರ ಮೇಲೆ ನೂಲುವದನ್ನು ಕಲಿಸುವ ವರ್ಗವಿರುವದು.

ತೋಟದ ಮಟ್ಟಿ:—ಆಶ್ರಮದೊಳಗಿನ ತೋಟಕ್ಕೆ ನೀರು ಪೂರೈಸಲಿಕ್ಕೆ ಬಾವಿಗೆ ಮಟ್ಟಿ ಹಚ್ಚಿರುವರು. ಈ ಮಟ್ಟಿಯನ್ನು ಮದ್ರಾಸದ ಒಬ್ಬ ರಾಮಚಂದ್ರಮ್ ಎಂಬ ಗ್ರಹಸ್ಥರು ಮಾಡಿರುವರು. ಈ ಮಟ್ಟಿಯಿಂದ ನಮ್ಮಲ್ಲಿಯ ತೊಗಲಿನ ಮಟ್ಟಿಯ ಇಮ್ಮಡಿ ನೀರು ಬರುವದು. ಈ ಮಟ್ಟಿಯು ಕಬ್ಬಿಣದ್ದು. ಅದರ ಸಾವಾ

ಸುಗಳೂ ಕಬ್ಬಿಣವವು. ಜಗ್ಗುವದಕ್ಕೆ ಒಂದು ಕೋಣವು ಸಾಕು. ಬಾರೀ ಹೊಳೆ ಯು ಮೇಲೆ ಕಬ್ಬಿಣದ ರೇಲು ಹಾಕಿ ಮೇಲೆ ೪ ಗಾಲಿಗಳುಳ್ಳ ಒಂದು ದಪ್ಪ ಹಲಿಗೆ ಯನ್ನು ಹಾಕಿರುವರು. ಮಟ್ಟಿಯಲ್ಲಿ ನೀರು ತುಂಬಿದ ಕೂಡಲೆ ಕೋಣವು ಹೋಗಿ ೪ ಹಲಿಗೆಯ ಮೇಲೆ ನಿಲ್ಲುವದು. ಕೋಣದ ಭಾರದಿಂದ ಮಟ್ಟಿಯು ಕೆಳಗೆ ಹೋಗುವದು. ಈ ಮಟ್ಟಿಯ ಬೆಲೆ ೨೦೦ ರೂಪಾಯಿ.

ಸ್ವಚ್ಛತೆ:—ಆಶ್ರಮದಲ್ಲಿ ಸ್ವಚ್ಛತೆಯಬಗ್ಗೆ ಆಸ್ಥಾಪೂರ್ವಕವಾದ ಲಕ್ಷ್ಯವು ಪೂರೈಸಲ್ಪಡುತ್ತದೆ. ಮನೆಗಳನ್ನೂ ಮಾರ್ಗಗಳನ್ನೂ ಉಡುಗುವ ಕೆಲಸವು ಆಶ್ರ ಮವಾಸಿಗಳದು. ಅವರು ಸರತಿಯಂತೆ ಈ ಕೆಲಸವನ್ನು ಮಾಡುವರು. ಮಲದ ಮನೆಯ ವ್ಯವಸ್ಥೆಯನ್ನು ಸಹ ಅವರೇ ಮಾಡಬೇಕಾಗುವದು. ಹೊಲೆಯರು ಅಥವಾ ಭಂಗಿಗಳು ಇಲ್ಲಿ ಬರುವದೇ ಇಲ್ಲ. ಮಲದ ಮನೆಯಲ್ಲಿ ಮಲಕ್ಕೊಂದು ಮೂತ್ರ ಕ್ಕೊಂದು ಹೀಗೆ ಬೇರೆ ಬೇರೆ ಬಕೆಟುಗಳನ್ನು ಹಿಂದು ಮುಂದೆ ಇಡುವರು. ಮಲವಿಸ ರ್ಜನವಾದ ನಂತರ ಎರಡೂ ಬಕೆಗಟುಗಳಲ್ಲಿ ಮಣ್ಣು ಹಾಕುವರು. ಮಣ್ಣಿನ ಬುಟ್ಟಿಯೂ ಮಣ್ಣು ಹಾಕಲಿಕ್ಕೆ ಒಂದು ಅಗಲಾದ ಮುಗುಚುವ ಕೈಯೂ ಇರುವವು. ಪ್ರತಿ ದಿವಸ ಬೆಳಿಗ್ಗೆ ಈ ಬಕೆಟ್ಟುಗಳನ್ನೆಲ್ಲ ಒಯ್ದು ತೋಟದಲ್ಲಿ ತಗ್ಗು ಮಾಡಿ ಮಲ ವನ್ನು ಹಾಕುವರು. ಆದದರಿಂದ ಯಾವ ಪ್ರಕಾರದ ದುರ್ಗಂಧವೂ ಬರುವದಿಲ್ಲ.

ಗುಜರಾಥ ಕಾಲೇಜ:—ಉಚ್ಚ ಶಿಕ್ಷಣವನ್ನು ಕೊಡುವ ಈ ವಿದ್ಯಾಲಯವು ಸಾಬರಮತಿಯ ಆಚೆಗೆ ಇರುವದು. ಇಲ್ಲಿ ಬಿ. ಎ. ಬಿ. ಎಸ್. ಸಿ. ಪರೀಕ್ಷೆಗಳ ಅಭ್ಯಾಸವು ನಡೆಯುವದು. ವಿಶಾಲವಾದ ದೊಡ್ಡ ದೊಡ್ಡ ಕಟ್ಟಡಗಳು ಅನೇಕವಿ ರುವವು. ಅಲ್ಲಿಯ ಪಾರ್ಸೀ ಭಾಷೆಯ ಪ್ರೊಫೆಸರರಾದ ಮಿ. ಶೇಕ ಎಂಬವರು ನಮ್ಮ ಶಿಷ್ಯರಾದ್ದರಿಂದ ಅಲ್ಲಿಯ ಎಲ್ಲ ಪ್ರೊಫೆಸರರ ಪರಿಚಯ ಮಾಡಿಕೊಟ್ಟರು. ಪ್ರೊ. ವಿವಾಟಿಯಾ ಎಂಬವರು ಇಂಗ್ಲಿಷ ಪ್ರೊಫೆಸರರು. ಇವರು ಕೆಲವು ಕಾಲ ಪ್ರಿನ್ಸಿಪಾಲ ರಾಗಿದ್ದರು. ಇವರು ನಮ್ರ ಸ್ವಭಾವದವರಿದ್ದಾರೆ. ಇಲ್ಲಿಯ ಪ್ರಿನ್ಸಿಪಾಲರು ಮಿ. ಗಿಂಡಲೇ ಶಿರಾಸ ಎಂಬ ಅರ್ಥಶಾಸ್ತ್ರಜ್ಞರು. ಇವರು ಹಿಂದಕ್ಕೆ ಮುಂಬೈಯಲ್ಲಿ ಲೇಬರ ಬ್ಯುರೋದ ಡೈರೆಕ್ಟರರಾಗಿದ್ದರು. ಈ ಕಾಲೇಜವನ್ನು ಕಟ್ಟಲಿಕ್ಕೆ ಇಲ್ಲಿಯ ನವಕೋಟ ನಾರಾಯಣರಾದ ಸರ ಚಿನುಭಾಯಿ ಮಾಧವಲಾಲ ಶೇಟರು ೧೪ ಲಕ್ಷ ರೂ. ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ೧೧ ಲಕ್ಷ ಶಾಸ್ತ್ರಾಲಯಕ್ಕೂ, ೧ ಲಕ್ಷ ಸಿಡೆನಹ್ಯಾಮ ಕ್ಲಾರ್ಕ ವಾಚನಾಲಯಕ್ಕೂ, ೨ ಲಕ್ಷ ಜಾರ್ಜಹಾಲ ಎಂಬ ಸಭಾಗೃಹಕ್ಕೂ ಕೊಟ್ಟಿರುವರು.

ಟ್ರೇನಿಂಗಕಾಲೇಜ:—ಈ ಟ್ರೇನಿಂಗಕಾಲೇಜವನ್ನು ಕಟ್ಟಲಿಕ್ಕೆ ಪ್ರೇಮಚಂದ ರಾಯಚಂದ ಎಂಬ ಶ್ರೀಮಂತರು ದುಡ್ಡು ಕೊಟ್ಟಿದ್ದರಿಂದ ಇದಕ್ಕೆ ಅವರ ಹೆಸರನಿಂ ದಲೇ ಕರೆಯುವರು. ಇಲ್ಲಿ ಸದ್ಯಕ್ಕೆ ೨ ಒಂದನೇ ವರ್ಷದ ವರ್ಗಗಳೂ ೧ ಎರಡನೇ

ವರ್ಷದ ವರ್ಗವೂ ಇರುವವು. ಮಿ. ಚೋಕಶಿ ಎಂಬವರು ಹೆಚ್ಚು ಮೂಲ ರಾಗಿದ್ದಾರೆ. ನಮ್ಮಲ್ಲಿಯಂತೆ ಗುಜರಾಥದಲ್ಲಿಯೂ ಟ್ರೇಂಡ ಜನರ ಸಂಖ್ಯೆಯು ಪ್ರಾಥಮಿಕ ಶಾಲೆಗಳಲ್ಲಿ ೧೦೦ಕ್ಕೆ ೫೦ ಕ್ಕಿಂತ ಹೆಚ್ಚಿನೆ. ಆದ್ದರಿಂದ ಈ ಟ್ರೇ. ಕಾ. ದಲ್ಲಿ ೧ನೇ ವರ್ಷದ ವರ್ಗಳನ್ನಿಟ್ಟರೆ ಸಾಕೆಂದು ಮೊದಲು ಗೊತ್ತಾಗಿತ್ತು. ಆದರೆ ಗುಜರಾಥದ ಮುನಿಸಿಪಾಲಿಟಿಗಳೂ ಲೋಕಲ್‌ಬೋರ್ಡುಗಳೂ ವಿದ್ಯಾಖಾತೆಯವರಿಗೆ ಒತ್ತಾಯದ ಆಗ್ರಹ ತೋರಿಸಿದ್ದರಿಂದ ೨ನೇ ವರ್ಷದ ವರ್ಗವು ಇಡಲ್ಪಟ್ಟಿತು. ೨ನೇ ವರ್ಷದ ಟ್ರೇಂಡರಿಗೆ ಕೆಲಸ ಕೊಡುವ ಜವಾಬದಾರಿಯನ್ನು ಅವರೇ ಹೊತ್ತಿರುವರು. ಹೀಗೆ ಅಲ್ಲಿಯ ಮುಖಂಡರಲ್ಲಿ ತಮ್ಮಲ್ಲಿಯ ಸಂಸ್ಥೆಗಳ ಬಗ್ಗೆ ಅಭಿಮಾನವೂ ಪ್ರೇಮವೂ ಕಂಡು ಬರುವವು. ಈ ಕಾಲಕ್ಕೆ ಟ್ರೇ. ಕಾ. ದ ಪರೀಕ್ಷೆಯು ನಡೆದಿತ್ತು. ಮತ್ತು ಶಿಕ್ಷಣ ಪ್ರದರ್ಶನದ ಸಿದ್ಧತೆಯು ಪ್ರಾರಂಭವಾಗಿತ್ತು. ಗುಜರಾಥದ ಜಿಲ್ಲೆಗಳ ಪ್ರಾಥಮಿಕ ಶಿಕ್ಷಣವನ್ನು ಅಲ್ಲಿಯ ಲೋ. ಬೋ. ನವರು ತನ್ನ್ಮ ಕಡೆಗೆ ತೆಗೆದುಕೊಂಡಿಲ್ಲ. ಸರಕಾರದವರು ಮುಂದೆ ಶಿಕ್ಷಣಪ್ರಸಾರದ ಕೆಲಸಕ್ಕೆ ದ್ರವ್ಯಸಹಾಯವಾಡುತ್ತೇವೆಂದು ಆಶ್ವಾಸನ ಕೊಡುವ ಹೊರತು ತಾವು ಪ್ರಾಥಮಿಕ ಶಿಕ್ಷಣವನ್ನು ಕೈಕೊಳ್ಳುವದಿಲ್ಲವೆಂದು ಅಲ್ಲಿಯ ಲೋ. ಬೋ. ನವರ ಅಭಿಪ್ರಾಯವು. ಅಹಮ್ಮದಾಬಾದದ ಡಿ. ಎ. ಇ. ರಾದ ಮಿ ದೇಸಾಯಿ ಎಂಬುವರು ವಿದ್ಯಾರ್ಥಿಗಳ ತೋಂಡೀ ಶಿಕ್ಷಣವನ್ನು ತೆಗೆದುಕೊಳ್ಳುತ್ತಿದ್ದರು. ಅಲ್ಲಿ ಕೆಲಹೊತ್ತು ಪಾಠವನ್ನು ನೋಡಿದ ಮೇಲೆ ಪ್ರಾಕ್ಟಿಸಿಂಗ ಸ್ಕೂಲಿಗೆ ಹೋದೆವು. ಎಲ್ಲ ಶಿಕ್ಷಕರ ಪಾಠಗಳನ್ನು ನೋಡಿದೆವು. ಬರಹದ ಕೆಲಸವು ಚೆನ್ನಾಗಿತ್ತು. ಕೆಳಗಿನ ವರ್ಗಗಳಿಗೆ ಸಹ ವಾಕ್ಯರಚನಾಕ್ರಮದ ಪರಿಚಯ ಮಾಡಿಕೊಡಲಿಕ್ಕೆ ಚಿತ್ರಗಳ ಸಹಾಯದಿಂದ ಅವುಗಳ ಸಂಕ್ಷಿಪ್ತ ವರ್ಣನೆಯನ್ನು ಬರೆಯಿಸುವರು. ಆರಂಭದಲ್ಲಿಯೇ ವಾಕ್ಯಗಳ ವಾಚನವನ್ನು ಕಲಿಸುವ ಪದ್ಧತಿಯನ್ನು ಪ್ರಾರಂಭಿಸಿರುವರು ಅದರ ಒಂದೆರಡು ಪಾಠಗಳನ್ನು ನೋಡಿದೆವು. ಇಲ್ಲಿಯ ಟ್ರೇ. ಕಾ. ದ ವಿದ್ಯಾರ್ಥಿಗಳ ಸಂಖ್ಯೆಯು ೧೧೦ ಇರುವದು. ಪ್ರಾಕ್ಟಿಸಿಂಗ ಸ್ಕೂಲಿನಲ್ಲಿ ೨೦೦ ಇರುವದು. ಇಲ್ಲಿಯ ಶಾಲಾಪತ್ರಕದ ೪೦೦೦ ಪ್ರತಿಗಳು ಖರ್ಚಾಗುತ್ತಿರುವವು. ಇಲ್ಲಿಯ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಮಿ. ವಕೀಲರು ಅದರ ಮುಖ್ಯ ಸಂಪಾದಕರು.

ಟ್ರೇ. ಕಾ. ದ ಇಮಾರತು ನಮ್ಮಲ್ಲಿಯ ವಿದ್ಯಾರ್ಥಿಗಳ ಸಾಯಿಡಿನಂತೆ ಇರುವದು. ನಡುವೆ ಬೈಲು ಪ್ರದೇಶವಿದ್ದು ಮೂರು ಕಡೆಗೆ ಕಟ್ಟಡಗಳಿರುವವು. ಅದರಲ್ಲಿಯೇ ಕಾಲೇಜದ ಮತ್ತು ಪ್ರಾ. ಸ್ಕೂ.ನ ವರ್ಗಗಳನ್ನು ಹಾಕುವರು.

ಡೆನ್ಮಾರ್ಕ್‌ದ ಜನರ ಒಕ್ಕಲತನವೂ ಸಹಕಾರಿತೆಯೂ

(ಮೈ. ಸ. ಬಿ. ಹೂರಿ ಅಸಿ|| ರಜಿಸ್ಟ್ರಾರ ದ. ಭಾಗ ಇವರ ಭಾಷಣದ ಸಾರಾಂಶವು)

ಡೆನ್ಮಾರ್ಕ ದೇಶವು ಯುರೋಪಖಂಡದೊಳಗಿನ ಒಂದು ತೀರ ಚಿಕ್ಕದೇಶವು. ಇದರ ಜನಸಂಖ್ಯೆ ಬರೇ ೩೫ ಲಕ್ಷ; ವಿಸ್ತಾರವು ಸುಮಾರು ನಮ್ಮ ದಕ್ಷಿಣಭಾಗದಷ್ಟು ಆಗಬಹುದು. ಇದು ಉತ್ತರ ಸಮುದ್ರ ಬಾಲ್ಟಿಕ್ ಸಮುದ್ರಗಳ ನಡುವೆ ಒಂದು ಚಿಕ್ಕ ದ್ವೀಪಕಲ್ಪಾಕಾರವಾಗಿದೆ. ದಕ್ಷಿಣದಲ್ಲಿ ಜರ್ಮನಿ, ಎಡಕ್ಕೆ ಬ್ರಿಟಿಶ ದ್ವೀಪಗಳು, ಎಲಕ್ಕೆ ಸ್ಕಾಂಡಿನೇವಿಯಾ ದ್ವೀಪಕಲ್ಪ ಇವು ಈ ಚಿಕ್ಕ ದೇಶವನ್ನು ಸುತ್ತುವರಿದಿರುವವು.

ಮುಖ್ಯ ವಿಷಯವನ್ನು ಹೇಳುವದಕ್ಕಿಂತ ಮುಂಚೆ ಈ ದೇಶದ ಪರಿಸ್ಥಿತಿಯನ್ನು ಕಿಲನುಟ್ಟಿಗೆ ವಿವರಿಸುವದು ಆವಶ್ಯಕವೆನಿಸುವದು. ಈ ದೇಶವು ಶೀತಕಟಿಬಂಧದಲ್ಲಿ ರುವದು. ಬೇಸಿಗೆಯಲ್ಲಿ ೧೮ ತಾಸಿನ ಹಗಲೂ ಚಳಿಗಾಲದಲ್ಲಿ ೧೮ ತಾಸಿನ ರಾತ್ರಿಯೂ ಇರುವವು. ಅಕ್ಟೋಬರದಿಂದ ಎಪ್ರಿಲದವರೆಗೆ ದೇಶದ ಭೂಮಿಯೆಲ್ಲಾ ಬರ್ಫದಿಂದ ಮುಚ್ಚಿ ಹೋಗಿರುವದು. ಭೂಮಿಯು ತೀರ ನಿಸ್ಸಾರವಾದದ್ದು; ಜವುಳು ಪ್ರದೇಶವೇ ವಿಪುಲವಾಗಿದೆ. ನಮ್ಮ ದೇಶದಲ್ಲಿ ನಾವು ನೀರಿಗಾಗಿ ಮಳೆಯ ದಾರಿಯನ್ನು ನೋಡುತ್ತ ಆಕಾಶದಲ್ಲಿ ದೃಷ್ಟಿಯನ್ನಿಟ್ಟಿರುವಂತೆ ಡೆನ್ಮಾರ್ಕದಲ್ಲಿ ಒಕ್ಕಲಿಗರು ನೆಲದೊಳಗಿನ ಜವುಳು (ತೇವು) ಹೇಗೆ ಕಡಿಮೆಮಾಡಬಹುದೆಂಬ ಚಿಂತೆಯಲ್ಲಿ ಅಧೋವದನರಾಗಿರುವರು. ಇಂಥ ಜವುಳು ಪ್ರದೇಶದಲ್ಲಿ ಹಾಂಸೆಯಂಥ ಪದಾರ್ಥವು ಬೆಳೆಯುವದು. ಬೇಸಿಗೆಯಲ್ಲಿ ಆ ನೆಲವನ್ನು ಕಡಿದು ಇಟ್ಟಂಗಿಗಳಂತೆ ಮಾಡಿ ಉರುವಲಕ್ಕಾಗಿ ಉಪಯೋಗಿಸುವರು. ಇಂಥ ಪ್ರತಿಕೂಲವಾದ ಪ್ರಾಕೃತಿಕ ಪರಿಸ್ಥಿತಿಯಿದ್ದರೂ ಜನರು ತಮ್ಮ ಉದ್ಯೋಗಶೀಲತೆ ಸಾಹಸ, ಸುಶಿಕ್ಷಣಗಳ ಯೋಗದಿಂದ ದೇಶವನ್ನು ಸುಸಂಪನ್ನವಾಗಿ ಮಾಡಿರುವರು.

ಪುರಾತನಕಾಲದಲ್ಲಿ ಡೆನ್ಮಾರ್ಕದ ರಾಜನು ಸಾಮ್ರಾಜ್ಯಾಧಿಪತಿಯೆನಿಸಿಕೊಳ್ಳುತ್ತಿದ್ದನು. ಕಾಲಾಂತರದಲ್ಲಿ ಈ ಸಾಮ್ರಾಜ್ಯದ ಬಿಕ್ಕ ಭಾಗಗಳೆಲ್ಲ ಕೈಬಿಟ್ಟು ಹೋಗಿ ಇಂದು ನಾಲ್ಕಾರು ಜಿಲ್ಲೆಗಳಷ್ಟು ದೊಡ್ಡ ಪ್ರದೇಶವು ಮಾತ್ರ ಉಳಿದಿರುವದು.

ನೆಪೋಲಿಯನ್ ಬೋನಾಪಾರ್ಟನು ಹೂಡಿದ ಮಹಾಸಂಗ್ರಾಮದಲ್ಲಿ ಡೆನ್ಮಾರ್ಕವು ಆತನನ್ನು ಅನುಸರಿಸಿತು. ಆ ಮಹಾಯುದ್ಧದ ಪರಿಣಾಮದಲ್ಲಿ ಬ್ರಿಟಿಶರು ಜಯಶಾಲಿಗಳಾಗಿ ಡೆನ್ಮಾರ್ಕಕ್ಕೆ ದೈನ್ಯಾವಸ್ಥೆಯುಂಟಾಗಿತ್ತು. ಮುಂದೆ ಕೆಲ ದಿನಗಳಲ್ಲಿಯೇ ಜರ್ಮನಿಯ (ಪ್ರುಶ್ಯಾ) ಸಂಗಡ ಮತ್ತೊಮ್ಮೆ ಯುದ್ಧವಾಗಿ ಅದರ ಅವಸ್ಥೆಯು ಇನ್ನಷ್ಟು ಹೀನಸ್ಥಿತಿಗೆ ಮುಟ್ಟಿತು. ಸುಮಾರು ೪೦ವರ್ಷಗಳ ಹಿಂಬಿ ಡೆನ್ಮಾರ್ಕದ ದುರ್ಗ

ತಿಯನ್ನು ವರ್ಣಿಸಿ ತೀರುವಂತಿರಲಿಲ್ಲ. ಜನರಿಗೆ ಹೊಟ್ಟೆತುಂಬ ಕೂಳೂ ಮೈತುಂಬ ಬಟ್ಟೆಯೂ ಸಿಗುತ್ತಿದ್ದಿಲ್ಲ. ಅದೇ ಕಾಲಕ್ಕೆ ಆ ದೇಶದಲ್ಲಿ ಒಬ್ಬ ಸತ್ಪುರುಷನು ಆಗಿಹೋದನು. ಅವನು ಇನ್ನು ಮುಂದೆ ನಾವು ನಮ್ಮ ರಾಜ್ಯವನ್ನು ಬೆಳಿಸುವ ಗೋಜಿಗೆ ಹೋಗುವದರಲ್ಲಿ ಏನೂ ಅರ್ಥವಿಲ್ಲ. ಜರ್ಮನಿಯು ಬರ್ಲಿನದಲ್ಲಿ ಕೂತು ತೋಪುಗಳನ್ನು ಹಚ್ಚಿ ನಮ್ಮ ಕೋಪನ ಹೇಗನ(ರಾಜಧಾನಿ)ವನ್ನು ಎರಡೇ ತಾಸುಗಳಲ್ಲಿ ಸುಟ್ಟು ಸೂರೆ ಮಾಡಿ ಬಿಡಬಹುದು. ಅದರಂತೆ ಇಂಗ್ಲಂಡವು ತನ್ನ ಪ್ರಬಲವಾದ ಹಡಗುಪಡೆಯ ಬಲದಿಂದ ನಮ್ಮ ಅಂಗೈಯಗಲದ ದೇಶವನ್ನು "ಉಫ್" ಎಂದು ಊದಿ ಹಾರಿಸಿಬಿಡಬಹುದು. ಆದ್ದರಿಂದ ನಾವು ಉಳಿದಿರುವ ಈ ನಮ್ಮ ಚಿಕ್ಕನಾಡಿನಲ್ಲಿಯೇ ತಕ್ಕ ಸುಧಾರಣೆಗಳನ್ನು ಮಾಡಿಕೊಂಡು ಸುಖದಿಂದ ಕಾಲಕ್ಷೇಪ ಮಾಡುವ ಮಾರ್ಗಗಳನ್ನು ಹುಡುಕಿಕೊಳ್ಳತಕ್ಕದ್ದು, ಎಂದು ಉಪದೇಶ ಮಾಡಿದನು. ಅಂದಿನಿಂದಲೇ ದೇಶದ ಸುಧಾರಣೆಗೆ ಆರಂಭವಾಯಿತು.

ಯಾವದೊಂದು ದೇಶದ ಸುಧಾರಣೆಯಾಗಬೇಕಾದರೆ ಎಲ್ಲಕ್ಕೂ ಮೊದಲು ಅಲ್ಲಿ ಶಿಕ್ಷಣ ಪ್ರಸಾರವಾಗಬೇಕಾಗುವದು. ನಮ್ಮಲ್ಲಿ ಈಗೀಗ ಹಣೆಯಿಕ್ಕಿ ನೋಡುತ್ತಿರುವ ಒತ್ತಾಯದ ಪ್ರಾಥಮಿಕ ಶಿಕ್ಷಣವು ಆ ದೇಶದಲ್ಲಿ ೪೦ ವರ್ಷಗಳ ಹಿಂದೆಯೇ ಪ್ರಚಾರದಲ್ಲಿ ಬಂದಿರುವದು. ಸಾವಿರದಲ್ಲಿ ಒಬ್ಬಿಬ್ಬರು ಅಶಿಕ್ಷಿತರು ಸಿಕ್ಕರೆ ಸಿಗಬಹುದು. ಅವರೂ ತರುಣರಲ್ಲ; ಬಾಲಕರೂ ಅಲ್ಲ; ಕಲಿಸುವದಕ್ಕೂ ಕಲಿಯುವದಕ್ಕೂ ಸಾಧ್ಯವಿಲ್ಲದ ಹಳ್ಳಿಗಳ ಮೂಲೆಗಳಲ್ಲಿರುವ ಮುಪ್ಪಿನ ಮುದುಕರು. ಮಿಕ್ಕವರೆಲ್ಲರೂ ಸಾಕ್ಷರಿಗಳು; ಸುಶಿಕ್ಷಿತರಾದ ನಾಗರಿಕರು. ಬಾಲಕರಿಗೆ ಶಾಲೆಗಳಿರುವಂತೆ ಪ್ರಬುದ್ಧರಿಗೂ ತಕ್ಕ ಶಾಲೆಗಳಿರುವವು. ಹಗಲು ತಮ್ಮ ಉಪಜೀವನವನ್ನು ಸಾಗಿಸಿಕೊಳ್ಳುವದಕ್ಕಾಗಿ ಕೆಲಸಗಳಲ್ಲಿ ತೊಡಗಿದ ಜನರು ರಾತ್ರಿ ಸಾಲೆಗಳಲ್ಲಿ ಓದಲಿಕ್ಕೆ ಹೋಗುವರು. ಊರೂರಿಗೆ ಪೀಪಲ್ಸ ಹಾಯಸ್ಕೂಲುಗಳೆಂಬ ಶಿಕ್ಷಣ ಸಂಸ್ಥೆಗಳಿರುವವು. ಅರ್ಥಶಾಸ್ತ್ರ, ಸಹಕಾರ, ಕೈಗಾರಿಕೆ, ಚಿತ್ರಕಲೆ, ಸಂಗೀತವಿದ್ಯೆ, ಮುಂತಾದ ಉಪಯುಕ್ತ ಹಾಗು ಲಲಿತಕಲಾ ವಿಷಯುಗಳಿಗೆ ಅಲ್ಲಿ ಹೆಚ್ಚು ಮಹತ್ವವಿರುವದು. ಈ ಪೀಪಲ್ಸ ಹಾಯಸ್ಕೂಲುಗಳಿಗೆ ಪ್ರಬುದ್ಧರೂ ಹೋಗುತ್ತಿರುವರು. ಶಿಕ್ಷಣವನ್ನು ಹೊಂದಬೇಕೆಂಬದೇ ಆ ಹಾಯಸ್ಕೂಲಗಳ ವಿದ್ಯಾರ್ಥಿಗಳ ಧ್ಯೇಯವಾಗಿರುವದು. ಆದ್ದರಿಂದ ಅಲ್ಲಿ ಸ್ಕೂಲಗಳಲ್ಲಿ ಪರೀಕ್ಷೆಗಳಿಲ್ಲ. ವಿಸ್ತಾರವಾನದಿಂದ ಕೇವಲ ನಮ್ಮ ದಕ್ಷಿಣಭಾಗದಷ್ಟಿರುವ ಆ ದೇಶದಲ್ಲಿ ನಮ್ಮ ಪುಣೆಯ ಅಗ್ರಿಕಲ್ಚರ ಕಾಲೇಜದಂಥ ೪೩ ಕಾಲೇಜಗಳಿರುವವು ! ಇದೊಂದೇ ಮಾತಿನಿಂದ ಆ ದೇಶದಲ್ಲಿ ಶಿಕ್ಷಣ ಸೌಕರ್ಯಗಳು ಎಷ್ಟು ವಿಪುಲವಾಗಿರುವವೆಂಬದರ ಕಲ್ಪನೆಯಾಗಬಹುದು. ಈ ಕಾಲೇಜುಗಳಲ್ಲಿಯೂ ಪರೀಕ್ಷೆಗಳಿರುವದಿಲ್ಲ.

೨೪ ದಿನಗಳಿಂದ ೩ ತಿಂಗಳು, ೬ ತಿಂಗಳು, ೧ ವರ್ಷ ಹೀಗೆ ಮೂರು ವರ್ಷಗಳವರೆಗಿನ ಅಭ್ಯಾಸ ಕ್ರಮವಿರುವದು. ಅಲ್ಲಿಗೆ ಬರುವ ವಿದ್ಯಾರ್ಥಿಗಳು ತಮಗೆ ಆವ

ಶಕ್ಯವಾದ ವಿಷಯಗಳನ್ನು ಆರಿಸಿಕೊಂಡು ಆವಶ್ಯಕವೆನಿಸುವಷ್ಟು ಕಾಲಾವಧಿಯವ
ರಿಗೆ ಅಲ್ಲಿ ಉಳಿದು ಶಿಕ್ಷಣವನ್ನು ಹೊಂದಿ ತಮ್ಮ ತಮ್ಮ ಉದ್ಯೋಗಕ್ಕೆ ತಿರುಗಿ ಹೋ
ಗುವರು. ಹೆಂಗಸರಿಗೂ ಗಂಡಸರಿಗೂ ಕೂಡಿಯೇ ಶಿಕ್ಷಣ ಸಾಗಿಸುವ ಯೋಜನೆಯೂ
ಬೇರೆ ಬೇರೆಯಾಗಿ ವರ್ಗಗಳನ್ನೂ ಅಭ್ಯಾಸ ಕ್ರಮವನ್ನೂ ಕಲ್ಪಿಸಿ ಅಭ್ಯಾಸ ನಡಿಸುವ
ವ್ಯವಸ್ಥೆಯೂ ಇರುವವು. ಆ ದೇಶದೊಳಗಿನ ಪ್ರತಿಯೊಬ್ಬ ಒಕ್ಕಲಿಗನಿಗೆ ಇಂಥ
ಭೂಮಿಯಲ್ಲಿ ಇಂಥದೇ ಬೆಳೆ ಇಂಥಿಂಥ ಕಾರಣಗಳ ಸಲುವಾಗಿ ಚನ್ನಾಗಿ ಬರುವ
ದೆಂಬದನ್ನು ಶಾಸ್ತ್ರೀಯವಾಗಿ ಹೇಳಲಿಕ್ಕೆ ಬರುತ್ತಿರುವದು. ಯಾವ ಯಾವ ದೇಶಗಳಲ್ಲಿ
ಎಂಥೆಂಥ ಹವೆ ನೀರು ಭೂಮಿ ಇವುಗಳ ಸೌಕರ್ಯದ ಮೂಲಕ ಎಂಥೆಂಥ ಬೆಳೆಗಳು
ಬರುವವು? ಎಲ್ಲಿ ಯಾವ ಸಾಮಾನುಗಳಿಗೆ ಗಿರಾಕಿಗಳಿರುವವು? ಎಲ್ಲಿ ಯಾವ ಸಾಮಾನು
ಅಗ್ಗವಾಗಿ ದೊರೆಯುವದು ? ಎಂಬದನ್ನಾದರೂ ತಟ್ಟನೇ ಹೇಳುವಷ್ಟು ಭೂಗೋಲ
ಜ್ಞಾನ ಅವರಿಗಿರುವದು. ಆದರೆ ನಮ್ಮ ದೇಶದ ಒಕ್ಕಲಿಗರಿಗೆ ತಮ್ಮ ಹಿರಿಯರನ್ನು
ಅನುಸರಿಸುವದರ ಹೊರತಾಗಿ ಏನೂ ಗೊತ್ತಿರುವದಿಲ್ಲ. ನಮ್ಮ ದೇಶದಂತೆ ಈ
ದೇಶದಲ್ಲಿಯೂ ಒಕ್ಕಲತನವೇ ಜನರ ಮುಖ್ಯ ಜೀವನೋಪಾಯವು. ನೂರರಲ್ಲಿ
೬೦ ಜನರು ಒಕ್ಕಲಿಗರು. ಜನರ ಜೀವನ ಕ್ರಮವು ಬಹು ಕಷ್ಟತರವಾಗಿರುವದು.
ನಮ್ಮಲ್ಲಿ ನಾಲ್ಕು ದುಡ್ಡು ಇದ್ದರೆ ಹೇಗಾದರೂ ಒಂದು ದಿನವನ್ನು ಕಳೆಯಬಹುದು;
ದಾರಿಯ ಮೇಲಾದರೂ ಮಲಗಿ ಬೆಳಗು ಮಾಡಬಹುದು. ಆದರೆ ಯುರೋಪ
ದೊಳಗಿನ ದೇಶಗಳಲ್ಲಿ ಆ ಸ್ಥಿತಿಯಿಲ್ಲ. ಇಂಗ್ಲಂಡದಲ್ಲಿ ಒಬ್ಬ ತೀರ ಬಡವನು
ಒಂದು ರಾತ್ರಿಯನ್ನು ಕಳೆಯಬೇಕಾದರೆ ಬರೇ ಮಲಗಿದ ಸ್ಥಳಕ್ಕೆ ನಾಲ್ಕಾಣೆ ಬಾಡಿಗೆ
ಕೊಡಬೇಕಾಗುವದು. ಡೆನ್ಮಾರ್ಕ್‌ದಲ್ಲಿ ಇಷ್ಟಕ್ಕೆ ಏನಿಲ್ಲೆಂದರೂ ೭–೮ ಆಣೆ ಬೀಳು
ವದು. ತೀರ ಕಡಿಮೆಯೆಂದರೆ ೩ ರೂಪಾಯಿಗಳ ಹೊರತು ಒಂದು ದಿನವನ್ನು ಕಳೆ
ಯುವದು ಅಸಾಧ್ಯವಾಗುವದು. ನಮ್ಮ ದೇಶದಲ್ಲಿ ಬೈಲಲ್ಲಿ ಮಲಗಿ ಬೆಳಗು ಮಾಡು
ವಂತೆ ಆದೇಶದಲ್ಲಿ ಯತ್ನಿಸಿದರೆ ರಾತ್ರಿಯನ್ನು ಕಳೆಯುವದರ ಬದಲು ಚಳಿಯಿಂದ
ನೆವೋನಿಯಾ ವಿಕಾರವಾಗಿ ಪ್ರಾಣವನ್ನೇ ಕಳೆದುಕೊಳ್ಳಬೇಕಾಗುವದು. ಇಂಥ
ಮಹಾರ್ಘತೆಯ ಸ್ಥಿತಿಯಿದ್ದರೂ ಅಲ್ಲಿಯ ಎಲ್ಲ ಜನರು ಸುಖದಿಂದ ಕಾಲಕಳೆಯುತ್ತಿ
ರುವದು ನಮಗೆ ಆಶ್ಚರ್ಯದ ವಿಷಯವಾಗಿದೆ. ಆ ದೇಶದಲ್ಲಿ ಭಿಕ್ಷುಕರೇ ಇಲ್ಲವೆಂ
ದರೂ ಸಲ್ಲುವದು. ಭಿಕ್ಷಾವೃತ್ತಿಯು ತೀರ ಪಾಪ ಜೀವನವೆನಿಸುವದು, ನಮ್ಮಲ್ಲಿಯಂತೆ
ಕಾಡಿ ಬೇಡುವ ಕರಟಕ ವೃತ್ತಿಯು ಕಾಯದೆಯಿಂದ ಅಪರಾಧವೆನಿಸುವದು. ಸತ್ವೃ
ತ್ತಿಯಿಂದ ನಡೆದು ದೈವಯೋಗದಿಂದ ದುರವಸ್ಥೆಯನ್ನು ಹೊಂದಿದ ಅನಾಥರಿಗೆ
ಸರಕಾರದ ಅನಾಥಾಲಯದಲ್ಲಿ ಆಶ್ರಯವು ದೊರೆಯುವದು. ಸ್ಥಾನಿಕ ಮುನಿಸಿಪಾಲಟಿ
ಗಳು ಇಂಥ ಅನಾಥಾಲಯಗಳನ್ನು ಸ್ಥಾಪಿಸಿ ಅವರಿಗೆ ಎಲ್ಲ ಬಗೆಯ ಸುಖಸಾಮಗ್ರಿ
ಗಳನ್ನು ಪೂರೈಸಿ ಕೊಡುತ್ತಿರುವವು. ಇಂಥ ಅನಾಥಾಲಯಗಳಲ್ಲಿರುವವರಿಗೂ ಕೂಡ

ಜರ್ಮನಿ ಮುಂತಾದ ದೇಶಗಳಲ್ಲಿ ನಡೆಯುವ ಗಾಯನ ವಾದನಾದಿ ವಿಲಾಸದ ವಿಷಯಗಳನ್ನು ವಾಯರಲೆಸ್‌ದ ಸಹಾಯದಿಂದ ಆಯಾ ಸ್ಥಳಗಳಲ್ಲಿಯೇ ಒದಗಿಸಿಕೊಡುವ ಯೋಜನೆಯಿರುವದೆಂದಮೇಲೆ ಆ ಅನಾಥಾಲಯಗಳೊಳಗಿನ ನಿರಾಶ್ರಿತರ ಸ್ಥಿತಿಯು ಎಷ್ಟು ವಿಧದ ಸೌಕರ್ಯಗಳಿಂದ ಯುಕ್ತವಾಗಿರುವದೆಂಬದನ್ನು ತರ್ಕಿಸಬಹುದು.

ಡೆನ್ಮಾರ್ಕದೇಶದೊಳಗಿನ ಒಕ್ಕಲಿಗರು ಸುಶಿಕ್ಷಿತರಾಗಿರುವರು ; ಸುಶೀಲರಾಗಿರುವರು; ಸಂಪನ್ನರಾಗಿರುವರು; ಯಾವ ವಿಧದ ವಿಲಾಸ ಸಾಮಗ್ರಿಗಳಿಗೂ ಅವರಿಗೆ ಕೊರತೆಯಿರುವದಿಲ್ಲ. ಸುಮಾರು ಮೂರು ಎಕರೆ ಜಮೀನುಳ್ಳ ಒಬ್ಬ ಒಕ್ಕಲಿಗನ ಸ್ಥಿತಿಯು ನಮ್ಮ ದೇಶದೊಳಗಿನ ೩೦೦ ಎಕರೆ ಹೊಲವುಳ್ಳ ಜಮೀನದಾರನಿಗಿಂತಲೂ ಹೆಚ್ಚು ಒಳ್ಳೆಯದಾಗಿರುವದೆಂದು ಹೇಳಬಹುದು. ನಮ್ಮಲ್ಲಿಯು ಒಕ್ಕಲಿಗರಿಗೆ ಹೆಚ್ಚು ಹೆಚ್ಚು ಹೊಲಮನೆಗಳಿದ್ದಂತೆ ಅವುಗಳ ಹಿಂದೆ ಹೆಚ್ಚು ಹೆಚ್ಚು ಭಾರವಾದ ಸಾಲದ ಹೊರೆಯೂ ಇದ್ದೇ ಇರುವದು. ಅಲ್ಲಿಯು ಒಕ್ಕಲಿಗರ ಮನೆಗಳು ಅವರವರ ಹೊಲದ ನಡುವೆಯೇ ಇರುವವು. ಅಲ್ಲಿಯೇ ಅವನು ತನ್ನ ದನಕರುಗಳನ್ನು ಇಟ್ಟುಕೊಂಡು ಹೊಲದ ಕೆಲಸವನ್ನು ಸಾಗಿಸುತ್ತಿರುವನು. ಅವರ ಹೊಲಗಳು ಅಲ್ಲೊಂದು ಇಲ್ಲೊಂದು ಹೀಗೆ ವಿಭಾಗವಾಗಿರುವದಿಲ್ಲ. ಸುಮಾರು ಮೂರು ಎಕರೆ ಜಮೀನಿರುವ ಒಕ್ಕಲಿಗನಿಗೆ ಅಡ್ಡಾಡುವದಕ್ಕೆ ಕುದುರೆಯ ಗಾಡಿಯಿರುವದು. ಇರುವದಕ್ಕೆ ಪ್ರಶಸ್ತವಾದ ಬಂಗಲೆಯಿರುವದು. ಮನೆಯೊಳಗೆ ಒಂದು ಚಿಕ್ಕವಾಚನಾಲಯವಿರುವದು. ನಡುಮನೆಯು ಬೆಲೆಯುಳ್ಳ ಮೇಜು ಕುರ್ಚಿ ಮುಂತಾದ ಉಪಕರಣಗಳಿಂದಲೂ ಸುಂದರವಾದ ಚಿತ್ರಗಳಿಂದಲೂ ಸುಶೋಭಿತವಾಗಿರುವದು. ವಿನೋದಕ್ಕಾಗಿ ೩೦೦–೪೦೦ ರೂ. ಬೆಲೆಬಾಳುವ ಹಾರ್ಮೊನಿಯಮ್ ಮುಂತಾದ ಎಲ್ಲ ವಿಲಾಸದ ಸಾಮಗ್ರಿಗಳಿರುವವು.

ಹಿಂದೆ ಹೇಳಿದಂತೆ ಪ್ರಾಕೃತಿಕ ಪರಿಸ್ಥಿತಿಯು ಪ್ರತಿಕೂಲವಾಗಿದ ರೂ ಡೆನ್ಮಾರ್ಕ ದೇಶದೊಳಗಿನ ಜನರ ಸ್ಥಿತಿಯು ಈ ರೀತಿ ಉತ್ತಮೋತ್ತಮವಾಗಿರುವದಕ್ಕೆ ಕಾರಣಗಳೇನೆಂಬದನ್ನು ಇನ್ನು ಮುಂದೆ ಹೇಳುವ ಸಂಗತಿಗಳಿಂದ ಅರಿತುಕೊಳ್ಳಬಹುದು.

ಒಕ್ಕಲಿಗರ ಸ್ಥಿತಿಯು ಸುಧಾರಿಸುವದಕ್ಕೆ ಸುಶಿಕ್ಷಿತತೆಯ ಜೊತೆಗೆ ಶಾಸ್ತ್ರೀಯ ಜ್ಞಾನವೂ ತಕ್ಕ ಭಾಂಡವಲವೂ ಬೇಕಾಗುವವು. ಮತ್ತು ಒಕ್ಕಲಿಗರು ಹುಟ್ಟಿಸಿದ ಸಾಮಗ್ರಿಗಳನ್ನು ಅದಷ್ಟು ಹೆಚ್ಚು ಬೆಲೆಗೆ ಮಾರಿ ಬಂದದ್ದನ್ನೆಲ್ಲಾ ಅವರೇ ಹೊಂದುತ್ತಿರಬೇಕು. ಮತ್ತು ಒಕ್ಕಲತನಕ್ಕೆ ಬೇಕಾಗುವ ಕುದುರೆ ಗಳೇದಸಾಮಾನು ಮುಂತಾದ ಸಾಮಗ್ರಿಗಳನ್ನು ಅದಷ್ಟು ಕಡಿಮೆ ಬೆಲೆಗೆ ದೊರಕಿಸಿಕೊಳ್ಳಲು ಸಮರ್ಥರಾಗಬೇಕಾಗುವದು. ಈ ವಿಷಯಗಳನ್ನು ಡೆನ್ಮಾರ್ಕದೇಶದಲ್ಲಿ ಯಾವರೀತಿಯಾಗಿ ಪೂರೈಸಿಕೊಳ್ಳುವರೆಂಬದನ್ನು ಕ್ರಮದಿಂದ ವಿವೇಚಿಸುವ.

ನಮ್ಮ ದೇಶದಲ್ಲಿ ಒಕ್ಕಲಿಗರು ಹೊಲದಲ್ಲಿ ಬಿತ್ತಿ ಬೆಳೆಯುವ ಹತ್ತಿ ಧಾನ್ಯಗಳು ಎಣ್ಣೆಯ ಕಾಳುಗಳು ಇವೇ ಅವರ ಮುಖ್ಯ ಉತ್ಪನ್ನಗಳು. ಅವಕ್ಕೆ ಸಂಬಂಧಿಸಿದ ಉಪವಿಷಯಗಳ ಜೋಡಣೆಯು ಅವರಿಗೆ ಎಷ್ಟು ಮಾತ್ರವೂ ಇರುವದಿಲ್ಲ. ಆದರೆ ಡೆನ್ಮಾರ್ಕ್‌ದೇಶದಲ್ಲಿ ಒಕ್ಕಲಿಗರು ಸುಶಿಕ್ಷಿತರೂ ಶಾಸ್ತ್ರೀಯಜ್ಞಾನ ಸಂಪನ್ನರೂ ಆಗಿರುವದರಿಂದ ಅವರು ಈ ಎಲ್ಲ ಉಪವಿಷಯಗಳನ್ನು ಸುವ್ಯವಸ್ಥಿತವಾಗಿ ಸಾಗಿಸಿಕೊಳ್ಳುವರು. ಹೊಲಗಳಲ್ಲಿ ಬಿತ್ತಿ ಬೆಳೆದ ಬೆಳೆಸುಗಳೊಂದೇ ಅವರ ಉತ್ಪನ್ನವಲ್ಲ. ಅವರು ದನಗಳನ್ನೂ ಹಂದಿಗಳನ್ನೂ ಕೋಳಿಗಳನ್ನೂ ಜೇನುಹುಳಗಳನ್ನೂ ಆ ಹೊಲದಲ್ಲಿಯೇ ಸಾಕುವರು. ದನಗಳಿಂದ ಬೆಣ್ಣೆಯೂ ಹಂದಿಗಳಿಂದ ಮಾಂಸವೂ ಕೋಳಿಯಿಂದ ತತ್ತಿಗಳೂ ಜೇನುಹುಳಗಳಿಂದ ತುಪ್ಪವೂ ಅವರಿಗೆ ದೊರೆಯುವವು. ಅವುಗಳನ್ನು ಅವರು ವ್ಯವಸ್ಥಿತರೀತಿಯಿಂದ ಪರದೇಶಗಳಿಗೆ ಕಳುಹಿಸಿ ಹಣಗಳಿಸುವರು.

ಪ್ರತಿಯೊಬ್ಬ ಒಕ್ಕಲಿಗನು ೪।೫ ಆಕಳುಗಳನ್ನು ಸಾಕುವನು. ಅವುಗಳ ಜೋಪಾನವನ್ನು ಶಾಸ್ತ್ರೀಯ ರೀತಿಯಿಂದ ಮಾಡುವದರಿಂದ ಒಂದೊಂದು ಆಕಳು ೨।೩ ಬಕೆಟ್ಟು ಹಾಲು ಹಿಂಡುವದು. ನಾವು ಹಿಂದುಗಳು ೩೩ ಕೋಟಿ ದೇವತೆಗಳು ಆಕಳಿನಲ್ಲಿ ವಾಸಿಸುವವೆಂದು ತಿಳಿದು ಆಕಳವಿಷಯಕ್ಕೆ ಪೂಜ್ಯಬುದ್ಧಿಯುಳ್ಳವರಾದರೂ, ನಮ್ಮಲ್ಲಿರುವ ಆಕಳಗಳು ಬಡಕವಾಗಿದ್ದು ತೀರ ಸ್ವಲ್ಪ ಹಾಲು ಹಿಂಡುತ್ತವೆ. ಡೆನ್ಮಾರ್ಕ್‌ದ ಜನರು ಆಕಳುಗಳು ಪೂಜ್ಯವಾದವೆಂಬ ಭಾವನೆಯನ್ನು ಕೃತಿಯಿಂದ ತೋರಿಸುತ್ತಿರುವರು. ದನಗಳ ಕುಲಪರಂಪರೆಯನ್ನು ನೋಡಿ ಅವುಗಳ ಬೆಲೆಕಟ್ಟುವರು. ಮತ್ತು ಉತ್ತಮವರ್ಗದ ಹೋರಿಯಿಂದಲೇ ಹೊಸ ಪೀಳಿಗೆಯಾಗುವ ವ್ಯವಸ್ಥೆಯನ್ನು ಮಾಡುವರು. ಕಡಿಮೆ ತರದ ಹೋರಿಗಳಿಂದ ಆಕಳು ಗಬ್ಬವಾಗದಂತೆ ಬಹು ಎಚ್ಚರದಿಂದ ನೋಡಿಕೊಳ್ಳುವರು. ಉತ್ತಮವರ್ಗದ ಒಂದೊಂದು ಹೋರಿಯ ಬೆಲೆಯು ೫೦,೦೦೦ ರೂಪಾಯಿಗಳ ವರೆಗೆ ಇರುವದು. ಒಂದೊಂದು ಹಳ್ಳಿಯಲ್ಲಿ ಒಂದೊಂದು ಡೇರಿಸಂಘವಿರುವದು. ಆ ಹಳ್ಳಿಯಲ್ಲಿ ಹಿಂಡುವ ಎಲ್ಲ ದನಗಳ ಹಾಲನ್ನು ಆ ಡೇರಿಯಲ್ಲಿ ಒಯ್ದು ಕೊಡುವರು. ಅಲ್ಲಿ ಯಂತ್ರದ ಸಹಾಯದಿಂದ ಬೆಣ್ಣೆಯನ್ನು ತೆಗೆಯುವರು. ಆ ಬೆಣ್ಣೆಯನ್ನು ಇಂಥ ಹಲವು ಹಳ್ಳಿಗಳ ಕೇಂದ್ರದಲ್ಲಿರುವ ಮತ್ತೊಂದು ಯೂನಿಯನ್ ಸಂಘಕ್ಕೂ ಅಲ್ಲಿಂದ ಮಧ್ಯವರ್ತಿ ಸಂಘಕ್ಕೂ ನಂತರ ಇಂಗ್ಲಂಡ ಮುಂತಾದ ಪರದೇಶದ ಹಳ್ಳಿಗೂ ಕಳುಹಿಸಿ ಅಲ್ಲಿರುವ ಆಯಾ ಸಂಘಗಳ ಶಾಖೆಗಳ ಮುಖಾಂತರವಾಗಿ ಮಾರುವರು. ಇದರಿಂದ ಇಂಗ್ಲಂಡದ ಸಾವುಕಾರನು ತನ್ನ ಕುಟುಂಬಕ್ಕಾಗಿ ಕೊಂಡು ಕೊಂಡ ಬೆಣ್ಣೆಯ ಜೆಲೆಯು ಬಹುದೊಡ್ಡ ಭಾಗವು ನೆಟ್ಟಗೆ ಡೆನ್ಮಾರ್ಕ್‌ದೊಳಗಿನ ಒಕ್ಕಲಿಗನ ಕಿಸೆಗೆಹೋಗಿ ಬೀಳುವದು. ಡೆನ್ಮಾರ್ಕ್‌ದಿಂದ ಇಂಗ್ಲಂಡಕ್ಕೆ ಕಳುಹಿಸುವ ವೆಚ್ಚದ ಸಲುವಾಗಿ ಮಾತ್ರ ಕೆಲವೊಂದು ಭಾಗವು ಹೋಗುವದು. ನಮ್ಮ

ದೇಶದಲ್ಲಿ ಈ ಸ್ಥಿತಿಯಿಲ್ಲ. ಒಕ್ಕಲಿಗನು ಬೆಳೆದ ಬೆಳೆಯ ಬೆಲೆಯಲ್ಲಿ ದೊಡ್ಡ ಭಾಗವು ಒಕ್ಕಲಿಗರ ಬದಲಾಗಿ ನಡುವಿನ ವ್ಯಾಪಾರಿಗಳ ಪಾಲಿಗೆ ಹೋಗಿ ಬಿಡುವದು. ಉದಾ :—ಧಾರವಾಡ ಜಿಲ್ಲೆಯೊಳಗಿನ ಒಂದು ಹಳ್ಳಿಯಲ್ಲಿ ಒಬ್ಬ ಒಕ್ಕಲಿಗನು ಬೆಳೆದ ಹತ್ತಿಯು ಮಾಂಚೆಸ್ಟರದಲ್ಲಿ ಕೆಲವೊಂದು ರಕಮಿಗೆ ಮಾರುವದೆಂದು ತಿಳಿದರೆ ಅದರೊಳಗಿನ ಬಹುದೊಡ್ಡ ಭಾಗವು ಇಂಗ್ಲಂಡ, ಮುಂಬಯಿ, ಹುಬ್ಬಳ್ಳಿಗಳೊಳಗಿನ ಸಾವುಕಾರರು ಹಾಗೂ ಹಳ್ಳಿಗಳೊಳಗಿನ ದಲಾಲರು ಇವರ ಪಾಲಿಗೆ ಹೋಗಿ ಬಿಡುವದು.

ನಮ್ಮ ದೇಶದಲ್ಲಿ ಹುಡುಗರಿಗೆ ಕುಡಿಯಲಿಕ್ಕೆ ಹಾಲು ದೊರಿಯುವದಿಲ್ಲ. ದೊಡ್ಡ ಶಹರಗಳಲ್ಲಿ ಗೌಳಿಗರು ಮೋಸಮಾಡಿ ಬಿಣ್ಣಿ ತೆಗೆದು ಮಿಕ್ಕುಳಿದ ಹಾಲುಗಳನ್ನು ಮಾರುತ್ತಿರುವರು. ಇಂಥ ಹಾಲು ಕೂಡ ಸಾಮಾನ್ಯರಿಗೆ ದುರ್ಮಿಲ ವಾಗಿರುವವು. ಆದರೆ ಡೆನ್ಮಾರ್ಕದಲ್ಲಿ ಇಂಥ ಬಿಣ್ಣಿ ತೆಗೆದ ಹಾಲನ್ನು ಹಂದಿಗಳಿಗೆ ಹಾಕುವರು. ಈ ಹಾಲಿನಿಂದ ಹಂದಿಗಳು ಪುಷ್ಟವಾಗಿ ಬೆಳೆಯುವವು. ಹಂದಿಗಳನ್ನು ಅವುಗಳ ತೂಕದಿಂದ ಬೆಲೆಕಟ್ಟುವರು. ಒಂದು ಹಂದಿಗೆ ಸುಮಾರು ೫ ಪೌಂಡು ಬೆಲೆಬರುವದು. ಡೆನ್ಮಾರ್ಕದ ಒಕ್ಕಲಿಗರು ತಮ್ಮ ಸರಕುಗಳನ್ನು ಎಷ್ಟು ಕುಶಲತೆಯಿಂದ ಮಾರುವರೆಂಬದನ್ನು ಈ ಕೆಳಗೆ ಹೇಳುವ ಸಂಗತಿಯಿಂದ ತಿಳಿಯಬಹುದು. ಅಲ್ಲಿಯ ಒಕ್ಕಲಿಗರಿಗೆ ಎಲ್ಲಿ ಎಂಥ ಸಾಮಾನುಗಳ ಬೇಡಿಕೆಯಿರುವದೆಂಬದರ ಅರಿವು ಚನ್ನಾಗಿ ಇರುವದು. ಒಂದು ಹಂದಿಯನ್ನು ಕೊಯ್ದರೆ ಅದರ ಕಾಲಿನಂಥ ಕನಿಷ್ಠ ಭಾಗದ ಮಾಂಸವನ್ನು ಆಫ್ರಿಕದಂಥ ಬಡದೇಶಕ್ಕೆ ಕಡಿಮೆ ಬೆಲೆಗೆ ಕಳುಹಿಸುವರು. ಧಡದ ಬೆಲೆ ಬಾಳುವ ಮಾಂಸವನ್ನು ಇಂಗ್ಲಂಡದಂಥ ಶ್ರೀಮಂತ ದೇಶಕ್ಕೂ ತಲೆಯ ಕಡೆಯ ಮಧ್ಯಮತರದ ಮಾಂಸವನ್ನು ಜರ್ಮನಿಯಂಥ ಮಧ್ಯಮ ವರ್ಗದ ದೇಶಕ್ಕೂ ಕಳುಹಿಸುವರು. ಒಂದು ಕೋಳಿಯ ತತ್ತಿಯನ್ನು ಪರದೇಶಕ್ಕೆ ಕಳುಹಿಸುವದಾದರೆ ಅದನ್ನು ಮೊದಲು ಶಾಸ್ತ್ರೀಯರೀತಿಯಿಂದ ಪರೀಕ್ಷಿಸಿ ಒಂದು ಪೆಟ್ಟಿಗೆಯಲ್ಲಿ ಹಾಕಿ ಅದರ ಸಂಗಡ ಒಂದು ನಂಬರಿನ ಚೀಟಿಯನ್ನು ಇಟ್ಟು ಅದರಲ್ಲಿ ಈ ತತ್ತಿಯು ಕೆಟ್ಟದಿದ್ದರೆ ಅದರ ಬೆಲೆಯನ್ನು ತಿರುಗಿ ಕೊಡುವೆವೆಂದು ಬರೆದಿರುವರು. ಲಂಡನ್ನದೊಳಗಿನ ಪೇಟೆಯಲ್ಲಿ ಈ ತತ್ತಿಯನ್ನು ಕೊಂಡವನು ಈ ತತ್ತಿಯು ಕೆಟ್ಟಿರುವದೆಂದು ತಿಳಿದುಬಂದು ಅದರ ಸಂಗಡ ಇರುವಚೀಟಿಯನ್ನು ತಿರುಗಿಕಳುಹಿಸಿದರೆ ಡೆನ್ಮಾರ್ಕದೊಳಗಿನ ಯಾವ ಹಳ್ಳಿಯ ಒಕ್ಕಲಿಗನು ಈ ತತ್ತಿಯನ್ನು ಕಳುಹಿಸಿದ್ದನೊ ಅವನು ದಂಡಕ್ಕೆ ಪಾತ್ರನಾಗುವನು. ಮತ್ತು ಆ ತತ್ತಿಯ ಬೆಲೆಯು ತಿರುಗಿ ಲಂಡನ್ನ ದೊಳಗಿನ ಗಿರಾಕಿಗೆ ಮುಟ್ಟಿಸಲ್ಪಡುವರು. ಹೀಗೆ ಭದ್ರನಾದ ಸತ್ಯತೆಯ ಮೇಲೆ ಡೆನ್ಮಾರ್ಕದ ವ್ಯಾಪಾರದ ಕಟ್ಟಡವು ನಿಂತಿರುವದು. ೪೦ ವರ್ಷಗಳಹಿಂದೆ ಇಂಗ್ಲಂಡಕ್ಕೆ ಬೇಕಾಗುವ ಮಾಂಸ, ಬೆಣ್ಣೆ, ತತ್ತಿ ಇವುಗಳನ್ನೆಲ್ಲ ಅಯರ್ಲಂಡವು ಪೂರೈಸುತ್ತಿತ್ತು. ಆದರೆ ಈಗ ಸುವ್ಯವಸ್ಥೆ,

ತ್ಯತೆ, ಸಹಕಾರ ಇವುಗಳ ಸಹಾಯದಿಂದ ಈ ಎಲ್ಲ ವ್ಯಾಪಾರವನ್ನು ಡೆನ್ಮಾರ್ಕ್‌ವು ಕ್ರಮಿಸಿ ಅಯರ್ಲಂಡವನ್ನು ಮೂಲೆ ಗೊತ್ತಿರುವದು.

ನಾವು ಎಂದೂ ಕಾಣದೆ ಇದ್ದ ಒಂದು ವ್ಯವಸಾಯದಿಂದ ಡೇನ ಜನರು ಹಣ ಳಿಸುವರು. ಈ ದೇಶದ ಪೇಟೆಗಳಲ್ಲಿ ಜೇನು ನೊಣಗಳು ಮಾರಲಿಕ್ಕೆ ದೊರೆಯುವವು. ಕೃತ್ರಿಮ ಜೇನು ಹುಟ್ಟುಗಳನ್ನೂ ಮಾರಲಿಕ್ಕೆ ಇಟ್ಟಿರುವರು. ಜನರು ಇವುಗಳನ್ನು ಕೊಂಡು ಕೊಂಡು ಜೇನು ತುಪ್ಪವನ್ನು ಸಂಗ್ರಹಿಸಿ ಅದರಿಂದ ಹಣ ಸಂಪಾದಿಸುವರು. ಚಳಿಗಾಲದಲ್ಲಿ ಈ ಜೇನುನೊಣಗಳು ಸ್ತಬ್ಧ ಸ್ಥಿತಿಯಲ್ಲಿರುವವು. ಬೇಸಿಗೆಯಲ್ಲಿ ತುಪ್ಪವನ್ನು ಕೂಡಿಸುವವು. ಈ ನೊಣಗಳು ಏಳೇಳು ಮೈಲುಗಳ ವರೆಗೆ ಹೋಗಿ ಹಂಚರಿಸಿ ಮಧುವನ್ನು ಸಂಗ್ರಹಿಸಿ ತಿರುಗಿ ತಮ್ಮ ಸ್ಥಳಕ್ಕೆ ಬರುವವು !

ಡೇನ ಜನರು ಉದ್ಯೋಗಶೀಲರಾಗಿದ್ದಂತೆ ನ್ಯಾಯ ಪ್ರಿಯರೂ ಆಗಿರುವರು. ನಾಗರಿಕತೆಯ ಉಚ್ಚಸ್ಥಿತಿಯನ್ನು ಇವರಲ್ಲಿ ನಾವು ಕಾಣಬಹುದು. ಈಗ ನಮ್ಮ ದೇಶದಲ್ಲಿ ದೇಸಾಯಿ, ದೇಶಪಾಂಡೆ, ಗೌಡ, ಕುಲಕರ್ಣಿ ಮುಂತಾದ ವತನದಾರರಿರುವಂತೆಯೇ ಹಿಂದೆ ಡೆನ್ಮಾರ್ಕ್‌ದಲ್ಲಿಯೂ ಇದ್ದರು. ಒಕ್ಕಲಿಗರು ದುಡಿದು ಬಿತ್ತಿ ಬೆಳೆದ ತಮ್ಮ ಶ್ರಮದ ಪ್ರತಿಫಲವನ್ನು ಈ ವತನದಾರರಿಗೆ ಕೊಡಬೇಕಾಗುತ್ತಿತ್ತು. ಇದು ಅನ್ಯಾಯವೆಂದು ತಿಳಿದು ಬಂದದ್ದರಿಂದ ಎಲ್ಲ ಪ್ರಜೆಗಳ ಸಮ್ಮತಿಯಿಂದ ಸರಕಾರದವರು ಗಾಯದೆ ಮಾಡಿ ಈ ವತನದಾರರಿಗೆ ಕೆಲವು ಬಾಂಡುಗಳನ್ನು ಕೊಡುವದನ್ನು ಗೊತ್ತು ಮಾಡಿ ಆ ಹಣದ ಬಡ್ಡಿಯ ಸಲುವಾಗಿ ವರ್ಷಕ್ಕೆ ಇಂತಿಷ್ಟು ಹಣವನ್ನು ಸರಕಾರದವರೇ ಯಜಮಾನರಿಗೆ ಮುಟ್ಟಿಸಿದರೆ ತೀರಿತೆಂದು ನಿರ್ಣಯಿಸಿದರು. ಇದರಿಂದ ಆ ದೇಶದ ವತನದಾರರ ಔದಾರ್ಯವು ಎಷ್ಟೆಂಬದು ವ್ಯಕ್ತವಾಗುವದು. ಮತ್ತು ಇದರಿಂದ ದೇಶದಲ್ಲಿ ಅತಿ ಶ್ರೀಮಂತರೂ ತೀರಬಡವರೂ ಇಲ್ಲದಂತಾಗಿ ದೇಶದ ಸಂಪತ್ತು ಎಲ್ಲ ಪ್ರಜೆಗಳಲ್ಲಿ ಹಂಚಿ ಹೋಗಿ ಎಲ್ಲರೂ ಸುಖಿಗಳಾಗಲಿಕ್ಕೆ ಅನುಕೂಲವಾಯಿತು.

ಈ ದೇಶದಲ್ಲಿ ನಿರುದ್ಯೋಗಿಗಳಿಲ್ಲ. ದುಡಿದು ಜೀವಿಸುವವರು ಕನಿಷ್ಠರೆಂಬ ಭಾವನೆಯು ಈ ಜನರಲ್ಲಿ ಎಷ್ಟು ಮಾತ್ರವೂ ಇರುವದಿಲ್ಲ- ದುಡಿದು ಜೀವಿಸುವವನಿಗೆ ನಾಲ್ಕು ಜನರಲ್ಲಿ ಸರಿಯಾದ ಮನ್ನಣೆಯು ದೊರೆಯುವದು.

ಡೇನ ಜನರ ದಾಯ ವಿಭಾಗಕ್ರಮವು ನಮ್ಮ ದೇಶಕ್ಕಿಂತ ಭಿನ್ನವಾಗಿರುವದು. ಒಬ್ಬ ತಂದೆಗೆ ಇಬ್ಬರು ಹೆಣ್ಣುಮಕ್ಕಳೂ ಇಬ್ಬರು ಗಂಡುಮಕ್ಕಳೂ ಇದ್ದರೆ ಆ ನಾಲ್ಕೂ ಜನರು ತಂದೆಯ ಆಸ್ತಿಗೆ ಸಮಾನ ಹಕ್ಕುದಾರರು. ಆದರೆ ನಮ್ಮ ದೇಶದಲ್ಲಿರುವಂತೆ ಕುಟುಂಬದ ಹೊಲಮನೆಗಳನ್ನು ಇವರು ಹರಿದು ಹಂಚಿಕೊಳ್ಳಲಿಕ್ಕೆ ಬರುವದಿಲ್ಲ. ಹೊಲಮನೆಗಳ ಬೆಲೆ ಕಟ್ಟಿ ಅವರಲ್ಲಿ ಒಕ್ಕಲತನದ ವಿಷಯವಾಗಿ ವಿಶೇಷ ಆಸ್ಥೆಯುಳ್ಳವನಿಗೆ ಅದನ್ನು ಕೊಟ್ಟು ಬಿಡುವರು. ಮತ್ತು ಅವನು ಉಳಿದ ಮೂವರಿಗೆ

ಅವರವರ ಪಾಲಿಗೆ ಬರುವಷ್ಟು ಹಣವನ್ನು ಕೊಡುವನು. ಅವನಲ್ಲಿ ಆ ಕಾಲಕ್ಕೆ ಅಷ್ಟು ಹಣವಿಲ್ಲದಿದ್ದರೆ ಸಹಕಾರೀ ಬ್ಯಾಂಕುಗಳಲ್ಲಿ ಅವನಿಗೆ ಆ ಹಣವು ಸಾಲವಾಗಿ ದೊರೆಯುವದು. ಒಬ್ಬ ಕುಟುಂಬಿಕನು ತನ್ನ ಆಸ್ತಿಯೊಳಗಿನ ಒಂದು ಭಾಗವನ್ನು ಇನ್ನೊಬ್ಬನಿಗೆ ಮಾರಲಿಕ್ಕೆ ಬರುವದಿಲ್ಲ. ಇಡೀ ಹೊಲವನ್ನೂ ಅದಕ್ಕೆ ಸಂಬಂಧಿಸಿದ ಮನೆಯನ್ನೂ ಕೂಡಿಯೇ ಮಾರಲಿಕ್ಕೆ ಕೊಡಬೇಕಾಗುವದು.

ದೇನ್ಮಾರ್ಕದೊಳಗಿನ ಸಹಕಾರೀ ಬ್ಯಾಂಕುಗಳು ಅತ್ಯುತ್ತಮ ಸ್ಥಿತಿಯಲ್ಲಿರುವವು. ಇಷ್ಟು ಸಣ್ಣ ದೇಶದಲ್ಲಿ ೪–೫ ಕೋಟಿ ರೂಪಾಯಿಯ ವ್ಯವಹಾರ ಮಾಡುವ ೧೩ ಬ್ಯಾಂಕುಗಳಿರುವವು. ಒಕ್ಕಲತನದಲ್ಲಿ ಮನಸ್ಸು ಹಾಕಿ ಸಾಕಷ್ಟು ಶಾಸ್ತ್ರಜ್ಞಾನವನ್ನು ಪಡೆದವನೂ ಸಜ್ಜನನೂ ಎಂಬ ಸರ್ಟಿಫಿಕೇಟುಳ್ಳ ಮನುಷ್ಯನಿಗೆ ಹೊಲಮನೆಗಳನ್ನು ಕೊಂಡುಕೊಳ್ಳುವದಕ್ಕೆ ಬೇಕಾಗುವ ಎಲ್ಲ ಹಣವನ್ನು ಸಹಕಾರಿ ಬ್ಯಾಂಕುಗಳು ಜಾಮೀನಿನ ಅವಶ್ಯಕತೆಯಿಲ್ಲದೆ ಕೊಡುವವು ಈ ಬ್ಯಾಂಕುಗಳಿಗೆ ಅವನು ಕೊಂಡುಕೊಳ್ಳುವ ಹೊಲಮನೆಗಳನ್ನು ಒತ್ತಿ ಬರೆದು ಕೊಡಬೇಕಾಗುವದು. ಬಡ್ಡಿಯ ದರವು ತೀರ ಕಡಿಮೆ ಯಿರುವದು. ಅಂದರೆ ನೂರಕ್ಕೆ ವರ್ಷಕ್ಕೆ ೩–೪ ರೂ. ಮಾತ್ರ ಇರುವದು. ಮತ್ತು ಸಾಲವು ೫೦–೬೦ ವರ್ಷಗಳ ಅವಧಿಯದಿರುವದು. ಇದರಿಂದ ಒಕ್ಕಲಿಗರಿಗೆ ಬೇಕಾದ ಭಾಂಡವಲವು ನಿರಾಯಾಸವಾಗಿ ದೊರೆಯುವದು. ಹೊಲದ ಕೆಲಸಗಳಿಗೆ ಬೇಕಾಗುವ ಕುದುರೆಗಳನ್ನೂ ಒಕ್ಕಲತನದ ಉಪಕರಣಗಳನ್ನೂ ಕೊಂಡುಕೊಳ್ಳುವದಕ್ಕೆ ಸಹಕಾರೀ ಬ್ಯಾಂಕುಗಳು ಹಣ ಪೂರ್ತಿಸುವವು. ಕುದರೆಯ ಲಾಯಿಫ ಇನ್‌ಶುರೆ ಮಾಡಿ ಆ ಸರ್ಟಿಫಿಕೇಟನ್ನು ಹಾಜರ ಮಾಡಿದರೆ ತೀರಿತು ಸಾಲವು ದೊರೆಯುವದು.

ಈ ಪ್ರಕಾರ ವಿದ್ಯಾಪ್ರಸಾರವಾಗಿ, ಸಾಕಷ್ಟು ಭಾಂಡವಲವು ದೊರೆದು, ಒಕ್ಕಲಿಗರು ಬೆಳಿಸುವ ಬೆಳೆಗಳಿಗೆ ಯೋಗ್ಯ ಬೆಲೆಯು ದೊರೆಯುವದಲ್ಲದೆ ಅವರಿಗೆ ಬೇಕಾಗುವ ಮಿಕ್ಕ ಸಾಮಾಗ್ರಿಗಳನ್ನು ಯೋಗ್ಯ ಬೆಲೆಗೆ ದೊರಕಿಸಿ ಕೊಡುವ ಕಾರ್ಯವನ್ನು ಕೂಡ ಸಹಕಾರೀ ಸಂಘಗಳು ಮಾಡುತ್ತಿರುವವು. ತಮ್ಮ ದೇಶಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸಹಕಾರೀ ಸಂಘಗಳ ಮುಖಾಂತರವಾಗಿ ಹಡಗುಗಳಲ್ಲಿ ತುಂಬಿ ತರಿಸಿಕೊಂಡು ಆ ಸಂಘಗಳ ಶಾಖೆಗಳ ಮೂಲಕ ಚಿಕ್ಕಪುಟ್ಟ ಹಳ್ಳಿಗಳಿಗೂ ಬೇರೆ ಬೇರೆ ಒಕ್ಕಲಿಗರಿಗೂ ಯೋಗ್ಯ ಬೆಲೆಗೆ ಮುಟ್ಟಿಸುವ ಯೋಜನೆಯಿರುವದು. ಈ ದೇಶದಲ್ಲಿ ಹಣದ ವ್ಯವಹಾರದ ಸಂಘಗಳೂ ಸಾಮಾನುಗಳನ್ನು ಕೊಡುಕೊಳ್ಳುವ ಸಂಘಗಳೂ ಇರುವಂತೆ ಜನರ ನಿತ್ಯದ ಜೀವನಕ್ರಮಕ್ಕೆ ಆವಶ್ಯಕವಾಗಿರುವ ಉದ್ಯೋಗ ಮಾಡುವ ಜನರ ಸಂಘಗಳೂ ಇರುವವು. ಉದಾ:–ಹಜಾಮರ ಸಂಘ, ಅಗಸರ ಸಂಘ, ಇತ್ಯಾದಿ. ನಾಟಕ ಗೃಹಗಳು ಸಿನಿಮಾ ಥಿಯೇಟರುಗಳು ಮುಂತಾದವು ಕೂಡ ಸಹಕಾರೀ ತತ್ವವನ್ನು ಅನುಸರಿಸಿ ನಡೆಸಲ್ಪಡುವವು.

ಡೆನ್ಮಾರ್ಕ್‌ದೇಶವು ಒಕ್ಕಲಿಗರ ದೇಶವಾಗಿರುವದರಿಂದ ಅಲ್ಲಿಯ ಸರಕಾರದಲ್ಲಿ ಒಕ್ಕಲಿಗರೇ ಪ್ರಾಮುಖ್ಯವಾದ ಅಂಗವಾಗಿರುವರು. ಅವರು ತಮಗೆ ಅನುಕೂಲವಾದ ಕಾಯದೆಗಳನ್ನು ಆಗಾಗ ಅಮಲಿನಲ್ಲಿ ತರುತ್ತಿರುವರು. ಕೋಪನ ಹೇಗನದಿಂದ ಇಂಗ್ಲಂಡಕ್ಕೆ ಹನ್ನೆರಡು ತಾಸಿನಲ್ಲಿ ಸರಕನ್ನು ಒಯ್ದು ಮುಟ್ಟಿಸುವ ಹಾಗು ತಿರುಗಿ ತರುವ ಯೋಜನೆಯಿರುವದು. ರೇಲ್ವೆ ಕಂಪನಿಗಳ ಶೇಅರುದಾರರಿಗೆ ೧೦೦ಕ್ಕೆ ೨ ರಂತೆ ಮಾತ್ರ ಲಾಭವು ಹಂಚಲ್ಪಡುವದು. ಮಿಕ್ಕ ಹಣವೆಲ್ಲ ಪ್ರಜಾಹಿತಕ್ಕೆ ಹಾಕಲ್ಪಡುವದರಿಂದ ತೀರಸ್ವಲ್ಪ ಬಾಡಿಗೆಯನ್ನು ಕೊಟ್ಟು ಸರಕುಗಳನ್ನು ಕಳುಹಿಸಲಿಕ್ಕೂ ತರಿಸಲಿಕ್ಕೂ ಅನುಕೂಲವಾಗಿರುವದು. ಸರಕಾರಕ್ಕೆ ದಂಡಿನ ವೆಚ್ಚವು ತೀರ ಕಡಿಮೆ ಇರುವದು. ಡೇನ ಜನರು ಶಾಂತತಾ ಪ್ರಿಯರು. ಅವರಿಗೆ ಯುದ್ಧದಲ್ಲಿ ಎಷ್ಟೂ ಆದರವಿಲ್ಲ. ಅದರಿಂದ ಅವರು ತಮ್ಮ ದೇಶದ ದಂಡನ್ನು ದಿನದಿನಕ್ಕೆ ಕಡಿಮೆಮಾಡುತ್ತಾ ಬಂದಿರುವರು. ಮೊನ್ನಿನ ಲೀಗ ಆಫನೇಶನ್ನಿನ (ರಾಷ್ಟ್ರಸಂಘದ) ಯೋಜನೆಯಿಂದ ಡೇನ ಜನರಿಗೆ ಅತ್ಯಾನಂದವಾಗಿರುವದು. ಅವರು ತಮ್ಮ ದೇಶದ ಸೈನ್ಯದ ಸಂಖ್ಯೆಯನ್ನು ತೀರ ಕಡಿಮೆಮಾಡಿ ಆ ಹಣವನ್ನೆಲ್ಲ ದೇಶದ ಸುಧಾರಣೆಗೆ ವೆಚ್ಚಮಾಡಹತ್ತಿರುವರು.

ಒಟ್ಟಿನಮೇಲೆ ಸುಶಿಕ್ಷಿತತೆ, ಸತ್‌ಶೀಲ, ಸದುದ್ಯೋಗ, ಸಹಕಾರ ಇವುಗಳ ಬಲದಿಂದ ಡೇನ ಜನರು ತಮಗೆ ತೀರ ವಿರುದ್ಧವಾದ ಪ್ರಾಕೃತಿಕ ಸ್ಥಿತಿಯಲ್ಲಿಯೂ ತಮ್ಮ ದೇಶವನ್ನು ಸುಸಂಪನ್ನವಾಗಿ ಮಾಡಿಕೊಂಡು ಸುಖದಿಂದ ಜೀವಿಸುತ್ತಿರುವರು. ಸಾರವಾತ್ತಾದ ಭೂಮಿ ಅನುಕೂಲವಾದ ಹವೆ ನೀರಿನ ಸೌಮ್ಯದ್ಧಿ ಇವುಗಳಿಂದ ಸುವರ್ಣ ಭೂಮಿಯೆನಿಸಿ ಕೊಂಡಿರುವ ನಮ್ಮ ದೇಶದಲ್ಲಿ ನಾವು ಅವರನ್ನು ಅನುಕರಣಮಾಡಿ ನಡೆದರೆ ಎಷ್ಟುಸುಖಿಗಳಾಗಬಹುದೆಂಬದನ್ನು ಹೇಳುವಕಾರಣವಿಲ್ಲ. ಈ ಕಾರ್ಯದ ಮುಖ್ಯ ಭಾಗವು ಶಿಕ್ಷಕ ವರ್ಗದ ಪ್ರಯತ್ನವನ್ನು ಅವಲಂಬಿಸಿದೆ.

ಮುಲ್ಕೀಪರೀಕ್ಷೆಯ ಕ್ಲಾಸಿನ ಬಗ್ಗೆ ಲಕ್ಷದಲ್ಲಿಡತಕ್ಕ ಕೆಲವು ಸಂಗತಿಗಳು.

ಪ್ರತಿವರ್ಷ ಮುಲ್ಕೀಪರೀಕ್ಷೆಯಲ್ಲಿ ಸುಮಾರು ಕ್ಷಿವಿದ್ಯಾರ್ಥಿಗಳು ನಾಪಾಸಾಗುವದು ಎಲ್ಲರ ಅನುಭವದ ಸಂಗತಿಯಾಗಿದೆ. ಇದರ ಕಾರಣವನ್ನು ಪರಿಶೋಧಿಸಿದರೆ ವಿದ್ಯಾರ್ಥಿಗಳ ಬರೆಯುವ ಪದ್ಧತಿ, ವಿಷಯಗಳ ಬಗ್ಗೆ ಅಜ್ಞಾನ ಇವೇ ಇರುವವೆಂದು ಬೇರೆ ಹೇಳಬೇಕಾಗಿಲ್ಲ. ಇದರ ವಿಷಯವಾಗಿ ಇಲ್ಲಿ ವಿವೇಚನೆ ಮಾಡಿದರೆ ಸಹವ್ಯವಹಾಯಿಗಳಿಗೆ ಏನಾದರೂ ಲಾಭವಾದೀತೆಂಬ ಭರವಸೆಯಿಂದ ಈ ಲೇಖವನ್ನು ಬರೆದಿರುವೆನು. ಪ್ರಶ್ನಪರೀಕ್ಷಕರೆಲ್ಲರೂ ಪರೀಕ್ಷೆಯಾಗಿ ಪೇಪರುಗಳನ್ನು ತಪಾಸಿಸಿದ ಬಳಿಕ ತಮ್ಮ ತಮ್ಮ ಪೇಪರುಗಳಲ್ಲಿ ಕಂಡುಬರುವ ದೋಷಗಳನ್ನು ರಿಪೋರ್ಟ ನ ಮುಖಾಂತರ ಪ್ರಸಿದ್ಧ

ಮಾಡುತ್ತ ಬಂದಿದ್ದರೆ ನಮ್ಮೆಲ್ಲರಿಗೂ ಬಹಳೇ ಉಪಯೋಗವಾಗುತ್ತಿತ್ತು. ಇನ್ನಾ
ದರೂ ಹಾಗೆ ಮಾಡಿದಲ್ಲಿ ಕಲಿಸುವ ಮಾಸ್ತರರಿಗೂ ವಿದ್ಯಾರ್ಥಿಗಳಿಗೂ ಬಹಳೇ
ಸಹಾಯವಾಗಿದಂತಾಗುವದಲ್ಲದೆ ತಮಗೂ ಸುಲಭವಾಗುವದು. ಹೋದ ವರ್ಷ
ವಿಜಯ ಪತ್ರದಲ್ಲಿ ನಿಬಂಧ ಬರಹದಲ್ಲಿ ಕೆಲವು ವಿದ್ಯಾರ್ಥಿಗಳು ಬರೆದ ಅಪದ್ಧ ಸಂಗತಿ
ಗಳ ಬಗ್ಗೆ ಅಪಹಾಸ್ಯಕಾರಕವಾದ ಟೀಕೆಗಳನ್ನು ಯಾರೋ ಮಾಡಿದ್ದರು. ನಾವು ಅವರ
ಉಪಕಾರವನ್ನು ಸ್ಮರಿಸದೆ ಇರಲಾರೆವು. ಈ ವರ್ಷದ ಪರೀಕ್ಷೆಯು ಪ್ರಾರಂಭವಾಗುವ
ಪೂರ್ವದಲ್ಲಿಯೇ ಎಲ್ಲ ಶಾಲೆಗಳ ಮಾಸ್ತರರಿಗೂ ಕೆಳಗೆ ಬರೆದ ಸಂಗತಿಗಳು ತಿಳಿದು
ಅದಷ್ಟು ಅವುಗಳನ್ನು ತಿದ್ದಲಿಕ್ಕೆ ಪ್ರಯತ್ನವಾಡುವರೆಂದು ತುಂಬಾ ನಂಬಿ ನನ್ನ ಕೆಲವು
ಅನುಭವವನ್ನೂ ನಮ್ಮ ಶಾಲೆಯ ಪ್ರಿಲಿಮ್ನರೀ ಪರೀಕ್ಷೆಯಲ್ಲಿ ಕಂಡುಬಂದ ಕೆಲವು
ದೋಷಗಳನ್ನೂ ಇದರಡಿಯಲ್ಲಿ ಬರೆದಿರುವೆನು. ತಮಗೆ ಮಾನ್ಯಕಂಡದ್ದನ್ನು ಗ್ರಹಣ
ಮಾಡಬೇಕೆಂದು ಬೇಡುವೆನು. ಇನ್ನೂ ಹೆಚ್ಚು ಅನುಭವವುಳ್ಳ ಶಿಕ್ಷಕರು ತಮ್ಮ ಅನು
ಭವದ ಲಾಭವನ್ನು ಮಾಡಿಕೊಡಬೇಕೆಂದು ಅವರಿಗೆ ನನ್ನ ಆಗ್ರಹದ ವಿನಂತೀ ಸೂಚ
ನೆಯದೆ.

ಮು. ಪ. ಯ ಕ್ಲಾಸನ್ನಿಡುವ ಮಾಸ್ತರರಿಗೆ ಎರಡು ವಿನಂತೀ ಶಬ್ದಗಳು:—
ಎಷ್ಟೋ ಶಾಲೆಗಳ ಮಾಸ್ತರರು ಮುಲ್ಕೀ ಪರೀಕ್ಷೆಯ ಕ್ಲಾಸನ್ನಿಡದಿರುವದು ಅಗೌರವ
ವೆಂದು ತಿಳಿದು ಒಂದೆರಡು ವಿದ್ಯಾರ್ಥಿಗಳಿದ್ದಾಗ್ಯೂ ಅಲ್ಲಿ ಕ್ಲಾಸನ್ನಿಡುತ್ತಾರೆ. ಮೊದ
ಲಿನಂತೆ ಕೆಳವಯಸ್ಸಿನ ನಿಯಮವಿಲ್ಲದ್ದರಿಂದ ಹೆಚ್ಚು ವಿಚಾರದ ವಿಷಯವನ್ನು ಗ್ರಹಣ
ಮಾಡಲಾರದಂಥ ವಿದ್ಯಾರ್ಥಿಗಳ ಸಂಖ್ಯೆಯೇ ಹೆಚ್ಚಿರುತ್ತದೆ. ಪರೀಕ್ಷೆಯ ಪ್ರಶ್ನಗಳು
ಮಾತ್ರ (ಗಣಿತದ ಹೊರ್ತು) ಹೆಚ್ಚು ಅವಾಢವ್ಯವಾದವುಗಳಿರುತ್ತವೆ. ಪರೀಕ್ಷೆಗೆ ಈಗ
ಅಷ್ಟು ಮಹತ್ವವೂ ಇಲ್ಲ. ಉತ್ತಮ ವಿದ್ಯಾರ್ಥಿಗಳು ಇಂಗ್ಲಿಷ ಶಾಲೆಗಳಿಗೆ ಹೋಗಿ
ಬಿಡುವರಾದ್ದರಿಂದ ಅದಷ್ಟು ಮಧ್ಯಮ, ಕನಿಷ್ಠ ತರಗತಿಯವರೇ ಈ ಕ್ಲಾಸಿಗೆ
ಉಳಿಯುವರು. ಇಂಥ ಸ್ಥಿತಿಯಲ್ಲಿ ಮಾಸ್ತರನು ಕ್ಲಾಸನ್ನಿಟ್ಟರೆ ಅವರ ಸಂಗಡ ಹೆಚ್ಚು
ಶ್ರಮವನ್ನು ತೆಗೆದುಕೊಂಡರೇನೇ ಹೊರ್ತು ವಿದ್ಯಾರ್ಥಿಗಳು ಪರೀಕ್ಷೆಗೆ ಕೂಡ್ರಲಿಕ್ಕೆ
ಯೋಗ್ಯರಾಗಲಾರರು. ಒಂದೆರಡು ವಿದ್ಯಾರ್ಥಿಗಳುಳ್ಳ ಕ್ಲಾಸಿನ ಸಲುವಾಗಿ ಹೆಚ್ಚು
ದುಡಿಯಲಿಕ್ಕೆ ಮನಸ್ಸಾಗುವದಿಲ್ಲ. ಮೇಲೆ ಹೇಳಿದ ಶಾಲೆಯ ಮಾಸ್ತರರು ಈ ಸಂಗ
ತಿಯನ್ನು ಲಕ್ಷಕ್ಕೆ ತಂದು ಸ್ವಲ್ಪ ವಿದ್ಯಾರ್ಥಿಗಳ ಸಲುವಾಗಿ ಒಂದು ಕ್ಲಾಸನ್ನಿಟ್ಟು ಇಡೀ
ಶಾಲೆಯ ಸ್ಥಿತಿಗೆ ಕುಂದು ತಂದುಕೊಳ್ಳುವದಕ್ಕಿಂತ ಆ ಕ್ಲಾಸನ್ನೇ ಬಿಟ್ಟು ಅದೇ ವೇಳೆ
ಯನ್ನು ತಮ್ಮ ಶಾಲೆಯ ಉಳಿದ ಕ್ಲಾಸಿನ ಸುಧಾರಣೆಯಲ್ಲಿ ವೆಚ್ಚಮಾಡಿದರೆ ಉಭಯ
ತರಿಗೂ ಹಿತವಾಗುವದಲ್ಲದೆ ಶಾಲೆಯ ಗೌರವವೂ ಹೆಚ್ಚುತ್ತದೆ. ಊರವರ ಆಗ್ರಹ
ದಿಂದ ಈ ಕ್ಲಾಸನ್ನಿಡಬೇಕಾಗುವದೆಂದು ಕೆಲವರು ಸಂಕೋಚಪಡಬಹುದು. ಮೇಲೆ
ಹೇಳಿದಂತೆ ಅವರಿಗೆ ಚನ್ನಾಗಿ ಮನವರಿಕೆ ಮಾಡಿಕೊಟ್ಟಲ್ಲಿ ಅನರಾದರೂ ಆಗ್ರಹವಾಡ

ಾರರಿಂದು ನನ್ನ ಅನುಭವದಿಂದ ಗೊತ್ತಾಗಿದೆ. ಇಂಥ ಶಾಲೆಯ ವಿದ್ಯಾರ್ಥಿಗಳು ಹತ್ತರಿವ್ದ ದೊಡ್ಡ ಶಾಲೆಗಳಿಗೆ ಹೋದರೆ ಅಲ್ಲಿ ಈ ಹುಡುಗರ ಸಂಖ್ಯೆಯು ಬೆಳೆದು ಅಲ್ಲಿಯ ಮಾಸ್ತರರಿಗೂ ವಿದ್ಯಾರ್ಥಿಗಳಿಗೂ ಉನೋದು ಹೆಚ್ಚಾಗಿ ಕೆಲಸವು ಚನ್ನಾಗಿ ಆಗುವದೆಂಬದರಲ್ಲಿ ಸಂದೇಹವೇತರದು ! ಇಂಥ ದೊಡ್ಡ ಶಾಲೆಯ ಮಾಸ್ತರರು ಈ ಕ್ಲಾಸಿನ ಬಗ್ಗೆ ವ್ಯವಸ್ಥೆಮಾಡಿದಾಗ ಕೆಳಗೆ ವಿವರಿಸಿದ ಸಂಗತಿಗಳ ಕಡೆಗೆ ಲಕ್ಷಕೊಡ ಬೇಕೆಂದು ನನ್ನ ಆಗ್ರಹದ ವಿನಂತಿಯವೆ. ಪ್ರತಿವಾರಕ್ಕೊಮ್ಮೆ ಬೇರೆ ಬೇರೆ ವಿಷಯ ಗಳಲ್ಲಿ ಲೇಖೀ ಪರೀಕ್ಷೆಯನ್ನು ತೆಗೆದುಕೊಂಡು ಅದರದೊಂದು ಲೀಷ್ಟನ್ನಿಟ್ಟು ಅದರಲ್ಲಿ ಆ ವಿದ್ಯಾರ್ಥಿಗಳ ಗುಣಗಳನ್ನು (ಮಾರ್ಕುಗಳನ್ನು) ತುಂಬುತ್ತಾ ಹೋಗಬೇಕು. ಅಂದರೆ ಇದರ ಉಪಯೋಗವನ್ನು ಪ್ರಿಲಿಮ್ಸರೀ ಪರೀಕ್ಷೆಯಲ್ಲಿ ಮಾಡಿಕೊಳ್ಳಲಿಕ್ಕೆ ಅನು ವಾಗುತ್ತದೆ. ಜಿಲ್ಲಾಶಿಕ್ಷಕ ಸಂಘದವರು ಪ್ರಿಲಿಮ್ಸರೀ ಪರೀಕ್ಷಾಕಮೀಟಿಯನ್ನು ಸ್ಥಾಪಿಸಿಕೊಂಡು ಅದರ ಮುಖಾಂತರವಾಗಿ ಅನುಭವಿಕ ಮಾಸ್ತರರಿಂದ ಉತ್ತಮ ಪ್ರಶ್ನಗಳನ್ನು ತರಿಸಿಕೊಂಡು ಮುದ್ರಿಸಬೇಕು. ನಂತರ ಇಡೀ ಜಿಲ್ಲೆಯಲ್ಲಿ ಒಂದೇ ದಿವಸವೇ ಪರೀಕ್ಷೆಯು ಪ್ರಾರಂಭವಾಗುವಂತೆ ಒಂದು ದಿವಸ ನಿಯಮಿಸಿ ಪ್ರಸಿದ್ಧ ಮಾಡಬೇಕು. ಮುದ್ರಿಸಿದ ಎಲ್ಲ ಪ್ರಶ್ನಕಾಗದಗಳನ್ನು ಆ ಆ ತಾಲೂಕಸಂಘಗಳ ಮುಖಾಂತರವಾಗಿ ನಿಯಮಿತ ವೇಳೆಯೊಳಗಾಗಿ ಮುಟ್ಟುವಂತೆ ಎಲ್ಲ ಶಾಲೆಗಳಿಗೆ ಕಳಿಸ ಬೇಕು. ಈ ಕೆಲಸಗಳಲ್ಲಿ ಪ್ರಶ್ನಗಳು ಸೋರಿಕೆಯಾಗದಂತೆ ಮಾತ್ರ ವ್ಯವಸ್ಥೆ ಇರಬೇಕೆಂದು ಬೇರೆ ಹೇಳಲವಶ್ಯವಿಲ್ಲ. ಪ್ರಿ. ಪರೀಕ್ಷೆಯಾದನಂತರ ಆ ಆ ಶಾಲೆಗಳ ಮಾಸ್ತರರು ತಮ್ಮ ತಾಲೂಕ ಸಂಘಗಳು ನಿಯಮಿಸಿದ ಪರೀಕ್ಷಕರ ಕಡೆಗೆ ಉತ್ತರದ ಕಾಗದಗಳನ್ನು ಕಳಿ ಸಬೇಕು. ಅವು ತಪಾಸಾದ ಬಳಿಕ ಪುನಃ ನಿಮ್ಮ ಲ್ಲಿಗೆ ಅವರು ಕಳಿಸುವಂತೆ ವ್ಯವಸ್ಥೆ ಯನ್ನಿಟ್ಟುರಬೇಕು. ಆ ಮೇಲೆ ಪ್ರಿ. ಪರೀಕ್ಷೆಯಲ್ಲಿ ಪಾಸಾದವರಿಗೇನೇ ಸರ್ಟಿಫೀಕಿಟು (ಅರ್ಜಿಗಳನ್ನು) ಕೊಡಬೇಕು. ಹೀಗೆ ವ್ಯವಸ್ಥೆಯಾದಲ್ಲಿ ಸುಸಂಘಟಿತ ರೀತಿಯಿಂದ ಕೆಲ ಸವು ನಡೆದು ನಾಪಾಸಿನ ಪ್ರಮಾಣವು ಕಡಿಮೆಯಾಗಿ ಎಲ್ಲರಿಗೂ ಹಿತವಾಗಬಹುದು.

ಇನ್ನು ಮು. ಪರೀಕ್ಷೆಯ ವಿಷಯಗಳ ಬಗ್ಗೆ ಸ್ವಲ್ಪ ಆಲೋಚಿಸೋಣ. ಡೆ॥ ಎ॥ ಇ॥ ಸಾ॥ ರಾದ ಮೆ॥ ಜಮಖಂಡಿಯವರು ನಮ್ಮ ಶಾಲೆಗೆ ಪರೀಕ್ಷೆಗೆ ಬಂದಾಗ್ಗೆ "ಪ್ರತಿ ಯೊಂದು ಶಾಲೆಯಲ್ಲಿ ಭಾಷಾ, ನಿಬಂಧ ಈ ಎರಡು ವಿಷಯಗಳ ಸ್ಥಿತಿಯು ಸಮಾ ಧಾನಕರವಾಗಿರುವದಿಲ್ಲ"ವೆಂದು ಆಡಿತೋರಿಸಿದರು. ಈ ಸಂಗತಿಯು ನಿಜವಿದ್ದರೂ ಇಂಥ ದೋಷದಿಂದಲೇ ಹೀಗಾಗಿರುವದೆಂದು ನಿರ್ಣಯಿಸುವದು ನಮ್ಮ ಕರ್ತವ್ಯವಲ್ಲ. ಶಕ್ಯವಿದ್ದಷ್ಟು ಸುಧಾರಿಸಿ ತೋರಿಸಲಿಕ್ಕೆ ಪ್ರಯತ್ನಮಾಡಬೇಕು. ಭಹುತರವಾಗಿ ಎಲ್ಲ ವಿಷಯಗಳ ಪ್ರಶ್ನಗಳು (ಅವುಗಳಲ್ಲಿ ಇತಿಹಾಸ, ಭೂಗೋಲ, ನಿಬಂಧ) ಸದ್ಯದ ವ್ಯವಹಾರ ಗಳನ್ನ ನುಸರಿಸಿಯೇ ಆರಿಸಲ್ಪಟ್ಟಿರುತ್ತವೆ. ಆದ್ದರಿಂದ ನಾವಾದರೂ ಅಂಥ ವಿಷಯಗ ಳನ್ನು ಕಲಿಸುತ್ತಾ ಹೋಗಬೇಕು. ಗಣಿತ ವಿಷಯದಲ್ಲಿ ಮುರಕೊಳ್ಳುವ ಬಡ್ಡಿ, ತೇವು ಈ

ಲೆಕ್ಕಗಳು ಪ್ರತ್ಯಕ್ಷವಿಲ್ಲದಿದ್ದರೂ, ಅವು ಕ್ಯಾಶ ಸರ್ಟಿಫಿಕೇಟು, ವಾರಬಾಂಡ ಇವುಗಳಿಂದ ಯುಕ್ತವಾದ ಉದಾಹರಣೆಗಳ ಮುಖಾಂತರ ಪ್ರಶ್ನಗಳಲ್ಲಿ ಕಂಗೊಳಿಸುತ್ತವೆ. ಇನ್ನೊಂದು ಸಂಗತಿ ಏನಂದರೆ– ಮುಲ್ಕೀ ಪರೀಕ್ಷೆಯಲ್ಲಿ ವಿಭಾಗ ಮಾಡುವ ಎಲ್ಲ ನಿಯಮಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿರಬೇಕು. ಒಂದೊಂದು ಭಾಗದಲ್ಲಿ ೨–೩ ವಿಷಯಗಳ ಸಮಾವೇಶವಾಗುವದು. ಅಂಥ ಪ್ರಸಂಗದಲ್ಲಿ ಪ್ರತಿಯೊಂದು ವಿಷಯದಲ್ಲಿ ೨೧ ಗುಣಗಳನ್ನು ದೊರಕಿಸಿದರೂ, ಎಟ್ಟನ ಮೇಲೆ ೫೫ ಗುಣಗಳನ್ನು ದೊರಕಿಸಿದರೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಂತಾಗುವದೆಂಬ ಮಾತು ಅವರಿಗೆ ಮನದಟ್ಟಾಗಿರಬೇಕು.

ವಿದ್ಯಾರ್ಥಿಗಳಿಂದ ಕೆಲವು ಸಾಮಾನ್ಯ ಸಹಜ ದೋಷಗಳು ಘಟಿಸುತ್ತಿರುತ್ತವೆ ಕಾರಣ ಅವುಗಳನ್ನು ತಿದ್ದಲಿಕ್ಕೆ ಮಾಸ್ತರನು ಯಾವಾಗಲೂ ಪ್ರಯತ್ನಮಾಡತಕ್ಕದ್ದು ಅವು ಯಾವವೆಂದರೆ :—

(೧) ಎಷ್ಟೋ ವಿದ್ಯಾರ್ಥಿಗಳ ವಾಕ್ಯರಚನೆಯು ಬಹಳೇ ಅಪದ್ಧವಿರುತ್ತದೆ ಅಲ್ಪಪ್ರಾಣಕ್ಕೆ ಮಹಾಪ್ರಾಣ, ಮಹಾಪ್ರಾಣಕ್ಕೆ ಅಲ್ಪಪ್ರಾಣ, (ನಿಭಂದ, ಸುದ್ದ ಅವಶ್ಯವಿಲ್ಲದಲ್ಲಿ ವತ್ತುಕೊಡೋಣ, ಇದ್ದಲ್ಲಿ ಬಿಡೋಣ, ಕೆಲವು ಪಾರಿಭಾಷಿಕ ಶಬ್ದಗಳನ್ನು ರೂಢಿಮಾಡದಿರುವದು, (ಪ್ರಕೃತಿ, ಬಹುವ್ರಿವಿ, ಶಾಸ್ತ್ರವಿಷಯ.)

(೨) ವೇಳೆಯ ಮಹತ್ವವನ್ನರಿಯದಿರುವದು. ಒಂದೇ ಕಾಗದದಲ್ಲಿ ಎರಡು ವಿಷಯಗಳ ಪ್ರಶ್ನಗಳನ್ನು ಕೊಟ್ಟಾಗ ಒಂದೇ ವಿಷಯದ ಮೇಲೆ ಜೋರುಕೊಟ್ಟು ಮತ್ತೊಂದು ವಿಷಯವನ್ನು ಸಾಕಷ್ಟು ಬರೆಯುವದಿಲ್ಲ. ಪ್ರತಿಯೊಂದು ಪ್ರಶ್ನಕ್ಕೆ ಕೊಡಬೇಕಾದ ವೇಳೆಯ ಅಂದಾಜನ್ನು ಮಾಡಿಕೊಳ್ಳುವದಿಲ್ಲ. ಮೊದಲು ಕಠಿಣ ಪ್ರಶ್ನಗಳಿಗೆ ಕೈಹಾಕುವರು. ಅಥವಾ ಸುಮ್ಮನೇ ನೋಡುತ್ತ ಕುಳಿತುಕೊಳ್ಳುವರು.

(೩) ಪ್ರಶ್ನಗಳಿಗೆ ಸಮಾಧಾನಕಾರಕ ಉತ್ತರಗಳನ್ನು ಕೊಡುವವರು ಬಹು ಜನರಿಲ್ಲ. ಉದಾಹರಣಾರ್ಥವಾಗಿ "ಅಹಲ್ಯಾಬಾಯಿಯ ಗುಣವರ್ಣಿಸಿರೆಂದು" ಕೇಳಿದಾಗ ಇಡೀ ಚರಿತ್ರೆಯನ್ನೇ ಬರೆಯೋಣ. ಅದರಂತೆ ರನ್ನನ ಸಂಕ್ಷಿಪ್ತ ಚರಿತೆಯನ್ನು ಬರೆಯಿರೆಂದು ಹೇಳಿದಾಗ ನಾಲ್ಕೇ ಸಾಲಿನಲ್ಲಿ ಇಡೀ ಚರಿತ್ರೆಯನ್ನು ಮುಗಿಬಿಡೋಣ. ಅಥವಾ ಆ ಚರಿತ್ರೆಯ ಪೂರ್ವ ಪೀಠಿಕೆಯಲ್ಲಿಯೇ ಹೆಚ್ಚು ವೇಳೆಯೋಣ. ಕಡೆಗೆ ಏನಾದರೂ ಸುಳ್ಳೇ ಬರೆಯೋಣ.

(೪) ತನುಗೆ ಪರೀಕ್ಷೆಯಕಾಲಕ್ಕೆ ಅವಶ್ಯವಿರುವ ಎಲ್ಲ ಉತ್ತಮ ಉಪಕರಣಗಳನ್ನು ಸಂಗ್ರಹಿಸದಿರೋಣ. ಉದಾ :—ತುದಿಮಂಡಾದ ಕಂಪಾಸು, ಟೊಳ್ಳು, ವ

(೫) ವಿರಾಮ ಚಿನ್ಹಗಳನ್ನು ಬೇಕು. ಬೇಕಾದಲ್ಲಿ ಉಪಯೋಗಿಸುವದು. ಉದ್ಗಾರವಾಚಕಕ್ಕೆ ಪ್ರಶ್ನಾರ್ಥಕ, ಅಲ್ಪವಿರಾಮಕ್ಕೆ ಅರ್ಧವಿರಾಮ ಇ.

(೬) ಬರೆದ ಪ್ರಶ್ನಗಳ ಉತ್ತರಗಳನ್ನು ಪುನಃ ಓದಿಕೊಳ್ಳದಿರುವದು. ಹೀಗಾಗಿ ಎಷ್ಟೋ ವಿದ್ಯಾರ್ಥಿಗಳು ಪಾಸಾಗುತ್ತೇವೆಂಬ ಮನನಂಬಿಗೆಯುಳ್ಳವರಾದಾಗ್ಯೂ ನಾಪಾಸಾಗುವರು. ಒಂದಕ್ಕೊಂದು ಉತ್ತರಗಳು ಬಿದ್ದ ಉದಾಹರಣೆಗಳೆಷ್ಟೋ ಕಂಡು ಬಂದಿರುವವು. ಗಣಿತ, ಭೂಮಿತಿಗಳಲ್ಲಂತೂ ಇದರ ಅವಶ್ಯಕತೆಯು ಬಹಳ.

(೭) ಬರೆಯಲಿಕ್ಕೆ ಕೂಡುವಾಗ ಮೊಣಕಾಲನ್ನು ಮೇಲಕ್ಕೆವಾಡಿಕೊಂಡು ಕೂಡುವದು ಅಥವಾ ಅತಿ ಬಗ್ಗಿಕೂಡುವದು. (ಮೊದಲಿನ ಪದ್ಧತಿಯಿಂದ ಅಕ್ಷರಗಳು ದಿಟ್ಟಗಾಗದೆ ಬರಹವು ತೀವ್ರವಾಗಿ ಸಾಗಲಾರದು. ಟಾಕಿನಿಂದ ಮಸಿಯು ಸಾಕಷ್ಟು ಇಳಿಯುವದಿಲ್ಲ.) ತಿನೇ ಪದ್ಧತಿಯಿಂದ ನಡಸೋತು ಬೇಸರಬರುವದು. ಕಾರಣ ತೊಡೆಯುಮೇಲೆ ತೊಡೆಕಾಕಿಕೊಂಡು ಕುಳಿತುಕೊಳ್ಳುವದೇ ಉತ್ತಮ. ಮೊದಲು ಕೊಟ್ಟ ಸೂಚನಾ ಪೇಪರವನ್ನು ಚನ್ನಾಗಿ ಓದಿ ತಿಳಕೊಳ್ಳದಿರುವದು. ಇ.

(೮) ಒಂದು ಪ್ರಶ್ನದಲ್ಲಿಯ ಕೆಲವು ಭಾಗ ತಿಳಿಯದಿದ್ದಲ್ಲಿ ಇಡೀ ಪ್ರಶ್ನಕ್ಕೇನೇ ಉತ್ತರಬರೆಯದಿರೋಣ. ಯಾವದೊಂದು ಚರಿತ್ರೆಯಲ್ಲಿ ಯಾವದೊಂದು ಭಾಗ ತಿಳಿಯದಿದ್ದಲ್ಲಿ ಇಡೀ ಚರಿತ್ರೆಯನ್ನೇ ಬರೆಯದೆ ಬಿಡುವದು. ಸ್ಪಷ್ಟೀಕರಣ ವಾಕ್ಯಗಳಲ್ಲಿ ಒಂದು ಬರದಿದ್ದರೆ ಎಲ್ಲವನ್ನು ಬಿಟ್ಟುಬಿಡೋಣ. ಇ.

ಮುಖ್ಯ ವಿಷಯಗಳಲ್ಲಿರುವ ಮುಖ್ಯ ದೋಷಗಳು :—

ಗಣಿತ :—ಸ್ಪಷ್ಟವಾಗಿ ಬರೆದಿರುವದಿಲ್ಲ. ಏಕೇರೀ ಇಷ್ಟರಾಸಿಗಳಲ್ಲಿ ಕಲ್ಪಿಸಿಕೊಂಡ ಅಂಕೆಗಳನ್ನು ಮೊದಲು ಬರೆಯದೆ ಹಾಗೇ ಲೆಕ್ಕಮಾಡೋಣ. ಕ್ಷೇತ್ರಫಲಗಳಲ್ಲಿ ಕೇವಲ ಗುಣಾಕಾರ ಭಾಗಾಕಾರಗಳಿಂದಲೇ ಸಾಗಿಸೋಣ. ಉದಾ. ಪ ಘ. ಫ. ÷ ಳ ಕ್ಷೆ. ಫ. = ೨' ಹೀಗೆ ಬರೆಯದೆ ಪ × ಧ್ಯ ಅಂತಾ ಬರೆಯುವರು. ಇ.

ಭೂಮಿತಿ :—ಯಾಕಂದರೆ, ಆದ್ದರಿಂದ ಈ ಶಬ್ದಗಳ ಚಿನ್ಹಗಳನ್ನು ಉಪಯೋಗಿಸುವದರಲ್ಲಿ ಜಾಗ್ರತೆಪಡುವದಿಲ್ಲ. ಕೆಲವರಂತೂ ಕೋನ, ಭುಜಗಳ ಹೆಸರನ್ನು ಅಕ್ಷರದಿಂದ ಹೇಳದೆ ಈ ಭುಜ, ಈ ಕೋನಅಂತ ಬರೆಯುವರು. ಪ್ರಮಾಣಕ್ಕೆ ಸರಿಯಾಗಿ ಆಕೃತಿಗಳನ್ನು ಹಾಕಿರುವದಿಲ್ಲ.

ಭಾಷಾ :—ವ್ಯಾಕರಣದ ವಿಷಯಕ್ಕಂತೂ ಬಹಳೇ ಗೊಂದಲವಿರುವದು. ವಾಕ್ಯವಿಭಜನೆಯನ್ನು ಮಾಡುವವರಂತೂ ಬಹುಕಡಿಮೆಯಿರಬಹುದೆಂದು ನನ್ನ ನಂಬಿಗೆ. ಪೂರ್ವಾಪರಸಂಪರ್ಕ, ಸ್ಪಷ್ಟೀಕರಣವಾಕ್ಯ ಇವುಗಳ ಪ್ರಶ್ನಗಳಿಗೆ ಸಾಕಷ್ಟು ಉತ್ತರ ಬರೆದೆ ಬಹಳೇ ಬೆಳಸಿ ಬರೆಯೋಣ, । ಅಳುಸಿ ಪರವಧುಗಧೋಗತಿ । ಈ ಪದ್ಯದ

ಪೂರ್ವಾಪರಸಂದರ್ಭಕೇಳಿದರೆ ರಾಮರಾವಣರ ವಂಶಾವಳಿಯನ್ನು ಸಾರೋಣ, ಕೊಳ್ಳೇ ದೆವ್ವಗಳ ವಿಷಯಕ್ಕೆ ಕೇಳಿದಾಗ " ಹಗಲಲ್ಲಿ ಸತ್ತವರ ಎಲವುಗಳು ರಾತ್ರಿ ಹೊಳೆಯುತ್ತವೆ." ಹೀಗೆ ಉತ್ತರಬರೆಯೋಣ, ಎಷ್ಟೋ ವ್ಯಾಕರಣ ನಿಯಮಗಳನ್ನು ಕೇಳಿದಾಗ ಉದಾಹರಣೆಗಳನ್ನು ಕೊಡದೆ ಬರೆಯೋಣ, ಮೊದಲಾದ ದೋಷಗಳು ಕಂಡು ಬಂದಿರುವವು.

ನಿಬಂಧಃ–ಅಪರಿಚಿತ ನಿಬಂಧಗಳನ್ನು ಸಮಂಜಸವಾಗಿ ಬರೆಯುವವರಂತೂ ಬಹು ವಿರಲ. ಪರಿಚಿತವಾದದ್ದಿದ್ದರೂ ವಿರಾಮಚಿನ್ಹಗಳ ದುರುಪಯೋಗ, ಅಪದ್ಧ ವಾಕ್ಯ, ಅಸ್ವಚ್ಛ ಅಕ್ಷರ, ಅಶುದ್ಧ ಬರಹ ಮೊದಲಾದ ದೋಷಗಳು ದೃಷ್ಟಿಗೋಚರವಾಗುವವು. ಎಷ್ಟೋ ಹುಡುಗರು ನಕಲುಮಾಡುವದರಲ್ಲಿಯೇ ವೇಳೆಕಳೆದು ಮುಂದೆ ಅರ್ಧನಿಬಂಧವನ್ನು ಬರೆದು ಬರುವರು. ಸದ್ಯದ ಸ್ಥಿತಿಯನ್ನು ವರ್ಣನೆಮಾಡುವ ನಿಬಂಧಗಳು ಪರೀಕ್ಷೆಗೆ ಬೀಳುವದೇ ಬಹಳ. ಈ ವರ್ಷದ ಪರಿಸ್ಥಿತಿಗೆ ಅನುಸರಿಸಿ ನೋಡಿದರೆ (೧) ಮೋಟಾರುಗಳಿಂದಾಗುವ ಲಾಭಹಾನಿಗಳು (೨) ಒಕ್ಕಲತನ (೩) ಶೇತಕೀ ಸೊಸಾಯಿಟಿ. ಇವುಗಳ ದಳಣವಳಣವೇ ಹೆಚ್ಚಾಗಿರುವದು.

ಮೇಲಿನ ಲೇಖವು ಅಷ್ಟು ಮಹತ್ವದ್ದಲ್ಲದಿದ್ದರೂ ಅಲಕ್ಷದಿಂದ ಮಹತ್ವದ್ದಾಗಿ ಪರಿಣಮಿಸಿದ್ದರಿಂದ ಪ್ರಸಿದ್ಧಿಸಿರುವೆನು. ಇದರಲ್ಲಿಯ ಗುಣದೋಷಗಳ ವಿವೇಚನೆಯನ್ನು ಮಾಡಿದವರಿಗೆ ತುಂಬಾ ಋಣಿಯಾಗುವೆನು.

ಗೋ. ವೆ. ಮುಗದ.

ಹೆ. ಮೂ. ಇಂಗಳಗಿ ತಾ|| ಬಂಕಾಪೂರ

ರಾಷ್ಟ್ರಕೂಟರು

(ಲೇಖಕಃ— ಪಂಡಿತ ಕೇಶವ ಶರ್ಮಾ, ಗಲಗಲಿ)

ರಟ್ಟ ಶಬ್ದವು ಸ್ಕಂದ ಪುರಾಣದಲ್ಲಿ ಬಂದಿರುತ್ತದೆ. ಈ ಶಬ್ದವು ರಾಷ್ಟ್ರಕೂಟದ ಪರ್ಯಾಯ ನಾಮವೆಂದು ಕೆಲವು ಸಂಶೋಧಕರ ಅಭಿಪ್ರಾಯವದೆ. ಚಂದ್ರವಂಶದ ಸಾತ್ಯಕಿ ಶಾಖೆಯಲ್ಲಿ 'ರಟ್ಟಾ'ಯೆಂಬ ರಾಜಕನ್ಯೆಯು ಇದ್ದು, ಅವಳ ಮಗನೇ ರಾಷ್ಟ್ರಕೂಟನೆಂಬವನು; ಇವನಿಂದಲೇ ಈ ಕುಲಕ್ಕೆ 'ರಾಷ್ಟ್ರಕೂಟ'ವೆಂಬ ಅಭಿಧಾನವು ಬಂದಿತೆಂದು ಕೆಲವರು ಹೇಳುತ್ತಾರೆ. 'ರಾಷ್ಟ್ರದ ಕೂಟರು' ಅಂದರೆ ಅಧಿಕಾರಿಗಳು ಎಂಬ ವ್ಯುತ್ಪತ್ತಿಯಿಂದ ರಾಷ್ಟ್ರಕೂಟರೆಂಬ ಪದವು ಉಂಟಾಯಿತೆಂದು ಕೆಲವರ ಅಭಿಪ್ರಾಯವದೆ. 'ದೇಶಮುಖ' ಶಬ್ದವು ವಸೂಲಿಯ ಅಧಿಕಾರಿಗೂ, ಅವರ ಕೈಕೆಳಗಿನ ಕಾರಕೂನನಿಗೆ ದೇಶ

ಂಡೆ ಶಬ್ದವೂ ರೂಢವಾಗಿರುವಂತೆ, ಮತ್ತು 'ನಾಯಕ' ಶಬ್ದವು 'ಅಧಿಕಾರಿ' ೂರೆ, ಎಂಬರ್ಥವನ್ನು ತೋರಿಸುವಂತೆ, ರಾಷ್ಟ್ರಕೂಟ ಶಬ್ದವೂ ನಾಡಿಗರಂತೆ ಅಧಿ ರಿವಾಚಕವಾಗಿರುತ್ತದೆಂದು ಹೇಳುತ್ತಾರೆ. ಡಾ. ಬುರ್ನೆಲ್ ಎಂಬವರು ರಾಷ್ಟ್ರ ೂಟರು ಈಗ ಕರ್ನಾಟಕದಲ್ಲಿ ಪ್ರಸಿದ್ಧವಾಗಿದ್ದ 'ರಡ್ಡಿ' ಕುಲದವರೆಂದೇ ಹೇಳು ುತ್ತಾರೆ. ಡಾ. ಫ್ಲೀಟರು ತಮ್ಮ ಕನ್ನಡ ಜಿಲ್ಲೆಗಳ 'ರಾಜವಂಶಾವಳಿಯಲ್ಲಿ' ದಕ್ಷಿಣ ಂದುಸ್ತಾನದಲ್ಲಿ ರಾಷ್ಟ್ರಕೂಟರ ಹೆಗ್ಗುರುತುಗಳು ಕಂಡುಬರುವದಿಲ್ಲಾದಕಾರಣ, ನರು ಮೂಲತಃ 'ಔತ್ತರಾಹ'ರೆಂದು ಅಭಿಪ್ರಾಯಪಡುತ್ತಾರೆ. ರಾಷ್ಟ್ರಕುಂಡ ಶಬ್ದವು ಷ್ಟ್ರಕೂಟದ ಅಪಭ್ರಂಶವೆಂದು 'ಶಿವಾನಂದ ಯೋಗೀಶ್ವರ'ನ ಮುಂಡಿ ವಂಶಾವಳಿ ುಲ್ಲಿ ಹೇಳಲ್ಪಟ್ಟಿದೆ. ರಾಷ್ಟ್ರಕೂಟರ ಉತ್ಪತ್ತಿಯು ಸಾಧಾರಣವಾಗಿ ಯದುಕುಲದಿಂದ ಂಟಾಯಿತೆಂದು ತಿಳಿಯಲ್ಪಡುತ್ತದೆ. ಅರ್ಥಾತ್ ಇವರು ಚಂದ್ರವಂಶದವರೆಂದು ೇಳಲ್ಪಡುತ್ತಾರೆ. ರಾಷ್ಟ್ರಕೂಟರು ಕರ್ನಾಟದಲ್ಲಿ ಆಳಿದ ಅರಸರಲ್ಲಿ ಪ್ರಖ್ಯಾತರಾ ನರು.

ಇವರ ರಾಜಧಾನಿ **ಮಳಖೇಡ** ಇದು ನಿಜಾಮನ ರಾಜ್ಯದಲ್ಲಿರುವದು. ಇದಕ್ಕೆ ಗ'ಮಾನ್ಯಖೇಟ'ವೆಂಬ ಹೆಸರಿತ್ತು. ಈ ಪಟ್ಟಣವನ್ನು ಯಾರು ಕಟ್ಟಿಸಿದರೆಂಬ ಬಗ್ಗೆ ಂಡಿತರಲ್ಲಿ ಮತಭೇದವಿರುತ್ತದೆ. ಡಾ. ಭಾಂಡಾರಕರರು ಡಾ. ಫ್ಲೀಟರು. ಇದನ್ನು ೃಪತುಂಗನೇ ಕಟ್ಟಿಸಿದನೆಂದು ಹೇಳುವರು. ಆದರೆ ಈ ಅಭಿಪ್ರಾಯವು ಸರಿಯಾದ ಲ್ಲ. ಇದನ್ನು ರಾವಬಾಹದ್ದೂರ ಚಿಂತಾಮಣರಾವ ವೈದ್ಯರು **ಅಕ್ಷೇಪಾರ್ಹ**ವೆಂದು ೇಳಿ **ಅಮೋಘ** ವರ್ಷನ **ತಂದೆಯಾದ** ಗೋವಿಂದನೇ **ಆ** ಪಟ್ಟಣದಲ್ಲಿ ತನ್ನ ಸ್ಥಾನ ನ್ನು ಮಾಡಿಕೊಂಡನೆಂದು ಹೇಳುತ್ತಾರೆ. ಪ್ರೊ. ಪಾಠಕರೂ ನೃಪತುಂಗನಿಗಿಂತ ಂದಲೇ ಈ ಪಟ್ಟಣವು ಇತ್ತೆಂದು ಹೇಳಿ ಡಾ. ಭಾಂಡಾರಕರರು ಮಾಡಿದ ಶ್ಲೋ ನ ಅರ್ಥವನ್ನು ಬೇರೆ ರೀತಿಯಾಗಿ ಮಾಡಿದ್ದಾರೆ. ಪಾಠಕರ ಅಭಿಪ್ರಾಯವೇನಂ ರೆ.

तत्सूनुराननृपो नृपतुंग देवः ।
सोऽभूत् स्वसैन्य मरभंगुरिता हिराजः ।
यो मान्यखेट ममरेंद्र पुरोपहासि ।
गीर्वाणगर्वमिव खर्वयितुं व्यधत्त ॥

His son, to whom kings bowed, and who tortured the king of pents by the neavy mass, was that lord ನೃಪತುಂಗ+

+ ವಿಷಯದ ಬಗ್ಗೆ ಕವಿರಾಜ ಮಾರ್ಗದ ಪಾಠಕರ ಇಂಗ್ಲಿಷ ಪ್ರಸ್ತಾವನೆ ಪುಟ ೧೦೨ನೇ ನೋಡಿರಿ.

ಇದು ಕರ್ಹಾಡ ದಾನಪತ್ರದಲ್ಲಿರುವ ಪದ್ಯವು. 'ಮಾನ್ಯಖೇಟಂ ಅಮರೇಂ
ಪುರೋಪಹಾಸಿವ್ಯಧತ್ತ' ಮಳಖೇಡವನ್ನು ಇಂದ್ರನ ಪಟ್ಟಣಕ್ಕೆ (ಅಮರಾವತಿ) ಉ
ಹಾಸ ಮಾಡುವಂತೆ ಮಾಡಿದನು. ಎಂದರೆ ಅರ್ಥವು ಸರಿಯಾಗಿ ಆಗುವದು. 'ವ್ಯಧತ್ತ
ಎಂದರೆ ಸ್ಥಾಪಿಸಿದನು, (founded) ಎಂದು ಭಾಂಡಾರಕರರು ಅರ್ಥಮಾಡಿ
ವದು ಸರಿಯಾಗಿ ಆಗುವದಿಲ್ಲ. ಆದುದರಿಂದ ನೃಪತುಂಗನಿಗಿಂತ ಮೊದಲೇ ಈ ಪಟ್ಟ
ನನ್ನು ಕಟ್ಟಿರಬೇಕು.

ರಾಷ್ಟ್ರಕೂಟದ ವಂಶದ ಏನೆಯ ಕರ್ಕರಾಜನ ದಾನಪತ್ರದಲ್ಲಿಯೂ, 'ಆಸ
ದಿಂದ್ರ ಪುರಾಧಿಕಂ ಪುರವರಂ ಶ್ರೀಮಾನ್ಯ ಖೇಟಾಭಿದಂ' ಎಂದು ಈ ಪಟ್ಟಣದ ಪ
ರಿಯು ದೇವತೆಗಳ ಒಡೆಯನ ಪಟ್ಟಣಕ್ಕಿಂತ ಹೆಚ್ಚಾಗಿತ್ತೆಂದು ವರ್ಣನೆಯಿರುವದು.
ಮ. ವಿನ್ಸೆಂಟ ಸ್ಮಿಥ್ಥರೂ, ರಾವಬಹದ್ದೂರ ಚಿಂತಾಮಣರಾಯರೂ ಈ ಅರಸ
ವಂಶಾವಳಿಯನ್ನು ತಮ್ಮ ಪುಸ್ತಕಗಳಲ್ಲಿ ಕೊಟ್ಟಿರುವರು. ವಂಶಾವಳಿಯನ್ನು ಕಡೆ
ಕೊಟ್ಟಿದ್ದೇವೆ. ಗನೆಯವನು ದಂತಿವರ್ಮನು, ಎರಡನೆಯವನು ಇಂದ್ರನು, ಅವ
ಮರಿಮಗನು ಮತ್ತೆ ಇಂದ್ರನು. ಈ ಇಂದ್ರರಾಜನ ಹೆಂಡತಿಯು ಚಾಲುಕ್ಯ ವಂಶ
ಳೆಂದು ತಿಳಿದು ಬರುತ್ತದೆ. ('ರಾಜ್ಞೀ ಸೋಮಾನ್ವಯಾ ತಸ್ಯ ಪಿತೃತಶ್ಚಶಾಲಿಕ್ಯಜಾ!
ಇಂದ್ರರಾಜನ ತರುವಾಯ ಚಾಲುಕ್ಯರೊಡನೆ ಸ್ನೇಹವು ಉಳಿಯಲಿಲ್ಲ, ರಾಷ್ಟ್ರಕೂಟ
ಉಪಲಬ್ಧವಾದ ಲೇಖಗಳಲ್ಲಿ ಸಾಮನಗಡ ತಾಮ್ರಪಟವೇ ಪ್ರಾಚೀನವಾದದ್ದು.
ಲೇಖವು ದಂತಿದುರ್ಗನ ಕಾಲದಲ್ಲಿ ಅಂದರೆ ೭೫೩ A. D. ಯಲ್ಲಿ ಬರೆಯಲ್ಪಟ್ಟ
ವದು. ದಂತಿದುರ್ಗನಿಗಿಂತ ಮೊದಲು ಮೂವರು ರಾಜರು ಆಗಿಹೋದರೆಂದ
ಒಬ್ಬರ ಕಾಲವನ್ನು ಸು. ೨೫ ವರುಷ ಹಿಡಿದರೆ ಗೋವಿಂದರಾಜನ ಕಾಲವು ಇ. ಸ
೬೬೦, ಇಂದ್ರರಾಜನ ಕಾಲವು ಇ. ಸ. ೬೮೫ ಆಗುವದೆಂದೂ ಚಿಂತಾಮಣರಾಯ
ಅಭಿಪ್ರಾಯವಿರುತ್ತದೆ.

+ ದಂತಿದುರ್ಗ ರಾಜ್ಯವು ನರ್ಮದೆಯಿಂದ ತುಂಗಭದ್ರೆಯವರೆಗೆ ಹಬ್ಬಿತ್ತು
ಇವನ ಮಗನಾದ ಯುವರಾಜ ಗೋವಿಂದನ ಆಲಾಸಲೇಬದಲ್ಲಿ ದಂತಿರಾಜನು ಕಾಂಚಿ
ಕೇರಲ, ಚೋಳ, ಶ್ರೀ ಹರ್ಷ, ವಜ್ರಟ ಮೊದಲಾದವರ ಮೇಲೆ ಪ್ರಭುತ್ವವನ್ನು ನಡೆ
ಸಿದ ಚಾಲಕ್ಯ ರಾಜ್ಯವನ್ನು ಗೆದ್ದನೆಂದು ಹೇಳಿದೆ. ಚಾಲುಕ್ಯ ಪರಾಭವದ ವರ್ಣನೆಯ
ಸಾಮನಗಡ ಲೇಖದಲ್ಲಿಯೂ ಇರುವದು. ದಂತಿರಾಜನು ಚಾಲುಕ್ಯಾಧಿಪತಿಯೂ
ವಲ್ಲಭ್ಯರಾಜನನ್ನು ಗೆದ್ದು 'ರಾಜಾಧಿರಾಜ ಪರಮೇಶ್ವರ'ನೆಂಬ ಬಿರುದನ್ನು ಪಡೆದನ

+ ಇವನು ಇಂದ್ರರಾಜ ಹಾಗು ಚಾಲುಕ್ಯಕುಲ ಪ್ರಸೂತೆಯಾದ ರಾಜ್ಞಿ (ಇಂದ್ರನ ಹೆಂಡತಿ) ಶೀ
ರೀವರ ಮಗನು.

ನಲ್ಲಭ ರಾಜನೆಂದರೆ ಚಾಲುಕ್ಯಕುಲದ ಕಡೆಯ ಅರಸನಾದ ಕೀರ್ತಿವರ್ಮನೇ ಎಂದು ವಿದ್ವಾಂಸರ ಅಭಿಪ್ರಾಯವಿರುವದು.

ದಂತಿ ವರ್ಮನನ್ನು ಅವನ ಕಕ್ಕನಾದ ಕೃಷ್ಣನು ಕೊಂದನೆಂದು ಹೇಳುತ್ತಾರೆ. ಬಡೋದೆಯ ದಾನಪತ್ರದಲ್ಲಿ ಇದಕ್ಕೆ ಸ್ವಲ್ಪವಾದರೂ ಆಧಾರವೂ ಸಿಗುವದು. ಕೃಷ್ಣ ರಾಜನು ಒಬ್ಬ ಅನ್ಯಾಯ ವರ್ತನೆಯುಳ್ಳ ಅಪ್ತನ ನಾಶವನ್ನು ಮಾಡಿ, ಪ್ರಜರ ಹಿತ ಕ್ಕೋಸ್ಕರ ರಾಜ್ಯದ ಸೂತ್ರಗಳನ್ನು ತನ್ನ ಕೈಯಲ್ಲಿ ತಕ್ಕೊಂಡನು. 'ವ್ಹಿನ್ಸೆಂಟ್‌ಸ್ಮಿಥ್' ಇವರು ತಮ್ಮ ಇತಿಹಾಸದ ಶಿಲಟನೇ ಪುಟದಲ್ಲಿ "Dantidurga, the Rastrakut, after his occupation of Vatapi (ಬಾದಾಮಿ) effected other conquests, but becoming unpopular was deposed by his uncle Krisna I." ಇವನು ಲೋಕಪ್ರೀಯನಾಗಿರಲಿಲ್ಲವೆಂದು ಹೇಳುವರು.

ರಾಜನು ಪ್ರಜಾರಂಜನಲಬ್ಧವರ್ಣನಾಗಿದ್ದರೇ ಅವನ ರಾಜ್ಯವು ಸುಖಾವಹ ವಾಗುವದು. ಹಾಗಿಲ್ಲದಿದ್ದರೆ ರಾಜನಿಗೆ ಆಪತ್ತಿ ಕಟ್ಟಿಟ್ಟಿರುವದು. ದಂತಿದುರ್ಗನು ಪರಾಕ್ರಮಿಯಾಗಿದ್ದರೂ ಪ್ರಜಾರಂಜನವನ್ನು ಮಾಡಲಿಲ್ಲವಾಗಿ ತೋರುವದು. ಆದು ದರಿಂದಲೇ ಅವನು ತನ್ನ ಕಕ್ಕನಾದ ಕೃಷ್ಣನಿಂದ ಪದಚ್ಯುತನಾಗಿ ನಾಶಮಾಡಿಸಲ್ಪಟ್ಟಿರಬೇಕು. ಈ ಗುಪ್ತ ಸಂಗತಿಯ ಉಲ್ಲೇಖವು ಸ್ಪಷ್ಟವಾಗಿ ತಾಮ್ರಪಟ್ಟದಲ್ಲಿಲ್ಲ. ರಾಜರೊಳಗಿನ ಹುಳುಕುಗಳನ್ನು ಮುಚ್ಚಿಡುವ ಪ್ರವೃತ್ತಿಯು ಸ್ವಾಭಾವಿಕವಾಗಿರುವದು.

ದಂತಿದುರ್ಗನ ತರವಾಯ ಬಂದ ಕೃಷ್ಣರಾಜನು ಚಾಲುಕ್ಯರನ್ನು ಮತ್ತೆ ಗೆದ್ದನು. ರಾಧನಪುರಲೇಖದಲ್ಲಿ ಚಾಲುಕ್ಯರ ವೈಭವವನ್ನು ಸ್ವಲ್ಪಕಾಲದಲ್ಲಿ ನಷ್ಟಪಡಿಸಿದನೆಂದು ಉಲ್ಲೇಖವಿರುವದು. ಪ್ರಸಿದ್ಧವಾದ ವೇರೂಳದ ಕೈಲಾಸೇಶ್ವರನ ಮಂದಿರವನ್ನು ಕಟ್ಟಿಸಿದವನು ಇವನೇ. ಎನೇ ಕರ್ಕ ರಾಜನ ದಾನಪತ್ರದಲ್ಲಿ 'ಕೃಷ್ಣರಾಜನ ಯಶಸ್ಸು ಹದಿನೆಂಟು ಆಲಯಗಳ ರೂಪದಿಂದ ಮೂರ್ತಿಮಂತವಾಗಿ ನಿಂತಿರುತ್ತಲೆ'ಂದು ವರ್ಣನೆಯಿರುವದು. * ಕರ್ಕರಾಜ ಮಹೀಪತಿಯ ದಾನಪತ್ರದಲ್ಲಿ ಇದರ ಸುಂದರವಾದ ವರ್ಣನೆಯಿರುವದು.

"ಏಲಾಪುರಾಚಲ ಗತಾದ್ಭುತ ಸನ್ನಿವೇಶಂ ।
ಯದ್ವೀಕ್ಷ್ಯ ವಿಸ್ಮಿತ ವಿಮಾನಚರಾಮರೇಂದ್ರಾಃ ॥

* ನಿರ್ಣಯಸಾಗರದಿಂದ ಮುದ್ರಿತವಾದ ಪ್ರಾಚೀನ ಲೇಖಮಾಲೆ ಪುಟ ೫೪

ತಸ್ಮಿನ್ನಪತ್ಯೇ ಚ ತಾಪಿತ್ಯಃ । ಪಿತೃಶ್ವೇವೋऽಭೂದಿಹ ಕೃಷ್ಣರಾಜಃ ॥
[illegible] । ಯೆನೌಕಸಾ ಶೈಲ ಗಣಾ ವಿಭಾಸ್ಮ ॥

ಏತತ್ ಸ್ವಯಂಭು, ಶಿವಧಾಮ, ನಕೃತ್ರಿಮೇಶ್ರೀಃ ।
ದೃಷ್ಟ್ವೇದೃಶೀತಿ ಸತತಂಬಹುಚರ್ಚಯಂತಿ ॥"

ಯಾವಕಾಲದಲ್ಲಿ ವಿಮಾನಚಾರಿಗಳಾದ ದೇವತೆಗಳು ಇದನ್ನು ನೋಡಿದರೋ ಆಶ್ಚರ್ಯದಿಂದ ಧಕ್ಕರಾಗಿ ಚರ್ಚಿಸ ಹತ್ತಿದರು. "ಈಶ್ವರ ಸತ್ತೆಯಿಂದ ಈ ಗುಡಿಯು ಸ್ವಯಂನಿರ್ಮಿತವಾಗಿರಬೇಕು; ಇಂತಹ ಮನೋಹರತ್ವವು ಮಾನವೀಯ ಕೃತಿಯಲ್ಲಿ ಎಲ್ಲಿಂದ ಬರಬೇಕು!" ಕೆಳಗಿನ ಪದ್ಯಗಳಾದರೂ ಕನ್ನಡಿಗರು ನೆನಪು ಇಡುವದಕ್ಕೆ ಯೋಗ್ಯವಾಗಿವೆ.

ಭೂಯಸ್ತಥಾ ವಿಧಕೃತೌ ವ್ಯವಸಾಯಹಾನಿಃ ।
ಏತನ್ಮಯಾ ಕಥನುಹೋಕೃತ ಮಿತ್ಯಕಸ್ಮಾತ್ ॥
ಕರ್ತಾಪಿಯಸ್ಯಖಲು ವಿಸ್ಮಯಮೂಪಶಿಲ್ಪೀ ।
ತನ್ನಾಮ ಕೀರ್ತನಮಕಾರ್ಯತಯೇನರಾಜ್ಞಾ ॥

ಈ ಮಂದಿರವನ್ನು ವಿರಚಿಸಿದ ಶಿಲ್ಪಿಯೇ ತಾನು, ಇದನ್ನು ತಾನೇ ಹೇಗೆ ನಿರ್ಮಿಸಿದೆನೆಂದು ನೋಡಿ ಆಶ್ಚರ್ಯಪಟ್ಟನಂತೆ, ಆ ಶಿಲ್ಪಿಯು ಸನ್ಮಾನವನ್ನು ಕೃಷ್ಣರಾಜನು ಯೋಗ್ಯವಾಗಿ ಮಾಡಿದನು.

"ಗಂಗಾಪ್ರವಾಹ, ಹಿಮುದೀಧಿತಿ ಕಾಲಕೂಟೈಃ ।
ಅತ್ಯದ್ಭುತಾಭರಣಕೈಃ ಕೃತ ಮಂಡನೋಪಿ ॥
ಮಾಣಿಕ್ಯ ಕಾಂಚನಪುರಃಸರಸರ್ವಭೂತ್ಯಾ ।
ತತ್ರಸ್ಥಿತಃ ಪುನರ ಭೂಷ್ಯತಯೇನ ಶಂಭುಃ ॥"

ಶುಭ್ರವಾದ ಗಂಗೆಯ ನಿರ್ಮಲವಾದ ಪ್ರವಾಹವು, ಚಂದಿರನು, ಕಾಲಕೂಟವು ಮೊದಲಾದ ಅಲಂಕಾರಗಳಿಂದ ಈಶ್ವರನು ಅಲಂಕೃತನಾಗಿದ್ದರೂ ಮತ್ತೆ ಅವನು (ಶಿವನು) ಕೃಷ್ಣರಾಜನಿಂದ ರತ್ನಗಳು, ಸೌವರ್ಣಾಲಂಕಾರಗಳು ಇವುಗಳಿಂದ ಪುನಃ ಭೂಷಿಸಲ್ಪಟ್ಟನು.

ಗತವೈಭವದ ದರಿದ್ರ ಕರ್ನಾಟಕಕ್ಕೆ ಇದೀಗ ಅತಿಶಯೋಕ್ತಿ ತೋರಿದರೂ, ಕನ್ನಡಿಗರ ಮೊದಲಿನ ಐಸಿರಿಯನ್ನು ನೆನಿಸಿಕೊಂಡರೆ ಇದೇನು ಅತಿಶಯೋಕ್ತಿಯಲ್ಲ; ವಾಸ್ತವಿಕವಾದ ಸಂಗತಿಯ ಯಥಾರ್ಥವಾದ ಚಿತ್ರವೇ ಎಂದು ತೋರದಿರಲಾರದು.

ನೇರೂಳವು ನಿಜಾನು ಇಲಾಖೆಯಲ್ಲಿ ಕನ್ನಡವೆಂಬ ತಾಲೂಕಿನಲ್ಲಿರುವದು. (N· bat ·2ಃ-2′ long 75°-14′) ಬಂಡೆಗಲ್ಲಿನಲ್ಲಿ ಕೊರೆದ ಗುಡಿಗಳಲ್ಲಿದು ಅತ್ಯಂತ ಸೌಂದರ್ಯದಿಂದ ತುಂಬಿ ತುಳುಕುವದು. ಡಾ. ಬುರ್ಗೆಸ್ ಎಂಬವರೂ, ಮಿ. ಫರ್ಗ

ಸನ್ ಎಂಬವರೂ ಇದನ್ನು ಅಧಿಕಾರಯುಕ್ತವಾಣಿಯಿಂದ ಬಣ್ಣಿಸಿದ್ದಾರೆ. ಮಹಾಶಯರಾದ ಆಲೂರ ಇವರು ತಮ್ಮ ಗತವೈಭವದಲ್ಲಿ ಗುಡಿಗಳ ಸಾಲಿನಲ್ಲಿರುವ ಒಂದು ಗುಡಿಯಲ್ಲಿ ಒಂದು ಕನ್ನಡ ಶಿಲಾಲೇಖವು ತಮ್ಮ ಕಣ್ಣಿಗೆ ಬಿತ್ತೆಂದು * ಬರೆದಿರುವರು. ಅದನ್ನು ಅವರು ತಕ್ಕೊಂಡು ಮುದ್ರಿಸಿದ್ದರೆ, ಕನ್ನಡ ನಾಡಿಗೆ ಉಪಕಾರವಾಗುತ್ತಿತ್ತು.

ಈ ಶುಭ ತುಂಗನ ತುರಂಗಮಗಳು ಎಬ್ಬಿಸಿದ ಧೂಳಿಯಿಂದ ಗ್ರೀಷ್ಮಕಾಲವೂ ಕೂಡ ವರ್ಷಾಕಾಲದಂತೆ ಭಾಸವಾಗುತ್ತಿತ್ತಂತೆ. ಇವನು ಭುಜಬಲದ ಸೊಕ್ಕಿನಿಂದ ಉಬ್ಬಿದ ರಾಹಪ್ಪನನ್ನು ಸಮರದಲ್ಲಿ ಗೆದ್ದು ರಾಜಾಧಿರಾಜ ಪರಮೇಶ್ವರತ್ವವನ್ನು ಪಡೆದನು. †

ಕೃಷ್ಣರಾಜನ ತರುವಾಯ ಅವನ ಮಗನಾದ ೨ನೇ ಗೋವಿಂದನು ಪಟ್ಟಕ್ಕೆ ಬಂದನು. ಕೆಲವು ತಾಮ್ರ ಪಟ್ಟಗಳಲ್ಲಿ ಇವನ ಹೆಸರಿನ ಉಲ್ಲೇಖವಿಲ್ಲ. ಇವನು ಅಷ್ಟು ಪರಾಕ್ರಮಿಯಾಗಿರಲಿಲ್ಲವೆಂದು ಕೆಲವರು ಹೇಳುತ್ತಾರೆ, 'ಅನೇಕಾವಹ ಲಬ್ಧಕೀರ್ತಿಃ' ಎಂದು ಅನೇಕ ಯುದ್ಧಗಳಲ್ಲಿ ಯಶಸ್ಸನ್ನು ಪಡೆದಿದ್ದಾನೆ ಎಂದು ದ್ವಿತೀಯ ಕರ್ಕರಾಜನ ದಾನ ಪತ್ರದಲ್ಲಿ ಉಲ್ಲಿಖಿತವಾಗಿರುವದು. ವರ್ಧಾಪಟ್ಟದಲ್ಲಿ ವ. ತ್ರ ಇವನು ವಿಷಯಲೋಲುಪನಾಗಿದ್ದರಿಂದ ರಾಜ್ಯವ್ಯವಸ್ಥೆಯ ಕಡೆಗೆ ಲಕ್ಷವನ್ನು ಕೊಡದೆ ತನ್ನ ತಮ್ಮನ ಕಡೆಗೆ ರಾಜ್ಯಕಾರಭಾರವನ್ನು ಒಪ್ಪಿಸಿ ವಿಷಯ ಸೌಖ್ಯದಲ್ಲಿ ಮಗ್ನನಾಗಿರುತ್ತಿದ್ದನೆಂದು ಬರೆಯಲ್ಪಟ್ಟಿರುವದು. ಡಿಂಡೋರಿ ರಾಧನಪುರ ಲೇಗಳಲ್ಲಿ ಇವನ ತಮ್ಮನು ಇವನನ್ನು ಪದಚ್ಯುತವಾಗಿ ಮಾಡಿದನೆಂಬ ಗರ್ಭಿತಾರ್ಥವು ಹೊರಡುವದು. ಇವನು ವಿಷಯಲೋಲುಪನಾಗಿದ್ದರೂ ಇರಬಹುದು. ಪರಾಕ್ರಮಿಯಾಗಿರಲಿಲ್ಲವೆಂಬ ಮಾತು ಅಷ್ಟು ಸತ್ಯವಾಗಿ ತೋರುವದಿಲ್ಲ. ೪ನೇ ಗೋವಿಂದನ ದಾನಪತ್ರದಲ್ಲಿಯೂ ಈ ೨ನೇ ಗೋವಿಂದನು ಪರಾಕ್ರಮಿಯಾಗಿದ್ದನೆಂದೇ ಬರೆಯಲ್ಪಟ್ಟಿರುವದು.

"तस्माद्गोविन्दराजोभूत् इंदुर्विंध्यशिलातले"
यस्यारि क्ष्मापमाकः प्रशस्तिरिव लक्ष्यते ॥

ಶತ್ರುಗಳನ್ನು ಸುಡುವದರಿಂದ ಉಂಟಾದ ಹೊಗೆಯ ಅಂಕನವು ಚಂದ್ರಬಿಂಬವೆಂಬ ಶಿಲಾತಳದಲ್ಲಿ ಕುಳಿತದ್ದರಿಂದಲೇ ಅದು ಕಪ್ಪಾಗಿ ತೋರುವದೆಂದು ಇವನ ಪರಾ

* ೫೬ ನೇ ನಂಬರಿನ ಮೇಣಬಸ್ತಿಯ ಕಂಬದ ಮೇಲೆ ಕನ್ನಡ ಅಕ್ಷರದ ಶಿಲಾಲಿಪಿಯೊಂದು ನಮ್ಮ ಕಣ್ಣಿಗೆ ಬಿದ್ದಿತು. ಆಗ ನಮಗಾದ ಆನಂದವನ್ನು ಬಣ್ಣಿಸಲಳವಲ್ಲ. ವೆಂಕಟೂವ್ ಆಲೂರ ಇವರ ಗತವೈಭವ ಪುಟ ೨೦

† ಪ್ರಾಚೀನ ಲೇಖನಮಾಲೆ ೧೧ನೇ ಪುಟ

ಕ್ರಮವು ಉತ್ಕೃಷ್ಟತೆಯಿಂದ ಬಣ್ಣಿಸಲ್ಪಟ್ಟಿರುವದು. ಪ್ರಾಚೀನ ಲೇಖನಮಾಲೆಯ ಗಗನೇ ಪುಟದಲ್ಲಿ ಇವನಿಗೆ ಕೊಟ್ಟ ಕ್ಷಣರಣದಲಿ ತಾರಾತ್ರಿ ನುತ್ಕೋಭ ಕುಂಭಕ್ತಿಃ ಎಂಬ ವಿಶೇಷಣವು ಇವನ ಪರಾಕ್ರಮವನ್ನೇ ವ್ಯಕ್ತಪಡಿಸುತ್ತದೆ. ಇವನು ಸುಮಾರು ೯-೧೦ ವರುಷಗಳ ರಾಜ್ಯವಾಳಿರಬೇಕೆಂದು ಹ್ವಿನ್ಸೆಂಟಸ್ಮಿಥ್ಥರು ಹೇಳುತ್ತಾರೆ.

ಇವನ ತರುವಾಯ ಇವನ ತಮ್ಮನಾದ ಧ್ರುವನು ಪಟ್ಟಕ್ಕೆ ಬಂದನು. ಇವನು ರಾಜ್ಯಕಾರಭಾರದಲ್ಲಿ ಚತುರನೂ ವೀರನೂ ಆಗಿದ್ದನು. ಇವನಿಗೆ ನಿರುಪಮ, ಧೋರ, ಕಲಿವಲ್ಲಭ ಎಂಬ ಬೇರೆ ಹೆಸರುಗಳಿದ್ದವು. ಇವನು ಗಂಗರಾಜನನ್ನು ಗೆದ್ದು * ಸೆರೆಮನೆಯಲ್ಲಿಟ್ಟನು * ಗೌಡ (ಬಂಗಾಲ) ರಾಜನನ್ನು ಸೋಲಿಸಿ ಮದಾಂಧನಾದ ಪಶ್ಚಿಮ ದೇಶದ ವತ್ಸರಾಜನನ್ನು (ಧ್ರುವನು) ಸೋಲಿಸಿ ಮರು ಪ್ರದೇಶದ ಕಡೆಗೆ ಓಡಿಸಿ ಬಿಟ್ಟನು. ಅವನು ಗೌಡನಿಂದ ಕಸಿದುಕೊಂಡ ರಾಜಛತ್ರಗಳನ್ನು ಕಸಿದುಕೊಂಡನು, ಇವನು ದಕ್ಷಿಣದ ಪಲ್ಲವ ರಾಜನನ್ನೂ ಗೆದ್ದನು ಇವನು ಮಹಾನುಭಾವನೂ ಅಪ್ರತಿಹತ ಪ್ರತಾಪನೂ ಎಲ್ಲ ನರೆಂಪ್ರಮುಂಡಲದ ಸಮಾಚಾರವನ್ನು ತಕ್ಕೊಂಡವನೂ ಬಾಲಾರ್ಕನಂತೆ ಶರೀರಕಾಂತಿಯುಳ್ಳವನೂ ಆಗಿದ್ದನೆಂದು ತಿಳಿದುಬರುವದು. ಇವನ ಆಳಿಕೆಯು ಪ್ರಜರಿಗೆ ಒಳ್ಳೇ ಸಂತುಷ್ಟಿಯನ್ನು ಮಾಡಿತು. ಇವನು 'ಯನ್ಮುದ್ರ ಯಾಂಬುಧಿರಪಿ ಪ್ರಥಿತಃ ಸಮುದ್ರಃ' ಎಂದು ಹೊಗಳಿಸಿಕೊಂಡನು.

ಧ್ರುವನ ತರುವಾಯ ಅವನ ಮಗನಾದ ೩ನೇ ಗೋವಿಂದನು ಪಟ್ಟವೇರಿದನು "Govinda III. son of Druva, may justly claim to be the most remarkable prince of his vigorous danasty". ಎಂದು ಇವನ ಬಗ್ಗೆ ವ್ಹಿ. ಎ. ಸ್ಮಿಥರು ಉದ್ಗಾರತೆಗೆದಿರುವರು. ಇವನಿಗೆ ಜಗತ್ತುಂಗನೆಂಬ ಹೆಸರು ಇತ್ತು. ವಣೇ ದಿಂಡೋರಿ ರಾಧನಪುರ ತಾಮ್ರಶಾಸನಗಳನ್ನು ಶಕೆ ೭೩೦ (ಅಂಲA. D.) ಯಲ್ಲಿ ಇವನೇ ಬರೆಯಿಸಿದನು. ರಾಷ್ಟ್ರಕೂಟರಲ್ಲಿ ಒಳ್ಳೇ ಶೌರ್ಯದಿಂದ

* ಮೇಹರ್ಬಾನ ರೈಸ ಸಾಹೇಬರು ಭಾಂಡಾರಕರ ಸ್ಮೃತಿನಿಬಂಧಾವತಿಯಲ್ಲಿ ಗಂಗರ ಬಗ್ಗೆ ಬರೆದ ಲೇಖದಲ್ಲಿ ರಾಷ್ಟ್ರಕೂಟರಾಜನಾದ ಧ್ರುವನಿರುಪಮ ಅಥವಾ ಧಾರಾವರ್ಷನ ಮಗನಾದ ಕಾಂಭರಸನು [ಕಂಬಯ್ಯ] ರಣಾವಲೋಕನೆಂಬ ಬಿರುದನ್ನು ಧರಿಸಿ ಗಂಗರಾಜ್ಯವನ್ನು ರಾಷ್ಟ್ರಕೂಟರ ಪ್ರತಿನಿಧಿಯಂತೆ ಆಳಿದನೆಂದು ಹೇಳುತ್ತಾರೆ.

* ಶ್ರೀ ಮಾನ್ ವಿದ್ವದ್ವರ್ಯ ಆರ್ ನರಸಿಂಹಾಚಾರ್ಯರು ಮಿಥಿಕ್ ಸೊಸಾಯಿಟಿ ಕ್ವಾರ್ಟರ್ಲಿ ಜರ್ನಲ್ಲಿನಲ್ಲಿ [೧೯೨೧ ಅಕ್ಟೋಬರ್] ತಳಕಾಡಿನ ಪತ್ತಿವು ಗಂಗರ ಬಗ್ಗೆ ಬರೆದಾಗ ಶ್ರೀಪುರುಷನ ಆಳಿಕೆಯಲ್ಲಿ ರಾಷ್ಟ್ರಕೂಟ ರಾಜನಾದ ಧ್ರುವನು ಗಂಗವಾಡಿಯ ಮೇಲೆ ಬಿದ್ದು ಶ್ರೀಪುರುಷನ ಮಗನಾದ ಶಿವಮಾರನನ್ನು ಸೆರೆಹಿಡಿದು ತನ್ನ ಮಗನಾದ ಕಂಬನನ್ನು ಗಂಗವಾಡಿಗೆ ರಾಜ್ಯಪ್ರತಿನಿಧಿಯನ್ನಾಗಿ ನಿಯಮಿಸಿದನು ಶಿವಮಾರನು ತನ್ನ ಆಳಿಕೆಯಲ್ಲಿ ಅನೇಕ ವಿಪತ್ತುಗಳನ್ನು ಅನುಭವಿಸಿದನು. ಅವನನ್ನು ರಾಷ್ಟ್ರಕೂಟರು ಎರಡುಸಾರಿ ಸೆರೆಹಾಕಿ ಅವಮಾನಕರವಾದ ಮಾಡಲಿಕ ಪದವಿಗೆ ಇಳಿಸಿದರೆಂದು ಬರೆಯುತ್ತಾರೆ.

ಸಿರಿದ ಅರಸನು ಇವನೇ. ಧ್ರುವರಾಜನು ಗೋವಿಂದನ ಅನುಪಮಗುಣಗಳನ್ನು ನೋಡಿ ಸಾಮ್ರಾಜ್ಯದ ಸರ್ವಾಧಿಕಾರವನ್ನು ಅವನಿಗೆ ಒಪ್ಪಿಸಿದನೆಂದು ಕಾವೀ ಲೇಖದಲ್ಲಿ ಹೇಳಿದೆ. ಇವನ ಅಧಿಕಾರವು ವಿಂಧ್ಯ ಮೂಳವಾದಿಂದೆ ದಕ್ಷಿಣಕ್ಕೆ ಕಾಂಚಿಯವರೆಗೆ ಹಬ್ಬಿತ್ತು. ಪ್ರತ್ಯಕ್ಷವಾಗಿ ತುಂಗಭದ್ರೆಯವರೆಗೆ ಆಳಿದನು ಇವನು ತನ್ನ ತಮ್ಮನಾದ ಇಂದ್ರರಾಜನನ್ನು ದಕ್ಷಿಣ ಗುಜರಾತದ ಅಂದರೆ ಲಾಟದೇಶದ ವ್ಹಾಯಿಸರಾಯ (ಪ್ರತಿನಿಧಿ) ನನ್ನಾಗಿ ನೆಡಿದನು.

ಮೊದಲು ಗೋವಿಂದರಾಜನ ಬಗ್ಗೆ ಮಾತ್ಸರ್ಯಪಟ್ಟು ಅವನ ಬಂಧುಗಳೂ, ಶತ್ರುಗಳೂ ಒಟ್ಟು ೧೨ ರಾಜರು ಕೂಡಿ ಗುಪ್ತಕಾರಸ್ಥಾನವನ್ನು ನಡೆಯಿಸಿ, ಅವನ ವಿರುದ್ಧವಾಗಿ ಬಂಡು ಎಬ್ಬಿಸಿದರು. ಗೋವಿಂದನು ಆಂಜದೆ, ಧೈರ್ಯದಿಂದ ಅವರ ತಲೆಲ್ಲ ಮುರಿದು ಮೂಲಿಗೊತ್ತಿದನು. ಗಂಗರಾಜನಾದ ಶಿವಮಾರನು ತನ್ನ ಕಳೆದ ಸ್ವಾತಂತ್ರ್ಯವನ್ನು ಪುನಃ ಪಡೆಯಲೋಸುಗ ಇವನೊಡನೆ ತುಮಕೂರ ಜಿಲ್ಲೆಯ ಕಾಗೆ ಪಲೆಯೂರು ಎಂಬಲ್ಲಿಯ ಕಾಳಗದ ಕಣದಲ್ಲಿ ಇದಿರಾಗಿ ಮಡಿದುಹೋದನೆಂದು ನರಸಿಂಹಾಚಾರ್ಯರ ಬರಹದಿಂದ ತಿಳಿದು ಬರುವದು.

ಇವನು ಗುಜರಾಥ ಪತಿಯ ಮೇಲೆ ದಂಡೆತ್ತಿ ಹೋಗುವ ಸಿದ್ಧತೆಯನ್ನು ಮಾಡಲು, ಅದನ್ನು ಕೇಳಿ ಅವನು ಉತ್ತರಕ್ಕೆ ಓಡಿಹೋದನು. ಮೂಳವಾದ ಒಡೆಯನಿಗೆ ತನ್ನ ಸಾರ್ವಭೌಮತ್ವವನ್ನು ಒಡಂಬಡಲಿಕ್ಕೆ ಹಚ್ಚಿದನು. ಬಳಿಕ ವಿಂಧ್ಯಾದ್ರಿಯ ಕಡೆಗೆ ತಿರುಗಿದನು. ಮಾರಶರ್ವನು ಕೂಡಲೆ ಅವನಿಗೆ ಶರಣಾಗತನಾದನು. ಅವನು ಗೋವಿಂದರಾಜನಿಗೆ ಬೆಲೆಯುಳ್ಳ ಕಾಣಿಕೆಯನ್ನು ಅರ್ಪಿಸಿದನು. ಮಳೆಗಾಲವಾರಂಭವಾದ್ದರಿಂದ ೪ ತಿಂಗಳವರೆಗೆ ಶ್ರೀಭವನ (ಮಳಖೇಡ)ದಲ್ಲಿ ನಿಂತುಕೊಂಡನು. ಮಳೆಗಾಲವು ತೀರಿದ ಬಳಿಕ ತುಂಗಭದ್ರೆಯ ಕಡೆಗೆ ಸಾಗಿ ಪುನಃ ಪಲ್ಲವರಾಜನನ್ನು ಪಾದಾಕ್ರಾಂತ ಮಾಡಿದನು. ವೆಂಗಿರಾಜನ ಕಡೆಯಿಂದ ಒಂದು ಪಟ್ಟಣದ ತಟವನ್ನು ಕಟ್ಟಿಕೊಡಲು ಒಪ್ಪುವಂತೆ ಮಾಡಿದನು. ಇವನ ಬಿರುದು ಪ್ರಭೂತ ವರ್ಷ (ವಿಪುಲವಾಗಿ ನುಳಿಗರೆಯುವವನು) ಎಂದು ಇರುವದು.*

ಇವನು ತ್ಯಾಗಿಯೂ, ಪರಾಕ್ರಮಧನನೂ, ಪ್ರಕಟಪ್ರತಾಪಿಯೂ, ಆಗಿದ್ದನು. ಇವನ ವೈರಿಗಳು ಕಾಂತಿಹೀನರಾದರೆಂಬ ಭಾವವನ್ನು ಕವಿಯು ಚನ್ನಾಗಿ ಬಣ್ಣಿಸಿದ್ದಾನೆ—

* ದಿಂಡೋರಿ ರಾಧನಪುರ ಲೇಖಗಳನ್ನು ಬರೆಯಿಸಿದವನು ಇವನೇ. ಈ ಲೇಖಗಳು ಮಯೂರಖಂಡಿಯಲ್ಲಿ ಬರೆಯಲ್ಪಟ್ಟವಂತೆ. ರಾಷ್ಟ್ರಕೂಟರ ಮೊದಲಿನ ರಾಜಧಾನಿ ಇದೇ ಮಯೂರಖಂಡಿ (ನಾಸಿಕದ ಪಶ್ಚಿಮ ಮೋರಖಡೆ ಗುಡ್ಡದ ಕಿಲ್ಲೆ) ಎಂದು ಚಿಂತಾಮಣಿರಾಯರ ಅಭಿಪ್ರಾಯವಿರುವದು. ಆದರೆ ರಾಷ್ಟ್ರಕೂಟರು ಮಹಾರಾಷ್ಟ್ರದವರೇ ಎಂದು ಅವರು ಹೇಳುವ ಮಾತನ್ನು ನಾವು ಒಪ್ಪುವದಿಲ್ಲ. ಗೋವಿಂದನ ಮಗ ನೃಪತುಂಗನೇ ಕವಿರಾಜಮಾರ್ಗದಲ್ಲಿ ಕನ್ನಡ ಗ್ರಂಥದಲ್ಲಿ ಕನ್ನಡ ನಾಡು ಆಗ ಕಾವೇರಿಯಿಂದ ಗೋದಾವರೀ ವರೆಗೆ ಇತ್ತೆಂದು ಸ್ಪಷ್ಟವಾಗಿ ಹೇಳಿರುವನು.

(गतयौवन वनिता जन कुवलदृशः यस्य (ಗೋವಿಂದನ) वैरिनृपाः ॥)

ಒಳಿಕ ಇವನ ಮಗನಾದ ನೃಪತುಂಗನು. ಅಥವಾ ಅಮೋಘವರ್ಷನು (ಸಫಲವಾದ ವೃಷ್ಟಿಯನ್ನು ಮಾಡುವವನು). ಪಟ್ಟವೇರಿದನು. ಇವನಿಗೆ ಅತಿಶಯಧವಳ ಲಕ್ಷ್ಮೀವಲ್ಲಭ, ಕೃತಕೃತ್ಯ ಮಲ್ಲವಲ್ಲಭ, ನರಲೋಕಚಂದ್ರ, ನಿತ್ಯವಲ್ಲಭ, ಸರಸ್ವತಿ ತೀರ್ಥಾವತಾರ, ಮೊದಲಾದ ಬಿರುದುಗಳು ಇದ್ದವು. ಇವನು ೮೧೪ ರಿಂದ ೮೭೭ ವರೆಗೆ ೬೩ ವರ್ಷ, ರಾಜ್ಯಭಾರ ಮಾಡಿದನು.

(ಅಪೂರ್ಣ).

ಪ್ರಕಟನೆ ೧.

ಮೈ॥ ಎ. ಇ. ದ. ಭಾ. ರವರ ಪತ್ರನಂ. 47/P. 9029 ತಾ॥18–2–1927 ನೇದ್ದರ ಪ್ರಕಾರ ಮಂಜೂರಾದ ಪುಸ್ತಕಗಳು.

ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂಜೂರಾಗಿವೆ.
೧	ವಿದ್ಯಾದಾಯನಿ (ಮಾಸಪತ್ರಿಕೆ)	ಜಿ. ಹನುಮಂತರಾವ ಎಡಿಟರ ವಿದ್ಯಾದಾಯನಿ ಆಫಿಸ ಮೈಸೂರ	೧– ೮–೦	ಪ್ರಾಥಮಿಕ ಶಾಲೆಗಳ ಲಾಯಬ್ರರಿಗಳಿಗೋಸ್ಕರ
೨	ಅಂಕಗಣಿತ ಭಾಗ ೨	ಟಿ. ಯನ್. ಅಮ್ಮಿನ ಭಾವಿ, ಧಾರವಾಡ	೦– ೪–೦	ಪ್ರಾಥಮಿಕ ಶಾಲೆಗಳ ಶಿಕ್ಷಕರ ಲಾಯಬ್ರರಿಗೋಸ್ಕರ
೩	ಶಿಕ್ಷಣಸಾರ	ಸದರ	೦–೧೦–೦	ಸದರ

H. A. Sadarangani,

Ag. E. I. S. D. Dharwar.

ಪ್ರಕಟನೆ ೨.

ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯು.

ನಂ. S-62 (G)-35-D

ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಗೆ ೧೯೨೭ನೇ ಇ. ಯಿಂದ ಇತಿಹಾಸವು ಆವ ಕ ವಿಷಯವೆಂದು ತಿಳಿಯತಕ್ಕದ್ದು. ಆದರೆ ೧೯೨೬ನೇ ಇ. ಯಲ್ಲಿ ಆದ ಪರೀಕ್ಷೆ ಂದ ೧೯೨೭ನೇ ಇ. ಯಲ್ಲಿ ಆಗುವ ಪರೀಕ್ಷೆಯವರಿಗೆ ಅವಧಿಯು ಅಲ್ಪವಿರುವದ ಂದ ೧೯೨೭ನೇ ಇ. ಯ ಪರೀಕ್ಷೆಗೆ ಮಾತ್ರ ಇತಿಹಾಸವು ಐಚ್ಛಿಕ ವಿಷಯದಂತೆ ತಿಳಿ ಯತಕ್ಕದ್ದೆಂದು ಸರಕಾರದ ಮಂಜೂರಿಯಿಂದ ಗೊತ್ತುಪಡಿಸಿದೆ. ಆದ್ದರಿಂದ ಉಮೇ ವಾರರು ೧೯೨೭ನೇ ಇ. ಯ ಪರೀಕ್ಷೆಗೆ ಇತಿಹಾಸ, ಪ್ರಕೃತಿವಿಮರ್ಶೆ, ಡ್ರಾಯಿಂಗ, ಾಯನ ಇವುಗಳಲ್ಲಿ ಒಂದನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಳ್ಳತಕ್ಕದ್ದು. ಎರಡು ಷಯಗಳನ್ನು ಸಹ ತೆಗೆದುಕೊಳ್ಳಬಹುದು.

೨ ಈ ತರಾವು ಸಿಂಧ ಪ್ರಾಂತಕ್ಕೆ ಲಾಗು ಇರುವದಿಲ್ಲ. ಯಾಕಂದರೆ ಅಲ್ಲಿ ತಿಹಾಸವು ೧೯೨೭ನೇ ಇ. ಯ ಪರೀಕ್ಷೆಗೂ ಅದರ ಮುಂದೆಯೂ ಆವಶ್ಯಕ ವಿಷಯ ಂತೆ ತಿಳಿಯತಕ್ಕದ್ದೆಂದು ಈ ಮೊದಲೇ ಪ್ರಸಿದ್ಧಪಡಿಸಿರುತ್ತದೆ.

೩ ೧೯೨೮ನೇ ಇ. ಯ ಪರೀಕ್ಷೆಗೂ ಅದರ ಮುಂದಿನ ಪರೀಕ್ಷೆಗಳಿಗೂ ುಮೇದವಾರರು ಪ್ರಕೃತಿವಿಮರ್ಶೆ, ಡ್ರಾಯಿಂಗ, ಗಾಯನ ಇವುಗಳಲ್ಲೊಂದನ್ನು ಚ್ಛಿಕ ವಿಷಯವನ್ನಾಗಿ ತೆಗೆದುಕೊಳ್ಳತಕ್ಕದ್ದು. ಎರಡು ವಿಷಯಗಳನ್ನು ಸಹ ತೆಗೆದು ೊಳ್ಳಬಹುದು.

ಪುಣೆ
೧೫ನೇ ಫೆಬ್ರುವರಿ ೧೯೨೭. } ಸಹಿ ವ್ಹಿ. ಬಿ. ಜೋಗಳೇಕರ.
ಡಾ. ಪ. ಇ. ರವರ ವತಿಯಿಂದ

ಪ್ರಕಟನೆ ೩.

ಹೆಣ್ಣು ಮಕ್ಕಳ (ಕನ್ನಡ, ಮರಾಠಿ, ಉರ್ದು) ಪ್ರಾ. ಪರೀಕ್ಷೆಯ ಕಾರ್ಯಕ್ರಮವು.

ತಾರೀಖು.	ವೇಳೆ. ಎಲ್ಲಿಂದ	ವೇಳೆ. ಎಲ್ಲಿಯವರೆಗೆ	ವಿಷಯ.	ಶರಾ.
ಸೋಮವಾರ	೧೦— ೦	೧೧— ೦	ಉಮೇದವಾರರ ಹೆಸರುದಾಖಲ ಮಾಡುವದು.	ಭಾಷಾ ವಿಷಯದ ತೋಂಡೀ ಪರೀಕ್ಷೆಯು ಲೇಖೀ ಪರೀಕ್ಷೆಯು ನಡೆದಾಗಲೇ ತೆಗೆದುಕೊಳ್ಳಲ್ಪಡುವದು.
೨೫—೪—೧೯೨೭	೧೧—೩೦	೨—೩೦	ಭಾಷಾವಿಷಯ	
	೩— ೦	೫— ೦	ನಿಬಂಧ ಮತ್ತು ಶುದ್ಧ ಬರಹ	
ಮಂಗಳವಾರ	೧೧— ೦	೨— ೦	ಗಣಿತ ಮತ್ತು ಜಮಾಖರ್ಚು	
೨೬—೪—೧೯೨೭	೩— ೦	೫— ೦	ಭೂಗೋಲ	ಉಮೇದವಾರರು ಐಚ್ಛಿಕ ವಿಷಯಗಳಲ್ಲಿ ಒಂದನ್ನು ತೆಗೆದುಕೊಳ್ಳಲಿಕ್ಕೇ ಬೇಕು. ಎರಡು ವಿಷಯಗಳನ್ನು ತೆಗೆದುಕೊಳ್ಳಲಿಕ್ಕೂ ಬರುವದು.
ಬುಧವಾರ	೧೧— ೦	೧— ೦	ಆರೋಗ್ಯ ಶಾಸ್ತ್ರ	
೨೭—೪—೧೯೨೭	೨— ೦	೪— ೦	ಇತಿಹಾಸ (ಐಚ್ಛಿಕ)	
ಗುರುವಾರ	೧೧— ೦	೨— ೦	ಹೊಲಿಗೆ (ಅ), (ಬ) ಮತ್ತು (ಕ)	
೨೮—೪—೧೯೨೭	೩— ೦	೫— ೦	ಡ್ರಾಯಿಂಗ (ಐಚ್ಛಿಕ)	
ಶುಕ್ರವಾರ	ಮುಂಜಾನೆ			
೨೯—೪—೧೯೨೭	೮— ೦	೧೦— ೦	ಪ್ರಕೃತಿವಿಮರ್ಶೆ (ಐಚ್ಛಿಕ)	
	ಮಧ್ಯಾಹ್ನ			
	೩— ೦	೫—೩೦	ಗಾಯನ (ಐಚ್ಛಿಕ)	

ಕನ್ನಡ

ಶಾಲಾಪತ್ರಿಕ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬೩ | ಮಾರ್ಚ ೧೯೨೭. | ಸಂ. ೧೨.

ಪ್ರಾಥಮಿಕ ಶಿಕ್ಷಣದಬಗ್ಗೆ ಕೆಲವು ವಿಚಾರಗಳು

ಎಲ್ಲ ಉದ್ಯೋಗಗಳಲ್ಲಿ ಶಿಕ್ಷಣವೇ ಮಿಗಿಲಾದ ಹೋರೆಯು

ಬಹು ಜನರು ಧನಾರ್ಜನೆಗಾಗಿ ಉದ್ಯೋಗಗಳನ್ನು ಕೈಕೊಳ್ಳುವರು. ಸ್ವಲ್ಪ ಜನರು ಮಾತ್ರ ಶ್ರೇಯಃಸಾಧನೆಗೆ ಸಹಾಯಕರವಾಗಿರುವ ಉದ್ಯೋಗವನ್ನು ಕೈಕೊಳ್ಳುವರು. ಸಾಮಾನ್ಯರು ಅನುಸರಿಸುವ ಉದ್ಯೋಗಗಳೆಂದರೆ ಕೃಷಿ, ವ್ಯಾಪಾರ, ನೌಕರಿ ಇವು. ಈ ಮೂರುಪ್ರಕಾರದ ಉದ್ಯೋಗಗಳೂ ಸ್ವಾರ್ಥಸಾಧಕಗಳು. ಪ್ರಪಂಚದಲ್ಲಿದ್ದರೂ ನಿಷ್ಕಾಮ ಬುದ್ಧಿಯಿಂದ ನಿಸ್ವಾರ್ಥಿಗಳಾಗಿ ಲೋಕಹಿತವನ್ನು ಸಾಧಿಸುವ ಇಚ್ಛೆಯಿಂದ ನಮ್ಮ ಪ್ರಾಚೀನ ಋಷಿಗಳು ಪ್ರಯತ್ನಪಡುತ್ತಿದ್ದರು. ಇಂಥ ಕಾರ್ಯಗಳಲ್ಲಿ ಒಂದಾದ ಅಧ್ಯಾಪನದ ಪವಿತ್ರಕಾರ್ಯವನ್ನು ಅವರು ಕೈಕೊಂಡಿದ್ದರು. ಗೀತೆಯಲ್ಲಿ ಹೇಳಿದಂತೆ "**ನಹಿಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೆ.**" ಜ್ಞಾನಕ್ಕೆ ಸಮಾನವಾದ ಪಾವಿತ್ರ್ಯವುಳ್ಳ ವಸ್ತುವು ಎರಡನೇದಿಲ್ಲ. ಆದದರಿಂದಲೇ ಅವರು ಗುರುಗಳೆಂಬ ಪವಿತ್ರ ಅಭಿಧಾನದಿಂದ ಕರೆಯಲ್ಪಡುತ್ತಿದ್ದಲ್ಲದೆ ಸಮಾಜದಲ್ಲಿ ವಂದ್ಯರಾಗಿದ್ದರು.

ಆಧುನಿಕ ಕಾಲದಲ್ಲಿ ಶಿಕ್ಷಕನ ಕಾರ್ಯವು ಸಾಮಾನ್ಯವಾದ 'ನೌಕರಿ' ಯೆಂಬ ಪದರಿನಲ್ಲಿ ಸಮಾವೇಶವಾಗಿದೆ. ಮೊದಲು ಪ್ರಾಥಮಿಕ ಶಿಕ್ಷಕರಾದವರು ಪಾಪಭೀರುಗಳೂ, ಸಹಾನುಭೂತಿಯುಳ್ಳವರೂ, ಶ್ರಮಬಟ್ಟು ಕಲಿಸುವವರೂ ಆಗಿದ್ದರು. 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬ ಮಾತಿನ ಮರ್ಮವನ್ನು. ಅವರು ತಿಳಿದಿದ್ದರು. ಆದರೆ ಈಚೆಗೆ ಹೊಟ್ಟೆಹೊರಕೊಳ್ಳುವ ಉದ್ಯೋಗಗಳಲ್ಲಿ ಶಿಕ್ಷಕನ ಕಾರ್ಯವೂ ಒಂದೆಂಬ ತಿಳುವಳಿಕೆಯಾದಂದಿನಿಂದ ಮೊದಲಿನ ಉಚ್ಚಧ್ಯೇಯದಿಂದ ದೂರ

ವಾಗಿರುವ ಹಲವು ಜನರು ಈ ಕಾರ್ಯದಲ್ಲಿ ಸೇರಿಕೊಂಡಿರುವರು. ಇದು ಕಾಲವಾ ಹಾತ್ಮ್ಯವೇ ಹೊರತು ವ್ಯಕ್ತಿಗತ ದೋಷವಲ್ಲ.

ಶಿಕ್ಷಕರು ನಮ್ಮ ಪ್ರಾಚೀನ ಕಾಲದ ಋಷಿಗಳು ಹಾಕಿಕೊಟ್ಟ ಮೇಲ್ಪಂಕ್ತಿ ಯನ್ನು ಅನುಸರಿಸತಕ್ಕದ್ದು. ಎಳೆಯ ಮಕ್ಕಳ ಮನಸ್ಸಿನ ವಿಕಾಸವು ಸರಿಯಾಗಿ ಆಗುವಂತೆ ಅವರ ಜ್ಞಾನ ವೃದ್ಧಿಯನ್ನು ಮಾಡತಕ್ಕದ್ದು. ಬಾಲಕರ ಮನಸ್ಸಿನಲ್ಲಿರುವ ಈಶ್ವರ ದತ್ತವಾದ ಜ್ಞಾನಾಂಕುರಗಳಿಗೆ ಸೃಷ್ಟಿಯ ನಿರೀಕ್ಷಣೆತುಲನೆಕಲ್ಪನೆಗಳ ನೀರೆರೆದು ಅವನ್ನು ಬೆಳಿಸಿ ದೊಡ್ಡ ಗಿಡಗಳನ್ನಾಗಿ ಮಾಡಿ ಮಧುರವಾದ ಫಲಗಳನ್ನು ಕೊಡುವಂತೆ ಮಾಡುವ ಮಹತ್ಪದ ಕಾರ್ಯವು ಶಿಕ್ಷಕನದಾಗಿರುವದು. ಬರೀ ಓದು ಬರಹ ಮುಂತಾದ ನಿಯಮಿತ ವಿಷಯಗಳನ್ನು ಕಲಿಸುವದಿಷ್ಟೇ ಶಿಕ್ಷಕನ ಕಾರ್ಯವಲ್ಲ ಓದು ಬರಹ ಮೊದಲಾದವು ಜ್ಞಾನಾರ್ಜನೆಯ ಕಾರ್ಯದಲ್ಲಿ ಮೊದಲಿನ ಮೆಟ್ಟಿಲುಗಳು. ಮಕ್ಕಳ ಮನಸ್ಸನ್ನು ವಿಕಾಸಗೊಳಿಸಿ ಅದು ಸದಾಸನ್ಮಾರ್ಗನಿರತವಾಗಿರುವಂತೆಯೂ ಸುವಿಚಾರಪೂರ್ಣವಾಗುವಂತೆಯೂ ಮಾಡುವದೇ ಶಿಕ್ಷಕನ ಗುರಿಯು. ವಿದ್ಯಾರ್ಥಿಗಳು ಯಾವದೊಂದು ವಿಷಯದ ಮೇಲೆ ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರ ಕೊಡುವಂತೆ ಮಾಡಿಬಿಟ್ಟಮಾತ್ರಕ್ಕೆ ಶಿಕ್ಷಕನ ಕಾರ್ಯವು ಪೂರ್ಣವಾದಂತಾಗಲಿಲ್ಲ. ಈ ಪ್ರಶ್ನೋತ್ತರಗಳ ಮಾಪಿನಿಂದ ವಿದ್ಯಾರ್ಥಿಗಳ ಯೋಗ್ಯತೆಯ ಅಥವಾ ಶಿಕ್ಷಕನ ಕಾರ್ಯದ ನಿರ್ಣಯಮಾಡುವದು ಎಷ್ಟು ಮಾತ್ರವೂ ಸರಿಯಲ್ಲ. ಉದಾಹರಣಾರ್ಥ—ಜ್ವರದಿಂದ ಮಲಗಿದ ರೋಗಿಯ ಉಪಚಾರಕ್ಕಾಗಿ ಬಂದಿರುವ ವೈದ್ಯನು ರೋಗ ಪರೀಕ್ಷೆಗೆ ಉಷ್ಣತಾಮಾಪಕ ಯಂತ್ರದ ಸಹಾಯವನ್ನು ತೆಗೆದು ಕೊಳ್ಳುವಂತೆಯೇ ಈ ಪ್ರಶ್ನೋತ್ತರಗಳಿಂದ ವಿದ್ಯಾರ್ಥಿಗಳ ಹಾಗು ಶಿಕ್ಷಕರ ಬಾಹ್ಯ ಕಾರ್ಯಗಳ ಪರೀಕ್ಷೆಯು ಮಾತ್ರ ಕೆಲವು ಮಟ್ಟಿಗೆ ಆಗುವದು. ರೋಗಿಗೆ ಜ್ವರ ಬರಲಿಕ್ಕೆ ಯಾವ ಕಾರಣಗಳಾದುವೆಂಬದಾಗಲಿ ಅದರ ನಿವೃತ್ತಿಗೆ ಯಾವ ಉಪಾಯಗಳನ್ನು ಮಾಡಬೇಕೆಂಬದಾಗಲಿ ಈ ಯಂತ್ರದ ಸಹಾಯದಿಂದ ತಿಳಿಯದಿರುವಂತೆ ವಿದ್ಯಾರ್ಥಿಗಳ ಮನಸ್ಸು ಎಷ್ಟುಮಟ್ಟಿಗೆ ಸುಸಂಸ್ಕೃತವಾಗಿರುವದೆಂಬದು ಅಥವಾ ಆ ಸಂಸ್ಕಾರವಾಗುವದಕ್ಕೆ ಏನುಮಾಡಬೇಕಿತ್ತೆಂಬದು ಈ ಪರೀಕ್ಷೆಯ ಪ್ರಶ್ನೋತ್ತರಗಳಿಂದ ತಿಳಿದುಬರಲಾರದು; ಅದಕ್ಕೆ ಹೆಚ್ಚು ಸೂಕ್ಷ್ಮರೀತಿಯ ಅವಲೋಕನವು ಅವಶ್ಯ ವಾಗಿರುವದು.

ಈಗ ಪ್ರಾಥಮಿಕ ಶಾಲೆಗಳಲ್ಲಿರುವ ಬಾಲಕರೇ ನಾಳೆ ರಾಷ್ಟ್ರದ ಬಾಲಕರಾಗುವರು. ಈಗಿನ ರಾಷ್ಟ್ರದ ಮುಂದಾಳುಗಳು ಹಿಂದೆ ಒಂದು ಕಾಲದಲ್ಲಿ ಪ್ರಾಥಮಿಕ ಶಾಲೆಗಳಲ್ಲಿಯೇ ಕಲಿಯುತ್ತಿದ್ದರು. ಪ್ರಾಥಮಿಕ ಶಾಲೆಗಳಲ್ಲಿ ಆರಂಭವಾದ ಮನಸ್ಸಿನ ಸಂಸ್ಕಾರಕಾರ್ಯವನ್ನು ಮುಂದರಿಸಿಯೇ ಮುಂದಿನ ಶಿಕ್ಷಣ ಕ್ರಮವು ಸಾಗಿ

ಬೇಕಾಗುವದು. ಮೂರು ವರುಷದ ಬುದ್ಧಿಯು ನೂರು ವರುಷದ ತನಕವೆಂಬ ನಾಣ್ಣುಡಿಯು ಲೋಕಪ್ರಸಿದ್ಧವಿದೆ. ಇದೊಂದೇಮಾತಿನಿಂದ ಬಾಲಕರ ಚಿಕ್ಕ ವಯಸ್ಸಿನ ಕೋಮಲಮನಸ್ಸಿನಲ್ಲಾದ ಸಂಸ್ಕಾರಗಳ ಪರಿಣಾಮವು ಎಷ್ಟು ಬಲವತ್ತರವಾಗಿರುವದೆಂಬದು ತಿಳಿಯುವದು.

ಬಾಲಕರ ಮನಸ್ಸಿನಲ್ಲಿ ಅಂಕುರರೂಪವಾಗಿ ಇರುವ ಹಲವು ಭಾವನೆಗಳಲ್ಲಿ ಉಚ್ಚ ತರದ ಭಾವನೆಗಳನ್ನು ವಿಕಾಸಗೊಳಿಸಿ ದುರ್ವಿಕಾರಗಳನ್ನು ಹಿಮ್ಮೆಟ್ಟಿಸಿ ಅವರನ್ನು ಉತ್ತಮ ವರ್ಗದ ನಾಗರಿಕರನ್ನಾಗಿ ಮಾಡುವ ಕಾರ್ಯವು ಪ್ರಾಥಮಿಕ ಶಾಲೆಗಳಲ್ಲಿಯೇ ಆರಂಭವಾಗಬೇಕಾಗುವದು. ಬಾಲಕರ ಪಾಲಕರ ಮೇಲೆ ಈ ಹೊರೆಯನ್ನು ಹೊರಿಸುವ ಪರಿಸ್ಥಿತಿಯು ಸದ್ಯಕ್ಕೆ ನಮ್ಮ ದೇಶದಲ್ಲಿ ಇರುವದಿಲ್ಲ. ಯಾಕಂದರೆ ಬಹುಜನ ಪಾಲಕರು ಇನ್ನೂ ಅಜ್ಞಾನಾಂಧಕಾರದಲ್ಲಿಯೇ ಉಳಿದಿರುವರು. ಬಹುಜನ ಸಮಾಜದಲ್ಲಿ ಇನ್ನೂ ಶಿಕ್ಷಣಪ್ರಸಾರವು ಸಾಕಷ್ಟುಆಗಿಲ್ಲ. ಆದುದರಿಂದ ಈ ಹೊರೆಯನ್ನು ಸದ್ಯಕ್ಕೆ ಶಿಕ್ಷಕವರ್ಗವೇ ಹೊರಬೇಕಾಗಿರುವದು. ಪ್ರತಿಯೊಬ್ಬ ನಾಗರಿಕ (ಸುಶಿಕ್ಷಿತ) ನ ಮನಸ್ಸಿನಲ್ಲಿ ಸ್ವಜನರ ಉತ್ಕರ್ಷಕ್ಕಾಗಿ ಸ್ವಾರ್ಥವನ್ನೂ ಸ್ವದೇಶದ ಅಭಿವೃದ್ಧಿಗಾಗಿ ಸ್ವಜನರ ಹಿತವನ್ನೂ ಬದಿಗೊತ್ತುವಂಥ ಮನಸ್ಸಿನ ಉದಾತ್ತಭಾವವು ಇರಬೇಕಾಗುವದು. ಮತ್ತು ಇಂತಹ ಉದಾತ್ತ ವಿಚಾರಗಳ ಬೀಜಗಳು ಬಾಲ್ಯದಲ್ಲಿಯೇ ಬಾಲಕರ ಮನಸ್ಸಿನಲ್ಲಿ ಸೇರಬೇಕಾಗುವದು. ಇಂತಹ ಉಚ್ಚಭಾವನೆಗಳಿಂದ ಪ್ರೇರಿತರಾಗಿ ದೇಶಕಾರ್ಯಗಳನ್ನು ಕೈಕೊಳ್ಳುವ ಮುಂದಾಳುಗಳಿಂದಲೇ ದೇಶದ ಉದ್ಧಾರವಾಗಬೇಕಾಗುವದು. ಇಂತಹ ಮುಂದಾಳುಗಳ ಉತ್ಪಾದನದಂಥ ಅತಿಮಹತ್ವದ ಅರ್ಥಾತ್ ರಾಷ್ಟ್ರದ ಉದ್ಧಾರ ಕಾರ್ಯದ ಬಹ್ವಂಶವು ಶಿಕ್ಷಕರ ಕೈಯಲ್ಲಿರುವದು. ಶಿಕ್ಷಕ ವರ್ಗವು ಈ ಧ್ಯೇಯಸಾಧನೆಗಾಗಿ ಶಾಲೆಗಳಲ್ಲಿ ಕೆಲಸಮಾಡಬೇಕು. ಇದರಿಂದ ಶಿಕ್ಷಕನ ಹೋರೆಯ ಮಹತ್ವವು ಎಷ್ಟಿರುವದೆಂಬದು ಸಹಜವಾಗಿ ಕಂಡು ಬರುವಂತಿದೆ.

ಯಾವದೊಂದು ದೇಶದ ಸಂಸ್ಕೃತಿ (Culture) ಯ ಪುನರುಜ್ಜೀವನಕ್ಕೂ ಅದನ್ನು ಕಾಯ್ದಿಟ್ಟುಕೊಳ್ಳುವದಕ್ಕೂ ಶಿಕ್ಷಕ ವರ್ಗವೇ ಬಹ್ವಂಶದಿಂದ ಕಾರಣವಾಗಿರುವದು. ಬಾಲಕರ ಮನಸ್ಸು ಪ್ರಾರಂಭದಲ್ಲಿ ಯಾವದೇ ಒಂದು ನಿಶ್ಚಿತವಾದ ಸಂಸ್ಕೃತಿಗೆ ಒಳಗಾಗಿರುವದಿಲ್ಲ. ದಾರಿಯನರಿಯದ ಕುರುಡನನ್ನು ಕೈಹಿಡಿದು ಕರದೊಯ್ದು ಹಾದಿಗೆ ಹಚ್ಚುವಂತೆ, ಶಿಕ್ಷಕನು ಅವರ ಮನಸ್ಸಿಗೆ ಯಾವದೊಂದು ಸಂಸ್ಕೃತಿಯ ಅಭಿರುಚಿಯನ್ನು ಹುಟ್ಟಿಸಿ ಕೊಡಬೇಕಾಗುವದು. ಅನ್ಯ ರಾಷ್ಟ್ರದವರ ಸಂಸ್ಕೃತಿಗಳನ್ನು ತಿರಸ್ಕರಿಸದೆ ಸ್ವಸಂಸ್ಕೃತಿಯಲ್ಲಿ ಅಭಿಮಾನವುಂಟಾಗುವಂತೆ ಮಾಡುವದು ಶಿಕ್ಷಕನ ಹೋರೆಯೊಳಗಿನ ಎಲ್ಲಕ್ಕೂ ಹೆಚ್ಚಿನ ಜಾಣತನದ ಭಾಗವಾಗಿದೆ. ನಮ್ಮ ದೇಶದಲ್ಲಿ ಸಾಂಪ್ರತಕ್ಕೆ ಜನತೆಯ ಮನಸ್ಸು ವಿಚಿತ್ರ ಪರಿಸ್ಥಿತಿಯಲ್ಲಿರುವದು. ದಿನದಿನಕ್ಕೆ ಹಿಂದೂ ಸಂಸ್ಕೃತಿಯು ಅವಹೇಲನವಾಗಹತ್ತಿರುವದೆಂದೂ ಪಾಶ್ಚಿಮಾತ್ಯ ಸಂಸ್ಕೃತಿಗಳ ಮೋ

ಹಕ್ಕಿ ಒಳಗಾದ ನಾವು ನಮ್ಮನ್ನೇ ಮರೆಯಹತ್ತಿರುವೆವೆಂದೂ ಹೇಳುತ್ತಿರುವರು. ನಮ್ಮ ಭಾಷೆ, ನಮ್ಮ ಕಲಾಕೌಶಲ್ಯಗಳು, ನಮ್ಮ ಉದ್ಯೋಗ ವ್ಯವಸಾಯಗಳು, ಉಡಿಗೆ ತೊಡಿಗೆಗಳು, ಆಹಾರ ವ್ಯವಹಾರಗಳು ಇವೆಲ್ಲಾ ಅನ್ಯರ ಅನುಕರಣದಿಂದ ತಮ್ಮ ಸಂಸ್ಕೃತಿಯನ್ನು ಕಳೆದುಕೊಂಡು ವಿದ್ರೂಪವಾಗಹತ್ತಿರುವವೆಂದು ಆಕ್ಷೇಪಿಸುತ್ತಿರುವರು. ಈ ಮಾತನ್ನು ಶಿಕ್ಷಕವರ್ಗವು ಲಕ್ಷ್ಯದಲ್ಲಿಡಬೇಕಾಗಿರುವದು.

ಹಿಂದೆ ಹೇಳಿದಂತೆ ವಿದ್ಯಾರ್ಥಿಗಳಿಗೆ ಜ್ಞಾನಾಮೃತವನ್ನು ಉಣ್ಣಿಸಿ ಅವರನ್ನು ಅಮರರನ್ನಾಗಿ ಮಾಡುವ, ಅಜ್ಞಾನಾಂಧಕಾರದಲ್ಲಿರುವ ಬಾಲಕರಿಗೆ ಜ್ಞಾನರವಿಯ ದರ್ಶನಮಾಡಿಸುವ, ಭಾವೀರಾಷ್ಟ್ರದ ಬಾಲಕರಾಗಲು ಯೋಗ್ಯತೆಯುಳ್ಳ ಜನರನ್ನು ಸಿದ್ಧಪಡಿಸುವ ಅಥವಾ ದೇಶದ ಸಂಸ್ಕೃತಿಯ ಪುನರಜ್ಜೀವನಗೊಳಿಸುವ ಪರಮ ಪವಿತ್ರವಾದ ಹೋರಿಯು—ಶಿಕ್ಷಣಕಾರ್ಯವು—ಎಷ್ಟು ಪೂಜ್ಯವೂ ಎಷ್ಟು ಪವಿತ್ರವೂ ಎಷ್ಟು ಮಹತ್ವದ್ದೂ ಎಷ್ಟು ಶ್ರೇಯಸ್ಕರವಾದದ್ದೂ ಆಗಿರುವದೆಂಬದನ್ನು ನಾವೇನು ಹೇಳಬೇಕಾಗಿದೆ?

ಇಂತಹ ಉಚ್ಚ ಭಾವನೆಗಳಿಂದ ಪ್ರೇರಿತನಾಗಿ ಶಿಕ್ಷಕನ ಕಾರ್ಯವನ್ನು ಕೈಕೊಂಡ ಶಿಕ್ಷಕನೇ ಶಿಕ್ಷಕನು. ಅವನೇ ವಂದ್ಯನು. ಅವನೇ ಪೂಜ್ಯನು! ಅವನೇ ಮಾನ್ಯನು! ಅವನೇ ಮಹಾತ್ಮನು.

ಶಿಕ್ಷಕರು ಎಂಥವರಿರಬೇಕು?

(ಅ) ಶಿಕ್ಷಕರು ದೇವರಲ್ಲಿ ಭಕ್ತಿವಿಶ್ವಾಸಗಳುಳ್ಳವರಾಗಿರಬೇಕು. ಸೃಷ್ಟಿಯ ಸಕಲ ವ್ಯಾಪಾರಗಳೂ ಈಶ್ವರಾಧೀನವಾಗಿರುವವು. ಪ್ರಪಂಚದ ಸುಖ ದುಃಖ ಗಳಿಗೆಲ್ಲಾ ಆತನೇ ಪ್ರೇರಕನು. ಮನುಷ್ಯನ ಜ್ಞಾನಾಜ್ಞಾನಕೃತ ಪಾಪ ಪುಣ್ಯಗಳ ವಿಚಾರಣೆಯನ್ನು ಆತನು ಮಾಡುತ್ತಿರುವನು. ಇಂತಹ ಸರ್ವಶಕ್ತನೂ ಸರ್ವ ವ್ಯಾಪಿಯೂ ಆದ ಜಗತ್ಕರ್ತನ ಕಡೆಗೆ ಬಾಲಕರ ಮನಸ್ಸನ್ನು ಎಳೆಯುವದು ಶಿಕ್ಷಕನ ಕರ್ತವ್ಯವು. ಎಳೆಮಕ್ಕಳಿಗೆ ದೊಡ್ಡ ದೊಡ್ಡ ತತ್ವಗಳ ಬೋಧನೆಯಿಂದ ಏನೂ ಪ್ರಯೋಜನವಾಗಲಾರದು; ಕೇವಲ ಶಾಬ್ದಿಕ ಜ್ಞಾನವುಂಟಾಗಿ ಬಾಲಕರು ಹರಿಕೆಯ ದಾಸರಂತಾಗುವರು. ಅಮೌಲ್ಯವಾದ ತತ್ವಜ್ಞಾನದ ರಹಸ್ಯಗಳನ್ನು ಸೂರೆ ಮಾಡುತ್ತಿರುವ ದಾಸರ ಪದಗಳನ್ನು ಹಾಡುವ ಏಕತಾರಿಯ ತಿರಿಕೆಯ ದಾಸರು ಹಿಡಿ ಅಕ್ಕಿಗಾಗಿ ತಾಸು ತಾಸು ಪದಗಳನ್ನು ಹಾಡುತ್ತ ಬಾಗಿಲಲ್ಲಿ ನಿಲ್ಲುವದನ್ನು ಅನೇಕರು ನೋಡಿರಬಹುದು. ಅಂತಹ ಅಮೌಲ್ಯವಾದ ಪದಗಳ ರಹಸ್ಯವನ್ನು ತುಸುಮಟ್ಟಿಗಾದರೂ ಅರಿತುಕೊಂಡಿದ್ದರೆ ಆ ದಾಸರಿಗೆ ಮನೆ ಮನೆ ತಿರಿಯುವ ಅವಸ್ಥೆಯು ಎಂದಿಗೂ ಒದಗುತ್ತಿರಲಿಲ್ಲ. ದೇವರ ಸಂಬಂಧವ ಕೇವಲ ಶಾಬ್ದಿಕ ಜ್ಞಾನದಿಂದ ಬಾಲಕರಿಗೆ ಏನೂ ಪ್ರಯೋಜನವಾಗಲಾರದು. ಅದು ಅವರ ಆಚರಣೆಯಲ್ಲಿ ಒಡಮೂಡುವಂತೆ

ಮಾಡುವದು ಅತ್ಯಂತ ಮಹತ್ವದ ವಿಷಯವು. ಬಾಲಕರು ಯಾವ ಧರ್ಮದವರೇ ಇರಲಿ, ಯಾವ ಕುಲದವರೇ ಇರಲಿ, ಅವರೆಲ್ಲರ ಮನಸ್ಸಿನಲ್ಲಿ ತಮ್ಮ ತಮ್ಮ ಧರ್ಮಾನುಸಾರವಾದ ಆಚರಣೆಯೂ ತಮ್ಮ ತಮ್ಮ ಕುಲಧರ್ಮಾನುಗುಣವಾದ ಈಶ್ವರಭಕ್ತಿಯೂ ಉಂಟಾಗುವಂತೆ ಮಾಡುವದು ಶಿಕ್ಷಕನ ಕರ್ತವ್ಯವು. ಪರಧರ್ಮಸಹಿಷ್ಣುತೆಯೂ ಸ್ವಧರ್ಮನಿಷ್ಠೆಯೂ ಕೂಡಿಯೇ ಶಿಕ್ಷಕರಲ್ಲಿ ತುಂಬಿತುಳುಕುತ್ತಿರಬೇಕು. ಶಿಕ್ಷಕನ ಆಚರಣೆಯಿಂದಲೇ ವಿದ್ಯಾರ್ಥಿಗಳು ಈ ಗುಣಗಳನ್ನು ಕಲಿತುಕೊಳ್ಳುವಂತೆ ಮಾಡಬೇಕಾಗುವದು.

ಶಿಕ್ಷಕನು ತನ್ನ ನಿತ್ಯದ ಕೃತ್ಯಗಳನ್ನು ದೇವರನ್ನು ಸ್ಮರಿಸಿ ಮಾಡುತ್ತಿರಬೇಕಾಗುವದು. ಅವನು ತನಗೆ ಸರಕಾರದವರು ಕೊಡುತ್ತಿರುವ ಅಲ್ಪಸ್ವಲ್ಪ ವೇತನಕ್ಕಾಗಿಯೇ ಈ ಶಿಕ್ಷಣದ ಹೋರಿಯನ್ನು ಕೈಕೊಂಡಿರುವೆನೆಂಬ ಭಾವನೆಯನ್ನು ಎಂದೂ ಮನಸ್ಸಿನಲ್ಲಿ ತರಕೂಡದು. ಪೂರ್ವಕಾಲದ ಗುರುಗಳು ಸರಕಾರದ ಅಥವಾ ಜನತೆಯ ಸಹಾಯ ದ್ರವ್ಯವನ್ನು ಎಂದೂ ಅಪೇಕ್ಷಿಸುತ್ತಿರಲಿಲ್ಲ. ಅಧ್ಯಯನ ಅಧ್ಯಾಪನಗಳು ಧರ್ಮೋಕ್ತ ಷಟ್ಕರ್ಮಗಳಲ್ಲಿ ಸಮಾವೇಶವಾಗಿದ್ದವು. ವಿದ್ಯಾರ್ಥಿಗಳ ಉತ್ಕರ್ಷವು ತಮ್ಮ ಕರ್ತವ್ಯವೆಂದೂ ಆ ಉತ್ಕರ್ಷವೇ ತಮಗೆ ತಕ್ಕ ಪ್ರತಿಫಲವೆಂದೂ ನಮ್ಮ ಪ್ರಾಚೀನ ಗುರುಗಳು ತಿಳಿಯುತ್ತಿದ್ದರು. ತನಗೆ ದೊರೆಯತಕ್ಕ ಪ್ರತಿಫಲ (ಪಗಾರು) ವನ್ನು ಮುಂದಿಟ್ಟುಕೊಂಡು ಕೆಲಸಮಾಡುವ ಶಿಕ್ಷಕನು ಋಣಿಯೊಳಗೆ ಕೆಲಸ ಮಾಡುತ್ತಿರುವ ಕೂಲಿಯಾಳಿಗಿಂತ ಕಡಿನೆ ಪ್ರತಿಯುವನೆಂದು ಜನರು ಎಣಿಸಬಹುದು. ಯಾಕಂದರೆ ಇಂಥ ಕೂಲಿಯವರಿಗಿರುವ ಸ್ವಾತಂತ್ರ್ಯವು ಶಿಕ್ಷಕನಿಗಿರುವದಿಲ್ಲ. ಒಮ್ಮೊಮ್ಮೆ ಕೂಲಿಯಾಳಿಗೂ ಕೂಡ ಶಿಕ್ಷಕನಿಗಿಂತ ಹೆಚ್ಚು ಸಂಬಳವು ದೊರೆಯುತ್ತಿರಬಹುದು. ಆದ್ದರಿಂದ ಕೇವಲ ಪಗಾರಿನ ಮೇಲೆಯೇ ಮನಸ್ಸನ್ನಿಟ್ಟು ಕೆಲಸಮಾಡುವ ಶಿಕ್ಷಕನಿಗೆ ಎಂದೂ ಸಮಾಧಾನವಾಗಲಾರದು. "ಕರ್ತವ್ಯಕ್ಕಾಗಿ ಕರ್ತವ್ಯ"ವೆಂಬ ಭಾವನೆಯನ್ನು ತಳೆದು ಕೆಲಸಮಾಡುವ ಶಿಕ್ಷಕನೇ ನಿಜವಾದ ಶಿಕ್ಷಕನಾಗುವನು. ತನಗೆ ಪಗಾರು ಕೊಡುವ ಮೇಲಧಿಕಾರಿಗಳ ಸುಳಿವು ನೋಡಿಕೊಂಡು ಅಥವಾ ಪರೀಕ್ಷೆಯ ಕಡೆಗೆ ಲಕ್ಷ್ಯವಿಟ್ಟು ಕೆಲಸಮಾಡುವ ಶಿಕ್ಷಕರಿಗೆ ಯಶಸ್ಸು ದೊರೆಯುವ ಸಂಭವವು ತೀರ ಕಡಿಮೆಯಿರುವದು. ಮೇಲಧಿಕಾರಿಗಳ ಸುಳಿವು ನೋಡಿ ದುಡಿಯುವ ಶಿಕ್ಷಕನು ಒಮ್ಮಿಲ್ಲೊಮ್ಮೆ ಅವರ ಕೈಯೊಳಗೆ ಸಿಕ್ಕೇಸಿಗುವನು. ಕುರ್ಚಿಯ ಮೇಲಿನ ಉಪ್ಪರಣೆಯು ಶಾಲೆಯಲ್ಲಿ ಶಿಕ್ಷಕನ ಹಾಜರಿಯು ನಿದರ್ಶಕವೆಂಬ ನಾಣ್ನುಡಿಯು ಪ್ರಚಾರದಲ್ಲಿ ಬರಲಿಕ್ಕೆ ಕೆಲವರು ಮೈಗಳ್ಳರಾದ ಜನರು ಹೊಟ್ಟೆಯ ಪಾಡಿಗೆ ಸಿಕ್ಕು ಬೇರೆ ಕಡೆಗೆ ನೌಕರಿಯು ಸಿಗದ ಸಂಕಟಕ್ಕೆ ಶಾಲಾಖಾತೆಯಲ್ಲಿ ಸೇರಿರುವದೇ ಕಾರಣವೆಂದು ನಮಗೆ ಅನಿಸುವದು. ತಮ್ಮ ನಿಜವಾದ ಉತ್ಕರ್ಷವನ್ನು ಬಯಸುವ ಶಿಕ್ಷಕರು ಸರ್ವಜ್ಞನೂ ಸರ್ವವ್ಯಾಪಿಯೂ ಆದ ಜಗದೀಶ್ವ

ರನು ತಮ್ಮ ಬೆನ್ನಮೇಲೆ ನಿಂತು ತಾವು ಮಾಡುವ ಕೆಲಸಗಳನ್ನು ನೋಡುತ್ತಿರುವನೆಂದು ನಂಬಿ ಕೆಲಸ ಮಾಡಬೇಕಾಗುವದು. ಒಮ್ಮೊಮ್ಮೆ ಮನಮುಟ್ಟಿ ದುಡಿಯುವ ಶಿಕ್ಷಕರಿಗೂ ಕೂಡ, ಮೇಲಧಿಕಾರಿಗಳಲ್ಲಿರುವ ದೋಷ, ಸ್ಥಾನ ಕಾಲಗಳಿಗನುಗುಣವಾದ ಪರಿಸ್ಥಿತಿ, ಮುಂತಾದವುಗಳ ಮೂಲಕ ಅವರ ಶ್ರಮಕ್ಕೆ ತಕ್ಕ ಪ್ರತಿಫಲವು ದೊರೆಯುತ್ತಿರುವದಿಲ್ಲ. ಇಂಥ ಪ್ರಸಂಗಗಳಲ್ಲಿಯೂ ಅವರು ಹತಾಶರಾಗುವದು ಇಲ್ಲವೆ ಕೆಲಸವನ್ನು ದುರ್ಲಕ್ಷಿಸುವದು ಸರಿಯೆನಿಸಲಾರದು. ಈಗಿನ ಕೆಲಕೆಲವು ವಿಶಿಷ್ಟ ಪರಿಸ್ಥಿತಿಯ ಮೂಲಕ ಶಿಕ್ಷಕರು ಈ ತರದ ದೂರು ಮುಂದೆ ಮಾಡುವದು ಕಂಡುಬರುವದು. ಏನಿರಿ, ಹಿಟ್ಟೂ ಬೂದಿಯೂ ಒಂದೇ ಆಗಿದೆ; ದುಡಿದವರಿಗೆ ಪ್ರತಿಫಲವಿಲ್ಲ; ದುಡಿಯದವರಿಗೆ ಶಿಕ್ಷೆಯಿಲ್ಲ; ಅಂದಮೇಲೆ ನಾವು ಯಾಕೆ ಕಷ್ಟಪಟ್ಟು ಕೆಲಸಮಾಡಬೇಕು ಎಂದು ಕೇಳುವದುಂಟು. ಇಂಥವರಿಗೆ ಒಂದು ಸಣ್ಣ ಉದಾಹರಣೆಯನ್ನು ಹೇಳಬಹುದು. ಏನಂದರೆ—ಬ್ರಾಹ್ಮಣನಾದವನು ತನ್ನ ನಿತ್ಯ ಕೃತ್ಯಗಳಲ್ಲೊಂದಾದ ಸಂಧ್ಯಾವಂದನೆಯನ್ನು ಮಾಡಿದರೆ ಅವನಿಗೆ ಹೆಚ್ಚಿನ ಪ್ರತಿಫಲವೇನೂ ಇಲ್ಲದೆ ಇದ್ದರೂ ಅದನ್ನು ಬಿಟ್ಟರೆ ಮಾತ್ರ ಅವನ ಬ್ರಾಹ್ಮಣಿಕೆಯೇ ಹೋಗಿಬಿಡುವದು. ಅದರಂತೆ ತನ್ನ ಕರ್ತವ್ಯವನ್ನು ಸರಿಯಾಗಿ ನೆರವೇರಿಸಿದ ಶಿಕ್ಷಕನಿಗೆ ಬಾಹ್ಯಸಾಹಾಯ್ಯಗಳ ಪ್ರತಿಫಲವು ಒಂದು ವೇಳೆ ದೊರೆಯದೆ ಇದ್ದರೂ ಆಂತರಿಕ ಶಾಂತಿಯು ಮಾತ್ರ ಯಾವಾಗಲೂ ಇದ್ದೇ ಇರುವದು. ಮತ್ತು ಇಂಥ ಕರ್ತವ್ಯನಿಷ್ಠನಾದ ಶಿಕ್ಷಕನಿಗೆ ತಾತ್ಕಾಲಿಕ ಕೊರತೆಗಳೇನಾದರೂ ತೋರಿಬಂದರೂ ಪರಿಣಾಮದಲ್ಲಿ ಹಿತವಾಗದೆ ಎಂದೂ ಇರಲಾರದು. ದೇವರ ಸೃಷ್ಟಿಯಲ್ಲಿ ನ್ಯಾಯಕ್ಕೆ ಕೊರತೆಯಿಲ್ಲ. ದೇವರನ್ನು ಸ್ಮರಿಸಿ ತನ್ನ ಕರ್ತವ್ಯವನ್ನು ಮಾಡುವ ಶಿಕ್ಷಕನಿಗೆ ಅವನ ವಿದ್ಯಾರ್ಥಿಗಳ ಉತ್ಕರ್ಷವೇ ಎಲ್ಲಕ್ಕೂ ಹೆಚ್ಚಿನ ಪ್ರತಿಫಲವೆನಿಸುವದು. ಅವರೇ ಅವನ ಶ್ರಮದ ಪರಿಹಾರ ಮಾಡುವರು. ದೇವರ ಮೇಲೆ ಭಾರವಿಟ್ಟು ಕೆಲಸಮಾಡುವ ಮನುಷ್ಯನಿಗೆ ಎಂದೂ ಅಪಯಶಸ್ಸು ಬರಲಾರದು; ಅಂಥ ಶಿಕ್ಷಕನಿಂದ ಸ್ವಂತ ಕಲ್ಯಾಣವೂ ಅವನ ವಿದ್ಯಾರ್ಥಿಗಳ ಕಲ್ಯಾಣವೂ ಕೂಡಿಯೇ ಒದಗಿಬರುವದು ನಿಶ್ಚಯವು.

(ಬ) ಶಿಕ್ಷಕನು ಸದಯಾಂತಃಕರಣಿಯೂ ಸಹಾನುಭೂತಿ ಪೂರ್ಣನೂ ಆಗಿರುವದು ಅವಶ್ಯವು. ಈ ಸೃಷ್ಟಿಯು ಈಶ್ವರನಿರ್ಮಿತವಾದುದು. ಸೃಷ್ಟಿಕರ್ತನು ಅದರಜನಕನು. ನಾವೆಲ್ಲರೂ ಆತನ ಮಕ್ಕಳು. ಸಕಲ ಚರಾಚರಗಳೂ ಆತನ ಕೃತಿಯ ಪರಿಣಾಮಗಳು. ಈ ಸೃಷ್ಟಿಯಮೇಲೆ ನಮಗಿರುವಷ್ಟೇ ಅಧಿಕಾರವು ಹೆರವರಿಗೂ ಇರುವದು; ಮನುಷ್ಯೇತರ ಪ್ರಾಣಿಗಳಿಗೂ ಇರುವದು. ಸೃಷ್ಟಿಯೊಳಗಿನ ಇತರ ಪ್ರಾಣಿಗಳಿಗಿಂತಲೂ ಮನುಷ್ಯನು ಶ್ರೇಷ್ಠನೆನಿಸಿಕೊಳ್ಳುವದಕ್ಕೆ ಸೃಷ್ಟಿಕರ್ತನ ಕರುಣೆಯೇ ಕಾರಣವು. ಮನುಷ್ಯರಲ್ಲಿಯೂ ಒಬ್ಬನಿಗಿಂತ ಇನ್ನೊಬ್ಬನು ಹೆಚ್ಚಿನವನಾಗಲಿಕ್ಕೆ ಆ ಭಗವಂತನ ದಯೆಯ ಹೊರತು ಬೇರೆ ಕಾರಣಗಳು ಕೇವಲ ಔಪಚಾರಿಕವಾಗಿರುವವು. ಹೀಗಿರು

ವದರಿಂದ ಒಬ್ಬನು ಇನ್ನೊಬ್ಬನ ಹೀನ ಸ್ಥಿತಿಯನ್ನು ಕಂಡು ಕನಿಕರಪಡುವದಕ್ಕೆ ಬದಲಾಗಿ ಅನಾದರವನ್ನು ತೋರಿಸಿದರೆ, ಅವನಲ್ಲಿ ಸಹಾನುಭೂತಿಯನ್ನು ತೋರುವದಕ್ಕೆ ಬದಲಾಗಿ ಅಪಹಾಸ್ಯಮಾಡಿದರೆ, ಅವನಂಥ ಅಜ್ಞಾನಿಯೂ ಅಪರಾಧಿಯೂ ಬೇರೊಬ್ಬನಿಲ್ಲವೆಂದು ಹೇಳಬೇಕಾಗುವದು. ಈ ರೀತಿ ಸಕಲರಲ್ಲಿಯೂ ಸಹಾನುಭೂತಿಯುಳ್ಳವನಾಗಿರುವದು ಮನುಷ್ಯ ಧರ್ಮವೆನಿಸಿಕೊಳ್ಳುತ್ತಿರುವಾಗ ಅಜ್ಞಾನಿಗಳೂ ಅಪ್ರಬುದ್ಧರೂ ಆದ ಬಾಲಕರ ಸಹವಾಸದಲ್ಲಿ ಆಯುಷ್ಯವನ್ನು ಕಳಿಯಲು ಹೊರಟಿರುವ ಶಿಕ್ಷಕರಲ್ಲಿ ಸದಯಾಂತಃಕರಣ ಸಹಾನುಭೂತಿಗಳು ಎಷ್ಟು ಪರಮಾವಧಿಯಾಗಿರಬೇಕೆಂಬದನ್ನು ಹೇಳಬೇಕಾದ ಅವಶ್ಯಕತೆಯೇ ಉಳಿಯದು.

ಚಿಕ್ಕಮಕ್ಕಳ ಅಜ್ಞಾನಮೂಲಕವಾದ ಇಲ್ಲವೆ ಉತ್ಸಾಹಜನ್ಯವಾದ ಅಪರಾಧವನ್ನು ಕಂಡು ಶಿಕ್ಷಕನು ಕನಿಕರಪಟ್ಟು ಇಲ್ಲವೆ ಮಾರ್ಗದರ್ಶಕನಾಗಿ ಅವರಿಗೆ ನಿಜವಾದ ಸಹಾನುಭೂತಿಯನ್ನು ತೋರಿದರೆ ಮಾತ್ರ ಅದರಿಂದ ಸತ್ಪರಿಣಾಮವಾಗುವದು. ಶಿಕ್ಷಕನ ಅಪ್ಪಣೆಯನ್ನು ಪಾಲಿಸುವದರಲ್ಲಿಯೂ ಶಾಲೆಯ ಶಿಸ್ತನ್ನು ಕಾಯ್ದುಕೊಳ್ಳುವದರಲ್ಲಿಯೂ ಬಾಲಕರಿಂದ ಅಪರಾಧವು ಘಟಿಸುವದುಂಟು. ಇಂಥ ಪ್ರಸಂಗಗಳಲ್ಲಿಯೂ ಶಿಕ್ಷಕನು ಸಹಾನುಭೂತಿಯ ಬದಲಾಗಿ ಕ್ರೂರತನವನ್ನು ತೋರ್ಪಡಿಸುವದು ಕ್ಷಮ್ಯವಾಗಲಾರದು. ಇಂತಿರುವಾಗ ತಾನು ಕೇಳಿದ ಪ್ರಶ್ನೆಗೆ ಸಮರ್ಪಕವಾಗಿ ಉತ್ತರಕೊಡದಿರುವ ಬಾಲಕನಮೇಲೆ ಸಿಟ್ಟುಗೆದ್ದು ಪಟ್ಟನೆ ಗಲ್ಲಕ್ಕೆ ಹೊಡೆಯುವ ಇಲ್ಲವೆ ತಪ್ಪಿದ ಹುಡುಗರನ್ನು ಸಾಲಾಗಿ ನಿಲ್ಲಿಸಿ ಪಟಿಪಟಿ ಛಡಿಯನ್ನು ಹೊಡೆಯುವ ಶಿಕ್ಷಕನ ಅಪರಾಧವು ಯಾವವರ್ಗಕ್ಕೆ ಸೇರುವದೆಂದು ಹೇಳುವದು ಕಠಿಣವಾಗುವದು.

ಚಿಕ್ಕಮಕ್ಕಳಿಗೆ ಜಗತ್ತಿನ ಅನುಭವವಿರುವದಿಲ್ಲ; ಒಳಿತುಹೀನಗಳ ಅರಿವು ಇರುವದಿಲ್ಲ; ಕರ್ತವ್ಯಾಕರ್ತವ್ಯಗಳ ಜ್ಞಾನವುಂಟಾಗಿರುವದಿಲ್ಲ. ಇಂಥ ಸ್ಥಿತಿಯಲ್ಲಿ ಶಿಕ್ಷಕನು ಅವರಿಗೆ ಮಾರ್ಗದರ್ಶಕನಾಗಿ ಕೆಲಸ ಮಾಡಬೇಕಾಗಿರುವದು. ಬಾಲಕರ ಅಜ್ಞಾನವನ್ನು ಕಂಡು ಸಿಟ್ಟುಗೇಳುವದಾಗಲಿ ಅವರನ್ನು ತಿರಸ್ಕರಿಸುವದಾಗಲಿ ಎಷ್ಟು ಮಾತ್ರವೂ ಸರಿಯೆನಿಸಲಾರದು. ''ಅಯ್ಯೋ ಎಂಥ ದಡ್ಡನಿವನು, ಹತ್ತುಸಾರಿ ಹೇಳಿದರೂ ಇವನಿಗೆ ತಿಳಿಯುವದಿಲ್ಲವಲ್ಲಾ '' ಎಂದು ನಿರ್ದಯದ ಉದ್ಗಾರತೆಗೆಯುವದು ಇಲ್ಲವೆ ಅಪಶಬ್ದಗಳನ್ನು ಆಡುವದು ಅಥವಾ ಸಿಟ್ಟುಗೆದ್ದು ಬಡಿಯುವದು ಇವನ್ನೆಲ್ಲಾ ನಾವು ಸಾಲೆಗಳಲ್ಲಿ ನೋಡಬಹುದು. ಇದು ಎಷ್ಟುಮಾತ್ರವೂ ಸರಿಯಲ್ಲ. ತಾವು ಹೇಳಿದ ವಿಷಯವು ಹುಡುಗನಿಗೆ ತಿಳಿಯದೆ ಇರುವದಕ್ಕೆ ಕಾರಣವೇನೆಂಬದನ್ನು ಶಿಕ್ಷಕನು ಮೊದಲು ಕಂಡುಕೊಂಡು ಅದಕ್ಕೆ ತಕ್ಕ ಉಪಾಯವನ್ನು ಯೋಜಿಸಿಕೊಳ್ಳಬೇಕಾಗುವದು. ಬಾಲಕನು ಮೂಲತಃ ಮಂದಬುದ್ಧಿಯವನಿರಬಹುದು; ಆ ಕಾಲಕ್ಕೆ ಅವನ ಮನಸ್ಸು ಆ ವಿಷಯವನ್ನು ಗ್ರಹಣಮಾಡುವಷ್ಟು ಪಕ್ವವಾಗಿರಲಿಕ್ಕಿಲ್ಲ; ಅಥವಾ

ಅದು ಅಂಥ ಪರಿಸ್ಥಿತಿಯಲ್ಲಿ ಇರಲಿಕ್ಕಿಲ್ಲ; ಒಮ್ಮೊಮ್ಮೆ ಶಿಕ್ಷಕನ ವಿವೇಚನಾಕ್ರಮದ ಲ್ಲಿಯೇ ದೋಷವಿರಬಹುದು. ಹೀಗಿರುವದರಿಂದ ಎಲ್ಲದಕ್ಕೂ ಬಾಲಕನೇ ಹೊಣೆ ಗಾರನೆಂದು ತಿಳಿಯುವದು ತೀರ ತಪ್ಪಾಗುವದು. ಕಾರಣವಿಲ್ಲದೆ ಕಾರ್ಯವು ಎಂದೂ ಸಂಘಟಿಸಲಾರದು. ಆದದರಿಂದ ಬಾಲಕನಿಗೆ ತಾನು ಹೇಳಿದ ವಿಷಯವು ತಿಳಿಯದೆ ಇರುವದಕ್ಕೆ ಕಾರಣವೇನೆಂಬದನ್ನು ಶೋಧಿಸಿಕೊಂಡು ಅದನ್ನು ತಿದ್ದುವದು ಶಿಕ್ಷಕನ ಕರ್ತವ್ಯವಲ್ಲದೆ ಹುಡುಗನಮೇಲೆ ಸಿಟ್ಟಗೇಳುವದು ಎಷ್ಟು ಮಾತ್ರವೂ ಸರಿಯೆನಿಸಲಾ ರದು.

ನಿಜವಾದ ಶಿಕ್ಷಕನಿಗೆ ಬಾಲಕನ ಅಜ್ಞಾನವನ್ನು ಕಂಡು ಕನಿಕರವುಂಟಾಗುವದ ಲ್ಲದೆ ಅದರಿಂದ ಅವನಿಗೆ ಎಂದೂ ಸಿಟ್ಟುಬರಲಾರದು. ಬಾಲಕರ ಅಪರಾಧಗಳಿಗೂ ಅವರ ಅಜ್ಞಾನವೇ ಕಾರಣವಾಗಿರುವದು. ಉದಾ:— ಸುಳ್ಳುಹೇಳುವದು ಕಳವು ಮಾಡುವದು ಮುಂತಾದ ತಪ್ಪುಗಳೂ ಕೂಡ ಹಲವುಸಾರಿ ಅಜ್ಞಾನಮೂಲಕವಾಗಿ ಸಂಭವಿಸುವದುಂಟು. ಯೋಗ್ಯಕಾರಣಗಳ ಮೂಲಕವಾಗಿಯೇ ಸಾಲೆಗೆ ಬರದೆಇದ್ದ ಹುಡುಗನು ಕೂಡ, ಶಿಕ್ಷಕನು ಛಡಿಯನ್ನು ಮುಂದೆಮಾಡಿ "ನಿನ್ನೆ ಸಾಲೆಗೆ ಯಾಕೆ ಬಂದ ದ್ದಿಲ್ಲವೆಂದು" ಕೇಳಿದಕೂಡಲೆ ದೊಡ್ಡದೊಂದು ಸುಳ್ಳಿನ ಮಾಲಿಕೆಯನ್ನೇ ರಚಿಸಿ ಹೇಳಿ ದ್ದನ್ನು ಅನೇಕರು ಕೇಳಿರಬಹುದು. 'ಶಿಕ್ಷಕರು ಸಿಟ್ಟುಮಾಡುವರೆಂಬ ಸಂಕಟಕ್ಕೆ ಕಾಪೀ ಬರಹಕ್ಕೆ ತುಸು ಮೊದಲು ವರ್ಗದೊಳಗಿನ ಬೇರೊಬ್ಬ ಹುಡುಗನ ದಾತಿ ಯೊಳಗಿನ ಮಸಿಯನ್ನು ಇಲ್ಲವೆ ಗಲಗನ್ನು ತುಡುಗುಮಾಡುವ ಹುಡುಗರು ಹಲವು ಸಾಲೆಗಳಲ್ಲಿ ದೊರೆಯುವರು. ನಿಜವಾದ ಸಂಗತಿಯನ್ನು ಹೇಳುವದಕ್ಕಿಂತಲೂ ಸುಳ್ಳು ಹೇಳುವದು ಇಲ್ಲವೆ ತುಡುಗುಮಾಡುವದು ಹೆಚ್ಚಿನ ಅಪರಾಧವೆಂಬ ತಿಳಿವು ಅವರಿಗಿಲ್ಲದಿರುವದೇ ಇಂಥ ತಪ್ಪುಗಳಿಗೆ ಕಾರಣವಾಗಿರುವವು. ವಿದ್ಯಾರ್ಥಿಗಳಲ್ಲಿ ನೀತಿಯ ಪ್ರಸಾರವಾಗುವದಕ್ಕೂ ಅವರ ಜ್ಞಾನದ ಬೆಳುವಣಿಗೆಗೂ ಸಹಾನುಭೂತಿ ಯಿಂದಾಗುವಷ್ಟು ಸಹಾಯವು ತಾತ್ಸಾರದಿಂದ ಅಥವಾ ಕ್ರೂರತನದಿಂದ ಎಂದೂ ಆಗಲಾರದು. ಅದರಂತೆ ಶಾಲೆಯು ಶಿಸ್ತಿಗೂ ಸಹ ಸಹಾನುಭೂತಿಯೇ ಹೆಚ್ಚು ಸಹಾಯಕರವಾಗುವದು. ಶಾಲೆಯು ಶಿಸ್ತಿಗೆ ಭಂಗತರುವಂಥ ಹುಡುಗರನ್ನು ಶಿಕ್ಷಿ ಸುವದಕ್ಕಿಂತಲೂ ಶಿಕ್ಷಕನು ಸಹಾನುಭೂತಿಯುಳ್ಳವನಾಗಿ ಅವರ ತಪ್ಪುಗಳನ್ನು ಅವ ರಿಗೆ ತಿಳಿಸಿಹೇಳಿ ಅದರಿಂದಾಗುವ ದುಷ್ಪರಿಣಾಮಗಳನ್ನೂ ಅನ್ಯರಿಗಾಗುವ ತೊಂದರೆ ಗಳನ್ನೂ ವಿವರಿಸಿ ಹೇಳಿದರೆ ಹೆಚ್ಚು ಪ್ರಯೋಜನಕರವಾಗುವದು.

ಸಹಾನುಭೂತಿಯುಳ್ಳ ಶಿಕ್ಷಕನಿಗೆ ವಿದ್ಯಾರ್ಥಿಗಳು ಪ್ರೀತಿಯಿಂದ ವಿಧೇಯರಾಗಿ ನಡೆಯುವರು. ಮತ್ತು ಅದರಿಂದ ಅವರು ಸದಾ ಸನ್ಮಾರ್ಗದಿಂದ ಇದ್ದು ತಮ್ಮ ಶೀಲವನ್ನು ತಿದ್ದಿಕೊಳ್ಳುವರು. ಅದೇ ಶಿಕ್ಷೆಯ ಭಯದಿಂದ ಶಾಲೆಯ ಶಿಸ್ತನ್ನು ಕಾಯ್ದುಕೊಳ್ಳುವ ಶಿಕ್ಷಕನ ಶಾಲೆಯು ಹುಲಿಯ ಪಂಜರದಂತೆ ಮಾತ್ರ ಉಪಯೋಗ

ವಾಗಬಹುದು. ಸರ್ಕಸಿನೊಳಗಿನಹುಲಿಯು ಯಜಮಾನನ ಕೈಯೊಳಗಿನ ಕೋರಡೆಯ ಕಡೆಗೆ ದೃಷ್ಟಿಯಿಟ್ಟು ಕೆಲಸಮಾಡುವಂತೆ ಶಾಲೆಯೊಳಗಿನ ಹುಡುಗರ ಅವಸ್ಥೆಯೂ ಆಗುವದು.

(ಕ) **ಶಿಕ್ಷಕನು ಸದಾ ವಿದ್ಯಾರ್ಥಿಯಾಗಿರಬೇಕಾಗುವದು.**— ಈ ಸೃಷ್ಟಿಯಲ್ಲಿ ಜ್ಞಾನವು ಅಪರಿಮಿತವಾಗಿರುವದು. ಇಂದಿನ ಪರಿಸ್ಥಿತಿಯು ನಾಳೆಗೆ ಎಂದೂ ಉಳಿಯುವದಿಲ್ಲ. ಮನುಷ್ಯನು ಹುಟ್ಟಿದಂದಿನಿಂದ ಸಾಯುವವರೆಗೆ ಪ್ರತಿ ಕ್ಷಣಕ್ಕೆ ಹೊಸ ಹೊಸ ಅನುಭವಗಳನ್ನು ಪಡೆದು ಹೆಚ್ಚು ಹೆಚ್ಚು ಜಾಣನಾಗುತ್ತಾ ಹೋಗುವಂತೆ ಮಾನವಕುಟುಂಬದ ಜ್ಞಾನವೂ ಕೂಡ ದಿನದಿನಕ್ಕೆ ಮುಂದಡಿಯಿಡುತ್ತ ನಡೆದಿರುವದು. ಜಗತ್ತಿನ ಜ್ಞಾನಭಾಂಡಾರಕ್ಕೆ ಅಳಿವಿಲ್ಲದ ಜೀವನವೆಂತೂ ವ್ಯಯವಿಲ್ಲದ ನಿಧಿಯೆಂದೂ ಹೇಳುವರು. ಅದು ಸೃಷ್ಟಿಯು ಹುಟ್ಟಿದಂದಿನಿಂದ ಬೆಳೆಯುತ್ತಲೇ ಬಂದಿರುವದು. ಈ ಬೆಳುವಣಿಗೆಯ ಕ್ರಮವು ಸೃಷ್ಟಿಯು ಇರುವವರೆಗೂ ಅವ್ಯಾಹತವಾಗಿ ನಡೆದೇನಡೆಯುವದು ಇಂತಿರುವಾಗ ಮನುಷ್ಯನು ತನ್ನ ಜ್ಞಾನಾರ್ಜನೆಯ ಕಾಲವು ಮುಗಿಯಿತೆಂದಾಗಲಿ ತಾನು ಜ್ಞಾನಪೂರ್ಣನಾದೆನೆಂದಾಗಲಿ ತಿಳಿಯುವ ಬಗೆ ಹೇಗೆ? ಆದುದರಿಂದ ಶಿಕ್ಷಕನು ಜಗತ್ತಿನಲ್ಲಿ ಮುಂದೆ ಮುಂದೆ ಸಾಗಿರುವ ಹೊಸ ಹೊಸ ಜ್ಞಾನವನ್ನು ದೊರಕಿಸುವ ಇಚ್ಛೆಯಿಂದ ಸರ್ವದಾ ವಿದ್ಯಾರ್ಥಿಯಾಗಿರುವನು ಅವಶ್ಯವೆನಿಸುವದು. ಮತ್ತು ಶಿಕ್ಷಕನು ತನಗಾಗಿ ಬದುಕುವಸ್ವಾರ್ಥಿಯಲ್ಲ ; ತನಗಾಗಿ ದುಡಿಯುವ ಕೂಲಿಯ ಆಳಲ್ಲ. ತನ್ನ ವಿದ್ಯಾರ್ಥಿಗಳಿಗಾಗಿ ಬಾಳುವ ಪರಾರ್ಥ ಸಾಧಕನು ; ತನ್ನ ವಿದ್ಯಾರ್ಥಿಗಳಿಗಾಗಿ ದುಡಿಯುವ ಗುರುವು. ಆದುದರಿಂದ ಅವನು ತನ್ನ ವಿದ್ಯಾರ್ಥಿಗಳ ಜ್ಞಾನಲಾಲಸೆಯನ್ನು ಪೂರ್ಣ ಮಾಡುವದಕ್ಕೆ ಸರ್ವದಾ ಸಿದ್ಧನಾಗಿರಬೇಕಾಗುವದು. ವಿದ್ಯಾರ್ಥಿಗಳು ಕೇಳುವ ಸಕಲಪ್ರಶ್ನೆಗಳಿಗೂ ಸಮರ್ಪಕವಾಗಿ ಉತ್ತರ ಕೊಡಲು ಅವನು ಹಾತೊರೆಯುತ್ತಿರಬೇಕಾಗುವದು. ತನ್ನ ವಿದ್ಯಾರ್ಥಿಗಳಿಗೆ ಜಗತ್ತಿನ ಅನುಭವವನ್ನು ಹೇಳಿ ಅವರನ್ನು ಜ್ಞಾನ ಸಂಪನ್ನರನ್ನಾಗಿ ಮಾಡಿಕೊಡುವ ಲವಲವಿಕೆಯಲ್ಲಿಯೇ ಅವನು ಆಯುಷ್ಯವನ್ನು ಕಳೆಯಬೇಕಾಗುವದು. ಇಂಥ ಶಿಕ್ಷಕನು ತಾನು ಕೆಲವೊಂದು ಪರೀಕ್ಷೆಯಲ್ಲಿ ಪಾಸಾಗುವಮಟ್ಟಿಗೆ ಮಾತ್ರ ಕೆಲವು ನಿಯಮಿತ ಪುಸ್ತಕಗಳನ್ನು ಓದಿ ಚಲ್ಲಿದರೆ ತೀರಿತೆಂದು ತಿಳಿದರೆ ಎಂಥ ಪ್ರಮಾದವಾಗಬಹದು! ಟ್ರೇನಿಂಗ ಕಾಲೇಜಗಳಲ್ಲಾಗುವ ಸರ್ಟಿಫಿಕೇಟ ಪರೀಕ್ಷೆಗಳು ಶಿಕ್ಷಕರ ನಿಜವಾದ ಪರೀಕ್ಷೆಗಳಲ್ಲ. ಅವರು ಪಡೆದಿರುವ ಗಿನೇ ತಿನೇ ಇಲ್ಲವೆ ಹಿನೇ ವರ್ಷದ ಸರ್ಟಿಫಿಕೇಟುಗಳು ಅವರ ಯೋಗ್ಯತಾದರ್ಶಕಗಳಲ್ಲ. ವಿದ್ಯಾರ್ಥಿಗಳೇ ಅವರ ನಿಜವಾದ ಪರೀಕ್ಷಕರು. ತನ್ನ ವಿದ್ಯಾರ್ಥಿಗಳ ಜ್ಞಾನಲಾ. ಯ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ಕೊಡಬಲ್ಲ ಶಿಕ್ಷಕನೇ ನಿಜವಾದ ಟ್ರೇಂಡಶಿಕ್ಷಕನು ತನ್ನ ವಿದ್ಯಾರ್ಥಿಗಳಿಂದ

ಯೋಗ್ಯತಾ ಪತ್ರಗಳನ್ನು ಪಡೆಯಬಲ್ಲ ಶಿಕ್ಷಕನೇ ಹೆಚ್ಚಿನ ಯೋಗ್ಯತೆಯುಳ್ಳವನು. ಹೀಗೆ ಸರ್ವದಾ ನಡೆದಿರುವ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಸಾರ್ಥಕವಾದ ಯೋಗ್ಯತಾ ಪತ್ರಗಳನ್ನು ಪಡೆಯಬೇಕಾದರೆ ಶಿಕ್ಷಕನು ಸರ್ವದಾ ವಿದ್ಯಾರ್ಥಿಯಾಗಿರಬೇಕೆಂಬದು ಸಹಜ ಸಿದ್ಧವು. ಟ್ರೇನಿಂಗಕಾಲೇಜಕ್ಕೆ ಬರುವಾಗ ವಿದ್ಯಾರ್ಥಿಗಳು ನಿಜವಾದ ವಿದ್ಯಾರ್ಥಿಗಳಾಗಿರುವದಿಲ್ಲ. ಅವರು ಆಗ ಪರೀಕ್ಷಾರ್ಥಿಗಳಾಗಿರುವರು. ಮುಂದೆ ಆಗುವ ವಾರ್ಷಿಕ ಪರೀಕ್ಷೆಯ ಪರಿಣಾಮದಕಡೆಗೇ ಅವರ ಲಕ್ಷ್ಯವು ವಿಶೇಷವಾಗಿರುವದು. ಒಬ್ಬ ಸನ್ಮಾನ್ಯ ಗೃಹಸ್ಥರು ಇಂಥದೊಂದು ಪ್ರಸಂಗದಲ್ಲಿ ಹೇಳಿದ "ನಾನು ಕಾಲೇಜದಲ್ಲಿ ಕಲಿತದ್ದಕ್ಕಿಂತ ಹೆಚ್ಚು ವಿಷಯಗಳನ್ನು ಶಿಕ್ಷಕನಾದ ಬಳಿಕ ಕಲಿತುಕೊಂಡೆನು" ಎಂಬ ಮಾತು ನಮಗೆ ಈಗ ನೆನಪಾಗುವದು. ಈ ಮಾತಿನ ತಾತ್ಪರ್ಯವಿಷ್ಟೇ.—ಕೆಲವೊಂದು ಪರೀಕ್ಷೆಯಲ್ಲಿ ಪಾಸಾದ ಮಾತ್ರಕ್ಕೆ ನಾವು ವಿದ್ಯಾವಂತರಾದೆವು, ಇನ್ನು ಕಲಿಯುವದೇನೂ ಉಳಿದಿಲ್ಲ, ಎಂದು ಹೇಳುವದರಲ್ಲಿ ಏನೂ ಅರ್ಥವಿಲ್ಲ, ಇಷ್ಟೇ ಅಲ್ಲ ಈಮಾತು ಕೇವಲ ಅಜ್ಞಾನಮೂಲಕವಾದದ್ದು. ಆದುದರಿಂದ ಶಿಕ್ಷಕನು ಸದಾಜ್ಞಾನಲಾಲಸೆಯುಳ್ಳವನಾಗಿದ್ದು ಓದುವ ಚಟವುಳ್ಳವನಾಗಿರಬೇಕು. (ಮುಂದಿನಾಗುವದು)

ರಾಷ್ಟ್ರಕೂಟರು.

(ಲೇ—ಪಂಡಿತ ಕೇಶವ ಶರ್ಮಾ ಗಲಗಲಿ)

(ಗಳಿದ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಈತನು ಸಂಸ್ಕೃತದಲ್ಲಿ ಆದಿಪುರಾಣವನ್ನುಬರೆದ ಜಿನಸೇನನ(ಲಒತಿ)ಶಿಷ್ಯನೆಂದು ಗುಣಭದ್ರನ(ಲ್ಲಲ)ಉತ್ತರಪುರಾಣದಿಂದ ತಿಳಿಯುತ್ತದೆ.* ಅಮೋಘವರ್ಷನು ಸ್ವತಃಪಂಡಿತನಾಗಿದ್ದು ವಿದ್ಯೆಗೆ ಆಶ್ರಯಕೊಡುವವನಾಗಿದ್ದನು. ಕವಿರಾಜಮಾರ್ಗವೆಂಬ ಹಳೆಗನ್ನಡ ಅಲಂಕಾರ ಗ್ರಂಥವನ್ನು ಬರೆದವನು ಇವನೇ. ಕವಿರಾಜಮಾರ್ಗದ ಕರ್ತೃತ್ವದ ಬಗ್ಗೆ ಪಂಡಿತರಲ್ಲಿ ವಾದವಿದ್ದರೂ, ಕವಿರಾಜಮಾರ್ಗದ ಉತ್ಪತ್ತಿಗೆ ನೃಪತುಂಗನೇ ಮುಖ್ಯಕಾರಣವಾಗಿರುವದರಲ್ಲಿ ಸಂದೇಹವಿಲ್ಲ. ನೃಪತುಂಗನಂಥ ವಿದ್ಯಾಭಿಮಾನಿಯು ಇಲ್ಲದಿದ್ದರೆ ಕವಿರಾಜಮಾರ್ಗವು ಹುಟ್ಟುವದು ದುರ್ಲಭವಾಗುತ್ತಿತ್ತು. ಇವನ ಆಸ್ಥಾನಪಂಡಿತನಾದ ವಿಜಯನಾಗಲಿ, ಕವೀಶ್ವರನಾಗಲಿ ಯಾರೇ ಈ ಗ್ರಂಥವನ್ನು ಬರೆದಿರುವರೆಂದು ನೀರ್ಣೀತವಾದರೂ, ಕವಿರಾಜಮಾರ್ಗದ ಮುಖ್ಯ ಶ್ರೇಯಸ್ಸು ನೃಪತುಂಗನಿಗೆ ಇರುತ್ತದೆ. ಈ

* ಶ್ರೀಮಾನ್. ಆರ್. ನರಸಿಂಹಾಚಾರ್ಯರು ಬರೆದ ಕವಿಚರಿತೆಯ ಭಾಗ ೧. ಪುಟ ೧೭—೧೯ನೋಡಿ

ಗ್ರಂಥದಿಂದ ಆ ಕಾಲದಲ್ಲಿ ಕನ್ನಡ ನಾಡು, ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತೆಂದು ತಿಳಿದುಬರುವದು. ಮತ್ತು ಪಟ್ಟದಕಲ್ಲು, ಕೊಪಣನಗರ (ಕೊಪ್ಪಳ) ಹುಲುಗೂರು, (ಲಕ್ಷ್ಮೇಶ್ವರದ ಹತ್ತಿರ) ಒಕ್ಕುಂದ, (ಬೆಳಗಾವಿ ಜಿಲ್ಲೆ) ಇವುಗಳ ನಡುವಿನ ಪ್ರದೇಶದಲ್ಲಿ ಸಾರಭೂತವಾದ ಕನ್ನಡವು (ತಿರುಳ್ಗನ್ನಡ) ನಡೆಯುತ್ತಿತ್ತೆಂದು ತಿಳಿದುಬರುವದು. ಈಗಿನ ಪುಣೆಯ ಮರಾಠಿಯಂತೆ, ಆಗಿನ ತಿರುಳ್ಗನ್ನಡವು ಆದರ್ಶಭೂತ ಭಾಷೆಯಾಗಿರಬೇಕು. ನೃಪತುಂಗನ ಹೇಳಿಕೆಯಂತೆ, ನಾವು ಧಾರವಾಡ ಪ್ರಾಂತದ (ವಿಜಾಪೂರ, ಬೆಳಗಾಂವ, ಧಾರವಾಡ) ಕನ್ನಡಿಗರು ತಿರುಳ್ಗನ್ನಡಿಗರ ವಂಶಜರು. ಈಗಿನ ಕಾಲದ ಇತರ ಕನ್ನಡಿಗರು ನಮ್ಮನ್ನು ಒರಟು ಕನ್ನಡಿಗರೆಂದು ಅಲ್ಲಗಳೆಯದಿರಲಿ.

ನೃಪತುಂಗನು ಜೈನಮತದಲ್ಲಿ ವಿಶೇಷವಾದ ಆಸಕ್ತಿಯನ್ನು ತೋರಿಸಿದರೂ ಅವನು ಇತರ ಮತಗಳ ಬಗ್ಗೆ ಅನಾದರವುಳ್ಳವನಾಗಿರಲಿಲ್ಲವೆಂತಲೂ, ಅವನ ರಾಜ್ಯದಲ್ಲಿ ಇತರ ಮತಸ್ಥರು ಇದ್ದರೆಂತಲೂ ಅವನೀಗ್ರಂಥದಲ್ಲಿಯ ಒಂದು ಪದ್ಯದಿಂದ ನಾವು ಊಹಿಸಬಹುದಾಗಿದೆ.

ಆ ಕಪಿಲ ಸುಗತ ಶಣಚರ ।
ಲೋಕಾಯತಿಕಾದಿ ಮಾರ್ಗ ಭೇದಂ ಸಮಯಂ ॥
ಪ್ರಾಕಟ ಮದಂ ವಿರುದ್ಧವಿ ।
ನೇಕದಿ ನರಿಪ ಮೊಡೆನಾಡೆ ಸಮಯ ವಿರುದ್ಧಂ ॥

ಸಾಂಖ್ಯ ಮತಾನುಯಾಯಿಗಳೂ, ಬೌದ್ಧರೂ, ಕಾಣಾದರೂ, ಚಾರ್ವಾಕರೂ, ನಾಸ್ತಿಕರೂ) ಅವರವರ ಮಾರ್ಗಭೇದವು ಸಮಯವು. ಅವರ ಮತಗಳನ್ನು ಕಾವ್ಯಗಳಲ್ಲಿ ಮಂಡಿಸಬೇಕಾದರೆ ಅವರು ಹೇಳಿದಂತೆಯೇ ಮಂಡಿಸಬೇಕು. ಅವರ ವಿರುದ್ಧವಾಗಿ ಅನ್ಯಥಾ ಮಂಡಿಸಿದರೆ 'ಸಮಯ ವಿರುದ್ಧ, ವೆಂಬ ಕಾವ್ಯದೋಷವುಂಟಾಗುವದು. ಇದರಿಂದ ಈ ರಾಜನು ಅನ್ಯಮತಸಹಿಷ್ಣುವು ಆಗಿದ್ದನೆಂದೂ ಅವನ ರಾಜ್ಯದಲ್ಲಿ ಈ ಎಲ್ಲ ಮತಾನುಯಾಯಿಗಳೂ ಇರಬೇಕೆಂದು ತೋರುತ್ತದೆಂದೂ ಪ್ರೊ. ಪಾಠಕರು ತರ್ಕಿಸುವದು ಯೋಗ್ಯವಾಗಿರುವದು. ಕನ್ನಡ ನಾಡಿನ ಅರಸರು ಹಾಗೆ ಉದಾರಬುದ್ಧಿಗಳೇ ಇದ್ದರು. ಇದಲ್ಲದೆ ನೃಪತುಂಗನು ಸಂಸ್ಕೃತದಲ್ಲಿ ಪ್ರಶ್ನೋತ್ತರ ರತ್ನಮಾಲಿಕೆ ಎಂಬ ಗ್ರಂಥವನ್ನು ಬರೆದಿರುವನು. ಈ ಗ್ರಂಥವನ್ನು ಮೊದಲು ಮೈ. ಪಾಠಕರು ಶೋಧಿಸಿ ತೆಗೆದರು. ಇದರ ಕಡೆಯಲ್ಲಿರುವ

" विवेकात् त्यक्त राज्येन राज्ञेयं रत्नमालिका
रचिताऽमोघ वर्षेण सुधिया सदलंकृतिः ,,

ಇದರಿಂದ ಇವನು ತಾನೇ ರಾಜ್ಯ ತ್ಯಾಗವನ್ನು ಮಾಡಿದಂತೆ ಕಂಡುಬರುವದು.

ಕಾಲಿದಾಸನು ರಘುವಂಶದ ರಾಜರನ್ನು 'ಶೈಶವೇಭ್ಯಸ್ತವಿದ್ಯಾನಾಂ' ಎಂದು ವರ್ಣಿಸಿದಂತೆ ಮುಪ್ಪಿನ ಕಾಲಕ್ಕೆ ತಾನೇ ರಾಜ್ಯವನ್ನು ಬಿಟ್ಟು ತನ್ನ ಮಗನಾದ ಅಕಾಲವರ್ಷನಿಗೆ ಒಪ್ಪಿಸಿದ್ದರಿಂದ +

ಇವನ ಆಚರಣವು ರಘುವಂಶದ ಅರಸರನ್ನು ಅನುಕರಿಸುವಂತೆ ಇದ್ದಿತು. ಮತ್ತು ಇದೇ ಮಹಾಕವಿಯು ೬ ನೇ ಸರ್ಗ ರಘುವಂಶದಲ್ಲಿ ಹೇಳಿದಂತೆ "ಶ್ರೀಯೂ ಸರಸ್ವತಿಯೂ ಒತ್ತಟ್ಟಿಗೆ ಸಿಗುವದು ದುರ್ಲಭ; ಆದರೆ ನೃಪತುಂಗನಲ್ಲಿ ನಿಸರ್ಗಭಿನ್ನವಾದ ಸಂಸ್ಥೆಯುಳ್ಳ ಶ್ರೀ ಸರಸ್ವತಿಯರಿಬ್ಬರೂ ಒತ್ತಟ್ಟಿಗೆ ವಾಸ ಮಾಡಿಕೊಂಡಿದ್ದರು" ಇಂಥವನನ್ನು ಕನ್ನಡಿಗರು ಮರೆಯುವದು ಹೇಗೆಂದು ಕರ್ನಾಟಕ ಗತವೈಭವಕಾರರು ಕೇಳುತ್ತಾರೆ. ಮರೆತು ಹೋಗದ ಸಾವ್ರಾಜ್ಯವೇ ಮರೆತು ಹೋದಬಳಿಕ ಎಂದು ಮರಿಯುಲಾಗದ ನೃಪತುಂಗ ಕೃಷ್ಣರಾಜಾದಿಗಳನ್ನು ಕರ್ನಾಟಕ ಇತಿಹಾಸದ [illegible] ಮಹಾ (ದೊಡ್ಡ) ರಾಷ್ಟ್ರದ ಅಧಿಪತಿಗಳ ಇತಿಹಾಸದ ಅಧ್ಯಯನವನ್ನು ಸ್ವಾಭಿಮಾನ ಪೂರ್ವಕವಾಗಿ ಮಾಡದಿದ್ದರೆ, ಆ ತುಂಗನೃಪನು ತನ್ನ ರಾಜ್ಯದೊಡನೆ ಕವಿರಾಜ ಮಾರ್ಗವನ್ನೂ ವಿವೇಕದಿಂದ ಕೃಷ್ಣಾರ್ಪಣ ಮಾಡಿ ಬಿಟ್ಟಿರುವನು. ಅವನಿಗಾಗಿ ನಾವವನನ್ನು ನೆನಿಸಿದ್ದರೂ ನಮಗಾಗಿ ನಾವು ನೆನಿಸಬೇಕು. ಇಲ್ಲದಿದ್ದರೆ ಪುನಃ ಮಹಾ ರಾಷ್ಟ್ರಾರ್ಪಣವು. ಇವನು ವೆಂಗಿಯ ಚಾಲುಕ್ಯರೊಡನೆ ಯುದ್ಧಮಾಡಿ ಅವರ ಬಹು ಭಾಗವನ್ನು ದೊರಕಿಸಿದನು. ಖಾರೆಪಟ್ಟಣದ ಲೇಖದಲ್ಲಿ ಅನೇಕ ಚಾಲುಕ್ಯ ರಾಜ ಪುತ್ರರನ್ನು ಇವನು ಯಮಸದನಕ್ಕೆ ಕಳಿಸಿದನೆಂದು ಉಲ್ಲೇಖವಿರುವದು. ಇವನ ಅಧಿಪತ್ಯವನ್ನು ಅಂಗ-ವಂಗ ಮಗಧ-ವಾಲವರೂ, ಒಪ್ಪಿಕೊಂಡರೆಂದು ನೀಲಗುಂದ ಲೇಖದಲ್ಲಿ ಹೇಳಲ್ಪಟ್ಟಿರುವದು. ಕಾನ್ಹೇರಿಯ ಶಿಲಾಶಾಸನದಲ್ಲಿ ಶಿಲಾಹಾರರು ನೃಪತುಂಗನ ಮಾಂಡಲಿಕರೆಂದು ಉಲ್ಲೇಖವಿರುವದೆಂದು ಮ. ಆಲೂರವರು ತಿಳಿಸುತ್ತಾರೆ

+ In his old age he abdicated in favour of his son Krishna II, and devoted the brief remainder of his life to ascetic practices The ದಿಗಂಬರ or naked sect of jains was liberally patronised by ಅಮೋಘವರ್ಷ ವಿ. ಸ್ಮಿಥ ಪುಟ ೩೬೬.

ನೃಪತುಂಗನು ಗಂಗರ ಮೇಲೆ ಅನೇಕ ದಾಳಿಗಳನ್ನು ಮಾಡಿದನು ; ಆದರೆ ಕೆಲವು ದಿವಸಗಳ ತರುವಾಯ ಗಂಗ ರಾಷ್ಟ್ರಕೂಟರ ನಡುವೆ ಶರೀರಸಂಬಂಧವಾದ್ದರಿಂದ ಉಭಯತರ ನಡುವಣ ಹಗೆತನವು ಬಯಲಾಗಿ ಪ್ರೇಮವು ಅಂಕುರಿಸಿತು + ನೃಪತುಂಗನು ಜೈನವಿಹಾರಕ್ಕಾಗಿ ವಿಪುಲ ಸಂಪತ್ತಿಯನ್ನು ಕೊಟ್ಟನೆಂದು ಲೇಖಾಂತ

+ ಡಾಕ್ಟರ ಭಾಂಡಾರಕರ ಸ್ಮಾರಕ ಲೇಖಾವಲಿಗಾಗಿ ಗಂಗರ ಬಗ್ಗೆ ಬರೆದ ನಮ್ಮ ಕೈಸಸಾಹೇಬರ ಲೇಖನವನ್ನು ನೋಡಿರಿ.

ರದಲ್ಲಿ ಹೇಳಲ್ಪಟ್ಟಿರುವದು. ೯ನೇ ಶತಕದ ಕಡೆಯಲ್ಲಿಯೂ ೧೦ ನೇ ಶತಕದ ಆರಂಭದಲ್ಲಿಯೂ ರಾಜಾಶ್ರಯವನ್ನು ಪಡೆದು ಜಿನಸೇನ ಗುಣಭದ್ರರು ಜೈನ ಧರ್ಮಕ್ಕೆ ತೇಜಸ್ಸನ್ನು ತಂದು ಕೊಟ್ಟರು. ಬೌದ್ಧ ಧರ್ಮವು ಆಗ ಕಳೆಗುಂದಿತ್ತು.

ಅಮೋಘ ವರ್ಷನ ಕಾಲದಲ್ಲಿ ಉತ್ತರದಲ್ಲಿ ಮಿಹಿರಭೋಜನು ರಾಜ್ಯವನ್ನು ಮಾಡುತ್ತಿದ್ದನು. ಅವನೂ ಪರಾಕ್ರಮಿಯೂ ವಿದ್ಯಾಭಿಮಾನಿಯೂ ಆಗಿದ್ದನು ನೃಪತುಂಗನ ಕಾಲದಲ್ಲಿ ಮಾನ್ಯಖೇಟವು ಅತಿಶಯ ಸಂಪತ್ತಿಯಲ್ಲಿದ್ದಿತು. ಇವನು ಕವಿರಾಜ ಮಾರ್ಗವನ್ನು ಬರೆದು ಕನ್ನಡಿಗರಮೇಲೆ ಶಾಶ್ವತವಾಗಿ ಉಪಕಾರವನ್ನು ಮಾಡಿರುವನು. ಇದರಿಂದ ಸಾಹಿತ್ಯ ಕ್ಷೇತ್ರದಲ್ಲಿಯೂ ಇವನ ಕೀರ್ತಿದುಂದುಭಿಯು ಈಹೊತ್ತಿಗೂ ಮೊಳಗುತ್ತಿರುವದು. ಇವನ ಕಾಲದಲ್ಲಿಯೂ ಹೊಸಗನ್ನಡ ಹಳಗನ್ನಡಗಳ ಬಡಿದಾಟವಿತ್ತೆಂಬದು "ಪುರಾಣ ಕಾವ್ಯದಲ್ಲಿ ಆ ಭಾಷೆ ಆ ಕಾಲದಲ್ಲಿ ಶೋಭಿಸಿದರೆ ಶೋಭಿಸಲಿ. ಈಗ ಅದನ್ನು ಉಪಯೋಗಿಸಿದರೆ ' ವಿರಸಂ ಕರಮುವು ದೇಸಿಗೆ ಜರದ್ವಧೂ ವಿಷಯರ ಸರಸಿಕತೆವೋಲ್."

ಎಂಬ ಉದ್ಗಾರದಿಂದ ತಿಳಿದು ಬರುವದು. ಇವನಿಗಿಂತ ಮೊದಲು ಅರಸನೂ ಕನ್ನಡ ಗ್ರಂಥಕಾರನೂ ಆದವನೆಂದರೆ ಗಂಗ ಅರಸರಲ್ಲಿ ದುರ್ವಿನೀತನು. ಅದರೆ ಆ ಅರಿನರಪ ದುರ್ವಿನೀತನ ಗ್ರಂಥವೀರ ನಮಗೆ ದೊರೆತಿಲ್ಲ.

ಈಗ ಬಣ್ಣಿಸಿದ ೫ ಅರಸರ ಶಕಕಾಲವು ಕೆಳಗೆ ಬರೆದಂತೆ ಇರುವದು.

೧.	ದಂತಿ ದುರ್ಗನ ರಾಜ್ಯಶಕ	ಇ. ಸ.	೭೫೩
೨.	ಕೃಷ್ಣ ಅಥವಾ ಅಕಾಲವರ್ಷ	,,	೭೭೩
೩.	ಧ್ರುವ ನಿರುಪಮ ಧಾರಾವರ್ಷ	,,	೭೮೩
೪.	ಗೋವಿಂದ, ಜಗತ್ತುಂಗ (ಪ್ರಭೂತವರ್ಷ)	,,	೮೦೮
೫.	ನೃಪತುಂಗ, ಅಮೋಘವರ್ಷ	,,	೮೧೫—೮೭೫

ಈ ಕಾಲವನ್ನು ಚಿಂತಾಮಣರಾಯರು ಕೊಟ್ಟಿರುವರು.

ಫ್ಲೀಟ್ಸೆಂಟ ಸ್ಮಿಥರು ಕೊಟ್ಟದ್ದು ಕೆಳಗೆ ಬರೆದಂತೆ—

Name.	Approximate date of Acc. A. D.	Known epigrappic date.
೧. ದಂತಿದುರ್ಗ (ಖಡ್ಗಾವಲೋಕ)	೭೫೩	೭೫೩
೨. ಕೃಷ್ಣ I ಅಕಾಲವರ್ಷ	೭೭೦	Nil
೩. ಗೋವಿಂದ II ಪ್ರಭೂತವರ್ಷ	೭೭೦	೭೭೦,೭೭೯
೪. ಧ್ರುವ, ನಿರುಪಮ ಚಾಲುಕ್ಯರಿಂದ ತೆಗೆದುಕೊಂಡ ಶ್ರೀವಲ್ಲಭ	೭೮೦	೭೮೩ (ಜೈನಹರಿವಂಶ)
೫. ಗೋವಿಂದ III ಪ್ರಭೂತವರ್ಷ	೭೯೩	೭೯೪,೮೦೪,೮೦೮,೮೧೩
೬. ಅಮೋಘವರ್ಷ ನೃಪತುಂಗ	೮೧೫	೮೧೭,೮೭೭

ರಾಷ್ಟ್ರಕೂಟರ ವಂಶಾವಳಿ.




ಲಗಳ— ಲಒಶ
೧೨ ಕೃಷ್ಣ ಅಕಾಲವರ್ಷ
ಲಒಶ—೯೧೧
ಜಗತ್ತುಂಗ (ಅಲ್ಪಾಯುಷಿ)
ದಂತಿವರ್ಮದೇವ
ದಾನಪತ್ರ ಲಓಒ
೧೩ ಇಂದ್ರ ನಿತ್ಯವರ್ಷ
೧೪ ಅಮೋಘ ವರ್ಷ
೧೪ ಅಮೋಘ ವರ್ಷ
೧೫ ಗೋವಿಂದ
(ಸುವರ್ಣವರ್ಷ)
ಇ. ಸ. ೯೧೪—೯೩೩
೧೬ ಕೃಷ್ಣ
ಅಕಾಲವರ್ಷ
೯೪೦—೯೬೧
(ಮೊದಲು ಡಾ.—ಫ್ಲೀಟ್ ಇವರು
ತಯಾರಿಸಿದ್ದು)
೧೪ ಕೊಟ್ಟಿಗ
೯೬೧
ನಿರುಪಮ
ಕಕ್ಕಾಲ ಕರ್ಕ

ರಿಟ್ರೇನಿಂಗವರ್ಗ

ಂದ ರೀಟ್ರೇನಿಂಗಕ್ಕೆ ಬಂದ ಶಿಕ್ಷಕರು ಎಪ್ರಿಲ್ ೧೫ನೇ ತಾರೀಖಿಗೆ ತಮ್ಮ ಅಭ್ಯಾಸಕ್ರಮವನ್ನು ಮುಗಿಸಿ ತಿರುಗಿ ಹೋದರು. ಮಾರ್ಚ ತಿಂಗಳ ಕೊನೆಯ ವಾರದಲ್ಲಿ ಎಲ್ಲ ಶಿಕ್ಷಕರು ಸ್ಕೌಟ ಕ್ಯಾಂಪಿಗೆ ಕಳುಹಿಸಲ್ಪಟ್ಟಿದ್ದರು. ದಕ್ಷಿಣಭಾಗದ ಸ್ಕೌಟ ಆರ್ಗನಾಯಿಝರರಾದ ಶ್ರೀ. ಚಾರ ಇವರು ಮಿ. ರಾವ ಬ್ರಹ್ಮಮತ್ತು ಮಿ. ಬೀಡಿಯವರ ಸಹಾಯದಿಂದ ಕ್ಯಾಂಪಿನ ವ್ಯವಸ್ಥೆಯನ್ನು ಮಾಡಿದ್ದರು. ಬೆಳಗಾಂವ ಜಿಲ್ಲೆಯಿಂದ ಬಂದ ಒಬ್ಬರ ಹೊರತಾಗಿ ಮಿಕ್ಕ ಎಲ್ಲ ಶಿಕ್ಷಕರು ಸ್ಕೌಟ ಶಿಕ್ಷಣವನ್ನು ಹೊಂದಿದರು.

ರಿಟ್ರೇನಿಂಗಕ್ಕೆ ಬಂದ ಶಿಕ್ಷಕರು ಮುಂದೆ ತಮ್ಮ ತಮ್ಮ ಕೆಲಸಗಳಿಗೆ ತಿರುಗಿ ಹೋದ ಬಳಿಕ ಶಿಕ್ಷಣಕ್ಕೆ ಅವಶ್ಯಕವೆನಿಸುವ ಕೆಲಕೆಲವು ಪಟಗಳು ನಕಾಶಗಳು ಮಾಡೆಲ್ಲುಗಳು ಮುಂತಾದವುಗಳನ್ನು ತಯಾರಿಸಿಕೊಂಡಿದ್ದರು. ಮತ್ತು ಪ್ರ್ಯಾಕ್ಟಿಸಿಂಗಸ್ಕೂಲಿನಲ್ಲಿ ಎಲ್ಲರ ಉಪಯೋಗಕ್ಕಾಗಿ ಹಿಂದುಸ್ಥಾನದ ಹಾಗು ಧಾರವಾಡಜಿಲ್ಲೆಯ ಮಾಡೆಲ್ಲುಗಳನ್ನು ನೆಲದಮೇಲೆ ದೊಡ್ಡ ಪ್ರಮಾಣದಿಂದ ತಯಾರಿಸಿದ್ದರು. ಈ ಮಾಡೆಲ್ಲುಗಳಲ್ಲಿ ಎತ್ತರವಾದ ಪರ್ವತಾವಳಿಗಳನ್ನೂ ನದಿ–ಬೆಟ್ಟಗಳನ್ನೂ ಅರಣ್ಯಗಳನ್ನೂ ಸ್ವಾಭಾವಿಕ ಸ್ಥಿತಿಯಲ್ಲಿ ಇರುವಂತೆಯೇ ರಚಿಸಿದ್ದರು. ಮತ್ತು ಈ ದೇಶದಲ್ಲಿ ಬೆಳೆಯುವ ಬೇರೆ ಬೇರೆ ಬೆಳಸುಗಳು, ಖನಿಜಗಳು ಮುಂತಾದವುಗಳನ್ನು ಆಯಾ ಸ್ಥಳಗಳಲ್ಲಿ ಪ್ರತ್ಯಕ್ಷವಾಗಿ ಇಟ್ಟಿದ್ದರು. ಬೇರೆ ಬೇರೆ ಸ್ಥಳಗಳ ಪ್ರಸಿದ್ಧವಾದ ಪ್ರಾಣಿವನಸ್ಪತಿಗಳನ್ನು ಚಿತ್ರಗಳಿಂದ ಇಲ್ಲವೆ ಪ್ರತ್ಯಕ್ಷ ವಸ್ತುಗಳಿಂದ ತೋರಿಸಿದ್ದರು. ವ್ಯಾಪಾರದ ಸಾಧನಗಳನ್ನೂ ಮಾರ್ಗಗಳನ್ನೂ ಒಡೆದುಕಾಣುವಂತೆ ಮಾಡಿದ್ದರು.

ಶಿಕ್ಷಕರು ತಯಾರಿಸಿಕೊಂಡ ಉಪಕರಣಗಳನ್ನೂ ಈ ಮಾಡೆಲ್ಲುಗಳನ್ನೂ ನೋಡುವದಕ್ಕೆ ತಾ॥ ೧೩–೪–೧೯೨೭ ದಿವಸ ದ. ಭಾ. ಎ. ಇ. ರಾದ ಮೆ॥ ಸದಾರಂಗಾಣಿಸಾಹೇಬರೂ ಧಾರವಾಡದ ಕಲೆಕ್ಟರ ಸಾಹೇಬರೂ ಅವರ ಸಹೋದರಿಯರೊಬ್ಬರೂ ದಯಮಾಡಿಸಿದ್ದರು.

ಮೆ. ಸದಾರಂಗಾಣಿಸಾಹೇಬರು ಶಿಕ್ಷಕರ ಈ ಕೆಲಸಗಳನ್ನು ನೋಡಿ ಆನಂದ ಪ್ರದರ್ಶನ ಮಾಡಿದರು. ಮತ್ತು ಮುಂದೆ ನೀವೆಲ್ಲರೂ ಹಳ್ಳಿಯ ಶಾಲೆಗಳಿಗೆ ತಿರುಗಿ ಹೋದ ಬಳಿಕ ಇದರಂತೆ ಉತ್ಸಾಹಪೂರ್ವಕವಾಗಿ ಕೆಲಸಮಾಡಿ ನಿಮ್ಮ ವಿದ್ಯಾರ್ಥಿಗಳ ಕಲ್ಯಾಣ ಮಾಡುವಿರೆಂದೂ ನೀವು ಟ್ರೇನಿಂಗಕಾಲೇಜಕ್ಕೆ ಬಂದದ್ದರ ಉಪಯೋಗವನ್ನು ಸರಿಯಾಗಿ ಮಾಡಿಕೊಂಡು ನಮ್ಮ ಕಾರ್ಯದಲ್ಲಿ ಹೆಚ್ಚು ಶ್ರೇಯಸ್ಸುಪಡೆಯುವಿರೆಂದೂ ನೀವು ಹೋದ ಹೋದಲ್ಲಿ ಪ್ರಯತ್ನಮಾಡಿ ಸ್ಕೌಟಪದ್ಧತಿಯ ಪ್ರಸಾರ ಮಾಡುವಿರೆಂದೂ ನಾನು ನಂಬಿರುವೆನೆಂದು ಆಡಿತೋರಿಸಿದರು.

ವೆ।। ಕಲೆಕ್ಟರಸಾಹೇಬರು ಶಿಕ್ಷಕರ ಕೆಲಸಗಳನ್ನೆಲ್ಲ ನೋಡಿ ತಿರುಗಿ ಹೋ। ವಾಗ ಸ್ಕೌಟಡ್ರೆಸ್ಸಿನಲ್ಲಿ ನಿಂತಿರುವ ಶಿಕ್ಷಕವರ್ಗವನ್ನುದ್ದೇಶಿಸಿ, ನೀವು ಸ್ಕೌಟಿ ಶಿಕ್ಷ ವನ್ನು ಹೊಂದಿದ್ದು ನೋಡಿ ತಮಗೆ ಆನಂದವಾಯಿತೆಂದೂ ಸ್ಕೌಟನಲ್ಲಿ ಡ್ರಿಲ್ಲಿ ಅಥವಾ ಕೆಲವೊಂದು ವಿಶಿಷ್ಟ ಪ್ರಸಂಗದಲ್ಲಿ ಮಾತ್ರ ಏನಾದರೂ ಕೆಲಸಮಾಡಿ ತೋ। ಸುವದಕ್ಕೆ ಎಷ್ಟು ಮಾತ್ರವೂ ಮಹತ್ವವಿರುವದಿಲ್ಲ; ನಿಮ್ಮ ವಿದ್ಯಾರ್ಥಿಗಳ ಶೀಲ ಘ ನೆಯ ಕಡೆಗೆ ನಿಮ್ಮ ಸಂಪೂರ್ಣ ಲಕ್ಷ್ಯವಿರಬೇಕು. ಸುಶೀಲ ಸಂಪನ್ನರೂ ಶ್ರಾವ ಣಿಕರೂ ರಾಜನಿಷ್ಠರೂ ಸದಾ ಪರೋಪಕಾರ ನಿರತರೂ ಆದ ವಿದ್ಯಾರ್ಥಿಗಳನ ತಯಾರಿಸುವದರ ಕಡೆಗೆ ನೀವು ಯಾವಾಗಲೂ ಮನಮುಟ್ಟಿ ದುಡಿಯುತ್ತಿರಬೇಕೆಂದ ಉಪದೇಶ ಮಾಡಿದರು. ಮತ್ತು ಶಿಕ್ಷಕರ ಕೆಲಸಗಳನ್ನು ನೋಡಿ ತಮಗೆ ತುಂಬ ಸಂತೋಷವಾಯಿತೆಂದು ಆಡಿ ತೋರಿಸಿದರು.

ಉಕ್ತಲೇಖನ (ಶುದ್ಧಬರಹ)

ಲೇಖಕ:—ಹ. ಭೀ. ಕೆಳಗಡಿ, ಅ. ಮಾ. ಅಮರಗೋಳ (ನವಲಗುಂದ).

ಪ್ರಾಥಮಿಕ ಸಾಲೆಗಳಲ್ಲಿ ಕಲಿಸಲ್ಪಡತಕ್ಕ ಮಹತ್ವದ ವಿಷಯಗಳಲ್ಲಿ ಬರಹ ಮುಖ್ಯತೆಯು ಸರ್ವರಿಗೂ ಗೊತ್ತಿದ್ದದ್ದೇ ಸರಿ. ಇದು ಕಾಪಿ ಬರಹವೆಂದೂ, ಶುದ್ಧ ಬ ರಹವೆಂದೂ ಇಬ್ಭಾಗೆಯಾಗಿದೆ. ಕಾಪಿಯು ಬರಹದ ಸೌಂದರ್ಯಕ್ಕಾಗಿ ಅಕ್ಷರಗಳ ಸು ದರತೆಯನ್ನು ಹೆಚ್ಚಿಸಲಿಕ್ಕೆ ಪ್ರಯತ್ನಿಸುವದೂ; ಶುದ್ಧಬರಹವು ಭಾಷಾ ಸೌಂದರ್ಯ ಕ್ಕಾಗಿ ಶಬ್ದಗಳ ನಿಜಸ್ವರೂಪವನ್ನು ಕಾಯ್ದುಕೊಳ್ಳಲಿಕ್ಕೆ ಪ್ರಯತ್ನಿಸುವದೂ ಮು ಖ್ಯೋದ್ದೇಶಗಳಾಗಿರುತ್ತವೆ ಪ್ರಾಥಮಿಕ ಸಾಲೆಗಳಲ್ಲಿ ಈ ಎರಡೂ ವಿಷಯಗಳು, ಆ ನೆಯ ಇಯತ್ತೆಯವರೆಗೆ ಬೇರೆ ಬೇರೆ ಮುಖ್ಯೋದ್ದೇಶಗಳಿಂದ ಕಲಿಸಲ್ಪಟ್ಟು ಅರನೆಯ ಇಯತ್ತೆಯಿಂದ ಇವೆರಡರ ಏಕೀಕರಣವು ನಿಬಂಧರೂಪದಿಂದ ಪರಿಣಮಿಸುತ್ತದೆ ಇಂಥ ಮಹತ್ವದ ವಿಷಯಗಳಲ್ಲಿಂದಾದ ಶುದ್ಧಬರಹವು, ವಿದ್ಯಾರ್ಥಿಗಳು ಹುಟ್ಟು ದಂದಿನಿಂದ ತಾವಾಡುತ್ತಿರುವ ಮಾತುಗಳ ಸಂಗ್ರಹವೇ ಆಗಿದ್ದರೂ ಸಾಲೆಯ ಎ ನೇಳೆಯಲ್ಲಿ ಒಂದಿಲ್ಲೊಂದು ರೀತಿಯಿಂದ ಕಣ್ಣುಕಿವಿಗಳನ್ನು ಪ್ರವೇಶಿಸುತ್ತಿದ್ದರೂ ಕೊಟ್ಟ(ಹೇಳಿದ)ನಾಲ್ಕಾರು ವಾಕ್ಯಗಳಲ್ಲಿ ಹತ್ತಿಪ್ಪತ್ತು ತಪ್ಪುಗಳನ್ನು ಕೆಲವು ಹುಡುಗರು ನೂಡುವದನ್ನು ನೋಡಿದರೆ ಕಲಿಸುವವರಿಗೆ ಅತ್ಯಂತ ಅಸಹ್ಯವೇದನೆಯಾಗದೆ ಇರದು ಹೀಗಾಗಲಿಕ್ಕೆ ಹುಡುಗರ ಮಂದಬುದ್ಧಿಯೂ ಅಲಕ್ಷವೂ ಕಾರಣವಿದ್ದಂತೆ ಕಲಿಸು

ವವರು ಸುಲಭ ವಿಷಯವೆಂದು ಅನಾದರಣೆಯಿಂದ ಅಲಕ್ಷಿಸುವದೂ, ಭಿನ್ನಕ್ರವದಿಂದ ಕಲಿಸುವದೂ, ಬೇರೆ ವಿಷಯಗಳಲ್ಲಿ ಗಮನಕೊಡದೆ ಇರುವದೂ ಅಷ್ಟೇ ಕಾರಣವಾಗಿರುತ್ತದೆ. ಈ ವಿಷಯವನ್ನು ಹೇಗೆ ಯಶಸ್ವಿಯಾಗುವಂತೆ ಮಾಡಬೇಕೆಂಬ ಬಗ್ಗೆ ನನ್ನ ಅನುಭವಕ್ಕೆ ಹತ್ತಿದಷ್ಟು ಸಂಗ್ರಹಿಸಲೆತ್ನಿಸುವೆನು.

೧ **ಬೇರೆ ವಿಷಯಗಳಲ್ಲಿ ತೊಡಕಿಸುವದು:**—ಸಾಧಾರಣವಾಗಿ ಸಾಲೆಯಲ್ಲಿ ಕಲಿಸಲ್ಪಡುವ ಎಲ್ಲ ವಿಷಯಗಳೊಡನೆ ಇದರ ಕಡೆಗೆ ದೃಷ್ಟಿಯನ್ನಿಡುವದು ಅತ್ಯಂತ ಶ್ರೇಯಸ್ಸಾಧನವಾಗಿರುತ್ತದೆ. ಮುಖ್ಯವಾಗಿ ವಾಚನಪಾಠಗಳಲ್ಲಿಯು ಹೊಸ ಶಬ್ದಗಳನ್ನು ಕರೇ ಹಲಿಗೆಯ ಮೇಲೆ ಬರೆದು, ಅದರ ನಿರೀಕ್ಷಣೆಯಿಂದಲೂ, ಬರಹದಿಂದಲೂ ದೃಢೀಕರಿಸಬಹುದು. ಇದಕ್ಕಿಂತಲೂ ಬಿಕ್ಕಟ್ಟಾದ, ವಿಶಿಷ್ಟೋಚ್ಚಾರದ ಶಬ್ದಗಳಿಂದ ಸಂಗ್ರಹಿಸಿದ ವಾಕ್ಯಗಳ ಕಾಪಿಯನ್ನು ಬರೆಯಿಸುವದರಿಂದಂತೂ ಅಶುದ್ಧತೆಯು ನೆಲೆಯಿಲ್ಲದೆ ಓಡುವದು. ಕವಿತೆಯ ಪಾಠಗಳಲ್ಲಿಯಂತೂ ಪದೇ ಪದೇ ಹೊಸ ಶಬ್ದಗಳು ಬರುತ್ತಿರುತ್ತವೆ ಅವುಗಳನ್ನು ಸಹ ವಾಚನದಲ್ಲಿಯು ಶಬ್ದಗಳಂತೆ ತಿದ್ದಬೇಕಲ್ಲದೆ ಶುದ್ಧೋಚ್ಚಾರದಿಂದ ಪಾಠಮಾಡಿಸಲಿಕ್ಕೆ ಎಂದೂ ತಪ್ಪಬಾರದು. ಹೊಸ ಹೊಸ ಶಬ್ದಗಳ ಶುದ್ಧೋಚ್ಚಾರವು ನೆಲೆಗೊಳ್ಳುವದಕ್ಕಾಗಿಯೇ ಕವಿತಾಪಾಠಗಳ ಪಠನೆಯೂಗಿರುತ್ತದೆ. ಅದರಿಂದ ಶುದ್ಧತೆಯು ತಾನಾಗಿ ನೆಲೆಗೊಳ್ಳುವದು. ಇದರಂತೆ ಇತಿಹಾಸ ಭೂಗೋಲುಗಳಲ್ಲಿಯು ಪಟ್ಟಣ, ನದಿ, ಕಲ್ಪಿತಹೆಸರು, ಅರಸು, ರಾಜ್ಯಗಳ ಹೆಸರುಗಳು ಸರಿಯಾದ ಉಚ್ಚಾರ ಬರವಣಿಗೆಯಿಂದ ಮನದಲ್ಲಿ ನೆಲಿಸಬೇಕು. ವ್ಯಾಕರಣದಂಥ ತಿದ್ದುವಿಕೆಯ ವಿಷಯದಿಂದ ಇದೆಲ್ಲವೂ ತಾನಾಗಿಯೇ ಸಾಧ್ಯವಾಗುತ್ತಿದ್ದರೂ ಅದು ಆರಂಭಿಸುತ್ತಲೇ ಈ ವಿಷಯವು ಮಾಯವಾಗಹತ್ತುತ್ತದೆ. ಆದಕಾರಣ ಪ್ರಾರಂಭದಿಂದಲೂ ಹೀಗೆ ಪ್ರತಿಯೊಂದು ವಿಷಯದಲ್ಲಿಯ ಹೊಸ ಶಬ್ದಗಳ ಉಚ್ಚಾರ ಬರಹಗಳ ಶುದ್ಧತೆಯಕಡೆಗೆ ಸರಿಯಾಗಿ ಗಮನ ಕೊಡುತ್ತಹೋದರೆ ಶುದ್ಧಬರಹದ ಶ್ರಮವು ತನ್ನಿಂದ ತಾನೇ ಸುಲಭವಾಗಿ ಸರಿಯುವದು.

೨. **ವಾಚನಪಾಠಗಳ ಸಂಬಂಧ:**—ಮೊದಲು ನಿರೀಕ್ಷಣ, ನಂತರ ವಾಚನ ಅನಂತರ ಬರಹ ಎಂಬ ರತ್ನತ್ರಯಗಳ ಮೂಲೆಯು ಶಿಕ್ಷಣದೇವತೆಗೆ ಬಲು ಒಪ್ಪುತ್ತದೆ ಅದಕ್ಕಾಗಿ ನಾವು ಶುದ್ಧಬರಹದಂಥ ಮುಖ್ಯ ವಿಷಯವನ್ನು ವಾಚನಾನಂತರವೇ ಕಲಿಸಿ ಶಿಕ್ಷಣದ ಸುಂದರತೆಯನ್ನು ಕಾಯ್ದುಕೊಳ್ಳುವದು ಸರಿಯಾದದ್ದು. ಯಾಕಂದರೆ ಆಯಾ ಇಯತ್ತೆಗಳ ವಾಚನಪಾಠಗಳನ್ನು ಕಲಿಸುವಾಗ ಬಂದ ಹೊಸ ಶಬ್ದಗಳ ಶುದ್ಧತೆಯ ದೃಢೀಕರಣವು ಸಾಗಿರುತ್ತದೆ. ಆದ್ದರಿಂದ ಪಾಠಪಠನೆಯನಂತರ ಈ ವಿಷಯವನ್ನು ಆರಂಭಿಸಿದರೆ ವಿದ್ಯಾರ್ಥಿಗಳಿಗೆ ಜಡವೆನಿಸದೆ ಸುಗಮವಾಗಿ ಸಾಗಿಸುವ ಉದ್ದೇಶವು ಉತ್ಸುಕತೆಯಿಂದಲೇ ಸಾಧ್ಯವಾಗುವದೆಂಬದರಲ್ಲಿ ಸಂದೇಹವಿಲ್ಲ.

೩. **ವಿಷಯ ಸಂಗ್ರಹ:**—ಆಯಾ ಇಯತ್ತೆಗಳಲ್ಲಿ ಮೊದಲು ಕಲಿಸಿ ಮುಗಿ ದ ವಾಚನ ಪಾಠದೊಳಗಿನ ಅದಷ್ಟು (ಎಲ್ಲ) ಒತ್ತಕ್ಷರ ಶಬ್ದಗಳೂ, ಹೊಸಶಬ್ದಗಳೂ ಶಿಷ್ಟ ಉಚ್ಚಾರದ ಶಬ್ದಗಳೂ ಬರುವಂತೆ ಹೊಸದೊಂದು ವಾಕ್ಯಮಾಲೆಯನ್ನು ತಯಾ ರಿಟ್ಟುಕೊಳ್ಳಬೇಕು. ಅಂದರೆ ಓದಿಸಿವ ಎಲ್ಲ ಪಾಠಗಳನ್ನೂ ಬರೆಯಿಸಿದಂತಾಗುತ್ತದೆ. ಕೆಲವರು ಇಷ್ಟೆಲ್ಲ ಶ್ರಮಪಡಲಾರದೆ ಓದಿದ ಪಾಠದ್ದು ತೆರೆದು, ನಾಲ್ಕು ಅಥವಾ ಐದು ಸಾಲುಗಳಿಂದ ಮುಗಿವ ಒಂದು ವಾಕ್ಯಮಾಲೆಯನ್ನು ಆರಿಸಿಕೊಳ್ಳುವರು. ಇದರಿಂದ ಪಾಠಿನ ಸಂಗ್ರಹವಾಗುವದು ಅಸಾಧ್ಯವು. ಆದರೆ ಅವರು ಮಾಡಿದ ಸಾಲುಗಳೆಣಿ ಯು ವಿಷಯವು ಹೆಚ್ಚಾಗಬಾರದು ಕಡಿಮೆಯಾಗಬಾರದು ಎಂಬ ಅಚ್ಚುಕಟ್ಟುತನದ ಂದೇ ಉದ್ದೇಶನನ್ನು ಈಡೇರಿಸುತ್ತವೆ ಆದರೆ ಇಲ್ಲಿ ಮಾಡತಕ್ಕ ಮುಖ್ಯ ಕರ್ಮ ನ್ನು ಮುದ್ದೆಮಾಡಿ ಮೂಲಿಗೆಸೆಯುವದೆಂಬದನ್ನು ಪೂರ್ಣವಾಗಿ ಲಕ್ಷದಲ್ಲಿಡತಕ್ಕದ್ದು. ಈ ಎಲ್ಲ ಉದ್ದೇಶಗಳು ಸಾಧಿಸುವಂತೆ ನಾವು ಮೇಲೆ ಹೇಳಿದ ಹಾಗೆ ವಿಷಯಸಂಗ್ರಹಿ ಸುವ ರೂಢಿಯನ್ನಿಡುವದು ಸರಿಯಾದದ್ದಾಗಿದೆ.

೪ **ಪಾಠಾರಂಭ:**—ಕ್ಲಾಸಿನಲ್ಲಿ ಓರಣವೂ, ಅಚ್ಚುಕಟ್ಟುತನವೂ ಮೆಟ್ಟಾಗಿರ ಬೇಕು. ಅದರಿಂದ ಹುಡುಗರೆಲ್ಲರನ್ನು ನಿಲುವಿಕೆಯು ಕ್ರಮದಿಂದ ಸಾಲಾಗಿಯೂ ಂದೇ ಕಡೆಗೆ ಮುಖವಾಡಿ ಬೆಳಕಿಗೆ ಮುಂದಾಗಿಯೂ ಶಿಸ್ತಿನಿಂದ ಕೂಡ್ರಿಸಬೇಕು. ಕೆ ವರು ಕ್ಲಾಸಿನಲ್ಲಿಯ ನಂಬರುಗಳ ಅನುಕ್ರಮದಂತೆ ಕೂಡ್ರಿಸುವರು. ಇದರಿಂದ ಪೂರ್ಣ ವಾದ ಶಿಸ್ತು ಸಾಧಿಸಲಾರದು. ಗುಣಗಳನ್ನು (ಮಾರ್ಕ್) ತುಂಬುವಾಗ ಆಯಾ ನೆಂಬ ನವರು ತಾವಾಗಿಯೇ ತಮ್ಮ ಗುಣಗಳನ್ನು ಹೇಳುವರು. ಅದಕ್ಕಾಗಿ ಶಿಸ್ತು ಮುರಿ ಯಬಾರದು. ಇದರಿಂದ ಪರರನ್ನು ನೋಡುವ ದುರ್ಗುಣವು ದೂರಾಗಿ ವಿದ್ಯಾರ್ಥಿ ಳ ಚಿತ್ತೈಕಾಗ್ರತೆಯು ಬಲಿಯುವದಲ್ಲದೆ, ಆರೋಗ್ಯತೆಗೆ ಪೂರ್ಣ ಲಕ್ಷಿಸಿದಂತಾ ಗುತ್ತದೆ.

ಈ ವಿಷಯವು ಬಹುತರವಾಗಿ ಪಾಟಿಯ ಮೇಲೆಯೇ ಸಾಗುತ್ತಿರುವದರಿಂದ ದು ಸ್ವಚ್ಛತೆಯುಳ್ಳದ್ದಾಗಿರಬೇಕು. ಇಯತ್ತೆಯ ಬರಹದ ಮಾನದಂತೆ ನಾಲ್ಕನೆಯ ಯಿತ್ತೆಯ ವರೆಗೆ ಜೋಡು ಗೆರೆಗಳನ್ನು ಹೊಡೆದದ್ದಿರಬೇಕು. ಐದನೆಯ ಇಯತ್ತೆ ಯಲ್ಲಿ ಒಂದೇ ಗೆರೆಯು ಇರಬೇಕು. ಸರಿಯಾದ ಮಾರ್ಜನಿನ ಗೆರೆ ಹೊಡೆದಿರಬೇಕು. ಪೆಯತಕ್ಕ ಪೆನ್ಸಿಲು ಬಹಳ ಚಿಕ್ಕದಾಗಿಯೂ, ಬಹಳ ಉದ್ದವಾಗಿಯೂ ಇದ್ದಾಗ ಕ್ಷರಗಳು ಕೆಡುವ ಸಂಭವವು ಹೆಚ್ಚಾಗಿರುತ್ತದೆ. ಅಲ್ಲದೆ ಬರಹದ ವೇಗಕ್ಕೂ ತೊಂದ ರೆಯನ್ನುಂಟುಮಾಡುತ್ತದೆ. ಆದ್ದರಿಂದ ಮಧ್ಯಮ ತರಗತಿಯದಿರಬೇಕು.

೫. **ಹೇಳುವದು:**— ಹೇಳತಕ್ಕ ವಾಕ್ಯದಲ್ಲಿ ವಿಷಯ ಯೋಜನೆಯು ಂಡವಾಗದಂತೆ ಎರಡು–ಮೂರು ಭಾಗಗಳನ್ನು ಮಾಡಿ, ಅವುಗಳಲ್ಲಿ ಮೊದಲನೆಯ ನ್ನು ಒಮ್ಮೆ ಉಚ್ಚರಿಸ (ಓದಿ) ಬೇಕು. ಸಾಕಷ್ಟು ಸಮಯದ ನಂತರ ತೊಮ್ಮೆ ಉಚ್ಚರಿಸಿ ಮುಂದೆ ಸಾಗಬೇಕು. ಅಂದರೆ ಈ ವಿಷಯು ನಡೆದಾಗ ಆಗಾಗ್ಗೆ ಾಸ್ತರರ ಧ್ವನಿಯ ಹೊರ್ತಾಗಿ ಯಾವ ಸದ್ದೂ ಆಗದು.

ಈ ವಿಷಯದಲ್ಲಿ ಕೆಲವರು ಬಹಳೇ ಗಟ್ಟಿಯಾಗಿಯೂ, ಪುನಃ ಪುನಃ ಉಚ್ಚರಿಸುತ್ತಲೂ ಹೇಳುವರು. ಇವರಿಂದ ಹುಡುಗರು ಹೇಳತಕ್ಕ ಶಬ್ದಸಮುಚ್ಚಯಗಳಿಗೆ ಪೂರ್ಣ ಲಕ್ಷಕೊಡದೆ ನಡು ನಡುವೆ ಕೇಳಹತ್ತಿ ವಿಶೇಷ ಗದ್ದಲ ಮಾಡುವದರಿಂದ ವಿಷಯದ ಮೆಟ್ಟೇ ಬದಲಾಗಿ ಪಾಠವು ಹೊಲಸಾಗುವದಲ್ಲದೆ ಹುಡುಗರ ಚಿತ್ತೈಕಾಗ್ರತೆಯೇ ಕಳಾಗುವದು; ಮತ್ತು ಬರಹದ ಶುದ್ಧಾಶುದ್ಧತೆಯ ನಿರ್ಣಯವೂ ವಿಚಾರದಿಂದ ಸಾಗಲಾರದು. ಇವಕ್ಕೂ ಮಾಸ್ತರರ ಮುಖವನ್ನೇ ನಿರೀಕ್ಷಿಸುವ ಕೆಟ್ಟ ಚಟವು ಅವರಲ್ಲಿ ನೆಲೆಗೊಳ್ಳುವದು. ಪುನಃ ಪುನಃ ಉಚ್ಚರಿಸುವ ಪರಿಪಾಠದಿಂದ ಹುಡುಗರು ಪರೀಕ್ಷೆಯ ಕಾಲದಲ್ಲಿ ನಿಯಮದಂತೆ ಹೇಳುವ ಪರೀಕ್ಷಕರ ಹೇಳಿಕೆಯಿಂದ ಗಾಬರಿಯಾಗಿ ಈ ವಿಷಯದಲ್ಲಿ ದೊರಕಿಸಿದ ಜ್ಞಾನವನ್ನೂ ಸಹ ತೋರಿಸಲಸಮರ್ಥರಾಗುವರು. ಹೇಳುವಾಗ ಅವರಿಗೆ ಗೊಂದಲವಾದುತೆನಿಸಿ ಎಷ್ಟೋ ಶಬ್ದಗಳನ್ನು ಬಿಡುತ್ತಲೂ ಅಕ್ಷರಗಳ ಸುಂದರತೆಯ ಕಡೆಗೆ ಲಕ್ಷಕೊಡಲಿಕ್ಕಾಗದೆ ಜೋರಿನಿಂದ ಬರೆಯಹತ್ತುವರು. ಈ ಅನಿಷ್ಟ ರೂಢಿಯು ಅವರಲ್ಲಿ ನೆಲೆಗೊಳ್ಳದಂತೆ ಎಚ್ಚರ ಪಡುವದಕ್ಕಾಗಿ ಒಮ್ಮೆ ಹೇಳಿದ್ದನ್ನು ಪೂರ್ಣ ಕೇಳಿಕೊಂಡು ಸ್ಮರಣದಲ್ಲಿಟ್ಟು ಬರೆಯಹತ್ತಬೇಕು. ಅಂದರೆ ಈ ವಿಷಯದಲ್ಲಿಯ ಶಬ್ದಗಳ ಶುದ್ಧತೆಯ, ಸುಂದರತೆಯ ಜ್ಞಾನವೆಲ್ಲವೂ ಹೊರಬೀಳಲಿಕ್ಕೆ ಒಳ್ಳೇ ಆಸ್ಪದವಾಗುವದು.

ಕೆಲವರು ಮಹಾಪ್ರಾಣ,ಒತ್ತು,ಶ,ಷಗಳ ಉಚ್ಚಾರಗಳನ್ನು ಬಹಳೇ ಸ್ಪಷ್ಟಮಾಡಬೇಕೆಂದು ಬೇರೆಯಾಗಿ ಉಚ್ಚರಿಸಿದಂತೆ ಮಾಡುತ್ತಾರೆ. ಹೇಳುವದೆಂದರೆ ಆಯಾ ವಾಕ್ಯ ಖಂಡಗಳನ್ನು ನೆನಪಿಗೆ ತಂದುಕೊಡುವದೇ ಹೊರತು, ಮಹಾಪ್ರಾಣ ಒತ್ತುಗಳನ್ನು ಸೂಚಿಸಿಕೊಡುವದಲ್ಲ. ಶಬ್ದಗಳಲ್ಲಿಯ ವಿಶಿಷ್ಟತೆ ಕ್ಲಿಷ್ಟತೆಯನ್ನು ಹುಡುಗರೇ ತಮ್ಮ ಜ್ಞಾನದಿಂದ ಕಂಡುಹಿಡಿಯುತಕ್ಕದ್ದು. ಅವಕ್ಕಾಗಿ ಸ್ವಾಭಾವಿಕವಾಗಿ ಉಚ್ಚರಿಸುವದರ ಮೇಲ್ತರದ್ದಾಗಿರುತ್ತದೆ.

ಹೇಳತಕ್ಕ ಭಾಗವು ಈ ರೀತಿ ಸುಂದರತೆಯಿಂದ ಸಾಗಿ ಮುಗಿದನಂತರ ಮತ್ತೊಮ್ಮೆ ಎಲ್ಲ ಭಾಗವನ್ನು ಸ್ವಲ್ಪ ವೇಗದಿಂದ ಓದಬೇಕು. ಇದರಿಂದ ಹಸ್ತದೋಷ ದೃಷ್ಟಿದೋಷಗಳನ್ನು ತಿದ್ದಲಿಕ್ಕೆ ಅನುವು ದೊರೆಯುವದು. ಓದುವದು ಮುಗಿದ ಕೂಡಲೆ ಎಲ್ಲರ ಪಾಟಿಗಳು ಒಮ್ಮೆಲೆ ತಮ್ಮ ಬದಿಯಲ್ಲಿ ನೆಲಕ್ಕೆ ಹೊಂದಿರಬೇಕು. ಇದರಿಂದ ಸಕಲು ಮಾಡಲು ಸಾಧ್ಯವಿಲ್ಲದಂತಾಗುವದಲ್ಲದೆ; ಶಿಸ್ತಿಗೆ ಉತ್ತೇಜಕವಾಗುವದು.

೬ **ಬರೆಯುವಾಗ ಹುಡುಗರು ಮಾಡುವ ತಪ್ಪುಗಳು:** – ಹೇಳಿದ ಶಬ್ದಗಳನ್ನು ಮೊದಲು ಪೂರ್ಣ ಕೇಳಿಕೊಂಡು ಸ್ಮರಣದಲ್ಲಿಟ್ಟುಕೊಂಡು, ನಂತರ ಬರೆಯಲು ಪ್ರಾರಂಭಿಸಬೇಕು. ಬರೆಯುವಾಗ ಸಾವಕಾಶವಾಗಿಯೂ, ಶಬ್ದಗಳ ನಡುವೆ ಸ್ವಲ್ಪ ಸ್ಥಳಬಿಡುತ್ತಲೂ ಬರೆಯಹತ್ತಬೇಕು. ಹೀಗೆ ಮಾಡದೆ ಹೇಳಹೇಳುತ್ತಲೇ ಬರಹವನು ಆರಂಭಿಸಿ ಮೊದಲಿನ ಒಂದೆರಡು ಶಬ್ದಗಳನು ಬರೆದು, ಮುಂದೆ ಹೇಳಿದ

ಶಬ್ದಗಳು ಸ್ಮರಣದಲ್ಲಿರದೆ ತೊಂದರೆಯುಲ್ಲಿ ತೊಡಕಿ ಕಕ್ಕಾವಿಕ್ಕಿಯಾಗುವರು. ಇದ ಕ್ಕಾಗಿ ಮುಂದಿನ ಸಾರೆ ಬಹಳೇ ಅನಸರ ಮಾಡುವರು. ಆಗಲೂ ಯಶಸ್ವಿಯಾಗರಿಷ್ಟೇ ಅಲ್ಲ; ಅಕ್ಷರಗಳ ಸುಂದರತೆಯ ಕಡೆಗೆ ಲಕ್ಷವೇ ಉಳಿಯದಂತಾಗುವದು. ಹೀಗೆ ಅವರ ಜ್ಞಾನವು ಹೊರಬೀಳಲು ಆತಂಕವಾಗಿ ವಿಷಯವೇ ಮಸಮಸಕಾಗುವದು. ಈ ರೀತಿ ಪರಿತಪವನ್ನು ಕೊಡುವ ವೇಳೆಯು ನಿರರ್ಥಕವಾಗುವದು.

ಪೆನ್ಸಿಲು ಹಿಡಿಯುವ ಶಿಸ್ತು ಗೊತ್ತಾಗದ ಪ್ರಸಂಗದಲ್ಲಿ ಅವರು ಬರೆಯುವಾಗ ಚಿರಕ್. ಚಿರಕ್ ಎಂದು ಒದರಿ ಹೇಳುವದು. ತಕ್ಷಣವೇ ಶಿಕ್ಷಕರು ಅವನೆಡೆಗೆ ಹೋಗಿ ಹಿಡಿಯುವ ಪದ್ಧತಿಯ ದೋಷವನ್ನೂ, ಬರೆಯುವಾಗ ಪೆನ್ಸಿಲು ನಡೆಯಿಸುವಲ್ಲಾದ ದೋಷವನ್ನೂ ತಿದ್ದಬೇಕು. ಹಲಿಗೆಗೆ ಪೆನ್ಸಿಲನ್ನು ಕಾಟಕೋಣಾಗಿ ಹಚ್ಚುವದೇ ಈ ದೋಷವು; ಇದರಿಂದ ಬರವಣಿಗೆಯು ಮುಂದವಾಗುವದಲ್ಲದೆ, ಅಕ್ಷರಗಳ ಸುಂದರತೆಯು ನಶಿಸುವದು. ಇದಕ್ಕಾಗಿ ಮಾಸ್ತರರು ಒಂದೆಡೆಯಲ್ಲಿ ಶಾಂತಚಿತ್ತದಿಂದ ಕೂಡ್ರಬೇಕಾಗುತ್ತದೆ. ಕೆಲವರು ಅಡ್ಡಾಡುತ್ತ ಹೇಳುವದೂ, ಎರಡನೆಯ ಕ್ಲಾಸಿನ ಬೇರೊಂದು ವಿಷಯವನ್ನು ಸಾಗಿಸುತ್ತ ನಡುನಡುವೆ ಈ ವಿಷಯವನ್ನು ನಡೆಯಿಸುವದೂ ಎಷ್ಟು ಅನಿಷ್ಟವೆಂಬದು ಈ ಎಲ್ಲ ಸಂಗತಿಗಳಿಂದ ಗೊತ್ತಾಗದೆ ಇರದು.

೭ ತಪಾಸಿಸುವದು:— ಶಿಕ್ಷಕರು ಕುಳಿತಲ್ಲಿಯೇ ಒಬ್ಬೊಬ್ಬನ ಪಾಟಿಯನ್ನೇ ಕ್ರಮದಿಂದ ತರಿಸಿಕೊಂಡು ಅವರು ಮಾಡಿದ ತಪ್ಪುಗಳನ್ನು ಅವನಿಗೆ ತಿಳಿಸುವ ವ್ಯಕ್ತಿ ಶಿಕ್ಷಣವು ಫಲಕಾರಿಯು. ಎಲ್ಲರ ಪಾಟಿಗಳನ್ನು ತೆಗೆದುಕೊಂಡು, ಸಾಧ್ಯವಿದ್ದರೆ ಅವರೆಲ್ಲರ ಸಮ್ಮುಖದಲ್ಲಿ ಅವರವರ ತಪ್ಪುಗಳನ್ನು ತಪ್ಪಿದವನನ್ನುದ್ದೇಶಿಸಿ, ಕ್ಲಾಸಿನ ಲಕ್ಷಕ್ಕೆ ತಂದುಕೊಡುವದು ಅದಕ್ಕೂ ಮುಂದಡಿಯ ಫಲಕಾರಿಯು. ಇನ್ನು ಕೆಲವರು ಪಾಟಿಗಳನ್ನು ಬದಲಿಸಿ ವಿದ್ಯಾರ್ಥಿಗಳೇ ಪರೀಕ್ಷಿಸುವಂತೆಯೂ ಅಥವಾ ಹಿರೇಮಣಿಯಿಂದಲೂ ಪರೀಕ್ಷೆಯನ್ನು ಸಾಗಿಸುವರು. ಇದು ಎಷ್ಟು ಅನಿಷ್ಟವೆಂಬದು ಹಿಂದೆ ವಿವೇಚಿಸಿದ ಉದ್ದೇಶವಿವರಣೆಯಿಂದ ತಾನೇ ತಿಳಿಯುವದು. ಹುಡುಗರು ತಮ್ಮತಮ್ಮೊಳಗೆ ಮಾತಾಡಿಕೊಂಡು ತಪ್ಪು ತಿದ್ದಿ ಇಬ್ಬರೂ ಸರಿಯಾಗಿ ಬರೆದಿರುವೆವೆಂದು ತೋರಿಸುವರು. ಇದರಿಂದ ಅವರು ದಡ್ಡರೂ, ತಕ್ಕರೂ ಆಗುವವಕ್ಕೆ ಉತ್ತೇಜನ ಕೊಟ್ಟಂತಾಗುತ್ತದೆ. ಕಲಿಯುವದೆಂದರೆ ತಪ್ಪುಗಳನ್ನು ತಿದ್ದಿಕೊಳ್ಳುವದೂ, ಹೊಸಪನ್ನು ಗೊತ್ತುಮಾಡಿಕೊಳ್ಳುವದೂ ಆಗಿರುತ್ತದೆ. ಅಂದರೆ ಕಲಿಯುತ್ತಿರುವ ಪ್ರತಿಯೊಬ್ಬನು ತಪ್ಪುತ್ತಿರುವನೆಂದರ್ಥ; ಈ ರೀತಿ ತಪ್ಪುಗಾರನು ತಪ್ಪುಗಳನ್ನು ಹೇಗೆ ತಿದ್ದುವನು? ಅಂದಮೇಲೆ ಹುಡುಗರಿಂದ ಪರೀಕ್ಷಿಸುವದು ಅನಿಷ್ಟವೆಂದಾಯಿತು. ಇಷ್ಟಾದಿದ್ದರೆ ತಪ್ಪಿದವರು ತಿದ್ದಿ ಪುನಃ ಬರೆದು ತಂದಾಗ ಅವರೇ ಪರೀಕ್ಷಿಸಬಹುದು. ಅಂದರೆ ಶಬ್ದಗಳ ಶುದ್ಧತೆಯ ವಿವೇಚನೆಯು ಈಗ ಸರಿಯಾಗಿ ಸಾಗಲಿಕ್ಕೆ ಬಿಡ್ತಿಯಿಲ್ಲ.

೮ ತಪ್ಪಿಗೆ ಹೆಟ್ಟುಗಳ ಶಿಕ್ಷೆಯಲ್ಲ:— ವಿದ್ಯಾರ್ಥಿಗಳು ಬರಹದಲ್ಲಿ ತಪ್ಪಿದ ಮೇಲೆ ಅವರ ತಪ್ಪುಗಳಷ್ಟು ಹೊಡತಗಳನ್ನು ಕೆಲವರು ಕೊಡುತ್ತಿರುವರು. ಆ ತಪ್ಪು

ಗಳು ಅವರ ಮೈಗಳ್ಳತನದಿಂದಾಗಲಿ, ದುರ್ಲಕ್ಷದಿಂದಾಗಲಿ ಆಗಿದ್ದರೆ ಮಾತ್ರ ಈ ರೀತಿ ದೇಹದಂಡನೆಯನ್ನು ಕೊಡಬಹುದು. ಆದರೆ ಹೊಸವಿಷಯದಲ್ಲಿ ಅವನಿಗಿರುವ ಅಜ್ಞಾನಕ್ಕೆ ಶಿಕ್ಷೆಯೇ? ಅದೆಂದೂ ಸರಿಯಾಗದು. ಆದರೆ ಈ ಹೊಡತಗಳ ನೋವಿರುವ ವರೆಗೆ ಮಾತ್ರ ತಪ್ಪುಮಾಡಬಾರದೆಂದೆನಿಸಬಹುದು. ಆದರೆ ತಪ್ಪಿನ ತಿಳುವಳಿಕೆ ಮಾತ್ರ ತಿಲಾಂಶವೂ ಬರಲಾರದು. ಆದ್ದರಿಂದ ಬರಹದ ತಪ್ಪಿಗಾಗಿ ತಪ್ಪಿದ ಶಬ್ದಗಳನ್ನು ತಿದ್ದಿ ತೋರಿಸಿದಂತೆ ಸರಿಯಾಗಿ ಬರೆದು ತರುವದರಿಂದಲೂ ಕಡಿಮೆ ಗುಣಗಳಿಂದ ಮಾನಖಂಡನೆಯಾಗುವದರಿಂದಲೂ ಯೋಗ್ಯ ಶಿಕ್ಷೆಯಾಗುವದಲ್ಲದೆ; ಸಂಸ್ಕೃತಿಯೂ ಮನೋರಂಜನವೂ, ಉತ್ತೇಜಕವೂ ಆಗುವ ಈ ಮಾರ್ಗವು ಅತ್ಯಂತ ಶ್ರೇಯಸ್ಕರವಾಗಿರುತ್ತದೆ.

ಗ್ರಂಥ ವಿಮರ್ಶೆ

ಭೀಷ್ಮನಾಟಕ

ಪುಟ ಸಂಖ್ಯೆ ೨೬೦. ಬೆಲೆ ೧ರೂ ೪ಅಣೆ.

ಗ್ರಂಥಕರ್ತರು:—ರಂಗ ಭೂಮಿ ಮಕ್ಕಳ ಪುಸ್ತಕಗಳ ಸಂಪಾದಕರಾದ **ಶ್ರೀ. ದ. ಕೃ. ಭಾರದ್ವಾಜರು ಬೆಂಗಳೂರು.**

ಇದು ಆಧುನಿಕ ಸುಪ್ರಸಿದ್ಧ ನಾಟಕ ಕರ್ತರಾದ ಸಂಗೀತ ಪಂಡಿತ ದ್ವಿಜೇಂದ್ರ ಲಾಲರಾಯರ ಮೂಲಗ್ರಂಥದ ಅನುವಾದವು. ಮಹಾಭಾರತದಲ್ಲಿ ಅತ್ಯಂತ ಮಹತ್ವದ್ದಾದ ಭೀಷ್ಮ ಚರಿತ್ರೆಯ ಆಧಾರದಿಂದ ಈ ನಾಟಕವು ರಚಿತವಾಗಿದ್ದು, ಭೀಷ್ಮನ ಪ್ರತಿಜ್ಞೆಯಿಂದ ನಿರ್ವಾಣದವರೆಗಿನ ಕಥಾಭಾಗವು ಇದರಲ್ಲಿ ಅಡಕವಾಗಿದೆ. ಧೀವರ ಕುವರಿ ಸತ್ಯವತಿ, ಕಾಶೀರಾಜನ ಮಗಳಾದ ಅಂಬೆ, ಶಾಲ್ವ ಇನೇ ಮುಂತಾದ ಕೆಲ ಕೆಲವು ಪಾತ್ರಗಳ ಘಟನಾವಳಿಗಳು ಮೂಲ ಮಹಾಭಾರತದ ಕಥಾನಕದಿಂದ ತುಸು ಮಟ್ಟಿಗೆ ಭಿನ್ನವಾಗಿ ಮೂರ್ಪಟ್ಟಿದ್ದರೂ ಅವೆಲ್ಲ ನಾಟಕದ ರಸಪರಿಪೋಷಣೆಗಾಗಿಯೇ ಕಲ್ಪಿತವಾಗಿರುವದರಿಂದ ದೋಷವಾಗೆಣಿಸಲ್ಪಡುವಂತಿಲ್ಲ. ಸತ್ಯಪ್ರತಿಜ್ಞನೂ ಪ್ರತಿಭಾಸಂಪನ್ನನೂ ಆದರ್ಶಚರಿತ್ರನೂ ಆದ ಭೀಷ್ಮನ ಚರಿತ್ರ ಚಿತ್ರವು ಚಂಚಲಚಿತ್ತಳೂ ಕುಲಟೆಯೂ ಧರ್ಮಭ್ರಷ್ಟಳೂ ಆದ ಧೀವರಕುವರಿ ಸತ್ಯವತಿಯ ದುಶ್ಚರಿತ್ರೆಯ ಕೃಷ್ಣ ಭಿತ್ತಿಯಲ್ಲಿ ಚಿತ್ರಿತವಾಗಿರುವದರಿಂದ ಗ್ರಂಥಕರ್ತರ ಭಾವನಾ ಪ್ರವಾಹವು ಎಲ್ಲೆಡೆಯಲ್ಲಿಯೂ ಒಡಮೂಡಲು ಅನುಕೂಲವುಂಟಾಗಿದೆ. ಕನ್ನಡದಲ್ಲಿ ಒಳ್ಳೆಯ ನಾಟಕಗಳು ಇಲ್ಲವೆಂದು ಹೇಳುವವರು ಒಮ್ಮೆ ಈ ಗ್ರಂಥವನ್ನು ಓದಿನೋಡಬೇಕೆಂದು ನಮ್ಮ ಆಗ್ರಹದ ಸೂಚನೆಯಿದೆ. ಭಾಷೆಯ ದೃಷ್ಟಿಯಿಂದಲೂ ವಿಷಯದ ದೃಷ್ಟಿಯಿಂದಲೂ ಈ ಗ್ರಂಥವು ಉತ್ತಮವರ್ಗಕ್ಕೆ ಸೇರಿದುದಾಗಿದೆ. ಅಚ್ಚಿನ ದೋಷಗಳೂ ವಿರಳವಾಗಿವೆ.

ಪುಸ್ತಕಗಳು ದೊರೆಯುವ ಸ್ಥಳ—

ಆನಂದಾಶ್ರಮ, ಬಸವನಗುಡಿ-ಬೆಂಗಳೂರು.

ಪ್ರಕಟಣೆ ೧

ಗಂಡುಮಕ್ಕಳ ವ್ಹ. ಫಾ. ಪರೀಕ್ಷೆಯು.

ದಕ್ಷಿಣಭಾಗ

ನಂ. 61/ G. 9193. ತಾ॥ 24–2–1927

೧೯೨೭ನೇ ಇಸವಿಯಲ್ಲಾಗುವ ಗಂಡುಮಕ್ಕಳ ವ್ಹ. ಫಾ. ಪರೀಕ್ಷೆಯು ಸಲುವಾಗಿ ಕೆಳಗೆ ಒರಿಪಂತೆ ಗದ್ಯ–ಪದ್ಯ ಪಾಠಗಳನ್ನು ಗೊತ್ತುಪಡಿಸಿದೆ.

ಕನ್ನಡ

ಮೊದಲನೆಯ ಸದರು:—

(ಅ) ಗದ್ಯ:– ಕ್ರಮಿಕ ೭ನೇ ಪುಸ್ತಕ (೧೯೨೪ನೇ ಇ. ಆವೃತ್ತಿ) ಸಂಪೂರ್ಣ.

(ಬ) ಪದ್ಯ:– ಕ್ರಮಿಕ ೭ನೇ ಪುಸ್ತಕದೊಳಗಿನ ೨೮, ೩೨, ೩೬, ೪೦, ೪೪, ೪೮, ೫೧ ಮತ್ತು ೫೫ನೆಯ ಪಾಠಗಳು.

ಮರಾಠಿ

ಮೊದಲನೆಯ ಸದರು:—

(ಅ) ಗದ್ಯ:– ಕ್ರಮಿಕ ೭ನೇಯ ಪುಸ್ತಕ (೧೯೨೪ನೇ ಇ. ಆವೃತ್ತಿ) ಸಂಪೂರ್ಣ.

(ಬ) ಪದ್ಯ:– ಕ್ರಮಿಕ ೭ನೆಯ ಪುಸ್ತಕದೊಳಗಿನ ೧೧, ೧೫, ೩೨, ೩೬, ೪೦, ೪೪ ಮತ್ತು ೫೧ನೆಯ ಪಾಠಗಳು.

ಉರ್ದು ವ್ಹರ್ನ್ಯಾಕ್ಯುಲರ

ಮೊದಲನೆಯ ಸದರ:—

(ಅ) ಗದ್ಯ:– ೭ನೇ ವರ್ಗದ ಉರ್ದುಕೋರ್ಸ (ಪಂಜಾಬ ಸೇರೀಜ) ಎರಡನೆಯ ಆವೃತ್ತಿ ಪಾನು ೫ ರಿಂದ ೧೦೨ರ ವರೆಗೆ.

(ಬ) ಪದ್ಯ:– ಮುಸದ್ದಾಸ–ಇ–ಹಾಲಿ, ೫೦ ಪದ್ಯಗಳು (ಬಂದಗಳು) ಅಥವಾ ೫೬ನೇ ಪದ್ಯದಿಂದ ೩೦೦ ಪದ್ಯಾರ್ಧಗಳು.

೭ನೆ ಸದರು:— ಕನ್ನಡ (ಐಚ್ಛಿಕ)

ಕ್ರಮಿಕ ೫ನೇ ಪುಸ್ತಕ (೧೯೨೪) ದೊಳಗಿನ ೬, ೮, ೧೩, ೨೩, ೨೫, ೨೭, ೨೮, ೩೨, ೫೮, ೮೯, ೬೫, ೭೩, ೭೫, ೭೪, ೭೮, ೭೯, ೮೩ ಮತ್ತು ೯೨ನೇ ಪಾಠಗಳು (ಒಟ್ಟು ೨೦ ಪಾಠಗಳು).

೭ನೇ ಸದರು:— ಮರಾಠಿ (ಐಚ್ಛಿಕ)

ಕ್ರಮಿಕ ೫ನೇ ಪುಸ್ತಕ (೧೯೨೪) ದೊಳಗಿನ ೨, ೩, ೪, ೬, ೮, ೯, ೧೩, ೧೫, ೧೬, ೨೦, ೨೧, ೨೫, ೨೭, ೨೯, ೩೨, ೩೭, ೩೮, ೪೦, ೪೩ ಮತ್ತು ೪೭ನೇ ಪಾಠಗಳು (ಒಟ್ಟು ೨೦ ಪಾಠಗಳು).

ವ್ಹರ್ನ್ಯಾಕ್ಯೂಲರ–ಉರ್ದು

೧ನೇ ಸದರು:— ಕನ್ನಡ.

(ಅ) ಕ್ರಮಿಕ ೭ನೇ ಪುಸ್ತಕ (೧೯೨೪) ದೊಳಗಿನ ೧, ೨, ೪, ೫, ೬, ೧೦, ೨೦, ೨೧, ೪೩, ೪೫, ೫೫, ೫೦, ೫೪, ೫೮, ೬೦, ೬೧, ೬೨, ೬೪, ೬೫, ೬೭, ೬೮, ೭೦, ೭೧, ೭೨, ೭೪, ೭೫, ೭೭, ೭೮, ೭೯, ೮೦, ೮೧, ೮೨, ೮೪, ೮೫, ೮೬, ೮೭, ೮೮, ೮೯, ೯೦, ೯೧, ೯೨, ೯೩, ೯೪, ೯೫, ೯೬, ೯೭, ೯೮, ೯೯, ೧೦೦, ೧೦೧, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧, ೧೧೨, ೧೧೩, ೧೧೪, ೧೧೫, ೧೧೬, ೧೧೭, ೧೧೮, ೧೧೯, ೧೨೦, ೧೨೧, ೧೨೨, ೧೨೩, ೧೨೪, ೧೨೫, ೧೨೬, ೧೨೭, ೧೨೮, ೧೨೯, ೧೩೦, ೧೩೧, ೧೩೨, ೧೩೩, ೧೩೪, ೧೩೫, ೧೩೬, ೧೩೭, ೧೩೮, ೧೩೯, ೧೪೦, ೧೪೧, ೧೪೨, ೧೪೩, ೧೪೪, ೧೪೫, ೧೪೬, ೧೪೭, ೧೪೮, ೧೪೯, ೧೫೦, ೧೫೧, ೧೫೨, ೧೫೩, ೧೫೪, ೧೫೫, ೧೫೬, ೧೫೭, ೧೫೮, ೧೫೯, ೧೬೦, ೧೬೧, ೧೬೨, ೧೬೩, ೧೬೪, ೧೬೫, ೧೬೬, ೧೬೭, ೧೬೮, ೧೬೯, ೧೭೦, ೧೭೧, ೧೭೨, ೧೭೩, ೧೭೪, ೧೭೫, ೧೭೬, ೧೭೭, ೧೭೮, ೧೭೯, ೧೮೦, ೧೮೧, ೧೮೨, ೧೮೩, ೧೮೪, ೧೮೫, ೧೮೬, ೧೮೭, ೧೮೮, ೧೮೯, ೧೯೦, ೧೯೧, ೧೯೨, ೧೯೩, ೧೯೪, ೧೯೫, ೧೯೬, ೧೯೭, ೧೯೮, ೧೯೯, ೨೦೦, ೨೦೧, ೨೦೨, ೨೦೩, ೨೦೪, ೨೦೫, ೨೦೬, ೨೦೭, ೨೦೮, ೨೦೯, ೨೧೦, ೨೧೧, ೨೧೨, ೨೧೩, ೨೧೪, ೨೧೫, ೨೧೬, ೨೧೭, ೨೧೮, ೨೧೯, ೨೨೦, ೨೨೧, ೨೨೨, ೨೨೩, ೨೨೪, ೨೨೫, ೨೨೬, ೨೨೭, ೨೨೮, ೨೨೯, ೨೩೦, ೨೩೧, ೨೩೨, ೨೩೩, ೨೩೪, ೨೩೫, ೨೩೬, ೨೩೭, ೨೩೮, ೨೩೯, ೨೪೦, ೨೪೧, ೨೪೨, ೨೪೩, ೨೪೪, ೨೪೫, ೨೪೬, ೨೪೭, ೨೪೮, ೨೪೯, ೨೫೦, ೨೫೧, ೨೫೨, ೨೫೩, ೨೫೪, ೨೫೫, ೨೫೬, ೨೫೭, ೨೫೮, ೨೫೯, ೨೬೦, ೨೬೧, ೨೬೨, ೨೬೩, ೨೬೪, ೨೬೫, ೨೬೬, ೨೬೭, ೨೬೮, ೨೬೯, ೨೭೦, ೨೭೧, ೨೭೨, ೨೭೩, ೨೭೪, ೨೭೫, ೨೭೬, ೨೭೭, ೨೭೮, ೨೭೯, ೨೮೦, ೨೮೧, ೨೮೨, ೨೮೩, ೨೮೪, ೨೮೫, ೨೮೬, ೨೮೭, ೨೮೮, ೨೮೯, ೨೯೦, ೨೯೧, ೨೯೨, ೨೯೩, ೨೯೪, ೨೯೫, ೨೯೬, ೨೯೭, ೨೯೮, ೨೯೯, ೩೦೦, ೩೦೧, ೩೦೨, ೩೦೩, ೩೦೪, ೩೦೫, ೩೦೬, ೩೦೭, ೩೦೮, ೩೦೯, ೩೧೦, ೩೧೧, ೩೧೨, ೩೧೩, ೩೧೪, ೩೧೫, ೩೧೬, ೩೧೭, ೩೧೮, ೩೧೯, ೩೨೦, ೩೨೧, ೩೨೨, ೩೨೩, ೩೨೪, ೩೨೫, ೩೨೬, ೩೨೭, ೩೨೮, ೩೨೯, ೩೩೦, ೩೩೧, ೩೩೨, ೩೩೩, ೩೩೪, ೩೩೫, ೩೩೬, ೩೩೭, ೩೩೮, ೩೩೯, ೩೪೦, ೩೪೧, ೩೪೨, ೩೪೩, ೩೪೪, ೩೪೫, ೩೪೬, ೩೪೭, ೩೪೮, ೩೪೯, ೩೫೦, ೩೫೧, ೩೫೨, ೩೫೩, ೩೫೪, ೩೫೫, ೩೫೬, ೩೫೭, ೩೫೮, ೩೫೯, ೩೬೦, ೩೬೧, ೩೬೨, ೩೬೩, ೩೬೪, ೩೬೫, ೩೬೬, ೩೬೭, ೩೬೮, ೩೬೯, ೩೭೦, ೩೭೧, ೩೭೨, ೩೭೩, ೩೭೪, ೩೭೫, ೩೭೬, ೩೭೭, ೩೭೮, ೩೭೯, ೩೮೦, ೩೮೧, ೩೮೨, ೩೮೩, ೩೮೪, ೩೮೫, ೩೮೬, ೩೮೭, ೩೮೮, ೩೮೯, ೩೯೦, ೩೯೧, ೩೯೨, ೩೯೩, ೩೯೪, ೩೯೫, ೩೯೬, ೩೯೭, ೩೯೮, ೩೯೯, ೪೦೦, ೪೦೧, ೪೦೨, ೪೦೩, ೪೦೪, ೪೦೫, ೪೦೬, ೪೦೭, ೪೦೮, ೪೦೯, ೪೧೦, ೪೧೧, ೪೧೨, ೪೧೩, ೪೧೪, ೪೧೫, ೪೧೬, ೪೧೭, ೪೧೮, ೪೧೯, ೪೨೦, ೪೨೧, ೪೨೨, ೪೨೩, ೪೨೪, ೪೨೫, ೪೨೬, ೪೨೭, ೪೨೮, ೪೨೯, ೪೩೦, ೪೩೧, ೪೩೨, ೪೩೩, ೪೩೪, ೪೩೫, ೪೩೬, ೪೩೭, ೪೩೮, ೪೩೯, ೪೪೦, ೪೪೧, ೪೪೨, ೪೪೩, ೪೪೪, ೪೪೫, ೪೪೬, ೪೪೭, ೪೪೮, ೪೪೯, ೪೫೦, ೪೫೧, ೪೫೨, ೪೫೩, ೪೫೪, ೪೫೫, ೪೫೬, ೪೫೭, ೪೫೮, ೪೫೯, ೪೬೦, ೪೬೧, ೪೬೨, ೪೬೩, ೪೬೪, ೪೬೫, ೪೬೬, ೪೬೭, ೪೬೮, ೪೬೯, ೪೭೦, ೪೭೧, ೪೭೨, ೪೭೩, ೪೭೪, ೪೭೫, ೪೭೬, ೪೭೭, ೪೭೮, ೪೭೯, ೪೮೦, ೪೮೧, ೪೮೨, ೪೮೩, ೪೮೪, ೪೮೫, ೪೮೬, ೪೮೭, ೪೮೮, ೪೮೯, ೪೯೦, ೪೯೧, ೪೯೨, ೪೯೩, ೪೯೪, ೪೯೫, ೪೯೬, ೪೯೭, ೪೯೮, ೪೯೯, ೫೦೦, ೫೦೧, ೫೦೨, ೫೦೩, ೫೦೪, ೫೦೫, ೫೦೬, ೫೦೭, ೫೦೮, ೫೦೯, ೫೧೦, ೫೧೧, ೫೧೨, ೫೧೩, ೫೧೪, ೫೧೫, ೫೧೬, ೫೧೭, ೫೧೮, ೫೧೯, ೫೨೦, ೫೨೧, ೫೨೨, ೫೨೩, ೫೨೪, ೫೨೫, ೫೨೬, ೫೨೭, ೫೨೮, ೫೨೯, ೫೩೦, ೫೩೧, ೫೩೨, ೫೩೩, ೫೩೪, ೫೩೫, ೫೩೬, ೫೩೭, ೫೩೮, ೫೩೯, ೫೪೦, ೫೪೧, ೫೪೨, ೫೪೩, ೫೪೪, ೫೪೫, ೫೪೬, ೫೪೭, ೫೪೮, ೫೪೯, ೫೫೦, ೫೫೧, ೫೫೨, ೫೫೩, ೫೫೪, ೫೫೫, ೫೫೬, ೫೫೭, ೫೫೮, ೫೫೯, ೫೬೦, ೫೬೧, ೫೬೨, ೫೬೩, ೫೬೪, ೫೬೫, ೫೬೬, ೫೬೭, ೫೬೮, ೫೬೯, ೫೭೦, ೫೭೧, ೫೭೨, ೫೭೩, ೫೭೪, ೫೭೫, ೫೭೬, ೫೭೭, ೫೭೮, ೫೭೯, ೫೮೦, ೫೮೧, ೫೮೨, ೫೮೩, ೫೮೪, ೫೮೫, ೫೮೬, ೫೮೭, ೫೮೮, ೫೮೯, ೫೯೦, ೫೯೧, ೫೯೨, ೫೯೩, ೫೯೪, ೫೯೫, ೫೯೬, ೫೯೭, ೫೯೮, ೫೯೯, ೬೦೦, ೬೦೧, ೬೦೨, ೬೦೩, ೬೦೪, ೬೦೫, ೬೦೬, ೬೦೭, ೬೦೮, ೬೦೯, ೬೧೦, ೬೧೧, ೬೧೨, ೬೧೩, ೬೧೪, ೬೧೫, ೬೧೬, ೬೧೭, ೬೧೮, ೬೧೯, ೬೨೦, ೬೨೧, ೬೨೨, ೬೨೩, ೬೨೪, ೬೨೫, ೬೨೬, ೬೨೭, ೬೨೮, ೬೨೯, ೬೩೦, ೬೩೧, ೬೩೨, ೬೩೩, ೬೩೪, ೬೩೫, ೬೩೬, ೬೩೭, ೬೩೮, ೬೩೯, ೬೪೦, ೬೪೧, ೬೪೨, ೬೪೩, ೬೪೪, ೬೪೫, ೬೪೬, ೬೪೭, ೬೪೮, ೬೪೯, ೬೫೦, ೬೫೧, ೬೫೨, ೬೫೩, ೬೫೪, ೬೫೫, ೬೫೬, ೬೫೭, ೬೫೮, ೬೫೯, ೬೬೦, ೬೬೧, ೬೬೨, ೬೬೩, ೬೬೪, ೬೬೫, ೬೬೬, ೬೬೭, ೬೬೮, ೬೬೯, ೬೭೦, ೬೭೧, ೬೭೨, ೬೭೩, ೬೭೪, ೬೭೫, ೬೭೬, ೬೭೭, ೬೭೮, ೬೭೯, ೬೮೦, ೬೮೧, ೬೮೨, ೬೮೩, ೬೮೪, ೬೮೫, ೬೮೬, ೬೮೭, ೬೮೮, ೬೮೯, ೬೯೦, ೬೯೧, ೬೯೨, ೬೯೩, ೬೯೪, ೬೯೫, ೬೯೬, ೬೯೭, ೬೯೮, ೬೯೯, ೭೦೦, ೭೦೧, ೭೦೨, ೭೦೩, ೭೦೪, ೭೦೫, ೭೦೬, ೭೦೭, ೭೦೮, ೭೦೯, ೭೧೦, ೭೧೧, ೭೧೨, ೭೧೩, ೭೧೪, ೭೧೫, ೭೧೬, ೭೧೭, ೭೧೮, ೭೧೯, ೭೨೦, ೭೨೧, ೭೨೨, ೭೨೩, ೭೨೪, ೭೨೫, ೭೨೬, ೭೨೭, ೭೨೮, ೭೨೯, ೭೩೦, ೭೩೧, ೭೩೨, ೭೩೩, ೭೩೪, ೭೩೫, ೭೩೬, ೭೩೭, ೭೩೮, ೭೩೯, ೭೪೦, ೭೪೧, ೭೪೨, ೭೪೩, ೭೪೪, ೭೪೫, ೭೪೬, ೭೪೭, ೭೪೮, ೭೪೯, ೭೫೦, ೭೫೧, ೭೫೨, ೭೫೩, ೭೫೪, ೭೫೫, ೭೫೬, ೭೫೭, ೭೫೮, ೭೫೯, ೭೬೦, ೭೬೧, ೭೬೨, ೭೬೩, ೭೬೪, ೭೬೫, ೭೬೬, ೭೬೭, ೭೬೮, ೭೬೯, ೭೭೦, ೭೭೧, ೭೭೨, ೭೭೩, ೭೭೪, ೭೭೫, ೭೭೬, ೭೭೭, ೭೭೮, ೭೭೯, ೭೮೦, ೭೮೧, ೭೮೨, ೭೮೩, ೭೮೪, ೭೮೫, ೭೮೬, ೭೮೭, ೭೮೮, ೭೮೯, ೭೯೦, ೭೯೧, ೭೯೨, ೭೯೩, ೭೯೪, ೭೯೫, ೭೯೬, ೭೯೭, ೭೯೮, ೭೯೯, ೮೦೦, ೮೦೧, ೮೦೨, ೮೦೩, ೮೦೪, ೮೦೫, ೮೦೬, ೮೦೭, ೮೦೮, ೮೦೯, ೮೧೦, ೮೧೧, ೮೧೨, ೮೧೩, ೮೧೪, ೮೧೫, ೮೧೬, ೮೧೭, ೮೧೮, ೮೧೯, ೮೨೦, ೮೨೧, ೮೨೨, ೮೨೩, ೮೨೪, ೮೨೫, ೮೨೬, ೮೨೭, ೮೨೮, ೮೨೯, ೮೩೦, ೮೩೧, ೮೩೨, ೮೩೩, ೮೩೪, ೮೩೫, ೮೩೬, ೮೩೭, ೮೩೮, ೮೩೯, ೮೪೦, ೮೪೧, ೮೪೨, ೮೪೩, ೮೪೪, ೮೪೫, ೮೪೬, ೮೪೭, ೮೪೮, ೮೪೯, ೮೫೦, ೮೫೧, ೮೫೨, ೮೫೩, ೮೫೪, ೮೫೫, ೮೫೬, ೮೫೭, ೮೫೮, ೮೫೯, ೮೬೦, ೮೬೧, ೮೬೨, ೮೬೩, ೮೬೪, ೮೬೫, ೮೬೬, ೮೬೭, ೮೬೮, ೮೬೯, ೮೭೦, ೮೭೧, ೮೭೨, ೮೭೩, ೮೭೪, ೮೭೫, ೮೭೬, ೮೭೭, ೮೭೮, ೮೭೯, ೮೮೦, ೮೮೧, ೮೮೨, ೮೮೩, ೮೮೪, ೮೮೫, ೮೮೬, ೮೮೭, ೮೮೮, ೮೮೯, ೮೯೦, ೮೯೧, ೮೯೨, ೮೯೩, ೮೯೪, ೮೯೫, ೮೯೬, ೮೯೭, ೮೯೮, ೮೯೯, ೯೦೦, ೯೦೧, ೯೦೨, ೯೦೩, ೯೦೪, ೯೦೫, ೯೦೬, ೯೦೭, ೯೦೮, ೯೦೯, ೯೧೦, ೯೧೧, ೯೧೨, ೯೧೩, ೯೧೪, ೯೧೫, ೯೧೬, ೯೧೭, ೯೧೮, ೯೧೯, ೯೨೦, ೯೨೧, ೯೨೨, ೯೨೩, ೯೨೪, ೯೨೫, ೯೨೬, ೯೨೭, ೯೨೮, ೯೨೯, ೯೩೦, ೯೩೧, ೯೩೨, ೯೩೩, ೯೩೪, ೯೩೫, ೯೩೬, ೯೩೭, ೯೩೮, ೯೩೯, ೯೪೦, ೯೪೧, ೯೪೨, ೯೪೩, ೯೪೪, ೯೪೫, ೯೪೬, ೯೪೭, ೯೪೮, ೯೪೯, ೯೫೦, ೯೫೧, ೯೫೨, ೯೫೩, ೯೫೪, ೯೫೫, ೯೫೬, ೯೫೭, ೯೫೮, ೯೫೯, ೯೬೦, ೯೬೧, ೯೬೨, ೯೬೩, ೯೬೪, ೯೬೫, ೯೬೬, ೯೬೭, ೯೬೮, ೯೬೯, ೯೭೦, ೯೭೧, ೯೭೨, ೯೭೩, ೯೭೪, ೯೭೫, ೯೭೬, ೯೭೭, ೯೭೮, ೯೭೯, ೯೮೦, ೯೮೧, ೯೮೨, ೯೮೩, ೯೮೪, ೯೮೫, ೯೮೬, ೯೮೭, ೯೮೮, ೯೮೯, ೯೯೦, ೯೯೧, ೯೯೨, ೯೯೩, ೯೯೪, ೯೯೫, ೯೯೬, ೯೯೭, ೯೯೮, ೯೯೯, ೧೦೦೦ ಪಾಠಗಳು (ಒಟ್ಟು ೨೫೫ ಪಾಠಗಳು)

(ಬ) ಕ್ರಮಿಕ ೭ನೇ ಪುಸ್ತಕದೊಳಗಿನ ೩, ೧೯, ೨೨, ೨೬ ಮತ್ತು ೪೦ನೇ ಪಾಠಗಳೊಳಗಿನ ಕವಿತೆಗಳನ್ನು ಬಾಯಪಾಠ ಅನ್ನುವದು ಮತ್ತು ಅವುಗಳ ಅರ್ಥವನ್ನು ತಿಳಿಯುವದು.

೧ನೇ ಸದರು:— ಮರಾಠಿ.

(ಅ) ಕ್ರಮಿಕ ೭ನೇ ಪುಸ್ತಕ (೧೯೨೫) ದೊಳಗಿನ ೧, ೪, ೬, ೮, ೧೨, ೧೬, ೧೭, ೧೮, ೧೯, ೨೦, ೨೧, ೨೨, ೨೩, ೨೪, ೨೫, ೨೬, ೨೭, ೨೮, ೨೯, ೩೦, ೩೧, ೩೨, ೩೩, ೩೪, ೩೫, ೩೬, ೩೭, ೩೮, ೩೯, ೪೦, ೪೧, ೪೨, ೪೩, ೪೪, ೪೫, ೪೬, ೪೭, ೪೮, ೪೯, ೫೦, ೫೧, ೫೨, ೫೩, ೫೪, ೫೫, ೫೬, ೫೭, ೫೮, ೫೯, ೬೦, ೬೧, ೬೨, ೬೩, ೬೪, ೬೫, ೬೬, ೬೭, ೬೮, ೬೯, ೭೦, ೭೧, ೭೨, ೭೩, ೭೪, ೭೫, ೭೬, ೭೭, ೭೮, ೭೯, ೮೦, ೮೧, ೮೨, ೮೩, ೮೪, ೮೫, ೮೬, ೮೭, ೮೮, ೮೯, ೯೦, ೯೧, ೯೨, ೯೩, ೯೪, ೯೫, ೯೬, ೯೭, ೯೮, ೯೯, ೧೦೦, ೧೦೧, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧, ೧೧೨, ೧೧೩, ೧೧೪, ೧೧೫, ೧೧೬, ೧೧೭, ೧೧೮, ೧೧೯, ೧೨೦, ೧೨೧, ೧೨೨, ೧೨೩, ೧೨೪, ೧೨೫, ೧೨೬, ೧೨೭, ೧೨೮, ೧೨೯, ೧೩೦, ೧೩೧, ೧೩೨, ೧೩೩, ೧೩೪, ೧೩೫, ೧೩೬, ೧೩೭, ೧೩೮, ೧೩೯, ೧೪೦, ೧೪೧, ೧೪೨, ೧೪೩, ೧೪೪, ೧೪೫, ೧೪೬, ೧೪೭, ೧೪೮, ೧೪೯, ೧೫೦, ೧೫೧, ೧೫೨, ೧೫೩, ೧೫೪, ೧೫೫, ೧೫೬, ೧೫೭, ೧೫೮, ೧೫೯, ೧೬೦, ೧೬೧, ೧೬೨, ೧೬೩, ೧೬೪, ೧೬೫, ೧೬೬, ೧೬೭, ೧೬೮, ೧೬೯, ೧೭೦, ೧೭೧, ೧೭೨, ೧೭೩, ೧೭೪, ೧೭೫, ೧೭೬, ೧೭೭, ೧೭೮, ೧೭೯, ೧೮೦, ೧೮೧, ೧೮೨, ೧೮೩, ೧೮೪, ೧೮೫, ೧೮೬, ೧೮೭, ೧೮೮, ೧೮೯, ೧೯೦, ೧೯೧, ೧೯೨, ೧೯೩, ೧೯೪, ೧೯೫, ೧೯೬, ೧೯೭, ೧೯೮, ೧೯೯, ೨೦೦, ೨೦೧, ೨೦೨, ೨೦೩, ೨೦೪, ೨೦೫, ೨೦೬, ೨೦೭, ೨೦೮, ೨೦೯, ೨೧೦, ೨೧೧, ೨೧೨, ೨೧೩, ೨೧೪, ೨೧೫, ೨೧೬, ೨೧೭, ೨೧೮, ೨೧೯, ೨೨೦, ೨೨೧, ೨೨೨, ೨೨೩, ೨೨೪, ೨೨೫, ೨೨೬, ೨೨೭, ೨೨೮, ೨೨೯, ೨೩೦, ೨೩೧, ೨೩೨, ೨೩೩, ೨೩೪, ೨೩೫, ೨೩೬, ೨೩೭, ೨೩೮, ೨೩೯, ೨೪೦, ೨೪೧, ೨೪೨, ೨೪೩, ೨೪೪, ೨೪೫, ೨೪೬, ೨೪೭, ೨೪೮, ೨೪೯, ೨೫೦, ೨೫೧, ೨೫೨, ೨೫೩, ೨೫೪, ೨೫೫, ೨೫೬, ೨೫೭, ೨೫೮, ೨೫೯, ೨೬೦, ೨೬೧, ೨೬೨, ೨೬೩, ೨೬೪, ೨೬೫, ೨೬೬, ೨೬೭, ೨೬೮, ೨೬೯, ೨೭೦, ೨೭೧, ೨೭೨, ೨೭೩, ೨೭೪, ೨೭೫, ೨೭೬, ೨೭೭, ೨೭೮, ೨೭೯, ೨೮೦, ೨೮೧, ೨೮೨, ೨೮೩, ೨೮೪, ೨೮೫, ೨೮೬, ೨೮೭, ೨೮೮, ೨೮೯, ೨೯೦, ೨೯೧, ೨೯೨, ೨೯೩, ೨೯೪, ೨೯೫, ೨೯೬, ೨೯೭, ೨೯೮, ೨೯೯, ೩೦೦, ೩೦೧, ೩೦೨, ೩೦೩, ೩೦೪, ೩೦೫, ೩೦೬, ೩೦೭, ೩೦೮, ೩೦೯, ೩೧೦, ೩೧೧, ೩೧೨, ೩೧೩, ೩೧೪, ೩೧೫, ೩೧೬, ೩೧೭, ೩೧೮, ೩೧೯, ೩೨೦, ೩೨೧, ೩೨೨, ೩೨೩, ೩೨೪, ೩೨೫, ೩೨೬, ೩೨೭, ೩೨೮, ೩೨೯, ೩೩೦, ೩೩೧, ೩೩೨, ೩೩೩, ೩೩೪, ೩೩೫, ೩೩೬, ೩೩೭, ೩೩೮, ೩೩೯, ೩೪೦, ೩೪೧, ೩೪೨, ೩೪೩, ೩೪೪, ೩೪೫, ೩೪೬, ೩೪೭, ೩೪೮, ೩೪೯, ೩೫೦, ೩೫೧, ೩೫೨, ೩೫೩, ೩೫೪, ೩೫೫, ೩೫೬, ೩೫೭, ೩೫೮, ೩೫೯, ೩೬೦, ೩೬೧, ೩೬೨, ೩೬೩, ೩೬೪, ೩೬೫, ೩೬೬, ೩೬೭, ೩೬೮, ೩೬೯, ೩೭೦, ೩೭೧, ೩೭೨, ೩೭೩, ೩೭೪, ೩೭೫, ೩೭೬, ೩೭೭, ೩೭೮, ೩೭೯, ೩೮೦, ೩೮೧, ೩೮೨, ೩೮೩, ೩೮೪, ೩೮೫, ೩೮೬, ೩೮೭, ೩೮೮, ೩೮೯, ೩೯೦, ೩೯೧, ೩೯೨, ೩೯೩, ೩೯೪, ೩೯೫, ೩೯೬, ೩೯೭, ೩೯೮, ೩೯೯, ೪೦೦, ೪೦೧, ೪೦೨, ೪೦೩, ೪೦೪, ೪೦೫, ೪೦೬, ೪೦೭, ೪೦೮, ೪೦೯, ೪೧೦, ೪೧೧, ೪೧೨, ೪೧೩, ೪೧೪, ೪೧೫, ೪೧೬, ೪೧೭, ೪೧೮, ೪೧೯, ೪೨೦, ೪೨೧, ೪೨೨, ೪೨೩, ೪೨೪, ೪೨೫, ೪೨೬, ೪೨೭, ೪೨೮, ೪೨೯, ೪೩೦, ೪೩೧, ೪೩೨, ೪೩೩, ೪೩೪, ೪೩೫, ೪೩೬, ೪೩೭, ೪೩೮, ೪೩೯, ೪೪೦, ೪೪೧, ೪೪೨, ೪೪೩, ೪೪೪, ೪೪೫, ೪೪೬, ೪೪೭, ೪೪೮, ೪೪೯, ೪೫೦, ೪೫೧, ೪೫೨, ೪೫೩, ೪೫೪, ೪೫೫, ೪೫೬, ೪೫೭, ೪೫೮, ೪೫೯, ೪೬೦, ೪೬೧, ೪೬೨, ೪೬೩, ೪೬೪, ೪೬೫, ೪೬೬, ೪೬೭, ೪೬೮, ೪೬೯, ೪೭೦, ೪೭೧, ೪೭೨, ೪೭೩, ೪೭೪, ೪೭೫, ೪೭೬, ೪೭೭, ೪೭೮, ೪೭೯, ೪೮೦, ೪೮೧, ೪೮೨, ೪೮೩, ೪೮೪, ೪೮೫, ೪೮೬, ೪೮೭, ೪೮೮, ೪೮೯, ೪೯೦, ೪೯೧, ೪೯೨, ೪೯೩, ೪೯೪, ೪೯೫, ೪೯೬, ೪೯೭, ೪೯೮, ೪೯೯, ೫೦೦, ೫೦೧, ೫೦೨, ೫೦೩, ೫೦೪, ೫೦೫, ೫೦೬, ೫೦೭, ೫೦೮, ೫೦೯, ೫೧೦, ೫೧೧, ೫೧೨, ೫೧೩, ೫೧೪, ೫೧೫, ೫೧೬, ೫೧೭, ೫೧೮, ೫೧೯, ೫೨೦, ೫೨೧, ೫೨೨, ೫೨೩, ೫೨೪, ೫೨೫, ೫೨೬, ೫೨೭, ೫೨೮, ೫೨೯, ೫೩೦, ೫೩೧, ೫೩೨, ೫೩೩, ೫೩೪, ೫೩೫, ೫೩೬, ೫೩೭, ೫೩೮, ೫೩೯, ೫೪೦, ೫೪೧, ೫೪೨, ೫೪೩, ೫೪೪, ೫೪೫, ೫೪೬, ೫೪೭, ೫೪೮, ೫೪೯, ೫೫೦, ೫೫೧, ೫೫೨, ೫೫೩, ೫೫೪, ೫೫೫, ೫೫೬, ೫೫೭, ೫೫೮, ೫೫೯, ೫೬೦, ೫೬೧, ೫೬೨, ೫೬೩, ೫೬೪, ೫೬೫, ೫೬೬, ೫೬೭, ೫೬೮, ೫೬೯, ೫೭೦, ೫೭೧, ೫೭೨, ೫೭೩, ೫೭೪, ೫೭೫, ೫೭೬, ೫೭೭, ೫೭೮, ೫೭೯, ೫೮೦, ೫೮೧, ೫೮೨, ೫೮೩, ೫೮೪, ೫೮೫, ೫೮೬, ೫೮೭, ೫೮೮, ೫೮೯, ೫೯೦, ೫೯೧, ೫೯೨, ೫೯೩, ೫೯೪, ೫೯೫, ೫೯೬, ೫೯೭, ೫೯೮, ೫೯೯, ೬೦೦, ೬೦೧, ೬೦೨, ೬೦೩, ೬೦೪, ೬೦೫, ೬೦೬, ೬೦೭, ೬೦೮, ೬೦೯, ೬೧೦, ೬೧೧, ೬೧೨, ೬೧೩, ೬೧೪, ೬೧೫, ೬೧೬, ೬೧೭, ೬೧೮, ೬೧೯, ೬೨೦, ೬೨೧, ೬೨೨, ೬೨೩, ೬೨೪, ೬೨೫, ೬೨೬, ೬೨೭, ೬೨೮, ೬೨೯, ೬೩೦, ೬೩೧, ೬೩೨, ೬೩೩, ೬೩೪, ೬೩೫, ೬೩೬, ೬೩೭, ೬೩೮, ೬೩೯, ೬೪೦, ೬೪೧, ೬೪೨, ೬೪೩, ೬೪೪, ೬೪೫, ೬೪೬, ೬೪೭, ೬೪೮, ೬೪೯, ೬೫೦, ೬೫೧, ೬೫೨, ೬೫೩, ೬೫೪, ೬೫೫, ೬೫೬, ೬೫೭, ೬೫೮, ೬೫೯, ೬೬೦, ೬೬೧, ೬೬೨, ೬೬೩, ೬೬೪, ೬೬೫, ೬೬೬, ೬೬೭, ೬೬೮, ೬೬೯, ೬೭೦, ೬೭೧, ೬೭೨, ೬೭೩, ೬೭೪, ೬೭೫, ೬೭೬, ೬೭೭, ೬೭೮, ೬೭೯, ೬೮೦, ೬೮೧, ೬೮೨, ೬೮೩, ೬೮೪, ೬೮೫, ೬೮೬, ೬೮೭, ೬೮೮, ೬೮೯, ೬೯೦, ೬೯೧, ೬೯೨, ೬೯೩, ೬೯೪, ೬೯೫, ೬೯೬, ೬೯೭, ೬೯೮, ೬೯೯, ೭೦೦, ೭೦೧, ೭೦೨, ೭೦೩, ೭೦೪, ೭೦೫, ೭೦೬, ೭೦೭, ೭೦೮, ೭೦೯, ೭೧೦, ೭೧೧, ೭೧೨, ೭೧೩, ೭೧೪, ೭೧೫, ೭೧೬, ೭೧೭, ೭೧೮, ೭೧೯, ೭೨೦, ೭೨೧, ೭೨೨, ೭೨೩, ೭೨೪, ೭೨೫, ೭೨೬, ೭೨೭, ೭೨೮, ೭೨೯, ೭೩೦, ೭೩೧, ೭೩೨, ೭೩೩, ೭೩೪, ೭೩೫, ೭೩೬, ೭೩೭, ೭೩೮, ೭೩೯, ೭೪೦, ೭೪೧, ೭೪೨, ೭೪೩, ೭೪೪, ೭೪೫, ೭೪೬, ೭೪೭, ೭೪೮, ೭೪೯, ೭೫೦, ೭೫೧, ೭೫೨, ೭೫೩, ೭೫೪, ೭೫೫, ೭೫೬, ೭೫೭, ೭೫೮, ೭೫೯, ೭೬೦, ೭೬೧, ೭೬೨, ೭೬೩, ೭೬೪, ೭೬೫, ೭೬೬, ೭೬೭, ೭೬೮, ೭೬೯, ೭೭೦, ೭೭೧, ೭೭೨, ೭೭೩, ೭೭೪, ೭೭೫, ೭೭೬, ೭೭೭, ೭೭೮, ೭೭೯, ೭೮೦, ೭೮೧, ೭೮೨, ೭೮೩, ೭೮೪, ೭೮೫, ೭೮೬, ೭೮೭, ೭೮೮, ೭೮೯, ೭೯೦, ೭೯೧, ೭೯೨, ೭೯೩, ೭೯೪, ೭೯೫, ೭೯೬, ೭೯೭, ೭೯೮, ೭೯೯, ೮೦೦, ೮೦೧, ೮೦೨, ೮೦೩, ೮೦೪, ೮೦೫, ೮೦೬, ೮೦೭, ೮೦೮, ೮೦೯, ೮೧೦, ೮೧೧, ೮೧೨, ೮೧೩, ೮೧೪, ೮೧೫, ೮೧೬, ೮೧೭, ೮೧೮, ೮೧೯, ೮೨೦, ೮೨೧, ೮೨೨, ೮೨೩, ೮೨೪, ೮೨೫, ೮೨೬, ೮೨೭, ೮೨೮, ೮೨೯, ೮೩೦, ೮೩೧, ೮೩೨, ೮೩೩, ೮೩೪, ೮೩೫, ೮೩೬, ೮೩೭, ೮೩೮, ೮೩೯, ೮೪೦, ೮೪೧, ೮೪೨, ೮೪೩, ೮೪೪, ೮೪೫, ೮೪೬, ೮೪೭, ೮೪೮, ೮೪೯, ೮೫೦, ೮೫೧, ೮೫೨, ೮೫೩, ೮೫೪, ೮೫೫, ೮೫೬, ೮೫೭, ೮೫೮, ೮೫೯, ೮೬೦, ೮೬೧, ೮೬೨, ೮೬೩, ೮೬೪, ೮೬೫, ೮೬೬, ೮೬೭, ೮೬೮, ೮೬೯, ೮೭೦, ೮೭೧, ೮೭೨, ೮೭೩, ೮೭೪, ೮೭೫, ೮೭೬, ೮೭೭, ೮೭೮, ೮೭೯, ೮೮೦, ೮೮೧, ೮೮೨, ೮೮೩, ೮೮೪, ೮೮೫, ೮೮೬, ೮೮೭, ೮೮೮, ೮೮೯, ೮೯೦, ೮೯೧, ೮೯೨, ೮೯೩, ೮೯೪, ೮೯೫, ೮೯೬, ೮೯೭, ೮೯೮, ೮೯೯, ೯೦೦, ೯೦೧, ೯೦೨, ೯೦೩, ೯೦೪, ೯೦೫, ೯೦೬, ೯೦೭, ೯೦೮, ೯೦೯, ೯೧೦, ೯೧೧, ೯೧೨, ೯೧೩, ೯೧೪, ೯೧೫, ೯೧೬, ೯೧೭, ೯೧೮, ೯೧೯, ೯೨೦, ೯೨೧, ೯೨೨, ೯೨೩, ೯೨೪, ೯೨೫, ೯೨೬, ೯೨೭, ೯೨೮, ೯೨೯, ೯೩೦, ೯೩೧, ೯೩೨, ೯೩೩, ೯೩೪, ೯೩೫, ೯೩೬, ೯೩೭, ೯೩೮, ೯೩೯, ೯೪೦, ೯೪೧, ೯೪೨, ೯೪೩, ೯೪೪, ೯೪೫, ೯೪೬, ೯೪೭, ೯೪೮, ೯೪೯, ೯೫೦, ೯೫೧, ೯೫೨, ೯೫೩, ೯೫೪, ೯೫೫, ೯೫೬, ೯೫೭, ೯೫೮, ೯೫೯, ೯೬೦, ೯೬೧, ೯೬೨, ೯೬೩, ೯೬೪, ೯೬೫, ೯೬೬, ೯೬೭, ೯೬೮, ೯೬೯, ೯೭೦, ೯೭೧, ೯೭೨, ೯೭೩, ೯೭೪, ೯೭೫, ೯೭೬, ೯೭೭, ೯೭೮, ೯೭೯, ೯೮೦, ೯೮೧, ೯೮೨, ೯೮೩, ೯೮೪, ೯೮೫, ೯೮೬, ೯೮೭, ೯೮೮, ೯೮೯, ೯೯೦, ೯೯೧, ೯೯೨, ೯೯೩, ೯೯೪, ೯೯೫, ೯೯೬, ೯೯೭, ೯೯೮, ೯೯೯, ೧೦೦೦ ಪಾಠಗಳು (ಒಟ್ಟು ೨೫೫ ಪಾಠಗಳು)

(ಬ) ಕ್ರಮ

ಮೆ॥ ಎ. ಇ. ಜ. ಭಾ. ರವರ ಪತ್ರ ನಂ. 47/P. 94 ತಾ॥ 6-4-1927 ನೇದ್ದರ ಪ್ರಕಾರ ಮುಂಜೂರಾದ ಪುಸ್ತಕಗಳ ಯಾದಿಯನ್ನು ಎಲ್ಲ ಜನರ ತಿಳಿವಳಿಕೆಯಗೋಸ್ಕರ ಕೆಳಗೆ ಕೊಟ್ಟಿದೆ.

ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರು.	ಪ್ರಕಾಶಕರು.	ಬೆಲೆ.	ಯಾತಕ್ಕೋಸ್ಕರ ಮುಂಜೂರಾಗಿವೆ.
೧	ಗಜರಾ	ಎನ್. ಕೆ. ಹಂಪೀಹೊಳಿ ಮಾಸ್ತರ ಕೆ. ಎಲ್. ಎ. ಸೊಸಾಯಿಟಿ ಎಚ್. ಎಸ್. ಧಾರವಾಡ	...	೧— ೦—೦	ವಿದ್ಯಾರ್ಥಿಗಳ ಲಾಯಬ್ರರಿಗೋಸ್ಕರ
೨	ಶಿಕ್ಷಣ ಪದ್ಧತಿ	ಎಚ್. ಜಿ. ದೇಶಪಾಂಡೆ ಹೆಡ್ ಮಾಸ್ತರ ಟ್ರೇನಿಂಗಸ್ಕೂಲ ಧಾರವಾಡ	...	೧— ೪—೦	ಟ್ರೇನಿಂಗ ಸಂಸ್ಥೆಗಳ ಪತ್ಯ ಪುಸ್ತಕ
೩	ಕರ್ನಾಟಕ ವ್ಯಾಕರಣ ಸಾರಂ	ಕೆ. ಆರ್. ನರಸಿಂಹಯ್ಯ	ಕೃಷ್ಣ ಮುತ್ತ ಕಂಪನಿ ಬೆಂಗಳೂರ ಸಿಟಿ	೦—೧೮—೦	ಟ್ರೇನಿಂಗ ಸಂಸ್ಥೆಗಳ ಹಾಗೂ ಮಾಧ್ಯಮಿಕಸಾಲೆಗಳ ಪತ್ಯ ಪುಸ್ತಕ
೪	ಆರ್ಯಧರ್ಮಪ್ರದೀಪ	ಎಚ್. ಚಿದಂಬರಯ್ಯ	ಸೆಕ್ರೆಟರಿ ಕರ್ನಾಟಕ ರಾಷ್ಟ್ರೀಯ ಎಜ್ಯುಕೇಶನ್ ಕಮೀಟಿ ಧಾರವಾಡ	೩— ೦—೦	ಇನಾಮು ಹಾಗು ವಿದ್ಯಾರ್ಥಿಗಳ ಲಾಯಬ್ರರಿಗೋಸ್ಕರ

೫	ಭಾವಗೀತೆ	ಕೆ. ಎಸ್. ಬೆಟಗೇರಿ	ಸದರ	೦–೧೨–೦	ಸದರ
೬	ಸತ್ಕಥಾಲಾಪ	ಎಮ್. ಪಿ. ಪೂಜಾರ ಅಸಿll ಟೀ. ಸ್ಕೂ. ಧಾರವಾಡ	...	೦–೧೦೦–	ಪಠ್ಯ ಪುಸ್ತಕ
೭	ಪ್ರಭುಲಿಂಗಲೀಲೆ	ಡಬ್ಲ್ಯು. ಬಿ. ಬಳೇಅಂಗಡಿ ವಕೀಲ ಹುಬ್ಬಳ್ಳಿ	...	೧– ೪–೦	ಇನಾಮು ಹಾಗು ವಿದ್ಯಾರ್ಥಿಗಳ ಲಾಯಬ್ರರಿ ಗೋಸ್ಕರ
೮	ರಾಮಕಥಾ	...	ಭಗಿನೀಸಮಾಜ ಟ್ರೇ. ಕಾ. ವಿಮೆನ್ ಧಾರವಾಡ	೦– ೬–೦	ಪ್ರಾಥಮಿಕ ಸಾಲೆಗಳ ಇನಫಂಟ ಕ್ಲಾಸಿನ ಪುರವಣೀ ಪಠ್ಯ ಪುಸ್ತಕ
೯	ಆರೋಗ್ಯ ವಿಜ್ಞಾನ	...	ಸದರ	೦– ೫–೦	ಹೆಣ್ಣುಮಕ್ಕಳ ಪ್ರಾಥಮಿಕ ಸಾಲೆಗಳ ಪಠ್ಯ ಪುಸ್ತಕ
೧೦	ಜೈನಪದ್ಮ ಪುರಾಣ	ಎಮ್. ಪಿ. ಪೂಜಾರ	ಡಿ. ಪಿ. ಚೌಗುಲೆ ಮಹಾವೀರ ಪ್ರೆಸ್ ಬೆಳಗಾಂವ	೦– ೬–೦	ಇನಾಮು ಹಾಗು ವಿದ್ಯಾರ್ಥಿಗಳ ಲಾಯಬ್ರರಿ ಗೋಸ್ಕರ

ಪ್ರಕಟಣೆ.

(*Sd*) **H. A. Sadarangani**
ಎಜ್ಯುಕೆಶನಲ್ ಇನಸ್ಪೆಕ್ಟರ ದ. ಭಾ.

ಪತ್ರವ್ಯವಹಾರ

ಖಾನಾಪೂರ ಗಂಗಾಪೂರ (ಜಿ. ಧಾರವಾಡ):—ಇಲ್ಲಿಯ ಮಾಸ್ತರರಾದ ಮಿ. ಉಗಲಾಟ ಇವರು " ಹೂಲಿಕೃತ ಜವಾಖರ್ಚಿನ ಆಕ್ಷೇಪಣೆ ಮತ್ತು ಹೊಸ ಶೋಧನೆ " ಎಂಬ ಶಿರೋಲೇಖದ ಕೆಳಗೆ ಕೆಳಗಿನ ಸಂಗತಿಯನ್ನು ಬರೆಯುತ್ತಾರೆ.

ಹುಂಡಿಯ ಬಗ್ಗೆ ಬರೆದ ಪ್ರಶ್ನೆಯಲ್ಲಿ "ಶೇಕಡಾ ೧೫ರೂ. ಕಡಿಮೆಯಂತೆ ನಮ್ಮ ರಾಖಲೆಯಿಂದ ಹಿರಾಜಿ ಮೂಲಾಜಿ ಮೂರವಾಡಿ ಇವರು ಪನ್ನಾಜಿ ಮೂರವಾಡಿ ಮುಂಬಯಿ ಅಂಗಡಿ ಇವರ ಮೇಲೆ ದರ್ಶನೀ ಹುಂಡಿ ಬರಕೊಟ್ಟಿದ್ದನ್ನು ಶ್ರೀಶೈಲಪ್ಪ ಕಂಕಣಮೇಲಿ ಇವರ ಕಡೆಗೆ ಕಳುಹಿಸಿದೆವು" ಹೀಗೆ ಅದೆ.

ಈ ಪ್ರಶ್ನೆಯ ಜವಾಖರ್ಚನ್ನು ಹಿರಾಜಿ ಮೂಲಾಜಿ ಮೂರವಾಡಿಯ ಹೆಸರಿಗೆ ಖರ್ಚು ರೂ. ೧೫೪೪ ಗಳನ್ನು ಒಮ್ಮೆ ಜವಾ ಹಿಡಿದು ಪುನಃ ಹಿರಾಜಿಯ ಹೆಸರಿಗೆ ಖರ್ಚು ಬರೆದು ಶ್ರೀಶೈಲಪ್ಪನ ಹೆಸರಿಗೆ ೨೦೦ ರೂ. ಖರ್ಚು ಹಾಕಿ ಕೀರ್ದಿ ಬರೆದಿರುವದು.

ಇನ್ನು ಹುಂಡಿಯ ವಿಷಯವಾಗಿ ಮಾಡುವ ಮೂರು ರೀತಿಯ ಜವಾಖರ್ಚಿನಲ್ಲಿ ಯಾವದೊಂದು ರೀತಿಯಿಂದ ಮಾಡುವದು ಸಯುಕ್ತವೇ ಆಗಿದ್ದು ಶ್ರೀಶೈಲಪ್ಪನ ಕಡೆಗೆ ' ಪನ್ನಾಜಿಯ ಕಡೆಯಿಂದ ಹುಂಡಿ ಹಣ ಹೊಂದುವ ಬಗ್ಗೆ ' ಹುಂಡೀ ಚೀಟಿಯನ್ನು ಕಳಿಸಿರುವ ಕಾರಣ ಅವನ ಹೆಸರಿಗೆ ಖರ್ಚು ಬರೆದದ್ದು ಸರಿಯಾಗಿರುವದು.

ಹುಂಡಿ ಸಾವಕಾರನು ಹಿರಾಜಿಯಾಗಿದ್ದು ಉದ್ರಿ ಹುಂಡಿ ಚೀಟಿ ತಂದಿದ್ದರೆ ಸದರೀಯವನ ಹೆಸರಿಗೆ ಜವಾ ಹಿಡಿಯುವದು ಬರೋಬರಿಯಾಗುತ್ತಿತ್ತು. ಆದರೆ ಪುನಃ ಖರ್ಚು ಬರೆದಕಾರಣ ರೋಖ ವ್ಯವಹಾರವಾದಂತಾಯಿತು. ಯಾಕಂದರೆ ಒಂದೇ ದಿವಸದಲ್ಲಿ ಈ ಪ್ರಕಾರ ವ್ಯವಹಾರ ನಡೆದದೆ. ಇದರಿಂದ ಹಿರಾಜಿಯ ಹೆಸರಿಗೆ ಜವಾಖರ್ಚಿಯ ಜವಾಖರ್ಚು ಕಾರಣವಿಲ್ಲೆಂದು ಕಂಡುಬರುವದು.

"ನೊದಲು ನಾವು ಹುಂಡಿ ಉದ್ರೀ ತಂದಿದ್ದೆವು. ಅದರ ಸಲುವಾಗಿ ಹಿರಾಜಿಯು ಹೆಸರಿಗೆ ಜವಾ ಹಿಡಿದೆವು. ಸಾಯಂಕಾಲವಾಗುವದರೊಳಗಾಗಿ ಹಣ ಮುಟ್ಟಿಸಿದೆವು ಕಾರಣ ಖರ್ಚು ಹಾಕಿದೆವು" ಹೀಗೆ ಅನ್ನಬಹುದು. ಪ್ರಶ್ನೆಯಲ್ಲಿಂತೂ ಈ ತರದ ಬರಹವೇ ಇಲ್ಲ. ಒಂದುವೇಳೆ ಹೀಗೆ ಮಾಡಿದರೂ ಇದು ಕಚ್ಚಾ ಕೀರ್ದಿಯ ಬರಹದ ಮಾತಾಯಿತು. ಸಾಯಂಕಾಲವಾದಮೇಲೆ ಪಕ್ಕಾ ರೋಜಕೀರ್ದಿ ಬರೆಯುವಾಗ ಹಿರಾಜಿಯ ಖಾತೆಯನ್ನು ಬಿಟ್ಟು ಕೇವಲ ಶ್ರೀಶೈಲಪ್ಪನ ಹೆಸರಿಗೆ ಖರ್ಚು ಹಿಡಿದುಬಿಡುವದು ಯೋಗ್ಯವಾಗಿ ಕಾಣುವದು.

" ಕಚ್ಚಾ ಕೀರ್ದಿಯಲ್ಲಿ ಬರೆದ ಎಲ್ಲ ವ್ಯವಹಾರಗಳನ್ನು ಪಕ್ಕಾ ಕೀರ್ದಿಯಲ್ಲಿ ಬರೆಯಲಿಕ್ಕೇಬೇಕು " ಎಂದು ಅಭಿಪ್ರಾಯಪಟ್ಟರೆ ಅನವಶ್ಯಕವಾಗಿ ವೇಳೆಯು ದುರುಪಯೋಗವಾಗುವದಲ್ಲದೆ ಕೆಲಸವು ಬೆಳೆಯುವದು.

ನನ್ನ ಅನುಭವದಿಂದ ಈ ಸಂಗತಿಯನ್ನು ಕಂಡುಹಿಡಿದು ಹಿರಾಜಿಯು ಖಾತೆಗೆ ಕಾರಣವಿಲ್ಲದೆ ಎರಡೂ ಕಡೆಗೆ ಜಮಾಖರ್ಚು ಮಾಡುವದು ಸಮ್ಮತವಲ್ಲೆಂದು ಕಂಡು ಬಂದಿರುವದು.

ಎಷ್ಟೋ ಮಾಸ್ತರ ಜನರು " ಹುಂಡಿಯು ಜಮಾಖರ್ಚನ್ನು ಪದ್ಧತಿಯಂತೆ ಬರೆಯಬೇಕಾಗುವದರಿಂದ ಹೀಗೆ ಮಾಡಬೇಕಾಗುವದು " ಎಂದು ಹೇಳುತ್ತಿರುವರು. ಹೀಗಿದ್ದರೆ ಅದರ ಸಾರಾಸಾರ ವಿಚಾರಮಾಡದೆ " ತಾತನು ತೋಡಿದ ಬಾವಿ ಸೌಳು ನೀರು ಇದ್ದರೂ ಕುಡಿಯಲೇಬೇಕು " ಎಂಬ ಮೂಢ ತಿಳವಳಿಕೆಗೆ ಲಕ್ಷ್ಯಗೊಟ್ಟು ನಡೆದಂತಾಗುವದು. ಈ ತರದ ಪದ್ಧತಿಯಿಟ್ಟು ಕಲಿಸುವದರಿಂದ ಮುಲ್ಕೀಪರೀಕ್ಷೆಯು ವಿದ್ಯಾರ್ಥಿಗಳ ವಿದುಳಿನ ಪರಿಣಾಮವು ಏನಾಗುತ್ತದೆಂಬದೂ ಅವರು ಎಷ್ಟರಮಟ್ಟಿಗೆ ವ್ಯವಹಾರಧುರೀಣರಾಗುತ್ತಾರೆಂಬದೂ ಹೇಳಲಿಕ್ಕೆ ಅಸಾಧ್ಯವಾದ ಮಾತಾಗಿದೆ.

ಹೀಗೆ ನಿರರ್ಥಕ ಜಮಾಖರ್ಚು ಮಾಡುತ್ತ ಹೋದರೆ ಸಾವಕಾರರ ಗಂಟೆಲ್ಲ ಕಾರಕೂನರ ಪಗಾರಕ್ಕಾಗಿಯೇ ಹಾಳಾಗಿ ಹೋಗುವದು. ಯಾಕಂದರೆ ಒಬ್ಬನ ಕೆಲಸಕ್ಕೆ ಇಬ್ಬರು ಬೇಕಾಗುವದು. ಇದೇನು ಸರಿಯಾವದ್ದಲ್ಲ ಕಾರಣ ವಿಶೇಷ ಅನುಭವವುಳ್ಳ ಶಿಕ್ಷಕರು ಇದರ ನಿಜ ಸ್ಥಿತಿಯನ್ನು ಸವಿಸ್ತಾರವಾಗಿ ಬರೆದು ತಿಳಿಸಿ ಭಾವಿ ರಾಷ್ಟ್ರೋದ್ಧಾರಕರಾದ ಲಕ್ಷಗಟ್ಟಿ ಮುಲಿಕೀಪರೀಕ್ಷೆಯ ವಿದ್ಯಾರ್ಥಿಗಳ ಹಿತ ಮಾಡಬೇಕೆಂದು ಆಶೆಯದೆ.

ಯಾವದಾದರೊಂದು ಪ್ರಸಂಗದಲ್ಲಿ ಮನೆಯವರಿಗೆ ಕಳಿಸಿದ ಮಾಲು, ರಕಮು ಮನೀ ಖರ್ಚು ಖಾತೆಗೆ ಖರ್ಚು ಹಾಕಿದಂತೆ ಮನೆಯವರಿಂದ ಬಂದ ಮಾಲು, ರಕಮುಗಳನ್ನು ಮನೆಯ ಖಾತೆಗೂ ಜಮಾ ಹಿಡಿಯಲಿಕ್ಕೆ ಬರುವದು. ಎಷ್ಟೋ ಜನರು "ಮನೆಯ ಖಾತೆಗೆ ಖರ್ಚು ಹಿಡಿಯಲಿಕ್ಕೆ ಬರುವದು. ಜಮಾ ಹಿಡಿಯಲಿಕ್ಕೆ ಬರುವದಿಲ್ಲ. ಯಾಕಂದರೆ ಅದು ಖರ್ಚ ಖಾತೆ ಇರುವದು" ಎಂದು ಹೇಳುತ್ತಿರುವರು. ಇದೇನು ಸಮ್ಮತವಲ್ಲ. ಮನೆಯ ಜಮಾಖರ್ಚ ಖಾತೆ ಎಂದು ಹೆಸರಿಟ್ಟರೆ ಎರಡೂ ಕಡೆಗೂ ಬರಿಯಲಿಕ್ಕೆ ಬರುವದು. ಹೀಗೆ ಮಾಡಿದರೆ ಯಾವ ಮಹತ್ವದ ಅಪರಾಧವೂ ಆಗುವದಿಲ್ಲ.

ಸೂತ್ರಗಳಲ್ಲಿ ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರಗಳೆಂಬ ಮೂರು ಪ್ರಕಾರಗಳು. ವೇದಗಳ ಆಧಾರದಿಂದ ನಾಡತಕ್ಕ ಇಷ್ಟಿ, ಋತುಯಜ್ಞ, ಸೋಮ ಯಜ್ಞ ಮೊದಲಾದ ಯಜ್ಞಗಳ ವಿಷಯಕ್ಕೆ ಹೇಳುವ ನಿಯಮಗಳು ಶ್ರೌತಸೂತ್ರಗ ಳಲ್ಲಿರುವವು. ಹಿಂದು ಜನರು ಪಾಲಿಸತಕ್ಕ ಷೋಡಶ ಸಂಸ್ಕಾರಗಳ ವಿಷಯವಾಗಿ ಹೇಳಲ್ಪಟ್ಟ ನಿಯಮಗಳು ಗೃಹ್ಯಸೂತ್ರಗಳಲ್ಲಿರುವವು. ಧರ್ಮಸೂತ್ರಗಳಲ್ಲಿ ವ್ಯವ ಹಾರದಲ್ಲಿ ಅನುಸರಿಸತಕ್ಕ ನಿಯಮಗಳು ವಿವರಿಸಲ್ಪಟ್ಟಿವೆ. ಕ್ರಿ. ಶ. ಪೂ. ೬ನೇ ಶಥವಾ ೭ನೇ ಶತಮಾನದಿಂದ ೨ನೇ ಶತಮಾನದವರೆಗೆ ಸೂತ್ರಕಾಲವೆಂದು ಹೇಳ ಬಹುದು. ಬೇರೆ ಬೇರೆ ವೈದಿಕ ಶಾಖೆಗಳಿಗನುಸರಿಸಿ ಬೇರೆ ಬೇರೆ ಕಾಲಗಳಲ್ಲಿ ಸೂತ್ರ ಗಳು ರಚಿಸಲ್ಪಟ್ಟವು. ಮೂರ್ತಿ ಪೂಜೆಯ ಪ್ರಾರಂಭವು ಇದೇ ಕಾಲದಲ್ಲಿಯೇ ಆಯಿತು.

೩. **ಷಡ್ದರ್ಶನಗಳು**:—ತತ್ವಜ್ಞಾನದ ಬೇರೆ ಬೇರೆ ಪದ್ಧತಿಗಳನ್ನು ವಿವರಿ ಸುವ ಆರುಶಾಸ್ತ್ರಗಳಿಗೆ ಷಡ್ದರ್ಶನಗಳೆಂಬ ಹೆಸರು. ಅವು ಯಾವವೆಂದರೆ:—ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವ ಮೀಮಾಂಸೆ ಮತ್ತು ಉತ್ತರ ಮೀಮಾಂಸೆ.

೧. **ಸಾಂಖ್ಯ**:—ಈ ಮತದ ಪ್ರತಿಪಾದಕನು ಕಪಿಲನು. ಸಾಂಖ್ಯರು ದೇವರ ಅಸ್ತಿತ್ವವನ್ನು ಒಪ್ಪುವದಿಲ್ಲ. ಪ್ರಕೃತಿ ಪುರುಷಗಳು ಮುಖ್ಯ ತತ್ವಗಳು. ಪ್ರಕೃತಿಯೆಂ ದರೆ ಸೃಷ್ಟಿಯೂ ಸೃಷ್ಟಿಯ ವ್ಯಾಪಾರವೂ. ಪುರುಷವೆಂದರೆ ಜೀವಾತ್ಮವು.

೨. **ಯೋಗ**:—ಪತಂಜಲಿಯು ಯೋಗಸೂತ್ರವನ್ನು ಬರೆದನು. ಮೋಕ್ಷ ಸಾಧನಕ್ಕೆ ಪರಮಾತ್ಮನನ್ನು ಭಜಿಸುವದು ಅವಶ್ಯವದೆ. ಓಂಕಾರವೇ ಪರಮಾತ್ಮಸ್ವ ರೂಪವು. ಪ್ರಾಣಾಯಾಮ, ಧ್ಯಾನ, ಧಾರಣಾ, ಸಮಾಧಿಗಳಿಂದ ಸಿದ್ಧಿಯುಂಟಾಗು ತ್ತದೆ. ಸಿದ್ಧಿಯನ್ನು ಪಡೆದ ಯೋಗಿಗಳಿಗೆ ಎಲ್ಲ ಪ್ರಕಾರದ ಭೂತ, ಭವಿಷ್ಯಜ್ಞಾನವು ಉಂಟಾಗುತ್ತದೆ.

೩. **ನ್ಯಾಯ**:— ನ್ಯಾಯಶಾಸ್ತ್ರದ ಪ್ರವರ್ತಕನು ಗೌತಮನು. ನೈಯಾಯಿ ಕರು ಜೀವಾತ್ಮನು ಶರೀರದಿಂದ ಭಿನ್ನನೆಂದೂ ಅಮರನೆಂದೂ ಪ್ರತಿಪಾದಿಸುವರು. ನ್ಯಾಯಶಾಸ್ತ್ರದ ಅಭ್ಯಾಸಕ್ಕೆ ತರ್ಕಶಾಸ್ತ್ರವು ಅವಶ್ಯವು.

೪. **ವೈಶೇಷಿಕ**:—ಈ ಶಾಸ್ತ್ರದ ಪ್ರವರ್ತಕನು ಕಾಣಾದನು. ಇವನೇ ಪರಮಾ ಣುವಾದಕನು. ದೇವರ ಅಸ್ತಿತ್ವವನ್ನು ವೈಶೇಷಿಕರು ಒಪ್ಪುವದಿಲ್ಲ; ಆದರೆ ಅತಿಸೂಕ್ಷ್ಮ ಪರಮಾಣುಗಳು ಅದೃಷ್ಟವಾದ ಧರ್ಮದಿಂದ ಕೂಡಿಕೊಳ್ಳುತ್ತ ಹೋಗಿ ಪೃಥ್ವಿಯ ನ್ನುಂಟುಮಾಡುತ್ತವೆಂದು ಹೇಳುತ್ತಾರೆ. ಹೀಗೆ ವೈಶೇಷಿಕ ಮತವು ತತ್ವಜ್ಞಾನಕ್ಕೆ ಸಂಬಂಧಿಸದೆ ಪದಾರ್ಥವಿಜ್ಞಾನಶಾಸ್ತ್ರದಂತಿರುವದು.

೫. **ಪೂರ್ವಮೀಮಾಂಸೆ**:— ಜೈಮಿನಿ ಋಷಿಯಿಂದ ಪೂರ್ವಮೀಮಾಂಸವು ಪ್ರಣೀತವಾಯಿತು. ಇದರಲ್ಲಿ ಯಜ್ಞಯಾಗಾದಿಗಳ ವಿಷಯಕ್ಕೆ ವಿಸ್ತೃತವಾದ ವಿವೇಚನವಿರುವದು. ಬೌದ್ಧ ಧರ್ಮದ ಪ್ರಾಬಲ್ಯವು ಈ ಕಾಲದಲ್ಲಿ ಆಗ ಹತ್ತಿದ್ದರಿಂದ ವೈದಿಕ ಧರ್ಮದ ಮತ್ತು ಆಚರಣೆಯ ಮಹತ್ವವನ್ನು ಸ್ಥಾಪಿಸುವದು ಅವಶ್ಯವಾಗಿತ್ತು. ಈ ಕಾರ್ಯವನ್ನು ಮೀಮಾಂಸಗಳು ಕೈಕೊಂಡವು.

೬. **ಉತ್ತರ ಮೀಮಾಂಸೆ**:—. ಇದೇ ವೇದಾಂತಶಾಸ್ತ್ರದ ಸಾರವು. ಈ ಸೂತ್ರಗಳಿಗೆ ಬ್ರಹ್ಮ ಸೂತ್ರಗಳೆನ್ನುವರು. ಅವು ಬಾದರಾಯಣ ವ್ಯಾಸನಿಂದ ರಚಿತವಾದವು. ಈ ಸೂತ್ರಗಳಲ್ಲಿ ಸಾಂಖ್ಯ, ಯೋಗ, ವೈಶೇಷಿಕ ಜೈನ, ಬೌದ್ಧ ಮೊದಲಾದ ತತ್ವಾಚೀನ ಮತಗಳ ಖಂಡನವಿರುವದು. ಕಿಡಿಯು ಅಗ್ನಿಯ ಅಂಶವಿರುವಂತೆ ಜೀವಾತ್ಮವು ಪರಮಾತ್ಮನ ಅಂಶವಾಗಿರುವದು. ದೇವರು ಸರ್ವಜ್ಞನೂ ಸರ್ವಸಮರ್ಥನೂ ಆಗಿರುವನು ಎಂಬವು ಮುಖ್ಯ ತತ್ವಗಳು.

೬ನೇ ಅಧ್ಯಾಯ

ಜೈನಮತವು.

೧ ಭರತಖಂಡದಲ್ಲಿ ಹುಟ್ಟಿದ ಹೊಸಮತಗಳಲ್ಲಿ ಜೈನಮತವು ಅತಿ ಪ್ರಾಚೀನವಾದದ್ದು. ಇದರಲ್ಲಿ ಶ್ವೇತಾಂಬರ ದಿಗಂಬರ ಎಂಬ ಎರಡು ಪಂಥಗಳಿರುವವು. ೨೪ ಜನ ತೀರ್ಥಂಕರರು ಈ ಮತದ ಪ್ರವರ್ತಕರಿಂದು ಜೈನರು ಬಗೆಯುವರು. ಜೈನಮತವು ವೈದಿಕಮತದಿಂದ ಭಿನ್ನವಾಗಿರುವದು. ಉಪನಿಷತ್ಕಾಲದಲ್ಲಿ ಬ್ರಾಹ್ಮಣರಂತೆ ಕ್ಷತ್ರಿಯರೂ ಬ್ರಹ್ಮಜ್ಞಾನದ ವಿಷಯವಾಗಿ ವಿಚಾರ ಮಾಡಹತ್ತಿದರು. ಅದರಿಂದ ಆ ಕಾಲದಲ್ಲಿ ಅವರ ವೇದಾಂತ ಜ್ಞಾನವು ಕೆಲವಂಶದಿಂದ ಬೇರೆತರದ್ದಾಗಿ ಹೊಸದೊಂದು ಪಂಥವು ಅಸ್ತಿತ್ವದಲ್ಲಿ ಬಂತು, ವೈದಿಕ ಕಾಲದೊಳಗೆ ಯಜ್ಞಯಾಗಗಳಲ್ಲಿ ಆಗುವ ಪಶು ಹಿಂಸೆಗೆ ಸಾಮಾನ್ಯ ಜನರು ಬೇಸರಗೊಂಡಿದ್ದರು. ಆದುದರಿಂದ ಈ ಹೊಸಪಂಥದ ತತ್ವಗಳು ಬೇಗ ಹಬ್ಬಿ ವೈದಿಕ ಮತದ ಮಹತ್ವವು ಕೆಲಕಾಲ ಕಡಿಮೆಯಾಯಿತು. ಪಾರ್ಶ್ವನಾಥ, ಮಹಾವೀರ ಮೊದಲಾದ ಈ ಮತದ ಪ್ರವರ್ತಕರು ಕ್ಷತ್ರಿಯರು.

೨. **ಪಾರ್ಶ್ವನಾಥ**:—ಇವನು ಜೈನ ಮತದ ಆದಿಗುರುವು. ಕ್ರಿ. ಪೂ. ೮೦೦ ವರ್ಷಗಳ ಸುಮಾರಿನಲ್ಲಿ ಇದ್ದನು. ಕಾಶಿಯ ಅರಸನಾದ ಅಶ್ವಸೇನನು ಇವನ ತಂದೆಯು. ಮೋಕ್ಷಸಾಧನೆಗೆ ಶುದ್ಧಾಚರಣೆ, ಇಂದ್ರಿಯನಿಗ್ರಹ, ಭೂತದಯೆ ಮುಂತಾದವು ಅವಶ್ಯವೆಂದು ಇವನು ಪ್ರತಿಪಾದಿಸಿದನು. ಅಹಿಂಸೆ, ಸತ್ಯ, ಅಸ್ತೇಯ, ತ್ಯಾಗ ಇವೇ ನಾಲ್ಕು ಇವನ ಮುಖ್ಯ ತತ್ವಗಳು. ಶ್ವೇತಾಂಬರ ಪಂಥವು ಇವನಿಂದಲೇ ರೂಢವಾಯಿತು. ಈ ಪಂಥದ ಅನುಯಾಯಿಗಳು ಉತ್ತರ ಹಿಂದುಸ್ತಾನದಲ್ಲಿ ವಿಶೇಷವಾಗಿರುವರು.

೩. **ಮಹಾವೀರ**:—ಇವನು ಜೈನಮತದ ಕೊನೆಯ ತೀರ್ಥಂಕರನು. ಇವನ ತಾಯಿಯು ವೈಶಾಲಿಯ ಲಿಚ್ಛವಿವಂಶದ ಒಂದು ಚಿಕ್ಕ ಅರಸು ಮನೆತನದ ಹೆಣ್ಣು ಮಗಳು. ಅವಳ ಹೆಸರು ತ್ರಿಶಾಲಾ. ಸಿದ್ಧಾರ್ಥನೆಂಬವನು ಇವನ ತಂದೆಯು. ವರ್ಧಮಾನನು ಚಿಕ್ಕಮಗನು. ಇವನೇ ಮುಂದೆ ಮಹಾವೀರನಾದನು. ಮಹಾವೀರನು ಯಶೋದೆ ಎಂಬನಳನ್ನು ಮದುವೆಯಾಗಿದ್ದನು. ಇವನು ೧೨ ವರ್ಷ ತಪಸ್ಸು ಮಾಡಿ ಬಳಿಕ ದಿಗಂಬರನಾಗಿ ತಿರುಗಹತ್ತಿದನು. ಇವನಿಗೆ ೪೩ನೇ ವರ್ಷದ ವಯಸ್ಸಿನಲ್ಲಿ ಮಹಾವೀರನೆಂಬ ಹೆಸರು ಪ್ರಾಪ್ತವಾಯಿತು. ಮಹಾವೀರನು ಪಾರ್ಶ್ವನಾಥನು ಪ್ರಸಾರಮಾಡಿದ ಜೈನಮತದಲ್ಲಿ ತುಸು ಹೆಚ್ಚುಕಡಿಮೆ ಮಾಡಿದನು. ಮತ್ತು ಆತನ ನಾಲ್ಕು ತತ್ವಗಳಲ್ಲಿ ಅವ್ಯಭಿಚಾರವೆಂಬ ಒಂದು ತತ್ವವನ್ನು ಬೆರಿಸಿ ಅದಕ್ಕೆ ಪಂಚಯಾಮವೆಂದು

ಕೆಸರಿಟ್ಟನು. ದಿಗಂಬರ ಪಂಥವು ಇವನಿಂದ ಪ್ರಾರಂಭಿಸಲ್ಪಟ್ಟಿತು. ಈ ಪಂಥದವ ಸಂಖ್ಯೆಯು ದಕ್ಷಿಣ ಹಿಂದುಸ್ತಾನದಲ್ಲಿ ಹೆಚ್ಚಾಗಿರುವದು. ಮಹಾವೀರನ ನಿರ್ವಾಣ ಕಾಲವು ಕ್ರಿ. ಪೂ. ೪೬೮.

೪. **ಜೈನಮತದ ತತ್ವಗಳು:**—ಜೈನರು ದೇವರ ಅಸ್ತಿತ್ವವನ್ನು ಒಪ್ಪು ದಿಲ್ಲ. ಶ್ರೇಷ್ಠನೂ, ತ್ಯಾಗಿಯೂ ಆದವನೇ ದೇವರೆಂದು ಅವರ ಭಾವನೆ. ಅಹಿಂಸೆಯು ಈ ಧರ್ಮದ ಆದಿತತ್ವವು. ಜೈನರು ಅಹಿಂಸಾವಾದಿಗಳಾದರೂ ಧರ್ಮಯುದ್ಧವಾಡ ವದೂ, ಅಪರಾಧಕ್ಕೆ ಶಿಕ್ಷೆಯನ್ನು ವಿಧಿಸುವದೂ ಪಾಪವೆಂದು ತಿಳಿಯುವದಿಲ್ಲ. ಪ್ರಕೃತಿಗೂ ಜೀವಕ್ಕೂ ಸಂಬಂಧವಿಲ್ಲೆಂಬದು ಜೈನಮತದ ಸಿದ್ಧಾಂತವು. ಸೃಷ್ಟಿಯೊಳಗಿನ ಕಲ್ಲು, ಮಣ್ಣು, ಕಟ್ಟಿಗೆ ಮೊದಲಾದವುಗಳಲ್ಲಿ ಸಹ ಜೀವವಿರುವದೆಂದು ಅವರ ಮತವು ಶಾಶ್ವತವಾದ ಮನಸ್ಸಿನ ಶಾಂತಿಯೇ ಮುಕ್ತಿಯು. ಇದಕ್ಕೇ ಅವರು **ನಿರ್ವಾಣವೆನ್ನು** ವರು.

೫. **ಜೈನರ ನಡೆನುಡಿಗಳು:**—ಜೈನರ ಅಹಿಂಸಾ ತತ್ವದಂತೆ ಮೈಮೇಲೆ ಹರಿದಾಡುವ ಹುಳ ಹುಪ್ಪಡಿಗಳನ್ನು ಸಹ ತಡೆಯಕೂಡದು. ಅಡ್ಡಾಡುವಾಗ ಇಲ್ಲಾ ಕೂಡ್ರುವಾಗ ಸಣ್ಣ ಪ್ರಾಣಿಗಳಿಗೆ ಪೆಟ್ಟು ತಲಗಬಾರದೆಂದು ಕಣ್ಣಲ್ಲಿ ಕಣ್ಣಿಟ್ಟು ಸಾವ ಕಾಶವಾಗಿ ಓಡಾಡುವರು; ಮತ್ತು ಬಟ್ಟೆಗಳಿಂದಾಗಲಿ ನವಿಲುಗರಿಯಿಂದಾಗಲಿ ನೇ ವನ್ನು ಮೆಲ್ಲಗೆ ಉಡಿಗಿ ಕುಳಿತುಕೊಳ್ಳುವರು. ದೀಪದಿಂದ ಸಣ್ಣ ಹುಳಗಳು ಸಾಯು ವವೆಂದು ರಾತ್ರಿಯಲ್ಲಿ ದೀಪವನ್ನು ಹಚ್ಚದೆ ಮೂರು ಸಂಜೆಗೇ ಊಟವನ್ನು ಮಾಡ ವರು. ಅವರ ಸಾಧುಗಳು ಶಸ್ತ್ರಗಳಿಂದ ತಲೆಮುಡಿಸಿಕೊಳ್ಳದೆ ಕೂದಲುಗಳನ್ನು ಕಿತ್ತಿಕೊಳ್ಳುವರು. ಮತ್ತು ಹಗಲು ಸಹ ಬಾಯಿಗೆ ಅರಿವೆಯನ್ನು ಕಟ್ಟಿಕೊಂಡ ಅಡ್ಡಾಡುವರು. ಸಂಪೂರ್ಣ ವಿರಕ್ತರಾಗಿ ಯೋಗವನ್ನು ಸಾಧಿಸುವರು. ಇರಿವೆಯ ಹುತ್ತುಗಳನ್ನು ಶೋಧಿಸಿ ಅವುಗಳಿಗೆ ಸಕ್ಕರೆಯನ್ನು ಹಾಕುವರು. ಮೋಕ್ಷಕ್ಕೆ ಪಾತ್ರ ವಾದ ಪರಿಣತ ಸ್ಥಿತಿಯು ಬಂದೊಡನೆ ಏಕಾಂತದಲ್ಲಿ ಹೋಗಿ ಅನ್ನ ನೀರುಗಳಿಲ್ಲದೆ ಪ್ರಾಣಬಿಡುವರು. ಇವೆಲ್ಲ ಆಚಾರಗಳು ಜೈನರಲ್ಲಿ ಈಗ್ಯೂ ಬಳಿಕೆಯಲ್ಲಿವೆ. ಪ್ರತಿ ಒಬ್ಬನು ವ್ರತನಿಯಮಉಪವಾಸಗಳನ್ನು ಕೈಲಾದಮಟ್ಟಿಗೆ ಆಚರಿಸಲೇ ಬೇಕೆಂದ ಧರ್ಮದ ಕಟ್ಟಳೆಯುಂಟು. ಕಠೋರತರವಾದ ವ್ರತನಿಯಮಗಳಿಂದ ಮುಕ್ತಿಯನ್ನು ಪಡೆದವರಿಗೆ ಅರ್ಹತ್ ಅಥವಾ ಜಿನ ಎಂಬ ಸಂಜ್ಞೆಯು. ಜೈನರಲ್ಲಿ ವೈದಿಕ ಲೌಕಿಕ ಎಂಬ ಎರಡು ಭೇದಗಳಿದ್ದು ವೈದಿಕರಿಗೆ ಶ್ರಮಣಕರೆಂದೂ ಲೌಕಿಕರಿಗೆ ಶ್ರಾವಕರೆಂದೂ ಅನ್ನುವರು. ಇವರ ಮಠಗಳಿಗೆ ಬಸ್ತಿ ಎನ್ನುತ್ತಾರೆ. ಈ ಬಸ್ತಿಗಳಲ್ಲಿ ತಮಗೆ ಪೂಜ್ಯ ವಾಗಿರುವ ತೀರ್ಥಂಕರರ ಮೂರ್ತಿಗಳನ್ನಿಟ್ಟು, ಪೂಜಾದಿ ಉತ್ಸವಗಳನ್ನು ಮಾಡ ವರು.

ಕನ್ನಡ ಶಾಲಾ ಪತ್ರಿಕೆ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬೪ | ಎಪ್ರಿಲ–ಮೇ ೧೯೨೭. | ಸಂ. ೧–೨.

ಸ್ಫುಟ ವಿಚಾರಗಳು

೧. ಟ್ರೇನಿಂಗ ಸ್ಕೂಲು ಬಂದಾಯಿತು.

ಈ ಸಂಸ್ಥೆಯು ಬೆಳಗಾಂವಿಯಲ್ಲಿ ೧೮೬೧ನೇ ಇಸವಿಯ ಜನವರಿ ೭ನೇ ತಾರೀಖಿನ ದಿವಸ ನಾರ್ಮಲ್ ಸ್ಕೂಲ ಎಂಬ ಅಭಿಧಾನದಿಂದ ಪ್ರಾರಂಭವಾಗಿ ೧೮೬೪ರಲ್ಲಿ ಟ್ರೇನಿಂಗ ಕಾಲೇಜವಾಯಿತು. ಮುಂದೆ ೧೧ ವರ್ಷಗಳ ನಂತರ ಧಾರವಾಡಕ್ಕೆ ಸ್ಥಳಾಂತರ ಮಾಡಲ್ಪಟ್ಟಿತು. ೧೮೬೫ರಿಂದ ೧೯೨೩ರ ಕೊನೆಯ ವರೆಗೆ ಒಳ್ಳೇ ವೈಭವದಿಂದ ನಡೆದು ೧೦,೦೦೦ ಪ್ರಾಥಮಿಕ ಶಿಕ್ಷಕರನ್ನು ಸಿದ್ಧಪಡಿಸಿತು. ಇಲ್ಲಿಂದ ಹೊರಬಿದ್ದ ಎಷ್ಟೋ ಶಿಕ್ಷಕ ಜನರು ಪ್ರಸಿದ್ಧ ಕನ್ನಡ ಲೇಖಕರೆಂದು ಹೆಸರಾಗಿದ್ದಾರೆ. ಈ ಸಂಸ್ಥೆಗೆ ೧೯೨೪ರಿಂದ ಸಂಕುಚಿತ ಸ್ವರೂಪವುಂಟಾಗಿ ಟ್ರೇನಿಂಗಸ್ಕೂಲಾಗಿತ್ತು. ಈಗ ಸರಕಾರದವರು ಈ ಸಂಸ್ಥೆಯ ಅವಶ್ಯಕತೆಯು ಸದ್ಯಕ್ಕೆ ಇಲ್ಲವೆಂದು ತಿಳಿದು ಅದನ್ನು ತಾತ್ಪೂರ್ತಿಕವಾಗಿ ನಿಲ್ಲಿಸಬೇಕೆಂದು ನಿರ್ಣಯಿಸಿದ್ದಾರೆ. ಹೀಗೆ ೬೬ ವರ್ಷ ಬದುಕಿ ಕರ್ನಾಟಕದಲ್ಲಿ ವಿದ್ಯಾದಾನಕ್ಕೆ ಉತ್ಪತ್ತಿಸ್ಥಾನವೆನಿಸಿದ ಮಹತ್ವದ ಸಂಸ್ಥೆಯನ್ನು ನಿಲ್ಲಿಸಿದ್ದರಿಂದ ಪ್ರತಿಯೊಬ್ಬ ಕನ್ನಡಿಗನಿಗೂ ತನ್ನ ಮನೆತನದ ಹಿರಿಯನು ತೀರಿಕೊಂಡರೆ ಎಷ್ಟು ದುಃಖವಾಗಬೇಕೋ ಅಷ್ಟು ದುಃಖವಾಗಿದೆಯೆಂಬದು ನಿಃಸಂದೇಹವಾಗಿದೆ. ಈ ಪ್ರಕಾರದ ಶೋಕಮಯವಾದ ಲೇಖವನ್ನು ಬರೆಯುವ ಪ್ರಸಂಗವು ಬಂದದ್ದಕ್ಕಾಗಿ ನಾವು ಎಷ್ಟು ಮಿಡುಕಿದರೂ ತೀರದು. ಟ್ರೇನಿಂಗ ಸ್ಕೂಲನ್ನು ತಾತ್ಪೂರ್ತಿಕವಾಗಿ ನಿಲ್ಲಿಸಿದ್ದರೂ ಇದರ ಉಪಸಂಸ್ಥೆಯಾದ ಪ್ರ್ಯಾಕ್ಟಿಸಿಂಗಸ್ಕೂಲನ್ನು ಮಾತ್ರ ಮೊದಲಿನಂತೆಯೇ ಇಡಬೇಕೆಂದು ನಿಶ್ಚಯವಾಗಿದೆ. ಕರ್ನಾಟಕದ ಮುಂದಾಳುಗಳು ಸಂಜೀವನೀ ಕಲ್ಪಿಯ ಪ್ರಯೋಗಮಾಡಿ ಈ ಸಂಸ್ಥೆಯನ್ನು ಪುನರುಜ್ಜೀವನಗೊಳಿಸಿ

ಸುವರೆಂದು ನಂಬಿದ್ದೇವೆ. ಈ ಸಂಬಂಧದಿಂದ ಮಿ. ಜೋಗ ಬಂಡೋಪಂತರವರು ಜುಲೈ ೧೫ನೇ ತಾರೀಖಿಗೆ ನೆರೆಯುವ ಕೌನ್ಸಿಲಿನಲ್ಲಿ ಒಂದು ತರಾವು ತತತಕ್ಕವರಿದ್ದಾರೆಂದು ತಿಳಿಯುತ್ತದೆ. ಅದಕ್ಕೆ ಬಹುಮತವು ದೊರೆತು ಟ್ರೇ. ಕಾಲೇಜವು ಮೊದಲಿನಂತೆ ನಡೆಯಲೆಂದು ಹಾರೈಸುತ್ತೇವೆ.

೨. ಶಿಕ್ಷಣ ಸಪ್ತಾಹ ಮತ್ತು ಪ್ರದರ್ಶನ

ಜೂನ ತಾ॥ ೨೩ರಿಂದ ೨೯ರ ವರೆಗೆ ಟ್ರೇ. ಕಾಲೇಜದ ಕಟ್ಟಡದಲ್ಲಿ ಶಿಕ್ಷಣಸಪ್ತಾಹವೂ ಶಿಕ್ಷಣ ಪ್ರದರ್ಶನವೂ ಜರುಗಿದವು. ಪ್ರದರ್ಶನದ ಲಾಭವನ್ನು ಶಿಕ್ಷಕರಲ್ಲದೆ ಸಾಮಾನ್ಯ ಜನರೂ ಪಡಕೊಂಡರು. ಶಿಕ್ಷಣ ಸಪ್ತಾಹದಲ್ಲಿ ಪ್ರತಿದಿನವೂ ಪ್ರಾತಃಕಾಲ ಸಾಯಂಕಾಲಗಳಲ್ಲಿ ವ್ಯಾಖ್ಯಾನ, ಪಾಠ ಮೊದಲಾದವು ನಡೆಯುತ್ತಿದ್ದವು. ಶಿಕ್ಷಣ ಕಾರ್ಯದಲ್ಲಿ ತೊಡಗಿದ ಪ್ರಾಥಮಿಕ, ಮಾಧ್ಯಮಿಕ, ಮತ್ತು ಉಚ್ಚ ತರಗತಿಯ ಶಿಕ್ಷಕರನ್ನು ಒಟ್ಟಿಗೆ ಕೂಡಿಸಿ ಅವರವರ ಅನುಭವದ ಲಾಭವು ಎಲ್ಲರಿಗೂ ದೊರೆಯಬೇಕೆಂಬದೇ ಈ ಸಪ್ತಾಹದ ಉದ್ದೇಶವಾಗಿತ್ತು. ಜೂನ ೨೩ನೇ ಗುರುವಾರ ೫ ಗಂಟೆಗೆ ಟ್ರೇ. ಕಾ. ದ ಜನರಲ್ ಹಾಲಿನಲ್ಲಿ ಎಲ್ಲ ನಿಮಂತ್ರಿತ ಸಭ್ಯ ಗೃಹಸ್ಥರೂ ಸ್ತ್ರೀಯರೂ ನೆರೆದಿದ್ದರು. ಇಲ್ಲಿಯ ಕಲೆಕ್ಟರರಾದ ಮಿ. ವೆಬ್ ಸಾಹೇಬರು ಈ ಪ್ರದರ್ಶನದ ಅನಾವರಣವನ್ನು ಮಾಡಿದರು. ಆಗ ನಮ್ಮ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಮಿ. ಸದಾರಂಗಾಣಿ ಸಾಹೇಬರು ಕೆಳಗೆ ಕೊಟ್ಟಂತೆ ಭಾಷಣ ಮಾಡಿದರು. "ಸಾಂಪ್ರತದ ವಾತಾವರಣದಲ್ಲಿ ಶಿಕ್ಷಣ ವಿಷಯದ ಪ್ರವಾಹವು ತುಂಬಿಕೊಂಡಿದ್ದು ಶಿಕ್ಷಣದಿಂದಲೇ ರಾಷ್ಟ್ರದ ಪ್ರಗತಿಯಾಗುವದೆಂದು ಎಲ್ಲರೂ ನಂಬಿರುವರು. ಹಿಂದುಸ್ತಾನದಲ್ಲಿ ಪ್ರಚಲಿತ ಶಿಕ್ಷಣ ಪದ್ಧತಿಯ ವಿಷಯಕ್ಕೆ ಸಾರ್ವಜನಿಕ ಚರ್ಚೆಯೂ ಟೀಕೆಯೂ ನಡೆದಿವೆ. ಮತ್ತು ಈ ಶಿಕ್ಷಣದಿಂದ ಉಂಟಾದ ಸುಶಿಕ್ಷಿತರ ವಿಷಯದಲ್ಲಿ ಅಸಮಾಧಾನವನ್ನು ವ್ಯಕ್ತಪಡಿಸುವರು ಅನೇಕರಿರುವರು. ಆದುದರಿಂದಲೇ ಮಹಾತ್ಮಾಗಾಂಧಿ ಮತ್ತು ರವೀಂದ್ರನಾಥ ಟಾಗೋರರಂಥ ಪ್ರಸಿದ್ಧ ಪುರುಷರು ಬೇರೆ ಬೇರೆ ಶಿಕ್ಷಣ ಸಂಸ್ಥೆಗಳನ್ನು ಉಪಕ್ರಮಿಸಿ ವಿದ್ಯಾದಾನದ ಕಾರ್ಯವನ್ನು ಕೈಕೊಂಡಿರುವದು ದೇಶದ ಕಲ್ಯಾಣಕ್ಕಾಗಿಯೇ ಇರುವದು. ಹಾಗು ಹೊಸ ರಾಜಕೀಯ ಸುಧಾರಣೆಗಳನ್ನು ಉಂಟುಮಾಡಿದ ಮುತ್ಸದ್ದಿಗಳು ರಾಷ್ಟ್ರಪ್ರಗತಿಗೆ ಶಿಕ್ಷಣ ಪ್ರಸಾರವು ಮಹತ್ವದ್ದೆಂದು ತಿಳಿದು, ಜನರಿಂದ ಆರಿಸಲ್ಪಟ್ಟ ಮಂತ್ರಿಗಳ ಕೈಯಲ್ಲಿ ಶಿಕ್ಷಣ ಖಾತೆಯ ಸೂತ್ರಗಳನ್ನು ಒಪ್ಪಿಸಿರುವರು. ಮತ್ತು ಒತ್ತಾಯದ ಶಿಕ್ಷಣವನ್ನು ಪ್ರಾರಂಭಮಾಡಿದ ಶ್ರೇಯಸ್ಸು ಹಿಂದುಸ್ತಾನದಲ್ಲಿ ನಮ್ಮ ಮುಂಬೈ ಇಲಾಖೆಗೇ ಇರುವದೆಂದು ಹೇಳಬಹುದು. ಆದುದರಿಂದ ಜನರು ಈ ವಿಷಯದಲ್ಲಿ ಹೆಚ್ಚು ಉತ್ಸಾಹವನ್ನೂ ಸಹಾನುಭೂತಿಯನ್ನೂ ತಳೆಯುವದು ಅವಶ್ಯವದೆ ಆದುದರಿಂದಲೇ ಈ ಪ್ರದರ್ಶನವನ್ನು ನೆರವೇರಿಸುವ ಕಾರ್ಯವನ್ನು ಕೈಕೊಂಡಿದ್ದೇವೆ

ಇದರಿಂದ ನಮ್ಮ ಶಾಲೆಗಳಲ್ಲಿರುವ ಶಿಕ್ಷಕರೂ ವಿದ್ಯಾರ್ಥಿಗಳೂ ಯಾವ ಪ್ರಕಾರದ ಕೆಲಸಗಳನ್ನು ಮಾಡುತ್ತಾರೆಂಬದು ಜನರ ನಿದರ್ಶನಕ್ಕೆ ಬರುವದು. ಮತ್ತು ಈ ಶಿಕ್ಷಣ ಸಪ್ತಾಹದಲ್ಲಿ ಎಲ್ಲ ತರಗತಿಯ ಶಿಕ್ಷಕರನ್ನು ಒತ್ತಟ್ಟಿಗೆ ಕೂಡಿಸಿ ವಿಚಾರ ವಿನಿಮಯಕ್ಕೆ ಅನುಕೂಲತೆಯನ್ನು ಒದಗಿಸಿಕೊಡುವ ಪ್ರಸಂಗವು ಉಂಟಾಗಿದೆ. ಈ ಸಪ್ತಾಹದಲ್ಲಿ ಅನೇಕ ವ್ಯಾಖ್ಯಾನಗಳೂ ಮಾದರಿಯ ಪಾಠಗಳೂ ನಡೆಯುವವು. ಮುಖ್ಯವಾಗಿ ಮಾಧ್ಯಮಿಕ ಶಾಲೆಗಳಿಗೆ ಬೇಕಾಗುವ ಪುಸ್ತಕ ಸಂಗ್ರಹವು ಹೇಗಿರಬೇಕೆಂಬದನ್ನು ಸೂಚಿಸುವದಕ್ಕೆ ಹೊಸ ಹೊಸ ಪುಸ್ತಕ, ನಕಾಶ, ಪಟ, ಚಿತ್ರ ಮೊದಲಾದವುಗಳ ಒಂದು ಸಂಗ್ರಹವು ಇಲ್ಲಿ ಇಡಲ್ಪಟ್ಟಿದೆ." ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದ್ದೇನಂದರೆ —"ಈ ಪ್ರದರ್ಶನದ ಅನಾವರಣವನ್ನು ಮಾಡುವ ಸುಯೋಗವನ್ನು ತಂದು ಕೊಟ್ಟದ್ದಕ್ಕಾಗಿ ಸಂತೋಷಪಡುತ್ತೇನೆ. ಮತ್ತು ಈ ಪ್ರಕಾರದ ಪ್ರದರ್ಶನವು ಧಾರವಾಡದಲ್ಲಿ ಇದೇ ಮೊದಲನೆಯದೆಂದು ತಿಳಿಯುತ್ತದೆ. ಅದು ಯಶಸ್ವಿಯಾಗಲೆಂದು ಹಾರೈಸುತ್ತೇನೆ. ಪ್ರದರ್ಶನದಲ್ಲಿಟ್ಟ ವಸ್ತುಗಳನ್ನು ನೋಡಿದರೆ ಶಾಲೆಗಳಲ್ಲಿ ಉತ್ತಮ ಪ್ರಕಾರದ ಕೆಲಸವಾಗುತ್ತದೆಂಬದು ಕಂಡುಬರುತ್ತದೆ. ಹಿಂದುಸ್ತಾನದಂತೆ ಇಂಗ್ಲಂಡದಲ್ಲಿ ಯಾದರೂ ಕಳೆದ ೫೦ ವರ್ಷಗಳಲ್ಲಿ ಆಯಾಕಾಲದ ಅಗತ್ಯ ಕಲ್ಪನೆಗಳಿಗನುಸರಿಸಿ ಶಿಕ್ಷಣದಲ್ಲಿ ಅನೇಕ ಹೆಚ್ಚು ಕಡಿಮೆಗಳಾದವು. ಈ ಪ್ರದರ್ಶನವು ಮನೋಹರವಾಗುವಂತೆ ಮಾಡಲಿಕ್ಕೆ ದುಡಿದ ಜನರ ಆಭಾರವನ್ನು ಮನ್ನಿಸುವೆನು." ನಂತರ ಎಲ್ಲ ಗೃಹಸ್ಥರೂ ಸ್ತ್ರೀಯರೂ ಪ್ರದರ್ಶನವನ್ನು ನೋಡಿ ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ಮರುದಿನ ಅಂದರೆ ಜೂನ ತಿಳನೇ ಶುಕ್ರವಾರ ಪ್ರಾತಃಕಾಲದಲ್ಲಿ ಮಿ. ಸದಾರಂಗಾಣಿಯವರು ಸ್ರ. ಹ್ಯಾಂಪಟನ್ ಸಾಹೇಬರ ಅಧ್ಯಕ್ಷತೆಯಲ್ಲಿ ಹಿಂದುಸ್ತಾನದಲ್ಲಿಯ ಶಿಕ್ಷಣದ ಉದ್ದೇಶ ಮತ್ತು ಧ್ಯೇಯಗಳು ಎಂಬ ವಿಷಯಕ್ಕೆ ಸುಶ್ರಾವ್ಯ ಭಾಷಣಮಾಡಿದರು. ಮಧ್ಯಾಹ್ನದಲ್ಲಿ ಮಿ. ಬೈಚವಾಳ ಅಸಿ. ಮಾಸ್ತರ ಹಾಯಸ್ಕೂಲ ಧಾರವಾಡ ಇವರು ೭ನೇ ಇಯತ್ತೆಗೆ ಇಂಗ್ಲಿಷ ಕವಿತೆಯ ಒಂದು ಪಾಠವನ್ನು ಕೊಟ್ಟರು. ವಿ. ಬಾಪಟ ಇವರು ೪ನೇ ಇಯತ್ತೆಗೆ ಸಂಸ್ಕೃತವನ್ನು ಸಂಸ್ಕೃತ ಭಾಷೆಯಿಂದಲೇ ಕಲಿಸುವ ಡೈರೆಕ್ಟ ಮೆಥಡ್ಡಿನಿಂದ ಒಂದು ಪಾಠವನ್ನು ಕಲಿಸಿದರು. ಹಾಯಸ್ಕೂಲ ವಿದ್ಯಾರ್ಥಿಗಳು ವೆಬರನ ಪದ್ಧತಿಯ ಡ್ರಿಲ್ಲು ಮಾಡಿ ತೋರಿಸಿದರು. ಶನಿವಾರ ಮಿ ತಟ್ಟಿಯವರು ಗಣಿತ ಕಲಿಸುವ ಪದ್ಧತಿಯ ವಿಷಯಕ್ಕೆ ನಿಬಂಧವನ್ನು ಓದಿದರು. ಮಧ್ಯಾಹ್ನದಲ್ಲಿ ಮಿ. ಕಾಮತ ಇವರು ಕರ್ನಾಟಕ ಕಾಲೇಜದ ಪ್ರೊಫೆಸರರ ಸಹಾಯದಿಂದ ಶಾಸ್ತ್ರೀಯ ಪ್ರಯೋಗಗಳನ್ನು ಮಾಡಿತೋರಿಸಿದರು. ಅವರಲ್ಲಿ ಮುಖ್ಯವಾಗಿ ವಿದ್ಯುಚ್ಛಕ್ತಿಯ ಉಪಯೋಗವನ್ನು ಹೇಗೆ ಮಾಡಿಕೊಳ್ಳುತ್ತಾರೆಂಬದನ್ನು ತೋರಿಸಿದರು. ಟ್ರಾಮು ನಡಿಸುವದು, ಶಂತಿಲ್ಲದ ತಾರು ಕೊಡುವದು ಮೊದಲಾದ ಪ್ರಯೋಗಗಳಿದ್ದವು. ಆದಿತ್ಯವಾರ ಪ್ರಾತಃಕಾಲದಲ್ಲಿ ಮಿ. ನವಲಗುಂದ ಇವರ ಆಧ್ಯ

ತೆಯ ಕೆಳಗೆ ಪ್ರಾಥಮಿಕ ಶಾಲೆಗಳಲ್ಲಿಯ ಪದ್ಧತಿಗಳ ವಿಷಯಕ್ಕೆ ಚರ್ಚೆಯಾಯಿತು. ಾ. ಅಮ್ಮಿನಭಾವಿ. ಗುಂಜೀಕರ, ಜಾಂಬಳೆ, ಮುಗದ ಇವರು ಬೇರೆ ಬೇರೆ ವಿಷಯು ಳ ಬಗ್ಗೆ ಮಾತಾಡಿದರು. ಸಂಜೆಗೆ 'ಬಾಯುಸ್ಕೌಟ್,ನ ಹಾಗು 'ಬ್ಲೂಬರ್ಡ್'ರ (ಕನ್ಯಾ ಕಮೂ) ಆಟ ಕವಾಯಿತುಗಳು ನಡೆದವು. ಸೋಮವಾರ ಬೆಳಿಗ್ಗೆ ಮಿ. ರಾಮಬ್ರಹ್ಮ ಇವರು ಪ್ರಕೃತಿ ವಿಮರ್ಶೆಯ ವಿಷಯವನ್ನು ಹೇಗೆ ಕಲಿಸಬೇಕೆಂಬ ಬಗ್ಗೆ ವ್ಯಾಖ್ಯಾನ ಕೊಟ್ಟರು. ಕಾಟನ ಬ್ರಿಂಡರರಾದ ಮಿ. ಕೋಟೂರ ಇವರು ಅಧ್ಯಕ್ಷರಾಗಿದ್ದರು. ಮಧ್ಯಾಹ್ನದಲ್ಲಿ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ಮೂದರಿಯ ಪಾಠ, ಹಾಡು ಕವಾಯತುಗಳು ನಡೆದವು. ಮಂಗಳವಾರ ಬೆಳಿಗ್ಗೆ ಗಂಡು ಹುಡುಗರ ಪ್ರಾ ಶಾಲೆಯಲ್ಲಿ ಪಾಠಗಳು ನಡೆದವು. ಮಾಧ್ಯಮಿಕ ಶಿಕ್ಷಕರ ಸಲುವಾಗಿ ಮಿ. ಮ್ಯಾಥು ಎಂಬ ಹೊನ್ನಾವರದ ಶಿಕ್ಷಕರು ಇಂಗ್ಲಿಷ ಕವಿತೆಯ ಪಾಠವನ್ನು ಕಲಿಸಿ ತೋರಿಸಿದರು. ಬುಧವಾರ ಮಿ. ಬೈಚವಾಳ ಇವರು ಇತಿಹಾಸವನ್ನು ಹೇಗೆ ಕಲಿಸಬೇಕೆಂಬ ಬಗ್ಗೆ ವ್ಯಾಖ್ಯಾನವನ್ನು ಕೊಟ್ಟರು. ನಂತರ ಹೆಣ್ಣುಮಕ್ಕಳ ಹಾಡುಗಳಾದ ಮೇಲೆ ಮಿ. ಪದಾರಂಗಾಣಿಯವರು ತಮ್ಮ ಉಪಸಂಹಾರದ ಭಾಷಣವನ್ನು ಮಾಡಿದರು. ಅದರಲ್ಲಿ ಪ್ರದರ್ಶನವೂ ಶಿಕ್ಷಣ ಸಪ್ತಾಹವೂ ಯಶಸ್ವಿಯಾದದ್ದಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಒಟ್ಟು ೫೦೦ ಜನರು ಪ್ರದರ್ಶನವನ್ನು ನೋಡಿದರೆಂದೂ ೫೦೦ ಜನ ಶಿಕ್ಷಕರು ನೆರೆದು ವಿಚಾರ ವಿನಯಮಾಡಿದರೆಂದೂ ಹೇಳಿದರು. ಕರ್ನಾಟಕ ಕಾಲೇಜಿನ ಪ್ರೊಫೆಸರರು ಸಹ ಈ ಸಪ್ತಾಹದಲ್ಲಿ ಸಹಾಯಮಾಡಿದ್ದಕ್ಕಾಗಿ ತಮ್ಮ ಆಭಾರವನ್ನು ಪ್ರದರ್ಶಿಸಿದರು. ಈ ಸಪ್ತಾಹವು ಯಶಸ್ವಿಯಾಗುವದಕ್ಕೆ ಮಿಸ್ ಲ್ಯಾಕ್ಸ್‌ಟೆನ್, ಮಿ. ದೇಶಪಾಂಡೆ ಹಾಗು ಅವರ ಅಸಿಸ್ಟಂಟರಿಗೆ ತಮ್ಮ ವಂದನೆಗಳನ್ನು ಸಮರ್ಪಿಸಿದರು.

ಪ್ರದರ್ಶನದಲ್ಲಿ ಒಟ್ಟು ೬ ಕೋಣೆಗಳಿದ್ದವು. ಒಂದೊಂದು ಕೋಣೆಯಲ್ಲಿ ಒಂದೊಂದು ವಿಷಯದ ಉಪಕರಣಗಳಿದ್ದವು. ಭೂಗೋಲ, ಇತಿಹಾಸ, ಕೈಕೆಲಸ, ಪ್ರಕೃತಿವಿಮರ್ಶೆ ಮತ್ತು ಸಾಯನ್ಸ, ಗಣಿತ ಭಾಷಾ ಇತ್ಯಾದಿ, ಪುಸ್ತಕಗಳು ಹೀಗೆ ೬ ಭಾಗಗಳಿದ್ದವು. ಕೈಕೆಲಸದಲ್ಲಿ ನಿಪ್ಪಾಣಿಯ ವಿದ್ಯಾರ್ಥಿಯೊಬ್ಬನು ಕಾಗದದಲ್ಲಿ ಕೆತ್ತಿದ ಶ್ರೀ ಕೃಷ್ಣಶಿವಾಜಿಗಳ ಚಿತ್ರಗಳೂ, ಮಿ. ಖಾಡಿಲಕರ ಡ್ರಾ. ಮಾಸ್ತರ ಹುಬ್ಬಳ್ಳಿ ಇವರು ಕಾಗದದ ಮೇಲೆ ಉಗುರಿನಿಂದ ತೆಗೆದ ದಮಯಂತಿ ಶಿವಾಜಿಗಳ ಚಿತ್ರಗಳೂ ಮುರಗೋಡದ ಕಸೂತಿ ಸೀರೆಯೂ ನೋಡತಕ್ಕಂಥವಾಗಿದ್ದವು. ಶಿಕ್ಷಣದ ದೃಷ್ಟಿಯಿಂದ ಹೆ. ಟ್ರೇ. ಕಾ. ದವರು ಮಾಡಿದ ಬೇರೆ ಬೇರೆ ವಿಷಯದ ಉಪಕರಣಗಳು ಉಪಯುಕ್ತವಾಗಿದ್ದವು ಗಂ. ಪ್ರಾ. ಸ್ಕೂಲಿನಲ್ಲಿ ಸಿದ್ಧಮಾಡಿದ ಮಾಂಟೆಸೋರಿಯ ಪದ್ಧತಿಯ ಉಪಕರಣಗಳೂ ಇತಿಹಾಸದ ಕೋಣೆಯೂ ಹೊಸ ಪದ್ಧತಿಯ ಸೂಚಕಗಳಾಗಿದ್ದವು.

೩. ಟ್ರೇನಿಂಗ ಕಾಲೇಜದ ಶಿಕ್ಷಕರ ಪ್ರವಾಸವು

ದಕ್ಷಿಣಭಾಗದೊಳಗಿನ ಶಿಕ್ಷಣಖಾತೆಯ ಎಲ್ಲ ಪರೀಕ್ಷಾಧಿಕಾರಿಗಳು ಟ್ರೇನಿಂಗ ಕಾಲೇಜದಲ್ಲಿ ನಡೆಯುವ ಶಿಕ್ಷಣ ಕ್ರಮವನ್ನು ನೋಡುವದಕ್ಕೆ ಬಂದ ಸಂಗತಿಯನ್ನು ಹಿಂದೆ ಬರೆದಿರುವೆವು. ಅದರಂತೆ ಈ ಸಾರಿ ಟ್ರೇನಿಂಗ ಕಾಲೇಜಗಳ ಶಿಕ್ಷಕರು ಬೇರೆ ಬೇರೆ ಜಿಲ್ಲೆಗಳೊಳಗಿನ ಪ್ರಾಥಮಿಕ ಶಾಲೆಗಳನ್ನು ನೋಡಿ ಅಲ್ಲಿ ನಡೆದಿರುವ ಶಿಕ್ಷಣ ಕ್ರಮವನ್ನು ನಿರೀಕ್ಷಿಸಿ ಬರುವದಕ್ಕೆ ಹೋಗಬೇಕೆಂದು ಗೊತ್ತಾಗಿತ್ತು. ಪ್ರಾಥಮಿಕ ಶಾಲೆಗಳಿಗೂ ಶಿಕ್ಷಣ ಸಂಸ್ಥೆಗಳಿಗೂ ಶಿಕ್ಷಣ ವಿಷಯವಲ್ಲಿ ನಿಕಟಸಂಬಂಧವನ್ನು ಉಂಟು ಮಾಡುವದೇ ಈ ತರದ ಯೋಜನೆಯ ಮುಖ್ಯ ಉದ್ದೇಶವು.

ಜೂನ ತಿಂಗಳ ಎರಡನೇ ವಾರದಲ್ಲಿ ಟ್ರೇನಿಂಗ ಕಾಲೇಜಗಳ ಶಿಕ್ಷಕರು ವಿಜಾಪುರ ಹಾಗು ಬೆಳಗಾವ ಜಿಲ್ಲೆಗಳಿಗೆ ಪ್ರವಾಸಕ್ಕೆ ಹೋಗಿದ್ದರು. ವಿಜಾಪುರ ಜಿಲ್ಲೆಗೆ ಹೋದವರು ವಿಜಾಪುರ, ಬಾಗಲಕೋಟೆ, ಕಲಾದಗಿ, ಹೊನವಾಡ, ಕಮತಗಿ, ಇಂಡಿ, ಭತಗುಣಕಿ ಈ ಊರುಗಳೊಳಗಿನ ಶಾಲೆಗಳನ್ನು ನೋಡಿ ಬಂದರು. ಹಳ್ಳಿಯ ಶಾಲೆಗಳಲ್ಲಿ ಶಿಕ್ಷಣ ಕ್ರಮವು ತಕ್ಕಮಟ್ಟಿಗೆ ಚೆನ್ನಾಗಿ ನಡೆದಿರುವದೆಂದೂ ಸ್ಕೌಟ ಕೂಟಗಳು ಅಲ್ಲಲ್ಲಿ ನೆರವೇರಿಸಲ್ಪಟ್ಟು ವಿಜಾಪುರ ಜಿಲ್ಲೆಯಲ್ಲಿ ಅವು ದಿನದಿನಕ್ಕೆ ಹೆಚ್ಚು ಪ್ರಸಾರವಾಗುತ್ತಲಿದೆಯೆಂದೂ ಸಾಮಾನ್ಯವಾಗಿ ಹೇಳಬಹುದು. ಅಸಿಸ್ಟಂಟ ಶಿಕ್ಷಕರು ಯಾವ ಕಾರಣದಿಂದಲೋ ಸಾಕಷ್ಟು ಪರಿಶ್ರಮ ಮಾಡುವಂತೆ ತೋರಲಿಲ್ಲ. ಮತ್ತು ಕಾಲೇಜವಲ್ಲಿ ಕಲಿತು ಬಂದ ಪದ್ಧತಿಯನ್ನು ಮನಮುಟ್ಟಿ ಅನುಸರಿಸುವವೂ ಕಂಡು ಬರಲಿಲ್ಲ. ಅವರು ತಮ್ಮ ಹೆಡ್‌ಮಾಸ್ತರರನ್ನು, ಅಥವಾ ಬೇರೆ ಮೇಲ್ತರದ ಶಿಕ್ಷಕರನ್ನು ಅನುಕರಣಮಾಡಿ ತಮ್ಮ ಕೆಲಸದಲ್ಲಿ ಉತ್ಸಾಹವನ್ನು ತೋರ್ಪಡಿಸಿ ಯಶಸ್ಸು ಪಡೆಯಬೇಕೆಂದು ನಮ್ಮ ಸೂಚನೆಯಿದೆ.

---

೪. ಒತ್ತಾಯದ ಪ್ರಾಥಮಿಕ ಶಿಕ್ಷಣ.

ಮುಂಬೈ ಇಲಾಖೆಯಲ್ಲಿ ಪ್ರಾ. ಶಿ. ದ ಕಾಯಿದೆಯು ಪಾಸಾಗಿ ೪ ವರ್ಷಗಳು ಆಗಿಹೋದರೂ ೪–೫ ಮುನಸಿಪಾಲಿಟಿಗಳ ಹೊರತಾಗಿ ಉಳಿದ ಕಡೆಗೆ ಒತ್ತಾಯದ ಶಿಕ್ಷಣದ ಉಪಕ್ರಮವು ಆದಂತೆ ಕಂಡುಬರುವದಿಲ್ಲ. ಹೀಗಾಗಲಿಕ್ಕೆ ಅನೇಕ ತೊಂದರೆಗಳಿರುವವೆಂದು ತೋರುತ್ತದೆ. ಅವುಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ :— (೧) ಕಾಯಿದೆ ಮತ್ತು ನೇಮಗಳೊಳಗಿರುವ ದೋಷಗಳು. (೨) ಸರಕಾರವಲ್ಲಿ ಮತ್ತು ಸ್ಥಾನಿಕಸಂಸ್ಥೆಗಳಲ್ಲಿ ಇರುವ ದುಡ್ಡಿನ ಕೊರತೆಯು. (೩) ಪಕ್ಷಪಾತದಿಂದುಂಟಾದ ಅನವಸ್ಥೆ. (೪) ಸರಕಾರದ ಕೂಡೆ ಅಸಹಕಾರದಿಂದ ನಡೆಯುವ ವ್ಯತ. ಇವುಗಳಲ್ಲಿ ಒಂದೊಂದನ್ನೇ ವಿಚಾರಿಸುವ. ಡಿಸ್ಟ್ರಿಕ್ಟ ಬೋರ್ಡಿನಲ್ಲಿಪ್ಪ ಮೆಂಬರರ ಹೊರತಾಗಿ ಬೇರೆ ಜನರು ಸ್ಕೂಲಬೋರ್ಡಿನಲ್ಲಿರುವರು. ಇವೆರಡೂ ಬೋರ್ಡುಗಳಲ್ಲಿ ಭಿನ್ನ

ಅಭಿಪ್ರಾಯವು ಉಂಟಾದರೆ ಶಿಕ್ಷಣದ ಪ್ರಗತಿಯು ಕುಗ್ಗುವ ಸಂಭವವದೆ. ಹೇಗೆಂದರೆ ಡಿ. ಬೋ. ನವರು ಶಿಕ್ಷಣಕ್ಕೆ ದುಡ್ಡು ಕೊಟ್ಟರೆ ಸ್ಕೂ. ಬೋ. ನವರು ಖರ್ಚು ಮಾಡಬೇಕೇ ಹೊರತು ಸ್ಕೂ. ಬೋ. ಗೆ ಸ್ವತಂತ್ರವಾಗಿ ಹಣದ ಅನುಕೂಲತೆ ಇಲ್ಲ. ಪ್ರತಿಸಾತಿ ಅವರು ಡಿ. ಬೋ. ನ ವೋರೆಯನ್ನು ನೋಡುತ್ತ ಕೂಡ್ರಬೇಕಾಗುವದು. ಇನ್ನು ಸ್ಕೂ. ಬೋ. ನವರು ಪ್ರಾಗತಿಕ ವಿಚಾರವುಳ್ಳವರಿದ್ದಾಗ ಡಿ. ಬೋ. ನವರು ಅವರ ಕಾಲನ್ನು ಹಿಂದಕ್ಕೆ ಎಳೆಯಬಹುದು. ಇದಕ್ಕೆ ವಿರುದ್ಧವಾಗಿ ಡಿ. ಬೋ. ನವರು ಪ್ರಾಗತಿಕ ವಿಚಾರವುಳ್ಳವರಿದ್ದಾಗ ಸ್ಕೂ. ಬೋ. ನವರು ಅವರ ಇಚ್ಛೆಯಂತೆ ನಡೆಯಲಿಕ್ಕಿಲ್ಲ. ಇದಲ್ಲದೆ ಸ್ಕೂ. ಬೋ. ನ ಚೇರಮನ್ನನಿಗೆ ಯಾವ ಪ್ರಕಾರದ ಅಧಿಕಾರವೂ ಇರುವದಿಲ್ಲ. ಸ್ಕೂ. ಬೋ. ನವರು ಅವನಿಗೆ ಅಧಿಕಾರ ಕೊಟ್ಟರೆ ಉಂಟು. ಇಲ್ಲವಾದರೆ ಅವನಿಂದ ಯಾವ ಉಪಯುಕ್ತ ಸುಧಾರಣೆಯೂ ಆಗದು. ಕೆಲವು ಬೋರ್ಡುಗಳಲ್ಲಿ ಚೇರಮನ್ನನಿಗೆ ಬಹುಮತದ ಬೆಂಬಲವು ಇಲ್ಲದ್ದರಿಂದ ಅವನು ಕೇವಲ ಉತ್ಸವ ಪ್ರತಿಮೆಯಂತಾಗಿರುವನು.

ಸರಕಾರದವರು ಒತ್ತಾಯದ ಶಿಕ್ಷಣಕ್ಕಾಗಿ ೯॥ ಲಕ್ಷ ರೂಪಾಯಿಗಳನ್ನು ಕಾಯ್ದಿಟ್ಟಿರುವರು. ಅದರಲ್ಲಿ ೭ ಲಕ್ಷ ರೂ. ಗಳ ವ್ಯವಸ್ಥೆಯು ಈ ಮೊದಲೇ ಮಾಡಲ್ಪಟ್ಟಿದೆ. ಇನ್ನು ಉಳಿದ ೨॥ ಲಕ್ಷ ರೂ. ಗಳಿಂದ ಒಂದೆರಡು ಪ್ರದೇಶಗಳಲ್ಲಿ ಸಹ ಒತ್ತಾಯದ ಯೋಜನೆಗೆ ಸಹಾಯದೊರೆಯುವಂತಿಲ್ಲ. ಅಂದ ಮೇಲೆ ಇಡೀ ಇಲಾಖೆಯಲ್ಲಿ ಒತ್ತಾಯದ ಶಿಕ್ಷಣವನ್ನು ಪ್ರಾರಂಭಿಸಿದರೆ ಸಹಾಯದೊರೆಯುವದು ಹೇಗೆ? ಇದಕ್ಕೆ ಒಂದು ಕೋಟಿ ರೂಪಾಯಿಗಳಾದರೂ ಬೇಕು. ಇಷ್ಟು ದುಡ್ಡು ಹೇಗೆ ದೊರೆಯುವದೆಂಬದು ಮಹತ್ವದ ಪ್ರಶ್ನವಾಗಿದೆ. ಕಾಯಿದೆ ಮಾಡುವದು ಸುಲಭ ಕೆಲಸವಾದರೂ ಅದನ್ನು ರೂಢಿಯಲ್ಲಿ ತರಲಿಕ್ಕೆ ಅವಶ್ಯವಾದ ದ್ರವ್ಯನಿಧಿಯನ್ನು ಕೂಡಿಸುವದು ಬಹಳ ಬಿಗಿಯಾಗಿದೆ.

ಸರಕಾರದವರು ಸ್ಥಾನಿಕ ಸಂಘಗಳಿಗೆ ತಮ್ಮಲ್ಲಿಯ ವಿದ್ಯಾಧಿಕಾರಿಗಳನ್ನೂ ಕಾರಕೂನರನ್ನೂ ಸಿಪಾಯಿಜನರನ್ನೂ ತೆಗೆದುಕೊಂಡರೆ ಅವರ ವೆಚ್ಚದ ಪೂರ್ಣ ಹಣವನ್ನು ತಾವೇ ಕೊಡುವೆವೆಂದು ಒಪ್ಪಿಕೊಂಡಿದ್ದರು. ಈ ಅನುಕೂಲತೆಯ ಲಾಭವನ್ನು ಮಧ್ಯಭಾಗದ ಪುಣೆ ಮುಂತಾದ ಜಿಲ್ಲೆಯವರು ನೂಡಿಕೊಂಡು ಸರಕಾರದ ನೌಕರರನ್ನು ಇಟ್ಟುಕೊಂಡಿದ್ದಾರೆ. ಆದರೆ ದಕ್ಷಿಣಭಾಗದ ಒಂದು ಜಿಲ್ಲೆಯಲ್ಲಿ ತಮ್ಮ ಜನರನ್ನೇ ತೆಗೆದುಕೊಳ್ಳುವ ಉದ್ದೇಶದಿಂದ ಸರಕಾರದ ಎಲ್ಲ ಜನರನ್ನು ಹೊರಗೆ ಮಾಡಿ ಅನನುಭವಿಕ ಜನರನ್ನು ನೇಮಿಸಿಕೊಂಡಿದ್ದಾರೆ. ಅದರಲ್ಲಿಯೂ ತಮಗೆ ಬೇಕಾದ ಜನರನ್ನು ಅವರ ನೌಕರಿ, ಕೆಲಸ, ಗುಣ ಮೊದಲಾದವುಗಳನ್ನು ವಿಚಾರಿಸದೆ ತೆಗೆದುಕೊಂಡಿದ್ದಾರೆ. ಇದರಿಂದ ಕಾರಭಾರವು ಸುಸೂತ್ರ ಸಾಗಲಿಕ್ಕೆ ಬಹಳ

ತೊಂದರೆಯಾಗಬಹುದು. ಸರಕಾರದವರು ೫ ಗ್ರ್ಯಾಂಟು ಕೊಡುತ್ತಿದ್ದು ಅಷ್ಟು ಜನರಾದರೂ ಸರಕಾರದ ಅಧಿಕಾರಿಗಳು ಇರದಿದ್ದರೆ ಅನವಸ್ಥಾ ಪ್ರಸಂಗವು ಒದಗುವ ದೆಂಬವರಲ್ಲಿ ಸಂಶಯವಿಲ್ಲ.

ಗುಜರಾಥದ ಕೆಲವು ಜಿಲ್ಲೆಗಳಲ್ಲಿ ಜನರು ಸರಕಾರದ ಕೂಡ ಅಸಹಕಾರ ಮಾಡುವ ಉದ್ದೇಶದಿಂದ ಪ್ರಾ. ಶಿ. ದ ಹೊರೆಯನ್ನು ತಮ್ಮ ಕಡೆಗೆ ತೆಗೆದುಕೊಂಡಿರುವದಿಲ್ಲ. ಪ್ರಾ. ಶಿ. ದ ಕಾಯಿದೆಯಂತೆ ಶಿಕ್ಷಣದ ಪ್ರಸಾರಮಾಡುವ ಕೆಲಸವು ಸ್ಥಾನಿಕ ಸಂಘಗಳಿಗೆ ಒಪ್ಪಿಸಲ್ಪಟ್ಟಿದ್ದರಿಂದ ಸರಕಾರದವರು ಉದಾಸೀನರಿರುವರು.

ಹೀಗೆ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ತೊಂದರೆಗಳಿಂದ ಶಿಕ್ಷಣದ ಪ್ರಗತಿಯು ಕುಂಠಿತವಾಗುವದೆಂಬದರಲ್ಲಿ ಸಂಶಯವಿಲ್ಲ. ಆದದರಿಂದ ಪ್ರಾ. ಶಿ. ದ ಕಾಯಿದೆಯಲ್ಲಿ ತಿದ್ದುಪಡೆಯಾಗುವದು ಅವಶ್ಯವದೆ.

ಬೌದ್ಧ ಧರ್ಮದ ಸಂಕ್ಷಿಪ್ತ ಇತಿಹಾಸ.*

(ಮಡಿವಾಳಪ್ಪ ಸಾಸನೂರ ಹೆ! ವಾ! ಕಲಕೇರಿ ಜಲ್ಲಾ ವಿಜಾಪುರ)

ಒಂದು ಪುಣ್ಯಪ್ರಭಾತದಲ್ಲಿ ಭಗವಾನ ಬುದ್ಧನು ಭರತಖಂಡಕ್ಕೆ ನೀಡಿದ ಸದ್ಧರ್ಮವನ್ನು ಕಾಲಾಂತರದಲ್ಲಿ ಇಡಿ ವಿಶ್ವಖಂಡವು ಗ್ರಹಿಸುವದೆಂದು ಬಹುಜನರ ಕಲ್ಪನೆಯು ಸಹ ಇದ್ದಿಲ್ಲ. ಸಾರನಾಥದಲ್ಲಿಯ 'ಧರ್ಮಚಕ್ರ ಪ್ರವರ್ತನೆ' ಯಾದಮೇಲೆ ಬಹುಜನರು ಅವನ ಧರ್ಮವನ್ನು ಗ್ರಹಣಮಾಡಹತ್ತಿದರು. ಅವನ ಮೃತ್ಯುವಿನ ಮೊದಲು ಅವನಿಗೆ ಬಹುಶಕ್ತಿಶಾಲಿಯಾದ ಶಿಷ್ಯವೃಂದವು ಉಂಟಾಯಿತು. ಮಗಧ ರಾಜನಾದ ಬಿಂಬಿಸಾರನು ಸಹ ಅವನ ಶಿಷ್ಯತ್ವವನ್ನು ಗ್ರಹಿಸಿದನು. ಈ ರೀತಿಯಾಗಿ ಬೌದ್ಧ ಧರ್ಮವು ಮೊದಲು ಅರಸರ ಆಸರವನ್ನು ಪಡೆಯಿತು. ಕ್ರಿ. ಶ. ಪೂ. ೪೭೨ ರಲ್ಲಿ ಬುದ್ಧ ದೇವನ ಮರಣವಾದಾಗ ಬೌದ್ಧ ಧರ್ಮವು ಪೂರ್ವ ಭಾರತ ದಲ್ಲಷ್ಟೇ ಹರಡಿತ್ತು.

---

* ಈ ಲೇಖನವು 'ಪ್ರವಾಸೀ' ಎಂಬ ಬಂಗಾಲೀ ಮಾಸಪತ್ರಿಕೆಯಲ್ಲಿ ಪ್ರಸಿದ್ಧ ಮಾಡಲ್ಪಟ್ಟ ಶ್ರೀ ಫಣೀಂದ್ರನಾಥಬಸು, ಎಂಬವರ "ಬೌದ್ಧ—ಧರ್ಮೋರ ಇತಿಹಾಸೇರ ದಿಗ್‌ದರ್ಶನ" ಎಂಬ ಲೇಖನದ ಅನುವಾದವಾಗಿದೆ.

ಬುದ್ಧನ ಮಹಾ ಪರಿನಿರ್ವಾಣದ ತರುವಾಯ ಸುಭದ್ರನೆಂಬ ಭಿಕ್ಷುವು ಅಂದದ್ದೇ ನಂದರೆ—"ನೀವು ಶೋಕಮಾಡುವದು ಏತಕ್ಕೆ ? ಮಹಾಶ್ರಮಣನು ನಮಗೆ 'ಇದನ್ನು ಮಾಡು, 'ಅದನ್ನು ಮಾಡು, ಎಂದು ಕಟ್ಟು ಹಾಕಿಲ್ಲ. ಆಗ ಮಹಾಕಾಶ್ಯಪನು ಅಜಾತಶತ್ರುವೆಂಬ ಅರಸನ ಬೆಂಬಲದಿಂದ ರಾಜಗೃಹದ ಸಪ್ತಪರ್ಣೀ ಗುಹೆಯಲ್ಲಿ, ೫೦೦ ಅರ್ಹತರನ್ನು ಕೂಡಿಸಿ 'ತ್ರಿಪಿಟಕ, ಸಂಗ್ರಹವನ್ನು ಮಾಡಿದನು. *

ಇದಾದ ಮೇಲೆ ೧೦೦ ವರ್ಷಗಳ ತರುವಾಯ ವೈಶಾಲೀನಗರದಲ್ಲಿ ಭಿಕ್ಷುಗಳ ಮತ್ತೊಂದು ಸಭೆಯಾಯಿತು. ಅದರಲ್ಲಿ 'ತ್ರಿಪಿಟಕ'ವು ಆವೃತ್ತಿಮಾಡಲ್ಪಟ್ಟಿತು. ಈ ಎರಡು ಸಂಗೀತ (ಸಭೆ) ಗಳ ಉದ್ದೇಶವು, ಬುದ್ಧನ ವಚನಗಳನ್ನು ಸಂಗ್ರಹಿಸಿ, ಅದರಿಂದ ಭಿಕ್ಷುಗಳನ್ನು ನಿಯಂತ್ರಿತರನ್ನಾಗಿ ಮಾಡುವದಾಗಿತ್ತು. ವಿನಯ ಹಾಗು ಶೀಲಗಳ ಸಂಬಂಧದಿಂದ ನಿಯಮಾದಿಗಳು ಸಂಗ್ರಹಿಸಲ್ಪಟ್ಟು ಭಿಕ್ಷುಸಂಘವು ಸುಭದ್ರನಂತಹ ದುರ್ಬುದ್ಧಿ ಭಿಕ್ಷುಗಳ ಪರಾಮರ್ಶವನ್ನು ಅಪೇಕ್ಷಿಸಿ ರಕ್ಷಿಸಲ್ಪಟ್ಟಿತು.

ಅಶೋಕ ಮಹಾರಾಜನು ಈ ಧರ್ಮವನ್ನು ಗ್ರಹಿಸುವವರೆಗೆ ಈ ರೀತಿಯಾಗಿ ಸದ್ಧರ್ಮವು ಪ್ರಚಾರವಾಯಿತು. ಒಂದು ವೇಳೆ 'ದೇವಾನಾಂ ಪಿಯದಶಿ, ಯು ಸದ್ಧರ್ಮಕ್ಕೆ ಆಶ್ರಯವನ್ನು ಕೊಟ್ಟು, ಅದನ್ನು ರಾಜಧರ್ಮವನ್ನಾಗಿ ಮಾಡದಿದ್ದರೆ, ಬೌದ್ಧಧರ್ಮವು ಇಷ್ಟು ಹಬ್ಬುತ್ತಿರಲಿಲ್ಲ. ಈ ಧರ್ಮದ ಹಬ್ಬುಗೆಗೋಸುಗ ಅವನು ಟೊಂಕಕಟ್ಟಿ ನಿಂತದ್ದರಿಂದ ದೇಶ-ವಿದೇಶಗಳಲ್ಲಿ ಅದು ಬೆಳಿಗೆ ಹೊಂದಿತು. ಅವನು ಈ ಧರ್ಮವನ್ನು ಪ್ರಚಾರಮಾಡಿ ಅದರ ವಿವರಣೆಯನ್ನು ಶಿಲಾಲಿಪಿಗಳಲ್ಲಿ ಬರೆಯಿಸಿರುತ್ತಾನೆ.

(Rock Edict No. 13) ಇದರಲ್ಲಿ ಕೊಟ್ಟಿರುವದೇನಂದರೆ—"ಗ್ರೀಕ ರಾಜನಾದ ಆಂಟಿಓಕಸ (Antiochos) ನು ವಾಸಮಾಡುವಲ್ಲಿ, ಅದರ ಉತ್ತರದಲ್ಲಿ ಟಾಲೇಮಿ (Ptolemy) ಆಂಟಿಗೋನಸ (Antigonas), ಮ್ಯಾಗಾಜಾಮ (Magasm) ಮತ್ತು ಅಲೆಕಜಾಂಡರ (Alexander), ಈ ನಾಲ್ವರು ರಾಜರು ವಾಸಮಾಡುವಲ್ಲಿಯೂ ಅವರ ಸಾಮ್ರಾಜ್ಯದ ದಕ್ಷಿಣಕ್ಕೆ, ಚೋಳ-ಪಾಂಡ್ಯ ರಾಜ್ಯಗಳಲ್ಲಿ ಮುಂದೆ ತಾಮ್ರಪರ್ಣೀ ನದಿಯವರೆಗೆ ಮತ್ತು ಯೋನ, ಕಾಂಭೋಜ; ಭೋಜ ಮತ್ತು ಪತನಿಕ; ಅಂಧ ಮತ್ತು ಪುಲಿಂದಗಳಲ್ಲಿಯೂ" ಈ ಧರ್ಮವನ್ನು ಅವನು ಪ್ರಚಾರ ಮಾಡಿದನು.*

* Kern's manual of Buddhism.

† V. Simith's Asoka-Rock Edict XIII.

"ಅಶೋಕರಾಜನ ಅಳಿಕೆಯ ವರೆಗೆ ಬೌದ್ಧ ಧರ್ಮವು ಪೂರ್ವ ಭಾರತದಲ್ಲಷ್ಟೇ ತ್ತು. ಆ ಮೇಲೆ ಅದು ಅಶೋಕನ ಸಹಾಯವನ್ನು ಹೊಂದಿ ಕ್ರಮದಿಂದ ಆ ಗಡಿ ುನ್ನು ದಾಟಿಹತ್ತಿತು." ಎಂಬ ಸಂಗತಿಯನ್ನು ನಾವು ಮೇಲಿನ ಶಿಲಾಲಿಪಿಯಿಂದ ಂಡುಕೊಂಡೆವು. ಅಶೋಕನ ಕೃಪೆಯಿಂದ ಈ ಧರ್ಮವು ಈಗ ಮಗಧ ದೇಶದಲ್ಲಷ್ಟೇ ುಳಿಯದೆ ದಕ್ಷಿಣ ಭಾರತದಲ್ಲಿ ಚೋಳ, ಪಾಂಡ್ಯ ರಾಜ್ಯಗಳಲ್ಲಿ ಹಬ್ಬಿದ್ದಲ್ಲದೆ ಸಿಂಹಲದ ರಿಗೆ ಸಹ ಪಸರಿಸಿತು. ಇಷ್ಟೇ ಅಲ್ಲ, ಪಶ್ಚಿಮ ಏಸಿಯಾ ಪೂರ್ವ ಯುರೋಪ ುತ್ತು ಆಫ್ರಿಕಾಗಳಲ್ಲಿ ಸಹ ಪ್ರಸಾರವಾಯಿತು.

ಮಹಾವಂಶವು ಸಿಂಹಲದ ಇತಿಹಾಸವು. ಸಿಂಹಲದಲ್ಲಿ ಬೌದ್ಧ ಧರ್ಮವು, ೀಗೆ ಪ್ರವೇಶವಾಡಿತೆಂಬವರ ವಿವರಣೆಯು, ಈ ಮಹಾವಂಶದಲ್ಲಿ ಇರುವದು. ಶೋಕನ ಪ್ರೇರಣೆಯಿಂದ 'ವೊಗ್ಗಲಿ ಪುತ್ತ' ನು ಮೂರನೆಯ ಬೌದ್ಧ ಸಂಗೀತಿ ುನ್ನು ಕರೆದನು. ಈ ಸಭೆಯಲ್ಲಿ ಬೌದ್ಧ ಭಿಕ್ಷುಗಳೊಳಗೆ ಇಬ್ಭಣವಾಯಿತು. ಲವು ಭಿಕ್ಷುಗಳು ವಿನಯಶಾಸನವನ್ನು ಸಡಿಲುಮಾಡುವ ಯತ್ನ ಮಾಡಿದರು. ಾ ಕಾರಣದಿಂದ ಉಚ್ಛೃಂಖಲ ಭಿಕ್ಷುಗಳು ದೇರೊಂದು ಸಂಘವನ್ನು ಮಾಡಿ ುಂಡರು. ಆಗ ಅವರಿಗೆ ಮಹಾಸ್ಥಾನಿಕರೆಂಬ ಹೆಸರು ುಂಟಾಯಿತು. ಇದಲ್ಲದೆ ವರು ತಮ್ಮ ಅಭಿಪ್ರಾಯವನ್ನು ಸಭೆಯಲ್ಲಿ ಪ್ರಸಿದ್ಧ ಮಾಡಿದರು. ಮೊಗ್ಗಲಿ ುತ್ತನ, ನೇತೃತ್ವದಲ್ಲಿ ಮಹಾಸಂಘದ ಅಧಿವೇಶನವು ಆಗಿ, ತ್ರಿಪಿಟಕವು ಆವೃತ್ತಿ ುಾಡಲ್ಪಟ್ಟಿತು. ಮತ್ತು ಅಶೋಕ ಮಹಾರಾಜನು ದೇಶ-ವಿದೇಶಗಳಲ್ಲಿ ಬೌದ್ಧ ್ರಚಾರಕರನ್ನು ಕಳುಹಿಸಿ, ಬೌದ್ಧ ಧರ್ಮವನ್ನು ಹಬ್ಬಿಸತಕ್ಕದ್ದು ಎಂದೂ ನಿರ್ಣಯಿ ಲ್ಪಟ್ಟಿತು.

ಆ ಸಭೆಯ ಮತಾನುಯಾಯಿಯಾದ ಅಶೋಕ ಮಹಾರಾಜನು, ಸಿಂಹಲ ್ವೀಪ, ಬ್ರಹ್ಮದೇಶ, ಸಿಯಾಮುಗಳಲ್ಲಿ ಪ್ರಚಾರಕರನ್ನು ಕಳುಹಿದನು. ಅಶೋಕನ ಾಲಿಪಿಗಳಲ್ಲಿ ಬ್ರಹ್ಮದೇಶ ಅಥವಾ ಸಿಯಾಮು ದೇಶಗಳಲ್ಲಿ ಪ್ರಚಾರಕರನ್ನು ಕಳುಹಿದ ುಲ್ಲೇಖವಿರದಿದ್ದರೂ ಆಯಾ ಸ್ಥಳಗಳಲ್ಲಿಯ ಜನರ ಹೇಳಿಕೆ ಕೇಳಿಕೆಗಳ ಬಲದಿಂದ ಶೋಕನ ಪ್ರಚಾರಕತೀ ಈ ಎಲ್ಲ ದೇಶಗಳಲ್ಲಿ ಬೌದ್ಧ ಧರ್ಮವನ್ನು ಪ್ರಚಾರ ುಾಡಿದರೆಂದು ಗೊತ್ತಾಗುವದು. ಅಶೋಕನ ಮಗನಾದ ಮಹೇಂದ್ರನೂ, ಮಗ ಾದ ಸಂಘಮಿತ್ರೆಯೂ ಸಿಂಹಲವಲ್ಲಿ ಧರ್ಮ ಪ್ರಚಾರ ಮಾಡುವದಕ್ಕೋಸುಗ ಕಳು ಿಲ್ಪಟ್ಟರು. ಮಹೇಂದ್ರನು ತನ್ನ ಸಂಗಡ ತ್ರಿಪಿಟಕವನ್ನು ಒಯ್ದದ್ದಲ್ಲದೆ ಎಷ್ಟೋ ಭಿಕ್ಷುಗಳನ್ನು ಸಹ ಕರಿದೊಯ್ದನು. ಸಂಘಮಿತ್ರೆಯೊಡನೆ ಅನೇಕ ಭಿಕ್ಷುಣಿಯರು ಿೋದರು. ಅವರು ಹೋಗಿ 'ತಿಸ್ಸರ, ರಾಜನ ಕನ್ಯೆಗೆ ಬೌದ್ಧ ಧರ್ಮದ ೀಕ್ಷೆಯನ್ನು ಕೊಟ್ಟರು. ಸಂಘಮಿತ್ರೆಯು ಗಯೆಯ ಬೋಧಿದ್ರುಮದ ಒಂದು ಶಾಲೆ

ಯನ್ನು ತನ್ನೊಡನೆ ಸಿಂಹಲಕ್ಕೆ ಒಯ್ದು ಅನುರುದ್ಧಪುರದಲ್ಲಿ ಹಚ್ಚಿದಳು. ಅದು ಈಗ ಸಹ ಇರುವದು. ಸಾಂಚಿಯಸ್ತೂಪವಲ್ಲಿ ಬೋಧಿದ್ರುಮದ ಶಾಖೆಯು ಸಿಂಹಲದಲ್ಲಿ ಒಯ್ದಂತೆ ಒಂದು ಚಿತ್ರವು ಇರುವದು. *

ಈ ರೀತಿಯಾಗಿ ಬೌದ್ಧಧರ್ಮವು ಭಾರತ ವರ್ಷದಲ್ಲಷ್ಟೇ ಹರಡಿರದೆ ಭಾರತದ ಹೊರಗೆ ಸಹ ಹೋಗಲು ಪ್ರಾರಂಭಮಾಡಿತು. ಈ ಬಗೆಯಾಗಿ ಈ ಧರ್ಮವು ಚೀನ ಜಪಾನ ತಿಬೇಟ, ತುರ್ಕಸ್ತಾನಗಳಲ್ಲಿ ಹಬ್ಬುಗೊಂಡಿತು.

ಬೌದ್ಧಧರ್ಮವು ಚೀನ, ತಿಬೇಟ, ಜಪಾನಗಳಲ್ಲಿ ಹೇಗೆ ಪ್ರವೇಶಮಾಡಿತೆಂಬ ದರ ಇತಿಹಾಸವು ಬಹುದಿವಸ ಅಜ್ಞಾನಾಂಧಕಾರದಿಂದ ಮುಚ್ಚಿಕೊಂಡಿತ್ತು. ಆದ ಅದು ಕೆಲವು ಪಂಡಿತರ ಶ್ರಮಸಾಧ್ಯವಾದ ಶೋಧದಿಂದ ಹೊರಗೆಡಹಲ್ಪಟ್ಟಿರುತ್ತದೆ.

ಮೊದಲು ತಿಬೇಟ ದೇಶದಬಗ್ಗೆ ವಿಚಾರಿಸೋಣ—ಇದರ ಪಾಕೃತಿಕಸ್ವರೂಪವ ಸುಲಭವಾಗಿ ಪ್ರವೇಶಿಸಲು ಅನಕೂಲವಿಲ್ಲ. ಈ ಕಾರಣದಿಂದ ಬಹುದಿನಗಳವರೆ ತಿಬೇಟದ ಸಂಬಂಧದ ಯಾವ ಸಂಗತಿಗಳೂ ಗೊತ್ತಾಗಿದ್ದಿಲ್ಲ. ಕಡೆಗೆ ಒಬ್ಬಿಬ್ಬರ ಪ್ರವಾಸಿಗಳು ಮಾತ್ರ ಪ್ರವಾಸಮಾಡುವ ಲನಲವಿಕೆಯಿಂದ ಈ ದೇಶದಲ್ಲಿ ಪ್ರವೇ ಮಾಡಿದರು. ಅವರಿಂದ ಕ್ರಮವಾಗಿ, ತಿಬೇಟದ ಸಂಗತಿಯು ಜನರ ಕಣ್ಣೆದುರಿ ಬರಹತ್ತಿತು. ೧೭೬೯ ರಲ್ಲಿ ರೋಮನಗರದಲ್ಲಿ ಫ್ರೇ. ಏ.ಜಾರ್ಜಿ (Fr. A Giorgi) ಎಂಬವರು, ಅಲ್ಫಾಬೇಟಮ್-ತಿಬೇಟ್ಯಾನಮ್ (Alphabetum Tibetanum) ವನ್ನು ಪ್ರಸಿದ್ಧಪಡಿಸಿದರು. ಇದೇ ತಿಬೇಟೀ ಭಾಷೆಯು ಪ್ರಥಮ ಪುಸ್ತಕವು ಯುರೋಪಿಯ ಪಂಡಿತರಲ್ಲಿ ಪ್ರಚಾರವಾಯಿತೆಂದು ಹೇಳಬಹುದು. ಅಂದಿನಿಂದ ತಿಬೇಟದ ವಿಷಯವಾಗಿ ಆಲೋಚನೆಯ ಸೂತ್ರಪಾತವಾಯಿತೆಂದು ನಾವು ಹೇಳುವೆವು. ಇದರ ತರುವಾಯ ಕೆಲವು ಮಿಶನರಿಗಳು ತಿಬೇಟಕ್ಕೆ ಹೋದರು. ಇವರಲ್ಲಿ ಒಬ್ಬನು ಸಹ ಇಂಗ್ರಜನಿದ್ದಿಲ್ಲ. ಬಹುತರವಾಗಿ ಅಂದರೆ ಗಿಲಗಿರ ಮ್ಯಾನಿಂಗ (Manning) ನೆಂಬ ಒಬ್ಬ ಇಂಗ್ರಜನು ಆ ದೇಶದಲ್ಲಿ ಪ್ರವೇಶಮಾದನು. ಅವನಿಗೆ ನಾವು ಪ್ರಥಮ ಇಂಗ್ರಜನೆಂದು ಹೇಳುವೆವು. ಆದರೆ ಐತಿಹಾಸಿ ದೃಷ್ಟಿಯಿಂದ ಅವನು ತಿಬೇಟದ ಸಂಬಂಧವಾಗಿ ವಿಚಾರಮಾಡಲಿಲ್ಲವೆಂದೇ ಹೇಳಹುದು. ಆ ದೇಶದ ಸಮಾಜ, ಧರ್ಮ ಅಥವಾ ಆಚಾರ ವ್ಯವಹಾರಗಳ ಸಂಬಂಧದಿಂದ ವೈಜ್ಞಾನಿಕ ಆಲೋಚನೆಯು, ಅಲೇಕ್ಸಾಂಡರ ಕಾಸಮಡಿಕೊರಸ (Alexander Cosam de Koros) ಎಂಬವನ ಸಮಯದಿಂದ ಪ್ರಾರಂಭವಾಯಿತು. ಅವನು ನಾವು ತಿಬ್ಬತ ಅಧ್ಯಯನದ ಪಿತ (Father of Tibetan Studies

* Weddell Lamaism P. 2.

‡ Macphail's Asoka.

ಎಂದು ಅನ್ನುವೆವು. ಲ್ಯಾಡಕ (Ladak) ನ ಕೆಲಕಾಲದ ತರುವಾಯ ಕೊರಸ (Koros)ನು ಒಂದು ತಿಬೇಟ ಕೋಶ ಹಾಗು ವ್ಯಾಕರಣವನ್ನು ಗಲಕ್ಕಿಳರಲ್ಲಿ ಬರೆದನು. ಇವೇ ಇಂಗ್ರೇಜೀ ಭಾಷೆಯಲ್ಲಿಯ ತಿಬ್ಬತ ಭಾಷೆಯ ಸಂಬಂಧದ ಮೊದಲು ಅಚ್ಚಾದ ಗ್ರಂಥಗಳು. ಈ ಸಮಯದಲ್ಲಿ ಕೊರಸನಿಗೆ ಬಂಗಾಲ ಸರಕಾರದ ಹಾಗು ಏಸಿಯಾ ಟಿಕ ಸೊಸಾಯಿಟಿಯ ಸಹಾಯವು ದೊರಕಿತ್ತು. ಅನಂತರ ಅವನು ತಿಬೇಟಕ್ಕೆ ಹೋಗುವದಕ್ಕೊಸುಗ ಹೊರಟನು. ಆದರೆ ದಾರ್ಜಿಲಿಂಗದಲ್ಲಿಯೇ ಮರಣ ಹೊಂ ದಿದನು. (೧೮೪೨) + ಅವನು ತಿಬೇಟ ಭಾಷೆಯಲ್ಲಿ ಅಸಾಧಾರಣ ಪಂಡಿತನಿದ್ದನು. ಏಸಿಯಾಟಿಕ್ ರಿಸರ್ಚಿಸ (Asiatic Researches) ದಲ್ಲಿ ಅವನು ತಿಬೇಟೀ ವಿಶ್ವಕೋಶದ Tanjur ಮತ್ತು Khaygur ಇವುಗಳ ವಿಸ್ತೃತತಾಲಿಕೆಯನ್ನು ಸಿದ್ಧಮಾಡಿದನು ಅವನಿಂದ ತರಲ್ಪಟ್ಟ ಆ ವಿಶ್ವಕೋಶವು ಈಗ ಸಹ ಏಸಿಯಾಟಿಕ್ ಸೊಸಾಯಿಟಿಯ ಲಾಯಬ್ರರಿಯಲ್ಲಿ ಇರುತ್ತದೆ. ಅವನ ತರುವಾಯ ಹಾಜ್‌ಸನ್ (Hodgson) ಎಂಬವನು ನೇಪಾಳದಿಂದ ವಿಶ್ವಕೋಶವನ್ನು ಸಂಗ್ರಹಮಾಡಿದನು. ಈ ಕಾಲದ ಪರ್ಯಟಕ ಹಾಗು ಲೇಖಕರಲ್ಲಿ ರಾಕ್‌ಹಿಲ್ಲ (Rockhill), ಬಾವರ (Bower) ಮಿಸ್‌ಟೇಲರ (Miss Taylor), ವ್ಯಾಡಲ್ (Waddel) ಇವರ ಹೆಸರನ್ನು ಮುಂದೆ ಮಾಡುವೆವು. ನಮ್ಮ ದೇಶದ ರಾವಬಹಾದ್ದೂರ ಶರತ್ ಚಂದ್ರದಾಸ, ಸತೀಶಚಂದ್ರವಿದ್ಯಾ ಭೂಷಣರ ಹೆಸರು ಈ ಸಮಯದಲ್ಲಿ ಉಲ್ಲೇಖಿ ಸಲು ಯೋಗ್ಯವು. ಶರತ್‌ಚಂದ್ರದಾಸನು ಮೊದಲು ಗಲರ್ಕಿರಲ್ಲಿ, ಎರಡನೇಸಾರಿ ಗಲಲಗಿ ರಲ್ಲಿ ತಿಬೇಟಕ್ಕೆ ಹೋದನು. ಶರತ್‌ಚಂದ್ರದಾಸನ 'ಬೃಹತ್ ತಿಬೇಟೀ ಅಭಿ ಧಾನವು' ಅವನ ತಿಬೇಟೀಜ್ಞಾನದ ಮತ್ತು ಶ್ರಮದ ಪರಿಚಯವನ್ನು ಮಾಡಿಕೊ ಡುತ್ತದೆ. ಈ ಎಲ್ಲ ಪಂಡಿತರ ಶೋಧದ ಫಲದಿಂದ ತಿಬೇಟದಂತಹ ದುರ್ಗಮ ದೇಶದ ಅನೇಕ ತಥ್ಯಗಳೂ, ಬೌದ್ಧಧರ್ಮದ ಪರಿಚಯವೂ ನಮಗಾಗಲು ಶಕ್ಯ ವಾಗಿದೆ.

(ಅಪೂರ್ಣ)

ಒತ್ತಕ್ಷರಗಳನ್ನು ಕಲಿಸುವ ಕ್ರಮ

ಈಗ ಪ್ರಚಾರವಲ್ಲಿ ಬಳಿಯನ್ನು ಬರೆಯಿಸುವಾಗ್ಗೆ, ಕ ಕಾ ಕಿ ಕೀ ಕು ಕೂ ಕೆ ಕೇ ಕೈ ಎಂದು ಬರೆಯಿಸುತ್ತೇವೇ ಹೊರತು, ಕ ಕಾ ಕಿ ಕೀ ಕು ಕೂ ಕೃ ಕ್ಕಾ ಕೆ ಕೇ ಕೈ ಎಂದು ಬರೆಯಿಸುವದಿಲ್ಲ. ಅದರಿಂದಕ ಕ್ಕೆಯು ಕೂಡಿ ಕ್ಕ ಆಗಿರುತ್ತದೆ ಎಂಬ ಭಾವ ನೆಯೂ ಕ್ಕ ಇದು ಬಳಿಯೊಳಗಿನ ಅಕ್ಷರವೇ (ಕಾಗುಣಿತ) ಇರುತ್ತದೆಂಬ ಭಾವನೆಯೂ ಹುಟ್ಟಿಸಲಿಕ್ಕೆ ಮಕಾರಯುಕ್ತ ಶಬ್ದಗಳನ್ನು ಮೊದಲು ಸಂಗ್ರಹಿಸಿ ಅಭ್ಯಾಸಿಸಬೇಕು.

† Waddell Preface XII.

ಋಕಾರಯುಕ್ತ ಶಬ್ದಗಳು

ಶಬ್ದ ಸಂಗ್ರಹ ೧.

ಕೃಪೆ	ನೃಪ	ವೃಷಭ
ಗೃಹಸ್ಥ	ಪೃಥ್ವಿ	ಶೃಗಾಲ
ಮಾತೃ	ಬೃಹಸ್ಪತಿ	ಸೃಜಿಸು
ದೃಢ	ಭೃಗು	ಹೃದಯ
ಧೃತಿ	ಮೃಡ	

ಇತ್ಯಾದಿ.

ಅನುಸ್ವಾರ, ವಿಸರ್ಗಗಳು ಬಹುಶಃ ಬಳ್ಳಿಯೊಳಗಿನ ಎಲ್ಲ ಸ್ವರಗಳ ಮುಂ ಬರುತ್ತವೆ. ಆದರೆ ವಿಸರ್ಗವು ಋಕಾರದ ಮುಂದೆ ಬಂದದ್ದು ಕಂಡುಬಂದಿ ಅನುಸ್ವಾರವು ಬಳ್ಳಿಯೊಳಗಿನ ಬೇರೆ ಬೇರೆ ಸ್ವರಗಳ ಮುಂದೆ ಬರಲು ಆ ಸ್ವರಗಳನ್ನ ಮೂಗಿನಿಂದ ಉಚ್ಚರಿಸಬೇಕಾಗುತ್ತದೆ.

ಶಬ್ದಸಂಗ್ರಹ ೨.

ಕಂತ	ಹೂಂ	ಗೊಂಡೆ
ಕಾಂಚನ	ಶೃಂಗಾರ	ಧೋಂಡಪ್ಪ
ಕಿಂಚಿತ್ತು	ಕೆಂಚಪ್ಪ	ಸೌಂದರ್ಯ
ಮುನೀಂದ್ರ	ಕೇಂದ್ರ	
ಕುಂಜು	ಸೈಂಧವ	

ಶಬ್ದಸಂಗ್ರಹ ೩.

ಅಂತಃಕರಣ	ತೇಜಃಪುಂಜ	ಕಃಪದಾರ್ಥ
ಪ್ರಾತಃಕಾಲ	ದುಃಖ	ನಿಃಶೇಷ

ಬಹುಶಃ ಒತ್ತಕ್ಷರಗಳು ಉಚ್ಚರಿಸುವಾಗ್ಗೆ ನಾಲಿಗೆಗಾಗಲಿ ತುಟಿಗಳಿಗಾಗ ಹಲ್ಲುಗಳಿಗಾಗಲಿ ಒತ್ತುತ್ತವೆ. ವಿಕಾರವಾಗುವ ಒತ್ತಕ್ಷರಗಳನ್ನು ತಿಳಿಸಿಕೊಟ್ಟ ಉಳಿದವುಗಳ ಕಲ್ಪನೆ ಸಹಜವಾಗಿ ಉಂಟಾಗುವದು. ಕನ್ನಡದಲ್ಲಿ ಒತ್ತಕ್ಷರಗಳನ್ನ ಬರೆಯುವಾಗ್ಗೆ ಆರಂಭವ ವ್ಯಂಜನದಲ್ಲಿ ಸ್ವರಚಿಹ್ನಗಳನ್ನು ಕೂಡಿಸಿ ಬರೆಯುತ್ತಾ ಸೇರುವ ವ್ಯಂಜನಗಳನ್ನು ಆರಂಭದ ವ್ಯಂಜನದ ಕೆಳಗೆ ಕ್ರಮವಾಗಿ ಸೇರಿಸುವರು ಇದರ ಸ್ಪಷ್ಟೀಕರಣ ಚಿಕ್ಕ ಬಾಲಕರಿಗೆ ಬೇಗ ಹೊಳೆಯುವದಿಲ್ಲ. ಶಬ್ದಸಂಗ್ರಹ ಬರೆಯಿಸಿದರೆ ಬರಬರುತ್ತ ತನ್ನಿಂದ ತಾನೇ ಗೊತ್ತಾಗಹತ್ತುವದು, ಕಾರಣ ಅಪ್ರಕ ರದ ಸಂಗ್ರಹವನ್ನು ಕೆಳಗೆ ಬರೆದಿರುತ್ತೇನೆ. ವಿಕಾರವಾಗುವ ಅಕ್ಷರಗಳು—ತ, ನ ಮ, ಯ, ರ, ಲ ಮತ್ತು ರೇಫ,

ರೂಢಿಯ ಎಲ್ಲಾ ಒತ್ತಕ್ಷರಗಳು

ಭಾಸ್ಕರ	ಅಸಡ್ಡಾಳ	ವಾಕ್ಯ
ಅಸ್ಪಲಿತ	ನಿಷ್ಣಾತ	ಚಿತ್ರ
ಹೃದ್ಗತ	ಶಕ್ತ	ಡಿಡ್ಲ
ಉದ್ಭಟ	ಸ್ವಸ್ಥ	ಪಕ್ವ
ಶಾರ್ದ್ದೂರವ	ಅಬ್ಧಿ	ದರ, ದರ್ಶ
ನಿಶ್ಚಯ	ದುಗ್ಧ	ಅಕ್ಷರ
ಸ್ವಚ್ಛ	ರತ್ನ	ಅಪ್ಸರಿ, ವತ್ಸ
ಅಬ್ಜ	ಪುಷ್ಪ	ಅಲ್ಬಾದ
ವಾಗ್ಝರಿ	ಸಶ್ಚಲ	ಅರ್ದ್ಧ
ಕಷ್ಟ	ಸದ್ಬಲ	ಒಳ್ಳಿತ್ತು
ನಿಷ್ಠೆ	ತದ್ಭವ	ಪ್ರಾಜ್ಞ
ವಾಗ್ದಂಬ	ಪದ್ಮ	

ಶಬ್ದ ಸಂಗ್ರಹ ೪

ಭಕ್ತ	ಕಸ್ತೂರಿ	ನಿಸ್ಕೋಷ
ಭಕ್ತಾಧೀನ	ಸಿರಸ್ತೆ	ಸ್ಫೋತಿ
ಶಕ್ತಿ	ಆಪ್ತೇಷ್ಟ	ಸ್ತಂಭ
ಶಕ್ತೀಪತಿ	ದಸ್ಕೃವಜು	ಅಪ್ತಃ
ವಸ್ತು	ಕಾಲ್ತೊಡಕು	

ಶಬ್ದ ಸಂಗ್ರಹ ೫

ರತ್ನ	ಬದ್ಕೂರು	ಪ್ರಶ್ನೋತ್ತರ
ರತ್ನಾಕರ	ಪ್ರಶ್ನೆ	ಅಗ್ನಿಪತ್ನಿ
ಪತ್ನೀ	ವಿಘ್ನೇಶ	ಪ್ರದ್ಯುಮ್ನಃ
ಪತ್ನಿಸಮೇತ	ಕನ್ನೆಡಿಲೆ	ರತ್ನಃ
ಪ್ರಾಪ್ನುವಂತಿ	ಜೇನ್ನೊಣ	

ಶಬ್ದಸಂಗ್ರಹ ೬

ಪದ್ಮ	ತನ್ಮೂಲಕ	ಜಗನ್ಮೋಹನ
ಪದ್ಮಾಕರ	ತಾಳ್ಮೆ	ನೈತ್ಯಕ್ತಿಕ
ವಾಣ್ಮಿ	ಕಲ್ಮೇಶ್ವರ	ನಿನ್ಮಂಗಲ
ವಾಲ್ಮೀಕ	ಪರಸ್ಮೈಪದ	ಪದ್ಮಃ
ಷಣ್ಮುಖ	ನಾಲ್ಮೊಗ	

ಶಬ್ದಸಂಗ್ರಹ ೭

ಭಾಗ್ಯ	ಆಖ್ಯೆ	ದಿವ್ಯೌಷಧ
ಭಾಗ್ಯಾನುಸಾರ	ಆಖ್ಯೇಯ	ಅಭ್ಯಂಗ
ಮುಯ್ಯಿ	ನಿತ್ಯೈಶ್ವರ್ಯ	ಭಾಗ್ಯಃ
ಅಭ್ಯುದಯ	ಕೆಯ್ಯೊಳಗೆ	
ಆದಾಗ್ಯೂ	ಯಾವ್ಯೋತ್ತರ	

ಶಬ್ದಸಂಗ್ರಹ ೮

ಚಕ್ರ	ಚಿದ್ರೂಪ	ಅಗ್ರೋಡಿ
ಚಕ್ರಾಕಾರ	ಪಾತ್ರೆ	ಪ್ರೌಢ
ಚಕ್ರಿ	ಅಗ್ರೇಸರ	ಗ್ರಂಥ
ವಕ್ರೀಭವನ	ತ್ರೈಲೋಕ್ಯ	ಚಕ್ರ
ಕ್ರುದ್ಧ	ಅಕ್ರೋಧ	

ಶಬ್ದಸಂಗ್ರಹ ೯

ಆಮ್ಲ	ಹೊಮ್ಲೂರು	ಶ್ಲೋಕ
ಮ್ಲಾನ	ಎಲ್ಲೆಡೆ	ಗ್ಲಾ
ಸುಪ್ಲಿ	ಕ್ಲೇಶ	ಇಂಗ್ಲಂಡ
ಪ್ಲೀಹ	ಕ್ಲೈಬ್ಯ	ಶುಕ್ಲಾಂಬರ
ಪೆಟ್ಲುಪ್ಪು	ಕಲ್ಲೊಳಗೆ	ಆಮ್ಲಃ

ಶಬ್ದಸಂಗ್ರಹ ೧೦

ಪೂರ್ವ	ಕರ್ಪೂರ	ನಿರ್ದೋಷ
ಪೂರ್ವಾಚಲ	ದುರ್ಗೆ	ಸರ್ವೌಷಧ
ಉರ್ವಿ	ಸರ್ವೇಶ	ಸಾರ್ತಂದು
ಉರ್ವೀಶ	ಸರ್ವೈಶ್ವರ್ಯ	
ಅಮುರ್ಸು	ಕಾರ್ಬೊನ್ನು	

ರಕಾರಕ್ಕೆ ಯಾವ ಅಕ್ಷರವು ಕೂಡುವದೋ ಆ ಅಕ್ಷರದ ಮುಂದೆ ಅರ್ಕಾವಳಿಯು ಗುರ್ತು ಬರುವದು.

ವಾಸುದೇವ ಹನುಮಂತ ಮುತ್ನೂರ.
ಕೊಣ್ಣೂರ ಜಿ. ವಿಜಾಪೂರ.

ಪ್ರಚಲಿತ ಶಾಸ್ತ್ರೀಯ ವಿಷಯಗಳ ಸಂಶೋಧನವೂ, ಮತ್ತು ಅವುಗಳ ಸಂಶೋಧಕರೂ ಇವುಗಳಬಗ್ಗೆ ಪ್ರಶ್ನೋತ್ತರ ಟಿಪ್ಪಣಿ.

(ಲೇಖಕ:—ಎನ್.ಕೃಷ್ಣ, ದಸ್ತಗೀರಸಾಹೇಬ. ಹೆ. ನಂ. ಮೇನೂರು.)

೧ ಪೂರ್ಣ ಯಶಸ್ವಿಯಾದ ಉಗಿಯ ಎಂಜಿನವನ್ನು ಮೊದಲು ಯಾರು ಶೋಧ ಮಾಡಿದರು ?

೨ ತಾರಾಯಂತ್ರವನ್ನು ಯಾರು ಹುಡುಕಿ ತೆಗೆದರು.

೩ ಚಲಚ್ಚಿತ್ರಪಟ (ಸಿನೇಮಾ)ದ ಯಂತ್ರವನ್ನು ಯಾರು ಶೋಧಿಸಿ ತೆಗೆದರು ?

೪ ಗುರುತ್ವಾಕರ್ಷಣದ ಶೋಧಕರು ಯಾರು ?

೫ ಪ್ರಕಾಶದ ವೇಗವನ್ನು ಗೊತ್ತುಹಚ್ಚಿದವರು ಯಾರು ?

೬ ಸಕ್ಷತ್ರ ಪರಿಭ್ರಮಣದ ನಿಯಮವನ್ನು ಯಾರು ಶೋಧಿಸಿದರು ?

೭ ಹೊಲಿಯುವ ಯಂತ್ರವನ್ನು ಯಾರು ನಿರ್ಮಿಸಿದರು ?

೮ ಟೆಲಿಫೋನಿನ ಸಂಶೋಧಕರು ಯಾರು ?

೯ ಮಶನಗನ್ನವನ್ನು ಯಾರು ರಚಿಸಿದರು ?

೧೦ ದುರ್ಬಿನ (ದೂರದರ್ಶಕ ಯಂತ್ರ)ದ ಉಪಯೋಗವನ್ನು ಮೊದಲು ಯಾರು ಮಾಡಿದರು ?

ಉತ್ತರ:—

(೧) ಜೇಮ್ಸ ವಟ ... ... ಸನ್ ೧೭೬೯

(೨) ಸೇಮ್ಯೂಎಲ್ ಎಫ್. ಬಿ. ಮೋರ್ಸ ... ೧೮೩೭

(೩) ಟಾಮಸ ಎಡಿಸನ್ ೧೮೯೩

(೪) ಆಯಝಾಕ್ ನ್ಯೂಟನ ... ೧೬೮೭

(೫) ಓಲಅರ ರೋಮರ ೧೬೭೫

(೬) ಕೆಪ್ಲರ ೧೬೦೯

(೭) ಏಲಿಎಸ್ ಹೋವೆ ೧೮೪೬

(೮) ಅಲೇಕ್ಷಾಂಡರ ಬೇಲ ...

(೯) ಗಟಲಿಂಗ ೧೮೬೧

(೧೦) ಗಲಿಲಿಓ ೧೬೦೯

೧ ಪೃಥ್ವಿಯ ಸುತ್ತಳತೆಯು ಎಷ್ಟು ಮೈಲು ಅವೆ ?

೨ ಧ್ವನಿಯು ಹವೆಯಲ್ಲಿ ಪ್ರತಿ ಸೇಕಂದಿಗೆ ಎಷ್ಟು ಫೂಟು ಹೋಗುತ್ತದೆ?

೩ ಪೃಥ್ವಿಯಿಂದ ಚಂದ್ರನು ಎಷ್ಟು ದೂರದಲ್ಲಿರುವನು ?

೪ ಪ್ರಕಾಶವು ಪ್ರತಿ ಸೇಕಂದಿಗೆ ಎಷ್ಟುಮೈಲು ಹೋಗುತ್ತನೆ ?

೫ ಪೃಥ್ವಿಯ ಭಾರವೆಷ್ಟು ?

೬ ಪೃಥ್ವಿಯಿಂದ ಸೂರ್ಯನವರೆಗೆ ಅಂತರವೆಷ್ಟಿದೆ ?

೭ ಜಗತ್ತಿನೊಳಗಿನ ಅತ್ಯುನ್ನತ ಪರ್ವತದ ಎತ್ತರವೆಷ್ಟು ?

೮ ವಾಯುಮಾಪಕ ಯಂತ್ರದ ಸಾಮಾನ್ಯ ಸ್ಥಿತಿಯೊಳಗಿನ ಎತ್ತರವೆಷ್ಟು

೯ ಒಂದು ಘನಫೂಟು ನೀರಿನ ಭಾರವೆಷ್ಟು ?

ಉತ್ತರ:—

(೧) ೨೫೦೦೦ ಮೈಲು

(೨) ೧೧೦೦ ಫೂಟು

(೩) ೨೫೯೦೦೦ ಮೈಲು

(೪) ೧೮೬೦೦೦ ಮೈಲು

(೫) ೬೦೦೦ ೦೦೦ ೦೦೦ ೦೦೦ ೦೦೦ ೦೦೦ ೮೦೦ ಟನ್

(೬) ೯೩೦೦೦ ೦೦೦ ಮೈಲು

(೭) ೨೯೧೪೧ ಫೂಟು

(೮) ೨೯.೫ ಇಂಚು

(೯) ೬೨.೫ ಪೌಂಡು

(ಈ ಚಿಕ್ಕಲೇಖವು "ವಿಜ್ಞಾನಪ್ರಪಂಚ" ಎಂಬ ಮರಾಠಿ ಮಾಸಪತ್ರಿಕೆಯಿಂದ ಭಾಷಾಂತರಿಸಲ್ಪಟ್ಟಿದೆ.)

ಪ್ರಕಟನೆ ೧

ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯು
ದಕ್ಷಿಣಭಾಗ
ಮರಾಠಿ ಮತ್ತು ಉರ್ದು ಉಮೇದವಾರರ ಬಗ್ಗೆ

ನಂ. ೬೨–ಬಿ–೫೧೪

೧೯೨೪ನೇ ಇಸವಿಯಲ್ಲಿ ಆಗತಕ್ಕ ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ ಸಲುವಾಗಿ ಕೆಳಗೆ ಬರೆವಂತೆ ಗದ್ಯ–ಪದ್ಯ ಪಾಠಗಳನ್ನು ಗೊತ್ತುಪಡಿಸಿರುತ್ತದೆ.

ಮೊದಲನೆಯ ಸದರು—ವ್ಹನ್ಯಾರ್ಕ್ಯುಲರ (ಮರಾಠಿ)

ಗದ್ಯ:—ಕ್ರಮಿಕ ೬ನೇ ಪುಸ್ತಕದ (೧೯೨೬ನೇ ಇ. ಆ)–೨, ೫, ೬, ೧೧, ೧೨. ೧೩, ೧೫, ೧೭, ೧೮, ೨೨, ೨೩, ೨೫, ೨೬, ೨೭, ೩೦, ೩೧, ೩೨, ೩೫, ೩೬, ೩೭, ೪೦, ೪೧, ೪೨, ೪೩, ೪೪, ೪೫, ೪೭, ೪೯, ೫೦, ೫೧, ೫೨, ೫೩, ೫೪, ೬೦, ೬೧, ೬೨, ೬೩, ೬೪, ೬೫, ೬೭, ೭೦ ಮತ್ತು ೭೧ನೇ ಪಾಠಗಳು (ಒಟ್ಟು ೪೦ ಪಾಠಗಳು).

ಪದ್ಯ:—ಕ್ರಮಿಕ ೬ನೇ ಪುಸ್ತಕದ (೧೯೨೬ನೇ ಇ. ಆ)–೧೬, ೨೧, ೨೮, ೩೪, ಮತ್ತು ೪೬ನೇ ಪಾಠಗಳೊಳಗಿನ ಕವಿತೆಗಳು.

ಮೊದಲನೆಯ ಸದರು—ಉರ್ದು.

ಗದ್ಯ:—ಮೌಲವಿ ಮಹಮ್ಮದ ಇಸ್ಮಾಯಿಲ್ ಇವರ "ಉರ್ದು ೫ನೇ ಪುಸ್ತಕದ (೧೯೨೩ನೇ ಇ. ಆ)–೨, ೩, ೫, ೭, ೯, ೧೧, ೧೨, ೧೫, ೧೮, ೨೧, ೨೩, ೨೫, ೨೮, ೩೧, ೩೫, ೩೭, ೩೯, ೪೨, ೪೩, ೪೫, ೪೭, ಮತ್ತು ೫೫ನೇ ಪಾಠಗಳು (ಒಟ್ಟು ೨೦ ಪಾಠಗಳು).

ಪದ್ಯ:—ಮೌಲವಿ ಮಹಮ್ಮದ ಇಸ್ಮಾಯಿಲ್ ಇವರ "ಉರ್ದು ೫ನೇ ಪುಸ್ತಕದ (೧೯೨೩ನೇ ಇ. ಆ)–೧, ೪, ೬, ೮, ೧೩, ೧೪, ೧೭, ೧೯, ಮತ್ತು ೨೦ನೇ ಪಾಠಗಳೊಳಗಿನ ಕವಿತೆಗಳು.

ಧಾರವಾಡ
೨೨ನೇ ಎಪ್ರಿಲ ೧೯೨೭.

H. A. Sadarangani.
ಎಜ್ಯುಕೇಶನಲ್ ಇನಸ್ಪೆಕ್ಟರ ದ. ಭಾ.

ಪ್ರಕಟನೆ ೨.

ಮೆ॥ ಎಜ್ಯುಕೆಶನಲ್ ಇನಸ್ಪೆಕ್ಟರ ದ. ಭಾ. ರಹರ ಪತ್ರ ನಂ. ೪೭ ಪಿ. ೧೬೧೩ ತಾ॥ ೧ ನೇ ಜೂನ ೧೯೨೭ ನೇ ಸ್ಸಿನ ಪ್ರಕಾರ ಮಂಜೂರಾದ ಪುಸ್ತಕಗಳ ಯಾದಿಯನ್ನು ಕೆಳಗೆ ಕೊಟ್ಟಿದೆ.

ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂಜೂರಾಗಿವೆ.
೧	ಮಕ್ಕಳ ಪುಸ್ತಕ	ಡಿ. ಕೆ. ಭಾರದ್ವಾಜ	ಡಿ. ಕೆ. ಭಾರದ್ವಾಜ ಬೆಂಗಳೂರ (ಮಾಸಪತ್ರಿಕೆ)	೩–೦–೦ (ವಾರ್ಷಿಕ ಚಂದಾ)	ಪ್ರಾಥಮಿಕ ಶಾಲೆಗಳ ಲಾಯಬ್ರರಿಗೋಸ್ಕರ
೨	ವಿನೋದ ಮಂಜರಿ	ಆರ್. ಕೆ. ತಡಸ	ಆರ್. ಕೆ. ತಡಸ ಹುಬ್ಬಳ್ಳಿ	೦–೬–೦	ಪ್ರಾಥಮಿಕ ಶಾಲೆಗಳ ಇನಾಮಿನಗೋಸ್ಕರ
೩	ಕರ್ನಾಟಕ ಸಿಂಹಾಸನ ನಾಟಕ	ಎನ್. ಎಲ್. ಹೆಗಡೆ	ಮಿ. ಎನ್. ಎಲ್. ಹೆಗಡೆ. ಬಿ. ಎ! ಕನ್ನಡ ಟ್ರಾನ್ಸಲೇಟರ ಮುಂಬೈ ಸೆಕ್ರೆಟರಿಏಟ.	೦–೧೨–೦	ಪ್ರಾಥಮಿಕ ಶಾಲೆಗಳ ಇನಾಮು ಹಾಗು ಲಾಯಬ್ರರಿಗಳಗೋಸ್ಕರ ಸದರ
೪	ನೀತಿಗಳ ನೆಲೆಗಟ್ಟು ಭಾಗ ೧	ಎಚ್. ಚಿದಂಬರಯ್ಯಾ	...	೦–೧೨–೦	
೫	ಸದರ ಭಾಗ ೨	ಸದರ	...	೦–೧೨–೦	ಸದರ

H. A. SADARANGANI,
ಎಜ್ಯುಕೆಶನಲ್ ಇನಸ್ಪೆಕ್ಟರ, ದ. ಭಾ.

ಪ್ರಕಟನೆ ೩

ಮೆ।। ಡಾಯರೆಕ್ಟರ ಆಫ ಪ. ಇ. ರವರ ಪತ್ರ ನಂಬರ ಎಸ್. ಟಿ–(೩)–೭೬. ಪಿ. ಸಿ. ತಾ।। ೧೮ನೇ ಜೂನ ೧೯೫೭ನೇದ್ದರ ಪ್ರಕಾರ ಮಂಜೂರಾದ ಪುಸ್ತಕವು.

ಪುಸ್ತಕದ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರಾಗಿದೆ
ಸುಬೋಧಿನಿ	ಎಸ್. ಟಿ. ಹೆಗಡೆ	ಶ್ರೀರಾಮಕೃಷ್ಣ ಪ್ರಿಂಟಿಂಗ ವರ್ಕ್ಸ ಲಿಮಿ. ಕುಮಟಾ	೦–೩–೦	ಪ್ರಾಥಮಿಕ ಶಾಲೆಗಳ ಪಠ್ಯ ಪುಸ್ತಕ

Sd/ V. B. Jogalekar.

For D. P. I.

ವಾಚಕರಿಗೆ ವಿನಂತಿ

ಅನೇಕ ಅನಿವಾರ್ಯ ಕಾರಣಗಳ ಮೂಲಕ ಈ ಸಾರೆ ಶಾಲಾಪತ್ರಿಕೆಯು ಹೊರಡುವದಕ್ಕೆ ತಡವಾದದ್ದಕ್ಕಾಗಿ ವಾಚಕರ ಕ್ಷಮೆಯನ್ನು ಕೋರುವೆವು. ಜೂನ-ಜುಲೈ ತಿಂಗಳುಗಳ ಸಂಯುಕ್ತ ಸಂಚಿಕೆಯು ಬೇಗನೆ ಹೊರಡುವದು.

—ಸಂಪಾದಕ

ಪತ್ರಗಳ ಸಾರಾಂಶ

ಪಟ್ಟದಕಲ್ಲು (ಜಿ. ವಿಜಾಪೂರ) :— ಇಲ್ಲಿಯ ಮಾಸ್ತರರಾದ ಶಿವಪ್ಪಾ ಲ್ಲಪ್ಪಾ ಅಕ್ಕಿ ಎಂಬವರು ಕೆಳಗೆ ಬರೆದ ಲೆಕ್ಕವನ್ನು ಯಾರಾದರೂ ಬಿಡಿಸಬೇಕೆಂದು ಳಿಸುತ್ತಾರೆ.

' ಒಂಬತ್ತು ಮಂದಿ ವರ್ತಕರು ವ್ಯಾಪಾರಕ್ಕೆ ಹೋಗುವಾಗ ಅವರಿಗೆ ದಾರಿ ುಲ್ಲಿ ರೂಪಾಯಿ ತುಂಬಿದ ಒಂದು ಚೀಲು ಸಿಕ್ಕಿತು. ಆ ರೂಪಾಯಿಗಳನ್ನು ೂದಲನೆಯವನ ರೂಪಾಯಿಗಳಲ್ಲಿ ಕೂಡಿಸಿದರೆ ಉಳಿದವರ ಎರಡಷ್ಟು, ಎರಡನೆ ುವನ ರೂಪಾಯಿಗಳಲ್ಲಿ ಕೂಡಿಸಿದರೆ ಉಳಿದವರ ಮೂರಷ್ಟು, ಹೀಗೆ ಕ್ರಮವಾಗಿ ಂದೊಂದು ಪಟ್ಟಿನಿಂದ ಹೆಚ್ಚಾಗುತ್ತ ಒಂಬತ್ತನೆಯವನ ರೂಪಾಯಿಗಳಲ್ಲಿ ಕೂಡಿಸಿ ರೆ ಉಳಿದವರ ಹತ್ತುಪಟ್ಟಾಗುವವು. ಹಾಗಾದರೆ ಆ ಚೀಲದಲ್ಲಿದ್ದ ರೂಪಾಯಿಗ ಷ್ಟು ? ಹಾಗು ಪ್ರತಿ ಒಬ್ಬರ ಹಣವೆಷ್ಟು ?

ಹಾವಸಭಾವಿ (ಜಿ. ಧಾರವಾಡ) :— ಇಲ್ಲಿಯ ಡಿ ಲೋ. ಬೋ. ಮೆಂಬರ ಾದ ಆರ್. ಬಿ. ಬೆಟಗೇರಿ ಎಂಬವರು ಬರೆಯುವದೇನಂದರೆ — ಮಿ. ಆರ್. ಎಲ್. ಾಟೀಲ ಇವರು ಈ ಜಿಲ್ಹೆಯ ಸ್ಕೂ. ಬೋ. ನವರಿಂದ ಸುಪರವಾಯಝರರಾಗಿ ರಿಸಲ್ಪಟ್ಟಿದ್ದರಿಂದ ಅವರ ಅಭಿನಂದನಾರ್ಥ ಇಲ್ಲಿಯ ಎ. ವ್ಹಿ. ಸ್ಕೂಲ ಹೆ. ಮಾ. ಾಪ ಶ್ರೀ. ಪಂಚಯ್ಯನವರು ಬಿ. ಎ. (ಆನರ್ಸ) ಇವರ ಅಧ್ಯಕ್ಷತೆಯ ಕೆಳಗೆ ವೀ. ು. ಸಂಘದ ವತಿಯಿಂದ ಸಭೆಯು ನೆರೆದಿತ್ತು. ಸ್ವಸ್ಥಳದ ಹಾಗು ಪರಸ್ಥಳದ ಸಭ್ಯ ೃಹಸ್ಥರೂ ಶಿಕ್ಷಕರೂ ವಿದ್ಯಾರ್ಥಿಗಳೂ ಸಭೆಗೆ ದಯಮಾಡಿಸಿದ್ದರು. ಪ್ರಾರಂಭದಲ್ಲಿ ಂರೆಕೇರೂರ ಸಾಲೆಯ ಮಾಸ್ತರರಾದ ಮಿ. ದೀಕ್ಷಿತ ಇವರು ಹೇಳಿದ್ದೇನಂದರೆ — ' ಮಿ. ಪಾಟೀಲ ಇವರು ತಾವು ಕೆಲಸ ಮಾಡಿದ ಎಲ್ಲ ಸ್ಥಳಗಳಲ್ಲಿ ಹುಡುಗರ ಸಂಖ್ಯೆ ುನ್ನು ಬೆಳಿಸಿ ಅಸಿll ಸ್ಥಳಗಳನ್ನು ಹೆಚ್ಚಿಸಿರುವರು. ಕೆಲವೆಡೆಯಲ್ಲಿ ರೂರಲ್ ಶಾಲೆ ಗಳನ್ನು ಫುಲ್ ಪ್ರಾಯಮರಿಯಾಗುವಂತೆ ಮಾಡಿದರು; ಮತ್ತು ಹೊಸದಾಗಿ ಗರ್ಲ್ಸ ಸ್ಕೂಲ, ಉರ್ದುಸ್ಕೂಲಗಳನ್ನು ಸ್ಥಾಪನೆ ಮಾಡಿಸಿದರು. ಅಸ್ಪೃಶ್ಯ ವಿದ್ಯಾರ್ಥಿಗಳ ಎಗ್ಗೆ ವಿಶೇಷ ಪರಿಶ್ರಮ ತಕ್ಕೊಂಡರು. ಸಾಲೆಯಲ್ಲಿ ಡಿಬೆಟಿಂಗ, ಕೋ-ಆಪರೇಟಿವ್ಹ ಸೊಸಾಯಿಟಿಗಳನ್ನು ಸ್ಥಾಪಿಸಿ ವಿದ್ಯಾರ್ಥಿಗಳ ವ್ಯವಹಾರ ಜ್ಞಾನವು ಬೆಳಿಯುವಂತೆ ಪ್ರಯತ್ನಿಸಿದರು. ಆರೋಗ್ಯರಕ್ಷಣೆ, ಊರಸ್ವಚ್ಛತೆ ಇವುಗಳಬಗ್ಗೆ ಹಳ್ಳಿಯ ಜನರಿಗೆ ುಪದೇಶಮಾಡಿ ಶಾನೇಟರಿ ಬೋರ್ಡುಗಳನ್ನು ಸ್ಥಾಪಿಸಿದರು. " ಬಳಿಕ ಅಧ್ಯಕ್ಷರು— ಮಿ. ಪಾಟೀಲರ ಗುಣಾನುವಾದಮಾಡಿ, ಇಂಥ ಕರ್ತವ್ಯದಕ್ಷ ಶಿಕ್ಷಕರಿಗೆ ಈ ಸ್ಥಳವನ್ನು ಕೊಟ್ಟಿದ್ದಕ್ಕಾಗಿ ಸ್ಕೂ. ಬೋರ್ಡಿನ-ವಿಶೇಷವಾಗಿ ಶ್ರೀ. ಹೊಸಮನಿಯವರ ಪ್ರಶಂಸೆ

ಾಡಿದರು. ಆ ಮೇಲೆ ಪಾಟೀಲ ಇವರು ಸಭೆಯನ್ನುದ್ದೇಶಿಸಿ–ನೀವೆಲ್ಲರೂ ನನ್ನನ್ನು ರವಿಸಿದ್ದಕ್ಕಾಗಿ ನಾನು ತಮಗೆ ತುಂಬಾ ಉಪಕೃತನಾಗಿರುವೆನೆಂದೂ ಪ್ರತಿಯೊಂದು ಲಸವಲ್ಲಿ ನನಗೆ ಯಶಸ್ಸು ದೊರೆಯಲಿಕ್ಕೆ ಆಯಾ ಸ್ಥಳದ ಜನತೆಯು ಸಹಾಯವೇ ಾರಣವೆಂದೂ ಜನರ ಪ್ರೇಮವನ್ನು ಸಂಪಾದಿಸುವದು ಪ್ರತಿ ಒಬ್ಬ ಶಿಕ್ಷಕನ ಆದ್ಯ ರ್ತವ್ಯವೆಂದೂ ಹೇಳಿದರು.

ಕದಡಿ (ತಾ॥ ಗದಗ) :— ಈ ಊರ ಸಾಲೆಗೆ ಮಿ. ಖ. ಬಾ. ಪಾಟೀಲ ಂಬವರು ಹೆ. ಮಾ. ರಾಗಿ ಬಂದಂದಿನಿಂದ ಸಾಲೆಯು ಎಲ್ಲ ರೀತಿಯಿಂದ ಊರ್ಜಿತ ತಿಯನ್ನು ಹೊಂದಿದ್ದಲ್ಲದೆ ಊರಲ್ಲಿ ಸಹ ಅನೇಕ ಸುಧಾರಣೆಗಳಾಗಿರುವವು. ಮತ್ತು ೀ ಅಸಿ॥ ಯ. ಮು. ಬಡಿಗೇರ ಇವರಾದರೂ ಒಳ್ಳೇ ಉತ್ಸಾಹದಿಂದ ಕೆಲಸಮಾಡು ುದ್ದು ಸ್ವಲ್ಪ ದಿವಸಗಳಲ್ಲಿಯೇ ಜನಪ್ರಿಯರಾಗಿರುವರು. ಇಲ್ಲಿಯ ಸಹಕಾರಿ ಸಂಘ ವರು ಸಾಲೆಯ ಉಪಯೋಗಕ್ಕಾಗಿ ಜಾಗುಟಿಯನ್ನು ತರಿಸುವದಕ್ಕೆ ೮ ರೂಪಾಯಿ ಳನ್ನು ಕೊಟ್ಟದ್ದಲ್ಲದೆ ಎಲ್ಲ ವಿದ್ಯಾರ್ಥಿಗಳಿಗೆ ೨ ರೂ. ಗಳ ಮಿಠಾಯಿ ಹಂಚಿದರು ಂಬದಾಗಿ ಸಂಗನಗವಡಾ ಚಿಕ್ಕನಗವಡರ ಎಂಬವರು ತಿಳಿಸುತ್ತಾರೆ.

ಮುಗದ (ತಾ ॥ ಧಾರವಾಡ) :— ಹನುಮಂತಾಚಾರ್ಯ ಅಷ್ಟಪುತ್ರಿ ಂಬವರು ಬರೆಯುವದೇನಂದರೆ :— ನಮ್ಮೂರ ಸಾಲೆಯು ತೀರ ಮುರಕಳಿಗೆ ಂದಿತ್ತು. ಇಂಥ ಸಂಧಿಯಲ್ಲಿ ಮಿ. ಹಂಪೀಹೊಳಿ ಎಂಬ ಮಾಸ್ತರರು ವರ್ಗವಾಗಿ ಂದು ೬೦ ರ ವರೆಗೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಬೆಳಿಸಿರುವರು. ಕರ್ನಾಟಕ ಲೇಜದ ಲೆಕ್ಚರರಾದ ಮಿ. ಟಿ. ಯಮ್. ಪಾಟೀಲ ಇವರ ಅಧ್ಯಕ್ಷತೆಯ ಕೆಳಗೆ ಾಲೆಯಲ್ಲಿ ಇನಾಮಿನ ಸಮಾರಂಭವಾಗಿ ಅಧ್ಯಕ್ಷರು ಸಮಯೋಚಿತ ಭಾಷಣಮಾಡಿ ಲ್ಲ ವಿದ್ಯಾರ್ಥಿಗಳಿಗೆ ತಮ್ಮ ಖರ್ಚಿನಿಂದ ಮಿಠಾಯಿ ಹಂಚಿದರು.

ಕುಡಪಲಿ (ಜಿ. ಧಾರವಾಡ)—ಈ ಊರಲ್ಲಿ ರಾ. ಬ. ವೆಂಕಣ್ಣ ನಾಯಿಕ ಾಣೇಬೆನ್ನೂರ ಇವರ ಅಧ್ಯಕ್ಷತೆಯ ಕೆಳಗೆ ಹಿರೇಕೆರೂರ ಹಾಗು ರಾಣೇಬೆನ್ನೂರ ಾಲೂಕಗಳ ಶಿಕ್ಷಕರ ಸಮ್ಮೇಲನವು ಕೂಡಿತ್ತು. ಆ ಕಾಲಕ್ಕೆ ಈ ಭಾಗದ ಇನಸ್ಪೆ ಂಗ ಆಫೀಸರರಾದ ಮಿ. ಕಲಿವಾಳ ಇವರು ತಮ್ಮ ಭಾಷಣದಲ್ಲಿ—" ಈ ಊರ ಾಲೆಯಲ್ಲಿ ೧೦೦ ವಿದ್ಯಾರ್ಥಿಗಳಿದ್ದು ಒನೇ ಇಯತ್ತ್ರೆಯವರೆಗೆ ಕ್ಲಾಸುಗಳಿವೆ. ದರೆ ಇಬ್ಬರೇ ಮಾಸ್ತರರು ಇದ್ದು ಅತ್ಯಂತ ಶ್ರಮವನ್ನು ವಹಿಸಿ ಉತ್ತಮರೀತಿಯಿಂದ ಲಸ ಮಾಡಿರುವರು. ಮತ್ತು ಮುಷ್ಟೀಫಂಡು ಮುಂತಾದ ಸುಲಭ ಉಪಾಯಗಳಿಂದ ಣಕೂಡಿಸಿ ಸಾಲೆಗೆ ತಕ್ಕಷ್ಟು ಉಪಕರಣಗಳನ್ನು ಮಾಡಿಕೊಂಡಿರುವರು. ಆದ್ದರಿಂದ ದೊಂದು ಮಾದರಿಯ ಶಾಲೆಯಾಗಿದೆ." ಎಂದು ಹೇಳಿದರು. ಮತ್ತು ಏಕಕಾಲಕ್ಕೆ ಾಲ್ಕು ಇಯತ್ತ್ರೆಗಳನ್ನು ಹ್ಯಾಗೆ ಕಲಿಸಬೇಕೆಂಬದನ್ನು ಮಾದರಿಗಾಗಿ ಕಲಿಸಿ ತೋರಿಸಿ

ದರು. ಬಳಿಕ ಮೆ॥ ಮಾಮಲೇದಾರರೇ ಮೊದಲಾದ ಕೆಲವು ಸದ್ಗೃಹಸ್ಥರ ಸಮಯೋಚಿತ ಭಾಷಣಗಳಾದವು. ಆಮೇಲೆ ಅಧ್ಯಕ್ಷರು—ಮುಷ್ಟೀಫಂಡಿನ ಯೋಜನೆಯ ವಿಷಯವಾಗಿ ತಮ್ಮ ಒಳ್ಳೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮತ್ತು ನಾನಾದರೂ ಈ ಊರ ರೈತನಿದ್ದು ನನ್ನ ಹುಡುಗನ ಸಲುವಾಗಿ ೩೦೦ ಮುಷ್ಟಿ ಜೋಳವನ್ನು ಕೊಡುವದಕ್ಕೆ ನನ್ನ ರೈತನಿಗೆ ಹೇಳುವೆನು ಎಂಬದಾಗಿ ಹೇಳಿದರು. ಇಲ್ಲಿಯ ಹೆ. ಮಾ. ಮಿ. ಕುಲಕರ್ಣಿ ಇವರು ಒಳ್ಳೆ ಶ್ರಮಬಟ್ಟು ಕೆಲಸಮಾಡಿದ್ದನ್ನು ಕಂಡು ಅವರ ಅಭಿನಂದನಮಾಡಿ ತಮ್ಮ ಭಾಷಣವನ್ನು ಮುಗಿಸಿದರು. ಬಳಿಕ ಶಿಷ್ಟಾಚಾರದಂತೆ ತಾಂಬೂಲಸಮರ್ಪಣವಾಗಿ ಸಭಾವಿಸರ್ಜನೆಯಾಯಿತು. ಎಂಬದಾಗಿ ಒಬ್ಬ ಪ್ರೇಕ್ಷಕರು ತಿಳಿಸುತ್ತಾರೆ.

ಮುದ್ದೇಬಿಹಾಳ:— ಇಲ್ಲಿಯ ವಿದ್ಯಾರ್ಥಿ ಗ್ರಂಥಾಲಯದ ಹನ್ನೊಂದನೇ ವರ್ಧಂತ್ಯುತ್ಸವವಾಗಿ ಆ ಕಾಲಕ್ಕೆ ಅದರ ಕಾರ್ಯದರ್ಶಿಗಳು ಓದಿದ ವಾರ್ಷಿಕ ವರದಿಯ ಸಾರಾಂಶವೇನಂದರೆ— ಈ ಗ್ರಂಥಾಲಯದಲ್ಲಿ ಎಲ್ಲ ಪ್ರಕಾರದ ಪುಸ್ತಕಗಳು ಕೂಡಿ ೨೩೪ ಇರುವವು. ಐತಿಹಾಸಿಕ ಪುಸ್ತಕಗಳನ್ನು ಮುಂದಿನಸಾರೆ ಹೆಚ್ಚಿಸುವ ವಿಚಾರವದೆ. ಕರ್ನಾಟಕ ಸಾಹಿತ್ಯಪರಿಷದ ಪತ್ರಿಕೆಯ ಚಾಲಕರೂ ಮುಂದಾಳು ಪತ್ರದ ಸಂಪಾದಕರೂ ತಮ್ಮ ತಮ್ಮ ಪತ್ರಿಕೆಗಳನ್ನು ಅನುಗ್ರಹಿಸುತ್ತಿರುವರು. ಇಲ್ಲಿಯ ಗ್ರಾಮ ಪಂಚಾಯತಿ ಕಮೀಟಿಯವರು ಈ ಗ್ರಂಥಾಲಯಕ್ಕೆ ವಿಶೇಷವಾಗಿ ಹಣದ ಸಹಾಯ ಮಾಡಿರುವರು. ಗ್ರಂಥಾಲಯವನ್ನು ನೋಡಿದ ಎಷ್ಟೋ ಮಹನೀಯರಾದರೂ ಉತ್ತೇಜನಾರ್ಥ ದ್ರವ್ಯಸಾಹಾಯ ಮಾಡಿರುವರು. ವೆಚ್ಚ ಕಳೆದು ಈ ವರ್ಷದ ಕೊನೆಗೆ ೩೬ರೂ. ೮೩. ೬ಪೈ. ಶಿಲಕು ಉಳಿದಿರುವದು.

ಶಿಕ್ಷಣವಿಷಯಕ

ಮಾನಸ ಶಾಸ್ತ್ರವು

೧ನೆಯ ಅಧ್ಯಾಯ

ಮನಸ್ಸಿನ ಶಾಸ್ತ್ರವು ಮಾನಸಶಾಸ್ತ್ರವು '

ಈ ವ್ಯಾಖ್ಯೆಯಲ್ಲಿ ಉಪಯೋಗಿಸಿದ ಶಾಸ್ತ್ರ ಹಾಗು ಮನಸ್ಸು ಎಂಬ ಎರಡು ಶಬ್ದ ಳ ನಿಜವಾದ ಕಲ್ಪನೆಯು ನಮಗೆ ಉಂಟಾದ ಹೊರತು ಯಾವ ಬಗೆಯ ಯಥಾರ್ಥ ಜ್ಞಾನವಾಗಲಾರದು. ಆದ್ದರಿಂದ ಶಾಸ್ತ್ರವೆಂದರೇನು ? ಎಂಬದನ್ನು ಕುರಿತು ತುಸು ಚಾರಿಸುವ—

ನಾವು ಪ್ರತ್ಯಕ್ಷ ನಿರೀಕ್ಷಣದಿಂದ ಇಲ್ಲವೆ ಸಾಧ್ಯವಿದ್ದನುಟ್ಟಿಗೆ ಪ್ರಯೋಗಗಳನ್ನು ಾಡಿ ಕೆಲವು ಪದಾರ್ಥಗಳ ಗುಣ–ಧರ್ಮಗಳನ್ನು ಕಂಡು ಹಿಡಿಯುತ್ತೇವೆ. ಮಾನವ ರೀರದ ಕೆಲವು ವ್ಯಾಪಾರಗಳನ್ನು ನಿರೀಕ್ಷಿಸಿ, ಶರೀರದಲ್ಲಿ ರಕ್ತಾಶಯವು ಎಡೆಬಿಡದೆ ರುತ್ತದೆಂತಲೂ ಫುಪ್ಪಸಗಳಲ್ಲಿ ಶ್ವಾಸೋಚ್ಛ್ವಾಸದಿಂದ ಹವೆಯು ತುಂಬುತ್ತ ಹೊರ ಳುವದೆಂದೂ ತಿಳಿದುಕೊಳ್ಳುತ್ತೇವೆ. ಇದರಂತೆ ನಿರೀಕ್ಷಣದಿಂದ ವನಸ್ಪತಿಗಳಲ್ಲಿ ವು ಗಿಡಗಳು, ಕೆಲವು ಬಳ್ಳಿಗಳು, ಬೇರೆ ಕೆಲವು ಸೊಪ್ಪುಗಳು ಇರುತ್ತವೆಂದೂ ವುಗಳಲ್ಲಿ ಕೆಲವು ಒಂದು ವರ್ಷ, ಕೆಲವು ಎರಡುವರ್ಷ, ಬೇರಿಕೆಲವು ಅನೇಕ ವರ್ಷ ವರೆಗೆ ಬಾಳುತ್ತವೆಂದೂ ತಿಳಿದುಕೊಳ್ಳುತ್ತೇವೆ. ಕೆಲವು ಪದಾರ್ಥಗಳು ಶಕೆಯಿಂದ ಸ್ಫಾರ, ಪ್ರಥಃಕರಣ, ವಿಕೀಕರಣ ಹೊಂದುವದನ್ನು ಪ್ರಯೋಗಗಳಿಂದ ಕಂಡು ಡಿಯುತ್ತೇವೆ. ಈ ಬಗೆಯಿಂದ ಮಾಡಿಕೊಂಡ ಜ್ಞಾನವು ಸಾಮಾನ್ಯಜ್ಞಾನವು. ಅನೇಕ ಸ್ತುಗಳನ್ನು ನಿರೀಕ್ಷಿಸುವದರಿಂದ ಇಲ್ಲವೆ ಅನೇಕ ವಸ್ತುಗಳ ಮೇಲೆ ಪ್ರಯೋಗಗ ನ್ನು ಮಾಡುವದರಿಂದ ನಮ್ಮ ಸಾಮಾನ್ಯಜ್ಞಾನದ ಸಂಚಯವು ಹೆಚ್ಚಾಗುತ್ತ ೋಗುವದೇನೋ ನಿಜ. ಆದರೆ ಅದು ವಿಸ್ಖಲಿತವಾಗಿ ಉಳಿಯುವದು. ಆದರೆ ಆ ತರದ ಜ್ಞಾನಸಂಚಯದಿಂದ ಪದಾರ್ಥಗಳ ಗುಣ–ಧರ್ಮಗಳಲ್ಲಿ ಕಂಡು ಬರುವ ಕೆಲವು ಯಮಗಳನ್ನು ಗೊತ್ತುಪಡಿಸಿ ಅವುಗಳ ಸಹಾಯದಿಂದ ಕೆಲವು ಅಬಾಧಿತವಾದ ದ್ಧಾಂತಗಳನ್ನು ಸ್ಥಾಪಿಸಿಕೊಂಡು ಒಂದೊಂದು ಬಗೆಯ ಸಾಮಾನ್ಯಜ್ಞಾನವು ಸುವ್ಯ ವಸ್ಥಿತವಾಗುವಂತೆ ವರ್ಗೀಕರಣ ಮಾಡಿಕೊಳ್ಳಲು ಆ ಜ್ಞಾನಸಂಚಯಕ್ಕೆ ಶಾಸ್ತ್ರೀಯ ರೂಪವು ಬರುವದು. ಅಂದರೆ ಸುವ್ಯವಸ್ಥಿತವಾದ ಜ್ಞಾನಸಂಚಯಕ್ಕೆ ಶಾಸ್ತ್ರವೆಂಬ

ಹೆಸರು. ಶಾರೀರಶಾಸ್ತ್ರ, ರಸಾಯನಶಾಸ್ತ್ರ, ವನಸ್ಪತಿಶಾಸ್ತ್ರ, ಮೊದಲಾದವುಗಳಲ್ಲಿ ಶಾಸ್ತ್ರ ವೆಂಬ ಶಬ್ದವನ್ನು ಮೇಲೆ ಹೇಳಿದ ಅರ್ಥದಲ್ಲಿಯೇ ಉಪಯೋಗಿಸಿರುವರು.

ಮನಸ್ಸು ಎಂದರೇನೆಂಬ ಪ್ರಶ್ನೆಗೆ ಉತ್ತರ ಕೊಡುವದು ಸುಲಭಸಾಧ್ಯವಲ್ಲ. ಶಾಸ್ತ್ರಜ್ಞರು ಜಗತ್ತಿನಲ್ಲಿರುವ ವಸ್ತುಗಳಲ್ಲಿ ಮೂರ್ತ ವಸ್ತುಗಳು ಹಾಗು ಅಮೂರ್ತ ವಸ್ತುಗಳು ಎಂಬ ಎರಡು ವರ್ಗಗಳನ್ನು ಮಾಡಿರುವರು. ಕೆಲವು ಮೂರ್ತವಸ್ತು ಗಳಿಗೆ ಪದಾರ್ಥ ಇಲ್ಲವೆ ದ್ರವ್ಯ ಎಂಬ ಸಂಜ್ಞೆಯನ್ನು ಕೊಟ್ಟಿರುವರು. ಪದಾರ್ಥ ಗಳಿಗೆ ಉದ್ದ, ಅಗಲ, ಪಿಂಡಗಳು ಇವ್ವು ಅವು ಕೆಲವೊಂದು ಸ್ಥಳವನ್ನು ವ್ಯಾಪಿಸಿ ಕೊಂಡು ಅಲ್ಲಿ ತಾವಿರುವವರೆಗೆ ಬೇರೆ ಪದಾರ್ಥಗಳನ್ನು ಬರಗೊಡುವದಿಲ್ಲ. ಕಲ್ಲು ಕಟ್ಟಿಗೆ, ತಾಮ್ರ, ನೀರು, ಹವೆ, ಮುಂತಾದವು ಪದಾರ್ಥಗಳು. ಇವುಗಳ ಜ್ಞಾನವು ನಮಗಿರುವ ಪಂಚೇಂದ್ರಿಯಗಳ ಮುಖಾಂತರ ಆಗುವದುಂಟು. ಉಷ್ಣತೆ, ಪ್ರಕಾಶ ಮೊದಲಾದ ಸೃಷ್ಟಿಶಕ್ತಿಗಳೂ ಸುಖ-ದುಃಖಾದಿ ವಿಕಾರಗಳೂ ಅಮೂರ್ತ ವಸ್ತುಗ ಳಾಗಿರುವವು. ಇವುಗಳಲ್ಲಿ ಉಷ್ಣತೆ, ಪ್ರಕಾಶ ಮೊದಲಾದವುಗಳು ನಮ್ಮ ಪಂಚೇಂ ದ್ರಿಯಗಳಲ್ಲಿ ಒಂದು ಇಲ್ಲವೆ ಹಲವು ಇಂದ್ರಿಯಗಳಿಗೆ ಗೋಚರವಾಗಿ ಒಂದೊಂದು ಬಗೆಯ ಜ್ಞಾನ ಮಾಡಿ ಕೊಡುವವು. ಈ ರೀತಿಯಿಂದ ಜ್ಞಾನವಾಗದಿದ್ದ ವಸ್ತುಗಳು ಅತೀಂದ್ರಿಯ ವಸ್ತುಗಳು. ಅತೀಂದ್ರಿಯ ವಸ್ತುಗಳ ಜ್ಞಾನವುಂಟಾಗಿಕೊಡುವ ಆರನೆಯ ದೊಂದು ಇಂದ್ರಿಯವು ನಮಗಿರುತ್ತದೆಂದು ಹಿಂದು ತತ್ವಜ್ಞಾನಿಗಳು ಭಾವಿಸಿರುವರು. ಇವರ ಮತದಂತೆ ಸಜೀವವಾದ ಮಾನವ ಶರೀರದಲ್ಲಿ 'ಜೀವಾತ್ಮ' ಎಂಬದು ವ್ಯಾಪಿಸಿ ರುವದೆಂದೂ ಆ ಆತ್ಮವು ಅವಿನಾಶಿಯಾಗಿದ್ದು ಸುಖದುಃಖರಹಿತವಾಗಿ ಬುದ್ಧಿ, ವಿಕಾರ, ಇಚ್ಛೆ ಮೊದಲಾದವುಗಳ ಅಧಿಷ್ಠಾನವಾಗಿರುವದು. ಆತ್ಮದ ಸಂಯೋಗವು ವಸ್ತುವಿನ ಸಂಗಡ ಆಗಲು ನಮಗೆ ಸುಖದುಃಖಾದಿಗಳು ಆಗುವವು. ‡ ಶರೀರವು ಸುಖ ದುಃಖಾದಿಗಳ ಸ್ಥಾನವು. ಈ ತತ್ವವನ್ನು ನಂಬುವವರು ಮನುಷ್ಯಪ್ರಾಣಿಗಳ ಪೂರ್ವಜನ್ಮದ ಸಂಸ್ಕಾರಗಳೂ ಪುನರ್ಜನ್ಮವೂ ಅವಶ್ಯವಾಗಿ ಇರುತ್ತವೆಂದು ನಂಬ ಬೇಕಾಗುವದು.

ಭಿನ್ನ ಭಿನ್ನ ಜನಾಂಗಗಳ ಕಲ್ಪನೆಯು ಆತ್ಮದ ಸಂಬಂಧದಿಂದ ಭಿನ್ನಭಿನ್ನವಾಗಿರುವದು. ಕೆಲವೊಂದು ಧರ್ಮತತ್ವಗಳನ್ನು ಅನುಸರಿಸುವವರು ಆತ್ಮವು ಅವಿನಾಶಿಯೆಂದು ನಂಬಿದರೂ ಪುನರ್ಜನ್ಮವನ್ನು ನಂಬುವದಿಲ್ಲ. ಪೂರ್ವಕಾಲದ ಗ್ರೀಕ ಮನುಷ್ಯನು ಮರಣಹೊಂದಿದಕೂಡಲೆ ಆತ್ಮವು ಮೃತಶರೀರವನ್ನು ಬಿಟ್ಟು ಅಗಲಿ ಹೋದರೂ ಕಾಲಕಾಲಕ್ಕೆ ಪುನಃ ಬಂದು ಅವರಲ್ಲಿ ಪ್ರವೇಶಿಸುವದೆಂದೂ ಹಾಗೆ ಮಾ

‡ यद्भोगायतनं तदेव शरीरम्, आत्मा सुखदुःखादि रहितः, य एनं वेत्ति हंतारम् यश्चैनं मन्यतेहतं तभौतौ न विजानीतौ नायं हंति न हन्यते

ಮನಸ್ಸಿನಶಾಸ್ತ್ರವು ಮಾನಸಶಾಸ್ತ್ರವು.

ಬಾಗ ಮನುಷ್ಯನು ಸಜೀವನಾಗಿದ್ದಾಗ ಮಾಡಿದ ಪಾಪಪುಣ್ಯಗಳ ಫಲಗಳನ್ನು ೇ
ಅನುಭವಿಸುತ್ತದೆಂದೂ ನಂಬಿದ್ದರು. ಬೇಕಿ ಕೆಲವರು ಆತ್ಮವು ನಿರಾಕಾರವ
ವಸ್ತುವೆಂದು ಗ್ರಹಿಸಿದರೂ ಅದಕ್ಕೆ ಶರೀರದ ಮುಖಾಂತರ ಉಂಟಾದ ಸಂಸ್ಕಾರ
ಶರೀರದಿಂದ ಹೊರಬಿದ್ದಕೂಡಲೆ ಉಳಿಯಲಾರವೆಂದು ನಂಬಿರುವರು. ಈ ತರದ ಅನ
ಕಲ್ಪನೆಗಳ ಮೂಲಕ ಆತ್ಮಾ, ಅಹಂಕಾರ, ಮನಸ್ಸು, ಮಹಾಭೂತ ಮುಂತಾ
ಗಳಿಗೆ ನಿಶ್ಚಿತವಾದ ಅರ್ಥವು ಬಂದಿರುವದಿಲ್ಲ.

ಪಾಶ್ಚಾತ್ಯ ಶಾಸ್ತ್ರಜ್ಞರು ಎಲ್ಲಬಗೆಯ ಜ್ಞಾನದ ಅಧಿಷ್ಠಾನವಾದ ಮಿದು
ಳವಯವ ವಿಶೇಷವೆಂದು ಭಾವಿಸುವರು. ಈ ಮಿದುಳಿನಲ್ಲಿ ಕೆಲವು ಭಾಗಗಳಿ
ಒಂದೊಂದು ಭಾಗದ ಕಾರ್ಯವು ಒಂದೊಂದು ವಿಧವಾಗಿರುವದು. ಮಿದುಳಿನ ಕೆ
ವ್ಯಾಪಾರಗಳ ಮೂಲಕ ನಮಗೆ ಕೆಲವೊಂದು ಬಗೆಯ ಜ್ಞಾನವಾಗುವದು. ಸ
ುಃಖಾದಿಮನೋವ್ಯಾಪಾರಗಳು ನಮ್ಮಲ್ಲಿ ಉದ್ಭವಿಸುವವು. ಹಾಗು ಕೆಲವೊಂ
ಪ್ರೇರಣೆಯಿಂದ ಯಾವದೊಂದು ಬಗೆಯ ಕೆಲಸಮಾಡುವ ಇಚ್ಛೆಯು ನಮ್ಮಲ್ಲಿ ಹುಟ
ದು. ಇದರಿಂದ ನಮ್ಮ ಮಿದುಳಿನಲ್ಲಿ ಒಂದು ತರಪ ಅದ್ಭುತ ಶಕ್ತಿಯಿದ್ದು ಆ ಶಕ್ತಿ
ುಖಾಂತರ ಮಿದುಳಿನ ಒಂದೊಂದು ಭಾಗದಲ್ಲಿ ಒಂದೊಂದು ಬಗೆ
ಕಾರ್ಯಗಳು ಜರಗುತ್ತಿರುವವು. ಈ ಎಲ್ಲ ಬಗೆಯ ಕಾರ್ಯಗಳ ಕ್ಷೇತ್ರಕ್ಕೆ ಇಲ್ಲ
ಕಾರ್ಯಗಳ ಸಮುದಾಯಕ್ಕೆ (ಮನಸ್ಸು) ಎಂಬ ಸಂಜ್ಞೆಯನ್ನು ಪಾಶ್ಚಾತ್ಯ
ಜ್ಞರು ಕೊಟ್ಟಿರುವರು. ಅಂದರೆ ಬುದ್ಧಿ, ವಿಕಾರ, ಇಚ್ಛೆಗಳೆಂಬ ವ್ಯಾಪಾರಗ
ುದಾಯಕ್ಕೆ (ಮನೋವ್ಯಾಪಾರಗಳಿಗೆ) ಮನಸ್ಸು ಎಂಬ ಸಂಜ್ಞೆಯು.

೨ನೆಯ ಅಧ್ಯಾಯ

ಮಿದುಳೂ ಜ್ಞಾನತಂತುಗಳೂ

ಎಲ್ಲಬಗೆಯ ಮನೋವ್ಯಾಪಾರಗಳ ಹಾಗು ಶರೀರದ ಸ್ವಾಸ್ಥಕ್ಕೆ ಅವಶ್ಯವಾ
ಶಾರೀರಿಕ ವ್ಯಾಪಾರಗಳ ಅಧಿಷ್ಠಾನವು ಮಿದುಳಾಗಿರುವದೆಂಬದು ಮಾನವ ಶರೀ
ಶಾಸ್ತ್ರದ ಸಿದ್ಧಾಂತವಿರುವದರಿಂದ ಆ ಅವಯವದ ವಿಷಯವಾಗಿ ವಿಚಾರಿಸುವ—

ಈ ಮಹತ್ವವುಳ್ಳ ಅವಯವವು ಅನೇಕ ಎಲುವಿನ ಚಿಪ್ಪುಗಳ ಸಂವಿಧಾನದಿಂ
ಉಂಟಾದ ತಲೆಬುರಡೆ ಎಂಬ ಭದ್ರವಾದ ಪೆಟ್ಟಿಗೆಯಲ್ಲಿ ಇರಿಸಲ್ಪಟ್ಟಿರುವದರಿಂದ ಇ
ಮನುಷ್ಯ ಪ್ರಾಣಿಗೆ ಅತ್ಯವಶ್ಯವಾದದ್ದೂ ಅತಿ ಮಹತ್ವವುಳ್ಳದ್ದೂ ಕೋಮಲವಾದದ
ಎಂಬದು ವ್ಯಕ್ತವಾಗುವದು.

ಇತರ ಪ್ರಾಣಿಗಳ ಮಿದುಳಿಗಿಂತ ಮನುಷ್ಯಪ್ರಾಣಿಯ ಮಿದುಳು (ವಿಶೇಷವಾ
ಸುಧಾರಣೆಹೊಂದಿದ ಮನುಷ್ಯನ ಮಿದುಳು) ಆಕಾರಮಾನದಿಂದಲೂ ಭಾರದಿಂದಲ
ಹೆಚ್ಚಾಗಿರುವದರಿಂದ ಮನುಷ್ಯಪ್ರಾಣಿಗೆ ಒಂದು ಬಗೆಯ ಶ್ರೇಷ್ಠತ್ವವುಂಟಾಗಲಿ
ಕಾರಣವಾಗಿರುವದು. ಸುಧಾರಣೆಯ ಕ್ರಮದಲ್ಲಿ ಇನ್ನೂ ಮೊದಲನೆಯ ಮೆಟ್ಟಿ
ಲ್ಲಿದ್ದ ನಿಗ್ರೋ, ಎಸ್ಕಿಮೋ, ಭಿಲ್ಲ ಮೊದಲಾದ ಕಾಡು ಜನರ ಮಿದುಳು ಮಂಗನ ಮಿ
ಳಿಗಿಂತ ಎಷ್ಟೋಪಾಲು ದೊಡ್ಡದಿರುವದು. ಆದರೆ ಸುಸಂಸ್ಕೃತರಾದ ಆರ್ಯಜನ
ಮಿದುಳು ಆ ಕಾಡುಜನರ ಮಿದುಳಿಗಿಂತ ದೊಡ್ಡದಿರುವದೆಂಬ ಸಂಗತಿಯು ಪ್ರಯೋ
ಸಿದ್ಧವಾಗಿರುವದು. ಉತ್ಕ್ರಾಂತಿತತ್ವದಂತೆ ಮನುಷ್ಯಪ್ರಾಣಿಯು ಹೆಚ್ಚು ಸುಧಾರ
ಹೊಂದಿದಂತೆ ಆತನ ಮಿದುಳಿನ ರಚನೆಯು ಹೆಚ್ಚು ಹೆಚ್ಚು ಗಡಚಾದದ್ದೂ ಹೆಚ್ಚ
ಹೆಚ್ಚು ಭಾರವುಳ್ಳದ್ದೂ ಆಗಲೇಬೇಕು. ಆನುವಂಶಿಕತೆಯು ತತ್ವದಂತೆ ಮಿದುಳ
ಸುಧಾರಣೆಯು ತಂದೆಯಿಂದ ಮಗನಿಗೆ ಬರುವದೆಂದು ಅನೇಕ ಶಾಸ್ತ್ರಜ್ಞರ ಮತವುಂ

ಮಿದುಳಿನ ಭಾಗಗಳನ್ನು ಸ್ಥೂಲವಾನದಿಂದ ನಿರೀಕ್ಷಿಸಿದರೆ ಇದರಲ್ಲಿ ತಲೆ
ರುಡೆಯನ್ನು ಬಹುಮಟ್ಟಿಗೆ ವ್ಯಾಪಿಸಿಕೊಂಡ ದೊಡ್ಡ ಭಾಗವು ದೊಡ್ಡ ಮಿದುಳು ಅಥ
ಉತ್ತಮ ಮಸ್ತಿಷ್ಕವು ಇಭಾಗವಾಗಿದ್ದು ತುಸು ಬೂದಿಬಣ್ಣವುಳ್ಳ ಕುಟ್ಟಿದ ಕಣ
ದಂಥ ಪದಾರ್ಥಗಳಿಂದುಂಟಾದ ಕೋಶಗಳ ರಚನೆಯಾಗಿದೆ. ಈ ರಚನೆಯ
ಅನೇಕ ಮಡಿಕೆಗಳು ಕಂಡುಬರುವವು. ಇದರಿಂದ ಜ್ಞಾನತಂತುಗಳು ಹನ್ನೊಂದು ಜೊ
ಯಾಗಿ ಹೊರಟು ಬಾಹ್ಯ ಸೃಷ್ಟಿಯ ಜ್ಞಾನವನ್ನು ಮಾಡಿಕೊಡುವ ಪಂಚೇಂದ್ರಿ
ಗಳಲ್ಲಿ ಶಾಖೋಪಶಾಖೆಗಳಾಗಿ ಪರಿಣಮಿಸಿ ಹಬ್ಬಿಕೊಂಡಿರುವವು. ಮಾನಸಶಾ
ದೃಷ್ಟಿಯಿಂದ ಈ ಭಾಗವೇ ಅತಿ ಮಹತ್ವವುಳ್ಳದ್ದು. ಮನುಷ್ಯನಿಗೆ ಉಂಟಾಗ
ಜ್ಞಾನ, ಸುಖದುಃಖಾದಿಗಳು, ಕ್ರಿಯಾ ಪ್ರವೃತ್ತಿ ಮೊದಲಾದವುಗಳಿಗೆ ದೊಡ್ಡ ಮಿದು
ಕಾರಣೀಭೂತವಾಗಿರುವದು. ಇದಲ್ಲದೆ ಶರೀರದ ವ್ಯಾಪಾರಗಳಿಗೆ ಇದರ ಅವಶ್ಯ

ಬಿಲ್ಲ. ಈ ಮಿದುಳಿಗೆ ಧಕ್ಕೆ ಹತ್ತಿದರೆ ಇಲ್ಲವೆ ಇದನ್ನು ಸಮಗ್ರವಾಗಿ ತೆಗೆದುಬಿಟ್ಟರೆ ಮನುಷ್ಯನು (ಮನೋವ್ಯಾಪಾರಗಳು ಕಟ್ಟಾಗಿ) ಹುಚ್ಚನಾಗುವನು. ಅದರೂ ಬದುಕಿರುವನು.

ಈ ಮಿದುಳಿನ ಹಿಂಭಾಗಕ್ಕೆ ಸಣ್ಣ ಮಿದುಳು ಅಥವಾ ಕನಿಷ್ಠ ಮಸ್ತಿಷ್ಕವೆಂಬ ಭಾಗವು ಇರುವದು. ಇದನ್ನು ಸೀಳಿನೋಡಿದರೆ ಮಧ್ಯಭಾಗದಲ್ಲಿ ಬಿಳೀ ಬಣ್ಣದ ಪದಾರ್ಥದಿಂದುಂಟಾದ ಗಿಡದ ಟೊಂಗೆಯಂಥ ರಚನೆಯಿರುವದು. ಇದರ ಕರ್ತವ್ಯವು ಇಂಥದೇ ಎಂಬದು ಇನ್ನೂ ನಿಶ್ಚಿತವಾಗಿಲ್ಲ. ಇದು ದೊಡ್ಡ ಮಿದುಳಿನ ಸೇವಕನೆಂದು ಹೇಳುವಮಂಟು. ಅನೇಕಸಾರೆ ಮಾಡಿ ಮಾಡಿ ಯಾಂತ್ರಿಕವ್ಯಾಪಾರಗಳಾಗಿರುವ ನುಡಿಯೋಣ, ನಡೆಯೋಣ, ಸೀಟಾಗಿನಿಲ್ಲೋಣ ಮೊದಲಾದ ವ್ಯಾಪಾರಗಳನ್ನು ದೊಡ್ಡ ಮಿದುಳು ಈ ಮಿದುಳಿಗೆ ಒಪ್ಪಿಸಿ ಬಿಟ್ಟಿರುವದು. ಈ ಮಿದುಳಿಗೆ ಧಕ್ಕೆ ತಗಲಿದರೆ ಮನುಷ್ಯನು ಕ್ರಿಯಾಶೂನ್ಯನಾಗುವನು. ನೀಟಾಗಿ ನಿಲ್ಲಲಾರನು. ದಿಕ್ಕುಗಳ ಜ್ಞಾನವು ಆತನಿಗೆ ಇಲ್ಲದಂತಾಗುವದು. ಗಿಮಿಗಿಮಿ ತಿರುಗಹತ್ತುವನು. ವಿಚಾರಶಕ್ತಿಯು ಕುಂದುವದು. ಆವರೂ ಬದುಕಿರುವನು.

ಈ ಎರಡೂ ಭಾಗದ ಕೆಳಬದಿಗೆ ಇರುವ ಒಂದು ಸೇತುವೆಯ ಮಧ್ಯ ಭಾಗದಲ್ಲಿ ಮಣಿಸಿರ ' ಎಂಬದೊಂದು ಹಲಸಿನ ಬೀಜದಾಕಾರದ ಭಾಗವಿರುವದು. ಇದರಿಂದ ಹೊರಟ ತಂತುಗಳು ಶರೀರದ ಅನೇಕ ಮಹತ್ವವುಳ್ಳ ಅವಯವಗಳಲ್ಲಿ ಸೇರಿ ಶರೀರದ ಸ್ವಾಸ್ಥಕ್ಕೆ ಅತ್ಯವಶ್ಯವಾದ ಶ್ವಾಸೋಚ್ಛ್ವಾಸ, ರಕ್ತಾಭಿಸರಣ, ಪಚನಕ್ರಿಯೆ ಮೊದಲಾದ ಅನೈಚ್ಛಿಕ ವ್ಯಾಪಾರಗಳನ್ನು ಎಡೆಬಿಡದೆ ನಡೆಸುವಂತೆ ಆಯಾ ಅವಯವಗಳಿಗೆ ಪ್ರೇರಣೆಯನ್ನುಂಟುಮಾಡುತ್ತಿರುವದು. ಈ ವ್ಯಾಪಾರಗಳಿಗೆ ದೊಡ್ಡ ಮಿದುಳಿನ ಸಂಬಂಧವು ಎಷ್ಟುಮಾತ್ರವೂ ಇರುವದಿಲ್ಲ. ಈ ಭಾಗಕ್ಕೆ ಧಕ್ಕೆ ತಗಲಿದ ಕೂಡಲೆ ಮನುಷ್ಯನು ಸಾಯುವನು.

ಮಿದುಳಿನ ಭಾರವು:—ಸಾಮಾನ್ಯವಾಗಿ ಬೆಳವಣಿಗೆ ತೀರಿದ ಮನುಷ್ಯನ ಮಿದುಳಿನ ಭಾರವು ೪೫ ಅಂಸ ಇರುವದು. ಹೆಂಗಸರ ಮಿದುಳಿನ ಭಾರವು ಗಂಡಸರ ಮಿದುಳಿನ ಭಾರಕ್ಕಿಂತ ಕಡಿಮೆ ಇರುವದು. ವಿಲಕ್ಷಣ ಬುದ್ಧಿಮತ್ತೆಯುಳ್ಳ ಕೆಲವರ ಮಿದುಳಿನ ಭಾರವು ೬೦ ಅಂಸ ಸಹ ಇರುವದು. ಆದರೆ ಬುದ್ಧಿಮತ್ತೆಯು ಕೇವಲ ಮಿದುಳಿನ ಭಾರವನ್ನೇ ಅವಲಂಬಿಸಿರದೆ ದೊಡ್ಡ ಮಿದುಳಿನಲ್ಲಿ ಉಂಟಾಗಿರುವ ಮಡಿಕೆಗಳನ್ನು ಬಹುಮಟ್ಟಿಗೆ ಅವಲಂಬಿಸಿರುವದು. ಹುಚ್ಚನ ಮಿದುಳು ಆಕಾರಮಾನದಿಂದ ಕಡಿಮೆಯಾಗದಿದ್ದರೂ ಅವರ ಭಾರವು ೧೫ ರಿಂದ ೨೦ ಅಂಸದ ವರೆಗೆ ಮಾತ್ರ ಇರುವದು.

ದೊಡ್ಡ ಮಿದುಳಿನ ವ್ಯಾಪಾರಗಳು:— ವಸ್ತುಜನ್ಯ ಸಂಸ್ಕಾರ, ಸ್ಮರಣ, ಭಾವನೆ, ಅನುಮಾನ, ವಿಚಾರ, ನಿರ್ಣಯ ಮೊದಲಾದ ಮನೋವ್ಯಾಪಾರಗಳ ಕ್ಷೇತ್ರವು ದೊಡ್ಡ ಮಿದುಳಿನ ಮುಂಭಾಗದಲ್ಲಿ ಅಂಡರೆ ಹಣೆಯ ಕಡೆಗಿರುವ ಭಾಗದಲ್ಲಿ

ರುವದೆಂದು ಪ್ರಯೋಗಗಳಿಂದ ಸಿದ್ಧವಾಗಿರುವದು. ಈ ಭಾಗದ ಹಿಂದುಗಡೆ ುಖ, ದುಃಖ, ಕ್ರೋಧ, ಲೋಭ, ಈರ್ಷೆ ಮೊದಲಾದ ಮನೋವ್ಯಾಪಾರಗಳ ಕ್ಷೇತ್ರ ರುವದು. ಅದರ ಹಿಂದುಗಡೆಗೆ ಕ್ರಿಯಾಪ್ರವೃತ್ತಕ ಇಚ್ಛೆಯ ಕ್ಷೇತ್ರವಿರುವದು. ುಳಿದ ಭಾಗಗಳಲ್ಲಿ ನಡೆಯತಕ್ಕ ವ್ಯಾಪಾರಗಳು ಮನೋವ್ಯಾಪಾರಗಳಲ್ಲ. ಕೆಲ ಾಂದು ಉತ್ತೇಜಕದಿಂದಾಗುವ ಪ್ರತಿಕ್ರಿಯೆಗಳು (ಎಸೆಬಡಿಯೋಣ ಮುಂತಾದ ಾರ್ಯಗಳು) ಮಾಡಿಸಿಗ ಇಲ್ಲವೆ ಬೆನ್ನಹುರಿಯುಗುಂಟ ಇಳದಿರುವ ಮಿದುಳಿನ ಬಳ್ಳಿ ಥವಾ ಕಸೇರುಕಾರಜ್ಜುಗಳಲ್ಲಿ ಅಡಕವಾಗಿರುವ ನರಗಳಿಗೆ ಸಂಬಂಧಿಸಲ್ಪಟ್ಟಿರು ದರಿಂದ ಒಂದು ಬಗೆಯ ಅನೈಚ್ಛಿಕ ವ್ಯಾಪಾರಗಳಾಗಿರುವವು. ಐಚ್ಛಿಕ ವ್ಯಾಪಾರ ಳಿಗೆ ಆಧಾರಭೂತವಾಗಿ ಯಾವದೊಂದು ಕಲ್ಪನೆಯು ಇಲ್ಲವೆ ಸಂಸ್ಕಾರವಿದ್ದು ಅವರ ುಖಾಂತರ ಒಂದುಬಗೆಯ ಪ್ರೇರಣೆಯುಂಟಾಗುವದು. ಅನೈಚ್ಛಿಕ ವ್ಯಾಪಾರಗಳಿಗೆ ಾಂಥ ಪ್ರೇರಣೆಯು ಅವಶ್ಯಕತೆಯಿಲ್ಲ.

ಮಿದುಳಿನಿಂದ ಹೊರಟ ಒಂದು ವಿಧವಾದ ಬಳ್ಳಿಯು ಬೆನ್ನೆಲವುಗಳ ಮಣೆಯ ುಧ್ಯದಲ್ಲಿ ಇರುವ ಪ್ರದೇಶವನ್ನು ಸೇರಿ ಪೃಷ್ಠಫಲಕದವರೆಗೆ ಇಳಿಯುತ್ತ ಹೋಗಿರು ವದು. ಇದರಲ್ಲಿ ದೊಡ್ಡ ಮಿದುಳಿಗೆ ಸಂಬಂಧಿಸಿದ ಭಾಗವು ಇರುವದು. ಇದರಿಂದ ುಖವತ್ತೊಂದು ಜೊತೆಯಾದ ನರಗಳ ಬಳ್ಳಿಗಳು ಟಿಸಿಲಿನಂತೆ ಒಡೆದು ಶರೀರದ ಎಲ್ಲ ಾಗಗಳನ್ನು ವಿಶೇಷವಾಗಿ ತ್ವಗಿಂದ್ರಿಯವನ್ನು ವ್ಯಾಪಿಸಿರುವವು. ಈ ತರದಿಂದುಂ ಾದ ನರಗಳ ಜಾಲದಲ್ಲಿ ಸೂಕ್ಷ್ಮದರ್ಶಕ ಯಂತ್ರವಲ್ಲಿ ಕಾಣುವಷ್ಟು ಸೂಕ್ಷ್ಮವಾದ ಕಂತುವಿನಾಕಾರದ ನರಗಳಿರುವವು. ಇವುಗಳಲ್ಲಿ ಕೆಲವುಗಳಿಗೆ ಟಿಕಳಿಗಳಿರುವವು. ಅವುಗಳ ಜೊತೆಯಲ್ಲಿದ್ದ ಬೇರೆ ಕೆಲವು ನರಗಳಿಗೆ ಈ ತರದ ಟಿಕಳಿಗಳಿರುವದಿಲ್ಲ. ಟಿಕಳೆಯುಳ್ಳ ನರಗಳು ಬಾಹ್ಯಸೃಷ್ಟಿಯಿಂದ ತನುಗುಂಟಾದ ಅನುಭವವನ್ನು ಒಟ್ಟು ಗೂಡಿಸಿ ಉಪಶಾಖೆಯಿಂದ ಶಾಖೆಗೆ, ಶಾಖೆಯಿಂದ ಮಿಮಳುಬಳ್ಳಿಗೆ, ಅಲ್ಲಿಂದ ದೊಡ್ಡ ಮಿದುಳಿಗೆ ಕಳಿಸುವವು. ಈ ಅನುಭವವವು ದೊಡ್ಡ ಮಿದುಳಿಗೆ ಮುಟ್ಟಿಲು ದೊಡ್ಡ ಮಿದುಳು ವಿಚಾರಮಾಡಿ ತಕ್ಕ ನಿರ್ಣಯವನ್ನು ಅಮಲಿನಲ್ಲಿ ತರುವದಕ್ಕಾಗಿ ಕ್ರಿಯಾ ಪ್ರವೃತ್ತವಾದ ಅವಯವಗಳಿಗೆ ಕಳಿಸುವದು. ಈ ಕಾರ್ಯವು ಟಿಕಳಿಯಿಲ್ಲದ ನರ ಗಳ ಮುಖಾಂತರ ಆಗುವದು. ಇದರಿಂದ ಮಿದುಳುಬಳ್ಳಿಯು ಮಧ್ಯವರ್ತಿಯಾಗಿ ರುವ ಒಂದು ನರಗಳ ರಚನೆಯೆಂದೂ ಟಿಕಳಿಯಿದ್ದ ನರಗಳು ಅಂತರ್ವಾಹಿಗಳೆಂದೂ ಟಿಕಳಿಯಿಲ್ಲದ ನರಗಳು ಬಹಿರ್ವಾಹಿಗಳೆಂದೂ ಗೊತ್ತಾಗುವದು.

ಮೇಲೆ ಹೇಳಿದ ನರಮಂಡಲದ ಹೊರತು ಬೆನ್ನಹುರಿಯ ಎರಡೂ ಮಗ್ಗಲಿಗೆ ಅನೇಕ ಗಂಟುಗಳುಳ್ಳ ನರಗಳ ಜಾಲವಿರುವದು. ಇವುಗಳಿಗೆ ಸಹಾನುಭೂತಿವಿಶಿಷ್ಟ ನರಮಂಡಲವೆಂಬ ಹೆಸರು. ಇವುಗಳ ಮುಖ್ಯ ವ್ಯಾಪಾರವು ಶರೀರದೊಳಗಿನ ಅನೈ ಚ್ಛಿಕ ವ್ಯಾಪಾರಗಳು ಮಿತಿಮೀರಿ ನಡೆಯದಂತೆ ವ್ಯವಸ್ಥೆಮಾಡುವದು. ಇವುಗಳ ವ್ಯಾಪಾರವು ಇಷ್ಟೇಎಂದು ಇನ್ನೂ ನಿಶ್ಚಿತವಾಗಿಲ್ಲ.

೩ನೆಯ ಅಧ್ಯಾಯ

ಮನೋವ್ಯಾಪಾರಗಳ ಮೂರು ಪ್ರಕಾರಗಳು

ಬುದ್ಧಿ, ವಿಕಾರ, ಇಚ್ಛೆ ಇವುಗಳಿಗೆ ಸಂಬಂಧಿಸಲ್ಪಟ್ಟ ಎಲ್ಲ ಬಗೆಯ ವ್ಯಾಪಾರಗಳು ಮನೋವ್ಯಾಪಾರಗಳು. ಒಂದೊಂದು ಬಗೆಯ ಮನೋವ್ಯಾಪಾರಕ್ಕೆ ಮಿದುಳಿನಲ್ಲಿ ಒಂದೊಂದು ಕ್ಷೇತ್ರವಿರುವದೆಂದು ಗೊತ್ತಾಗಿದೆ. ಆದರೆ ಈ ವ್ಯಾಪಾರಗಳು ಒಂದರಿಂದೊಂದು ಪ್ರತ್ಯೇಕವಾಗಿರದೆ ಒಂದರಗೂಡೊಂದು ಸಂಕಲಿತವಾಗಿರುವವು. ಒಂದು ಬಗೆಯ ಮನೋವ್ಯಾಪಾರದಲ್ಲಿ ಮತ್ತೊಂದು ಬಗೆಯ ಮನೋವ್ಯಾಪಾರವು ಕಂಡುಬರುವದು. ನನ್ನ ಸ್ನೇಹಿತನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದನೆಂದು ಕೇಳಿದ ಕೂಡಲೆ ನನಗೆ ಆನಂದವಾಗಿ ಅವನಿಗೆ ಪತ್ರ ಬರೆದು ಕಳುಹುವೆನು. ಈ ಪ್ರಸಂಗದಲ್ಲಿ ಬುದ್ಧಿ, ವಿಕಾರ, ಇಚ್ಛೆಗಳು ಒಮ್ಮೆಲೇ ನಡೆದು ಒಂದರಗೂಡೊಂದು ಮಿಶ್ರವಾಗುವವು. ಈ ವ್ಯಾಪಾರಗಳ ತೀವ್ರತೆಯು ಹೆಚ್ಚು ಕಡಿಮೆ ಇದ್ದಂತೆ ಒಂದೊಂದು ಬಗೆಯ ವ್ಯಾಪಾರಕ್ಕೆ ಪ್ರಾಧಾನ್ಯ ಉಂಟಾಗುವದು. ಬುದ್ಧಿಯ ವ್ಯಾಪಾರವು ಹೆಚ್ಚಾದಂತೆ ಮನೋವಿಕಾರದ ತೀವ್ರತೆಯು ಕಡಿಮೆಯಾಗುವದು ಸಹಜವು. ಒಂದು ವೇಳೆ ಅದೇ ಪ್ರಮಾಣದಿಂದ ಇಚ್ಛೆಯ ತೀವ್ರತೆಯು ಹೆಚ್ಚಾಗಬಹುದು.

ಮನೋವ್ಯಾಪಾರಗಳು ನಡೆಯಲಿಕ್ಕೆ ಅವಶ್ಯವಾದ ಮಿದುಳಿನ ಸ್ಥಿತಿಗೆ **ಚೈತನ್ಯ ಸ್ಥಿತಿ** ಎಂಬ ಹೆಸರು. ಮೂವಕ ಪದಾರ್ಥಗಳಿಂದ ಮಿದುಳಿಗೆ ಆ ಸ್ಥಿತಿಯು ಇಲ್ಲದಂತೆ ಮಾಡಬಹುದು. 'ಕ್ಲೋರೋಫಾರ್ಮ್' ಎಂಬ ಪದಾರ್ಥವನ್ನು ರೋಗಿಗೆ ಮೂಸಿ ನೋಡಿಸಿ ಆದ ಬೇಶುದ್ಧ ಸ್ಥಿತಿಯಲ್ಲಿ ಮಾಡಿದ ಶಸ್ತ್ರಕ್ರಿಯೆಯಿಂದ ಅವನಿಗೆ ಯಾವ ಬಗೆಯ ವೇದನೆಯುಂಟಾಗುವದಿಲ್ಲ. ಇವರಂತೆ ಕೆಲವೊಂದು ವಿಶೇಷ ಪ್ರಯತ್ನದಿಂದ ಚೈತನ್ಯ ಸ್ಥಿತಿಯ ಕ್ಷೇತ್ರವನ್ನು ಬೆಳಿಸಲಿಕ್ಕೆ ಬರುವದು. ಅಷ್ಟಾವಧಾನಿ, ಶತಾವಧಾನಿಗಳಲ್ಲಿ ಕಂಡುಬರುವ ಒಂದು ಬಗೆಯ ವಿಶೇಷ ಬುದ್ಧಿಕುಶಲತೆಯು ಅವರು ಮಾಡಿದ ಪ್ರಯತ್ನದ ಫಲವಾಗಿರುವದು. ಮನೋವ್ಯಾಪಾರದ ಅಭಿವೃದ್ಧಿಗೆ ತಕ್ಕ ಪ್ರಮಾಣದಿಂದ ಬೆಳೆದ ಮಿದುಳೂ ಅದರ ಯೋಗ್ಯವಾದ ವಿಕಾಸವೂ ಕಾರಣವಾಗಿರುವವು. ಮಿದುಳು ಬೆಳೆಯಲಿಕ್ಕೆ ತಕ್ಕ ಆಹಾರ ವಿಹಾರಗಳು ಅವಶ್ಯವು. ಅನುವಂಶಿಕತೆಯು ತಕ್ಕ ಸಹಾಯಕಾರಿಯಾಗಿರುವದು. ಮಿದುಳಿನ ವಿಕಾಸಕ್ಕೆ ವ್ಯಕ್ತಿಯ ಬಹಿರುಪಾಧಿಗಳು ಅಂದರೆ ಪರಿಸ್ಥಿತಿ, ಶಿಕ್ಷಣ ಹಾಗು ಸ್ವಂತ ಪ್ರಯತ್ನಗಳು ಕಾರಣೀಭೂತವಾಗಿರುತ್ತವೆ.

ಹುಟ್ಟಿದಂದಿನಿಂದ ೨೫ ವರ್ಷಗಳ ವರೆಗೆ ವಿದ್ಯಾರ್ಥಿಗಳ ಮನೋವಿಕಾಸವು ಹೇಗಾಗುತ್ತ ಹೋಗುವದೆಂಬದನ್ನು ಗೊತ್ತುಪಡಿಸುವದಕ್ಕಾಗಿ ಮಾನಸಶಾಸ್ತ್ರಜ್ಞರು ಆ ವಯೋಮಾನವನ್ನು ಎರಿಂದ ೫ ವರ್ಷಗಳ ವಿಭಾಗದಿಂದ ಹೀಗೆ ಮಾಡಿರು

ವಿಭಾಗಗಳನ್ನು ಮಾಡಿರುವರು. ಆಯಾ ವಯೋಮಾನದಲ್ಲಿ ಸ್ಫುಟವಾಗಿ ಕಾಣುವ ವಂಥ ಮಾನಸಿಕ ವಿಕಾಸವು ಅದಂತೆ ಶಾರೀರಿಕ ಸ್ಥಿಂತ್ಯತರಗಳು ಉಂಟಾಗುವವು.

೧ನೇ ಭಾಗ, ೧ರಿಂದ ೭ರ ವರೆಗೆ: — ಈ ಕಾಲಾವಧಿಯಲ್ಲಿ ಮಗುವು ಕೇವಲ ಪರಾವಲಂಬಿಯಾಗಿದ್ದು ಬಹಿರುಪಾಧಿಗೆ ಅಂದರೆ ಪರಿಸ್ಥಿತಿಗೆ ಗುಲಾಮನಂತೆ ಅಧೀನವಾಗಿರುವದು. ಸೃಷ್ಟಿಯೊಳಗಿನ ಎಲ್ಲ ವಸ್ತುಗಳು ಅಪರಿಚಿತವಾಗಿರುವದರಿಂದ ಎಲ್ಲ ವಸ್ತುಗಳ ಪರಿಚಯಮಾಡಿಕೊಳ್ಳುವದಕ್ಕಾಗಿ ಚಟುವಟಿಕೆಯುಳ್ಳದ್ದಾಗಿರುವದು. ಅನುಕರಣದಿಂದ ಮಾತೃಭಾಷೆಯನ್ನು ಕಲಿಯುತ್ತ ಒಂದೊಂದು ವಸ್ತುವಿಗೆ ಸಂಬಂಧಿಸಿದ ಶಬ್ದವನ್ನು ಗ್ರಹಿಸಿ ಮನಸ್ಸಿನಲ್ಲಿ ಇಟ್ಟುಕೊಳ್ಳಲಿಕ್ಕೆ ಯತ್ನಿಸುವದು. ಆದರೂ ಮೂರು ವರ್ಷಗಳ ವರೆಗೆ ತನ್ನ ಮನಸ್ಸಿನಲ್ಲಿದ್ದದ್ದನ್ನು ಪರರಿಗೆ ತಿಳಿಸುವಷ್ಟು ಭಾಷೆಯ ಸಾಧನವು ಅದಕ್ಕೆ ಉಂಟಾಗಿರುವದಿಲ್ಲ. ಕಂಡಕಂಡ ವಸ್ತುಗಳನ್ನು ಸಮಗ್ರವಾಗಿ ನೋಡಿ ಅದು ಏನು? ಹಾಗೆ ಯಾಕೆ ಇರುವದು? ಎಂಬ ಬಗ್ಗೆ ಆ ಮಗುವಿನಲ್ಲಿ ಒಂದು ತರದ ಜಿಜ್ಞಾಸೆಯು ಹುಟ್ಟುತ್ತ ಹೋಗುವದು. ಕಲ್ಪನಾಶಕ್ತಿಯು ವಿಶೇಷ ಪ್ರಬಲವಾಗಿದ್ದರೂ ಸಿಟ್ಟು, ಭೀತಿ, ಅಹಂಕಾರ, ಮೊದಲಾದ ಭಾವನೆಗಳು ಅಮಲು ವಿಶೇಷವಾಗಿ ನಡೆಯುವದು. ಆದರೆ ಅವುಗಳ ಪರಿಣಾಮವು ಬಹಳ ಹೊತ್ತಿನ ವರೆಗೆ ನಿಲ್ಲಲಾರದು. ಇಚ್ಛಾಪೂರ್ವಕವಾಗಿ ಯಾವದೊಂದು ಕೆಲಸ ಮಾಡುವ ಶಕ್ತಿಯು ಮೂರು ವರ್ಷಗಳ ವರೆಗೆ ಕಂಡು ಬಾರದಿದ್ದರೂ ಈ ಅವಧಿಯು ಕೊನೆಯ ಭಾಗಕ್ಕೆ ಪ್ರಯತ್ನಪೂರ್ವಕವಾಗಿ ಯಾವದೊಂದು ವಸ್ತುವನ್ನು ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸುವ ಸಾಮರ್ಥ್ಯವು ಅದಕ್ಕೆ ಕ್ರಮೇಣ ಉಂಟಾಗುವದು. ಶಿಕ್ಷಣಶಾಸ್ತ್ರದಂತೆ ಈ ವಯೋಮಾನದಲ್ಲಿದ್ದ ವಿದ್ಯಾರ್ಥಿಗಳಿಗೆ ಬಾಲಕರೆಂಬ ಸಂಜ್ಞೆಯನ್ನುಕೊಟ್ಟಿರುವರು.

೨ನೇ ಭಾಗ—೭ರಿಂದ ೧೪ ವರ್ಷಗಳ ವರೆಗೆ: — ಈ ವಯೋಮಾನದಲ್ಲಿ ವಿದ್ಯಾರ್ಥಿಗಳು ಪರಿಸ್ಥಿತಿಗೆ ಕೇವಲ ಅಧೀನರಾಗಿರದೆ ಪರಿಸ್ಥಿತಿಯ ಮೇಲೆ ತಮ್ಮ ಸ್ವಂತ ಅಸುಲನ್ನು ಕೂಡಿಸಲಿಕ್ಕೆ ಪ್ರಯತ್ನಿಸುವರು. ಹೇಳಿದ್ದನ್ನು ಕೇಳಿ ಮನಸ್ಸಿನಲ್ಲಿಟ್ಟುಕೊಳ್ಳುತ್ತಿದ್ದರೂ ನಡುನಡುವೆ ಹಾಗೆ ಯಾಕೆ? ಹೀಗೆ ಯಾಕೆ? ಎಂದು ಪ್ರಶ್ನೆ ಮಾಡಹತ್ತುವರು. ಇಂದ್ರಿಯಗಳ ಮುಖಾಂತರ ದೊರಕಿಸಿಕೊಂಡ ಜ್ಞಾನವನ್ನು ಸ್ಮರಣದಲ್ಲಿ ಸಂಗ್ರಹಿಸಿಕೊಂಡು ಆ ಜ್ಞಾನದ ಸಹಾಯದಿಂದ ಸ್ಮರಣದಲ್ಲಿ ಕೂಡಿಟ್ಟ ಕಲ್ಪನೆಗಳನ್ನು ಒಂಡರಗೂಡೊಂದು ಬೆರಿಸಿ ಹೊಸ ಹೊಸ ಕಲ್ಪನೆಗಳನ್ನು ಹುಟ್ಟಿಸಿಕೊಳ್ಳುವರು. ಈ ಕಾಲಕ್ಕೆ ಅವಶ್ಯವಾದ ವಿಚಾರಶಕ್ತಿಯು ಅವರಲ್ಲಿ ತಲೆದೋರಹತ್ತುವದು. ಸ್ಮರಣಶಕ್ತಿಯು ಮಿತಿಮೀರಿ ಬೆಳೆಯುವದು. ಹಾಗು ಆ ಕಾಲದಲ್ಲಿ ಪಾಠ ಮಾಡಿದ ವಿಷಯಗಳು ಎಂದೂ ಮರೆಯುವದಿಲ್ಲ. ವಿಚಾರಶಕ್ತಿಯು ಬೆಳೆದಂತೆ ಯಾವದೊಂದು ವಿಷಯದ ಬಗ್ಗೆ ಸಾರಾಸಾರ ವಿಚಾರಮಾಡಿ ಕಾರ್ಯಕಾರಣಭಾವಗಳನ್ನು ಸಮಾಲೋಚಿಸಿ ತಕ್ಕನುಟ್ಟಿಗೆ ಸರಿಯಾದ ನಿರ್ಣಯಗಳನು ಮಾಡಲು ಸವ

೭ನೇ ಅಧ್ಯಾಯ

ಬೌದ್ಧ ಧರ್ಮ

೧. **ಉದಯ:**—ಪೂರ್ವಕಾಲದಲ್ಲಿ ಆರ್ಯರು ತಮ್ಮ ಬುದ್ಧಿಬಲದಿಂದ ವಿದ್ಯೆ, ಶಾಸ್ತ್ರ, ಕಲೆಗಳಲ್ಲಿ ಪ್ರಗತಿಯನ್ನು ಹೊಂದಿ ಆರ್ಯಾವರ್ತವು ಊರ್ಜಿತಸ್ಥಿತಿಗೆ ಬರುವಂತೆ ಮಾಡಿದರು. ಎಲ್ಲಕ್ಕಿಂತಲೂ ಧರ್ಮವಿಚಾರದಲ್ಲಿ ಅವರು ಹೆಚ್ಚು ಮುಂದು ವರೆದಿದ್ದರು. ವೇದ ಧರ್ಮದಲ್ಲಿ ಹೇಳಿದ ಯಜ್ಞ ಮುಂತಾದವುಗಳಿಗೆ ಜನರು ಬೇಸ ತ್ತಿರುವದನ್ನು ಕಂಡು ಕೆಲವು ಮಹಾಪುರುಷರು ಧರ್ಮದ ವಿಷಯಕ್ಕೆ ಹೊಸ ಹೊಸ ವಿಚಾರಗಳನ್ನು ಮಾಡಹತ್ತಿದರು. ಅವರಲ್ಲಿ ಗೌತಮಬುದ್ಧನೆಂಬವನು ಕ್ರಿ. ಪೂ. ೫೬೭ರಲ್ಲಿ ಉದಯಹೊಂದಿ ಹೊಸ ಧರ್ಮವನ್ನು ಜನರಿಗೆ ಉಪದೇಶಿಸಿದನು. ಅದೇ ಬೌದ್ಧಧರ್ಮವು. ಈ ಮತಕ್ಕೆ ಮುಂದೆ ಕೆಲವು ವರ್ಷಗಳ ತರುವಾಯ ಸ್ವತಂತ್ರ ಧರ್ಮದ ಸ್ವರೂಪವು ಪ್ರಾಪ್ತವಾಗಿ ಅದು ಚೀನ, ಜಪಾನ, ತಿಬೇಟ, ಸಿಂಹಳದ್ವೀಪ ಮುಂತಾದ ಹಿಂದುಸ್ಥಾನದ ಹೊರಗಿನ ದೇಶಗಳಲ್ಲಿ ಸಂಪೂರ್ಣವಾಗಿ ಹಬ್ಬುಗೊಂಡಿತು. ಹಿಂದುಸ್ಥಾನದಲ್ಲಿ ಈ ಧರ್ಮವನ್ನು ಆಗಿನ ಅರಸರು ಸ್ವೀಕರಿಸಿದ್ದರಿಂದ ಅದಕ್ಕೆ ಕೆಲ ಕಾಲ ಸ್ವಲ್ಪ ಪ್ರಾಬಲ್ಯವು ದೊರೆಯಿತು. ಜಗತ್ತಿನಲ್ಲಿ ಈ ಧರ್ಮದವರ ಸಂಖ್ಯೆಯು ಹೆಚ್ಚಾಗಿರುವದು.

೨. **ಗೌತಮಬುದ್ಧ:**— ಕಾಶಿಯ ಉತ್ತರಕ್ಕೆ ರೋಹಿಣೀ ನದಿಯ ದಂಡೆಯ ಮೇಲೆ ಕಪಿಲವಸ್ತು ಎಂಬಲ್ಲಿ ಶುದ್ಧೋದನನೆಂಬ ಶಾಕ್ಯಜನರ ಅರಸನು ರಾಜ್ಯವಾಳು ತ್ತಿದ್ದನು. ಅವನಿಗೆ ಕ್ರಿ. ಪೂ. ೫೬೭ರಲ್ಲಿ **ಸಿದ್ಧಾರ್ಥ ನೆಂಬ** ಒಬ್ಬ ಮಗನು ಹುಟ್ಟಿ ದನು. ಸಿದ್ಧಾರ್ಥನಿಗೆ ಗೌತಮನೆಂಬದು ಕುಲವ ಹೆಸರಾಗಿತ್ತು. ಶಾಕ್ಯವಂಶದಲ್ಲಿ ಹುಟ್ಟಿದ್ದರಿಂದ ಇವನಿಗೆ ಶಾಕ್ಯಮುನಿಯೆಂದೂ ಶಾಕ್ಯಸಿಂಹನೆಂದೂ ಕರೆಯುತ್ತಿದ್ದರು. ಮುಂದೆ ಇವನಿಗೆ '**ಬುದ್ಧ**' ಅಂದರೆ ಜ್ಞಾನಿ ಎಂಬ ಹೆಸರು ಪ್ರಾಪ್ತವಾಯಿತು. ಚಿಕ್ಕ ವನಿರುವಾಗಲೇ ಗೌತಮನಿಗೆ ರಾಜವಿಲಾಸದ ಹಾಗು ಯುದ್ಧಕಲೆಯು ವಿಷಯವಾಗಿ ತಿರಸ್ಕಾರವಿತ್ತು. ಆದರೂ ಅವನು ತಂದೆಯ ಅಪ್ಪಣೆಯಂತೆ ಯುದ್ಧವಿದ್ಯೆಯನ್ನು ಕಲಿತು **ಯಶೋಧರೆ** ಎಂಬ ರೂಪವತಿಯಾದ ಕನ್ಯೆಯನ್ನು ಮದುವೆಯಾದನು. ಕೆಲವುಕಾಲ ಸಂಸಾರ ಸುಖವನ್ನು ಅನುಭವಿಸಿದ ಬಳಿಕ ಇವನಿಗೆ ಒಬ್ಬ ಮಗನು ಹುಟ್ಟಿ ದನು. ಗೌತಮನು ವಿಚಾರಿಯೂ ಕೋಮಲಾಂತಃಕರಣಿಯೂ ಆಗಿದ್ದನು. ಒಮ್ಮೆ ಬೇಟೆಗೆ ಹೋದಾಗ, 'ನಿರುಪದ್ರವಿಗಳಾದ ಪ್ರಾಣಿಗಳನ್ನು ನಿಷ್ಕಾರಣವಾಗಿ ಯಾಕೆ ಕೊಲ್ಲಬೇಕು?' ಎಂಬ ಕಲ್ಪನೆಯು ಅವನ ಮನಸ್ಸಿನಲ್ಲಿ ಬಂದು ಚಿಗುರಿಗೆ ಹೂಡಿದ ಬಾಣವನ್ನು ಹಿಂದಕ್ಕೆ ತೆಗೆದುಕೊಂಡನು. ಮತ್ತೊಮ್ಮೆ ಕುದುರೆಯ ಶರ್ಯತ್ತಿನ ಆಟವನ್ನು ನೋಡಿದಾಗ ದಣಿದು ಬೆವರಿನಿಂದ ತುಂಬಿದ ಕುದುರೆಯನ್ನು ಕಂಡು 'ಜೂಜಿನಲ್ಲಿ

ಸೋತರೂ ಅಡ್ಡಿಯಿಲ್ಲ. ಅದರೆ ಕುದುರೆಗೆ ದುಃಖಕೊಡುವದು ಸರಿಯಲ್ಲವೆಂದು ಅವನು ಕುದುರೆಯನ್ನು ನಡುವೇ ನಿಲ್ಲಿಸಿದನು. ಇನ್ನೊಮ್ಮೆ ಒಬ್ಬ ಒಕ್ಕಲಿಗನು ಜಿನ್ನಿಗೆ ಹುಣ್ಣಾಗಿ ನಡೆಯಲಾರದ ಎತ್ತನ್ನು ಕೋಲಿನಿಂದ ಹೊಡೆಯುವದನ್ನು ನೋಡಿ ಗೌತಮನಿಗೆ ಬಹಳ ಕನಿಕರ ಹುಟ್ಟಿತು. ಕಡೆಗೆ ಒಬ್ಬ ಬಡ ಮುದುಕನನ್ನೂ ಶವವನ್ನೂ ಕಂಡು ಅವನಿಗೆ ಸಂಸಾರದಲ್ಲಿ ವಿರಕ್ತಿಯುಂಟಾಯಿತು.

ಬಳಿಕ ಗೌತಮನು ತನ್ನ ೩೦ನೇ ವರ್ಷದ ವಯಸ್ಸಿನಲ್ಲಿ ರಾಜ್ಯ, ಹೆಂಡತಿ, ಮಗ ಇವರ ಮೋಹವನ್ನು ಬಿಟ್ಟು ಎರಡು ವರ್ಷಗಳವರೆಗೆ ಬ್ರಾಹ್ಮಣ ಧರ್ಮದ ತತ್ವಗಳನ್ನು ಚೆನ್ನಾಗಿ ಪರಿಶೀಲಿಸಿದನು. ಇದರಿಂದ ಅವನ ಆತ್ಮಕ್ಕೆ ಸಂತುಷ್ಟಿಯಾಗದೆ ಹೋದ್ದರಿಂದ ಅವನು ಗಯಾದ ನೆರೆಯಲ್ಲಿಯ ಎರುವೇಲದ ಅರಣ್ಯವನ್ನು ಸೇರಿದನು. ಅಲ್ಲಿ ತಪ, ಉಪವಾಸ ಮೊದಲಾದ ವ್ರತಗಳಿಂದ ದೇಹವನ್ನು ೬ ವರ್ಷ ಕಷ್ಟಪಡಿಸಿದರೂ ಅವನ ಮನಸ್ಸಿಗೆ ಶಾಂತಿಯುಂಟಾಗಲಿಲ್ಲ. ಕಟ್ಟಕಡೆಗೆ ಅವನು ಒಂದು ಅಶ್ವತ್ಥ ವೃಕ್ಷದ ಕೆಳಗೆ ಸ್ವಸ್ಥಚಿತ್ತನಾಗಿ ಕುಳಿತಿರಲು ಒಮ್ಮಿಂದೊಮ್ಮೆ ಅವನ ಮನಸ್ಸಿನಲ್ಲಿ ಪ್ರಕಾಶವುಂಟಾಯಿತು. ಅದರಿಂದ ಅವನಿಗೆ– ದೇಹದಂಡನೆಯಿಂದ ಸುಖವೂ ಶಾಂತಿಯೂ ದೊರೆಯಲಾರವು; ಶುದ್ಧಮನಸ್ಸಿನಿಂದ ಸದಾಚರಣೆಯನ್ನು ಮಾಡುವದರಿಂದಲೇ ಮುಕ್ತಿಯಾಗುವದು; ಪ್ರಾಣಿಮಾತ್ರರಲ್ಲಿ ದಯೆಯನ್ನು ತೋರಿಸುವದರಿಂದ ನಿಜವಾದ ಸುಖವು ಸಿಗುವದು. ಎಂದು ಮನವರಿಕೆಯಾಯಿತು.

ಆ ಮೇಲೆ ಸಿದ್ಧಾರ್ಥನು ಬುದ್ಧ (ಪೂರ್ಣತಿಳಿವಳಿಕೆಯುಳ್ಳವ)ನಾದನು. ಅಂದಿನಿಂದ ಸ್ತ್ರೀಯರೂ ಸಾಮಾನ್ಯ ಜನರೂ ಅವನ ಅನುಯಾಯಿಗಳಾದರು. ಬುದ್ಧನು ಕಾಶಿಯ ನೆರೆಯಲ್ಲಿ ಸಾರನಾಥವ ಹತ್ತರ ತನ್ನ ಧರ್ಮದ ತತ್ವಗಳನ್ನು ಜನರಿಗೆ ಉಪದೇಶಿಸಹತ್ತಿದನು. ಮೊದಲು ೫ ಜನರು ಶಿಷ್ಯರಾಹರು, ಮೂರು ತಿಂಗಳೊಳಗೆ ೬೦ ಜನರು ಇವನ ಶಿಷ್ಯರಾದರು. ಮಗಧದೇಶದ ಅರಸನಾದ ಬಿಂಬಿಸಾರನೂ ಅವನ ಪ್ರಜೆಗಳೂ ಬೌದ್ಧಧರ್ಮವನ್ನು ಸ್ವೀಕರಿಸಿದರು. ಬಳಿಕ ಇವನು ಕಪಿಲವಸ್ತುವಿಗೆ ಹೋಗಿ ತನ್ನ ಮುಪ್ಪಿನ ತಂದೆ, ಹೆಂಡತಿ, ಮಗ ಮೊದಲಾದ ಎಲ್ಲ ಶಾಕ್ಯರಿಗೂ ಬೌದ್ಧ ಧರ್ಮದ ದೀಕ್ಷೆಯನ್ನು ಕೊಟ್ಟನು. ಮುಂದೆ ಇವನು ಅಯೋಧ್ಯಾ, ಪಾಟಣಾ, ಪ್ರಾಂತಗಳಲ್ಲಿ ೪೦ ವರ್ಷ ಜನರಿಗೆ ಉಪದೇಶಮಾಡಿದನು. ೮೦ ವರ್ಷದವನಾಗಿ ಕುಶಿನಗರವೆಂಬ ಗ್ರಾಮದಲ್ಲಿ ಕ್ರಿ. ಪೂ. ೪೮೨ರಲ್ಲಿ ನಿರ್ವಾಣವನ್ನು ಹೊಂದಿದನು.

ಈ ಪ್ರಕಾರ ಗೌತಮಬುದ್ಧನು ತಾನು ಉಪದೇಶಮಾಡಿ ಧರ್ಮವನ್ನು ಹಬ್ಬಿಸಿವ್ವಲ್ಲದೆ ತನ್ನ ತರುವಾಯ ತನ್ನ ಶಿಷ್ಯರಿಂದ ಧರ್ಮಪ್ರಸಾರವಾಗುವಂತೆ ವ್ಯವಸ್ಥೆ ಮಾಡಿದನು. ಬುದ್ಧನ ಮರಣದ ತರುವಾಯ ೫೦೦ ಜನ ಶಿಷ್ಯರು ಪಾಟಣಾ ಪಟ್ಟಣದ ಹತ್ತರ ಒಂದು ಗುಹೆಯಲ್ಲಿ ಒಟ್ಟುಗೂಡಿ ಅವನ ವಚನಗಳನ್ನೆಲ್ಲ ಸಂಗ್ರಹಿಸಿದರು. ಇದಕ್ಕೆ ಬೌದ್ಧಧರ್ಮದ ಮೊದಲನೇ ಮಹಾಸಭೆಯನ್ನುವರು.

೩. **ಬೌದ್ಧಧರ್ಮದ ತತ್ವಗಳು:**— ಅಹಿಂಸೆ, ಭೂತದಯೆ, ಇಂದ್ರಿಯ ನಿಗ್ರಹ ಇವುಗಳನ್ನು ಪ್ರತಿ ಒಬ್ಬನು ಪಾಲಿಸತಕ್ಕದ್ದು. ಮನುಷ್ಯನಿಗೆ ಈ ಜನ್ಮದಲ್ಲಿ ಬರೂಗಲಿ ಮುಂದಿನ ಜನ್ಮದಲ್ಲಿಯಾಗಲಿ ಅವನ ಕರ್ಮದಂತೆ ಫಲವು ದೊರೆಯುವದು. ಪಾಪದ ವಿಚಾರದಿಂದಲೂ ಕೃತ್ಯದಿಂದಲೂ ದೂರವಿದ್ದವನಿಗೆ ದುಃಖ ಮನೋವಿಕಾರ ಗಳಿಂದ ಬಿಡುಗಡೆ ಹೊಂದುವದು ಸಾಧ್ಯವದೆ. ಸದಾಚಾರಣೆಯಿಂದ ಸುಖವೂ ದುರಾ ಚರಣೆಯಿಂದ ದುಃಖವೂ ಲಭಿಸುವವು. ಜಾತಿಭೇದವನ್ನು ಎಣಿಸುವದು ತಪ್ಪು. ಮೂರ್ತಿ ಪೂಜೆಯನ್ನು ಮಾಡಕೂಡದು. ಯಜ್ಞಯಾಗಾದಿಗಳಿಂದ ಮುಕ್ತಿಯು ದೊರಕದೆ ಪಾಪವು ನಿಶ್ಚಯವಾಗುವದು. ಎಲ್ಲರೂ ಅಷ್ಟಾಂಗ ಶೀಲಗಳನ್ನು ಅನುಸರಿಸತಕ್ಕದ್ದು. ಅವು ಯಾವ ವೆಂದರೆ— ಸತ್‌ಶ್ರದ್ಧೆ, ಸದಿಚ್ಛೆ, ಸದ್ವಚನ, ಸದ್ವರ್ತನ, ಸನ್ಮಾರ್ಗ, ಸತ್ಪರಿಶ್ರಮ, ಸದ್ಚಿಂತನ, ಸನ್ನಿಶ್ಚಯ.

ಬೌದ್ಧಧರ್ಮವು ನಾಸ್ತಿಕವಲ್ಲದಿದರೂ ದೇವರ ಅಸ್ತಿತ್ವದ ಬಗ್ಗೆ ಅದು ಉದಾ ಸೀನವಾಗಿರುವದು. ವೇದಗಳ ಪ್ರಮಾಣವನ್ನು ಬೌದ್ಧರು ಮನ್ನಿಸುವದಿಲ್ಲ. ಕಪಿಲನ ಸಾಂಖ್ಯತತ್ವಗಳೇ ಬೌದ್ಧಮತಕ್ಕೆ ಆಧಾರಭೂತವಾಗಿರುವವು.

§ ೪. **ಬುದ್ಧನ ಸಮಕಾಲೀನರು:**— ಜಗತ್ತಿನಲ್ಲಿ, ಬುದ್ಧನಿಗೆ ಸಮಕಾಲೀ ನರಾದ ಪ್ರಸಿದ್ಧ ಧರ್ಮೋಪದೇಶಕರು ಆಗಿಹೋದರು. ಗ್ರೀಕರ ತತ್ವಜ್ಞಾನಿಯಾದ ಪಿರಾಕ್ಲೀಟಸನೂ, ಸಾಮೋಸ ನಡುಗಡ್ಡೆಯ ಪಾಯಥ್ಯಾಗೋರಾಸನೆಂಬ ಗಣಿತ ಶಾಸ್ತ್ರಜ್ಞನೂ, ಚೀನದ ಕಾನಫೂಸಿಯಸನೆಂಬ ನೀತಿಶಾಸ್ತ್ರಜ್ಞನೂ, ಪಾರ್ಸಿ ಜನರ ಆದಿ ಗುರುವಾದ ಝೋರೋಅಸ್ತರನೂ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಹೊಸ ವಿಚಾ ರಗಳನ್ನು ಹೆಚ್ಚುಕಡಿಮೆ ಇದೇ ಕಾಲಕ್ಕೆ ಪ್ರಸಾರಮಾಡಿದರು.

೫. **ಬೌದ್ಧಧರ್ಮದ ಪರಿಣಾಮ:**—ಬೌದ್ಧಧರ್ಮದ ತತ್ವಗಳು ಸಾಮಾನ್ಯ ಜನರಿಗೆ ತಿಳಿಯುವಂಥವಿದ್ದದರಿಂದ ಅದು ಬೇಗ ಹಬ್ಬುಗೊಂಡಿತು. ಮಗಧ, ಕೋಸಲ ದೇಶಗಳ ಅರಸರಾದ ಅಜಾತಶತ್ರು, ಪ್ರಸೇನಜಿತ ಮೊದಲಾದವರು ಈ ಧರ್ಮವನ್ನು ಸ್ವೀಕರಿಸಿ ಅದರ ತತ್ವಗಳನ್ನು ಪ್ರಸಾರಮಾಡಲಿಕ್ಕೆ ಬಹುಪರಿಯಿಂದ ಯತ್ನಿಸಿದರು. ಇದರಿಂದ ಸ್ವಲ್ಪ ಕಾಲ ಮಾತ್ರ ವೈದಿಕಧರ್ಮವು ಕಳೆಗುಂದಿತು. ಸಂಸ್ಕೃತಭಾಷೆಯ ಮಹತ್ವವು ಕಡಿಮೆಯಾಗಿ ಮಾಗಧೀ ಅಥವಾ ಪಾಲೀಭಾಷೆಯು ಪ್ರಚಾರದಲ್ಲಿ ಬಂತು. ಆದರೆ ಬೌದ್ಧಧರ್ಮಗಳಿಂದ ಸನಾತನ ಧರ್ಮಗಳಿಗೆ ಯಾವ ಹಾನಿಯಿಂದಲೂ ತೊಂದರೆಯುಂಟಾಗಲಿಲ್ಲ. ಭೂತದಯೆ, ಪರೋಪಕಾರ ಮೊದ ಲಾದ ಈ ಧರ್ಮದ ತತ್ವಗಳಿಗನುಸರಿಸಿ ಔಷಧಾಲಯ, ಅನ್ನಛತ್ರ, ಧರ್ಮಶಾಲೆ, ಪಶುಶಾಲೆ ಮೊದಲಾದವುಗಳು ದೇಶದಲ್ಲಿ ಏರ್ಪಾಡಾದವು. ಹೀಗೆ ಹೊಸ ಪ್ರಕಾರದ ಜೀವನಪದ್ಧತಿಯು ರೂಢಿಯಾಯಿತು. ಬೌದ್ಧಮತದ ದೀಕ್ಷೆಯನ್ನು ಹೊಂದಿದವರಲ್ಲಿ

ಭಿಕ್ಷುಗಳ ಸಂಖ್ಯೆಯೇ ಹೆಚ್ಚು. ಆ ಭಿಕ್ಷುಗಳು ವಿಹಾರಗಳನ್ನು ಕಟ್ಟಿಕೊಂಡು ಇರ ಹತ್ತಿದರು. ಮಗಧ ದೇಶದಲ್ಲಿ ಇಂಥ ವಿಹಾರಗಳು ಅತಿಶಯವಾಗಿದ್ದದರಿಂದ ಆ ಪ್ರದೇಶಕ್ಕೆ ವಿಹಾರ ಅಥವಾ ಬಿಹಾರವೆಂಬ ಹೆಸರು ಬಿತ್ತು. ಎಷ್ಟೋ ರಾಜರು ಇಂಥ ವಿಹಾರಗಳನ್ನು ಕಟ್ಟಿಸಿದ್ದರಿಂದ ಶಿಲ್ಪಕಲೆಗೆ ಉತ್ತೇಜನವು ದೊರೆಯಿತು. ಗುಡ್ಡದಲ್ಲಿ ಕೊರೆದ ವಿಹಾರಗಳು ಕಾರ್ಲೆ, ವೆರೂಳ, ಕಾನ್ಹೇರಿ, ಬದಾಮಿ, ಎಲಿಫಂಟಾ (ಮುಂಬೈ ನೆರೆಯಲ್ಲಿರುವ ನಡುಗಡ್ಡೆ) ಮುಂತಾದ ಕಡೆಯಲ್ಲಿ ಇಂದಿಗೂ ಕಂಗೊಳಿಸುವವು. ಅಹಿಂಸಾತತ್ವದ ಉಪದೇಶದಿಂದ ವೈದಿಕಧರ್ಮದ ಅನುಯಾಯಿಗಳು ಯಜ್ಞದಲ್ಲಿ ಪಶುವಧೆಯನ್ನು ಮಾಡಬಾರದೆಂಬ ಆಗ್ರಹವನ್ನು ತೋರಿಸಹತ್ತಿದರು. ಮತ್ತು ಅವರಲ್ಲಿ ಭಕ್ತಿಮಾರ್ಗದ ಪ್ರಸಾರವು ಹೆಚ್ಚಾಯಿತು. ಅಶೋಕನ ಮಗನು ಸಿಂಹಲದ್ವೀಪದಲ್ಲಿ ಬೌದ್ಧಧರ್ಮದ ಪ್ರಸಾರಮಾಡಿದನು. ಅಲ್ಲಿಂದ ತಿಬೇಟ, ಬ್ರಹ್ಮದೇಶ, ಸಯಾಮು, ಚೀನ, ಜಪಾನ ದೇಶಗಳಲ್ಲಿ ಹಬ್ಬಿತು. ಮುಂದೆ ಇದರಲ್ಲಿ ಎರಡು ಪಂಥಗಳಾದವು. ಉತ್ತರದ ಪ್ರದೇಶಗಳಲ್ಲಿ ಅಂದರೆ ಉತ್ತರ ಹಿಂದುಸ್ತಾನ, ತಿಬೇಟ, ಚೀನ, ಜಪಾನ, ಕೋರಿಯಾಗಳಲ್ಲಿ ಪ್ರಚಲಿತವಾದ ಪಂಥಕ್ಕೆ ಮಹಾಯಾನವೆಂತಲೂ ದಕ್ಷಿಣದ ಪ್ರದೇಶಗಳಲ್ಲಿ ಅಂದರೆ ಸಿಂಹಳದ್ವೀಪ, ಬ್ರಹ್ಮದೇಶ, ಸಯಾಮುಗಳಲ್ಲಿ ಪ್ರಚರಿತವಾದ ಪಂಥಕ್ಕೆ ಹೀನಯಾನವೆಂತಲೂ ಕರೆಯುವರು.

೩. **ಬೌದ್ಧಧರ್ಮದ ತತ್ವಗಳು:**— ಅಹಿಂಸೆ, ಭೂತದಯೆ, ಇಂದ್ರಿಯ ನಿಗ್ರಹ ಇವುಗಳನ್ನು ಪ್ರತಿ ಒಬ್ಬನು ಪಾಲಿಸತಕ್ಕದ್ದು. ಮನುಷ್ಯನಿಗೆ ಈ ಜನ್ಮದಲ್ಲಿ ಯಾಗಲಿ ಮುಂದಿನ ಜನ್ಮದಲ್ಲಿಯಾಗಲಿ ಅವನ ಕರ್ಮದಂತೆ ಫಲವು ದೊರೆಯುವದು. ಪಾಪದ ವಿಚಾರದಿಂದಲೂ ಕೃತ್ಯದಿಂದಲೂ ದೂರವಿದ್ದವನಿಗೆ ದುಃಖ ಮನೋವಿಕಾರ ಗಳಿಂದ ಬಿಡುಗಡೆ ಹೊಂದುವದು ಸಾಧ್ಯವದೆ. ಸದಾಚಾರಣೆಯಿಂದ ಸುಖವೂ ದುರಾ ಚರಣೆಯಿಂದ ದುಃಖವೂ ಲಭಿಸುವವು. ಜಾತಿಭೇದವನ್ನು ಎಣಿಸುವದು ತಪ್ಪು. ಮೂರ್ತಿ ಪೂಜೆಯನ್ನುಮಾಡಕೂಡದು. ಯಜ್ಞಯಾಗಾದಿಗಳಿಂದ ಮುಕ್ತಿಯು ದೊರಕದೆ ಪಾಪವು ಹೆಚ್ಚಾಗುವದು. ಎಲ್ಲರೂ ಅಷ್ಟಾಂಗ ಶೀಲಗಳನ್ನು ಅನುಸರಿಸತಕ್ಕದ್ದು. ಅವು ಯಾವ ವೆಂದರೆ– ಸತ್‌ಶ್ರದ್ಧೆ, ಸದಿಚ್ಛೆ, ಸದ್ವಚನ, ಸದ್ವರ್ತನ, ಸನ್ಮಾರ್ಗ, ಸತ್ಪರಿಶ್ರಮ, ಸಚ್ಚಿಂತನ, ಸನ್ನಿಶ್ಚಯ.

ಬೌದ್ಧಧರ್ಮವು ನಾಸ್ತಿಕವಲ್ಲದಿದ ರೂ ದೇವರ ಅಸ್ತಿತ್ವದ ಬಗ್ಗೆ ಅದು ಉದಾ ಸೀನವಾಗಿರುವದು. ವೇದಗಳ ಪ್ರಮಾಣವನ್ನು ಬೌದ್ಧರು ಮನ್ನಿಸುವದಿಲ್ಲ. ಕಪಿಲನ ಸಾಂಖ್ಯತತ್ವಗಳೇ ಬೌದ್ಧಮತಕ್ಕೆ ಆಧಾರಭೂತವಾಗಿರುವವು.

§ ೪. **ಬುದ್ಧನ ಸಮಕಾಲೀನರು:**— ಜಗತ್ತಿನಲ್ಲಿ, ಬುದ್ಧನಿಗೆ ಸಮಕಾಲೀ ನರಾದ ಪ್ರಸಿದ್ಧ ಧರ್ಮೋಪದೇಶಕರು ಆಗಿಹೋದರು. ಗ್ರೀಕರ ತತ್ವಜ್ಞಾನಿಯಾದ ಹಿರಾಕ್ಲೀಟಸನೂ, ಸಾಮೋಸ ನಡುಗಡ್ಡೆಯ ಪಾಯಥ್ಯಾಗೋರಾಸನೆಂಬ ಗಣಿತ ಶಾಸ್ತ್ರಜ್ಞನೂ, ಚೀನದ ಕಾನಫೂಷಿಯಸನೆಂಬ ನೀತಿಶಾಸ್ತ್ರಜ್ಞನೂ, ಪಾರ್ಸಿ ಜನರ ಆದಿ ಗುರುವಾದ ಝೋರೋಅಸ್ತರನೂ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಹೊಸ ವಿಚಾ ರಗಳನ್ನು ಹೆಚ್ಚುಕಡಿಮೆ ಇದೇ ಕಾಲಕ್ಕೆ ಪ್ರಸಾರಮಾಡಿದರು.

೫. **ಬೌದ್ಧಧರ್ಮದ ಪರಿಣಾಮ:**—ಬೌದ್ಧಧರ್ಮದ ತತ್ವಗಳು ಸಾಮಾನ್ಯ ಜನರಿಗೆ ತಿಳಿಯುವಂಥವಿದ್ದದರಿಂದ ಅದು ಬೇಗ ಹಬ್ಬುಗೊಂಡಿತು. ಮಗಧ, ಕೋಸಲ ದೇಶಗಳ ಅರಸರಾದ ಅಜಾತಶತ್ರು, ಪ್ರಸೇನಜಿತ ಮೊದಲಾದವರು ಈ ಧರ್ಮವನ್ನು ಸ್ವೀಕರಿಸಿ ಅದರ ತತ್ವಗಳನ್ನು ಪ್ರಸಾರಮಾಡಲಿಕ್ಕೆ ಬಹುಪರಿಯಿಂದ ಯತ್ನಿಸಿದರು. ಇದರಿಂದ ಸ್ವಲ್ಪ ಕಾಲ ಮಾತ್ರ ವೈದಿಕಧರ್ಮವು ಕಳೆಗುಂದಿತು. ಸಂಸ್ಕೃತಭಾಷೆಯ ಮಹತ್ವವು ಕಡಿಮೆಯಾಗಿ ಮಾಗಧೀ ಅಥವಾ ಪಾಲೀಭಾಷೆಯು ಪ್ರಚಾರದಲ್ಲಿ ಬಂತು. ಆದರೆ ಬೌದ್ಧಧರ್ಮಿಗಳಿಂದ ಸನಾತನ ಧರ್ಮಿಗಳಿಗೆ ಯಾವ ಬಗೆಯಿಂದಲೂ ತೊಂದರೆಯುಂಟಾಗಲಿಲ್ಲ. ಭೂತದಯೆ, ಪರೋಪಕಾರ ಮೊದ ಲಾದ ಈ ಧರ್ಮದ ತತ್ವಗಳಿಗನುಸರಿಸಿ ಔಷಧಾಲಯ, ಅನ್ನಛತ್ರ, ಧರ್ಮಶಾಲೆ, ಪಶುಶಾಲೆ ಮೊದಲಾದವುಗಳು ದೇಶದಲ್ಲಿ ಏರ್ಪಾಡಾದವು. ಹೀಗೆ ಹೊಸ ಪ್ರಕಾರದ ಜ್ಞಾನಪದ್ಧತಿಯು ರೂಢನಾಯಿತು. ಬೌದ್ಧಮತದ ದೀಕ್ಷೆಯನ್ನು ಹೊಂದಿದವರಲ್ಲಿ

ಭಿಕ್ಷುಗಳ ಸಂಖ್ಯೆಯೇ ಹೆಚ್ಚು. ಆ ಭಿಕ್ಷುಗಳು ವಿಹಾರಗಳನ್ನು ಕಟ್ಟಿಕೊಂಡು ಇರ ಹತ್ತಿದರು. ಮಗಧ ದೇಶದಲ್ಲಿ ಇಂಥ ವಿಹಾರಗಳು ಅತಿಶಯವಾಗಿದ್ದದರಿಂದ ಆ ಪ್ರದೇಶಕ್ಕೆ ವಿಹಾರ ಅಥವಾ ಬಿಹಾರವೆಂಬ ಹೆಸರು ಬಿತ್ತು. ಎಷ್ಟೋ ರಾಜರು ಇಂಥ ವಿಹಾರಗಳನ್ನು ಕಟ್ಟಿಸಿದ್ದರಿಂದ ಶಿಲ್ಪಕಲೆಗೆ ಉತ್ತೇಜನವು ದೊರೆಯಿತು. ಗುಡ್ಡದಲ್ಲಿ ಕೊರೆದ ವಿಹಾರಗಳು ಕಾರ್ಲೆ, ವೆರೂಳ, ಕಾನ್ಹೇರಿ, ಬದಾಮಿ, ಎಲಿಫಂಟಾ (ಮುಂಬೈ ನೆರೆಯಲ್ಲಿರುವ ನಡುಗಡ್ಡೆ) ಮುಂತಾದ ಕಡೆಯಲ್ಲಿ ಇಂದಿಗೂ ಕಂಗೊಳಿಸುವವು. ಅಹಿಂಸಾತತ್ವದ ಉಪದೇಶದಿಂದ ವೈದಿಕಧರ್ಮದ ಅನುಯಾಯಿಗಳು ಯಜ್ಞದಲ್ಲಿ ಪಶುವಧೆಯನ್ನು ಮಾಡಬಾರದೆಂಬ ಆಗ್ರಹವನ್ನು ತೋರಿಸಹತ್ತಿದರು. ಮತ್ತು ಅವರಲ್ಲಿ ಭಕ್ತಿಮಾರ್ಗದ ಪ್ರಸಾರವು ಹೆಚ್ಚಾಯಿತು. ಅಶೋಕನ ಮಗನು ಸಿಂಹಲದ್ವೀಪದಲ್ಲಿ ಬೌದ್ಧಧರ್ಮದ ಪ್ರಸಾರಮಾಡಿದನು. ಅಲ್ಲಿಂದ ತಿಬೇಟ, ಬ್ರಹ್ಮದೇಶ, ಸಯಾಮ, ಚೀನ, ಜಪಾನ ದೇಶಗಳಲ್ಲಿ ಹಬ್ಬಿತು. ಮುಂದೆ ಇದರಲ್ಲಿ ಎರಡು ಪಂಥಗಳಾದವು. ಉತ್ತರದ ಪ್ರದೇಶಗಳಲ್ಲಿ ಅಂದರೆ ಉತ್ತರ ಹಿಂದುಸ್ತಾನ, ತಿಬೇಟ, ಚೀನ, ಜಪಾನ, ಕೋರಿಯಾಗಳಲ್ಲಿ ಪ್ರಚಲಿತವಾದ ಪಂಥಕ್ಕೆ ಮಹಾಯಾನವೆಂತಲೂ ದಕ್ಷಿಣದ ಪ್ರದೇಶಗಳಲ್ಲಿ ಅಂದರೆ ಸಿಂಹಳದ್ವೀಪ, ಬ್ರಹ್ಮದೇಶ, ಸಯಾಮುಗಳಲ್ಲಿ ಪ್ರಚಲಿತವಾದ ಪಂಥಕ್ಕೆ ಹೀನಯಾನವೆಂತಲೂ ಕರೆಯುವರು.

ಎನೇ ಅಧ್ಯಾಯ

ಮಹಾವೀರ ಬುದ್ಧರ ಕಾಲದ ಅರಸು ಮನೆತನಗಳು

ಹಿಂದುಸ್ತಾನದ ನಿಶ್ಚಿತವಾದ ಇತಿಹಾಸವು ಕ್ರಿ. ಪೂ. ೬೦೦ರಿಂದ ಪ್ರಾರಂಭವಾಗುತ್ತದೆ. ಆ ಕಾಲಕ್ಕೆ ನಾಲ್ಕು ಮುಖ್ಯ ಮನೆತನಗಳು ಕೋಸಲ, ಮಗಧ, ಅವಂತಿ, ವತ್ಸ ಕೋಶಾಂಬಿಗಳಲ್ಲಿ ರಾಜ್ಯವಾಳುತ್ತಿದ್ದವು.

ಕೋಸಲ:—ಅಯೋಧ್ಯೆಯ ಉತ್ತರ ಭಾಗಕ್ಕೆ ಕೋಸಲವೆನ್ನುತ್ತಿದ್ದರು. ಶ್ರಾವಸ್ತಿ ನಗರವು ಈ ರಾಜ್ಯದ ರಾಜಧಾನಿಯು. ಬುದ್ಧನಿಗಿಂತ ಮೊದಲು ಅಲ್ಲಿ ಅನೇಕ ಅರಸರು ಆಳಿದರು. ಅವರಲ್ಲಿ **ಕಂಸ**ನೆಂಬವನು ಕಾಶಿಯ ಅರಸನ ಕೂಡ ಯುದ್ಧಮಾಡಿ ಕಾಶಿಯ ರಾಜ್ಯವನ್ನು ಗೆದ್ದುಕೊಂಡನು. ಕಂಸನು ಬುದ್ಧನಿಗಿಂತ ಮೊದಲು ೧೦೦ ವರ್ಷದ ಹಿಂದೆ ಇದ್ದನು. ನಂತರ ಬುದ್ಧನ ಕಾಲಕ್ಕೆ **ಪಸೆನದಿ** (ಪ್ರಸೇನಜಿ) ಎಂಬ ಅರಸನು ಬುದ್ಧನ ಕೆಲವು ತತ್ವಗಳನ್ನು ಮನ್ನಿಸಿ ಅವನೊಡನೆ ಮೇಲಿಂದ ಮೇಲೆ ಸಾವಾದವಾದ ಮಾಡುತ್ತಿದ್ದನು. ಈ ಅರಸನು ಒಮ್ಮೆ ಮಗಧದ ಅಜಾತಶತ್ರುವಿನ ಕೂಡ ಯುದ್ಧಮಾಡಿ ಅವನನ್ನು ಪೂರ್ಣವಾಗಿ ಸೋಲಿಸಿದನು. ಆದರೆ ಅವನ ರಾಜ್ಯವನ್ನೆಲ್ಲ ಮತ್ತೆ ಅವನಿಗೆ ತಿರುಗಿ ಒಪ್ಪಿಸಿದ್ದಲ್ಲದೆ ವಜ್ರಾ ಎಂಬ ತನ್ನ ಮಗಳನ್ನು ಅವನಿಗೆ ಕೊಟ್ಟು ಮದುವೆ ಮಾಡಿದನು. ಪಸೆನದಿಯ ಮುಪ್ಪಿನ ಕಾಲದಲ್ಲಿ ಮಂತ್ರಿಗಳು ಅವನನ್ನು ಕಟ್ಟದಿಂದ ತಳ್ಳಿ ಅವನ ಮಗನಾದ ವಿದೂಡಭನೆಂಬವನನ್ನು ಪಟ್ಟಕ್ಕೆ ಕುಳ್ಳಿರಿಸಿದರು.

ಮಗಧ:—ಈ ರಾಜ್ಯವು ಈಗಿನ ಬಿಹಾರ ಪ್ರಾಂತದ ದಕ್ಷಿಣ ಪ್ರದೇಶವು. ಈ ರಾಜ್ಯದ ಇತಿಹಾಸವು ಕ್ರಿ. ಪೂ. ೬೫೪ರಲ್ಲಿ ಪ್ರಾರಂಭವಾಗುತ್ತದೆ. ಕಾಶಿಯ ಅರಸರಲ್ಲಿ ಒಬ್ಬನಾದ **ಶಿಶುನಾಗನು** ಗಯಾ ಜಿಲ್ಲೆಯ ಗುಡ್ಡಗಳಲ್ಲಿದ್ದ ಗಿರಿವ್ರಜ ಅಥವಾ ರಾಜಗೃಹ ಎಂಬ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಶೈಶುನಾಗವಂಶವನ್ನು ಸ್ಥಾಪಿಸಿದನು. ಇವನಿಂದ ೫ನೆಯವನಾದ **ಬಿಂಬಿಸಾರನು** ಪ್ರಸಿದ್ಧನಾದನು. ಇವನು ಅಂಗ (ಈಗಿನ ಭಾಗಲಪುರ ಮೊಂಗೀರ ಜಿಲ್ಲೆಗಳು) ರಾಜ್ಯವನ್ನು ಗೆದ್ದು ತನ್ನ ರಾಜ್ಯದ ವಿಸ್ತಾರವನ್ನು ಬೆಳಿಸಿದನು. ಹಳೇ ರಾಜಗೃಹದ ಹತ್ತಿರವೇ ಹೊಸ ಪಟ್ಟಣವನ್ನು ಕಟ್ಟಿಸಿ ಮಗಧರಾಜ್ಯದ ಕೀರ್ತಿಯನ್ನು ಸ್ಥಾಪಿಸಿದನು. ಇವನು ಜೈನಧರ್ಮದ ಅಭಿಮಾನಿಯಾಗಿದ್ದನು. ಇವನು ಕ್ರಿ. ಪೂ. ೫೮೨ ರಿಂದ ೫೫೪ರ ವರೆಗೆ ೨೮ ವರ್ಷ ವೈಭವದಿಂದ ರಾಜ್ಯವಾಳಿದನು. ಬಿಂಬಿಸಾರನು ಮಹಾವೀರ ಬುದ್ಧರಿಗೆ ಸಮಕಾಲೀನನು.

ಅಜಾತಶತ್ರು:—(ಕ್ರಿ. ಶ. ೫೫೪–೫೨೭) ಬಿಂಬಿಸಾರನ ತರುವಾಯ ಅವನ ಮಗನಾದ ಅಜಾತಶತ್ರುವು ಪಟ್ಟವನ್ನೇರಿದನು. ಜೈನರು ಅವನಿಗೆ ಕೂನಿಕನೆನ್ನುವರು. ಇವನು ಪಾಟಲಿಪುತ್ರದಲ್ಲಿ ಭದ್ರವಾದ ಕೋಟೆಯನ್ನು ಕಟ್ಟಿಸಿದನು. ಇವನು ಕೋಸಲ ರಾಜ್ಯವನ್ನೂ ಲಿಚ್ಛವೀಜನರ ಪ್ರದೇಶವನ್ನೂ ಗೆದ್ದುಕೊಂಡು ತನ್ನ ರಾಜ್ಯಕ್ಕೆ ಕೂಡಿಸಿದನು. ಇವನು ಧರ್ಮಿಷ್ಠನಿದ್ದುದರಿಂದ ಜೈನರಿಗೂ ಬೌದ್ಧರಿಗೂ ಸಹಾಯಮಾಡುತ್ತಿದ್ದನು. ಆದದರಿಂದ ಈತನು ತಮ್ಮ ಧರ್ಮಕ್ಕೆ ಸೇರಿದವನೆಂದು ಇಬ್ಬರೂ ಹೇಳುತ್ತಾರೆ.

ದರ್ಶಕ ಮತ್ತು ಉದಯ:—ಅಜಾತಶತ್ರುವಿನ ತರುವಾಯ ದರ್ಶಕನು ಪಟ್ಟಕ್ಕೆ ಕೂತನು. ಭಾಸ ಕವಿಯು ಬರೆದ ಸ್ವಪ್ನವಾಸವದತ್ತಾ ಎಂಬ ನಾಟಕದಲ್ಲಿ ಈ ಅರಸನ ಹೆಸರು ಉಲ್ಲೇಖಿಸಲ್ಪಟ್ಟಿದೆ. ಕ್ರಿ. ಪೂ. ೫೦೩ರಲ್ಲಿ ದರ್ಶಕನ ಮಗನಾದ ಉದಯನು ಪಟ್ಟಕ್ಕೆ ಕೂತನು. ಇವನು ಗಂಗಾನದಿಯ ದಂಡೆಗೆ ಪಾಟಲಿಪುತ್ರಕ್ಕೆ ಸಮೀಪವಾಗಿ ಕುಸುಮಪುರವೆಂಬ ಪಟ್ಟಣವನ್ನು ಕಟ್ಟಿಸಿದನು.

ಅವಂತಿ:— ಬುದ್ಧನ ಕಾಲಕ್ಕೆ ಅವಂತಿರಾಜ್ಯದ ರಾಜಧಾನಿಯಾದ ಉಜ್ಜಯಿನಿಯಲ್ಲಿ ಪಜ್ಜೋತ (ಪ್ರಜ್ಯೋತ)ವೆಂಬ ಅರಸನು ಆಳುತ್ತಿದ್ದನು. ಇವನಿಗೂ ಕೌಶಾಂಬಿಯ ಅರಸನಾದ ಉದೇನನಿಗೂ ಶರೀರಸಂಬಂಧವಿದ್ದು ಅವರಿಬ್ಬರ ನಡುವೆ ಮೇಲಿಂದ ಮೇಲೆ ಯುದ್ಧಗಳಾಗುತ್ತಿದ್ದವು. ಪ್ರಜ್ಯೋತನು ಪ್ರಬಲನಿದ್ದುದರಿಂದ ತನ್ನ ರಾಜ್ಯದ ಮೇಲೆ ದಂಡೆತ್ತಿ ಬರುವನೆಂಬ ಭಯದಿಂದ ಅಜಾತಶತ್ರುವು ತನ್ನ ರಾಜಧಾನಿಯಾದ ರಾಜಗೃಹದ ಸುತ್ತಲೂ ಭದ್ರವಾದ ಕೋಟೆಯನ್ನು ಕಟ್ಟಿಸಿದನು. ಮಥುರೆಯಲ್ಲಿ ಆಳುತ್ತಿದ್ದ ಶೂರಸೇನರ ಅರಸನಾದ ಸುಬಾಹುವಿಗೆ ಅವಂತಿಪುತ್ರನೆನ್ನುತ್ತಿದ್ದರು. ಯಾಕೆಂದರೆ ಅವನ ತಾಯಿಯು ಅವಂತಿಯ ರಾಜಕುಮರಿಯಾಗಿದ್ದಳು.

ಬುದ್ಧನ ವಚನಗಳನ್ನು ಒಟ್ಟುಗೂಡಿಸಿ ಪ್ರಾಕೃತ ಭಾಷೆಯಲ್ಲಿ ಬೌದ್ಧ ಮತದ ತತ್ವಗಳನ್ನು ಪ್ರಸಾರಮಾಡಿದ ಅಭಯಕುಮಾರ, ಇಸಿದಾಸಿ, ಇಸಿದತ್ತ, ಧಮ್ಮಪಾಲ ಮೊದಲಾದವರು ಅವಂತಿಯಲ್ಲಿಯೇ ಇದ್ದರು.

ಕೌಶಾಂಬಿ—ಈ ನಗರವು ಯಮುನೆಯ ಥಡದಲ್ಲಿ ಉಜ್ಜಯಿನಿಯಿಂದ ೪೦೦ ಮೈಲುಗಳಮೇಲೆ, ಮತ್ತು ಕಾಶೀಪಟ್ಟಣದಿಂದ ೩೩೦ ಮೈಲುಗಳ ಮೇಲೆ ಇತ್ತು. ಇಲ್ಲಿ ಬುದ್ಧನ ಕಾಲಕ್ಕೆ **ಉದೇನ**ನೆಂಬ ಅರಸನು ಆಳುತ್ತಿದ್ದನು. ಈತನ ತಂದೆಯ ಹೆಸರು ಪರಂತಪನೆಂದೂ ಮಗನ ಹೆಸರು ಬೋಧಿಕುಮಾರನೆಂದೂ ಇದ್ದವು. ಉದೇನನು ಆರಂಭದಲ್ಲಿ ಬೌದ್ಧಧರ್ಮದ ತತ್ವಗಳನ್ನು ಪ್ರಸಾರಮಾಡಲಿಕ್ಕೆ ಅಡ್ಡಿಮಾಡಿದನು. ಮತ್ತು ಬುದ್ಧನ ಶಿಷ್ಯರನ್ನು ಹಿಂಸೆಪಡಿಸಿದನು. ಆದರೆ ಕಡೆಗೆ ಪಿಂಡೋಲ ಭಾರದ್ವಾಜನೆಂಬ ಶಿಷ್ಯನಿಂದ ಉಪದೇಶವನ್ನು ಹೊಂದಿ ಬೌದ್ಧಧರ್ಮವನ್ನು ಸ್ವೀಕರಿಸಿದನು.

ಎನೇ ಅಧ್ಯಾಯ

ಮಹಾವೀರ ಬುದ್ಧರ ಕಾಲದ ಅರಸು ಮನೆತನಗಳು

ಹಿಂದುಸ್ತಾನದ ನಿಶ್ಚಿತವಾದ ಇತಿಹಾಸವು ಕ್ರಿ. ಪೂ. ೬೦೦ರಿಂದ ಪ್ರಾರಂಭವಾಗುತ್ತದೆ. ಆ ಕಾಲಕ್ಕೆ ನಾಲ್ಕು ಮುಖ್ಯ ಮನೆತನಗಳು ಕೋಸಲ, ಮಗಧ, ಅವಂತಿ, ಮತ್ತು ಕೋಶಾಂಬಿಗಳಲ್ಲಿ ರಾಜ್ಯವಾಳುತ್ತಿದ್ದವು.

ಕೋಸಲ:—ಅಯೋಧ್ಯೆಯ ಉತ್ತರ ಭಾಗಕ್ಕೆ ಕೋಸಲವೆನ್ನುತ್ತಿದ್ದರು. ಶ್ರಾವಸ್ತಿ ನಗರವು ಈ ರಾಜ್ಯದ ರಾಜಧಾನಿಯು. ಬುದ್ಧನಿಗಿಂತ ಮೊದಲು ಅಲ್ಲಿ ಅನೇಕ ಅರಸರು ಆಳಿದರು. ಅವರಲ್ಲಿ **ಕಂಸ**ನೆಂಬವನು ಕಾಶಿಯ ಅರಸನ ಕೂಡ ಯುದ್ಧಮಾಡಿ ಕಾಶಿಯ ರಾಜ್ಯವನ್ನು ಗೆದ್ದುಕೊಂಡನು. ಕಂಸನು ಬುದ್ಧನಿಗಿಂತ ಮೊದಲು ೧೦೦ ವರ್ಷದ ಹಿಂದೆ ಇದ್ದನು. ನಂತರ ಬುದ್ಧನ ಕಾಲಕ್ಕೆ **ಪಸೆನದಿ** (ಪ್ರಸೇನಧೀ) ಎಂಬ ಅರಸನು ಬುದ್ಧನ ಕೆಲವು ತತ್ವಗಳನ್ನು ಮನ್ನಿಸಿ ಅವನೊಡನೆ ಮೇಲಿಂದ ಮೇಲೆ ವಾದವಿವಾದ ಮಾಡುತ್ತಿದ್ದನು. ಈ ಅರಸನು ಒಮ್ಮೆ ಮಗಧದ ಅಜಾತಶತ್ರುವಿನ ಕೂಡ ಯುದ್ಧಮಾಡಿ ಅವನನ್ನು ಪೂರ್ಣವಾಗಿ ಸೋಲಿಸಿದನು. ಆದರೆ ಅವನ ರಾಜ್ಯವನ್ನೆಲ್ಲಿ ಮತ್ತೆ ಅವನಿಗೆ ತಿರುಗಿ ಒಪ್ಪಿಸಿದ್ದಲ್ಲದೆ ವಜ್ರಾ ಎಂಬ ತನ್ನ ಮಗಳನ್ನು ಅವನಿಗೆ ಕೊಟ್ಟು ಮದುವೆ ಮಾಡಿದನು. ಪಸೆನದಿಯ ಮುಪ್ಪಿನ ಕಾಲದಲ್ಲಿ ಮಂತ್ರಿಗಳು ಅವನನ್ನು ಪಟ್ಟದಿಂದ ತಳ್ಳಿ ಅವನ ಮಗನಾದ ವಿದೂದಭನೆಂಬವನನ್ನು ಪಟ್ಟಕ್ಕೆ ಕುಳ್ಳಿರಿಸಿದರು.

ಮಗಧ:—ಈ ರಾಜ್ಯವು ಈಗಿನ ಬಿಹಾರ ಪ್ರಾಂತದ ದಕ್ಷಿಣ ಪ್ರದೇಶವು. ಈ ರಾಜ್ಯದ ಇತಿಹಾಸವು ಕ್ರಿ. ಪೂ. ೬೫೪ರಲ್ಲಿ ಪ್ರಾರಂಭವಾಗುತ್ತದೆ. ಕಾಶಿಯ ಅರಸರಲ್ಲಿ ಒಬ್ಬನಾದ **ಶಿಶುನಾಗನು** ಗಯಾ ಜಿಲ್ಲೆಯ ಗುಡ್ಡಗಳಲ್ಲಿದ್ದ ಗಿರಿವ್ರಜ ಅಥವಾ ರಾಜಗೃಹ ಎಂಬ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಶೈಶುನಾಗವಂಶವನ್ನು ಸ್ಥಾಪಿಸಿದನು. ಇವನಿಂದ ೫ನೆಯವನಾದ **ಬಿಂಬಿಸಾರನು** ಪ್ರಸಿದ್ಧನಾದನು. ಇವನು ಅಂಗ (ಈಗಿನ ಭಾಗಲಪುರ ಮೊಂಗೀರ ಜಿಲ್ಲೆಗಳು) ರಾಜ್ಯವನ್ನು ಗೆದ್ದು ತನ್ನ ರಾಜ್ಯದ ವಿಸ್ತಾರವನ್ನು ಬೆಳಿಸಿದನು. ಹಳೇ ರಾಜಗೃಹದ ಹತ್ತಿರವೇ ಹೊಸ ಪಟ್ಟಣವನ್ನು ಕಟ್ಟಿಸಿ ಮಗಧರಾಜ್ಯದ ಕೀರ್ತಿಯನ್ನು ಸ್ಥಾಪಿಸಿದನು. ಇವನು ಜೈನಧರ್ಮದ ಅಭಿಮಾನಿಯೂಗಿದ್ದನು. ಇವನು ಕ್ರಿ. ಪೂ. ೫೮೨ ರಿಂದ ೫೫೪ರ ವರೆಗೆ ೨೮ ವರ್ಷ ವೈಭವದಿಂದ ರಾಜ್ಯವಾಳಿದನು. ಬಿಂಬಿಸಾರನು ಮಹಾವೀರ ಬುದ್ಧರಿಗೆ ಸಮಕಾಲೀನನು.

ಅಜಾತಶತ್ರು:—(ಕ್ರಿ. ಶ. ೫೫೪–೫೨೭) ಬಿಂಬಿಸಾರನ ತರುವಾಯ ಅವನ ಮಗನಾದ ಅಜಾತಶತ್ರುವು ಪಟ್ಟವನ್ನೇರಿದನು. ಜೈನರು ಅವನಿಗೆ ಕೂನಿಕನೆನ್ನುವರು. ಇವನು ಪಾಟಲಿಪುತ್ರದಲ್ಲಿ ಭದ್ರವಾದ ಕೋಟೆಯನ್ನು ಕಟ್ಟಿಸಿದನು. ಇವನು ಕೋಸಲ ರಾಜ್ಯವನ್ನೂ ಲಿಚ್ಛವೀಜನರ ಪ್ರದೇಶವನ್ನೂ ಗೆದ್ದುಕೊಂಡು ತನ್ನ ರಾಜ್ಯಕ್ಕೆ ಕೂಡಿಸಿದನು. ಇವನು ಧರ್ಮಿಷ್ಠನಿಲ್ಲದರಿಂದ ಜೈನರಿಗೂ ಬೌದ್ಧರಿಗೂ **ಸಹಾಯ**ವಾಗಿದ್ದನು. ಆದದರಿಂದ ಈತನು ತಮ್ಮ ಧರ್ಮಕ್ಕೆ ಸೇರಿದವನೆಂದು ಇಬ್ಬರೂ ಹೇಳುತ್ತಾರೆ.

ದರ್ಶಕ ಮತ್ತು ಉದಯ:—ಅಜಾತಶತ್ರುವಿನ ತರುವಾಯ ದರ್ಶಕನು ಪಟ್ಟಕ್ಕೆ ಕೂತನು. ಭಾಸ ಕವಿಯು ಬರೆದ ಸ್ವಪ್ನವಾಸವದತ್ತಾ ಎಂಬ ನಾಟಕದಲ್ಲಿ ಈ ಅರಸನ ಹೆಸರು ಉಲ್ಲೇಖಿಸಲ್ಪಟ್ಟಿದೆ. ಕ್ರಿ. ಪೂ. ೫೦೩ರಲ್ಲಿ ದರ್ಶಕನ ಮಗನಾದ ಉದಯನು ಪಟ್ಟಕ್ಕೆ ಕೂತನು. ಇವನು ಗಂಗಾನದಿಯ ದಂಡೆಗೆ ಪಾಟಲಿಪುತ್ರಕ್ಕೆ ಸಮೀಪವಾಗಿ ಕುಸುಮಪುರವೆಂಬ ಪಟ್ಟಣವನ್ನು ಕಟ್ಟಿಸಿದನು.

ಅವಂತಿ:— ಬುದ್ಧನ ಕಾಲಕ್ಕೆ ಅವಂತಿರಾಜ್ಯದ ರಾಜಧಾನಿಯಾದ ಉಜ್ಜಯಿನಿಯಲ್ಲಿ ಪಜ್ಜೋತ (ಪ್ರಜ್ಯೋತ)ವೆಂಬ ಅರಸನು ಆಳುತ್ತಿದ್ದನು. ಇವನಿಗೂ **ಕೋಶಾಂಬಿಯ** ಅರಸನಾದ ಉದೇನನಿಗೂ ಶರೀರಸಂಬಂಧವಿದ್ದು ಅವರಿಬ್ಬರ ನಡುವೆ ಮೇಲಿಂದ ಮೇಲೆ ಯುದ್ಧಗಳಾಗುತ್ತಿದ್ದವು. ಪ್ರಜ್ಯೋತನು ಪ್ರಬಲನಿದ್ದುದರಿಂದ ತನ್ನ ರಾಜ್ಯದ ಮೇಲೆ ದಂಡೆತ್ತಿ ಬರುವನೆಂಬ ಭಯದಿಂದ ಅಜಾತಶತ್ರುವು ತನ್ನ ರಾಜಧಾನಿಯಾದ ರಾಜಗೃಹದ ಸುತ್ತಲೂ ಭದ್ರವಾದ ಕೋಟೆಯನ್ನು ಕಟ್ಟಿಸಿದನು. ಮಥುರೆಯಲ್ಲಿ ಆಳುತ್ತಿದ್ದ ಶೂರಸೇನರ ಅರಸನಾದ ಸುಬಾಹುವಿಗೆ ಅವಂತಿಪುತ್ರನೆನ್ನುತ್ತಿದ್ದರು ಯಾಕೆಂದರೆ ಅವನ ತಾಯಿಯು ಅವಂತಿಯ ರಾಜಕುವರಿಯಾಗಿದ್ದಳು.

ಬುದ್ಧನ ವಚನಗಳನ್ನು ಒಟ್ಟುಗೂಡಿಸಿ ಪ್ರಾಕೃತ ಭಾಷೆಯಲ್ಲಿ ಬೌದ್ಧ ಮತದ ತತ್ವಗಳನ್ನು ಪ್ರಸಾರಮಾಡಿದ ಅಭಯಕುಮಾರ, ಇಸಿದಾಸಿ, ಇಸಿದತ್ತ, ಧನ್ಯಪಾಲ ಮೊದಲಾದವರು ಅವಂತಿಯಲ್ಲಿಯೇ ಇದ್ದರು.

ಕೋಶಾಂಬಿ—ಈ ನಗರವು ಯಮುನೆಯ ಧಡದಲ್ಲಿ ಉಜ್ಜಯಿನಿಯಿಂದ ೪೦೦ ಮೈಲುಗಳಮೇಲೆ, ಮತ್ತು ಕಾಶೀಪಟ್ಟಣದಿಂದ ೩೩೦ ಮೈಲುಗಳ ಮೇಲೆ ಇತ್ತು. ಇಲ್ಲಿ ಬುದ್ಧನ ಕಾಲಕ್ಕೆ **ಉದೇನ**ನೆಂಬ ಅರಸನು ಆಳುತ್ತಿದ್ದನು. ಈತನ ತಂದೆಯ ಹೆಸರು ಪರಂತಪನೆಂದೂ ಮಗನ ಹೆಸರು ಬೋಧಿಕುಮಾರನೆಂದೂ ಇದ್ದವು. ಉದೇನನು ಆರಂಭದಲ್ಲಿ ಬೌದ್ಧಧರ್ಮದ ತತ್ವಗಳನ್ನು ಪ್ರಸಾರಮಾಡಲಿಕ್ಕೆ ಅಡ್ಡಿಮಾಡಿದನು. ಮತ್ತು ಬುದ್ಧನ ಶಿಷ್ಯರನ್ನು ಹಿಂಸೆಪಡಿಸಿದನು. ಆದರೆ ಕಡೆಗೆ ಪಿಂಡೋಲ ಭಾರದ್ವಾಜನೆಂಬ ಶಿಷ್ಯನಿಂದ ಉಪದೇಶವನ್ನು ಹೊಂದಿ ಬೌದ್ಧಧರ್ಮವನ್ನು ಸ್ವೀಕರಿಸಿದನು.

ನವನಂದರು — ಶೈಶುನಾಗ ವಂಶದ ಕಡೆಯ ಅರಸರಾದ ನಂದಿವರ್ಧನ ಮತ್ತು ಮಹಾನಂದಿ ಇವರು ೬೩ ವರ್ಷ ರಾಜ್ಯವಾಳಿದನಂತರ ಮಹಾಪದ್ಮನೂ ಅವನ ಎಂಟು ಮಂದಿ ಮಕ್ಕಳೂ ಹೆಚ್ಚುಕಡಿಮೆ ೧ ಶತಕದ ವರೆಗೆ ಆಳಿದರು. ಇವರಿಗೆ ನವನಂದರೆನ್ನುವರು. ಮಹಾಪದ್ಮನು ಕ್ರಿ. ಪೂ. ೪೧೩ರಿಂದ ಆಳಿದನೆಂದು ಕೆಲವು ಇತಿಹಾಸಜ್ಞರ ಮತವು. ನಂದರು ಜೈನ ಅಥವಾ ಬೌದ್ಧರಿದ್ದುದರಿಂದ ಸನಾತನ ಧರ್ಮೀಯರು ಇವರಕೂಡ ದ್ವೇಷಮಾಡುತ್ತಿದ್ದರು. ಆದದರಿಂದ ಇವರನ್ನು ಪಟ್ಟದಿಂದ ಕಳ್ಳುವ ಆಲೋಚನೆಯು ಜನರಲ್ಲಿ ನೊದಲಿನಿಂದಲೂ ಇತ್ತು. ಅದು ಕ್ರಿ. ಪೂ. ೩೨೨ ರಲ್ಲಿ ಮೌರ್ಯವಂಶದ ಚಂದ್ರಗುಪ್ತನಿಂದ ಸಾಧ್ಯವಾಯಿತು. ಇವನಿಗೆ ಚಾಣಕ್ಯ (ಕೌಟಿಲ್ಯ ಅಥವಾ ವಿಷ್ಣುಗುಪ್ತ) ನೆಂಬ ಬ್ರಾಹ್ಮಣ ಮಂತ್ರಿಯು ಬಹಳ ಸಹಾಯ ಮಾಡಿದನು. ಚಾಣಕ್ಯನು ರಾಜ್ಯತಂತ್ರದಲ್ಲಿ ಒಳ್ಳೇ ನಿಷ್ಣಾತನಿದ್ದನು. ಈತನು ಅರ್ಥಶಾಸ್ತ್ರವೆಂಬ ಗ್ರಂಥವನ್ನು ಬರೆದಿದ್ದಾನೆ. ಚಂದ್ರಗುಪ್ತನ ರಾಜ್ಯಸ್ಥಾಪನೆಯ ಚಿತ್ರವು ಸಂಸ್ಕೃತ ಮುದ್ರಾರಾಕ್ಷಸನೆಂಬ ನಾಟಕದಲ್ಲಿಯೂ ಕನ್ನಡ ಮುದ್ರಾಮಂಜೂಷವೆಂಬ ಗದ್ಯದಲ್ಲಿಯೂ ರೇಖಿಸಲ್ಪಟ್ಟಿದೆ.

ಶೈಶುನಾಗ ಮತ್ತು ನಂದ ಅರಸರ ವಂಶಾವಳಿ.

ಅನುಕ್ರಮ ಸಂಖ್ಯೆ.	ಮತ್ಸ್ಯಪುರಾಣದಲ್ಲಿ ಹೇಳಿದಂತೆ ಅರಸರ ಹೆಸರುಗಳು.	ಕಟ್ಟಕ್ಕಕೂತ ಸಾಧಾರಣ ಇಸವಿ.	ಕಥಾ.
		ಕ್ರಿ ಪೂ.	
೧	ಶಿಶುನಾಗ	೬೪೨	ನೊದಲು ಕಾಶಿಯ ಅರಸು ಆಳಿದವರ ವಿಷಯಕ್ಕೆ ವಿಶೇಷ ಸಂಗತಿಗಳು ಗೊತ್ತಾಗಿಲ್ಲ. ಇವರು ಒಟ್ಟು ೬೦ ವರ್ಷ ಆಳಿದರು.
೨	ಕಾಕವರ್ಣ		
೩	ಕ್ಷೇಮಧರ್ಮ		
೪	ಕ್ಷೇಮಜಿತ್ ಅಥವಾ ಕ್ಷತ್ರೌಜಸ್		
೫	ಬಿಂಬಿಸಾರ ಅಥವಾ ಶ್ರೇಣಿಕ	೫೮೨	ರಾಜಗೃಹವನ್ನು ಕಟ್ಟಿಸಿದನು. ಮಹಾವೀರ ಬುದ್ಧರಿಗೆ ಸಮಕಾಲೀನನು. ಜೈನನಾಗಿದ್ದನು. ಅಂಗರಾಜ್ಯವನ್ನು ಗೆದ್ದನು.
೬	ಅಜಾತ ಶತ್ರು ಅಥವಾ ಕೂನಿಕ	೫೫೪	ಪಾಟಲಿ ಪುತ್ರದ ಕೋಟೆಯನ್ನು ಕಟ್ಟಿಸಿದನು. ವೈಶಾಲಿ ಕೋಶಲಗಳ ಅರಸರನ್ನು ಸೋಲಿಸಿದನು. ಮಹಾವೀರ ಬುದ್ಧರ ನಿರ್ಯಾಣ.

ಅನುಕ್ರಮ ಸಂಖ್ಯೆ.	ಮತ್ಸ್ಯ ಪುರಾಣದಲ್ಲಿ ಹೇಳಿದಂತೆ ಅರಸರ ಹೆಸರುಗಳು.	ನಟ್ಟಕ್ಕೆ ಕೊಂತೆ ಸಾಧಾರಣ ಇಸವಿ.	ಶೇರಾ.
೭	ದರ್ಶಕ	೫೨೭	ಭಾಸನು ಬರೆದ ಸ್ವಪ್ನವಾಸವದತ್ತಾ ನಾಟಕದಲ್ಲಿ ದರ್ಶಕನ ಉಲ್ಲೇಖವಿರವದು.
೮	ಉದಾಸಿನ್ ಅಥವಾ ಉದಯ	೫೦೩	ಪಾಟಲಿಪುತ್ರವ ನೆರೆಯಲ್ಲಿ ಗಂಗಾ ನದಿಯ ಧಡದಲ್ಲಿ ಕುಸುಮಪುರವನ್ನು ಕಟ್ಟಿಸಿದನು.
೯	ನಂದಿವರ್ಧನ	೪೭೦ ?	ವಿಶೇಷ ಸಂಗತಿಗಳ ಉಲ್ಲೇಖವಿಲ್ಲ
೧೦	ಮಹಾನಂದಿ ೯ ಮಂದಿ ನಂದರು.		
೧೧	ಮಹಾಪದ್ಮ ಮತ್ತು	೪೧೩	ಕಡಿನೆ ಕುಲದವನು. ಬ್ರಾಹ್ಮಣ ಕ್ಷತ್ರಿಯರ ದ್ವೇಷಿಗಳು.
೧೨	ಅವನ ಎಂಟುಮಕ್ಕಳು		
೧೩	ಮೌರ್ಯರು ಚಂದ್ರಗುಪ್ತ	೩೨೨	

೯ನೇ ಅಧ್ಯಾಯ

ಪರಚಕ್ರಗಳು

೧. **ಇರಾಣದವರ ದಾಳಿ**— ಹಿಂದುಸ್ತಾನವು ಸಂಪತ್ತುಳ್ಳ ದೇಶವಾದ ಂದ ಪರದೇಶದ ಜನರು ಸುಲಿಯುವ ಉದ್ದೇಶದಿಂದಾಗಲಿ ನೆಲೆಗೊಳ್ಳುವ ಇಚ್ಛೆ ಂದಾಗಲಿ ದಾಳೀಮಾಡುತ್ತ ಬಂದಿರುವರು. ಕ್ರಿ. ಪೂ. ೫೧೯ರಲ್ಲಿ ಇರಾಣದ ಅರಸ ದ ಡರಾಯುಸನ ಸೇನಾಪತಿಯಾದ ಸ್ಕಾಯಲಾಕ್ಸನೆಂಬವನು ಹಿಂದುಸ್ತಾನದ ೀಲೆ ದಾಳೀಮಾಡಿ ಸಿಂಧುನದಿಯ ಪೂರ್ವಭಾಗವನ್ನು ಗೆದ್ದುಕೊಂಡನು. ಆಗ ಂಧುಪ್ರಾಂತವು ಫಲದ್ರೂಪವಾಗಿತ್ತು. ಅವನು ಈ ಪ್ರಾಂತಕ್ಕೆ ಹಿರಾತ, ಕಂದಹಾರ, ಂಜಾಬದ ವಾಯವ್ಯಭಾಗ ಇವುಗಳನ್ನು ಕೂಡಿಸಿ ಒಬ್ಬ ಸುಬೇದಾರನನ್ನು ನೇಮಿಸಿ ನು.

೨. **ಗ್ರೀಕರ ದಾಳಿ**—ಬಳಿಕ ಕ್ರಿ. ಪೂ. ೩೨೭ರಲ್ಲಿ ಗ್ರೀಸದೇಶದ ಬಾಧ ನಾದ ಅಲೇಕ್ಸಾಂದರ ಅಥವಾ ಸಿಕಂದರನು ಇರಾಣವನ್ನು ಗೆದ್ದುಕೊಂಡು ಹಿಂದು ನದ ಮೇಲೆ ದಂಡೆತ್ತಿ ಬಂದನು. ಅವನು ಅಟಕಪಟ್ಟಣದ ಹತ್ತಿರ ಸಿಂಧುನದಿ ನ್ನು ದಾಟಿ ಪಂಜಾಬವನ್ನು ಹೊಕ್ಕನು. ಆ ಕಾಲಕ್ಕೆ ಅಂಭಿ ಎಂಬ ಅರಸನು ವಳಪಿಂಡಿಯ ಹತ್ತಿರಿರುವ ತಕ್ಷಶಿಲೆಯಲ್ಲಿ ರಾಜ್ಯವಾಳುತ್ತಿದ್ದನು. ತಕ್ಷಶಿಲೆಯಲ್ಲಿ ಂದು ದೊಡ್ಡ ವಿದ್ಯಾಪೀಠವಿದ್ದು ವಿದ್ಯಾಭ್ಯಾಸಕ್ಕಾಗಿ ಎಲ್ಲ ಕಡೆಯ ಜನರು ಲ್ಲಿಗೆ ಬರುತ್ತಿದ್ದರು. ಶಾಸ್ತ್ರ, ಕಲೆ, ಆಯುರ್ವೇದ ಇವುಗಳ ಅಧ್ಯಯನವು ಅಲ್ಲಿ ೀಯುತ್ತಿತ್ತು. ಅಂಭಿರಾಜನು ಸಿಕಂದರನಿಗೆ ೫೦೦೦ ಸೈನ್ಯವನ್ನೂ ಆಹಾರದ ಮಸ್ತ್ರಿಗಳನ್ನೂ ಕೊಟ್ಟು ಅವನಿಗೆ ಸಹಾಯಮಾಡಿದನು. ವೇದಕಾಲದ ರೂಢಿ ಂತೆ ಆಗಿನ ಜನರು ಹೊರಗಿನಿಂದ ಬಂದ ಅತಿಥಿಗಳಿಗೆ ಸೊಕ್ಕಿದ ಎತ್ತುಗಳನ್ನು ತ್ಕಾರಕ್ಕಾಗಿ ಅರ್ಪಿಸುತ್ತಿದ್ದರು. ಪಂಜಾಬದ ಉಳಿದ ಚಿಕ್ಕ ಚಿಕ್ಕ ಅರಸರು ಸಿಕಂದರ ನ್ನು ಕೆಣಕಲಿಲ್ಲ. ಆದರೆ ಪೌರಸ (ಪುರೂರವಸ್)ನೆಂಬ ಶೂರ ಅರಸನು ಸಿಕಂದರ ಿ ಎದುರಾದನು. ಪೌರಸನು ೬॥ ಫೂಟು ಎತ್ತರವಾಗಿದ್ದು ಒಳ್ಳೇ ಬಲಿಷ್ಠನಿದ್ದನು. ನು ಮೂವತ್ತು ಸಾವಿರ ಕಾಲಾಳು, ನಾಲ್ಕುಸಾವಿರ ಕುದುರೆಯ ಸವಾರರು, ಎರಡು ವಿರ ಆನೆಗಳು, ಮುನ್ನೂರು ರಥಗಳೊಡನೆ ಜೆಹಲವ್ ನದಿಯ ಪೂರ್ವ ದಂಡೆಯ ತ್ತರ ತಳವೂರಿದನು. ಸಿಕಂದರನು ಧೂರ್ತನೂ ಸಾಹಸಿಯೂ ಯುದ್ಧಕಲೆಯಲ್ಲಿ ಪ್ಣನೂ ಇದ್ದುದರಿಂದ ಪೌರಸನಿಗೆ ತಾನು ಎಲ್ಲಿ ಹೊಳೆಯನ್ನು ದಾಟುವನೆಂಬ ನ್ನು ತಿಳಿಯಗೊಡಲಿಲ್ಲ. ಅವನು ಒಂದುದಿನ ರಾತ್ರಿ ತನ್ನ ಸೈನ್ಯದ ಕೆಲವು ಭಾಗ ನ್ನು ತೆಗೆದುಕೊಂಡು ಹತ್ತೆಂಟು ಮೈಲಿನ ಮೇಲೆ ಹೊಳೆಯನ್ನು ದಾಟಿ ಹಗೆಗಳ ೀಲೆ ಒಮ್ಮೆಲೆ ಬಿದ್ದನು. ಪೌರಸನಾದರೂ ಶೂರತನದ ಪರಮಾವಧಿಯನ್ನು

ತೋರಿಸಿ ಕಾದಿದನು. ಗ್ರೀಕರು ಬಾಣದ ಮಳೆಸುರಿಸಿ ಪೌರಸನನ್ನು ಮೂರ್ಛೆಗೊಳಿ
ದರು. ಅವನು ನಿರುಪಾಯನಾಗಿ ಸಿಕಂದರನ ವಶವಾದನು. ಆಗ ಸಿಕಂದರನು-
"ನಾನು ನಿನ್ನನ್ನು ಹೇಗೆ ನಡಿಸಿಕೊಳ್ಳಬೇಕು" ಎಂದು ಪೌರಸನನ್ನು ಕೇಳಲು 'ಅರ
ನಂತೆ' ಎಂದು ಅವನು ಉತ್ತರಕೊಟ್ಟನು. ಪೌರಸನ ಈ ಮಾತಿನಿಂದ ಸಿಕಂದರನ
ಸಂತುಷ್ಟನಾಗಿ ಅವನ ರಾಜ್ಯವನ್ನು ತಿರುಗಿ ಕೊಟ್ಟನು.

ಸಿಕಂದರನು ಪರಾಕ್ರಮಿಯೂ ಮಹತ್ವಾಕಾಂಕ್ಷಿಯೂ ಇದ್ದದರಿಂದ ಇ
ಹಿಂದುಸ್ತಾನವನ್ನೇ ಯಾಕೆ ಜಗತ್ತನ್ನೇ ಕೈವಶಮಾಡಿಕೊಳ್ಳಬೇಕೆಂದು ಹವಣಿಸಿದನ
ಮತ್ತು ಆ ಕಾಲಕ್ಕೆ ಪ್ರಬಲ ರಾಷ್ಟ್ರವಾಗಿದ್ದ ಪಾಟಲೀಪುತ್ರ (ಪಾಟಣಾ) ವನ್ನು ಗೆದ
ಕೊಂಡರೆ ಇಡೀ ಹಿಂದುಸ್ತಾನವನ್ನೇ ಗೆದ್ದಂತಾಗುವದೆಂದು ಅವನು ತಿಳಿದಿದ್ದನು. ಆದ
ಅವನ ದಂಡಿನವರು ಬಹುದಿವಸ ಪರದೇಶದಲ್ಲಿದ್ದು ಬೇಸತ್ತಿದ್ದುದರಿಂದಲೂ ಪಂಜ
ಬದ ಉಷ್ಣಹವೆಯು ಅವರಿಗೆ ಸಹನವಾಗದ್ದರಿಂದಲೂ ಯುದ್ಧಮಾಡಲಿ
ಒಡಂಬಡಲಿಲ್ಲ. ಆದ್ದರಿಂದ ಸಿಕಂದರನು ನಿರುಪಾಯನಾಗಿ ಸಿಂಧುನದಿಯ ಮಾಗ
ದಿಂದ ಸ್ವದೇಶಕ್ಕೆ ತೆರಳಿದನು. ಆದರೆ ಗ್ರೀಸದೇಶವನ್ನು ಮುಟ್ಟುವ ಪೂರ್ವದಲ್ಲಿಯೆ
ಅವನು ಬಾಬಿಲನದಲ್ಲಿ ಜ್ವರದಿಂದ ಪೀಡಿತನಾಗಿ ತನ್ನ ೩೩ನೇ ವರ್ಷದ ವಯಸ್ಸಿನ
ಮರಣಹೊಂದಿದನು. ಒಬ್ಬ ಇತಿಹಾಸಕಾರನು ಇವನ ವಿಷಯವಾಗಿ ಅನ್ನುವದೇನ
ದರೆ --'ಅನೇಕ ಆಯುಷ್ಯಕ್ರಮಗಳಲ್ಲಿ ಮಾಡತಕ್ಕ ಸಾಹಸದ ಕಾರ್ಯಗಳನ್ನು ಸಿಕಂ
ದರನು ೧೩ ವರ್ಷಗಳಲ್ಲಿಯೇ ತೀರಿಸಿದನು.' ಸಿಕಂದರನು ಹೋಗುವಾಗ ಅಲ್ಲಲ್ಲಿ
ಗ್ರೀಕಸೈನ್ಯದ ತಾಣ್ಯಗಳನ್ನಿಟ್ಟು ರಾಜ್ಯವ್ಯವಸ್ಥೆಗಾಗಿ ಪ್ರತಿನಿಧಿಗಳನ್ನು ನೇಮಿಸಿದನ
ಇದರಿಂದ ಅವನು ಹಿಂದುಸ್ತಾನಕ್ಕೆ ಮರಳಿಬರುವ ಆಲೋಚನೆ ಮಾಡಿದ್ದನೆಂದ
ಕಂಡುಬರುವದು. ಸಿಕಂದರನ ಕೂಡ ಅನೇಕ ಗ್ರೀಕ ಪಂಡಿತರು ಇಲ್ಲಿಗೆ ಬಂದಿದ್ದರ
ಅವರು ಆ ಕಾಲದ ಹಿಂದುಸ್ತಾನದ ಸ್ಥಿತಿಯನ್ನು ಬರೆದಿಟ್ಟಿರುವರು. ಅವರ ಮೇಲಿಂ
ಹಿಂದೂಜನರು ನಾಗರಿಕತೆಯಲ್ಲಿ ಗ್ರೀಕರಿಗಿಂತ ಮುಂದುವರಿದಿದ್ದರೆಂದು ತಿಳಿಯುವದ
ಗ್ರೀಕರು ಹಿಂದೂಧರ್ಮ ಹಾಗು ತತ್ವಜ್ಞಾನಗಳ ಜ್ಞಾನವುಮಾಡಿಕೊಂಡದ್ದರಿಂ
ಪಾಶ್ಚಾತ್ಯ ರಾಷ್ಟ್ರಗಳಮೇಲೆ ಅದರ ಪರಿಣಾಮವಾಯಿತು. ನಾಣ್ಯಗಳನ್ನು ಮುದ್ರಿ
ವದು, ಶಿಲ್ಪಕಲೆ ಮೊದಲಾದ ಗ್ರೀಕರ ಕೆಲವು ಕಲೆಗಳನ್ನು ಹಿಂದೂಜನರು ಕಲಿ
ಕೊಂಡರು. ಪಾಶ್ಚಾತ್ಯ ರಾಷ್ಟ್ರಗಳ ಸಂಗಡ ಹಿಂದುಸ್ತಾನದ ಬಳಿಕೆಯು ಹೆಚ್ಚಾ
ವ್ಯಾಪಾರವು ಭರದಿಂದ ಸಾಗತೊಡಗಿತು. ಸಿಕಂದರನ ಮರಣದನಂತರ ಅವ
ಸೇನಾಪತಿಗಳು ಅವನ ವಿಸ್ತಾರವಾದ ರಾಜ್ಯವನ್ನು ಹಂಚಿಕೊಂಡರು.

§ ೩. ಕ್ರಿ. ಪೂ. ೪ನೇ ಶತಮಾನದಲ್ಲಿ ಹಿಂದುಸ್ತಾನದ ಸ್ಥಿತಿ

ಪಂಜಾಬ ಸಿಂಧ ಪ್ರಾಂತಗಳಲ್ಲಿ ಅನೇಕ ಸಣ್ಣ ಸಣ್ಣ ರಾಜ್ಯಗಳಿದ್ದವು. ಅಂಭಿ

ತಕ್ಷಶಿಲೆಯಲ್ಲಿ, ಪೌರಸನು ಜೆಹಲಮ ಚಿನಾಬ ನದಿಗಳ ನಡುವಿನ ಪ್ರಾಂತವನ್ನು ಆಳುತ್ತಿದ್ದರು. ಇವರ ರಾಜ್ಯಗಳಲ್ಲದೆ ಅನೇಕ ಚಿಕ್ಕ ಚಿಕ್ಕ ಪ್ರಜಾಸತ್ತಾತ್ಮಕ ರಾಜ್ಯಗಳೂ ಇದ್ದವು. ಅವುಗಳಲ್ಲಿ ಮೂಲವರು, ಕ್ಷುದ್ರಕರು ಎಂಬ ಕುಲದ ಜನರು ಸ್ವತಂತ್ರವಾಗಿ ರಾಜ್ಯಕಾರಭಾರವನ್ನು ನಡೆಸುತ್ತಿದ್ದರು. ಸಿಂಧದ ನದಿಗಳ ಪ್ರವಾಹವು ಮೊದಲು ತೀರ ಬೇರೆಯಾಗಿತ್ತು.

ಜನರ ಸಾಂಪತ್ತಿಕ ಸ್ಥಿತಿಯು ಉತ್ತಮತರದ್ದಿತ್ತು. ಪರದೇಶಗಳಿಂದ ಸಹ ವಿಲಾಸದ ಪದಾರ್ಥಗಳನ್ನು ತರಿಸುತ್ತಿದ್ದರು. ತಮ್ಮಲ್ಲಿಯ ಸರಕುಗಳನ್ನು ಪರದೇಶಗಳಿಗೆ ಒಯ್ಯುತ್ತಿದ್ದರು. ಉತ್ತಮಪ್ರಕಾರದ ಆನೆಗಳು ಅಂಗ (ಮೊಂಗೀರ), ಕಲಿಂಗ (ಓಡಿಸಾ) ದೇಶಗಳಲ್ಲಿ ದೊರೆಯುತ್ತಿದ್ದವು. ದಕ್ಷಿಣದೇಶದಿಂದ ಬಂಗಾರ, ವಜ್ರ ಮುತ್ತು, ಶಂಖ ಮೊದಲಾದವು ಉತ್ತರಕ್ಕೆ ಬರುತ್ತಿದ್ದವು. ಉತ್ತರದಿಂದ ಕಂಬಳಿ, ತೊಗಲು, ಕುದುರೆಗಳು ಉಳಿದಕಡೆಗೆ ಹೋಗುತ್ತಿದ್ದವು. ಕಾಶಿ, ಮದುರಾ, ಕೊಂಕಣ, ಚೀನಗಳಿಂದ ನೂಲಿನ ಮತ್ತು ರೇಶಿಮೆಯ ಬಟ್ಟೆಗಳು ಬರುತ್ತಿದ್ದವು.

ಮಥುರೆಯ ಶೂರಸೇನೀ ಜನರು ಹಿರಾಕ್ಲೀಸನ ಅಂದರೆ ಕೃಷ್ಣನ ಪೂಜೆಯನ್ನು ಮಾಡುತ್ತಿದ್ದರು. ಮಳೆಯಾಗಬೇಕೆಂದು ಇಂದ್ರನನ್ನು ಪೂಜಿಸುತ್ತಿದ್ದರು. ಗಂಗಾ ನದಿಯ ಪಾವಿತ್ರ್ಯವನ್ನು ಜನರು ಅರಿತಿದ್ದರು. ಬ್ರಾಹ್ಮಣರ ಪ್ರಾಬಲ್ಯವು ಕಡಿಮೆಯಾಗಿದ್ದಿಲ್ಲ. ಅವರು ಗೋಮಾಂಸವನ್ನು ಬಿಟ್ಟು ಉಳಿದ ಮಾಂಸವನ್ನು ತಿನ್ನುತ್ತಿದ್ದರು.

೧೦ನೇ ಅಧ್ಯಾಯ

ಮೌರ್ಯರು

೧. ಚಂದ್ರಗುಪ್ತನು:— ಸಿಕಂದರ ಬಾದಶಹನು ಹಿಂದುಸ್ತಾನಕ್ಕೆ ಬಂದಾ
ಪಾಟಲೀಪುತ್ರದಲ್ಲಿ ನಂದವಂಶದ ಕಡೆಯ ಅರಸನಾದ ಮಹಾಪದ್ಮನೆಂಬವನು ಆಳು
ದ್ದನು. ಇವನ ದಾಸೀಪುತ್ರನಾದ ಚಂದ್ರಗುಪ್ತನು ಆಗ ತಕ್ಷಶಿಲೆಯ ವಿಶ್ವವಿದ್ಯಾಲಯ
ದಲ್ಲಿ ವಿದ್ಯಾರ್ಥಿಯಾಗಿದ್ದನು. ಅವನು ಗ್ರೀಕರಿಂದ ಯುದ್ಧಕಲೆಯನ್ನು ಕಲಿತು ಕೊ
ಡನು. ಮುಂದೆ ಆರ್ಯ ಚಾಣಕ್ಯನೆಂಬ ತಂತ್ರಗಾರನ ಸಹಾಯದಿಂದ ನಂದವಂಶದ
ರನ್ನು ಪಟ್ಟದಿಂದ ತಳ್ಳಿ ಕ್ರಿ. ಪೂ. ೩೨೨ ರಲ್ಲಿ ಪಾಟಲೀಪುತ್ರದ ಪಟ್ಟವನ್ನೇರಿದನ
ಇವನ ವಂಶದದರಿಗೆ ಮೌರ್ಯರೆಂದು ಅನ್ನುವರು. ಚಂದ್ರಗುಪ್ತನು ನುರೆ ಎಂಬವ
ಮಗನಾದ್ದರಿಂದ ಅವನ ವಂಶಕ್ಕೆ ಮೌರ್ಯವೆಂಬ ಹೆಸರು ಬಂತು.

೨. ಚಂದ್ರಗುಪ್ತನ ಆಡಳಿತ:— ಚಂದ್ರಗುಪ್ತನು ಈಗಿನ ಬಿಹಾರ ಸ
ಯುಕ್ತಪ್ರಾಂತಗಳ ಅರಸನಾಗಿದ್ದನು. ಮುಂದೆ ಪಂಜಾಬ, ಅಫಗಾಣಿಸ್ತಾನ, ಕಾ
ವಾಡ ಪ್ರಾಂತಗಳನ್ನು ಗೆದ್ದು ತನ್ನ ರಾಜ್ಯಕ್ಕೆ ಕೂಡಿಸಿ ಸಾರ್ವಭೌಮನಾದನು. ಇವ
ಕೈಕೆಳಗೆ ೧೧೭ ಮಂದಿ ಮಾಂಡಲಿಕರಿದ್ದರು. ಹಿಂದುಸ್ತಾನದಲ್ಲಿ ಏಕಛತ್ರಾಧಿಪತ್ಯವನ
ಸ್ಥಾಪಿಸಿದವರಲ್ಲಿ ಇವನೇ ಮೊದಲಿನವನು. ಇವನ ಆಳಿಕೆಯಲ್ಲಿ ರಾಜ್ಯವ್ಯವಸ್ಥೆಯ
ಚೆನ್ನಾಗಿದ್ದು ಮಗಧದೇಶವು ಒಳ್ಳೇ ಘನತೆಗೇರಿತು. ರಾಜಧಾನಿಯ ಸುತ್ತಲು ಕಂದ
ವನ್ನು ಅಗಿಸಿ ೬೪ ಅಗಸೇಬಾಗಿಲುಗಳನ್ನು ಕಟ್ಟಿಸಿದನು. ರಾಜ್ಯಕಾರಭಾರಕ್ಕಾ
ಬೇರೆ ಬೇರೆ ಆರು ಸಭೆಗಳನ್ನು ನೇಮಿಸಿದ್ದನು. ಮತ್ತು ಗೊತ್ತುಪಡಿಸಿದ ವೇಳೆಯ
ಸ್ವತಃ ಪ್ರಜೆಗಳ ದೂರುಗಳನ್ನು ಕೇಳಿಕೊಳ್ಳುತ್ತಿದ್ದನು. ಬೇರೆ ಬೇರೆ ಪ್ರಾಂತಗಳ ಕಾ
ಭಾರವನ್ನು ಸುಬೇದಾರರೆಂಬ ಅಧಿಕಾರಸ್ಥರು ಸಾಗಿಸುತ್ತಿದ್ದರು. ಚಂದ್ರಗುಪ್ತನ
ಅಲ್ಲಿಯ ವರ್ತಮಾನವನ್ನು ಗುಪ್ತಚಾರರಿಂದ ತಿಳಕೊಳ್ಳುತ್ತಿದ್ದನು. ಬೇಟೆಯಾಡುವ
ರಲ್ಲಿಯೂ ಪಶುಪಕ್ಷಿಗಳನ್ನು ಕಾದಾಡಿಸುವದರಲ್ಲಿಯೂ ಇವನಿಗೆ ವಿಶೇಷವಾಗಿ ಪ್ರೀ
ಯವಿತ್ತು.

೩. ಮೆಗಾಸ್ಥಿನೀಸ:— ಸಿಕಂದರನ ಪಶ್ಚಿಮ ಏಶಿಯಾಪ್ರಾಂತದ ಸುಬೆ
ದಾರನಾದ ಸೆಲ್ಯೂಕಸನು ಚಂದ್ರಗುಪ್ತನಿಗೆ ತನ್ನ ಮಗಳನ್ನು ಕೊಟ್ಟು ಅವನ ಸ್ನೇಹಿ
ತನಾಗಿದ್ದನು. ಅವನು ಚಂದ್ರಗುಪ್ತನ ದರಬಾರಿಗೆ ಮೆಗಾಸ್ಥಿನೀಸನೆಂಬ ವಕೀಲನನ
ಕಳುಹಿಸಿಕೊಟ್ಟನು. ಮೇಗಾಸ್ಥಿನೀಸನು ಹಿಂದುಸ್ತಾನದ ವಿಷಯವಾಗಿ ಕೆಲವು ಸಂ
ತಿಗಳನ್ನು ಬರೆದಿಟ್ಟಿರುವನು. ಅವು ಯಾವವೆಂದರೆ—

" ಈ ಕಾಲದಲ್ಲಿ ಹಿಂದುಸ್ತಾನದೊಳಗೆ ೧೧೭ ರಾಜ್ಯಗಳಿದ್ದವು. ಹಿಂದು ಜನರ
ಸತ್ಯನಿಷ್ಠರೂ ಶೂರರೂ ಆಗಿದ್ದು ಒಕ್ಕಲತನ ಕೈಗಾರಿಕೆಗಳಲ್ಲಿ ನಿಪುಣರಿದ್ದರು. ಹೆಂ

ರು ಸುಶೀಲರೂ ಪತಿವ್ರತೆಯರೂ ಆಗಿದ್ದರು. ಕಳ್ಳರೇ ಇಲ್ಲದ್ದರಿಂದ ಜನರು ತಮ್ಮ ಮನೆಗಳಿಗೆ ಕೀಲಗಳನ್ನು ಹಾಕುತ್ತಿದ್ದಿಲ್ಲ. ಜನರಲ್ಲಿ ಜಗಳಗಳು ಕಡಿಮೆ. ಇದ್ದವ್ಯಾಜ್ಯಗಳನ್ನು ಪಂಚರ ಮುಖಾಂತರವಾಗಿ ತೀರಿಸಿಕೊಳ್ಳುತ್ತಿದ್ದರು. ಅದರಿಂದ ಕಚೇರಿಯ ಕಟ್ಟಳೆಯನ್ನು ಹತ್ತುವ ಪ್ರಸಂಗವು ಅವರಿಗೆ ಕ್ವಚಿತ್ತಾಗಿ ಬರುತ್ತಿತ್ತು. ಹಳ್ಳಿಯವರು ಸ್ವತಂತ್ರವಾಗಿ ಗ್ರಾಮದ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದರು. ಪ್ರಜೆಗಳು ರಾಜನಿಷ್ಠರಾಗಿ ಸುಖ-ಸಮಾಧಾನಗಳಿಂದಿದ್ದರು.

೪. ಚಂದ್ರಗುಪ್ತನ ಧರ್ಮ:—ಇವನ ಮುಖ್ಯ ಮಂತ್ರಿಯೂ ಗುರುವೂ ಆದ ಚಾಣಕ್ಯನು ಬ್ರಾಹ್ಮಣನು. ಆದದರಿಂದ ಚಂದ್ರಗುಪ್ತನೂ ಬಾಹ್ಮಣಧರ್ಮವನ್ನು ಅನುಸರಿಸುವವನಿದ್ದನೆಂದು ಹೇಳಬಹುದು. ಆದರೆ ಈ ಕಾಲಕ್ಕೆ ಜೈನಧರ್ಮದ ಪ್ರಾಬಲ್ಯವು ವಿಶೇಷವಾಗಿತ್ತು. ಶೈಶುನಾಗರೂ, ನಂದರೂ, ಮೌರ್ಯರೂ ಜೈನಧರ್ಮದ ವಿಷಯವಾಗಿ ಆಸ್ಥೆಯುಳ್ಳವರಿದ್ದರು. ಆದದರಿಂದ ಚಂದ್ರಗುಪ್ತನು ಸಹ ಈ ಧರ್ಮದವರಿಗೆ ಆಶ್ರಯಕೊಟ್ಟಿದ್ದನೆಲ್ಲದೆ ತಾನೂ ಈ ಧರ್ಮದಂತೆ ಆಚರಿಸಲು ಯತ್ನಿಸುತ್ತಿದ್ದನು. ಒಮ್ಮೆ ಇವನ ರಾಜ್ಯದಲ್ಲಿ ಭಯಂಕರ ಬರಬೀಳಲು ಭದ್ರಬಾಹು ಎಂಬ ಜೈನಗುರುವು ತನ್ನ ೧೨೦೦೦ ಶಿಷ್ಯರನ್ನು ಕರಕೊಂಡು ಮೈಸೂರ ಸಂಸ್ಥಾನದಲ್ಲಿಯ ಶ್ರವಣಬೆಳಗುಳಕ್ಕೆ ಹೋದನು. ಅವನ ಸಂಗಡ ಚಂದ್ರಗುಪ್ತನೂ ರಾಜ್ಯವನ್ನು ಮಗನಾದ ಬಿಂದುಸಾರನಿಗೆ ಒಪ್ಪಿಸಿ ಹೋದನೆಂದು ಜೈನರು ಹೇಳುತ್ತಾರೆ. ಅಲ್ಲಿ ಭದ್ರಬಾಹುವು ತೀರಿ ಕೊಂಡನು. ಚಂದ್ರಗುಪ್ತನು ಸಹ ಜೈನಪದ್ಧತಿಯಂತೆ ಉಪವಾಸದಿಂದ ದೇಹ ಸವಿಸಿ ಶ್ರವಣಬೆಳಗುಳದಲ್ಲಿಯೇ ತೀರಿಕೊಂಡನು. ಹೀಗೆ ೨೪ವರ್ಷ ಒಳ್ಳೇ ವೈಭವದಿಂದ ರಾಜ್ಯವಾಳಿ ಜೈನಯತಿಯಂತೆ ನಿರ್ವಾಣವನ್ನು ಹೊಂದಿದನು.

೫. ಬಿಂದುಸಾರ:— ಚಂದ್ರಗುಪ್ತನ ತರುವಾಯ ಅವನ ಮಗನಾದ ಬಿಂದುಸಾರನು ಅಥವಾ ಅಮಿತ್ರಘಾತನು (ಶತ್ರುಗಳನ್ನು ಕೊಲ್ಲುವವ) ಪಟ್ಟಕ್ಕೆ ಬಂದನು. ಇವನು ಸಹ ತಂದೆಯಂತೆ ಶೂರನಿದ್ದು ದಕ್ಷಿಣಕ್ಕೆ ಮೈಸೂರಪ್ರಾಂತದವರೆಗೆ ಎಲ್ಲ ಪ್ರದೇಶವನ್ನು ಗೆದ್ದುಕೊಂಡು ತನ್ನ ರಾಜ್ಯವಿಸ್ತಾರವನ್ನು ಬೆಳಿಸಿದನು. ಇವನ ಕಾಲಕ್ಕೆ ಇಜಿಪ್ತದ ಟಾಲೆಮಿ ಫಿಲಾಡೆಲ್ಫಾಸ್ ಎಂಬ ಅರಸನು ಡಾಯನೀಸಿಯಸ್ ಎಂಬ ರಾಯಭಾರಿಯನ್ನು ಕಳಿಸಿದ್ದನು. ಬಿಂದುಸಾರನ ರಾಜ್ಯಕಾರಭಾರದ ವಿಷಯಕ್ಕೆ ವಿಶೇಷ ಸಂಗತಿಗಳು ಇನ್ನೂ ಗೊತ್ತಾಗಿಲ್ಲ.

೧೧ನೇ ಅಧ್ಯಾಯ

ಮೌರ್ಯಕಾಲದ ಪರಿಸ್ಥಿತಿ

೧. **ಸಾಮಾನ್ಯ ವಿವೇಚನೆ:**-ಮೌರ್ಯಕಾಲದ ರಾಜ್ಯವ್ಯವಸ್ಥೆ, ದಂಡನೀ ಸೈನ್ಯ, ಸಮಾಜದ ಸ್ಥಿತಿ ಮೊದಲಾದ ಅನೇಕ ಸಂಗತಿಗಳ ಬಗೆ ಚಂದ್ರಗುಪ್ತನ ಮಂ ಯಾದ ಚಾಣಕ್ಯನು ಒಂದು ವಿಸ್ತೃತವಾದ ಗ್ರಂಥವನ್ನು ಬರೆದಿದ್ದಾನೆ. ಆ ಗ್ರಂಥ ೧೯೦೫ನೇ ಇಸವಿಯಲ್ಲಿ ಮೊದಲನೇ ಸಾರಿ ಪ್ರಸಿದ್ಧವಾಯಿತು. ಈ ಗ್ರಂಥಕ್ಕೆ ಕೌ ಲ್ಯನ ಅರ್ಥಶಾಸ್ತ್ರವೆನ್ನುವರು. ಇದೇ ಪ್ರಕಾರದ ಗ್ರಂಥವನ್ನು ಮೂಕಿಯಾವೆಲಿ ಎಂ ಇಟಲಿಯು ಪ್ರಸಿದ್ಧ ಮುತ್ಸದ್ದಿಯು ೧೬ನೇ ಶತಕದಲ್ಲಿ ಪ್ರಿನ್ಸ (ರಾಜಕುಮಾರ) ಎಂ ಹೆಸರಿನಿಂದ ಪ್ರಸಿದ್ಧಿಸಿದನು. ಅದರಲ್ಲಿ ವರ್ಣಿಸಿದ ಸಂಗತಿಗಳ ಮೇಲಿಂದ ನೋ ದರೆ ಮೌರ್ಯಕಾಲದ ರಾಜ್ಯವ್ಯವಸ್ಥೆಯು ಅಕಬರನ ಕಾಲದ ರಾಜ್ಯವ್ಯವಸ್ಥೆಗಿ ಮಿಗಿಲಾಗಿತ್ತೆಂದು ವಿನಸೆಂಟ ಸ್ಮಿಥರೆಂಬ ಪ್ರಸಿದ್ಧ ಇತಿಹಾಸಕಾರರು ಅಭಿಪ್ರಾಯ ಪ ತ್ತಾರೆ.

೨. **ರಾಜಧಾನಿಯಾದ ಪಾಟಲಿಪುತ್ರ:**—ಈ ರಾಜಧಾನಿಯು ಶೋ ನದಿಯ ದಂಡೆಗೆ ೯ ಮೈಲು ಉದ್ದವಾಗಿಯೂ ೨ ಮೈಲು ಅಗಲವಾಗಿಯ ಹಬ್ಬಿತ್ತು; ಈಗಿನ ಪಾಟಣಾ, ಬಂಕಿಪುರ, ಮತ್ತು ಅನೇಕ ಗ್ರಾಮಗಳು ಈ ವಿಸ್ತೀ ವಾದ ಸ್ಥಳವನ್ನು ಆಕ್ರಮಿಸಿಕೊಂಡಿವೆ ಇದಕ್ಕೆ ಸಮೀಪವಾಗಿ(ಭಾಗೀರಥೀ ದಂಡೆಗಿ ಕುಸುಮಪುರವೆಂಬ ಪ್ರಾಚೀನ ರಾಜಧಾನಿಯೂ ಪಾಟಲಿಪುತ್ರದಲ್ಲಿ ಸಮಾವೇ ವಾಗಿತ್ತು. ಪಟ್ಟಣದ ಸುತ್ತಲೂ ಕಟ್ಟಿಗೆಯ ಭದ್ರವಾದ ಅವಾರವಿತ್ತು. ೬೪ ಅಗ ಬಾಗಿಲುಗಳಿದ್ದು ೫೭೦ ಬುರುಜುಗಳಿದ್ದವು. ಅವಾರದ ಸುತ್ತಲೂ ನೀರಿನಿಂದ ತುಂ ದೊಡ್ಡ ಕಂದಕವಿತ್ತು.

ಅರಮನೆಯನ್ನು ಕಟ್ಟಿಗೆಯಿಂದಲೇ ಬಹು ಸುಂದರವಾಗಿ ಕಟ್ಟಿದ್ದರು. ಬಂ ರದ ಮಲಮು ಮಾಡಿದ ಕಂಬಗಳ ಸುತ್ತಲೂ ಸುವರ್ಣದ ದ್ರಾಕ್ಷಾಲತೆಗಳೂ ಬೆಳ್ಳಿ ಪಕ್ಷಿಗಳೂ ಕಂಗೊಳಿಸುತ್ತಿದ್ದವು. ಅರಮನೆಯ ಸುತ್ತಲೂ ಸುಂದರವಾದ ಉದ ವಿದ್ದು ಅದರಲ್ಲಿ ಅನೇಕ ನೀರಿನ ಹೌದುಗಳಿದ್ದವು. ಅರಮನೆಯಲ್ಲಿ ಎಲ್ಲಕತೆಗೆ ಬಂಗಾ ಪಾತ್ರೆಗಳಿದ್ದವು. ನೀರು ತುಂಬಲಿಕ್ಕೆ ಸಹ ೬ ಫೂಟು ಎತ್ತರವಾದ ಬಂಗಾ ಕೊಳಗಗಳಿದ್ದವು. ಅರಸನು ಬಂಗಾರದ ಪಲ್ಲಕ್ಕಿಯಲ್ಲಾಗಲಿ ಅಂಬಾರಿಯಲ್ಲಾ ಕುಳಿತು ಹೊರಗೆ ಹೊರಡುವನು. ಮೈಯೊಳಗೆ ಬಂಗಾರದ ಜರದಿಂದ ಸುಳುವು ಮಲಮಲಿನ ನಿಲುವಂಗಿಯನ್ನು ಹಾಕಿಕೊಳ್ಳುವನು ಅರಮನೆಯಲ್ಲಿ ಪುಷ್ಟಾಂಗ ಹೆಣ್ಣುಮಕ್ಕಳ ಸಶಸ್ತ್ರ ಕಾವಲು ಇರುತ್ತಿತ್ತು. ಅರಸನನ್ನು ನೃತ್ಯಗಾಯನದಿಂದ ಸಂ ಷಪಡಿಸುವದಕ್ಕಾಗಿ ನರ್ತಕಿಯರ ಪರಿವಾರವು ದೊಡ್ಡದಿರುತ್ತಿತ್ತು. ಅವರು ಅ ಸೇವೆಯನ್ನು ಮಾಡುತ್ತಿದ್ದರು.

೩. **ಕ್ರೀಡಾ ವಿನೋದಗಳು:**—ಆಗಿನ ಕಾಲದ ಅರಸರು ಬೇಟೆಯನ್ನಾಡುವದಕ್ಕೆ ಒಳ್ಳೇ ಉತ್ಸುಕತೆಯುಳ್ಳವರಿದ್ದರು. ಅವರ ದೆಶೆಯಿಂದ ದೊಡ್ಡ ದೊಡ್ಡ ಹಳವುಗಳನ್ನು ಕಾದಿಡುತ್ತಿದ್ದರು. ಅಶೋಕನು ಬೌದ್ಧಧರ್ಮವನ್ನು ಸ್ವೀಕರಿಸಿದ ಮೇಲೆ ಬೇಟೆಯಾಡುವದನ್ನು ಬಿಟ್ಟುಕೊಟ್ಟನು. ಚಂದ್ರಗುಪ್ತನು ಜೈನಧರ್ಮದ ಅಭಿಮಾನಿಯಾಗಿದ್ದರೂ ಬೇಟೆಯಾಡುವದನ್ನು ಬಿಡಲಿಲ್ಲ. ಟಗರು, ಹೋರಿ, ಆನೆ ಇವುಗಳ ಕಾದಾಟವನ್ನು ಹಚ್ಚುತ್ತಿದ್ದರು. ರಥಗಳಿಗೆ ನಡುವೆ ಕುದುರೆಗಳನ್ನೂ ಬಡಿಗೆ ಎತ್ತುಗಳನ್ನೂ ಹೂಡಿ ಓಡಿಸುತ್ತಿದ್ದರು. ಈ ಕ್ರೀಡಾ ಸ್ಥಳದ ಉದ್ದಳತೆಯು ೬೦೦ ಯಾರ್ಡು ಇತ್ತು.

೪. **ರಾಜ್ಯಕಾರಭಾರ** :— ಅರಸರು ಅನಿಯಂತ್ರಿತರಾಗಿದ್ದರೂ ಮಂತ್ರಿಗಳೂ ಬ್ರಾಹ್ಮಣರೂ ಹೇಳುತ್ತಿದ್ದ ಆಲೋಚನೆಯನ್ನು ತಿರಸ್ಕರಿಸುತ್ತಿರಲಿಲ್ಲ. ಈ ವಿಷಯದಲ್ಲಿ ಅರ್ಥಶಾಸ್ತ್ರವು ಹೇಳಿದ್ದೇನೆಂದರೆ–" ರಾಜ್ಯಪದವನ್ನು ಸಹಾಯವಿಲ್ಲದೆ ಸಾಗಿಸುವದು ಅಸಭವವು. ಒಂದೇ ಚಕ್ರದಿಂದ ರಥವು ನಡೆಯಲಾರದು. ಆದ್ದರಿಂದ ಅರಸನು ಮಂತ್ರಿಗಳನ್ನು ನೇಮಿಸಿ ಅವರ ಆಲೋಚನೆಯನ್ನು ಕೇಳುತ್ತಿರಬೇಕು." ಇನ್ನು ಅನಿಯಂತ್ರಿತ ಅರಸರಿಗೆ ಜನರು ದಂಗೆಮಾಡಿ ಪಟ್ಟದಿಂದ ತಳ್ಳುವರೆಂದೂ ಅಥವಾ ಕೊಲ್ಲುವರೆಂದೂ ಅಂಜಿಕೆ ಇರುತ್ತಿತ್ತು. ಆದದರಿಂದ ಆಗಿನ ಅರಸರು ಹಗಲು ಮಲಗುತ್ತಿದ್ದಿಲ್ಲ. ಮತ್ತು ಸತತವಾಗಿ ಒಂದೇ ಕೋಣೆಯಲ್ಲಿ ಎರಡು ರಾತ್ರಿ ಮಲಗುತ್ತಿದ್ದಿಲ್ಲ.

೫. **ಸೈನ್ಯದ ವ್ಯವಸ್ಥೆ:**—ಸೈನ್ಯದಲ್ಲಿ ಚತುರಂಗಬಲವೆಂದರೆ ಗಜ, ರಥ, ಅಶ್ವಸೈನ್ಯ, ಮತ್ತು ಪದಾತಿ. ಅದರಲ್ಲಿ ಗಜಗಳಿಗೆ ಬಹಳ ಮಹತ್ವವಿತ್ತು. ಆದರೆ ಸಿಕಂದರನಂಥ ಶೂರ ಸೇನಾಪತಿಯ ಮುಂದೆ ಅವುಗಳ ಆಟವೇನೂ ಸಾಗಲಿಲ್ಲ. ಹಿಂದೂ ಜನರು ರಥಗಳ ಉಪಯೋಗವನ್ನು ವೇದಕಾಲದಿಂದ ಮಾಡುತ್ತ ಬಂದಿದ್ದರು. ಹುವೆನ ತ್ಸಾಂಗನು ಹಿಂದುಸ್ತಾನಕ್ಕೆ ಬಂದಾಗ ಚತುರಂಗ ಸೈನ್ಯವು ಪ್ರಚಾರದಲ್ಲಿತ್ತು. ವಾಡಿಕೆಯಾಗಿ ರಥದಲ್ಲಿ ಸೈನ್ಯದ ನಾಯಕರು ಕೂತು ಯುದ್ಧಮಾಡುತ್ತಿದ್ದರು. ರಥಕ್ಕೆ ನಾಲ್ಕು ಕುದುರೆಗಳನ್ನು ಹೂಡುತ್ತಿದ್ದರು. ರಥದಲ್ಲಿ ಚಾಬೂಕದವನ ಹೊರತಾಗಿ ಆರು ಜನ ಬಿಲ್ಲುಗಾರರು ಇರುತ್ತಿದ್ದರು. ಸುತ್ತಲೂ ಕಾಲಾಳುಗಳು ಕಾಯುತ್ತಿದ್ದರು. ಆನೆಗೆ ಚಿಲಕತ್ತನ್ನು ಹಾಕಿ ಅದರ ಕೋರೆಗೆ ಉಕ್ಕಿನ ಮುಳ್ಳುಗಳಿದ್ದ ತ್ರಾಣವನ್ನು ಹಾಕುತ್ತಿದ್ದರು. ಆನೆಯ ಮೇಲೆ ಮೂವರು ಬಿಲ್ಲುಗಾರರಿರುತ್ತಿದ್ದರು. ಯುದ್ಧದಲ್ಲಿ ರಥಗಳ ಉಪಯೋಗವು ಒನೇ ಶತಕದಿಂದ ಈಚೆಗೆ ಆದಂತೆ ಕಂಡುಬರುವದಿಲ್ಲ.

ಮೌರ್ಯರ ದಂಡಿನಲ್ಲಿ ೯೦೦೦ ಆನೆಗಳೂ ೫೦೦೦೦ ಸ್ವಾರರೂ ೮೦೦೦ ರಥಗಳೂ ೬ ಲಕ್ಷ ಕಾಲಾಳುಗಳೂ ಇದ್ದರು. ಈ ಸೈನ್ಯದವರಿಗೆಲ್ಲ ಸಂಬಳವು ದೊರೆಯುತ್ತಿದ್ದು ಆಯುಧ ಮೊದಲಾದ ಸಾಮಗ್ರಿಗಳನ್ನು ಅರಸನೇ ಕೊಡುತ್ತಿದ್ದನು. ಅಕಬರನ

ದಂಡಿನ ವ್ಯವಸ್ಥೆಗಿಂತ ಚಂದ್ರಗುಪ್ತನ ಸೈನ್ಯದ ವ್ಯವಸ್ಥೆಯು ಚನ್ನಾಗಿತ್ತೆಂದು ವಿನ್ಸೆಂಟ್ ಸ್ಮಿಥನು ಅನ್ನುತ್ತಾನೆ.

ಅರಸನೇ ಸೇನಾಪತಿಯಾಗಿದ್ದರೂ ದಂಡಿನ ವ್ಯವಸ್ಥೆಗಾಗಿ ೬ ಬೋರ್ಡುಗಳು ಅಥವಾ ಸಂಘಗಳಿದ್ದವು. ಒಂದೊಂದು ಸಂಘದಲ್ಲಿ ೫ ಜನ ಮುಖ್ಯರು ಆಲೋಚನೆಯಿಂದ ಕೆಲಸಮಾಡುತ್ತಿದ್ದರು. ಆ ಸಂಘಗಳು ಯಾವವೆಂದರೆ ೧. ನೌಕಾಸೇನೆ, ೨. ಆಹಾರ ಸಾಮಗ್ರಿ ಭಾರವಾಹಕರು ಮುಂತಾದವ್ದು. ೩. ಕಾಲಾಳು ೪. ಸ್ವಾರರು. ೫. ರಥ ೬. ಆನೆ.

೬. **ಭೂಮಿ ಮತ್ತು ಕಂದಾಯ:**— ಅರಸನೇ ಭೂಮಿಗೆ ಒಡೆಯನಾದದರಿಂದ ಭೂಮಿಯ ಉತ್ಪನ್ನದಲ್ಲಿ ೧/೪ ವನ್ನು ಅರಸನಿಗೆ ತೆರಿಗೆ ಕೊಡಬೇಕಾಗುತ್ತಿತ್ತು. ಅಕಬರನ ಕಾಲಕ್ಕೆ ೧/೩ ಉತ್ಪನ್ನವನ್ನು ತೆಗೆದುಕೊಳ್ಳಬೇಕೆಂದು ತೋಡರಮಲ್ಲನು ಗೊತ್ತುಮಾಡಿದನು. ಭೂಮಿಗಳಿಗೆ ನೀರುಹಾಯಿಸಿ ಬೆಳೆಬರುವಂತೆ ಕಾಲುವೆಗಳನ್ನು ಮಾಡಿಸಿದ್ದರು. ಮಳೆಯಾಗದ ಪ್ರದೇಶದಲ್ಲಿ ಈ ಬಗ್ಗೆ ವಿಶೇಷಪ್ರಕಾರದ ವ್ಯವಸ್ಥೆಯು ಮಾಡಲ್ಪಟ್ಟಿತ್ತು. ಇದಕ್ಕಾಗಿ ಹೆಚ್ಚಿನ ನೀರಿನ ಪಟ್ಟಿಯನ್ನು ಎತ್ತುತ್ತಿದ್ದರು.

೭. **ಮಾರ್ಗಗಳು:**— ಮುಖ್ಯಮಾರ್ಗಗಳನ್ನು ವ್ಯವಸ್ಥಿತವಾಗಿ ಇಡುವ ಪಕ್ಕೆ ಒಂದು ಖಾತೆ ಇತ್ತು. ಮಾರ್ಗದಮೇಲೆ ಈಗಿನಂತೆ ಮೈಲುಕಲ್ಲುಗಳಂತೆ ೨೦೨೨ ಯಾರ್ಡುಗಳಿಗೆ ಒಂದು ಕಟ್ಟಿಗೆಯ ಕಂಬವನ್ನು ನಡಿಸಿರುತ್ತಿದ್ದರು. ತಕ್ಷಶಿಲೆಯಿಂದ ಪಾಟಲೀಪುತ್ರದ ವರೆಗೆ ಒಂದು ಉತ್ತಮ ರಾಜಮಾರ್ಗವಿತ್ತು. ಅರ್ಥಶಾಸ್ತ್ರವನ್ನಲ್ಲಿ ಮಾರ್ಗದ ಬಗ್ಗೆ ಅನೇಕ ನೇಮಗಳನ್ನು ಬರೆದಿರುವದು. ಮಾರ್ಗವು ಆವೆಯಬೆನ್ನಿನ ಹಾಗೆ ಇರತಕ್ಕದ್ದು. ೫೦ ಅಡಿಗಿಂತ ಕಡಿಮೆ ಇರಕೂಡದು.

೮. **ಸ್ಥಾನಿಕ ಸಂಸ್ಥೆ:**— ಪಾಟಲೀಪುತ್ರದಂಥ ವಿಸ್ತಾರವಾದ ನಗರದ ವ್ಯವಸ್ಥೆಯಸಲುವಾಗಿ ೩೦ ಜನ ಸಭಾಸದರ ಒಂದು ಸಭೆ ಇತ್ತು. ಈ ಸಭಾಸದರು ತಮ್ಮ ತಮ್ಮ ವಿಶೇಷ ಶಾಖೆಗಳ ಮೇಲ್ವಿಚಾರವನ್ನು ಮಾಡುವದಲ್ಲದೆ ಸಾರ್ವಜನಿಕ ಹಿತದ ಎಲ್ಲ ಕಾರ್ಯಗಳನ್ನ ನೆರವೇರಿಸಬೇಕಾಗುತ್ತಿತ್ತು. ಸಾರ್ವಜನಿಕ ಕಟ್ಟಡಗಳ ವ್ಯವಸ್ಥೆ, ಮಾರ್ಕೆಟ, ಬಂದರ, ಗುಡಿಗಳಮೇಲ್ವಿಚಾರ, ಬೆಲೆಗಳ ನಿರ್ಣಯ ಮೊದಲಾದ ಕೆಲಸಗಳನ್ನೂ ಅವರೇ ಮಾಡಬೇಕಾಗುತ್ತಿತ್ತು. ೫ ಜನರ ಒಂದು ಬೋರ್ಡಿನ ಕಡೆಗೆ ಒಂದೊಂದು ವಿಷಯವು ಒಪ್ಪಿಸಲ್ಪಟ್ಟಿತ್ತು. ಆ ಬೋರ್ಡುಗಳು ಯಾವೆಂದರೆ, ೧. ಕಲೆ ಉದ್ಯೋಗಗಳು ೨. ಪರದೇಶದ ಜನರ ವ್ಯವಸ್ಥೆ ೩. ಜನನ ಮರಣ ೪. ವ್ಯಾಪಾರ ೫. ಜಕಾತಿ, ಟೋಲುಗಳು ೬. ಮನೆಪಟ್ಟಿ ಮುಂತಾದ ಕರ.

೯. **ರಾಜ್ಯವ್ಯವಸ್ಥೆ:**—ಚಂದ್ರಗುಪ್ತನ ವಿಸ್ತಾರವಾದ ರಾಜ್ಯವನ್ನು ಆಳಲಿಕ್ಕೆ ೪ಜನ ಸರಸುಬೇದಾರರಿದ್ದರು. ಸರಕಾರದಲ್ಲಿ ಒಟ್ಟು ೩೦ ಖಾತೆಗಳಿದ್ದವು. ಬೇರೆ ಬೇರೆ ಭಾಗಗಳಲ್ಲಿ ಗುಪ್ತಚಾರರಿದ್ದು ಅವರು ಅರಸನಿಗೆ ಎಲ್ಲ ಪ್ರಕಾರದ ಸುದ್ದಿಗಳನ್ನು ತಿಳಿ

ಜಾಹೀರಾತು

ಇತಿಹಾಸದ ಟಿಪ್ಪಣಿ

ಬೆಲೆ ೯ ಆಣೆ

ಹೈ. ಫಾ. ಪರೀಕ್ಷೆಯ ವಿದ್ಯಾರ್ಥಿಗಳ ಸಲುವಾಗಿ ಸಿದ್ಧವಾಗಿದೆ.

ಕಳೆದ ವರ್ಷ ನಮ್ಮ ಭೂಗೋಲದ ಟಿಪ್ಪಣಿಯನ್ನು ಅನೇಕ ವಿದ್ಯಾರ್ಥಿಗಳು ಆನಂದದಿಂದ ಓದಿ ಇತಿಹಾಸದ ಟಿಪ್ಪಣಿಯನ್ನು ಇಚ್ಛಿಸಿದ್ದರಿಂದ ಅದು ಈಗ ಸಿದ್ಧವಾಗಿದೆ. ಈ ಎರಡೂ ಟಿಪ್ಪಣಿಗಳನ್ನು ಓದಿದವರು ಆಯಾ ವಿಷಯಗಳ ಪರೀಕ್ಷೆಯಲ್ಲಿ ತಪ್ಪದೆ ಪಾಸಾಗುವರೆಂದು ಅನುಭವದಿಂದ ಹೇಳುವೆವು. ಇವುಗಳಲ್ಲಿ ಒಟ್ಟಿಗೆ ೧೬ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ. ೪ ಆ. ಬೆಲೆಯುಳ್ಳ ಸಂತಾನಶಾಸ್ತ್ರವೆಂಬ ಅವಶ್ಯಕ ಗ್ರಂಥವನ್ನೂ, ೧೨ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ. ಬೆಲೆಯುಳ್ಳ ಚಲುಕ್ಯರ ಪುಲಿಕೇಶಿ ಎಂಬ ಐತಿಹಾಸಿಕ ಕಾದಂಬರಿಯನ್ನೂ ಬಹುಮಾನವಾಗಿ ಕೊಡುವೆವು. ಬಹುಮಾನ ಬೇಡಾದವರಿಗೆ ರೂಪಾಯಿಗೆ ಎರಡು ಆಣೆಯಂತೆ ಕಮಿಶನ್ ಕೊಡುವೆವು.

ಸಬರದ ಆಂಡ ಬ್ರದರ್ಸ ಧಾರವಾಡ.

ಜಾಹೀರಾತು

ಅಗತ್ಯ ಓದಿ ನೋಡಿರಿ

ಶಾಲೋಪಯೋಗಿ ಪುಸ್ತಕಗಳು ತಮಗೆ ಬೇಕಾದವು ಯೋಗ್ಯ ಕಮಿಶನ್‌ದಿಂದ ಕಳಿಸುವೆವು. ವ್ಹಿ. ಪಿ. ಬೇಡುವವರು ೪ ಹಣವು ಮುಂಗಡ ಕಳಿಸಬೇಕು.

ನೀಲಿಮಸಿ ಉತ್ತಮ ಅದೆ. ನಮೂನೆ ಬೇಕಾದರೆ ೧ ಆಣೆ ಟಿಕೀಟು ಕಳಿಸಬೇಕು. ಶಾಲೆಗಳ ರಿಕಾರ್ಡಗಳಿಗೆ ಬೇಕಾಗುವ ಫೈಲಬೋರ್ಡುಗಳು ದೊಡ್ಡವುಸಣ್ಣವು ಅವೆ. ನೋಟ ಬುಕ್ಕುಗಳು ಎಕ್ಸರಸೈಜಗಳು ನಕಾಶಗಳು ಡ್ರಾಯಿಂಗ ಬುಕ್ಕು ವಗೈರೆ ತಮಗೇನು ಬೇಕು ಬರೀರಿ.

ಖಾತೆ ಮತ್ತು ಬೋಟಖಾತೆ ಇವು ಛಾಪಿಸಿದವು ಉತ್ತಮ ತರದವು ವ್ಯಾಪಾರಸ್ಥರು ಪ್ರೀತಿಯಿಂದ ತಗೊಳ್ಳುತ್ತಾರೆ.

ಛಾಪಿಸುವ ಕೆಲಸ ಇದ್ದರೆ ತಿಳಿಸಿರಿ. ಬಹಳ ಅಗ್ಗವಾಗಿ ತಮಗೆ ಬೇಕಾದ ಹಾಗೆ ಛಾಪಿಸುವೆವು. ಸೊಸಾಯಟಿಗಳಿಗೆ ಕಚೇರಿಗಳಿಗೆ ಬೇಕಾಗುವ ಫೈಲುಗಳು ಪೋಟ ಫುಲಿ ಪ್ಯಾಡ ವಗೈರೆ ಶಿಗುತ್ತವೆ. ಛಾಪಿಸಿದ ಲಾವಣೀ ಪತ್ರಗಳು ಶಿಗುತ್ತವೆ. ಬೇಕಾದವರು ಡಬಲ್ ಕಾರ್ಡ ಬರೀರಿ. ಬೈಂಡಿಂಗ ಕೆಲಸವು ಉತ್ತಮರೀತಿಯಲ್ಲಿ ಆಗುತ್ತದೆ.

ಎಮ್. ಸೌದಾಗರ ಅಂಡ್ ಸನ್.

ಜಾಹಿರಾತು

ಆರೋಗ್ಯ ವಿದ್ಯೆಯ ಮೂಲ ತತ್ವಗಳು

(ಹೆಣ್ಣು ಮಕ್ಕಳ ಸಲುವಾಗಿ)

ಬೆಲೆ ರೂ. ೧--೦--೦

ಗ್ರಂಥಕರ್ತರು:— ಮೇಜರ ಹಚಿಸನ ಆಯ್ಎಸ್, ಎಮ್, ಎಸ್.

ಪ್ರಕಾಶಕರು:— ಮ್ಯಾಕಮಿಲನ್ ಕಂಪನಿ ಲಿಮಿಟೆಡ್.

ಈ ಪುಸ್ತಕದಲ್ಲಿ 'ಮುಂಬಯಿ ಇಲಾಖೆಯ ವಿದ್ಯಾಖಾತೆಯವರು' ಹೆಣ್ಣು ಮಕ್ಕಳಿಗಾಗಿ ನಿಯಮಿಸಿದ ಅಭ್ಯಾಸಕ್ರಮದಂತೆ ಆರೋಗ್ಯಶಾಸ್ತ್ರಕ್ಕೆ ಸಂಬಂಧಿಸಿ ವಿಷಯಗಳ ಮೂಲತತ್ವಗಳು ಸಚಿತ್ರವಾಗಿ ಸುಲಭ ಭಾಷೆಯಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿವೆ.

ಆರೋಗ್ಯ ವಿಜ್ಞಾನ

ಪ್ರಾಥಮಿಕ ಮತ್ತು ಆಂಗ್ಲೊ ವ್ಹರ್ನ್ಯಾಕ್ಯುಲರ ಶಾಲೆಗಳ ಉಪಯೋಗಕ್ಕಾಗಿ ಮುಂಜೂರಾದದ್ದು.

ರಾ. ಮ. ಜೋಶಿ, ಎಮ್. ಎ., ಎಲ್ಎಲ್. ಬಿ. ಎಸ್. ಸಿ. (ಲಂಡನ್ ಐ. ಇ. ಎಸ್. ಇವರಿಂದ ರಚಿತವಾದದ್ದು.

ಸಚಿತ್ರವಾದದ್ದು. ಬೆಲೆ ೬ ಆಣೆ.

ಈ ಪುಸ್ತಕದ 'ಉರ್ದು' ಆವೃತ್ತಿಯನ್ನು ಮ್ಯಾಕಮಿಲನ್ ಕಂಪನಿಯವರು ಪ್ರಸಿದ್ಧಪಡಿಸಿದ್ದಾರೆ. ಬೆಲೆ ೬ ಆಣೆ.

ಮ್ಯಾಕಮಿಲನ್ ಮತ್ತು ಕಂಪನಿ ಮುಂ

Hygiene for Girls, by Major Huchison, I. E. S., Price Rs.

Hygiene in Canarese and Urdu by Joshi, I. E. S., Price-/6 each

ಸಿದ್ಧನಾಥ ವಾಚನ ಮಂದಿರ
ಸೊರಬ. ಜಿಲ್ಲಾ ಧಾರವಾಡ.
ಕೈಪ್ಪುಸ್ತಕ

ಶಾಲಾ ಪತ್ರಿಕೆ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬೪	ಜೂನ-ಜುಲೈ ೧೯೩೭.	ಸಂ. ೩—೪

ಸ್ಫುಟ ವಿಚಾರ

ಟ್ರೇನಿಂಗದ ಅವಶ್ಯಕತೆ

ಮುಂದೆ ದಿ. ಬಾ. ಹೊದ್ದರಾಯರು ಈ ವಿಷಯದ ಬಗ್ಗೆ ನೇಕನಾಮದಾರ ಗವ್ಹರ್ನರ ಸಾಹೇಬರಿಗೆ ಬರೆದ ವಿನಂತಿಪತ್ರದ ಅನುವಾದವನ್ನು ಕೊಟ್ಟಿದ್ದೇವೆ. ಇದನ್ನು ಕಳಿಸಿದನಂತರ ಸರಕಾರದವರು ಈ ವಿಷಯದಲ್ಲಿ ತಮ್ಮ ಅಂಬೋಣವು ಏನೆಂಬದನ್ನು ಪ್ರಕಟಿಸಿದ್ದಾರೆ. ಅವರು ಮುಖ್ಯವಾಗಿ ಅನ್ನುವದೇನಂದರೆ — "ಪ್ರಾ. ಶಾ. ಗಳಲ್ಲಿ ೧೦೦ ಕ್ಕೆ ೫೦ ರಂತೆ ಟ್ರೇಂಡ ಶಿಕ್ಷಕರಿದ್ದರೆ ಸಾಕು. ಹೆಚ್ಚಿಗೆ ಬೇಡ. ಗುಜರಾತದಲ್ಲಿ ಟ್ರೇಂಡರ ಸಂಖ್ಯೆಯು ನೂರಕ್ಕೆ ೬೭ ಮತ್ತು ಕರ್ನಾಟಕದಲ್ಲಿ ೭೦ ರಂತೆ ಇದ್ದದರಿಂದ ಇನ್ನು ಮುಂದೆ ಹೆಚ್ಚಿಗೆ ಟ್ರೇಂಡರ ಅವಶ್ಯಕತೆ ಇಲ್ಲ. ಟ್ರೇನಿಂಗ ಹೊಂದುವಾಗ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ಪು ನಂತರ ಟ್ರೇಂಡರಿಗೆ ಅವರ ಸ್ಕೇಲಿನಂತೆ ಬಡತಿ ಕೊಡಬೇಕಾದರಿ ಸರಕಾರದವರು ಹೆಚ್ಚು ವೆಚ್ಚ ಮಾಡಬೇಕಾಗುವದು. ೧೯೩೩ನೇ ಇಸವಿಯ ಪ್ರಾ. ಶಿ. ದ ಆಕ್ಟಿನಂತೆ ಸಾರ್ವತ್ರಿಕ ಒತ್ತಾಯದ ಶಿಕ್ಷಣವನ್ನು ಕೊಡುವದು ಸರಕಾರದ ಕರ್ತವ್ಯವೆಂದು ಗೊತ್ತಾದ್ದರಿಂದ ಶಿಕ್ಷಣದ ವೆಚ್ಚದಲ್ಲಿ ಕೈ ಬಿಗಿಹಿಡಿದು ಪೈ ಪೈ ಉಳಿಸುವದು ಅವಶ್ಯ ತೋರಿದ್ದರಿಂದ ಇನ್ನು ಮುಂದೆ ಹೆಚ್ಚು ಜನರನ್ನು ಟ್ರೇಂಡ ಮಾಡುವ ಅವಶ್ಯಕತೆ ಇಲ್ಲ." ನೂರುಜನ ಶಿಕ್ಷಕರಲ್ಲಿ ೫೦ ಜನರು ಟ್ರೇಂಡರು ಸಾಕಾಗಲಾರರೆಂಬ ಬಗ್ಗೆ ದಿ. ಬಾ. ಹೊದ್ದರಾಯರು ತಮ್ಮ ಪತ್ರದ ತಿನೇ ಕಲಮಿನಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇನ್ನು ನೂರಕ್ಕೆ ೫೦ಕ್ಕಿಂತ ಟ್ರೇಂಡರ ಸಂಖ್ಯೆಯು ಹೆಚ್ಚಾದದ್ದಕ್ಕಾಗಿ ಸರಕಾರದವರೇ ಜವಾಬದಾರರು. ೧೯೧೫ನೇ ಇಸವಿಯಲ್ಲಿ ಗೊತ್ತಾದ ಮೇರೆಗೆ ಪ್ರತಿವರ್ಷ ೫೦೦ ಹೊಸ ಶಾಲೆಗಳನ್ನು ಇಲಾಖೆಯಲ್ಲಿ ತೆರೆಯುತ್ತ ಹೋಗಿದ್ದರೆ ಟ್ರೇಂಡರ ಸಂಖ್ಯೆಯು ನೂರಕ್ಕೆ ೫೦ ಕ್ಕಿಂತ

ಬಹಳ ಕಡಿಮೆಯಾಗುತ್ತಿತ್ತು. ಮತ್ತು ಹೊಸಶಾಲೆಗಳು ಆಗುವವೆಂಬ ಭರವಸೆಯಿಂದ ಪ್ರತಿಯೊಂದು ಜಿಲ್ಲೆಯಲ್ಲಿ ಒಂದೊಂದು ಟ್ರೇನಿಂಗ ಸ್ಕೂಲು ಇಟ್ಟು ಹೆಚ್ಚು ಟ್ರೇಂಡ ಶಿಕ್ಷಕರನ್ನು ಸಿದ್ಧಪಡಿಸಿದೆವರು ಸರಕಾರದವರೇ. ಆದರೆ ಮೌಂಟಿಗೂ ಚೇಮ್ಸ್‌ಫರ್ಡ ಸುಧಾರಣೆಯಾಗಿ ಶಿಕ್ಷಣಖಾತೆಯ ಸೂತ್ರಗಳು ದಿವಾಣರ ಕಡೆಗೆಬಂದಮೇಲೆ ಮೊದಲಿನ ಪ್ರಾಗತಿಕಧೋರಣವು ಬದಲಾಯಿತು. ಹೊಸ ಶಾಲೆಗಳು ಪ್ರಾರಂಭವಾಗಲಿಲ್ಲ. ದುಡ್ಡಿನ ಕೊರತೆಯು ಎಲ್ಲ ಖಾತೆಗಳಿಗೆ ಬಾಧಿಸಹತ್ತಿತು. ಹೀಗಾಗಿ ಶಿಕ್ಷಣ ಸಂಸ್ಥೆಗಳನ್ನು ನಿಲ್ಲಿಸುವ ವಿಚಾರವು ಸರಕಾರದ ತಲೆಯಲ್ಲಿ ಸೇರಿಕೊಂಡಿತು. ಹೀಗೆ ಉಳಿಸಿದ ಹಣ ದಿಂದ ಪ್ರಾ. ಶಿ. ದ ಪ್ರಗತಿಯು ವಿಶೇಷವಾಗಲಾರದೆಂದು ಸಾಮಾನ್ಯರಿಗೂ ತಿಳಿಯು ವಂತಿದೆ. ಉದಾ—ಧಾರವಾಡ ಬೆಳಗಾಂವಿ ಜಿಲ್ಲೆಗಳಲ್ಲಿ ಈ ವರ್ಷ ೧೨೫ ಹೊಸ ಶಾಲೆಗ ಳನ್ನು ಮಾಡಬೇಕೆನ್ನುತ್ತಾರೆ. ಇದಕ್ಕೆ ಸರಕಾರದವರು ಕನಿಷ್ಠಪಕ್ಷಕ್ಕೆ ೪೦,೦೦೦ರು. ಗಳ ಗ್ರ್ಯಾಂಟು ಕೊಡಬೇಕಾಗುವದು. ಧಾರವಾಡದ ಟ್ರೇ. ಸ್ಕೂಲು ಬಂದು ಮಾಡುವದ ರಿಂದ ಬಹಳವಾದರೆ ೪೫ ಸಾವಿರ ರು. ಉಳಿಯಬಹುದು. ಹೀಗೆ ಶಿಕ್ಷಣ ಸಂಸ್ಥೆಗ ಳನ್ನು ನಿಲ್ಲಿಸುವದರಿಂದ ಸರಕಾರದವರು ಒತ್ತಾಯದ ಶಿಕ್ಷಣವನ್ನು ಹೇಗೆ ಪ್ರಾರಂಭಿ ಸುವರೆಂಬ ಬಗ್ಗೆ ಜನರು ಸಾಶಂಕವೃತ್ತಿಯುಳ್ಳವರಾಗಿರುವರು.

ಕರ್ನಾಟಕದಲ್ಲಿ ಪ್ರತಿವರ್ಷ ೧ ಸಾವಿರ ಜನರು ವ್ಹ. ಫಾ. ಪರೀಕ್ಷೆಯಲ್ಲಿ ಪಾಸಾ ಗುತ್ತಾರೆ. ಅವರಲ್ಲಿ ಎಷ್ಟೋ ಜನರು ಸ್ವಂತ ಖರ್ಚಿನಿಂದ ಮುಂದೆ ನೌಕರಿಯ ಅಪೇಕ್ಷೆ ಇಲ್ಲದೆ ಟ್ರೇನಿಂಗ ಹೊಂದಲಿಕ್ಕೆ ಸಿದ್ಧರಾದವರು ಸಿಗುವರು. ಕಳೆದ ೨ ವರ್ಷಗಳಲ್ಲಿ ಮುನಿಸಿಪಾಲಿಟಿಯಿಂದ ಬಂದ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ಪು ಕೊಟ್ಟಿರುವದಿಲ್ಲ. ಮುಂದೆ ಅವರ ಸ್ಕೇಲಿನಂತೆ ಪಗಾರುಸಹ ಕೊಟ್ಟಿಲ್ಲ. ಆದರೂ ಅವರು ಸಂತೋಷದಿಂದ ಕೆಲಸಮಾಡುತ್ತಿದ್ದಾರೆ.

ಧಾರವಾಡದ ಟ್ರೇನಿಂಗಕಾಲೇಜನ್ನು ಇಡಬೇಕೆಂಬ ಬಗ್ಗೆ ರಾ. ಬ. ಕಂಬಳಿಯವರು ಈಗ ನಡೆದ ಕೌನ್ಸಿಲಿನಲ್ಲಿ ಒಂದುತರಾವು ತಂದಿದ್ದಾರೆ. ಅದಕ್ಕೆ ಬಹುಮತವು ದೊರೆತು ಕರ್ನಾಟಕದ ಟ್ರೇನಿಂಗ ಸಂಸ್ಥೆಯು ಪುನಃ ಪ್ರಾರಂಭವಾದೀತೆಂದು ಆಶಿಸುತ್ತೇವೆ.

ಧಾರವಾಡ ಟ್ರೇನಿಂಗಸ್ಕೂಲನ್ನು ಬಂದುಮಾಡದೆ ಮುಂದೆ ಹಾಗೇ ನಡಿಸುವದು ಅಗತ್ಯ ದ್ದೆಂಬ ಬಗ್ಗೆ ದಿವಾನ ಬಹದ್ದೂರ ರೊದ್ದರಾಯರು ಸಿ. ಆಯ್. ಇ.

ಇವರು ನೇಕನಾಮದಾರ ಗವ್ಹರ್ನರ ಸಾಹೇಬರಿಗೆ ಕಳುಹಿಸಿದ

ವಿನಂತಿ ಪತ್ರದ ಕನ್ನಡ ಅನುವಾದವು

(೨-೭-೧೯೨೭)

ಅಖಿಲ ಕರ್ನಾಟಕವು ಏಕವಾಕ್ಯತೆಯಿಂದ ವಿರೋಧಿಸುತ್ತಿರುವಾಗಲೇ ಧಾರ ವಾಡದ ಟ್ರೇನಿಂಗ ಸ್ಕೂಲನ್ನು ನಿಲ್ಲಿಸಿ ಬಿಟ್ಟಿರುವದನ್ನು ನೋಡಿದರೆ ಅದಕ್ಕೆ ಅಂತಹ

ಕಾರಣವೇನಿರುವದೆಂಬದನ್ನು ತರ್ಕಿಸುವದೂ ಅಸಾಧ್ಯವಾಗಿದೆ. ಸರಕಾರವೂ ಕೂಡ ಈ ವಿಷಯದ ತಮ್ಮ ಹೇಳಿಕೆಯನ್ನು ಎಲ್ಲಿಯೂ ಪ್ರಕಟಿಸಿಲ್ಲ. (ಇದು ಈಗ ಪ್ರಕಟವಾಗಿದೆ ಸಂ. ಶಾ. ಪ.) ನಮ್ಮ ದಕ್ಷಿಣಭಾಗದಲ್ಲಿ ಒಟ್ಟಿಗೆ ೪೦೭೩ ಶಿಕ್ಷಕರಿದ್ದು ಅವರಲ್ಲಿ ೩೬೦೨ ಶಿಕ್ಷಕರು ಡಿಸ್ಟ್ರಿಕ್ಟ ಲೋಕಲ್‌ಬೋರ್ಡಿನ ಕೆಳಗೂ ೪೭೧ ಜನರು ಮ್ಯುನಿಸಿಪಾಲಿಟಿಗಳ ಕೆಳಗೂ ಇರುವರು. ಅವರಲ್ಲಿ ೨೯೩೧ ಜನ ಶಿಕ್ಷಕರು ಟ್ರೇಂಡರಿದ್ದು ಮಿಕ್ಕುಳಿದ ೧೧೪೨ ಜನರು ಅಂಟ್ರೇಂಡರಿರುವರು. ಪ್ರತಿವರ್ಷ ಮರಣ, ಪೆನ್‌ಶನ್ ಮೇಲೆ ಹೋಗುವದು ಮುಂತಾದ ಕಾರಣಗಳಿಂದ ನೂರಕ್ಕೆ ಲರಂತೆ ಶಿಕ್ಷಕರು ಕಡಿಮೆಯಾಗುತ್ತಿರುವರು. ಅಂದರೆ ಪ್ರತಿವರ್ಷ ೨೩೨ ಜನರು ಟ್ರೇಂಡರೂ ೪೮ ಜನ ಅಂಟ್ರೇಂಡರೂ—ಒಟ್ಟಿಗೆ ೩೨೦ಜನರು ಕಡಿಮೆಯಾಗುತ್ತಲಿದ್ದಾರೆ. ೧೯೨೫ ನೇ ಇಸ್ವಿಯ ಜನವರಿ ೧೯ನೇ ತಾರೀಖಿನ ೧೯೯೪ನೇ ನಂಬರಿನ ಸರಕಾರೀ ತರಾವಿನ ಮೇರೆಗೆ ಧಾರವಾಡ ಟ್ರೇನಿಂಗ ಸ್ಕೂಲಿನಲ್ಲಿ ಬ್ರಿಟಿಶ ಜಿಲ್ಲೆಗಳಿಗಾಗಿ ೨೫ಜನ ಶಿಕ್ಷಕರು ಟ್ರೇಂಡರಾಗುತ್ತಿದ್ದರು. ಅದರಿಂದ ೨೯೫ ಜನ ಅಂಟ್ರೇಂಡರನ್ನು ಬೇರೆ ಬೇರೆ ಸ್ಥಾನಿಕ ಸಂಸ್ಥೆಗಳು ಪ್ರತಿವರ್ಷ ಕೆಲಸಕ್ಕೆ ನೇಮಿಸಿಕೊಳ್ಳಬೇಕಾಗುತ್ತಿತ್ತು. ಆದರೆ ಮೊನ್ನೆ ಮೊನ್ನಿನ ಸರಕಾರದ ನಿರ್ಣಯದ ಮೇರೆಗೆ ಧಾರವಾಡದ ಟ್ರೇನಿಂಗ ಸ್ಕೂಲು ಬಂದಾಗಿರುವದರಿಂದ ಆ ೨೫ ಜನ ಟ್ರೇಂಡ ಶಿಕ್ಷಕರೂ ಹೊರಬೀಳದಂತಾದರು. ಅದರಿಂದ ಪ್ರತಿವರ್ಷ ೩೨೦ ಜನ ಅಂಟ್ರೇಂಡ ಶಿಕ್ಷಕರು ಕೆಲಸದಲ್ಲಿ ಸೇರಬೇಕಾಗುವದು. ಈ ಲೆಕ್ಕದಿಂದ ನೋಡಿದರೆ ಹನ್ನೆರಡೇ ವರ್ಷಗಳ ಕಾಲಾವಧಿಯಲ್ಲಿ ದಕ್ಷಿಣ ಭಾಗದ ಪ್ರಾಥಮಿಕ ಶಾಲೆಗಳಲ್ಲಿ ಒಬ್ಬನೂ ಟ್ರೇಂಡ ಶಿಕ್ಷಕನು ಉಳಿಯಲಾರನೆಂಬದು ಸಹಜವು. ಹೀಗಾಗುವದರಿಂದ ಪ್ರಾಥಮಿಕ ಶಾಲೆಗಳ ಸ್ಥಿತಿಯು ಎಷ್ಟರಮಟ್ಟಿಗೆ ಅಧೋಗತಿಗೆ ಹೋಗಬಹುದೆಂಬ ಬಹು ವಿಚಾರಾರ್ಹವಾದ ಪ್ರಶ್ನೆಯೊಂದು ತಾನಾಗಿ ಉಪಸ್ಥಿತವಾಗುವದು. ಸಾಮಾನ್ಯ ಜನತೆಯು ಈ ತರದ ಪ್ರಾಥಮಿಕ ಶಾಲೆಗಳ ಅಧೋಗತಿಗೆ ಕಾರಣವಾಗುವ ವಿದ್ಯಾಖಾತೆಯ ಅಧಿಕಾರಿಗಳ ಅಜಾಗ್ರತೆಯ ಕೃತಿಯ ವಿಷಯಕ್ಕೆ ಸರಕಾರವೇ ಜವಾಬದಾರವೆಂದು ತಿಳಿಯುವದು ಸಹಜವೇ ಸರಿ.

೨. "ಇನ್ನು ಮುಂದೆ ಇ. ಸ. ೧೯೨೫—೨೯ರ ಒಳಗಾಗಿ ಸ್ಥಾನಿಕ ಸಂಸ್ಥೆಗಳಲ್ಲಿ ಕೆಲಸಮಾಡುವ ಶಿಕ್ಷಕರಲ್ಲಿ ೧೦೦ರಲ್ಲಿ ೫೦ಜನರು ಮಾತ್ರ ಟ್ರೇಂಡರಿದ್ದರೆ ಸಾಕು"ಎಂಬ ಒತ್ತಾಯದ ಪ್ರಾಥಮಿಕ ಶಿಕ್ಷಣದ ಕಾಯದೆಗೆ ಸಂಬಂಧಪಟ್ಟ ನಿಯಮಗಳೊಳಗಿನ ೫೮ನೇ ನಿಯಮವನ್ನು ಮುಂಜೂರು ಮಾಡುವಾಗ ಸರಕಾರದವರು ಶಿಕ್ಷಣ ಖಾತೆಯಲ್ಲಿ ಕೆಲಸಮಾಡಿ ಅನುಭವ ಪಡೆದ ಜನರ ಅಭಿಪ್ರಾಯವನ್ನು ತೆಗೆದುಕೊಂಡಿರುವರೋ ಹ್ಯಾಗೆಂಬದು ಇನ್ನೊಂದು ವಿಚಾರಣೀಯವಾದ ಪ್ರಶ್ನೆಯಾಗಿದೆ. ಈ ತೀರ ಕಡಿಮೆ ಮೂಸವನೇ ತೀರ ಹೆಚ್ಚಿನ ಮೂಸನೆಂದು ವಿದ್ಯಾಖಾತೆಯ ಅಧಿಕಾರಿಗಳು ಈಗೀಗ

ಶಿಥಾರ್ಥಂತರ ಮಾಡಿಕೊಂಡಂತೆ ತೋರುವದು. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿ ಯನ್ನು ಗುರಿಯಾಗಿಟ್ಟುಕೊಂಡು ನೋಡಿದರೆ ಎಲ್ಲರೂ ಟ್ರೇಂಡ ಶಿಕ್ಷಕರಾಗಿರುವದು ಯೋಗ್ಯವೆನಿಸುವದು. ೧೯೨೩ನೇ ಇಸ್ವಿಯಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣದ ಕಾಯಿದೆಯು ಪಾಸಾಗುವದಕ್ಕಿಂತಲೂ ಹಿಂದಿನ ದಿನಗಳಲ್ಲಿ ನೂರಕ್ಕೆ ನೂರು ಶಿಕ್ಷಕರು ಟ್ರೇಂಡರೇ ಇರಬೇಕೆಂಬದು ಸರಕಾರದ ಧೋರಣವಾಗಿದ್ದಿತು. ಮೇಲೆ ಹೇಳಿದ ನಿಯಮಗಳಲ್ಲಿ ಟ್ರೇಂಡ ಶಿಕ್ಷಕರ ಪರಮಾವಧಿ ಮಾನವು ಎಷ್ಟಿರತಕ್ಕದೆಂಬ ನನ್ನು ಸ್ಪಷ್ಟವಾಗಿ ಹೇಳಿಲ್ಲ. ಇದೊಂದು ಮಹತ್ವದ ದೋಷವೇ ಸರಿ. ನೂರಕ್ಕೆ ೫೦ ಜನರು ಟ್ರೇಂಡರಿದ್ದರೆ ಸಾಕೆಂಬ ನಿಯಮನ್ನು ನೋಡಿದೊಡನೆ ಇದು ಕೇವಲ ತಪ್ಪುವಳಿಕೆಯಿಂದ ಮಾಡಲ್ಪಟ್ಟಿರುವುದೆಂದೂ, ಇದರಿಂದ ಪ್ರಾಥಮಿಕ ಶಿಕ್ಷಣಕ್ಕೆ ಬಾಧೆಯುಂಟಾಗದೆ ಇರದೆಂದೂ ತಟ್ಟನೆ ಹೇಳಿಬಿಡಬೇಕಾಗುವದು. ಈ ನಿಯಮಗ ಳನ್ನು ಮಾಡಿದವರಿಗೆ ಮುಲ್ಕೀಪರೀಕ್ಷೆಯಲ್ಲಿ ಪಾಸಾದ ಉಮೇದವಾರರಿಗೆ ಯಾವ ಯಾವ ವಿಷಯಗಳ ಎಷ್ಟೆಷ್ಟು ಪರಿಜ್ಞಾನವಿರುವದೆಂಬದರ ತಿಳುವಳಿಕೆಯಿದ್ದಂತೆ ತೋರು ವದಿಲ್ಲ. ಕೆಲ ಕೆಲವು ವಿಷಯಗಳ ಪ್ರಾಥಮಿಕ ಜ್ಞಾನವಲ್ಲದೆ ಹೆಚ್ಚಿನದೇನೂ ಈ ಉಮೇದವಾರರಿಗೆ ಇರುವದಿಲ್ಲ. ಶಿಕ್ಷಣಪದ್ಧತಿ, ಚಿಕ್ಕಬಾಲಕರ ಮನಸ್ಸಿನ ವಿಕಾಸ ಬೆಳುವಣಿಗೆಗಳ ಅಭ್ಯಾಸ, ಈ ವಿಷಯಗಳ ಮಾತನ್ನಂತೂ ಕೇಳುವದೇಬೇಡ. ಇಂಥ ಅನನುಭವಿಕ ಶಿಕ್ಷಕರು ಬಾಲಕರನ್ನು ತಿದ್ದುವದರ ಬದಲು ಕೆಡಿಸಿಬಿಡುವದಕ್ಕೆ ಹೆಚ್ಚು ಕಾರಣರಾಗುವರೆಂದು ಒತ್ತಿ ಒತ್ತಿ ಹೇಳಬೇಕಾಗುವದು. ೨೫ ವರ್ಷ ಡಿ॥ ಎ॥ ಇ, ೧೦ ವರ್ಷ ಟ್ರೇನಿಂಗ ಕಾಲೇಜ ಪ್ರಿನ್ಸಿಪಾಲ, ೧೦ ವರ್ಷ ಡಿ॥ ಲೋ॥ ಬೋ॥ ಪ್ರೈಸ ಡೆಂಟ ಮತ್ತು ೨೫ ವರ್ಷ ಡಿ. ಲೋ. ಬೋ. ಮೆಂಬರ ಹೀಗೆ ಅರ್ಧಶತಮಾನದ ವರೆಗೆ ವಿದ್ಯಾಖಾತೆಯ ಕೆಲಸಗಳ ಅನುಭವದ ಮೂಲಕ ನಾನು ಈ ನಿಯಮಗಳನ್ನು ಮಾಡಿ ದವರ ಅದೂರದರ್ಶಿತ್ವವನ್ನು ಬಲವಾಗಿ ವಿರೋಧಿಸಬೇಕಾಗಿದೆ. ಒಬ್ಬ ಮುಲಕೀಪರೀಕ್ಷೆ ಯಲ್ಲಿ ಪಾಸಾದ ಉಮೇದವಾರನು ಪ್ರಾಥಮಿಕ ಶಾಲೆಗೆ ಬರುವ ಚಿಕ್ಕಮಕ್ಕಳ ನೈತಿಕ, ಶಾರೀರಿಕ, ಬೌದ್ಧಿಕ ಶಕ್ತಿಗಳನ್ನು ವಿಕಾಸಗೊಳಿಸಿ ಶಿಕ್ಷಣಕೊಡಲು ಎಷ್ಟುಮಾತ್ರಕ್ಕೂ ಯೋಗ್ಯನಲ್ಲ. ಮತ್ತು ಇಂಥವರಿಗೆ ಸಾಕಷ್ಟು ವಿಷಯಗಳ ಹಾಗು ಶಿಕ್ಷಣ ಪದ್ಧತಿಯ ಜ್ಞಾನವನ್ನು ಮಾಡಿಕೊಟ್ಟು ಹೊರತು ಶಿಕ್ಷಕರನ್ನಾಗಿ ನಿಯಮಿಸುವದು ಮಹದಪರಾ ಧವೆನಿಸುವದು.

೩. ಪ್ರಾಥಮಿಕ ಶಿಕ್ಷಕರಿಗೂ ಮಾಧ್ಯಮಿಕ ಶಿಕ್ಷಕರಿಗೂ ಕೊಡಲ್ಪಡುವ ಶಿಕ್ಷಣ ವಿಷಯಕ ಜ್ಞಾನದಲ್ಲಿ ಮಹದಂತರವಿರುವದು. ಮಾಧ್ಯಮಿಕ ಶಿಕ್ಷಕರಿಗಾಗಿ ಇಟ್ಟಿರುವ ಟ್ರೇನಿಂಗ ಕಾಲೇಜದಲ್ಲಿ ಪದವೀಧರರನ್ನಷ್ಟೇ ಆರಿಸಿಕೊಂಡು ಅವರಿಗೆ ಒಂದು ವರ್ಷದ ಕಾಲಾವಧಿಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳನ್ನಷ್ಟೇ ಕಲಿಸುವರು. ಆ ಪದವೀ ಧರರಿಗೆ ತಾವು ಕಲಿಸಬೇಕಾಗಿರುವ ಹಾಯಸ್ಕೂಲಿನ ಅಭ್ಯಾಸ ಕ್ರಮವನ್ನು ಕಲಿಸಲಿಕ್ಕೆ

ಕಾಗುವಷ್ಟು ವಿಷಯಗಳ ಸಾಮಾನ್ಯ ಜ್ಞಾನವು ಇದ್ದೇ ಇರುವದು. ಆದರೆ ಮುಲ್ಕೀ
ಪರೀಕ್ಷೆಯಲ್ಲಿ ಪಾಸಾದವರ ಮಾತು ಹಾಗಲ್ಲ ಅವರ ಸಾಮಾನ್ಯ ಜ್ಞಾನವು ತೀರ
ಮೆಯಿರುವದು. ಆದ್ದರಿಂದ ಪ್ರಾಥಮಿಕ ಟ್ರೇನಿಂಗ ಕಾಲೇಜಗಳಲ್ಲಿ ಶಿಕ್ಷಣ ಪದ್ಧ
ಸಂಬಂಧಿಸಿದ ವಿಷಯಗಳನ್ನಷ್ಟೇ ಅಲ್ಲದೆ ವಿಕ್ಕ ಜ್ಞಾನಾರ್ಜನೆಯು ಸಾಮಾನ್ಯ
ಯಗಳನ್ನು ಕಲಿಸಬೇಕಾಗುವದು. ಶಿಕ್ಷಕನು ತನ್ನ ವಿದ್ಯಾರ್ಥಿಗಳಿಗಿಂತ ಎಷ್ಟೋ
ತ ಹೆಚ್ಚಿನ ಜ್ಞಾನವುಳ್ಳವನಾಗಿರಬೇಕೆಂಬುದು ತೀರ ಸಹಜವು. ಶಿಕ್ಷಕನು ತನ್ನ
ವಿದ್ಯಾರ್ಥಿಗಳಿಗೆ ಕಲಿಸಬೇಕಾಗುವಷ್ಟೇ ವಿಷಯಗಳನ್ನು ತಿಳಿದಿದ್ದರೆ ಅವನ ಶಿಕ್ಷಣವು
ಎಂದೂ ಪರಿಣಾಮಕಾರಕವಾಗಲಾರದು. ಅಂದರೆ ಎರಡು ಇಯತ್ತೆಗಳನ್ನು ಕಲಿತ
ನು ಎಂದೂ ಎರಡನೇ ಇಯತ್ತೆಯ ಶಿಕ್ಷಕನಾಗಲಾರನು. ಇದೇ ಸಂಗತಿಯನ್ನು
ನ್ನನೇಕ ಉದಾಹರಣೆಗಳಿಂದ ಸಿದ್ಧ ಮಾಡಬಹುದು. ಶ್ರೀಮಂತನಿದ್ದವನು ಬೇಡಿದ
ರಿಗೆ ಸ್ವಲ್ಪ ಹಣವನ್ನು ಕೊಡಬಲ್ಲನು. ಆದರೆ ಬಡವನು ಏನು ಕೊಡಬಲ್ಲನು ?
ನ್ನು ಎಂಥವರು ಶಿಕ್ಷಕರ ಕೆಲಸಕ್ಕೆ ತಕ್ಕವರೆಂಬದನ್ನು ನೋಡುವ. ಶಿಕ್ಷಕನು ಕೇವಲ
ಗಾರಕ್ಕಾಗಿ ಕೆಲಸ ಮಾಡುವಂಥವನಿರಕೂಡದು. ಅವನು ತನ್ನ ಪ್ರೀತಿಯ ಉದ್ಯೋ
ವೆಂದು ತಿಳಿದು ಆ ಕೆಲಸವನ್ನು ಕೈಕೊಂಡವನಿರಬೇಕು ಪರಾರ್ಥಕ್ಕಾಗಿ ದುಡಿ
ಯುವವನೂ, ವಿಷಯಗಳ ಸಂಪೂರ್ಣ ಜ್ಞಾನವುಳ್ಳವನೂ, ಶಿಕ್ಷಕನ ಹೋರಿಗೆ ಬೇಕಾ
ವಂಥ ಪದ್ಧತಿಗಳ ಪರಿಜ್ಞಾನವುಳ್ಳವನೂ ಆದವನೇ ಶಿಕ್ಷಕನ ಕೆಲಸಕ್ಕೆ ತಕ್ಕವನೆನೆಸಿ
ಕೊಳ್ಳುವನು. ಪ್ರಪಂಚದ ಸಾಮಾನ್ಯ ಜ್ಞಾನವನ್ನು ಪಡೆದವನೆಂಬದಿಷ್ಟೇ ಆಧಾರದ
ಮೇಲಿಂದ ಯಾರಿಗೂ ಕೋರ್ಟು ಕಚೇರಿಗಳಲ್ಲಿ ವಕೀಲನ ಕೆಲಸ ಮಾಡಲಿಕ್ಕೆ ಕೊಡು
ವದಿಲ್ಲ. ಅವನು ಕಾಯದೆಯನ್ನು ಅಭ್ಯಾಸಮಾಡಿ ತಕ್ಕ ಪರೀಕ್ಷೆಯಲ್ಲಿ ಪಾಸಾ
ದರೆ ಮಾತ್ರ ಅಂಥ ಕೆಲಸಕ್ಕೆ ತಕ್ಕವನೆಂದು ತಿಳಿಯುವರು. ಅದರಂತೆ ಸಿಕ್ಕ ಸಿಕ್ಕವ
ನಿಗೆ ಡಾಕ್ಟರನಂತೆ ಕೆಲಸ ಮಾಡಿ ಔಷಧೋಪಚಾರ ಮಾಡಲಿಕ್ಕೆ ಬಿಡುತ್ತಿರುವದಿಲ್ಲ.
ವನು ದೀರ್ಘ ಕಾಲದವರೆಗೆ ತನ್ನ ಉದ್ಯೋಗಕ್ಕೆ ಸಂಬಂಧಿಸಿದ ವಿಷಯಗಳನ್ನು
ಭ್ಯಾಸ ಮಾಡಬೇಕಾಗುವದು. ಆದರೆ ಸ್ಥಾನಿಕ ಸಂಸ್ಥೆಗಳಿಗೆ ಅಂಟ್ರೇಂಡ ಜನ
ನ್ನು ಶಿಕ್ಷಕರ ಕೆಲಸಕ್ಕೆ ನಿಯಮಿಸಿಕೊಳ್ಳಲಿಕ್ಕೆ ಅಪ್ಪಣೆ ಕೊಡುತ್ತಿರುವದನ್ನು ನೋಡಿ
ರಿ ವಿದ್ಯಾಖಾತೆಯವರು ಮಾತ್ರ ಈ ಎಲ್ಲ ಸಂಗತಿಗಳನ್ನು ಮರೆತುಬಿಟ್ಟಂತೆ ತೋರು
ದು. ಆದ್ದರಿಂದ ಹಿಂದೆ ಹೇಳಿದ ನಿಯಮವನ್ನು ಬದಲಿಸಿ ಎಲ್ಲ ಶಿಕ್ಷಕರೂ ಟ್ರೇಂಡತೇ
ರಬೇಕೆಂದು ನಿಯಮವಾಡಬೇಕಾಗುವದು. ಚಿಕ್ಕ ಮಕ್ಕಳು ಪ್ರಾಥಮಿಕ ಶಾಲೆ
ಗಳಲ್ಲಿ ಕಲಿತುಕೊಂಡ ವಿಷಯಗಳ ಭಾವನೆಗಳು ಬಹುಕಾಲದವರೆಗೆ ಉಳಿಯು ಬಿಡುವ
ದರಿಂದ ಆ ಕಾಲದಲ್ಲಿ ಅವರ ಮನಸ್ಸಿನಲ್ಲಿ ಯೋಗ್ಯ ಭಾವನೆಗಳು ಬಿಂಬಿಸುವಂತೆ
ಮಾಡುವದು ಅತಿ ಮಹತ್ವದ ವಿಷಯವು. ಮತ್ತು ಅದಕ್ಕಾಗಿ ಯೋಗ್ಯ ಜನರನ್ನೇ
ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೆಲಸಕ್ಕೆ ನಿಯಮಿಸಬೇಕಾಗುವದು. ಶಿಕ್ಷಕರು ವಿದಾ.

ರ್ಥಿಗಳಿಗೆ ಹಲ ಕೆಲವು ವಿಷಯಗಳ ಜ್ಞಾನ ಮಾಡಿಕೊಟ್ಟರೆ ತಮ್ಮ ಕೆಲಸವಾ
ತೆಂದು ತಿಳಿಯಕೂಡದು. ಶಿಕ್ಷಕರು ತಮ್ಮ ಬಾಲಕರು ಸತ್ಯಪ್ರಿಯರೂ, ಸಜ್ಜನರ
ಮೈಮುರಿದು ದುಡಿಯುವವರೂ, ಚಪಲರೂ, ನಿರೀಕ್ಷಣ ಶಕ್ತಿಯುಳ್ಳವರೂ, ರಾ
ನಿಷ್ಠರೂ ಆದ ನಾಗರಿಕರಾಗಬೇಕೆಂಬ ಧ್ಯೇಯವುಳ್ಳವರಾಗಿರಬೇಕಲ್ಲದೆ ಯಾವಾಗಲ
ವಿದ್ಯಾರ್ಥಿಗಳಾಗಿರಬೇಕಾಗುವದು.

೪. ಟ್ರೇನಿಂಗ ಕಾಲೇಜದಲ್ಲಿ ಕಲಿಯುವ ಉಮೇದವಾರರಿಗೆ ಸ್ಕಾಲರಶಿಪ್ಪು
ಳನ್ನು ಕೊಡುವ ಕಾರಣವಿಲ್ಲ. ಅವರಿಗೆ ಎರಡು ವರ್ಷಗಳವರೆಗೆ ಬೇರೆ ಬೇರೆ ವಿಷಂ
ಗಳನ್ನು ಕಲಿಸತಕ್ಕದ್ದು. ಇಂಥ ಟ್ರೇಂಡ ಜನರಿಗೆ ನೌಕರಿಯನ್ನು ಕೊಡುವದಕ
ಸರಕಾರವಾಗಲಿ ಸ್ಥಾನಿಕ ಸಂಸ್ಥೆಗಳಾಗಲಿ ಹೊಣೆಯನ್ನು ಹೊರುವ ಕಾರಣವಿಲ್ಲ
ಕಳೆದ ಎರಡು ವರ್ಷಗಳಿಂದಲೂ ಸ್ಥಾನಿಕ ಸಂಸ್ಥೆಗಳಿಂದ ಬಂದಿರುವ ಉಮೇದವಾ
ರಿಗೆ ಅವರು ವಿದ್ಯೆಯಲ್ಲಿ ಹಿಂದುಳಿದವರಿದಲಿ ಮುಸಲ್ಮಾನರೇ ಇರಲಿ ಯಾವ ಜಾತಿಯ
ವರೇ ಇದ್ದರೂ ಸ್ಕಾಲರ ಶಿಪ್ಪುಗಳನ್ನು ಕೊಟ್ಟಲ್ಲ. ಹೀಗೆ ತಮ್ಮ ಸ್ವಂತ ಖರ್ಚಿನಿಂ
ಶಿಕ್ಷಣ ಪಡೆಯುವಂಥ ಉಮೇದವಾರರಿಗೆ ದಕ್ಷಿಣ ಭಾಗದಲ್ಲಿ ಕೊರತೆಯಿರುವದಿಲ್ಲ
ಸದ್ಯಕ್ಕೆ ಪ್ರಯೋಗಾರ್ಥವಾಗಿ ಧಾರವಾಡ, ಬೆಳಗಾಂವ, ಮತ್ತು ವಿಜಾಪುರ ಜಿಲ್ಲೆ
ಳಿಂದ ೩೫ ಜನ ಉಮೇದವಾರರನ್ನು ಈ ಕರಾರಿನ ಮೇರೆಗೆ ಇಟ್ಟುಕೊಂಡು ಒಂದ
ವರ್ಗವನ್ನು ನಡೆಯಿಸಬೇಕು. ಟ್ರೇನಿಂಗ ಸ್ಕೂಲಿನಲ್ಲಿ ಶಿಕ್ಷಣ ಪಡೆದ ತರುವಾಯ ಅ
ರನ್ನು ಆಯಾ ಸ್ಥಾನಿಕ ಸಂಸ್ಥೆಗಳವರು ಶಿಕ್ಷಕರ ಕೆಲಸಕ್ಕೆ ನಿಯಮಿಸಿಕೊಳ್ಳಬಹುದು
ಇಲ್ಲವೆ ಅವರು ಸಣ್ಣ ಸಣ್ಣ ಹಳ್ಳಿಗಳಲ್ಲಿ ಗಾವಠೀ ಶಾಲೆಗಳನ್ನು ಆರಂಭಿಸಬಹುದು
ಈ ಮೇಲೆ ಹೇಳಿದ ಸಂಗತಿಗಳ ಮೇಲಿಂದ ಟ್ರೇನಿಂಗ ಸ್ಕೂಲಿನಲ್ಲಿ ಈಗಿನಕಿಂತಲೂ
ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಅದನ್ನು ನಡೆಯಿಸುವದು ಶಕ್ಯವೂ ಅವ
ಶ್ಯವೂ ಇರುವದೆಂಬದು ಸಿದ್ಧವಾಗುವದು.

೫. ಟ್ರೇನಿಂಗ ಕಾಲೇಜಗಳ ಅಭ್ಯಾಸ ಕ್ರಮವು ಯಾವ ರೀತಿಯಾಗಿರಬೇಕೆಂಬ
ವಿಷಯದ ಬಗ್ಗೆ ಗಿರಿಲನೇ ಇಸ್ವಿಯಿಂದಲೂ ಸರಕಾರವು ತಪ್ಪು ಮಾಡುತ್ತ ಬಂದಿರು
ವದೆಂದು ತೋರುವದು. ಜ್ಞಾನವರ್ಧಕ ವಿಷಯಗಳನ್ನಿಸಿಕೊಳ್ಳುವ ಸಂಸ್ಕೃತ
ಬೀಜಗಣಿತಗಳನ್ನು ಟ್ರೇನಿಂಗ ಕಾಲೇಜದ ಅಭ್ಯಾಸ ಕ್ರಮದೊಳಗಿಂದ ಕಿತ್ತೊಗೆದಿರು
ವರು. ಅಂಕಗಣಿತಕ್ಕೆ ಬೀಜಗಣಿತವು ಮೂಲಾಧಾರವಾಗಿರುವದರಿಂದ ಬೀಜಗಣಿತದ
ಜ್ಞಾನವಿಲ್ಲದ ಶಿಕ್ಷಕನು ಅಂಕಗಣಿತವನ್ನು ಸರಿಯಾಗಿ ಕಲಿಸಬಹುದೆಂದು ತಿಳಿಯು
ವದು ಹಾಸ್ಯಾಸ್ಪದವಾಗಿದೆ. ಅದರಂತೆ ಸಂಸ್ಕೃತದ ಜ್ಞಾನವಿಲ್ಲದೆ ಕನ್ನಡದ ಅವ
ರಲ್ಲಿಯೂ ಗ್ರಾಂಥಿಕ ಕನ್ನಡ ಭಾಷೆಯ ಅಭ್ಯಾಸವು ಪೂರ್ಣವಾಗಬಹುದೆಂದು ತಿಳಿಯು
ವದೂ ಕೂಡ ಅಷ್ಟೇ ನಗೆಪೀಟಿಕೆಯವದು.

್ಯಾಸ ಕ್ರಮವನ್ನು ಕಡಿಮೆ ತರಗತಿಗೆ ಇಳಿಸಿದ್ದು ಸರಿಯಲ್ಲ. ಕಾರಣ ಸಂಸ್ಕೃತ
ಜಗಣಿತಗಳನ್ನು ಟ್ರೇನಿಂಗ ಕಾಲೇಜದ ಅಭ್ಯಾಸ ಕ್ರಮದಲ್ಲಿ ಪುನಃ ಸೇರಿಸಲೇಬೇ
ದು ಆಗ್ರಹಪೂರ್ವಕವಾಗಿ ಹೇಳದಿರಲಾರೆನು. ಇನ್ನೊಂದು ಆಶ್ಚರ್ಯಕರವಾದ
ತೇನೆಂದರೆ ಟ್ರೇ. ಕಾ. ದ ಮೊದಲನೇ ವರ್ಷದ ವಿದ್ಯಾರ್ಥಿಗಳು ಕನ್ನಡ ಕ್ರಮಿಕ
ಸ್ತಕಗಳ ಹೊರತಾಗಿ ಯಾವ ಗದ್ಯ ಇಲ್ಲವೆ ಪದ್ಯ ಗ್ರಂಥಗವನ್ನು ಓದಬೇಕಾಗುವದೇ
ಲ್ಲ ! ಉಚ್ಚ ತರದ ಗದ್ಯ ಪದ್ಯ ಕಾವ್ಯಗಳ ಅಭ್ಯಾಸ ಮಾಡದೆ ಇದ್ದ ವಿದ್ಯಾರ್ಥಿ
ರ್ಗಳು ಭಾಷಾ ಸೌಂದರ್ಯವನ್ನಾಗಲಿ ಹೆಚ್ಚಿನ ವಿಚಾರಗಳನ್ನಾಗಲಿ ಹೇಗೆ ತಿಳಿದು
ಳ್ಳುವರೆಂಬದು ತೀರ ಆಶ್ಚರ್ಯದ ವಿಷಯವು.

೬. ಪ್ರಾಥಮಿಕ ಶಿಕ್ಷಕರ ಪಗಾರಿನ ವಿಷಯವಾಗಿ ವಿಚಾರಮಾಡಿ ನೋಡಿದರೆ
ನದಿಗೆ ಈಗ ಅವರ ಯೋಗ್ಯತೆಗೆ ಏನೂ ಪಗಾರು ಕೊಡಲ್ಪಡುವದೆಂದು ಹೇಳಬೇಕಾಗು
ದು. ತೀರ ಕಡಿಮೆ ಪಗಾರವನ್ನು ೩೫ ರೂ ಇಟ್ಟಿದ್ದು ಬಹಳ ಹೆಚ್ಚಾಗಿದೆ. ಇನ್ನು
ುಂದೆ, ಮೊದಲನೇ ವರ್ಷದ ಟ್ರೇಂಡರ ಆರಂಭದ ಪಗಾರ ೩೦ ರೂ. ಇದ್ದರೆ
ಕು. ಸ್ಥಾನಿಕ ಸಂಸ್ಥೆಗಳು ೧೫ ರೂ. ಗಳ ಮೇಲೆ ಅಂಟ್ರೇಂಡ ಶಿಕ್ಷಕರನ್ನು
ತ್ಯಾಲಿಕವಾಗಿ ನೇಮಿಸಿಕೊಳ್ಳಬಹುದು. ಎರಡನೇ ಮೂರನೇ ವರ್ಷಗಳ ಟ್ರೇಂಡ
ಕ್ಷಕರ ಆರಂಭದ ಪಗಾರವು ಕ್ರಮವಾಗಿ ೨೫–೩೦ ರೂ. ಇರಬಹುದು. ೧ನೇ ೨ನೇ
ನೇ ವರ್ಗಗಳ ಟ್ರೇಂಡ ಶಿಕ್ಷಕರ ಕೊನೆಯ ಪಗಾರು ಕ್ರಮವಾಗಿ ೪೦– ೪೫– ೫೦
ದ್ದರೆ ಸಾಕು. ವರ್ಷಂಪ್ರತಿ ಬಡತಿಯ ಸ್ಕೇಲಿನಂತೆ ಪಗಾರು ಕೊಡುವ ಪದ್ಧತಿಯು
ಪ್ರಾಥಮಿಕ ಶಿಕ್ಷಕರಿಗೆ ತಕ್ಕದ್ದಲ್ಲ. ಈ ತರದ ರೂಢಿಸು ಪ್ರಚಾರದಲ್ಲಿ ಬಂದಂದಿ
ುದಲೂ ಶಿಕ್ಷಕರು ತಮ್ಮ ಕೆಲಸದಲ್ಲಿ ತಕ್ಕ ಕಾರ್ಯಸ್ಫೂರ್ತಿಯನ್ನು ತೋರಿಸುವದಿಲ್ಲ;
ುತ್ತು ಬಹುಜನ ಶಿಕ್ಷಕರು ತಮ್ಮ ಹಿಂದಿನ ಶಿಕ್ಷಕರಂತೆ ಸ್ಫೂರ್ತಿಯಿಂದಲೂ ಉತ್ಸಾಹ
ಂದಲೂ ಕೆಲಸಮಾಡುತ್ತಿರುವದಿಲ್ಲ. ಈಗಿನವರಂತೆ ನಿಯಮಿತ ಕಾಲಾವಧಿಯಿಂದ
ೂತ್ತಾದಷ್ಟು ಬಡತಿಯನ್ನು ಕೊಡುವ ಪದ್ಧತಿಯನ್ನು ನಿಲ್ಲಿಸಿಬಿಡುವದು ಪ್ರಾಥಮಿಕ
ಕ್ಷಣದ ದೃಷ್ಟಿಯಿಂದ ನೋಡಿದರೆ ಹಿತಾವಹವಾಗಿದೆ. ಇನ್ನು ಮುಂದೆ ಶಿಕ್ಷಕರ ಕೆಲಸ
ಲ್ಲಿ ಯೋಗ್ಯತೆಯನ್ನು ನೋಡಿ ಬಡತಿಗಳನ್ನು ಕೊಡತಕ್ಕದ್ದು. ಅದರಿಂದ ಶಿಕ್ಷಕರಲ್ಲಿ
ೋಗ್ಯ ಮೇಲಾಟವೂ ಸ್ಪರ್ಧೆಯೂ ಉಂಟಾಗುವವು. ಈಗ ಕೊಟ್ಟಿರುವ ಹೆಡ್
ಾಸ್ತರ ಅಲಾವನ್ನು ಹೆಡ್‌ಮಾಸ್ತರ ಮತ್ತು ಅಸಿಃ ರಲ್ಲಿ ಕಲಹಕ್ಕೆ ಕಾರಣವಾಗುವ
ರಿಂದ ಅದನ್ನು ನಿಲ್ಲಿಸಿಬಿಡತಕ್ಕದ್ದು. ಈ ರೀತಿ ಆರಂಭದ ಪಗಾರವನ್ನು ಕಡಿಮೆ
ಾಡಿ, ನಿಯಮಿತ ಕಾಲಾವಧಿಯಿಂದ ಬಡತಿಯನ್ನು ಕೊಡುವ ಕ್ರಮವನ್ನು ನಿಲ್ಲಿಸಿ,
ಹೆಡ್‌ಮಾಸ್ತರರಿಗೆ ಅಲಾವನ್ಸನ್ನು ಕೊಡುವ ಕ್ರಮವನ್ನು ಬಂದು ಮಾಡುವದರಿಂದ
ಸರಕಾರಕ್ಕೆ ವೆಚ್ಚವು ಬಹಳ ಕಡಿಮೆಯಾಗಿ ಉಳಿತಾಯವಾಗುವದು. ಈ ಹಣವನ್ನು
ಪ್ರಾಥಮಿಕ ಶಿಕ್ಷಣದ ಪ್ರಸಾರಕ್ಕಾಗಿಯೂ ಟ್ರೇನಿಂಗದ ಬಗ್ಗೆಯೂ ಉಪಯೋಗಿಸಿ
ಕೊಳ್ಳಬಹುದು.

೭. ಧಾರವಾಡದ ಟ್ರೇನಿಂಗ ಸ್ಕೂಲನ್ನು ಬಂದು ಮಾಡದೆ ಅದಕ್ಕೆ ಇನ್ನ
ಹೆಚ್ಚಿಗೆ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕೆಂತಲೂ ಒತ್ತಾಯದ ಪ್ರಾಥಮಿಕ ಶಿ
ಣದ ಕಾಯದೆಯೊಳಗಿನ ಹಿಂದೆಹೇಳಿದ ಭಾಗಗಳನ್ನು ತಿದ್ದಿ ಸರಿಪಡಿಸಬೇಕೆಂತ
ಸ್ಥಾನಿಕ ಸಂಘಗಳಿಗೆ ಕೊಟ್ಟಿರುವ ಅಧಿಕಾರಿಗಳನ್ನು ದುರುಪಯೋಗ ವಾಗುವ ಪ್ರ
ಗದಲ್ಲಿ ಅವುಗಳ ಮೇಲೆ ಯೋಗ್ಯ ಮೇಲ್ವಿಚಾರಣೆ ನಡಿಸಿ ಅವುಗಳ ಮಾರ್ಗವ
ನಿಯಂತ್ರಣಪಡಿಸುವದಕ್ಕೆ ಆವಶ್ಯಕವೆನಿಸುವ ಕೆಲವು ಹೆಚ್ಚಿನ ಮಾತುಗಳನ್ನು ಅದ
ಸೇರಿಸಬೇಕೆಂತಲೂ ತುಂಬಾ ಆಗ್ರಹದೊಡನೆ ವಿನಂತಿ ಮಾಡಿಕೊಂಡು ಈ ವಿನ
ಪತ್ರವನ್ನು ಮುಗಿಸುವೆನು.

S. K. Rodda

ಗ್ರಂಥವಿಮರ್ಶೆ

ಪುಟ್ಟಭಾರತ:—ಬೆಲೆ ಆಣೆ. ಗ್ರಂಥಕರ್ತ—ಓಂಕಾರ ಬಾಳಕೃಷ್ಣಬೋ
ದೊರೆಯುವಸ್ಥಳ—ರಾಮತತ್ವಪ್ರಕಾಶ ಮುದ್ರಾಲಯ ಬೆಳಗಾಂವ. ಈ ಚಿಕ್ಕ ಪುಸ್ತಕದ
ಮಹಾಭಾರತದ ಗಿಲಪರ್ವಗಳ ಸಾರಾಂಶವು ಬಹು ಮನೋಹರವಾಗಿ ಸುಲಭ ಭಾ
ಯಲ್ಲಿ ಬಾಲಕರಿಗೆ ಸಹ ತಿಳಿಯುವಂತೆ ಕೊಡಲ್ಪಟ್ಟಿದೆ. ಶಬ್ದಲಾಲಿತ್ಯವೂ ಅನುಸ
ಸವೂ ಸರಿಯಾಗಿರುವವು. ಹೆಣ್ಣುಮಕ್ಕಳು ಈ ಪುಸ್ತಕವನ್ನು ಓದಿ ಬೋಧವನ
ಆನಂದವನ್ನೂ ಹೊಂದಬಹುದು. ಪ್ರಾ. ಶಾ. ಗಳ ೩–೪ನೇ ಇಯತ್ತೆಗ
ಪುರವಣಿ ಪಠ್ಯ ಪುಸ್ತಕವಾಗಿ ಉಪಯೋಗಿಸಲಿಕ್ಕೆ ತಕ್ಕದ್ದಾಗಿದೆ. ದೊಡ್ಡ ಅಕ್ಷರಗ
ಮುದ್ರಣದಿಂದ ಓದಲಿಕ್ಕೆ ಸುಗಮವಾಗಿರುವದು.

ಶಾರದೆ (ಮಾಸಪತ್ರಿಕೆ) ವಾರ್ಷಿಕವರ್ಗಣೆ—೧ರು. ೪ ಆಣೆ. ಸಂಪಾದಕ
ಭೀ. ಜೀ. ಹುಲಕವಿ ಧಾರವಾಡ. ಶಾರದೆಯು ಪ್ರಭವ ಸಂವತ್ಸರದ ಚೈತ್ರದಲ್ಲಿ ಪ್ರಾರಂ
ವಾಗಿದೆ. ಈಗ ನಾಲ್ಕು ಸಂಚಿಕೆಗಳು ಕೈಸೇರಿವೆ ಇದರಲ್ಲಿ ಸುಲಭ ಪದ್ಯಗಳ
ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಕಥೆಗಳೂ, ಹಾಸ್ಯಪ್ರಧಾನ ಲೇಖಗಳೂ ಬ
ತ್ತವೆ. ಅವುಗಳಲ್ಲಿ ಗಿರಿಯಮ್ಮನ ಚರಿತ್ರೆ, ಒಂದೇಗತಿ, ಬದನೇಕಾಯಿಯ ಜವಾ
ಮುಂತಾದ ಲೇಖಗಳು ಉತ್ತಮವಾಗಿವೆ. ವಿದ್ಯಾರ್ಥಿಗಳೂ ಶಿಕ್ಷಕರೂ ಈ ಮಾಸಿಕ
ಯೋಗ್ಯ ಆಶ್ರಯವನ್ನು ಕೊಡುವರೆಂದು ನಂಬುತ್ತೇವೆ.

ಕ. ಶಾ. ಪತ್ರಕ.

ಕನ್ನಡ

ಸುಲಭ ವ್ಯಾಕರಣ

ವಾಕ್ಯ—

(೧) ರಾಮನು ಬರುತ್ತಾನೆ. (೨) ಅವನು ಮಗನನ್ನು ಕರೆದನು. (೩) ನಾಯಿಯು ರೊಟ್ಟಿಯನ್ನು ತಿನ್ನುವದು. (೪) ನಾನು ಆನೆಯನ್ನು ತೀವ್ರ ಹತ್ತುತ್ತೇನೆ. (೫) ನೀನು ಹೊಲದಿಂದ ಬಾ.

(ಇವು ಸಂಪೂರ್ಣ ಮಾತುಗಳು ಅವೆ.)

೧ನೇ ಮಾತಿನಲ್ಲಿ— ರಾಮನು ಮತ್ತು ಬರುತ್ತಾನೆ ಎಂಬ ೨ ಪದಗಳು ಅವೆ.

೨ನೇ ಮಾತಿನಲ್ಲಿ— (೧) ಅವನು, (೨) ಮಗನನ್ನು, (೩) ಕರೆದನು ಎಂಬ ೩ ಪದಗಳು ಅವೆ.

೩ನೇ ಮಾತಿನಲ್ಲಿ— (೧) ನಾಯಿಯು. (೨) ರೊಟ್ಟಿಯನ್ನು, (೩) ತಿನ್ನುವದು ಎಂಬ ೩ ಪದಗಳು ಅವೆ.

೪ನೇ ಮಾತಿನಲ್ಲಿ— (೧) ನಾನು, (೨) ಆನೆಯನ್ನು, (೩) ತೀವ್ರ, (೪) ಹತ್ತುತ್ತೇನೆ ಎಂಬ ನಾಲ್ಕು ಪದಗಳು ಅವೆ.

೫ನೇ ಮಾತಿನಲ್ಲಿ— (೧) ನೀನು, (೨) ಹೊಲದಿಂದ, (೩) ಬಾ ಎಂಬ ಮೂರು ಪದಗಳು ಅವೆ.

ಈ ಪ್ರಕಾರ ಪದಗಳಿಂದ ವಾಕ್ಯಗಳಾಗಿವೆ. ಅವ್ವರಿಂದ—

೧ನೇ ನೇವು— ಎರಡಾಗಲಿ ಹೆಚ್ಚಾಗಲಿ ಪದಗಳಿಂದ ಕೂಡಿದ ಸಂಪೂರ್ಣ ಮಾತಿಗೆ **ವಾಕ್ಯವೆನ್ನುವರು.**

ಶಬ್ದ—

ತಾ, ನೀ, ಬಾ.	ಇವು	ಒಂದು	ಅಕ್ಷರವಿದ್ದು	ಅರ್ಥವನ್ನು ಕೊಡುತ್ತವೆ.
ರಾಮ, ಕಾಗೆ, ಕಲ್ಲು,	ಇವು	ಎರಡು	,,	,, ,,
ಅಗಸ, ಗಗನ, ಕಮಲ,	ಇವು	ಮೂರು	,,	,, ,,
ಕರಗಸ, ಅವಸರ, ಗಣಪತಿ	ಇವು	ನಾಲ್ಕು	,,	,, ,,

ಇದರಂತೆ ಇನ್ನೂ ಹೆಚ್ಚು ಹೆಚ್ಚು ಅಕ್ಷರಗಳು ಕೂಡಿ ಅರ್ಥವನ್ನು ಕೊಡುತ್ತವೆ. ಈ ಪ್ರಕಾರ ಅನೇಕ ಶಬ್ದಗಳು ಉಂಟು.

ಆದ್ದರಿಂದ—

೨ನೇ ನೇಮ— ಅರ್ಥವುಳ್ಳ ಅಕ್ಷರಕ್ಕಾಗಲಿ, ಅಕ್ಷರಗಳಿಗಾಗಲಿ **ಶಬ್ದ**ವೆನ್ನುವರು.

ಪ್ರತ್ಯಯ—

ರಾಮ, ಪುಸ್ತಕ, ಇರು ಎಂದು ಇಷ್ಟೇ ಮಾತಾಡಿದರೆ ಏನೂ ಸಂಬಂಧ ತಿಳಿಯುವದಿಲ್ಲ.

ಮಗ, ಅವ ಕರೆ, ಅಂದರೆ ಏನೂ ತಿಳಿಯುವದಿಲ್ಲ.

ಕೋಳಿ, ಗಿಡ, ಹಾರು ,, ,,

ಆದ್ದರಿಂದ—

ಶಬ್ದ.		ಹತ್ತುವ ಅಕ್ಷರ.		ಸಿದ್ಧರೂಪ.	
ರಾಮ	+	ನ	=	ರಾಮನ	ಈ ಪ್ರಕಾರ ವಾಕ್ಯಗಳನ್ನು ಓದಬೇಕು.
ಪುಸ್ತಕ	+	ವು	=	ಪುಸ್ತಕವು	
ಇರು	+	ತ್ತದೆ	=	ಇರುತ್ತದೆ	
ಅವ	+	ನು	=	ಅವನು	
ಮಗ	+	ನನ್ನು	=	ಮಗನನ್ನು	,,
ಕರಿ	+	ದನು	=	ಕರಿದನು	
ಕೋಳಿ	+	ಯು	=	ಕೋಳಿಯು	
ಗಿಡ	+	ದಿಂದ	=	ಗಿಡದಿಂದ	,,
ಹಾರು	+	ತ್ತದೆ	=	ಹಾರುತ್ತದೆ	ಇತ್ಯಾದಿ.

ಈ ಪ್ರಕಾರ ಮೂಲ ಶಬ್ದದ ಮುಂದೆ ಅಕ್ಷರವನ್ನು ಅಥವಾ ಅಕ್ಷರಗಳನ್ನು ಹಚ್ಚಿ (ಮುಂದಿನ ಶಬ್ದಕ್ಕೆ ಸಂಬಂಧವಾಗುವಂತೆ) ಮಾತಾಡಿದರೆ ವಾಕ್ಯವು ಪೂರ್ಣವಾಗುವದು.

ಆದ್ದರಿಂದ—

೩ನೇ ನೇಮ— ವಾಕ್ಯದಲ್ಲಿ (ಮಾತಿನಲ್ಲಿ) ಶಬ್ದಗಳ ಸಂಬಂಧವು ತಿಳಿಯುವದಕ್ಕಾಗಿ ಅವುಗಳ ಮುಂದೆ ಹಚ್ಚುವ ಅಕ್ಷರಕ್ಕೆ ಅಥವಾ ಅಕ್ಷರಗಳಿಗೆ **ಪ್ರತ್ಯಯ**ವೆನ್ನುವರು.

ಪದ—

ಹಿಂದೆ ಹೇಳಿದಂತೆ—

ಮೂಲಶಬ್ದ.		ಪ್ರತ್ಯಯ.		ಪದ
ರಾಮ	+	ನ	=	ರಾಮನ
ಪುಸ್ತಕ	+	ವು	=	ಪುಸ್ತಕವು
ಇರು	+	ತ್ತದೆ	=	ಇರುತ್ತದೆ— ಇತ್ಯಾದಿ.

ಈ ಪ್ರಕಾರ ಪದಗಳಾಗುತ್ತವೆ. ಆದ್ದರಿಂದ—

ಳನೇ ನೇಮ—ಮೂಲ ಶಬ್ದಕ್ಕೆ ಪ್ರತ್ಯಯವನ್ನು ಹಚ್ಚಿದರೆ ಆಗುವ ರೂಪಕ್ಕೆ **ಪದ**ವೆಂಬ ಹೆಸರು.

ಟೀಪು— ಪದಗಳು ಅಕ್ಷರಗಳಿಂದ ಆಗುತ್ತವೆ

ಅಕ್ಷರ ಪ್ರಕರಣ

ಅಕ್ಷರಗಳಲ್ಲಿ ಭೇದ

ಅಕ್ಷರಗಳಲ್ಲಿ ಮೂಲಾಕ್ಷರ ಗುಣಿತಾಕ್ಷರ ಒತ್ತಕ್ಷರ ಎಂದು ಮೂರು ಪ್ರಕಾರಗಳುಂಟು.

ಮೂಲಾಕ್ಷರಗಳ ವಿವರ

ಮೂಲಾಕ್ಷರಗಳಲ್ಲಿ

(೧) **ಸ್ವರಗಳು**— ಅ ಆ ಇ ಈ ಉ ಊ ಋ ೠ ಌ ೡ ಎ ಏ ಐ ಒ ಓ ಔ (೧೪)

(೨) **ಅರ್ಧಸ್ವರಗಳು**— ಂ ಅನುಸ್ವಾರ, ಃ ವಿಸರ್ಗ (೨).

(೩) **ವ್ಯಂಜನಗಳು** — (ಕ್, ಚ್, ಪ್, ಇವು ವ್ಯಂಜನ ರೂಪಗಳು. ಆದರೆ ಕೆಳಗೆ ಬರಿದ ವ್ಯಂಜನಗಳಿಗೆ ಅ (—) ಸ್ವರ ಜಿನ್ನ ಕೂಡಿಸಿ ಬರೆದು ವ್ಯಂಜನಗಳಲ್ಲಿರುವ ಭೇದಗಳನ್ನು ಹೇಳಿರುತ್ತದೆ.)

ವ್ಯಂಜನಗಳಲ್ಲಿ—

(ಅ) ವರ್ಗೀಯ ವ್ಯಂಜನಗಳು ೨೫— ಕ ಖ ಗ ಘ ಙ (ಕವರ್ಗ)
ಚ ಛ ಜ ಝ ಞ (ಚವರ್ಗ)
ಟ ಠ ಡ ಢ ಣ (ಟವರ್ಗ)
ತ ಥ ದ ಧ ನ (ತವರ್ಗ)
ಪ ಫ ಬ ಭ ಮ (ಪವರ್ಗ)

(ಬ) ಅವರ್ಗೀಯ ವ್ಯಂಜನಗಳು ೯— ಯ ರ ಲ ವ ಶ ಷ ಸ ಹ ಳ.

ಈ ಪ್ರಕಾರ ಸ್ವರಗಳು ೧೪, ಅರ್ಧ ಸ್ವರಗಳು ೨. ವ್ಯಂಜನಗಳು ೩೪. ಅಂತು ೫೦ ಮೂಲಾಕ್ಷರಗಳುಂಟು.

ಸ್ವರಗಳಲ್ಲಿ ಭೇದ

೧. ಹ್ರಸ್ವಸ್ವರಗಳು— ಅ, ಇ, ಉ, ಋ, ಎ, ಒ, ಇವು ಆರು ಎಳೆಯದೆ ಅನ್ನುವ ಸ್ವರಗಳು.

೨. ದೀರ್ಘಸ್ವರಗಳು— ಆ, ಈ, ಊ, ೠ, ಏ, ಐ, ಓ, ಔ ಇವು ೮ ಎಳೆದು ಅನ್ನುವ ಸ್ವರಗಳು.

ವರ್ಗೀಯ ವ್ಯಂಜನಗಳಲ್ಲಿ ಭೇದ

೧. ಅಲ್ಪಪ್ರಾಣಗಳು— ಕ, ಗ, ಚ, ಜ, ಟ, ಡ, ತ, ದ, ಪ, ಬ ಇವು ೧೦ ಹಗುರವಾಗಿ ಅನ್ನತಕ್ಕವು.

೨. ಮಹಾಪ್ರಾಣಗಳು— ಖ, ಘ, ಛ, ಝ, ಠ, ಢ, ಥ, ಧ, ಫ, ಭ, ಇವು ೧೦ ಗಟ್ಟಿಸಿ ಅನ್ನತಕ್ಕವು.

೩ ಅನುನಾಸಿಕಗಳು:—ಙ, ಞ, ಣ, ನ, ಮ, ಇವು ೫ ಮೂಗಿನಿಂದ ಉಚ್ಚಾರವಾಗತಕ್ಕವು.

ಒಟ್ಟು ೩೪ ವ್ಯಂಜನಗಳಲ್ಲಿ ಭೇದ

೧ ಕರ್ಕಶ ವರ್ಣಗಳು:—ಕ, ಖ, ಚ, ಛ, ಟ, ಠ, ತ, ಥ, ಪ, ಫ, ಶ, ಷ, ಸ, ಳ ಇವು ೧೪

೨ ಮೃದುವರ್ಣಗಳು :— ಗ, ಘ, ಙ, ಜ, ಝ, ಞ, ಡ ಢ ಣ, ದ ಧ ನ, ಬ ಭ ಮ, ಯ, ರ, ಲ, ವ, ಹ, ಇವು (೨೦)

(ಇಲ್ಲಿ ಹಿಂದೆ ಕಲಿತ ಸ್ವರಚಿನ್ಹಗಳನ್ನು ನೆನಪಿಗೆ ತರಬೇಕು)

ಗುಣಿತಾಕ್ಷರ:—

ಕ್ ಇದು ವ್ಯಂಜನ, ಇದಕ್ಕೆ ಅ ಸ್ವರದ ಚಿನ್ಹವಾದ — ಇದನ್ನು ಕೂಡಿಸಿದರೆ ಕ ಇದು ಗುಣಿತಾಕ್ಷರವಾಯಿತು. ಇದರಂತೆ

ಗ್+ ು =ಗು, ತ್+ ು =ತು ಈ ಪ್ರಕಾರ ಇತ್ಯಾದಿ ಗುಣಿತಾಕ್ಷರಗಳಾಗುತ್ತವೆ.

ಆದ್ದರಿಂದ—

೫ನೇ ನೇಮು:— ವ್ಯಂಜನಗಳಿಗೆ ಸ್ವರಗಳನ್ನು ಅಂದರೆ ಸ್ವರಚಿನ್ಹಗಳನ್ನು ಕೂಡಿಸಿ ಬರೆದರೆ ಅವುಗಳಿಗೆ **ಗುಣಿತಾಕ್ಷರ**ಗಳೆನ್ನುವರು.

ಬಳ್ಳಿ:—ಕ ಕಾ ಕಿ ಕೀ ಕು ಕೂ ಕೆ ಕೇ ಕೈ ಕೊ ಕೋ ಕೌ ಕಂ ಕಃ
ವ ವಾ ವಿ ವೀ ವು ವೂ ವೆ ವೇ ವೈ ವೊ ವೋ ವೌ ವಂ ವಃ

ಇವು ಬಳ್ಳಿಗಳು. ಇದರಲ್ಲಿ ಕ್ ವ್ಯಂಜನಕ್ಕೆ ಅ ದಿಂದ ಅಂ, ಅಃ ತನಕ ಕ್ರಮದಿಂದ ಸ್ವರಚಿನ್ಹಗಳನ್ನು ಕೂಡಿಸಿ ಕ್ರಮದಿಂದ ಬರೆದದೆ. ಇದರಂತೆ ವಕಾರದ ಬಳ್ಳಿಯೂ ಅದೆ. ಹೀಗೆಯೇ ಉಳಿದವು. ಆದ್ದರಿಂದ—

೬ನೇ ನೇಮು:— ಪ್ರತಿ ಒಂದು ವ್ಯಂಜನಕ್ಕೆ ಕ್ರಮದಿಂದ ಸ್ವರಚಿನ್ಹಗಳನ್ನು ಕೂಡಿಸಿ ಆಗುವ ಗುಣಿತಾಕ್ಷರಗಳನ್ನು ಕ್ರಮದಿಂದ ಬರೆದರೆ ಅವೇ ಬಳ್ಳಿಗಳಾಗುತ್ತವೆ.

ಒತ್ತಕ್ಷರ:—

ತ್+ಕ್+ು=ತ್ಕು ಸ್+ತ್+ರ್+ೀ=ಸ್ತ್ರೀ	ಇವು ಒತ್ತಕ್ಷರಗಳು ಇತ್ಯಾದಿ

ಇವುಗಳಲ್ಲಿ ನಡುವೆ ಸ್ವರವಿಲ್ಲ; ಕಡೆಗೆ ಸ್ವರ ಉಂಟು. ಆ ಸ್ವರವನ್ನು ಮೊದಲಿನ ವ್ಯಂಜನದಲ್ಲಿ ಕೂಡಿಸಿ ಅದರ ಮುಂದಿನ ವ್ಯಂಜನಗಳನ್ನು ಮೊದಲಿನ ಗುಣಿತಾಕ್ಷರದ ಕೆಳಗೆ ಕ್ರಮದಿಂದ ಒತ್ತು ಮಾಡಿ ಬರೆದದ್ದರಿಂದ ಅವು ಒತ್ತಕ್ಷರಗಳಾಗಿರುತ್ತವೆ. ಆದ್ದರಿಂದ—

೭ನೇ ನೇಮು:—ನಡುವೆ ಸ್ವರವಿಲ್ಲದೆ ಎರಡು ಮೂರು ವ್ಯಂಜನಗಳು ಕೂಡಿ ಆಗುವ ಅಕ್ಷರಕ್ಕೆ **ಒತ್ತಕ್ಷರ**ವೆನ್ನುವರು.

ಪದಗಳಲ್ಲಿ ಭೇದ

ಪದಗಳಲ್ಲಿ:—ನಾಮ, ಸರ್ವನಾಮ, ವಿಶೇಷಣ, ಕ್ರಿಯಾಪದ, ಅವ್ಯಯ ಎಂದು ೫ ಭೇದಗಳುಂಟು.

೨ನೆಯ ಪ್ರಕರಣ

ನಾಮ—

ಮನುಷ್ಯಪ್ರಾಣಿಯ ಹೆಸರುಗಳು—ರಾಮ, ಕೃಷ್ಣ, ಬಸಪ್ಪ, ಗಂಗವ್ವ, ಬಾಳವ್ವ ಕಲ್ಲಪ್ಪ, ಇತ್ಯಾದಿ.

ಒಡವೆಯ ಜಾತಿಯ ಹೆಸರುಗಳು—ಮನೆ, ಬಾಗಿಲು, ಪೆಟ್ಟಿಗೆ, ಅಂಗಿ, ಕಾಗದ ಕನ್ನಡಿ, ಪುಸ್ತಕ, ದೌತಿ, ಇತ್ಯಾದಿ.

ಪ್ರಾಣಿಗಳ ಜಾತಿಯ ಹೆಸರು—ಆನೆ, ಕುದುರೆ, ನಾಯಿ, ಒಂಟೆ, ಹಂದಿ ಆಕಳು, ಮನುಷ್ಯ, ಹೆಂಗಸು, ಹುಡುಗ ಜೇಳು, ಇತ್ಯಾದಿ.

ಗುಣಕ್ರಿಯಾದಿಗಳ ಹೆಸರು—ಬಿಟ್ಟ್ಯ, ಆನಂದ, ಸಂತೋಷ, ಪ್ರೀತಿ, ಅಂಜಿ ಸುಖ, ದುಃಖ, ಇತ್ಯಾದಿಗಳು ನಾಮಗಳು.

ಆದ್ದರಿಂದ—

೮ನೇ ನೇಮ:—ಪ್ರಾಣಿ ಮತ್ತು ಒಡವೆಗಳ ಹೆಸರುಗಳಿಗೂ, ಅವುಗಳ ಗುಣ ಕ್ರಿಯಾದಿಗಳ ಹೆಸರುಗಳಿಗೂ **ನಾಮ**ಗಳೆನ್ನುವರು.

ನಾಮಗಳಲ್ಲಿ ಭೇದ

ನಾಮಗಳಲ್ಲಿ—**ರೂಢನಾಮ, ಅಂಕಿತನಾಮ, ಭಾವನಾಮ** ಎಂಬ ಮೂರು ಪ್ರಕಾರಗಳುಂಟು.

ರೂಢನಾಮ:—

ನಾಯಿ, ಹಂದಿ, ಸಂದುಕ, ಪುಸ್ತಕ, ಮನುಷ್ಯ, ಹುಡುಗ, ಅರಿವೆ, ಬಡಿಗ ಕುಂಬಾರ, ಬುದ್ಧಿವಂತ, ಕೂಲಿಕಾರ, ಚಿತ್ರಗಾರ, ಆನೆ, ಒಂಟೆ, ಇತ್ಯಾದಿಗಳು ರೂಢ ನಾಮಗಳು, ಆದ್ದರಿಂದ—

೯ನೇ ನೇಮ:—ಪ್ರಾಣಿಗಳ ಮತ್ತು ವಸ್ತುಗಳ ಜಾತಿಯ ಹೆಸರನ್ನು ಹೇಳುವ ನಾಮಗಳು **ರೂಢನಾಮ**ಗಳು.

ಅಂಕಿತನಾಮ:—

ರಾಮ, ಭೀಮ, ಧಾರವಾಡ, ಗದಗ, ಹಿಮಾಲಯ, ಅರವಲಿ, ಗಂಗಾ, ಜಮು ನಾ, ಹಿಂದುಸ್ತಾನ, ಇಂಗ್ಲಂಡ, ಇತ್ಯಾದಿಗಳು ಇಟ್ಟ ಹೆಸರಾದ್ದರಿಂದ ಇವು ಅಂಕಿತ ನಾಮಗಳು. ಆದ್ದರಿಂದ—

೧೦ನೇ ನೇಮ:—ಪ್ರಾಣಿಗಳಿಗೆ ಮತ್ತು ಊರು, ನದಿ, ಪರ್ವತ, ದೇಶ ಂತಾದವುಗಳಿಗೆ ಇಟ್ಟ ಹೆಸರುಗಳು **ಅಂಕಿತನಾಮಗಳು.**

ವಸ್ತುನಾಮಗಳು:—

ಸಿಟ್ಟು, ಆನಂದ, ಸಂತೋಷ, ಹಂಚಿಕೆ, ಅಂಚಿಕೆ, ನಡತೆ, ನಂಬಿಗೆ, ತೂಕ, ತ, ನೀರಡಿಕೆ, ಉರವಣೆಗೆ, ಮರುಳತನ, ತಂಪು, ಆತುರ, ಇತ್ಯಾದಿ ಇವು ಪ್ರಾಣಿ ು, ವಸ್ತುಗಳ ಗುಣಕ್ರಿಯಾದಿಗಳನ್ನು ತೋರಿಸುವವು ಆವ್ದರಿಂದ—

೧೧ನೇ ನೇಮ:—ಪ್ರಾಣಿ ಮತ್ತು ವಸ್ತುಗಳ ಗುಣಕ್ರಿಯಾದಿಗಳನ್ನು ತೋರಿ ು ನಾಮಗಳು **ಭಾವನಾಮ**ಗಳು.

ನಾಮಗಳ ಲಕ್ಷಣ

ನಾಮಗಳಿಗೆ ಆ ನಾಮದ ಪ್ರಕಾರವಲ್ಲದೆ ಅಂತ, ಲಿಂಗ, ವಿಭಕ್ತಿ, ವಚನಗಳೆಂಬ ೆ ನಾಲ್ಕು ಲಕ್ಷಣಗಳುಂಟು ಅವುಗಳ ವಿವರ—

ಅಂತ—

ರಾಮ, ಈ ಶಬ್ದದ ಕಡೆಯ ಅಕ್ಷರದಲ್ಲಿರುವ ‘ಅ’ ಸ್ವರ
ಉಮಾ, ,, ,, ‘ಆ’ ,, } ಇವು ಅಂತಗಳು
ಗುಡಿ ,, ,, ‘ಇ’ ,, }
ಮನೆ ,, ,, ‘ಎ’ ,, } ಇತ್ಯಾದಿ.

೧೩ನೇ ನೇಮ.— ಪ್ರತಿಯೊಂದು ಮೂಲ ಶಬ್ದದ ಕಡೆಯ ಅಕ್ಷರದಲ್ಲಿರುವ ನೇ ಆ ಶಬ್ದದ **ಅಂತ**ವೆಂದು ತಿಳಿಯಬೇಕು.

ಲಿಂಗ—

ಲಿಂಗಗಳಲ್ಲಿ ಪ್ರಕಾರ

(ಅ) ರಾಮ, ಭೀಮ, ಜಟಿಗ, ಹುಡುಗ, ಅರಸು. ಇತ್ಯಾದಿ. ಇವು ಗಂಡಸರ ಹೆಸರನ್ನು ಸೂಚಿಸುವವು.

೧೩ನೇ ನೇ.— ಗಂಡಸರನ್ನು ಸೂಚಿಸುವ ಶಬ್ದಗಳು **ಪುಲ್ಲಿಂಗ**ಗಳು.

(ಬ) ಗಂಗಾ, ಲಕ್ಷ್ಮಿ, ಸರಸ್ವತಿ, ತಾಯಿ, ರಾಣಿ, ಗೌರಿ, ಮಲ್ಲವ್ವ, ಇತ್ಯಾದಿ ಇವು ಹೆಂಗಸರ ಹೆಸರನ್ನು ಹೇಳುವವು.

೧೪ನೇ ನೇ.— ಹೆಂಗಸರನ್ನು ಸೂಚಿಸುವ ಶಬ್ದಗಳು **ಸ್ತ್ರೀಲಿಂಗಗಳು.**

(ಕ) ನೆಲ, ಮನೆ, ನಾಯಿ, ಗೂಬೆ, ದೀತಿ, ಪರ್ವತ, ನದಿ, ಹು
ಇತ್ಯಾದಿ. ಇವು ಮನುಷ್ಯ ಪ್ರಾಣಿಯ ಹೆಸರನ್ನು ಬಿಟ್ಟು ಅ

೧೫ನೇ ನೇ.— ಮನುಷ್ಯ ಪ್ರಾಣಿಯನ್ನು ಬಿಟ್ಟು ಉಳಿದ ಶಬ್ದಗಳೆಲ್ಲ **ನಪುಂ
ಕಲಿಂಗಗಳು.**

೩. ವಿಭಕ್ತಿ—

ಈ ವಿಭಕ್ತಿಗಳಲ್ಲಿ, ಪ್ರಥಮಾ, ದ್ವಿತೀಯಾ, ತೃತೀಯಾ, ಚತುರ್ಥಿ, ಪಂಚಮಿ
ಷಷ್ಠಿ, ಸಪ್ತಮಿ, ಸಂಬೋಧನ ಎಂದು ೮ ಪ್ರಕಾರಗಳುಂಟು.

ವಿಭಕ್ತಿ ಪ್ರತ್ಯಯ—

ಪ್ರತಿಯೊಂದು ವಿಭಕ್ತಿಗೂ ಬೇರೆ ಬೇರೆ ಪ್ರತ್ಯಯಗಳುಂಟು. ಶಬ್ದಗಳಿಗೆ, ೇ
ವಿಭಕ್ತಿ ಪ್ರತ್ಯಯಗಳನ್ನು ಹಚ್ಚುವದರಿಂದ ಮಾತಿನಲ್ಲಿ ಸಂಬಂಧವು ತಿಳಿಯುತ್ತದೆ
ಹ್ಯಾಗಂದರೆ—

ನಾಯಿ, ಮನೆ ಹೋಯಿತು ಎಂಬಲ್ಲಿ ನಾಯಿ ಮತ್ತು ಮನೆ ಇವುಗಳ ಸಂಬ
ಧವು ಸ್ಪಷ್ಟ ತಿಳಿಯುವದಿಲ್ಲ. ಆದ್ದರಿಂದ—ನಾಯಿ+ ಉ (ಪ್ರತ್ಯಯ ಕೂಡಿ)=ನಾಯಿಯ
ಮನೆ + ಗೆ (ಪ್ರ. ಕೂಡಿ) = ಮನೆಗೆ. ಈ ಪ್ರಕಾರ ರೂಪಗಳಾಗಿ ಅವುಗಳ ಸಂಬ
ಧವು ತಿಳಿದು ನಾಯಿಯು ಮನೆಗೆ ಹೋಯಿತು ಎಂಬ ಮಾತು ಪೂರ್ಣವಾಗುತ್ತದೆ

೧೬ನೇ ನೇ.—ವಾಕ್ಯವಲ್ಲಿ ಶಬ್ದ (ನಾಮ)ಗಳ ಸಂಬಂಧವು ತಿಳಿಯುವದಕ್ಕಾ
ಅವುಗಳ ಮುಂದೆ ಹಚ್ಚುವ ಪ್ರತ್ಯಯಗಳಿಗೆ **ವಿಭಕ್ತಿ ಪ್ರತ್ಯಯ**ಗಳೆನ್ನುತ್ತಾರೆ.

(ಕೆಳಗೆ ವಿಭಕ್ತಿಗಳನ್ನೂ, ಅವುಗಳ ಪ್ರತ್ಯಯಗಳನ್ನೂ ಕ್ರಮದಿಂದ ಹೇಳಿ ೇ
ಪ್ರತ್ಯಯಗಳನ್ನು ಒಂದು ಶಬ್ದಕ್ಕೆ ಹಚ್ಚಿ ರೂಪಗಳನ್ನು ಸಿದ್ಧಮಾಡಿ ತೋರಿಸಿರುತ್ತದೆ)

ವಿಭಕ್ತಿ	ವಿಭಕ್ತಿಪ್ರತ್ಯಯ	ಮೂಲಶಬ್ದ ವಿ. ಪ್ರ.	ರೂಪ
೧ ಪ್ರಥಮಾ	ಉ	ಹುಡುಗ + ಉ	= ಹುಡುಗನು
೨ ದ್ವಿತೀಯಾ	ಅನ್ನು	ಹುಡುಗ + ಅನ್ನು	= ಹುಡುಗನನ್ನು
೩ ತೃತೀಯಾ	ಇಂದ	ಹುಡುಗ + ಇಂದ	= ಹುಡುಗನಿಂದ
೪ ಚತುರ್ಥಿ	* ಗೆ, ಇಗೆ, ಕ್ಕೆ ಅಕ್ಕೆ	ಹುಡುಗ + ಇಗೆ	= ಹುಡುಗನಿಗೆ
೫ ಪಂಚಮಿ	ಇಂದ	ಹುಡುಗ + ಇಂದ	= ಹುಡುಗನಿಂದ
೬ ಷಷ್ಠಿ	ಅ	ಹುಡುಗ + ಅ	= ಹುಡುಗನ
೭ ಸಪ್ತಮಿ	ಅಲ್ಲಿ	ಹುಡುಗ + ಅತ	= ಹುಡುಗನಲ್ಲಿ
೮ ಸಂಬೋಧನ	ಏ	ಹುಡುಗ + ಏ	= ಹುಡುಗನೇ

* ಚತುರ್ಥಿಯ ನಾಲ್ಕೂ ಪ್ರತ್ಯಯಗಳಲ್ಲಿ ಅನುಕೂಲವಾದದ್ದನ್ನು ಹಾಕಿದೇನು.

ರ್ಥರಾಗುವರು. ಅನುಭವವು ಹೆಚ್ಚಾದಂತೆ ಸಣ್ಣವರಿದ್ದಾಗ ಉಂಟಾದ ಭಾವನೆಗಳು ಸರಿಯಾದವುಗಳಲ್ಲವೆಂದು ಅವರಿಗೆ ಅನಿಸುತ್ತದೆ. ಹುಡುಗಾಟಿಕೆಯು ಸೇರದಂತಾಗುವದು. ಸಂಘಶಕ್ತಿಯು ಕಾಣಿಸಿಕೊಳ್ಳುವದು. ಮನೋವಿಕಾರಗಳು ಹೆಚ್ಚುಗಡಚಾಗುತ್ತ ಹೋದರೂ ಬುದ್ಧಿಗೆ ಆಧೀನವಾಗಹತ್ತುವವು. ಇದರಿಂದ ಭೀತಿಯು ಕಡಿಮೆಯಾಗಿ ಪರರ ಬಗ್ಗೆ ಆದರ, ಪ್ರೀತಿ, ಭೂತದಯೆ, ಸ್ವಾಭಿಮಾನ, ಸತ್ಯಪ್ರೀತಿ ಮೊದಲಾದ ಉಚ್ಚ ಭಾವನೆಗಳು ದೃಷ್ಟ್ಯೋತ್ಪತ್ತಿಗೆ ಬರಹತ್ತುವವು. ಇಚ್ಛಾಶಕ್ತಿಯು ವಿಶೇಷವಾಗಿ ಬೆಳೆಯುವದು. ಅದರಿಂದ ಆತ್ಮಪ್ರತಿಷ್ಠೆಯನ್ನು ಮೆರೆಯಿಸುವ ಒಣ ಹೆಮ್ಮೆಯ ಅಂಶವು ಪ್ರತಿಯೊಂದು ಕೆಲಸದಲ್ಲಿ ಕಾಣಹತ್ತುವದು. ಈ ವಯೋಮಾನವು ಪ್ರಾಥಮಿಕ ಶಿಕ್ಷಣಕ್ಕೆ ಬಹು ಅನುಕೂಲವಾದದ್ದು. ಆದ್ದರಿಂದ ಈ ಕಾಲಾವಧಿಯಲ್ಲಿ ಮಾತೃಭಾಷೆಯ ಮುಖಾಂತರ ಶಿಕ್ಷಣವು ದೊರೆಯುತಕ್ಕದ್ದು.

೩ನೇ ಭಾಗ—೧೪ರಿಂದ ೨೧ ವರ್ಷಗಳ ವರೆಗೆ:—ಈ ವಯೋಮಾನದಲ್ಲಿ ವಿದ್ಯಾರ್ಥಿಗಳು ಪರಿಸ್ಥಿತಿಗೆ ಎಷ್ಟುಮಾತ್ರವೂ ಆಧೀನವಾಗಿರದೆ ತಮ್ಮ ಸ್ವಂತ ಪ್ರಯತ್ನದಿಂದ ಪ್ರತಿಕೂಲವಾದ ಪರಿಸ್ಥಿತಿಯನ್ನು ಸಹ ತನಗೆ ಅನುಕೂಲವಾಗುವಂತೆ ಮಾಡಿಕೊಳ್ಳುವರು. ಎರಡನೆಯವರ ಕೈಯಲ್ಲಿ ಇರಲಾರದೆ ಸ್ವತಂತ್ರರಾಗಲಿಕ್ಕೆ ಇಚ್ಛಿಸುವರು. ಕಲಿಸಿದ್ದನ್ನೆಲ್ಲ ಗುರುವಿನ ಅಪ್ಪಣೆಯೆಂದು ಸ್ವೀಕರಿಸದೆ ಆ ತರದ ಜ್ಞಾನದಿಂದ ಏನು ಫಲವೆಂದು ಪೃಚ್ಛಾಪೃಚ್ಛ ಮಾಡತೊಡಗುವರು. ಹಿಂದೆ ತಾವು ದೊರಕಿಸಿದ ಜ್ಞಾನದ ಉಪಯೋಗವೇನು? ಅದನ್ನು ತಾವು ಯಾಕೆ ದೊರಕಿಸಿಕೊಂಡೆವು? ಎಂಬ ವಿಷಯವಾಗಿ ಸ್ವತಂತ್ರರೀತಿಯಿಂದ ತಮ್ಮ ಜ್ಞಾನಭಾಂಡಾರವನ್ನು ಪರೀಕ್ಷಿಸಿ ಅದನ್ನು ವರ್ಗೀಕರಿಸಿ ಸುವ್ಯವಸ್ಥಿತವಾಗಿ ಇಟ್ಟುಕೊಳ್ಳಲಿಕ್ಕೆ ಯತ್ನಿಸುವರು. ಈ ಸಂಧಿಗೆ ಸ್ಮರಣಶಕ್ತಿಯು ಬಲಹೀನವಾಗುವದು. ಆದ್ದರಿಂದ ಉಪಯೋಗಕ್ಕೆ ಬೀಳುವ ಸಂಗತಿಯನ್ನೇ ಆರಿಸಿ ಸ್ಮರಣದಲ್ಲಿ ಇಟ್ಟುಕೊಳ್ಳುವರು. ಸಾರಾಸಾರವಿಚಾರ, ಅನುಮಾನ, ನಿರ್ಣಯ ಮೊದಲಾದವುಗಳನ್ನು ತಮ್ಮ ಸ್ವಂತ ಬುದ್ಧಿಯ ಬಲದಿಂದ ಮಾಡಿಕೊಳ್ಳಹತ್ತುವರು. ಇದರಿಂದ ತಾವು ಈ ಜಗತ್ತಿನಲ್ಲಿ ಮಾಡತಕ್ಕ ಕರ್ತವ್ಯಗಳೇನು? ದೇವರು ಯಾವ ಉದ್ದೇಶದಿಂದ ತಮ್ಮನ್ನು ಹುಟ್ಟಿಸಿರುವನು? ಎಂಬ ಉದಾತ್ತ ಭಾವನೆಗಳು ಅವರ ಮನಸ್ಸಿನಲ್ಲಿ ಬರಹತ್ತುವಕಾರಣ ಕ್ರೋಧ, ದ್ರೋಹ, ಈರ್ಷಾ, ಅಸೂಯಾ ಮೊದಲಾದ ಹೀನ ಭಾವನೆಗಳಿಗೆ ಅವರ ಮನಸ್ಸಿನಲ್ಲಿ ಆಸ್ಪದವು ದೊರಕದಂತಾಗುವದು. ಬುದ್ಧಿ—ಇಚ್ಛೆಗಳು ಪ್ರಬಲವಾಗುವದರಿಂದ ವಿಕಾರವು ಕಡಿಮೆಯಾಗಿ ಸ್ಥಿರವಾದ ಸ್ವಭಾವವು ಉಂಟಾಗುವದು. ಗುರುಮುಖದಿಂದ ಶಿಕ್ಷಣಹೊಂದುವ ಕಾಲಾವಧಿಯು ೨೧ನೇ ವರ್ಷಕ್ಕೆ ಮುಗಿಯುವದು. ಮುಂದಿನ ಶಿಕ್ಷಣವು ಸ್ವಂತ ಪ್ರಯತ್ನದಿಂದಲೇ ಸಾಗುವದು.

ಮೇಲೆ ಹೇಳಿದ ವಯೋಮಾನದಲ್ಲಿ ಮಾನಸಿಕ ವಿಕಾಸವಾದಂತೆ ಶಾರೀರಿಕ ಬೆಳವಣಿಗೆಯಲ್ಲಿಯೂ ಮಹತ್ವವುಳ್ಳ ಅದಲುಬದಲುಗಳಾಗುವವು. ೧ರಿಂದ ೪ವರ್ಷಗಳ ವರೆಗೆ ಹುಡುಗರಿಗೆ ಹಲ್ಲು ಬರುವವು. ೬ ವರ್ಷಗಳು ಮುಗಿಯುವಷ್ಟರೊಳಗೆ ಹಾಲು ಹಲ್ಲುಗಳು ಬೀಳಹತ್ತುವವು. ಈ ವಯೋಮಾನದಲ್ಲಿ ಬಾಲಕರು ತಾವು ಮುಂದೆ ಜೀವಯಲಿಕ್ಕೆ ಬೇಕಾದ ಪದಾರ್ಥಗಳನ್ನು ಹುಟ್ಟಿಸಿಕೊಳ್ಳುವದರಲ್ಲಿ ತೊಡಗಿರುವದರಿಂದ ಅವರ ಶರೀರದ ಎತ್ತರವು ಅಷ್ಟು ಬೆಳೆಯುವದಿಲ್ಲ. ಮೋರೆಯ ಮೇಲೆ ಮೋಹಕಳೆಯಿರುವದು. ಎರಡನೇ ವಯೋಮಾನದಲ್ಲಿ ಹೊಸ ಹಲ್ಲುಗಳು ಬರುವವು. ಎತ್ತರವು ಮಿತಿಮೀರಿ ಬೆಳೆಯುವದು. ಮೋರೆಯ ಮೇಲೆ ಹರೆಯ ಕಳೆಯು ಕಾಣಹತ್ತುವದು. ಮೂರನೇ ವಯೋಮಾನವಲ್ಲಿ ಶರೀರದ ಪರಮಾವಧಿ ಎತ್ತರವು ಬೆಳೆದಪುಷ್ಟವಾಗುವದು. ಮೋರೆಯ ಮೇಲೆ ಪ್ರಾಯದ ಕಳೆಯು ಪೂರ್ಣ ಬರುವದು ಬೆಳಗೆಯು ಕಟ್ಟಾಗುವದು. ಅಕ್ಕಲ ದವಡೆಯಹಲ್ಲು ಒಡೆಯುವದು.

೪ನೇ ಅಧ್ಯಾಯ

ಸಂವೇದನ ಅಥವಾ ಇಂದ್ರಿಯಜನ್ಯ ಸಂಸ್ಕಾರ

ಬಾಹ್ಯ ಸೃಷ್ಟಿಯ ಜ್ಞಾನವನ್ನು ಮಿದುಳಿಗೆ ಮುಟ್ಟಿಸಲಿಕ್ಕೆ ಶರೀರದ ಎಲ್ಲಾ ಭಾಗ ಳಲ್ಲಿ ಕ್ರಿಯಾವಾಹಿನರಗಳೂ ಮಿದುಳಿನಿಂದ ಹೊರಟ ಅಪ್ಪಣೆಗಳನ್ನು ಆಯಾ ಅವಯ ಗಳಿಗೆ ಒಯ್ಯುವ ಕ್ರಿಯಾವಾಹಿನರಗಳೂ ಶರೀರದ ಎಲ್ಲಾ ಭಾಗಗಳಲ್ಲಿ ಹರಡಿಕೊಂ ರುವವೆಂಬ ಸಂಗತಿಯು ಈ ಮೊದಲೇ ಗೊತ್ತಾಗಿದೆ. ಜ್ಞಾನವಾಹಿನರಗಳ ಮುಖಾಂ ತ ಯಾವದೊಂದು ಬಗೆಯ ಅರಿವು ಮಿದುಳಿಗೆ ಉಂಟಾಗುವದು. ಸಂವೇದನವು ಸಾಮಾನ್ಯವಾದದ್ದಾಗಲಿ ವಿಶೇಷವಾದದ್ದಾಗಲಿ ಇರುವದು.

ಯಾವ ಸಂವೇದನಗಳುಂಟಾಗಲಿಕ್ಕೆ ಶರೀರದಲ್ಲಿ ವಿವಕ್ಷಿತವಾದ ಇಂದ್ರಿಯಗಳಿ ವದಿಲ್ಲವೊ ಅವು ಶಾರೀರಿಕ ಸಂವೇದನಗಳು. ಹಸಿವೆ, ನೀರಡಿಕೆ, ಉಸುರು, ಬ್ಬೋಣ, ರೋಮಾಂಚನ, ಮೂರ್ಛೆ, ದಣುವು ಮುಂತಾದವು ಸಾಮಾನ್ಯ ಸಂವೇ ನಗಳು; ಯಾಕಂದರೆ ಈ ತರದ ಸಂವೇದನಗಳು ಇಂಥದೊಂದು ಇಂದ್ರಿಯದಲ್ಲಿ ಟ್ಟುತ್ಪತ್ತವೆಂದು ಹೇಳಲಿಕ್ಕಾಗುವದಿಲ್ಲ. ಇವುಗಳ ಸಂಬಂಧವು ಇಡೀ ಶರೀರಕ್ಕೆ ಇರುವದ ಂದ ಇವುಗಳಿಗೆ ಶಾರೀರಿಕ ಸಂವೇದನವೆಂಬ ಹೆಸರು ಒಪ್ಪುವದು. ಜಗತ್ತಿನ ಅನುಭವ ಲ್ಲಿಯ ಜಿಕ್ಕಾನುಕ್ಕುಳಿಗೆ ಹಸಿವೆ, ಆನಂದ, ದುಃಖ ಮೊದಲಾದವು ಬಾಹ್ಯಪ್ರೇರಣೆ ಇಲ್ಲದೆ ಗುತ್ತಿರುವದರಿಂದ ಇವುಗಳಿಗೆ ಮನಸಿನ ಸಂಬಂಧವಿಲ್ಲೆಂದು ನಂಬಬೇಕಾಗುವದು.

ಪಂಚೇಂದ್ರಿಯಗಳಾದ ತ್ವಕ್ಕು ಜಿಹ್ವಾ ನಾಸಿಕ ಕರ್ಣ ನೇತ್ರಗಳಿಂದುಂ ಾಗುವ ಸ್ಪರ್ಶನ ರಸನ ಆಘ್ರಾಣ ಶ್ರವಣ ಹಾಗು ಈಕ್ಷಣಗಳು ವಿಶಿಷ್ಟವಾದ ಸಂವೇ ನಗಳು, ಒಂದೊಂದು ಬಗೆಯ ಸಂವೇದನಕ್ಕೆ ಒಂದೊಂದು ಇಂದ್ರಿಯ ವಿಶೇಷವಿರು ತ್ತದೆ. ಬಾಹ್ಯಪ್ರೇರಣೆಯ ಪರಿಣಾಮವು ಆಯಾ ಇಂದ್ರಿಯಗಳಲ್ಲಿ ಹರಡಿಕೊಂಡಿರುವ ಜ್ಞಾನವಾಹಿನರಗಳ ಅಗ್ರಭಾಗದಮೇಲೆ ಆಗಲು ಅವು ಕಂಪನ ಹೊಂದಹತ್ತುದವು. ಈ ಂಪನಗಳು ಮಿದುಳಿನ ಕೆಲವು ವಿವಕ್ಷಿತ ಕೋಶಗಳಿಗೆ ಹೋಗಿ ಮುಟ್ಟಲು ಆ ಕೋಶಗ ಳಲ್ಲಿ ಸ್ಥಿಂತ್ಯಂತರ ಉಂಟಾಗಿ ಆಯಾ ಇಂದ್ರಿಯ ಜನ್ಯಜ್ಞಾನವು ಉಂಟಾಗುವದು. ಇತರದ ಸಂವೇದನಗಳ ಪ್ರತ್ಯಕ್ಷ ಸಂಬಂಧವು ಮನಸ್ಸಿಗೆ ಇರುವದು. ಸಂವೇದನವಾದ ನಂತರ ಮಿದುಳಿನ ಕೋಶಗಳ ಸ್ಥಿಂತ್ಯಂತರಗಳಮೂಲಕ ತಜ್ಜನಿತ ಬೋಧವು ಎರಡು ನೆಯ ತರದ ವ್ಯಾಪಾರಗಳಿಂದಾಗುವದು. ಸಂವೇದನವು ಕೇವಲ ಶಾರೀರಿಕ ವ್ಯಾಪಾರ ವಾಗಿರದೆ ಅತಿ ಸೂಕ್ಷ್ಮವಾದ ಮನೋವ್ಯಾಪಾರವಾಗಿರುವದು. ಅದರಿಂದ ನಾನಾತರದ ರಿವುಗಳು ಹೇಗೆ ಉಂಟಾಗುವವು ಎಂಬದು ಮಾನಸ ಶಾಸ್ತ್ರಜ್ಞರಿಗೆ ಇನ್ನೂ ಗೊತ್ತಾ

ಮಿದುಳು ಇಂದ್ರಿಯ ಜನ್ಯಜ್ಞಾನದ ಮೂಲಸ್ಥಾನವಾಗಿರುವದರಿಂದ ನಮ್ಮ ಶರೀರದ ಯಾವಭಾಗದಲ್ಲಿಯಾಗಲಿ ನೋವು ಉಂಟಾದಾಗ ಆ ನೋವು ಆ ಭಾಗಗಳಲ್ಲಿ ಉಂಟಾಗದೆ ಮಿದುಳಿನಲ್ಲಿ ಉಂಟಾಗುವದೆಂದು ತಿಳಿಯುವದು. ಇದರಂತೆ ದೃಷ್ಟಿಜ್ಞಾನವು ಕಂಣುಗಳಲ್ಲಿರವೆ ಮಿದುಳಿನಲ್ಲಿ ಉಂಟಾಗುವದೆಂದೂ ಇತರ ಇಂದ್ರಿಯಜ್ಞಾನಗಳು ಕೂಡ ಆಯಾ ಇಂದ್ರಿಯಗಳಲ್ಲಿ ಉಂಟಾಗದೆ ಮಿದುಳಿನಲ್ಲಿ ಉಂಟಾಗುವವೆಂದು ತಿಳಿಯುವದು.

ಮೇಲೆ ಹೇಳಿದ ಪಂಚೇಂದ್ರಿಯಗಳಿಂದ ಸ್ಪರ್ಶ, ರಸನ, ಗಂಧ, ಶಬ್ದಹಾಗೂ ರೂಪ, ಎಂಬ ಐದು ವಿಧವಾದ ಇಂದ್ರಿಯ ಜನ್ಯಜ್ಞಾನಗಳಾಗುವವು. ಇವುಗಳಹೊರತು ನಮಗೆ ಸ್ನಾಯುಗಳ ಮುಖಾಂತರ ಸ್ನಾಯುಜನ್ಯ ಜ್ಞಾನವೆಂಬ ಒನೇಯದೊಂದು ಜ್ಞಾನವಾಗುವದುಂಟು. ಇದರ ಸಹಾಯದಿಂದ ಪದಾರ್ಥಗಳ ಭಾರವನ್ನು ತಿಳಿಯಲಿಕ್ಕೆ ಆಗುವದು.

೫ನೆಯ ಅಧ್ಯಾಯ

ಪಂಚೇಂದ್ರಿಯಗಳೂ ಅವುಗಳಿಂದಾಗತಕ್ಕ ಜ್ಞಾನಗಳೂ

ಶಿಕ್ಷಣಶಾಸ್ತ್ರ ದೃಷ್ಟಿಯಿಂದ ತ್ವಗಿಂದ್ರಿಯ, ಶ್ರವಣೇಂದ್ರಿಯ ಹಾಗು ನೇತ್ರೇಂದ್ರಿಯಗಳು ಅತಿ ಮಹತ್ವವುಳ್ಳವುಗಳಾಗಿರುವವು. ಯಾಕಂದರೆ ಬಾಹ್ಯಸೃಷ್ಟಿಯಲ್ಲಿರುವ ಅನೇಕವಿಧ ಪದಾರ್ಥಗಳ ಜ್ಞಾನವು ಈ ಇಂದ್ರಿಯಗಳ ಮುಖಾಂತರ ಆಗಿ ಅದು ಮನಸ್ಸಿನಲ್ಲಿ ದೃಢವಾಗಿ ನಿಲ್ಲುವದು. ಆದರೆ ರಸನೇಂದ್ರಿಯ ಹಾಗು ಘ್ರಾಣೇಂದ್ರಿಯಗಳ ಮುಖಾಂತರ ಆದ ಜ್ಞಾನವು ತಾತ್ಕಾಲಿಕವಿದ್ದು ಕೂಡಲೆ ಇಲ್ಲದಂತಾಗುವದರಿಂದ ಇವುಗಳಿಗೆ ಅಷ್ಟು ಮಹತ್ವವಿರುವದಿಲ್ಲ.

ಸ್ಪರ್ಶೇಂದ್ರಿಯ—ನಮ್ಮ ಶರೀರದ ಹೊರಭಾಗವು ದಪ್ಪಾದ ಚರ್ಮದಿಂದಲೂ ಒಳಭಾಗವು 'ಆರ್ದ್ರ ತ್ವಚ' ಎಂಬ ಪರಿಯಂತ ಸೂಕ್ಷ್ಮವಾದ ಚರ್ಮದಿಂದಲೂ ಆವೃತವಾಗಿರುವದು. ಇಂಥ ಚರ್ಮದ ಒಳ ಬದಿಗೆ ತ್ವಗಿಂದ್ರಿಯ ಜ್ಞಾನವನ್ನು ತನ್ನಲಿಗೆ ಒಯ್ದು ಮುಟ್ಟಿಸುವ ನರಮಂಡಲವು ಇರುವದು. ಹೊರಬದಿಗೆ ಇರುವ ದಪ್ಪಾದ ಚರ್ಮದಲ್ಲಿ ಹೊರಪದರು, ಒಳಪದರು ಎಂಬ ಎರಡು ಪದರುಗಳಿದ್ದು ಈವುಗಳ ಮಧ್ಯದಲ್ಲಿ ಉಬ್ಬುಗಳಿರುವವು. ಈ ಉಬ್ಬುಗಳಲ್ಲಿ ಜ್ಞಾನವಾಹಿ ನರಗಳು ಪ್ರವೇಶಿಕೊಂಡಿರುವವು. ಹೊರಪದರಿನ ಕರ್ತವ್ಯವು ಸೂಕ್ಷ್ಮವಾದ ಒಳಚರ್ಮವನ್ನು ಕಾಪಾಡುವದು. ಇದನ್ನು ಸುಲಿದುಬಿಟ್ಟು ಆ ಸುಲಿದ ಭಾಗದಿಂದ ನಾವು ಯಾವದೊಂದು ಪದಾರ್ಥವನ್ನು ಮುಟ್ಟಿ ಕೈಯಾಡಿಸಿದರೆ ನಮಗೆ ಸ್ಪರ್ಶಜ್ಞಾನ ಸ್ಪಷ್ಟವಾಗದೆ ಸಹಿಸಲಾರದಷ್ಟು ನೋವು ಮಾತ್ರ ಆಗುವದು. ನಿಜವಾದ ಸ್ಪರ್ಶಜ್ಞಾನವನ್ನುಂಟುಮಾಡುವ ಬಾಹ್ಯ ವಸ್ತುವಿಗೂ ಒಳಪದರಿನ ಉಬ್ಬುಗಳಲ್ಲಿ ಹರಡಿಕೊಂಡಿರುವ ನರಗಳಿಗೂ ಮಧ್ಯದಲ್ಲಿ ಹೊರಪದರು ಇದ್ದದ್ದಾದರೆ ನಮಗೆ ಆ ವಸ್ತುವಿನ ಬಗ್ಗೆ ಯಥಾರ್ಥಜ್ಞಾನವಾಗುವದು. ಸ್ಪರ್ಶಜ್ಞಾನವು ದೇಹದ ಎಲ್ಲ ಭಾಗಗಳಲ್ಲಿ ಒಂದೇ ಸಮನೆ ಆಗುವದಿಲ್ಲ. ಅದು ನಾಲಿಗೆಯ ತುದಿಯಲ್ಲಿ ಅತಿ ಚುರುಕಾಗಿಯೂ ಬೆರಳುಗಳ ತುದಿಯಲ್ಲಿ ಅದಕ್ಕಿಂತ ಕಡಿಮೆಯಾಗಿಯೂ ತುಟಿಗಳ ಅಂಚುಗಳ ತುದಿಯಲ್ಲಿ ಇದಕ್ಕಿಂತ ಕಡಿಮೆಯಾಗಿಯೂ ಆಗುವದು. ಶೀತೋಷ್ಣತೆಯ ಸಂಬಂಧವಿಂದ ವಿಚಾರಿಸಿ ನೋಡಿದರೆ ದೇಹದ ಮೇಲಿರುವ ಚರ್ಮದ ಭಾಗಗಳಲ್ಲಿ ವ್ಯತ್ಯಾಸವು ಕಂಡುಬರುವದು. ಮಳಕೈಕೀಲದ ಮೇಲೆ ಇರುವ ಚರ್ಮವು ಉಷ್ಣತೆಯನ್ನು ತಿಳಕೊಳ್ಳುವದರಲ್ಲಿ ಅತಿ ಚುರಕಾಗಿರುವದು. ಆದರೆ ನಾಲಿಗೆ, ಅಂಗೈ ಮುಂತಾದವು ಮದಡಾಗಿರುವವು. *

---

* ನಾಲಿಗೆಯ ತುದಿಯಲ್ಲಿ ಎರಡು ಉಬ್ಬುಗಳ ನಡುವಿನ ಅಂತರವು $\frac{1}{64}$" ಇರುವದು. ಬೆರಳಿನ ತುದಿಯಲ್ಲಿ ಎರಡು ಉಬ್ಬುಗಳ ನಡುವಿನ ಅಂತರವು $\frac{1}{32}$" ಇರುವದು. ತೊಡೆಯ ಮೇಲಿರುವ ಚರ್ಮದ ಮಧ್ಯದಲ್ಲಿ ಇರುವ ಉಬ್ಬುಗಳ ನಡುವಿನ ಅಂತರವು $\frac{1}{2}$" ಇರುವದು.

ಸ್ಪರ್ಶಜ್ಞಾನವಾಗುವ ಕ್ರಮ—ಯಾವದೊಂದು ಪದಾರ್ಥವು ಚರ್ಮಕ್ಕೆ ತಗಲಿ ಆ ಭಾಗದಲ್ಲಿ ಭಾರಹಾಕಲು ಅಲ್ಲಿ ಕಂಪನಗಳುಂಟಾಗಹತ್ತುವವು. ಆ ಕಂಪನಗಳನ್ನು ಜ್ಞಾನವಾಹಿನಿಗಳು ಮಿದುಳಿಗೆ ಒಯ್ಯಲು ಮಿದುಳು ಒಂದೊಂದು ಬಗೆಯ ಅನುಭವವನ್ನು ಮಾಡಿಕೊಂಡು ಆ ಜ್ಞಾನಕ್ಕೆ ಒಂದೊಂದು ಹೆಸರಿಡುವದು. ಈ ಕಾರ್ಯದಲ್ಲಿ ಸ್ನಾಯುಗಳ ಮೇಲೆ ಭಾರವಿದ್ದು ಒಂದು ಪ್ರಕಾರದ ಸ್ನಾಯುಜನ್ಯ ಜ್ಞಾನವಾಗುವದು. ಇದರಿಂದ ಅನೇಕಸಾರಿ ಒಂದು ಬಗೆಯ ಸಂಕಲಿತ ಜ್ಞಾನವಾಗುವದು. ಆಪ್ಪರಿಂದ ಸ್ಪರ್ಶಜ್ಞಾನದಲ್ಲಿ ಕೇವಲ ಸ್ಪರ್ಶಜ್ಞಾನ, ಸಂಕಲಿತ ಸ್ಪರ್ಶಜ್ಞಾನ ಎಂಬ ಎರಡು ವಿಧವು. ಸಂಕಲಿತಜ್ಞಾನವನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು. (೧) ಮಿದುವು–ಬಿರಸು. (೨) ನುಣಪು–ಹುರಬರಕು, (೩) ಹಗರು–ಭಾರ, (೪) ಶೀತೋಷ್ಣ. ಕೇವಲ ಸ್ಪರ್ಶೇಂದ್ರಿಯಕ್ಕೆ ಸಂಬಂಧಪಟ್ಟ ಜ್ಞಾನಗಳು—ಮುಟ್ಟೋಣ, ಚುಚ್ಚೋಣ, ಮುಳ್ಳುಮುಳ್ಳಾಗಿ ಹತ್ತೋಣ. ಈ ಇಂದ್ರಿಯದ ಉಪಯೋಗವು ಉಳಿದ ಇಂದ್ರಿಯಗಳಿಗೆ ಸಹಾಯಕಾರಿಯಂತೆ ಆಗಿ, ಪದಾರ್ಥಗಳ ಆಕಾರ, ಅಂತರ, ಹೃಷ್ಠಭಾಗ, ಮಿದುವು ಕಠಿಣ ಮುಂತಾದ ಜ್ಞಾನವಾಗುವದು. ಶಿಕ್ಷಣ ದೃಷ್ಟಿಯಿಂದ ಈ ಇಂದ್ರಿಯದ ಉಪಯೋಗವು ಅತಿ ಹೆಚ್ಚಾಗಿರುವದು. ಕುರುಡರಲ್ಲಿ ಸ್ಪರ್ಶೇಂದ್ರಿಯದ ಜ್ಞಾನವು ಮಿತಿಮೀರಿ ಹೆಚ್ಚಾಗಿ ಅವರು ಅನೇಕಬಗೆಯ ಕೈಕೆಲಸವನ್ನು ಮಾಡಲು ಸಮರ್ಥರಾಗುವರು.

ನೇತ್ರೇಂದ್ರಿಯ:—ಶಿಕ್ಷಣ ಕಾರ್ಯದಲ್ಲಿ ನೇತ್ರೇಂದ್ರಿಯದ ಮಹತ್ವವು ಹೆಚ್ಚಾಗಿರುವದು. ಈ ಇಂದ್ರಿಯದ ಸಹಾಯದಿಂದ ಪ್ರಾಮುಖ್ಯವಾಗಿ ನಮಗೆ ಬೆಳಕು, ಕತ್ತಲೆ, ಬಣ್ಣ ಮೊದಲಾದವುಗಳ ಜ್ಞಾನವಾಗುವದು. ಉಳಿದ ಜ್ಞಾನೇಂದ್ರಿಯಗಳ ಸಹಾಯದಿಂದಲೂ ಸ್ನಾಯುಗಳ ಪ್ರಸರಣಾಕುಂಚನದಿಂದಲೂ ಉಂಟಾದ ಒಂದು ಬಗೆಯ ಸಂಸ್ಕಾರದಿಂದ ಪದಾರ್ಥಗಳ ಗಾತ್ರ, ರೂಪ, ಅಂತರ ಮೊದಲಾದ ಜ್ಞಾನಗಳಾಗುವವು. ಬೆಳಕೆಂಬ ಬಾಹ್ಯ ಉತ್ತೇಜಕದಿಂದ ಪದಾರ್ಥಗಳ ಮೇಲೆ ಬಿದ್ದು ಪರಾವರ್ತನವಾದ ಕಿರಣಗಳು ಕಣ್ಣಿನಲ್ಲಿ ಸೇರಿ, ಕಣ್ಣಿನ ಹಿಂಬದಿಗಿರುವ 'ರೇಟಿನಾ' ಎಂಬ ಚಿತ್ರಪಟದ ಮೇಲೆ ಆಯಾ ವಸ್ತುಗಳ ಛಾಯಾ ಪ್ರತಿಮೆಯನ್ನು ಉಂಟುಮಾಡುವವು. ಆ ಚಿತ್ರಪಟದ ಒಳಬದಿಗೆ ವ್ಯಾಪಿಸಿಕೊಂಡಿರುವ ಜ್ಞಾನವಾಹಿ ನರಗಳು ಆ ಪ್ರತಿಮೆಗಳನ್ನು ಗ್ರಹಿಸಿಕೊಂಡು ಒಂದು ಬಗೆಯ ಕಂಪನವನ್ನು ಉಂಟುಮಾಡುವವು. ಆ ಕಂಪನವು ಮಿದುಳಿಗೆ ಮುಟ್ಟಲು ದೃಷ್ಟಿಜ್ಞಾನವಾಗುವದು. ಕೇವಲ ನೇತ್ರೇಂದ್ರಿಯದಿಂದ ಬೆಳಕು ಕತ್ತಲೆ ನಾನಾಪ್ರಕಾರದ ಬಣ್ಣಗಳ ಜ್ಞಾನ ಮಾತ್ರ ಆಗುವದು. ಪದಾರ್ಥಗಳ ಅಂತರವನ್ನು ಕಣ್ಣಿನಿಂದ ಅಳೆಯುವ ಶಕ್ತಿಯು ಶಿಶುಗಳಿಗೆ ಇರುವದಿಲ್ಲವೆಂಬ ಸಂಗತಿಯು ಕೂಸುಗಳು ಚಂದ್ರನನ್ನು ಹಿಡಿಯಲಿಕ್ಕೆ ಹೋಗುವದರ ಮೇಲಿಂದ ವ್ಯಕ್ತವಾಗುವದು. ಮುಂದೆ ಕ್ರಮೇಣ ಬಾಲಕರು ಒಂದು ಸ್ಥಳದಿಂದ ಮತ್ತೊಂದು

ಳಕ್ಕೆ ಸರಿದು ಹೋಗಿ ಅವರಿಮುಂಟಾಗುವ ಸ್ನಾಯುಗಳ ಶ್ರಮ ಹಾಗು ತ್ವಗಿಂದ್ರಿ ಯದಿಂದಾಗುವ ಜ್ಞಾನಗಳಿಂದ ಪದಾರ್ಥಗಳ ಅಂತರವನ್ನು ಗೊತ್ತುಪಡಿಸಿ ಇದು ಸಮೀಪದಲ್ಲಿ ಅವೆ ಅದು ದೂರದಲ್ಲಿ ಅವೆ ಎಂದು ಗೊತ್ತುಮಾಡಿಕೊಳ್ಳುವರು. ಬರ ರುತ್ತ ಪದಾರ್ಥಗಳ ಅಂತರವನ್ನು ಅವುಗಳ ದೃಶ್ಯಮಾನ ಆಕಾರಗಳಿಂದಲೂ ಸಮೀಪ ವಲ್ಲಿ ಇಲ್ಲವೆ ದೂರದಲ್ಲಿದ್ದ ವಸ್ತುಗಳನ್ನು ನೋಡುವಾಗ ಕಣ್ಣಿನ ನರಗಳಲ್ಲಿ ಆಗ ಕ್ಕ ಸ್ಥಿತ್ಯಂತರಗಳಿಂದಲೂ ಅಂತರದ ಜ್ಞಾನವನ್ನು ಮಾಡಿಕೊಳ್ಳುವರು. ಆದರೂ ತ್ರೇಂದ್ರಿಯದಿಂದಾವ ಈ ತರವ ಜ್ಞಾನವು ಅಷ್ಟು ನಿಶ್ಚಿತವಾದದ್ದಲ್ಲ. ಇವರಂತೆ ತ್ರೇಂದ್ರಿಯದಿಂಮುಂಟಾದ ಪದಾರ್ಥಗಳ ಘನ ಆಕಾರದ ಜ್ಞಾನವು ಅನೇಕ ಪ್ರಸಂ ಗಳಲ್ಲಿ ನಿಜವಾದದ್ದಿರದೆ ಒಂದು ಬಗೆಯ ಕಣ್ಣು ಮಸಕಾಗಿರುವದು. ಪರದೆಯ ಮೇಲೆ ತೆಗೆದ ಚಿತ್ರವನ್ನು ದೂರದಿಂದ ನೋಡಿದರೆ ಅದು ಮೈಕೈ ತುಂಬಿಕೊಂಡು ತ್ರವುಳ್ಳ ಚಿತ್ರದಂತೆ ಭಾಸವಾಗುವದು. ಆದರೆ ಪರದೆಯನ್ನು ಮುಟ್ಟಿದ ಕೂಡಲೆ ನಕ್ಕೆ ಗಾತ್ರವಿರದೆ ಅದು ಸಪಾಟಾಗಿರುವವೆಂಬದು ಗೊತ್ತಾಗುವದು. ಇದರಿಂದ ಮೇಲೆ ಹೇಳಿದ ಪ್ರಕಾರ ಹಾಗು ಬಣ್ಣಗಳ ಸಂಬಂಧವಾದ ಜ್ಞಾನಗಳ ಹೊರತು ಳಿದ ಈ ಇಂದ್ರಿಯವ ಜ್ಞಾನಗಳು ಸ್ಪರ್ಶೇಂದ್ರಿಯದ ಸಹಾಯವಿರದಿದ್ದರೆ ವಿಶ್ವಸ ಯವಾಗಲಾರವೆಂಬದು ಗೊತ್ತಾಗುವದು.

ಶ್ರೋತ್ರೇಂದ್ರಿಯ: —ನಮಗೆ ಶಬ್ದಜ್ಞಾನವನ್ನುಂಟುಮಾಡಲಿಕ್ಕೆ ಶ್ರವಣೇಂ ಯವು ಇರುವದು. ಹವೆಯಲ್ಲುಂಟಾದ ಆಘಾತದಿಂದ ಹುಟ್ಟಿದ ತರಂಗಗಳು ಶಷ್ಕುಲಿಯ ಮೇಲೆ ಇರುವ ನಗಾರಿಯ ಮೇಲೆ ಬಂದು ಅಪ್ಪಳಿಸಲು ಅದು ಕಂಪನ ೂಂದಹತ್ತುವದು. ಆ ಕಂಪನಗಳು ಅದರ ಹಿಂದಿರುವ ಕೊಡತಿಯಂಥ ಎಲುವಿಗೆ ಗಲು ಅದು ಆ ಕಂಪನಗಳನ್ನು ತನ್ನ ಹಿಂದಿರುವ ಅಡಗಲ್ಲಿನಂಥ ಎಲುವಿನ ಮೇಲೆ ಪ್ಪಳಿಸುವದು. ಈ ಕ್ರಮದಿಂದ ತರಂಗಗಳು ಬಾಹ್ಯಕರ್ಣದಿಂದ ಮಧ್ಯಕರ್ಣಕ್ಕೂ ಲ್ಲಿಂದ ಅಂತಃಕರ್ಣಕ್ಕೂ ಹೋಗಿ ಅಲ್ಲಿರುವ ಪೊಳ್ಳಾದ ಎಲವುಗಳ ಸುತ್ತುಗಳಲ್ಲಿ ಂಬಿಕೊಂಡಿರುವ ಒಂದು ಬಗೆಯ ರಸದಲ್ಲಿ ಅದೇ ತರವ ಕಂಪನಗಳನ್ನು ಉಂಟು ಾಡುವವು. ಅಲ್ಲಿ ಜ್ಞಾನತಂತುಗಳು ಹಂಡಿಕೊಂಡಿರುವದರಿಂದ ಆ ಕಂಪನಗಳು ತಂತುಗಳಿಗೆ ಮುಟ್ಟಲು ಅವುಗಳನ್ನು ಮಿದುಳಿಗೆ ಒಯ್ದು ಮುಟ್ಟಿಸುವವು. ಆಗ ದುಳಿನ ಕೋಶಗಳಲ್ಲಿ ಸ್ಥಿತ್ಯಂತರಗಳುಂಟಾಗಿ ಮಿದುಳು ಶಾಬ್ದಿಕ ಜ್ಞಾನವನ್ನು ಾಡಿಕೊಂಡು ಒಂದೊಂದು ಬಗೆಯ ಜ್ಞಾನವನ್ನು ಗ್ರಹಿಸುವದು. ಈ ಇಂದ್ರಿಯ ದ ಆಗತಕ್ಕ ಶಬ್ದಜ್ಞಾನವು ಎರಡು ವಿಧವಾಗಿವೆ. (೧) ನಾದ (೨) ಸಪ್ಪಳ.

ನಾದವೆಂದರೆ ಸುನಾದವು. ಹವೆಯಲ್ಲಿ ಆಘಾತವು ಕ್ರಮದಿಂದ ಆಗಹತ್ತಲು ುವ ಶಬ್ದಜ್ಞಾನಕ್ಕೆ ನಾದವೆಂಬ ಹೆಸರು. ಒಂದೊಂದು ಸ್ವರಕ್ಕೆ ಕೆಲವೊಂದು ವಿವಿಕ್ಷಿ ತವಾದ ಕಂಪನದ ಪದ್ಧತಿಯಿರುವದು. ಅವುಗಳಿಂದ ಸಪ್ತಸ್ವರಗಳನ್ನು ಕಲ್ಪಿಸಿ ಅವುಗಳ

ವರ್ಜ್ಯಾ ವರ್ಜ್ಯ, ಆರೋಹ ಅವರೋಹಗಳಿಂದ ರಾಗರಾಗಿಣಿ ಮೊದಲಾವವುಗಳನ
ಕಲ್ಪಿಸಿರುವರು. ಗಾಯನ ಶಾಸ್ತ್ರಜ್ಞರಿಗೆ ಯಾವನಾದರೊಬ್ಬನು ಹಾಡಿದ ಕೂಡಲೆ ಇ
ರಾಗವಲ್ಲಿಯೇ ಹಾಡುತ್ತಾನೆಂದು ಕೂಡಲೆ ಗೊತ್ತಾಗುವದು. ಉಳಿದವರಿಗೆ ಗಾಯ
ದಿಂದ ಆನಂದವಾದರೂ ರಾಗಜ್ಞಾನವುಳ್ಳವರಿಗೆ ಆಗುವ ನಿಜವಾದ ಆನಂದವು ಮಾ
ಎಂದೂ ಆಗಲಾರದು. ಅನಿಯಮಿತ ಆಘಾತಗಳಿಂದ ಉಂಟಾದ ಶಬ್ದವು ಸಪ್ಪಳ
ಇದು ಬಹುಶಃ ಕರ್ಣಕಠೋರವಿರುತ್ತದೆ.

ಶಿಕ್ಷಣಕ್ರಮದಲ್ಲಿ ಈ ಇಂದ್ರಿಯವಾದರೂ ಬಹು ಮಹತ್ವವುಳ್ಳದ್ದು. ಅನೆ
ಪದಾರ್ಥಗಳ ಜ್ಞಾನವನ್ನು ನಾವು ಅವುಗಳಿಂದ ಹೊರಡುವ ಸಪ್ಪಳದಿಂದ ಮಾಡಿ
ಳ್ಳುವೆವು. ಧ್ವನಿಯಿಂದಲೇ ಪಶು-ಪಕ್ಷಿಗಳ ಜಾತಿಯನ್ನು ಗೊತ್ತುಹಚ್ಚುವ
ಭಾಷೆಯೆಂಬದು ಶಬ್ದಸಮುದಾಯಗಳ ರಚನೆಯಾಗಿರುವದು. ಒಂದೊಂದು ವ
ವಿಗೆ ಪ್ರತಿಯಾಗಿ ಒಂದೊಂದು ಶಬ್ದವಿರುವದು. ಭಾಷೆಯ ದ್ವಾರದಿಂದಾಗ
ಶಿಕ್ಷಣವು ಕೇವಲ ಶ್ರೋತ್ರೇಂದ್ರಿಯದ ಶಿಕ್ಷಣವೇ. ಸ್ವರಗಳ ಭೇದಗಳಿಂದ ನಮಗೆ
ಸ್ವರವನ್ನು ಉಂಟುಮಾಡುವ ವಸ್ತುಗಳ ಅಂತರವು ಹಾಗು ದಿಕ್ಕುಗಳು ಗೊತ್ತಾಗು
ವವು.

ರಸನೇಂದ್ರಿಯ:— ರಸನೇಂದ್ರಿಯ ಜ್ಞಾನವನ್ನು ಅಂದರೆ ರುಚಿಯನ್ನು
ಮಾಡಿಕೊಡುವ ಇಂದ್ರಿಯವೆಂದರೆ ನಾಲಿಗೆಯು. ಈ ಬಗೆಯ ಜ್ಞಾನಮಾಡಿಕೊಡುವ
ದಕ್ಕೆ ನಾಲಿಗೆಯ ಹಿಂದುಗಡೆಗೆ ಕಿರಿನಾಲಿಗೆಯ ಹತ್ತರ ಇರುವ ವರ್ತುಲಾಕಾರವಾದ
ಭಾಗವು ಸಹಾಯಮಾಡುವದು. ನಾಲಿಗೆಯಮೇಲೆ ತಿಳುವಾದ ಪರಿಯಂಥ ಆವ್ರ
ತ್ವಚವಿರುವದು. ಇದರ ಮೇಲ್ಪದಿಗೆ ಕೆಳಬದಿಗೆ ಮಗ್ಗಲಿಗೆ ಸೂಕ್ಷ್ಮವಾದ ಪರಿಯಿಂ
ಆವರಿಸಲ್ಪಟ್ಟು ಉಬ್ಬುಗಳಿರುವವು, ಅವುಗಳಲ್ಲಿ ಜ್ಞಾನವಾಹಿನರಗಳು ಸೇರಿಕೊಂಡಿರು
ವವು. ನಾಲಿಗೆಯ ಅಗ್ರಭಾಗದಲ್ಲಿರುವ ಉಬ್ಬುಗಳೊಗಿನ ನರಗಳಿಂದ ಸೀ ಉಪ್ಪ
ರುಚಿಗಳ ಜ್ಞಾನವಾಗುವದು. ನಾಲಿಗೆಯ ಹಿಂದುಗಡೆ (ಗಂಟಲದ ಹತ್ತರ) ಇರುವ
ಜ್ಞಾನವಾಹಿ ನರಗಳಿಂದ ಆಮ್ಲ ರುಚಿಯ ಜ್ಞಾನವಾಗುವದು. ನಾಲಿಗೆಯ ಮಧ್ಯದಲ್ಲಿ
ಜ್ಞಾನವಾಹಿನರಗಳಿಲ್ಲದ್ದರಿಂದ ಅಲ್ಲಿ ಯಾವರುಚಿಯ ಜ್ಞಾನವೂ ಆಗುವದಿಲ್ಲ.

ನಮಗೆ ಯಾವದೊಂದು ಪದಾರ್ಥದ ರುಚಿಯು ತಿಳಿಯಬೇಕಾದರೆ ಆ ಪದಾ
ರ್ಥದ ಸಂಬಂಧವು ಜ್ಞಾನವಾಹಿನರಗಳ ಅಗ್ರ ಭಾಗಕ್ಕೆ ಪ್ರತ್ಯಕ್ಷವಾಗಿ ತಗಲಬೇಕು.
ಹೀಗಾಗಬೇಕಾದರೆ ಆ ಪದಾರ್ಥವು ಬಾಯಲ್ಲಿರುವ ಜೊಲ್ಲಿನಲ್ಲಿಯಾಗಲಿ ಅಥವಾ
ಬೇರೊಂದು ದ್ರವದಲ್ಲಿಯಾಗಲಿ ಕರಗಿಕೊಂಡು ಆ ದ್ರವವು ಜ್ಞಾನವಾಹಿನರಗಳನ್ನು
ಆವರಿಸಿಕೊಂಡಿರುವ ಪರಿಯನ್ನು ಭೇದಿಸಿ ಆ ನರಗಳ ಅಗ್ರಭಾಗದೊಳಗೆ ಹೋಗಿ
ಮುಟ್ಟಬೇಕು. ಆಗ ಆ ನರಗಳು ತಮಗುಂಟಾದ ಪ್ರೇರಣೆಯನ್ನು ತರಂಗಗಳ
ಮುಖಾಂತರ ಮಿದುಳಿನ ವಿವಿಕ್ಷಿತ ಕೋಶಗಳಿಗೆ ಕಳುಹಲು ಆ ಕೋಶಗಳ ಸ್ಥಿತ್ಯಂತರ

ಬ್ಬಲ್ಲಿ ಅದನ್ನು ಕೂಡಲೆ ಮುರಿಯಲಿಕ್ಕೆ ಅರಸನಿಗೆ ಅನುಕೂಲವಾಗುತ್ತಿತ್ತು. ಸರಕಾ ದ ಅಧಿಕಾರಸ್ಥರು ಲಂಚ ತಿನ್ನುವದು ಸಾಮಾನ್ಯವಾಗಿತ್ತು. ಅದನ್ನು ಗೊತ್ತುಹಚ್ಚು ದು ಕಠಿಣವಾಗಿತ್ತು. ಈ ವಿಷಯವಾಗಿ ಅರ್ಥಶಾಸ್ತ್ರವು ಅನ್ನುವದೇನಂದರೆ:—ನಿಮಗೆ ರಿನಲ್ಲಿ ಈಸಾಡುವಾಗ ನೀರು ಕುಡಿಯುತ್ತದೋ ಇಲ್ಲವೋ ಎಂಬದನ್ನು ಹೇಳು ದು ಹೇಗೆ ಕಠಿಣವೋ ಹಾಗೆಯೇ ಸರಕಾರದ ದುಡ್ಡನ್ನು ಎತ್ತುವಾಗ ಇಲ್ಲವೆ ನ್ಯವಸ್ಥೆ ಮಾಡುವಾಗ ಅಧಿಕಾರಸ್ಥರು ದುಡ್ಡು ತಿನ್ನುವವನ್ನು ನಿಶ್ಚಿತವಾಗಿ ಹೇಳಲಿಕ್ಕೆ ಬರುವ ಲ್ಲ.

೧೦. **ಸಾಮಾನ್ಯ ವಿವೇಚನೆ**:—ಮೇಲೆ ಕೊಟ್ಟ ಮೌರ್ಯರ ಕಾಲದ ಾಜ್ಯವ್ಯವಸ್ಥೆಯ ಸಂಕ್ಷಿಪ್ತ ವರ್ಣನೆಯಿಂದ ಆಗಿನ ಕಾಲದ ನಾಗರಿಕತೆಯ ವಿಷಯ ಾಗಿ ವಿದ್ಯಾರ್ಥಿಗಳಿಗೆ ಸಾಧಾರಣ ನಿಶ್ಚಿತವಾದ ಕಲ್ಪನೆಯು ಆಗಿರುವದೆಂದು ಹೇಳ ಕ್ಕೆ ಅಡ್ಡಿಇಲ್ಲ. ಆಧುನಿಕ ರಾಜ್ಯಪದ್ಧತಿಯ ಎಷ್ಟೋ ಸುಧಾರಣೆಗಳು ಆಗಿನ ಕಾಲಕ್ಕೆ ಮಲಿನಲ್ಲಿದ್ದವೆಂಬವನ್ನು ಓದಿ ಎಷ್ಟೋ ಜನರಿಗೆ ಆಶ್ಚರ್ಯವಾಗಬಹುದು.

೧೨ನೇ ಅಧ್ಯಾಯ

ಘನವಂತನಾದ ಅಶೋಕನು

೧. ಅಶೋಕನು ಪಟ್ಟವೇರಿದ್ದು:— ಬಿಂದುಸಾರನು ಕ್ರಿ. ಪೂ. ೨೭
ರಲ್ಲಿ ತೀರಿಕೊಂಡ ಬಳಿಕ ಅವನ ಮಕ್ಕಳಲ್ಲಿ ಒಬ್ಬನಾದ **ಅಶೋಕವರ್ಧನ**ನ
ಪಟ್ಟಕ್ಕೆ ಕೂತನು. ಅಶೋಕನು ತಂದೆಯ ಕಾಲಕ್ಕೆ ಮೊದಲು ತಕ್ಷಶಿಲೆಯಲ್ಲಿ ನಂತ
ಉಜ್ಜಯಿನಿಯಲ್ಲಿ ಸುಬೇದಾರನಿದ್ದನು. ಮತ್ತು ತಂದೆಯ ಅಂತ್ಯಕಾಲಕ್ಕೆ ಉಪರಾಜನ
ಗಿದ್ದನು. ಅಂದರೆ ಎಲ್ಲ ರಾಜ್ಯಕಾರಭಾರವನ್ನು ಇವನೇ ಮಾಡುತ್ತಿದ್ದನು. ಇವ
ಸಹೋದರರು—ಅವರಲ್ಲಿ ಮುಖ್ಯವಾಗಿ ಅವನ ಅಣ್ಣನಾದ **ಸುಶೀಮ**ನೆಂಬವ
ಪಟ್ಟದ ಸಲುವಾಗಿ ಜಗಳ ಹೂಡಿದ್ದರಿಂದ ಅಶೋಕನ ರಾಜ್ಯಾಭಿಷೇಕಮಹೋತ್ಸವ
೪ ವರ್ಷಗಳ ನಂತರ ಅಂದರೆ ೨೬೯ರಲ್ಲಿ ಜರಗಿತು. ಇವನು ೪೧ ವರ್ಷ ರಾಜ್ಯವಾ
ಕ್ರಿ. ಪೂ. ೨೩೭ರಲ್ಲಿ ತೀರಿಕೊಂಡನು.

೨. ರಾಜ್ಯವಿಸ್ತಾರ:—ಬಿಂದುಸಾರನ ಕಾಲಕ್ಕೆ ಹಿಂದುಕುಶ ಪರ್ವತದಿಂ
ಮೈಸೂರ ಪ್ರಾಂತದ ಉತ್ತರದವರೆಗಿನ ಪ್ರದೇಶವೆಲ್ಲ ಮೌರ್ಯರ ವಶದಲ್ಲಿತ್ತು. ಅಶೋ
ಕನು ಕಲಿಂಗದೇಶವನ್ನು(ಓಡಿಸಾ)ಗೆದ್ದು ಹಿಂದುಸ್ತಾನದ ಸಾರ್ವಭೌಮ ಅರಸನಾದನು
ತೀರದಕ್ಷಿಣಕ್ಕಿದ್ದ ತಮಿಳ ಸಂಸ್ಥಾನಗಳು ಮಾತ್ರ ಸ್ವತಂತ್ರವಾಗಿದ್ದವು. ರಾಜ್ಯವ
ಒಟ್ಟು ೪ ಮುಖ್ಯ ಪ್ರಾಂತಗಳನ್ನು ಮಾಡಿ ಅವುಗಳ ಮೇಲೆ ಅರಸುಮನೆತನದ ರಾಜ
ಮಾರರನ್ನು ಸರ ಸುಬೇದಾರರನ್ನಾಗಿ ನೇಮಿಸಿದ್ದನು. ಅವುಗಳ ರಾಜಧಾನಿಗಳು ಯಾ
ವೆಂದರೆ:— ತಕ್ಷಶಿಲೆ (ವಾಯವ್ಯಭಾಗ) ತೋಸಲಿ (ಪೂರ್ವಭಾಗ) ಉಜ್ಜಯನಿ (ಪಶ್ಚಿ
ಭಾಗ) ಸುವರ್ಣಗಿರಿ (ದಕ್ಷಿಣಭಾಗ).

೩. ಕಲಿಂಗದ ಯುದ್ಧ:— ಈ ಯುದ್ಧವು ಜಗತ್ತಿನ ಇತಿಹಾಸದ
ಮಹತ್ವದ ಸಂಗತಿಯಾಗಿರುವದು. ಯಾಕೆಂದರೆ, ಈ ಯುದ್ಧದಲ್ಲಿ ಆದ ಪ್ರಾಣಹಾ
ಯಿಂದ ಅಶೋಕನಿಗೆ ಅತಿಶಯ ಪಶ್ಚಾತ್ತಾಪವಾಗಿ ಅವನು ಬೌದ್ಧಧರ್ಮವನ್ನು ಸ್ವೀ
ರಿಸಿ ಜಗತ್ತಿನಲ್ಲಿ ಆ ಧರ್ಮದ ತತ್ವಗಳನ್ನು ಪ್ರಸಾರಮಾಡಿದನು. ಇವನ ಬೆಂಬಲ
ದೊರೆಯದಿದ್ದರೆ ಬೌದ್ಧಧರ್ಮವು ಈಗಿನಂತೆ ಜಗತ್ತಿನಲ್ಲಿ ಹಬ್ಬುತ್ತಿದ್ದಿಲ್ಲ.

ಈ ಯುದ್ಧದಲ್ಲಿ ೧ಲಕ್ಷಜನರು ಕೊಲ್ಲಲ್ಪಟ್ಟರು. ಮತ್ತು ೧೫ಲಕ್ಷ ಜನರು ಶರೆಯ
ಳಾದರು. ಇದಲ್ಲದೆ ಅನ್ನವಿಲ್ಲದೆ ಸಂಕಟದಿಂಲೂ ದುಃಖದಿಂದಲೂ ಎಷ್ಟೋ ಜನ
ತೀರಿಕೊಂಡರು. ಹೀಗೆ ಕಲಿಂಗದೇಶವು ಅಶೋಕನ ರಾಜ್ಯಕ್ಕೆ ಕೂಡಿಸಲ್ಪಟ್ಟಿತು.

೪. ಅಶೋಕನ ಶಾಸನಗಳು:— ರಾಮಾಯಣ ಕಾಲದಲ್ಲಿ ಜನಕ
ರಾಜರ್ಷಿಯಾಗಿದ್ದಂತೆ ಅಶೋಕನಾವರೂ ರಾಜರ್ಷಿಯೂ ಮಹಾತ್ಮನೂ ಆಗಿದ್ದನೆ

ವನು ತನ್ನ ವಿಚಾರಗಳನ್ನು ಗುಡ್ಡಗಳ ಮೇಲೆ ಕಲ್ಲಿನಲ್ಲಿ ದೊಡ್ಡ ಅಕ್ಷರಗಳಿಂದ ಕೊಡಿಸಿ ಅಜರಾಮರವಾಗಿ ಉಳಿಯುವಂತೆ ಮಾಡಿಬಿಟ್ಟಿದ್ದಾನೆ. ಅವುಗಳನ್ನು ಪ್ರಯಾಗದಲ್ಲಿಯೂ ಕಾಶೀವಾಡದ ಗಿರಿನಾರ ಬೆಟ್ಟದಲ್ಲಿಯೂ ಈಗ್ಯೂ ನೋಡಬಹುದು. ಅವುಗಳಲ್ಲಿಯ ಕೆಲವು ವಿಚಾರಗಳನ್ನು ಕೆಳಗೆ ಕೊಟ್ಟಿದೆ.

"ಕಲಿಂಗದಯುದ್ಧದಲ್ಲಿ ಆದ ಪ್ರಾಣಹಾನಿ ಮತ್ತು ಅನರ್ಥಗಳ ಒಂದು ಶತಾಂಶ ಅಥವಾ ಸಹಸ್ರಾಂಶದಷ್ಟು ಪ್ರಾಣ ಹಿಂಸೆಯು ಅಥವಾ ಅನರ್ಥವು ಉಂಟಾದರೆ ಧರ್ಮ ಪ್ರಭುವಿಗೆ ದುಃಖವಾಗುವದು. ಜನರು ಧರ್ಮ ಪ್ರಭುವಿಗೆ ಕೇಡು ಬಗೆದರೆ ಅದನ್ನು ಅವನು ಸುಮ್ಮನೆ ಸಹಿಸಿಕೊಳ್ಳುವನು. ಶಿಕ್ಷೆನೂಡುವ ಪ್ರಸಂಗವು ಒದಗಬಾರದೆಂದು ಜನರು ತಮ್ಮ ಕೆಟ್ಟ ರೀತಿಗಳನ್ನು ಬಿಟ್ಟುಬಿಡತಕ್ಕದ್ದು. ಯಾಕಂದರೆ, ಎಲ್ಲ ಜೀವಿಗಳಿಗೂ ಸುರಕ್ಷಿತತೆ, ಆತ್ಮಸಂಯಮನ, ಮನಃಶಾಂತಿ, ಆನಂದಗಳು ದೊರಿಯುತಕ್ಕದ್ದೆಂದು ಧರ್ಮಪ್ರಭುವು ಇಚ್ಛಿಸುತ್ತಾನೆ."

'ಇಹಪರಗಳಲ್ಲಿ ಉಳಿಯುವ ಶಾಶ್ವತವಾದ ಆತ್ಮಾನಂದವನ್ನು ದೊರಕಿಸಲಿಕ್ಕೆ ಪ್ರಯತ್ನಮಾಡುವದೇ ನಿಜವಾದ ಜಯವು. ಪ್ರದೇಶಗಳನ್ನು ಗೆಲ್ಲುವದರಿಂದ ನಿಜವಾದ ಜಯವು ದೊರಕಲಾರದು.' ಹೊಸದಾಗಿ ಗೆದ್ದುಕೊಂಡ ಕಲಿಂಗದಲ್ಲಿಯ ಸಮಾಪಾ ಮತ್ತು ತೋಸಲಿ ಎಂಬ ಮುಖ್ಯ ಪಟ್ಟಣಗಳ ಸುಬೇದಾರರಿಗೂ ಉಜ್ಜಯನಿ ತಕ್ಷಶಿಲೆಗಳ ರಾಜಪ್ರತಿನಿಧಿಗಳಿಗೂ ಉದ್ದೇಶಿಸಿ ತಾ ಶಿಲಾಶಾಸನಗಳನ್ನು ಬರೆಸಿರುವನು. ಅವುಗಳಲ್ಲಿ ಹೇಳಿದ್ದೇನಂದರೆ:—

'ಪ್ರಜೆಗಳೆಲ್ಲರೂ ನನ್ನ (ಅರಸನ) ಮಕ್ಕಳು. ಹೊಸದಾಗಿ ಗೆದ್ದುಕೊಂಡ ಪ್ರಾಂತಗಳನ್ನು ಆಳಲಿಕ್ಕೆ ಸುಸಂಸ್ಕೃತರಾದ ಅನುಭವವುಳ್ಳ ಅಧಿಕಾರಿಗಳನ್ನು ಕಳಿಸುವನು. ರಾಜ್ಯದಲ್ಲಿಯ ಎಲ್ಲ ಅಧಿಕಾರಿಗಳೂ ಮತ್ಸರ, ಕ್ರೂರತನ, ಆಲಸ್ಯ, ಕಾರ್ಯನಿವೃತ್ತಿ, ಮೊದಲಾದ ದುರ್ಗುಣಗಳಿಗೆ ಇಂಬುಗೊಡಬಾರದು. ಯಾರಾದರೂ, ತಮ್ಮ ಕರ್ತವ್ಯದಲ್ಲಿ ತಪ್ಪಿದರೆ ಧರ್ಮಪ್ರಭುವು ಅವರ ಬಗ್ಗೆ ಅಸಂತುಷ್ಟನಾಗುವನು.'

§ ೫. ಸಮಕಾಲೀನರಾದ ಅರಸರು:—ಸೆಲ್ಯೂಕಸನ ಮೊಮ್ಮಗನಾದ ಅಂಟಿಯೋಕಸ ಥಿಯೋಸ ಎಂಬುವನು ಪಶ್ಚಿಮ ಏಸಿಯಾದಲ್ಲಿ, ಟಾಲೆಮಿ ಫಿಲಾಡೆಲ್ಫಸ ಎಂಬುವನು ಇಜಿಪ್ತದಲ್ಲಿ ಇದೇ ಕಾಲಕ್ಕೆ ಆಳುತ್ತಿದ್ದರು. ಟಾಲೆಮಿಯ ಕಾಲದಲ್ಲಿ ಯೂಕ್ಲಿಡನ ಜ್ಯಾಮಿತಿಯ ಸಿದ್ಧಾಂತಗಳನ್ನು ಬರೆದ ಯುಕ್ಲಿಡನು ಅಲೆಕ್ಸಾಂದ್ರಿಯಾದಲ್ಲಿ ಇದ್ದನು. ಈ ಅರಸರು ಅಶೋಕನ ಸ್ನೇಹಿತರಾಗಿದ್ದರು. ಅಶೋಕನು ಈ ದೇಶಗಳಿಗೆ ಬೌದ್ಧ ಧರ್ಮವೇದೇಶಕರನ್ನು ಕಳಿಸಿದ್ದನು. ದಕ್ಷಿಣ ಹಿಂದುಸ್ತಾನದಲ್ಲಿ ಚೋಳರೂ ಪಾಂಡ್ಯರೂ ರಾಜ್ಯವಾಳುತ್ತಿದ್ದರು. ಇವರಲ್ಲದೆ ಕೇರಲ ಅಥವಾ ಮಲಬಾರದಲ್ಲಿ, ಸತೀಯಪುತ್ರ ಕೇರಳಪುತ್ರರಿಗಿನ ಮದುರೆ)ದಲ್ಲಿ ತಮಿಳ ರಾಜಮನೆತನಗಳು ಆಳುತ್ತಿದ್ದವು. ಇವೆಲ್ಲ ರಾಜ್ಯಗಳಿಗೂ

ಮಗಧರಾಜ್ಯಕ್ಕೂ ವ್ಯಾಪಾರದಿಂದ ನಿಕಟಸಂಬಂಧವಿತ್ತು. ತಾಮ್ರಪರ್ಣಿ ನ
ಸಮೀಪವಾಗಿದ್ದ ತಿನೆವಳ್ಳಿಯಿಂದ ಮುತ್ತು ಶಂಖಗಳನ್ನು ಪಾಟಲಿಪುತ್ರಕ್ಕೆ ಒಯ
ತ್ತಿದ್ದರು.

೬. **ಬೌದ್ಧ ಧರ್ಮದ ಪ್ರಸಾರ**:-ಅಶೋಕನು ಬೌದ್ಧ ಧರ್ಮವನ್ನು
ತ್ತಿನಲ್ಲಿ ಪ್ರಸಾರಮಾಡುವ ಉದ್ದೇಶದಿಂದ ಉಪದೇಶಕರನ್ನು ಸಿಂಹಳದ್ವೀಪ, ಬ್ರ
ದೇಶ (ಸುವರ್ಣ ಭೂಮಿ), ವೈಸೂರ (ಮಹಿಷ ಮಂಡಲ) ಮೊದಲಾದ ಪ್ರದೇ
ಳಿಗೆ ಕಳುಹಿಸಿಕೊಟ್ಟನು. ಲಂಕೆಗೆ ಅಶೋಕನ ತಮ್ಮನಾದ ಮಹೇಂದ್ರ (ಮಹಿಂದ)ನ
ತಂಗಿಯಾದ ಸಂಘಮಿತ್ರಾ (ಸಂಗಮಿತ್ತಾ) ಎಂಬವಳೂ ಮಂದುರೆಯಿಂದ ಹೊರ
ಕ್ರಿ. ಪೂ. ೨೫೧ ಅಥವಾ ೨೫೦ ರಲ್ಲಿ ಹೋದರು. ಅವರಿಗೆ ಲಂಕೆಯ ಅರಸನಾ
ತಿಸಾ ಎಂಬವನು ಬಹಳ ಆದರ ಮಾಡಿ ಬೌದ್ಧಧರ್ಮದ ದೀಕ್ಷೆಯನ್ನು ತಾನು ಸ್ವೀ
ರಿಸಿ ತನ್ನ ದೇಶದಲ್ಲಿ ಬೌದ್ಧಮತವು ಹಬ್ಬುವಂತೆ ಪ್ರಯತ್ನಮಾಡಿದನು. ಮಹಿಂದ
೪೬ ವರ್ಷ ಅಲ್ಲೇ ಇದ್ದು ಧರ್ಮಪ್ರಸಾರದ ಕಾರ್ಯವನ್ನು ನೆರವೇರಿಸಿ ಜನ
ಪ್ರಿಯನೂ ವಂದ್ಯನೂ ಆದನು. ಆದದರಿಂದ ತಿಸಾರಾಜನು ಅನುರಾಧಪುರವೆಂಬ
ಮಹಿಂದನ ಸಲುವಾಗಿ ಅದ್ಭುತವಾದ ಮಠವನ್ನು ಕಟ್ಟಿಸಿದನು. ಆದರ ಅವಶೇ
ಗಳನ್ನು ಈಗ್ಯೂ ನೋಡಬಹುದು. ಬೌದ್ಧ ಉಪದೇಶಕರು ಕಾಡು ಜನರಿಗೆ ಧರ್ಮ
ಉಪದೇಶವನ್ನು ಮಾಡಿದ್ದಲ್ಲದೆ ಅವರಲ್ಲಿ ನಾಗರಿಕತೆಯನ್ನುಂಟುಮಾಡಿದರು. ಕಾ
ವೆಗಳಿಂದ ಹೊಲಗಳಿಗೆ ನೀರು ಹಾಯಿಸುವದೂ ಕಲ್ಲಿನಲ್ಲಿ ಚಿತ್ರ ಅಥವಾ ಅಕ್ಷರಗಳನ್ನ
ಕೊರೆಯುವದೂ ಬೌದ್ಧ ಉಪದೇಶಕರಿಂದ ಸಿಂಹಳದ್ವೀಪದ ಜನರಿಗೆ ಗೊತ್ತಾದ

೭. **ಪಾಟಲಿಪುತ್ರದ ಸಭೆ**: —ಬುದ್ಧನು ತೀರಿಕೊಂಡ ನಂತರ ಅವ
ಶಿಷ್ಯರು ಒಟ್ಟುಗೂಡಿ ಅವನ ವಚನಗಳನ್ನು ಬರೆದಿಟ್ಟರು. ಇದೇ ಬೌದ್ಧಧರ್ಮ
ಮೂಲ ಗ್ರಂಥವು. ಈ ಸಭೆಯು ಕ್ರಿ. ಪೂ. ೪೭೭ ರಲ್ಲಿ ಕೂಡಿರಬಹುದೆಂದು ಕೆಲ
ಇತಿಹಾಸಕರ್ತರು ಹೇಳುತ್ತಾರೆ. ಈ ಸಭೆಯಾದ ಸುಮಾರು ನೂರು ವರ್ಷಗಳ ನಂತ
ಅಂದರೆ ಕ್ರಿ. ಪೂ. ೩೮೦ ರಲ್ಲಿ ವೈಶಾಲಿ ಎಂಬಲ್ಲಿ ಮತ್ತೊಂದು ಸಭೆಯಾಗಿ ಬೌ
ಮತದಲ್ಲಿ ಉಂಟಾದ ಒಳಭೇದಗಳನ್ನು ತೆಗೆದು ಹಾಕಿ ಏಕವಾಕ್ಯತೆಯನ್ನುಂ
ಮಾಡಲಿಕ್ಕೆ ನಿರ್ಣಯ ಮಾಡಿದರು. ಮತ್ತೆ ೧೪೦ ವರ್ಷಗಳ ನಂತರ ಕ್ರಿ. ಪೂ
೨೪೦ ರಲ್ಲಿ ಪಾಟಲಿಪುತ್ರದಲ್ಲಿ ಅಶೋಕನು ಸಭೆಗೂಡಿಸಿ ಬೌದ್ಧಮತದ ತತ್ವಗಳನ್ನ
ಜಗತ್ತಿನಲ್ಲಿ ಹೇಗೆ ಪ್ರಸಾರಮಾಡಬೇಕೆಂಬದನ್ನು ಗೊತ್ತುಪಡಿಸಿದನು. ನಂತರ ಬೇ
ಬೇರೆ ದೇಶಗಳಿಗೆ ಉಪದೇಶಕರು ಕಳುಹಿಸಲ್ಪಟ್ಟರು.

೮. **ಅಶೋಕನು ಬೌದ್ಧಸನ್ಯಾಸಿಯಾದದ್ದು**: —ಮಥುರೆಯ ಉ
ಗುಪ್ತನೆಂಬವನು ಅಶೋಕನ ಗುರುವಾಗಿದ್ದನು. ಅವನ ಉಪದೇಶದಿಂದ ಎಲ್ಲ ದೆ

ಳಿಗೂ ಧರ್ಮೋಪದೇಶಕರು ಕಳುಹಿಸಲ್ಪಟ್ಟರು. ಮತ್ತು ಉಪಗುಪ್ತನು ತನ್ನ ರಾಜ
ಗುರುವಾದ ಅಶೋಕನನ್ನು ಕ್ರಿ. ಪೂ. ೨೪೯ ರಲ್ಲಿ ತೀರ್ಥಯಾತ್ರೆಗಾಗಿ ನೇಪಾಳಕ್ಕೆ
ಕರೆಕೊಂಡು ಹೋದನು. ಅಲ್ಲಿ ಬುದ್ಧನ ಜನ್ಮಸ್ಥಳಕ್ಕೆ ಹೋಗಿ ಒಂದು ಶಿಲಾಸ್ತಂ
ಭದ ಮೇಲೆ ಈ ಸಂಗತಿಯನ್ನು ಕೊರಿಸಿರುವನು. ಕೆಲವು ದಿವಸ ಅಶೋಕನು ಸನ್ಯಾ
ಸಿಯ ವೇಷವನ್ನು ಹಾಕಿಕೊಂಡು ತಿರುಗಾಡಿದನು. ಬೌದ್ಧಧರ್ಮಿಗಳಿಗೆ ಬೇಕಾ
ದಾಗ ಶ್ರಮಣ ಸನ್ಯಾಸಿಯಾಗಲಿಕ್ಕೂ ಶ್ರಾವಕ ಗೃಹಸ್ಥರಾಗಲಿಕ್ಕೂ ಬರುತ್ತದೆ. ಬ್ರಹ್ಮ
ದೇಶದ ಜನರು ಈಗಲೂ ಈ ಪದ್ಧತಿಯನ್ನು ಅನುಸರಿಸುವರು. ಗುರುವಿನ ಉಪದೇ
ಶದಿಂದ ಅಶೋಕನು ಮಾಂಸಾಹಾರವನ್ನು ಬಿಟ್ಟು ಅಹಿಂಸಾ ತತ್ವದ ಪ್ರಸಾರವನ್ನು
ಮಾಡಲಿಕ್ಕೆ ಒಂದು ಶಿಲಾಶಾಸನವನ್ನು ಬರೆಯಿಸಿದನು. ಇವೇ ಕಾರಣದಿಂದ ಗೋವಿನ
ಪವಿತ್ರ್ಯದ ಕಲ್ಪನೆಯು ಜನರಲ್ಲಿ ದೃಢಮೂಲವಾಯಿತು.

೯. **ಅಶೋಕನೂ ಅಕಬರನೂ:** — ಹಿಂದುಸ್ತಾನದ ಇತಿಹಾಸದಲ್ಲಿ ಇವರಿಬ್ಬರಷ್ಟು ಪ್ರಸಿದ್ಧರಾದ ಅರಸರು ಯಾರೂ ಇಲ್ಲ. ಕಲಿಂಗದ ಯುದ್ಧದಿಂದ ಅಶೋಕನಿಗೆ ಪಶ್ಚಾತ್ತಾಪವುಂಟಾದಂತೆ ಅಕಬರನಿಗೆ ಅವನು ಮಾಡಿದ ಯುದ್ಧಗಳಿಂದ ಸುಃಖವಾದದ್ದು ಕಂಡುಬರುವದಿಲ್ಲ. ಅಕಬರನಲ್ಲಿ ಅರಸರಲ್ಲಿರುವ ಮಹತ್ವಾಕಾಂಕ್ಷೆಯು ಇತ್ತು. ಆದರೆ ಅಶೋಕನಲ್ಲಿ ಸಾತ್ವಿಕ ವೃತ್ತಿಯು ಪೂರ್ಣವಾಗಿತ್ತು. ಅಶೋಕನು ರಾಜ್ಯಕಾರ್ಯದ ಸಲುವಾಗಿ ಯಾವಾಗಲೂ ದುಡಿಯುತ್ತಿದ್ದನು. ಮತ್ತು ಧರ್ಮಪ್ರ
ಸಾರದ ಕಾರ್ಯದಲ್ಲಿ ಸಂಪೂರ್ಣ ಆಸ್ಥೆಯುಳ್ಳವನಿದ್ದನು. ಇವನ ಕಾಲದ ಬೌದ್ಧ
ಗ್ರಂಥಗಳಲ್ಲಿ ಶಿಕ್ಷಣವು ಜನರಿಗೆ ಪುಕ್ಕಟೆಯಾಗಿ ದೊರೆಯುತ್ತಿದ್ದುದರಿಂದ ಈಗಿನ ಕಾಲ
ಕ್ಕಿಂತಲೂ ಜನರಲ್ಲಿ ಸಾಕ್ಷರತೆಯು ಹೆಚ್ಚಿತ್ತು.

೧೦. **ಅಶೋಕನ ಆಡಳಿತ:**—ಅಶೋಕನ ರಾಜ್ಯವು ಉತ್ತರಕ್ಕೆ ಕಾಬೂಲ, ಕಂದಹಾರ; ಪೂರ್ವಕ್ಕೆ ಕಟಕ, ಗಂಜಾಮು; ದಕ್ಷಿಣಕ್ಕೆ ಮೈಸೂರ; ಪಶ್ಚಿಮಕ್ಕೆ ಕಾಠೇವಾಡದ ವರೆಗೆ ಹಬ್ಬಿತ್ತು. ಇಷ್ಟು ವಿಸ್ತಾರವಾವ ರಾಜ್ಯವಿದ್ದರೂ ವ್ಯವಸ್ಥೆಯು ಚೆನ್ನಾಗಿತ್ತು. ಪ್ರಜೆಗಳಿಗೆ ನ್ಯಾಯವು ದೊರೆಯಬೇಕೆಂದು ನ್ಯಾಯಕೋರ್ಟುಗಳನ್ನು ಸ್ಥಾಪಿಸಿದ್ದನು. ಇವನ ಆಳಿಕೆಯಲ್ಲಿ ದೇಹಾಂತ ಶಿಕ್ಷೆಯು ಬಂದುಮಾಡಲ್ಪಟ್ಟಿತು. ಕಲಾ ಕೌಶಲ್ಯಗಳಿಗೆ ಒಳ್ಳೇ ಉತ್ತೇಜನವು ದೊರೆತು ಎಷ್ಟೋ ಸುಂದರವಾದ ಇಮಾರತುಗಳು ಕಟ್ಟಲ್ಪಟ್ಟವು. ಇಜಿಪ್ತ, ಗ್ರೀಸ ಮುಂತಾದ ಪರದೇಶಗಳ ಕೂಡ ಬಳಿಕೆಯು ಹೆಚ್ಚಾಗಿ ವ್ಯಾಪಾರದ ಅಭಿವೃದ್ಧಿಯಾಯಿತು. ಇವನು ಎಷ್ಟೋಕಡೆಯಲ್ಲಿ ಔಷಧಾಲಯಗಳನ್ನೂ ಅನ್ನಛತ್ರಗಳನ್ನೂ ಇಡಿಸಿದ್ದನು. ದಾರಿಕಾರರ ಅನುಕೂಲತೆಗಾಗಿ ಅಲ್ಲಲ್ಲಿಗೆ ಧರ್ಮಶಾಲೆಗಳನ್ನು ಕಟ್ಟಿಸಿದ್ದನು. ಅಶೋಕನು ಈ ಪ್ರಕಾರ ಒಳ್ಳೇ ವೈಭವದಿಂದ ೪೧ ವರ್ಷ ರಾಜ್ಯವಾಳಿ ಕ್ರಿ. ಪೂ. ೨೩೭ರಲ್ಲಿ ಮರಣಹೊಂದಿದನು.

೧೧. **ಅಶೋಕನ ತರುವಾಯ ಆಳಿದ ಅರಸರು:** — ಅಶೋಕನ ತೀವರ, ಕೂನಾಲ, ಜಲೌಕ ಎಂಬ ಮೂವರು ಮಕ್ಕಳಿದ್ದರು. ಅವರಲ್ಲಿ ಜಲೌಕ ಕಾಶ್ಮೀರದಲ್ಲಿ ಸುಬೇದಾರನಿದ್ದು ತಂದೆಯು ತೀರಿಕೊಂಡ ನಂತರ ಸ್ವತಂತ್ರನಾದನು. ಇವನು ತಂದೆಯಂತೆ ಬೌದ್ಧಧರ್ಮದ ಅಭಿಯಾನಿಯಾಗಿರದೆ ಶೈವನಾಗಿದ್ದನು. ಇವನು ಪಾಟಲಿಪುತ್ರದಲ್ಲಿ ಆಳಿದಂತೆ ಕಂಡುಬರುವದಿಲ್ಲ.

ಅಶೋಕನು ತೀರಿದ ನಂತರ ಅವನ ಮೊಮ್ಮಗನಾದ ದಶರಥ ಎಂಬವನು ಪಾಟಲಿಪುತ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಪೂರ್ವದ ಕಡೆಯ ರಾಜ್ಯವನ್ನು ಕುನಾಲನ ಮಗನಾದ ಸಮ್ಪ್ರತಿ ಎಂಬವನು ಪಶ್ಚಿಮದ ರಾಜ್ಯವನ್ನೂ ಆಳಹತ್ತಿದ.

ಉಜ್ಜಯಿನಿಯಲ್ಲಿ ಆಳುತ್ತಿದ್ದ ಸಮ್ಪ್ರತಿಯು ಜೈನನಿದ್ದನೆಂದೂ ಅನೇಕ ಜೈನ ಗುಡಿಗಳನ್ನು ಅಜಮೀರದಿಂದ ಶತ್ರುಂಜಯದ ಗುಡ್ಡದವರೆಗೆ ಕಟ್ಟಿದನೆಂದೂ ಹೇಳಿಕೆ ಇರುವದು. ಮೌರ್ಯ ವಂಶದ ಕಡೆಯವನಾದ ಬ್ರಹದ್ರಥನೆಂಬವನನ್ನು ಅವನ ಸೇನಾಪತಿಯಾದ ಪುಷ್ಯಮಿತ್ರನು ಕೊಂದು ತಾನೇ ಪಟ್ಟಕ್ಕೆ ಕೂತನು. ಹೀಗೆ ಕ್ರಿ. ಪೂ. ೧೮೪ರಲ್ಲಿ ಮೌರ್ಯ ವಂಶದ ಸಮಾಪ್ತಿಯಾಯಿತು.

೧೨. **ಸುಂಗವಂಶ**:—ಪುಷ್ಯಮಿತ್ರನು ಸುಂಗವಂಶದವನು. ಇವನು ಬ್ರಾಹ್ಮಣಧರ್ಮದ ಅಭಿಮಾನಿಯಾಗಿದ್ದು ಅಶ್ವಮೇಧ ಮತ್ತು ವಾಜಪೇಯ ಯಜ್ಞಗಳನ್ನು ಮಾಡಿದನು. ಪ್ರಸಿದ್ಧ ವ್ಯಾಕರಣಕಾರನಾದ ಪತಂಜಲಿಯು ಇವನ ಕಾಲದಲ್ಲಿಯೇ ಇದ್ದನು. ಕಾಲಿದಾಸನು ಬರೆದ ಮಾಲವಿಕಾಗ್ನಿಮಿತ್ರವೆಂಬ ನಾಟಕದಲ್ಲಿ ಪುಷ್ಯಮಿತ್ರನ ಚರಿತ್ರದ ಕೆಲವಂಶವಿರುವದು. ಇವನ ಕಾಲಕ್ಕೆ ಮಿನಾಂದರ (ಮಿಲಿಂದ)ನೆಂಬ ಕಾಬೂಲದ ಅರಸನು ಹಿಂದುಸ್ತಾನದ ಮೇಲೆ ದಾಳಿಮಾಡಿ ಪಾಟಲಿಪುತ್ರದ ವರೆಸಾಗಿ ಹೋದನು. (ಕ್ರಿ. ಪೂ. ೧೭೫) ಪುಷ್ಯಮಿತ್ರನು ಇವನನ್ನು ಸೋಲಿಸಿದ್ದರಿಂದ ಮತ್ತೆ ಅವನು ಕಾಬೂಲಕ್ಕೆ ತಿರುಗಿ ಹೋದನು. ಸುಂಗವಂಶದವರು ೧೧೨ ವರ್ಷ ಅಂದರೆ ಕ್ರಿ. ಪೂ. ೭೩೨ರ ವರೆಗೆ ರಾಜ್ಯವಾಳಿದರು. ಕಡೆಯ ಅರಸನಾದ ದೇವಭೂತಿಯೆಂಬವನು ದುರ್ವ್ಯಸನಿಯಿದ್ದದರಿಂದ ಅವನನ್ನು ಅವನ ಮಂತ್ರಿಯಾದ ವಾಸುದೇವನು ಕೊಲ್ಲಿಸಿ ತಾನೇ ಪಟ್ಟಕ್ಕೆ ಕೂತನು. ಇವನು ಕಣ್ವವಂಶದವನು. ಇವನ ವಂಶದವರು ೪೫ ವರ್ಷ ಅಂದರೆ ಕ್ರಿ. ಪೂ. ೭೩೨ರ ವರೆಗೆ ಆಳಿದರು. ನಂತರ ಆಂಧ್ರರು ಪ್ರಬಲರಾದರು.

೧೩. **ಆಂಧ್ರರು**:—ಆಂಧ್ರರು ಗೋದಾವರಿ ಮತ್ತು ಕೃಷ್ಣಾನದಿಗಳ ನಡುವಿನ ದೋಆಬದ ಫಲದ್ರೂಪ ಪ್ರದೇಶದಲ್ಲಿ ಆಳುತ್ತಿದ್ದರು. ಚಂದ್ರಗುಪ್ತನ ಕಾಲಕ್ಕೆ ಇವರು ಪ್ರಬಲರಾಗಿದ್ದರೂ ಅವನ ಮಾಂಡಲಿಕರಾಗಲಿಕ್ಕೆ ಒಪ್ಪಿಕೊಂಡರು. ಮುಂದೆ ಕ್ರಿ. ಪೂ. ೨೨೫ರಲ್ಲಿ ಇವರು ಸ್ವತಂತ್ರರಾದರು. ಈ ಮನೆತನದ ೩೦ ಮಂದಿ ಅರಸರು ೪೫೦

ರ್ಷ ರಾಜ್ಯವಾಳಿದರು. ಅವರಲ್ಲಿ ಪ್ರಸಿದ್ಧನಾದ ಗೌತಮೀಪುತ್ರ ಯಜ್ಞಶ್ರೀ ಎಂಬ ರಸನು ಇಸವಿಸನ್ ೧೬೬—೧೯೬ರ ವರೆಗೆ ಆಳಿದನು. ಆಂಧ್ರರ ವಿಷಯಕ್ಕೆ ಕಿಕ್ಕಿನ ಸಂಗತಿಗಳು ಗೊತ್ತಾಗಿಲ್ಲ.

ಈ ಕಾಲದ ಮುಖ್ಯ ಸಂಗತಿಗಳು

೨. ಪೂ. ೫೫೦ ಪಾಣಿನಿಯು ತಕ್ಷಶಿಲೆಯಲ್ಲಿದ್ದು ಅಷ್ಟಾಧ್ಯಾಯಿಯಾ ಸೂತ್ರವೆಂಬ ವ್ಯಾಕರಣವನ್ನು ಬರೆದನು.

೩೭. ಅಥವಾ ೫೨೫ ಅಲೆಕ್ಸಂದರನು ತಕ್ಷಶಿಲೆಗೆ ಬಂದಾಗ ಚಂದ್ರಗುಪ್ತನು ವಿದ್ಯಾಪೀಠದಲ್ಲಿ ಕಲಿಯುತ್ತಿದ್ದಾಗ ಅವನಿಗೆ ಬೆಟ್ಟಿಯಾದದ್ದು.

೩೩. ಜೂನ ಬಾಬಿಲನದಲ್ಲಿ ಅಲೆಕ್ಸಂದರನ ಮರಣ

೩೨. ಚಂದ್ರಗುಪ್ತನು ಪಟ್ಟಕ್ಕೆ ಕೂತದ್ದು.

೦೫. ಸೆಲ್ಯೂಕಸನು ಹಿಂದುಸ್ಥಾನದ ಮೇಲೆ ದಾಳಿ ಮಾಡಿ ಸೋತು ತರುಗಿ ಹೋದದ್ದು.

೦೩. ಮ್ಯಾಗಾಸ್ಥಿನೀಸನು ಪಾಟಲಿಪುತ್ರಕ್ಕೆ ರಾಯಭಾರಿಯಾಗಿ ಬಂದದ್ದು.

೯೮. ಬಿಂದುಸಾರ ಅಮಿತ್ರಘಾತನು ಪಟ್ಟಕ್ಕೆ ಕೂತದ್ದು.

೨೭. ಅಶೋಕವರ್ಧನನು ಪಟ್ಟಕ್ಕೆ ಕೂತದ್ದು.

೨೯. ಅಶೋಕನ ಪಟ್ಟಾಭಿಷೇಕ.

೨೬. ಕಲಿಂಗದ ಯುದ್ಧ.

೨೫. ಅಶೋಕನು ಪರದೇಶಗಳಿಗೆ ಬೌದ್ಧ ಧರ್ಮೋಪದೇಶಕರನ್ನು ಕಳಿಸಿದನು.

೨೬—೨೬. ೧೪ ಶಿಲಾಶಾಸನಗಳನ್ನೂ, ೨ ಕಲಿಂಗದ ಶಾಸನಗಳನ್ನೂ ಅಶೋಕನು ಬರೆಯಿಸಿದನು. ಧರ್ಮವ್ಯವಸ್ಥೆಗಾಗಿ ಧರ್ಮಪಾಲಕರನ್ನು ನೇಮಿಸಿದನು.

೨. ವೂ.

೨೫೧. ಸಿಂಹಳದ್ವೀಪದ ತಿಸ್ಸ ಎಂಬ ಅರಸನು ಪಟ್ಟಕ್ಕೆ ಕೂತದ್ದು.

೨೫೦. ಮಹೇಂದ್ರ (ಮಹಿಂದ)ನು ಸಿಂಹಳದ್ವೀಪಕ್ಕೆ ಬುದ್ಧಧರ್ಮೋಪದೇಶಕನಾಗಿ ಹೋದದ್ದು.

೨೪೯. ಅಶೋಕನು ತೀರ್ಥಯಾತ್ರೆಗಾಗಿ ಹೋದದ್ದು.

೨೪೨. ೭ ಸ್ತಂಭಶಾಸನಗಳನ್ನು ಪ್ರಸಿದ್ಧಿಸಿದ್ದು.

೨೪೦—೨೨. ಪಾಟಲಿಪುತ್ರದ ೩ನೇ ಸಭೆ. ಬೌದ್ಧಧರ್ಮಾನುಯಾಯಿಗಳಲ್ಲಿ ಒಡಕು ಇರದಾರದೆಂದು ಸ್ತಂಭಶಾಸನಗಳನ್ನು ಬರೆಸಿದ್ದು.

೨೩೨. ಅಶೋಕನ ಮರಣ. ದಶರಥನು ಪಾಟಲಿಪುತ್ರದಲ್ಲಿಯೂ ಸಂಪ್ರತಿಯು ಉಜ್ಜಯಿನಿಯಲ್ಲಿಯೂ ಆಳಹತ್ತಿದರು.

೨೧೧. ತಿಸ್ಸನ ಮರಣ. ಲುಟ್ಟಿಯಾ ಎಂಬವನು ಪಟ್ಟಕ್ಕೆ ಕೂತದ್ದು.

೨೦೪. ಮಹೇಂದ್ರನು ಸಿಂಹಳದ್ವೀಪದಲ್ಲಿ ತೀರಿಕೊಂಡದ್ದು.

೨೦೩. ಮಹೇಂದ್ರನ ತಂಗಿಯೂದ ಸಂಘಮಿತ್ರೆಯು ಸಿ. ದ್ವೀಪದಲ್ಲಿ ತೀರಿಕೊಂಡದ್ದು.

೧೮೫. ಮೌರ್ಯಕುಲದ ಕಡೆಯ ಅರಸನಾದ ಬ್ರಹದ್ರಥನು ತೀರಿಕೊಂಡದ್ದು.

ಸುಂಗವಂಶ

೧೮೫. ಪುಷ್ಯಮಿತ್ರನು ಪಟ್ಟಕ್ಕೆ ಕೂತದ್ದು. ಬ್ರಾಹ್ಮಣಧರ್ಮದ ಪುನರುಜ್ಜೀವನ. ಪತಂಜಲಿಯು ವ್ಯಾಕರಣವನ್ನು ಬರೆದದ್ದು.

೧೩೫. ಮಿನಾಂದರನ ದಾಳಿ

೭೩. ದೇವಭೂತಿ ಎಂಬ ಕಡೆಯ ಅರಸನು ತೀರಿದ್ದು.

೭೩–೨೮. ಕಣ್ವವಂಶ.

ಆಂಧ್ರವಂಶ

೨೩೦? ಆಂಧ್ರವಂಶದ ಆರಂಭ
ಇಸವಿಸನ್

೧೭೩-೨೦೨. ಯಜ್ಞಶ್ರೀ ಎಂಬ ಪ್ರಸಿದ್ಧ ಅರಸನ ಕಾಲ.

೨೨೫. ವಂಶದ ಸಮಾಪ್ತಿ.

ಗಿಸನೇ ಅಧ್ಯಾಯ

ಶಕರು ಅಥವಾ ಸಿಥಿಯನ್ನರು

೧. ಪರದೇಶದವರಿಗೂ ನಮ್ಮ ದೇಶದವರಿಗೂ ಇದ್ದ ಸಂಬಂಧ

ಕ್ರಿ. ಪೂ. ೧೩೦ಕ್ಕಿಂತ ಮೊದಲು ಒಬ್ಬ ಗ್ರೀಕ ರಾಯಭಾರಿಯು ಮಧ್ಯಹಿಂದು ತಾನದಲ್ಲಿ ಭೀಲ್ಸಾ ಎಂಬ ಗ್ರಾಮದ ಹತ್ತರ ವಿಷ್ಣುವಿನ ಅವತಾರವಾದ ವಾಸುದೇವನ ಮೂರ್ತಿಯುಳ್ಳ ಸುಂದರವಾದ ಸ್ತಂಭವನ್ನು ನಿಲ್ಲಿಸಿದ್ದು ಈಗ್ಗೂ ಅದೆ. ಹೀಗೆ ಗ್ರೀಕರ ಮೇಲೆ ಹಿಂದುಧರ್ಮದೊಳಗಿನ ಭಕ್ತಿಮಾರ್ಗದ ಪರಿಣಾಮವು ಇಷ್ಟು ಪ್ರಾಚೀನಕಾಲ ದಲ್ಲಿ ಆಗಿತ್ತೆಂದು ಹೇಳಬಹುದು.

ಪಾರ್ಥಿಯಾ (ಇರಾಣ)ಕ್ಕೂ ನಮ್ಮ ದೇಶಕ್ಕೂ ವ್ಯಾಪಾರ ಮೊದಲಾದ ಕಾರಣ ಗಳಿಂದ ಸಂಬಂಧವುಂಟಾಗಿತ್ತು. ಆಗಿನ ಕಾಲದ ನಮ್ಮಲ್ಲಿಯ ಅರಸರು ಸತ್ರಪವೆಂಬ ಪಾರ್ಥಿಯಾ ದೇಶದಲ್ಲಿ ಪ್ರಚಲಿತವಾದ ಬಿರುದನ್ನು ಧರಿಸಿಕೊಂಡಿದ್ದರು. ಗುಪ್ತ ವಂಶದ ಅರಸರು ಪ್ರಬಲರಾಗಿ ಶಕವಂಶದ ಕಡೆಯ ಅರಸನನ್ನು ಗೆಲ್ಲುವವರೆಗೆ ಸತ್ರ ವೆಂಬ ಬಿರುದು ಪ್ರಚಾರದಲ್ಲಿತ್ತು.

ಸೆಂಟ್ ಥಾಮಸನೆಂಬ ಕ್ರಿಸ್ತೀ ಗುರುವು ಇ. ಸ. ಮೊದಲನೇ ಶತಕದಲ್ಲಿ ಇರಾಣ ದೊಳಗಿಂದ ಹಾದು ಹಿಂದುಸ್ತಾನದಲ್ಲಿ ಸಂಚಾರಮಾಡಿ ಮದ್ರಾಸದ ಸಮೀಪಕ್ಕೆ ಮೈಲಾಪುರದಲ್ಲಿ ತೀರಿಕೊಂಡನು. ಕ್ರಿಸ್ತೀಜನರ ಸಂಖ್ಯೆಯು ಮದ್ರಾಸ ಇಲಾಖೆಯಲ್ಲಿ ವಿಶೇಷವಾಗಿರಲಿಕ್ಕೆ ಇದೇ ಕಾರಣವಿರಬಹುದು.

೨. **ಕನಿಷ್ಕ:**—ಕುಶಾನ ಅಥವಾ ಶಕವಂಶದ ಪ್ರಸಿದ್ಧ ಅರಸನಾದ ಕನಿಷ್ಕನು ಇ. ಸ. ೭೮ರಲ್ಲಿ ಆಳಹತ್ತಿದನೆಂದು ತಿಳಿದು ಸಾಮಾನ್ಯ ಜನರು ಈ ಯುಗವನ್ನು ಅಂದಿ ನಿಂದ ಎಣಿಸುತ್ತಾರೆ. ಆದರೆ ಈಗ ದೊರೆತ ಆಧಾರಗಳಿಂದ ಕನಿಷ್ಕನ ಕಾಲವು ಇ. ಸ. ೧೨೦ರಿಂದ ಪ್ರಾರಂಭವಾಯಿತೆಂದು ಹೇಳಬೇಕಾಗಿದೆ.

ಅಶೋಕನ ತರುವಾಯ ಬೌದ್ಧಧರ್ಮದ ಪ್ರಸಾರಕ್ಕಾಗಿ ಕನಿಷ್ಕನು ಬಹಳ ಪ್ರಯತ್ನಪಟ್ಟನು. ಇವನ ರಾಜ್ಯವು ಕಾಬೂಲದಿಂದ ಮಥುರೆಯ ವರೆಗೆ ಹಬ್ಬಿತ್ತು. ಕಾಶ್ಮೀರ, ಗುಜರಾತ, ಮಧ್ಯಏಶಿಯಾ ಇವು ಅವನ ರಾಜ್ಯಕ್ಕೆ ಸೇರಿದ್ದವು. ಇವನ ರಾಜ ಧಾನಿಯು ಪುರುಷಪುರ ಅಥವಾ ಪೇಶಾವರವು. ಕನಿಷ್ಕನು ಮಹತ್ವಾಕಾಂಕ್ಷಿಯಾಗಿದ್ದ ರಿಂದ ಚೀನರಾಜ್ಯದೊಳಗಿದ್ದ ಕಾಶಗರ, ಯಾರ್ಕಂದ, ಖೋತಾನ ಪ್ರಾಂತಗಳನ್ನು ಗೆದ್ದುಕೊಂಡನು. ಆದದರಿಂದ ಚೀನದೇಶದ ಇತಿಹಾಸದಲ್ಲಿ ಕನಿಷ್ಕನ ಹೆಸರು ಉಲ್ಲೇಖಿ ಸಲ್ಪಟ್ಟಿದೆ. ಇ. ಸ. ೧೯೦೯ರಲ್ಲಿ ಬುದ್ಧನ ಅವಶೇಷವನ್ನು ಹಾಕಿದ ಒಂದು ಸಂಪು ಟವು ಪೇಶಾವರದ ನೆರೆಯಲ್ಲಿ ಸಿಕ್ಕಿತು. ಆ ಸಂಪುಟದ ಮೇಲೆ ಕನಿಷ್ಕನ ಮೂರ್ತಿ ಯಿರುವದು. ಆಗಿನ ಕಾಲಕ್ಕೆ ಬುದ್ಧನ ಅವಶೇಷವನ್ನು ಬೇರೆ ಕಡೆಯಿಂದ ತಂದು ಇಲ್ಲಿ ಹೂಳಿಟ್ಟಿಂತೆ ತೋರುತ್ತದೆ.

೩. **ಬೌದ್ಧರ ೩ನೇ ಸಭೆ:**—ಅಶೋಕನಂತೆ ಕನಿಷ್ಕನಾದರೂ ಬೌ
ಗುರುಗಳ ಸಭೆಯನ್ನು ಕೂಡಿಸಿ ಬುದ್ಧನ ವಚನಗಳಿಗೆ ಟೀಕೆಯನ್ನು ತಾಮ್ರಪಟ
ಮೇಲೆ ಬರೆಯಿಸಿದನು. ಈ ಸಭೆಯು ಕಾಶ್ಮೀರದಲ್ಲಿ ಕೂಡಿತ್ತು. ಕನಿಷ್ಕನ ಕಾಲ
ಮಹಾಯಾನ ಪಂಥವನ್ನು ಅನುಸರಿಸುವ ಜನರೇ ಬಹಳ. ಇದಕ್ಕೂ ಪೂರ್ವ
ಕಟ್ಟಿಸಲ್ಪಟ್ಟ ಸಾಂಚಿ ಮತ್ತು ಭಾರಹುತದ ಸ್ತೂಪಗಳಲ್ಲಿ ಬುದ್ಧನ ಮೂರ್ತಿಗಳ
ಅವನ ಪಾದದ ಚಿನ್ಹಗಳು ಇಲ್ಲವೆ ಬರೇ ಪೀಠಗಳಿರುವವು. ಹೀನಯಾನ ಪಂಥವ
ಅನುಸರಿಸುವವರು ಬುದ್ಧನ ಮೂರ್ತಿಗಳನ್ನು ಪೂಜಿಸುತ್ತಿದ್ದಿಲ್ಲ. ಆವರೆ ಕನಿಷ್ಕ
ಕಾಲಕ್ಕೆ ಹಿಂದುಪದ್ಧತಿಯಂತೆ ಬುದ್ಧನ ಮೂರ್ತಿಗಳನ್ನು ಪೂಜಿಸುವ ರೂಢಿ
ಪ್ರಚಾರದಲ್ಲಿ ಬಂತು. ಆದದರಿಂದ ಎಲ್ಲಕಡೆಗೆ ಕಂಡುಬರುವ ಬುದ್ಧನ ಮೂರ್ತಿಗ
ಕನಿಷ್ಕನ ಕಾಲದಲ್ಲಿ ಅಥವಾ ತದನಂತರದಲ್ಲಿ ಮಾಡಲ್ಪಟ್ಟವು.

೪. **ವಾಙ್ಮಯ ಮತ್ತು ಕಲೆ:**—ಕನಿಷ್ಕನ ಕಾಲದಲ್ಲಿ ನಾಗಾರ್ಜುನ,
ಘೋಷ, ವಸುಮಿತ್ರರೆಂಬವರು ಅನೇಕ ಬೌದ್ಧಗ್ರಂಥಗಳನ್ನು ಬರೆದರು. ಅವರಲ್ಲಿ
ಘೋಷನು ಕವಿಯೂ, ಗವಾಯಿಯೂ, ವಿದ್ವಾಂಸನೂ ಬೌದ್ಧ ಸನ್ಯಾಸಿಯೂ
ದ್ದನು. ಅಯುರ್ವೇದದಲ್ಲಿ ನಿಷ್ಣಾತನೆಂದು ಪ್ರಖ್ಯಾತನಾದ ಚರಕನು ಕನಿಷ್ಕನ ರಾಜ
ವ್ಯನಾಗಿದ್ದನು. ಇವನ ಕಾಲದಲ್ಲಿ ಶಿಲ್ಪಕಲೆಗೂ ಒಳ್ಳೇ ಉತ್ತೇಜನ ದೊರೆಯಿ
ಪೇಶಾವರದಲ್ಲಿ ಬುದ್ಧನ ಅವಶೇಷದ ಮೇಲೆ ಕಟ್ಟಿದ ಕಟ್ಟಿಗೆಯ ಗೋಪುರವು ೪
ಫೂಟು ಎತ್ತರವಾಗಿತ್ತು. ಸುಂದರವಾದ ಕಟ್ಟಡಗಳು ಇವನ ಕಾಲಕ್ಕೂ ಇವನ ವಂ
ಅರಸರ ಕಾಲಕ್ಕೂ ಕಟ್ಟಲ್ಪಟ್ಟವು. ಈ ಕಾಲದ ಶಿಲ್ಪ ಪದ್ಧತಿಗೆ ಗಾಂಧಾರವೆಂಬ ಹೆಸ
ಈ ಪದ್ಧತಿಯಲ್ಲಿ ಗ್ರೀಕ ಮತ್ತು ಬೌದ್ಧ ಕಲೆಗಳ ಸಮ್ಮಿಶ್ರಣವು ಕಂಡು ಬರುವ

೫. **ಹೂವಿಷ್ಕ:**—ಕನಿಷ್ಕನು ಇ. ಸ. ೧೪೨ರಲ್ಲಿ ತೀರಿಕೊಂಡ ನಂತರ ಆ
ಮಗನಾದ ಹೂವಿಷ್ಕನು ಪಟ್ಟಕ್ಕೆ ಕೂತನು. ಇವನು ತಂದೆಯ ಕಾಲಕ್ಕೆ ಅವನ ರಾ
ದಲ್ಲಿ ಸುಬೇದಾರನಾಗಿದ್ದನು. ಕನಿಷ್ಕನಂತೆ ಹೂವಿಷ್ಕನು ಕಟ್ಟಡಗಳನ್ನು ಕಟ್ಟಿಸು
ರಲ್ಲಿಯೂ ಶಿಲ್ಪಕಲೆಗೆ ಉತ್ತೇಜನವನ್ನು ಕೊಡುವದರಲ್ಲಿಯೂ ಪ್ರಸಿದ್ಧನಾದನು. ಮಥು
ಮತ್ತು ಗುಂಟೂರ ಜಿಲ್ಲೆಯಲ್ಲಿ ಕೃಷ್ಣಾನದಿಯ ದಂಡೆಗಿದ್ದ ಅಮರಾವತಿಗಳಲ್ಲಿ ಬೌ
ಮಠಗಳನ್ನು ಇವನೇ ಕಟ್ಟಿಸಿದನು. ಇವನ ಕಾಲಕ್ಕೆ ರೋಮದಲ್ಲಿ ಮಾರ್ಕಸ ಅರೆ
ಯಸ ಎಂಬ ರಾಜರ್ಷಿಯು ರಾಜ್ಯವಾಳುತ್ತಿದ್ದನು.

ಹೂವಿಷ್ಕನ ತರುವಾಯ ವಾಸುದೇವನು ೩೦ ವರ್ಷ ರಾಜ್ಯವಾಳಿದನು. ಈತ
ಬೌದ್ಧಧರ್ಮದ ಹಂಬಲವನ್ನು ಬಿಟ್ಟು ಹಿಂದುಧರ್ಮದ ಅಭಿಮಾನಿಯಾಗಿದ್ದ
ತೋರುತ್ತದೆ. ಇವನ ನಂತರ ಕುಶಾನ ಅಥವಾ ಶಕವಂಶದ ಅಳಿಗಾಲವು ಒದಗಿ
ವಾಸುದೇವನ ಕಾಲದ ನಾಣ್ಯಗಳ ಮೇಲೆ ಶಿವ ಮತ್ತು ನಂದಿಗಳ ಚಿತ್ರವಿರುವ

ಕಾಲದಲ್ಲಿ ಹಿಂದೂ ಧರ್ಮದ ಪರಿಣಾಮವು ಗ್ರೀಕ ಮತ್ತು ಪಾರ್ಥಿಯಾದ ಧಾರ್ಮಿಕ ವಿಚಾರಗಳ ಮೇಲೆ ಆದಂತೆ ಕಂಡು ಬರುತ್ತದೆ. ಸಂಸ್ಕೃತ ಭಾಷೆಯ ಪುನರುಜ್ಜೀವನವು ಈ ಕಾಲದಲ್ಲಿ ಆಯಿತು.. ಮತ್ತು ಅನೇಕ ಕವಿಗಳು ಆಗಿ ಹೋದರು. ಅವರಲ್ಲಿ ಭಾಸ, ಹಲ, ಶೂದ್ರಕರು ಅನೇಕ ಕಾವ್ಯ ನಾಟಕಗಳನ್ನು ಬರೆದರು. ಮನುವು ಧರ್ಮಶಾಸ್ತ್ರವನ್ನು ಇದೇ ಕಾಲದಲ್ಲಿ ಬರೆದನು.

೬. **ಪ್ರಾಚೀನ ತಮಿಳ ರಾಜ್ಯಗಳು:**—ಮೆಗ್ಯಾಸ್ಥಿನೀಸನು ಪಾಂಡ್ಯರಾಜ್ಯದ ಉಲ್ಲೇಖವನ್ನು ಮಾಡಿರುವನು.ಅಶೋಕನ ಶಾಸನಗಳಲ್ಲಿ ಪಾಂಡ್ಯ,ಚೇರ ಅಥವಾ ಕೇರಲ ಮತ್ತು ಚೋಳ ರಾಜ್ಯಗಳ ಉಲ್ಲೇಖವಿರುವದು. ಈ ರಾಜ್ಯಗಳಲ್ಲಿಯ ಜನರು ಪರದೇಶದವರಕೂಡ ವ್ಯಾಪಾರಮಾಡಿ ಶ್ರೀಮಂತರಾಗಿದ್ದರು. ಮತ್ತು ಅಲ್ಲಿ ಅನೇಕ ಬಂದರಗಳಿದ್ದವು. ಪಾಂಡ್ಯ ರಾಜ್ಯದ ರಾಜಧಾನಿಯಾದ ಮದುರೈಯಲ್ಲಿ ಅನೇಕ ತಮಿಳ ಕವಿಗಳೂ ಗ್ರಂಥಕಾರರೂ ಆಗಿ ಹೋದರು. ಅವರ ಗ್ರಂಥಗಳಲ್ಲಿ ಕುರಲ ಎಂಬದು ಬಹು ಪ್ರಸಿದ್ಧವಿರುವದು. ಅದರಲ್ಲಿ ಮಹತ್ವದ ನೈತಿಕವಿಚಾರಗಳಿರುವವು.

ಇ ಸ ೧೧೦೦ ಸುಮಾರಕ್ಕೆ ಚೋಳ ವಂಶದ ಕರಿಕಾಲ ಎಂಬ ಅರಸನು ಪುಕಾರ ಎಂಬ ಬಂದರವನ್ನು ಕಾವೇರಿ ಮುಖದಲ್ಲಿ ಕಟ್ಟಿಸಿದನು. ಮತ್ತು ಕಾವೇರಿ ನದಿಗೆ ಒಡ್ಡು ಹಾಕಿ ೧೦೦ ಮೈಲುಗಳ ವರೆಗೆ ಕಾಲುವೆಗಳನ್ನು ಮಾಡಿಸಿದನು. ಕರಿಕಾಲನ ಮೊಮ್ಮಗನ ಕಾಲಕ್ಕೆ ಒಬ್ಬ ಪಾಂಡ್ಯ ಅರಸನು ಪ್ರಬಲನಾಗಿದ್ದನು. ಇದೇ ಕಾಲಕ್ಕೆ ಸಿಂಹಳ ದ್ವೀಪದಲ್ಲಿ ಗಜಬಾಹು ಎಂಬ ಅರಸನು ಆಳುತ್ತಿದ್ದನು. ಈತನು ೨ನೇ ಶತಕದ ಕಡೆಯ ೨೫ ವರ್ಷಗಳಲ್ಲಿ ಆಳಿದಂತೆ ಗೊತ್ತಾಗುತ್ತದೆ.

ಈ ಕಾಲದ ಮುಖ್ಯ ಸಂಗತಿಗಳು.

ಕ್ರಿ. ಪೂ.

೨೩೨. ಅಶೋಕನ ಮರಣ.

೧೪೦–೧೨೦ ಕಾಬೂಲದಲ್ಲಿ ಮಿನಾಂದರ (ಮಿಲ್ಲಿಂದ)ನು ಆಳಿದ್ದು.

೫೮– ೫೭ ವಿಕ್ರಮ ಶಕದ ಪ್ರಾರಂಭ ?

ಇ. ಸ.

೭೮. ಶಾಲಿವಾಹನ ಶಕದ ಪ್ರಾರಂಭ?

೧೫೦. ಕನಿಷ್ಕನು ಪಟ್ಟಕ್ಕೆ ಕೂತದ್ದು

೧೫೩. ಸಾರನಾಥದಲ್ಲಿಯ ಶಾಸನವನ್ನು ಬರೆಸಿದ್ದು

೧೬೨. ಹೂವಿಷ್ಕನು ಪಟ್ಟಕ್ಕೆ ಕೂತದ್ದು

೧೮೨. ವಾಸುದೇವನು ,, ,,

೧೯೪–೨೧೮ ವಾಸುದೇವನ ಶಾಸನಗಳು

೨೨೦. ವಾಸುದೇವನ ಮರಣ

೧೪ನೇ ಅಧ್ಯಾಯ

ಗುಪ್ತರು.

೧. **ಉದಯ:**— ಹಿಂದುಸ್ಥಾನದ ಇತಿಹಾಸದಲ್ಲಿ ಗುಪ್ತ ಅರಸರ ಕಾ
ದಿಂದ ನಿಶ್ಚಿತವಾದ ಕಾಲಮಾನವನ್ನು ಹೇಳಬಹುದು. ಗುಪ್ತ ಅರಸರು ಇ. ಸ. ೩೧
ರಿಂದ ೬೪೭ ರ ವರೆಗೆ ಆಳಿದರು. ಬುದ್ಧನ ಕಾಲಕ್ಕೆ ವೈಶಾಲಿಯಲ್ಲಿ ಆಳುತ್ತಿದ್ದ ಲಿಚ್ಛ
ವಂಶದ ಅರಸರು ಪಾಟಲಿಪುತ್ರವನ್ನು ಗೆದ್ದುಕೊಂಡು ಕುಶಾನ (ಶಕ) ವಂಶದ ಅರ
ಮಾಂಡಲಿಕರಾಗಿ ಆಳುತ್ತಿದ್ದರು. ೪ನೇ ಶತಕದ ಆರಂಭದಲ್ಲಿ ಲಿಚ್ಛವಿ ಮನೆತ
ಕುಮಾರದೇವಿ ಎಂಬ ರಾಜಕುವರಿಯನ್ನು ಚಂದ್ರಗುಪ್ತನೆಂಬ ಮಗಧದೇಶದ ಅರಸ
ಕೊಟ್ಟಿದ್ದರು. ಅವನು ಲಿಚ್ಛವಿ ಜನರ ಸಹಾಯದಿಂದ ಪ್ರಯಾಗದ ಕಡೆಗೆ ಅಯೋಧ್
ಪ್ರಾಂತವನ್ನೆಲ್ಲ ಗೆದ್ದುಕೊಂಡು ತನ್ನ ರಾಜ್ಯಕ್ಕೆ ಕೂಡಿಸಿದನು. ಇವನೇ ಗುಪ್ತವಂ
ಮೊದಲನೇ ಅರಸನಾದನು.

೨. **ಚಂದ್ರಗುಪ್ತ:**— ಇವನು ಗುಪ್ತ ಶಕವನ್ನು ಪ್ರಾರಂಭಮಾಡಿ ತ
ಮತ್ತು ತನ್ನ ರಾಣಿಯ ಮೂರ್ತಿಗಳಿಪ್ಪ ಬಂಗಾರದ ನಾಣ್ಯಗಳನ್ನು ಮುದ್ರಿಸಿದನು.
ಇವನು ಇ. ಸ. ೩೧೦ ರ ಫೇಬ್ರುವರಿ ೨೬ನೇ ತಾರೀಖಿನ ದಿವಸ ಪಟ್ಟಕ್ಕೆ ಕೂತನು.
೧೦ ವರ್ಷ ರಾಜ್ಯವಾಳಿ ೩೨೦ ರಲ್ಲಿ ತೀರಿಕೊಂಡನು.

೩. **ಸಮುದ್ರಗುಪ್ತ:**— ಚಂದ್ರಗುಪ್ತನ ತರುವಾಯ ಅವನ ಮಗನಾದ
ಸಮುದ್ರಗುಪ್ತನು ಪಟ್ಟಕ್ಕೆ ಕೂತನು. (೩೨೦). ಇವನು ಸರಾಸರಿ ೫೦ ವರ್ಷ ರಾಜ್ಯ
ವಾಳಿದನು. ಇವನ ಆಳಿಕೆಯ ವೃತ್ತಾಂತವು ಅಶೋಕನ ಸ್ತಂಭಶಾಸನದ ಮೇಲೆ
ಸಂಸ್ಕೃತದಲ್ಲಿ ಕೊರಿಸಿದ ಕವಿತೆಗಳಿಂದ ಗೊತ್ತಾಗಿದೆ. ಇವನು ಬಹಳ ಶೂರನೂ
ವಿದ್ವಾಂಸನೂ ಕವಿಗಳಿಗೂ ಕಲಾಭಿಜ್ಞರಿಗೂ ಆಶ್ರಯದಾತನೂ ಆಗಿದ್ದನು ಅರಂಭದ
೩ ವರ್ಷಗಳಲ್ಲಿ ಇವನು ಹಿಂದುಸ್ಥಾನದ ಬಹುತರ ಎಲ್ಲ ಭಾಗವನ್ನು ಮುಖ್ಯವಾಗಿ
ದಕ್ಷಿಣದ ರಾಜ್ಯವನ್ನೂ ಅಲ್ಲಿಯ ಅನೇಕ ಕಾಡುಜನರನ್ನೂ ಗೆದ್ದನು. ಮೊದಲು ತನ್ನ
ರಾಜ್ಯದ ಸುತ್ತಲೂ ಗಂಗಾನದಿಯು ದಂಡೆಗಿದ್ದ ಪ್ರದೇಶವನ್ನು ವಶಮಾಡಿಕೊಂಡ
ಚಂಬಳ ನದಿಯವರೆಗೆ ತನ್ನ ರಾಜ್ಯದ ವಿಸ್ತಾರವನ್ನು ಬೆಳಸಿದನು. ನಂತರ ಫೋಟಾ
ನಾಗಪುರದ ಅಡವಿಯೊಳಗಿಂದ ಹಾದು ಈಗಿನ ಮಧ್ಯಪ್ರಾಂತದೊಳಗಿನ ಗೊಂಡನಂ
ಕಾಡುಜನರನ್ನು ನೋಲಿಸಿ ವೆಂಗಿ (ಕೃಷ್ಣಾನದಿಯಸುತ್ತಲು ಇದ್ದ ಪ್ರದೇಶ)ಪ್ರದೇಶಕ್ಕೆ
ಹೋದನು. ಅಲ್ಲಿಯ ಪಲ್ಲವ ಅರಸರನ್ನು ಗೆದ್ದು ಕಂಚಿ ಪಾಲಘಾಟಗಳ ಮೇಲಿಂ
ಹಾದು ಖಾನದೇಶವನ್ನೂ ಸೌರಾಷ್ಟ್ರ (ಗುಜರಾಥ) ದ ಸರಹದ್ದಿನ ಭಾಗವನ್ನೂ
ಸುಲಿಗು ಪಾಟಲಿಪುತ್ರಕ್ಕೆ ಬಂದನು. ದಕ್ಷಿಣವಲ್ಲಿ ರಾಜ್ಯವನ್ನು ಗೆದ್ದುಕೊಳ್ಳು

ಚಜ್ಞೈಯು ಸಮುದ್ರಗುಪ್ತನಿಗೆ ಇದ್ದಂತೆ ತೋರಲಿಲ್ಲ. ಆದರೆ ಅಲ್ಲಿಯು ಅರಸರನ್ನು ಗೊದ್ದುಕೊಳ್ಳುವದೇ ಈ ದಂಡಿನ ಮುಖ್ಯ ಉದ್ದೇಶವಾಗಿತ್ತು. ಯಾಕೆಂದರೆ ದಕ್ಷಿಣ ನಿಂದ ತಿರುಗಿ ಬಂದ ಮೇಲೆ ಅವನು ಅಶ್ವಮೇಧಯಜ್ಞವನ್ನು ಮಾಡಿದನು. ಮತ್ತು ಯಜ್ಞದ ನೆನಪಿಗಾಗಿ ಬಂಗಾರದ ಪದಕಗಳನ್ನು ಮುದ್ರಿಸಿದನು. ಆ ಪದಕಗಳ ಮೇಲೆ ಸುದುರಿಯ ಚಿತ್ರವಿರುವದು. ಹೀಗೆ ಅವನು ಮೌರ್ಯ ಚಂದ್ರಗುಪ್ತ ಮತ್ತು ಅಶೋ ಕರಂತೆ ಹಿಂದುಸ್ತಾನದ ಸಾರ್ವಭೌಮ ಅರಸನಾದನು. ೧೪ನೇ ಶತಕದ ವರೆಗೆ ಉತ್ತ ರದ ಅರಸರು ಸಮುದ್ರಗುಪ್ತನಂತೆ ದಕ್ಷಿಣದಲ್ಲಿಲ್ಲ ದಂಡೆತ್ತಿ ಹೋದ ಉದಾಹರಣೆಗ ಳಿಲ್ಲ. ಮುಂದೆ ಮಲಿಕಕಾಫೂರನು ಮಾತ್ರ ಇದೇ ಪ್ರಕಾರ ದಂಡೆತ್ತಿಹೋದನು.

೪. **ಸಮುದ್ರಗುಪ್ತನರಾಜ್ಯ**:—ಸಮುದ್ರಗುಪ್ತನ ರಾಜ್ಯವು ಉತ್ತರದಲ್ಲಿ ಹಿಮಾಲಯದಿಂದ ನರ್ಮದೆಯ ವರೆಗೆ, ಪಶ್ಚಿಮದಲ್ಲಿ ಚಂಬಳದಿಂದ ಬ್ರಹ್ಮಪುತ್ರಾ ನದಿಯ ವರೆಗೆ ಹಬ್ಬಿತ್ತು. ಕಾಶ್ಮೀರ, ಪಂಜಾಬದ ವಾಯವ್ಯಭಾಗ, ಸಿಂಧುಪ್ರಾಂತ ಇವು ಸ್ವತಂತ್ರವಾಗಿದ್ದವು. ಗುಪ್ತರಾಜ್ಯದೊಳಗೆ ಸಮಾವೇಶವಾಗಿದ್ದಿಲ್ಲ. ವಂಗ (ಬಂಗಾಲ), ಕಾಮರೂಪ (ಅಸಾಮ) ಸಮತಟ (ಭಾಗೀರಥೀ ಮುಖದ ಪ್ರದೇಶ) ಇವು ಗುಪ್ತರ ಮಾಂಡಲೀಕ ಅರಸರಿಗೆ ಅಂಕಿತವಾಗಿದ್ದವು. ಇವರ ರಾಜ್ಯದ ಹೊರಗೆ ಇದ್ದ ಕೆಲ ಅರಸರೂ ಸಿಂಹಳದ್ವೀಪದ ಅರಸರೂ ಗುಪ್ತರ ಮಿತ್ರರಾಗಿದ್ದರು. ಸಿಂಹಳದ ಮೇಘವರ್ಮನು ಸಮುದ್ರಗುಪ್ತನ ಕಡೆಗೆ ಇ ಸ. ೩೬೦ರಲ್ಲಿ ಕಾಣಿಕೆಗಳೊಂದಿಗೆ ತನ್ನ ವಕೀಲರನ್ನು ಕಳುಹಿಸಿಕೊಟ್ಟು ಬುದ್ಧಗಯಾದಲ್ಲಿ ದೊಡ್ಡ ಮಠವನ್ನು ಕಟ್ಟಿಸ ಲಿಕ್ಕೆ ಅಪ್ಪಣೆ ಪಡಕೊಂಡನು.

೫. **ಗುಣಗಳು**: —ಸಮುದ್ರಗುಪ್ತನು ವಿಲಕ್ಷಣವಾದ ಬುದ್ಧಿವಂತನೂ ವೀರನೂ ಆಗಿದ್ದಲ್ಲದೆ ಅತ್ಯುತ್ತಮ ಕವಿಯೂ ಇದ್ದನು. ಸಂಗೀತ ಕಲೆಯಲ್ಲಿ ಅವನಿಗೆ ವಿಶೇಷ ಅಭಿರುಚಿ ಇತ್ತೆಂಬದು ಅವನ ನಾಣ್ಯಗಳಿಂದ ಗೊತ್ತಾಗುತ್ತದೆ. ಆ ನಾಣ್ಯದ ಮೇಲೆ ವೀಣೆಯನ್ನು ಬಾರಿಸುತ್ತ ಕುಳಿತ ಸಮುದ್ರಗುಪ್ತನ ಮೂರ್ತಿಯು ಮುದ್ರಿತವಾ ಗಿರುವದು. ಇವನು ತನ್ನ ವಿಶ್ರಾಂತಿಯ ಕಾಲವನ್ನು ವಿದ್ವಾಂಸರ ಸಹವಾಸದಲ್ಲಿ ಕಳೆ ಯುವ ಪ್ರೀತಿಯುಳ್ಳವನಾಗಿದ್ದನು. ಇವನು ಬ್ರಾಹ್ಮಣ ಧರ್ಮದ ಅಭಿಮಾನಿಯಾಗಿ ದ್ದರೂ ವಸುಬಂಧುವೆಂಬ ಬೌದ್ಧ ಗ್ರಂಥಕಾರನ ಸ್ನೇಹವನ್ನು ಮಾಡಿದ್ದನು. ಇವನು ಎಂದು ತೀರಿಕೊಂಡನೆಂಬದು ನಿಶ್ಚಿತವಾಗಿ ಗೊತ್ತಾಗಿಲ್ಲ. ಆದರೆ ಸಮುದ್ರಗುಪ್ತನು ಅಖಂಡವಾಗಿ ೫೦ ವರ್ಷಗಳ ವರೆಗೆ ಸುಖದಿಂದ ರಾಜ್ಯವಾಳಿ ಮುಪ್ಪಿನವನಾಗಿ ತೀರಿ ಕೊಂಡನೆಂದು ಹೇಳಬಹುದು.

೬. **೨ನೇ ಚಂದ್ರಗುಪ್ತ (ವಿಕ್ರಮಾದಿತ್ಯ)**:—(೩೮೦—೪೧೫) ಸುಮಾರು ೩೮೦ ಸ. ೩೮೦ರಲ್ಲಿ ಸಮುದ್ರಗುಪ್ತನ ಮಕ್ಕಳಲ್ಲಿ ಅರಸನಾಗಲಿಕ್ಕೆ ಯೋಗ್ಯನಾದವನನ್ನು

ಳರಿಸಿ ಪಟ್ಟದ ಮೇಲೆ ಕುಳ್ಳಿರಿಸಿದರು. ಅವನು ತನ್ನ ಅಜ್ಜನ ಹೆಸರನ್ನೇ ಇಟ್ಟುಕೊಂ
ಸೇ ಚಂದ್ರಗುಪ್ತನಾದನು. ನಂತರ ಹಿಂದೆ ಕ್ರಿ. ಪೂ. ೫೮–೫೭ರಲ್ಲಿ ಶಕರನ
ಓಡಿಸಿ ವಿಕ್ರಮಸಂವತ್ ಎಂಬ ಹೊಸ ಯುಗವನ್ನು ಪ್ರಾರಂಭಿಸಿದ ವಿಕ್ರಮಾದಿತ್ಯ
ಬಿರುದನ್ನು ಧರಿಸಿದನು. ಹಿಂದೆ ಆಗಿ ಹೋದ ವಿಕ್ರಮನ ವಿಷಯಕ್ಕೆ ದಂತಕಥೆಂ
ಹೊರತಾಗಿ ಐತಿಹಾಸಿಕ ಸಂಗತಿಗಳೇನೂ ದೊರೆತಿಲ್ಲ. ಪಟ್ಟಕ್ಕೆ ಬಂದ ಮೇಲೆ ಚಂ
ಗುಪ್ತನು ಶಕರು ಆಳುತ್ತಿದ್ದ ಮಾಳವ, ಗುಜರಾತ, ಸೌರಾಷ್ಟ್ರ ರಾಜ್ಯಗಳನ್ನು ಇ.
೩೯೫ ರಲ್ಲಿ—೪೦೧ ರೊಳಗೆ ಗೆದ್ದುಕೊಂಡನು. ಅಲ್ಲಿಯ ಅರಸರಿಗೆ ಸತ್ರಪರೆಂಬ ಗ್ರೀ
ಬಿರುದು ಇತ್ತು. ಕಡೆಯ ಸತ್ರಪನಾದ ರುದ್ರಸಿಂಹನೆಂಬವನು ಈ ಯುದ್ಧದ
ಕೊಲ್ಲಲ್ಪಟ್ಟನು.

೭. ಫಾಹಿಯಾನನೆಂಬ ಚೀನದ ಪ್ರವಾಸಿಯು:—ಫಾಹಿಯಾನ
ಹಿಂದುಸ್ತಾನದ ಪುಣ್ಯಭೂಮಿಗೆ ಯಾತ್ರೆಯ ಸಲುವಾಗಿ ಚೀನದಿಂದ ಹೊರಟು ಇ.
೪೦೯ ರಲ್ಲಿ ಇಲ್ಲಿಗೆ ಬಂದನು. ಇವನು ೪೦೯ ರಿಂದ ೪೧೦ ರ ವರೆಗೆ ಇಲ್ಲಿದ್ದು ಇಲ್ಲಿಂ
ಅರಸರ, ಜನರ ಮತ್ತು ದೇಶದ ಸ್ಥಿತಿಯ ವಿಷಯಕ್ಕೆ ಕೆಲವು ಸಂಗತಿಗಳನ್ನು ಬರೆದಿ
ರುವನು. ಇವನು ಮುಖ್ಯವಾಗಿ ಬೌದ್ಧಧರ್ಮದ ಮೂಲ ಗ್ರಂಥವಾದ ವಿನಯಪಿ
ಕದ ಶುದ್ಧ ಪ್ರತಿಯನ್ನು ದೊರಕಿಸಲಿಕ್ಕೆ ಬಂದದ್ದರಿಂದ ಧಾರ್ಮಿಕ ಸಂಸ್ಥೆಗಳನ
ಹೆಚ್ಚು ಸೂಕ್ಷ್ಮವಾಗಿ ಅವಲೋಕಿಸಿ ಅವುಗಳ ವಿಷಯಕ್ಕೆ ಸಾವ್ಯಂತ ವರ್ಣನೆಯನ
ಬರೆದಿದ್ದಾನೆ ಇವನು ಚಂದ್ರಗುಪ್ತನ ರಾಜ್ಯದಲ್ಲಿ ೬ ವರ್ಷ ಇದ್ದನು. ಅವ
ಲೇಖನ ಆಧಾರದಿಂದ ಮಗಧರಾಜ್ಯದ ವರ್ಣನೆಯನ್ನು ಕೆಳಗೆ ಕೊಟ್ಟಿದೆ.

೮. ಮಗಧ ದೇಶದ ಸ್ಥಿತಿ:—ಮಗಧದ ಪಟ್ಟಣಗಳು ದೊಡ್ಡವಿದ್ದವ
ಜನರು ಶ್ರೀಮಂತರೂ ಉದಾರರೂ ಆಗಿದ್ದರು. ದೇಶದಲ್ಲಿ ಅನೇಕ ಧರ್ಮಶಾಲೆಗಳ
ಅನ್ನಛತ್ರಗಳೂ ಇದ್ದವು. ಪಾಟಲಿಪುತ್ರದಲ್ಲಿ ಒಂದು ಧರ್ಮಾರ್ಥ ರುಗ್ಣಾಲಯವಿದ
ಅದು ಜನರ ಆಶ್ರಯದಿಂದಲೇ ನಡೆಸಲ್ಪಟ್ಟಿತ್ತು. ಜನರು ಸಾಮಾನ್ಯವಾಗಿ ಸುಶಿಕ್ಷಿ
ರಿದ್ದರು. ಅಲ್ಲಿ ಒಂದು ಹೀನಯಾನ ಮತ್ತೊಂದು ಮಹಾಯಾನ ಪಂಥದ ೨ ಬೌ
ಮತಗಳಿದ್ದು ವಿಖ್ಯಾತರಾದ ಪಂಡಿತರು ಧರ್ಮತತ್ವಗಳನ್ನು ಉಪದೇಶಿಸುತ್ತಿದ್ದರ
ಅವರ ಉಪದೇಶವನ್ನು ಕೇಳಲಿಕ್ಕೆ ಎಲ್ಲ ಕಡೆಯಿಂದ ಶಿಷ್ಯರು ಬರುತ್ತಿದ್ದರು. ಫಾ
ಯಾನನು ಈ ಮತದಲ್ಲಿ ೩ ವರ್ಷ ಇದ್ದು ಸಂಸ್ಕೃತವನ್ನು ಅಭ್ಯಾಸಮಾಡಿದನ
ಮತ್ತು ಬೌದ್ಧ ಧರ್ಮಗ್ರಂಥಗಳನ್ನು ಪರಿಶೀಲಿಸಿದನು.

೯. ರಾಜ್ಯವ್ಯವಸ್ಥೆ:—ಮಗಧದ ರಾಜ್ಯವ್ಯವಸ್ಥೆಯು ಉತ್ತಮತರದ್ದಾ
ಗಿತ್ತು. ಜನರಿಗೆ ಬಹಳ ಮಟ್ಟಿಗೆ ಸ್ವಾತಂತ್ರ್ಯವಿತ್ತು. ಪರದೇಶದ ಜನರಿಗೆ ಹಿಂದ
ಸ್ತಾನಕ್ಕೆ ಬರಲಿಕ್ಕೂ ಇಲ್ಲಿಂದ ಮತ್ತೆ ತಿರುಗಿ ತಮ್ಮ ದೇಶಕ್ಕೆ ಹೋಗಲಿಕ್ಕೂ ಯಾ

ಪ್ರಕಾರದ ಆತಂಕವಿದ್ದಿಲ್ಲ. ಈಗಿನಂತೆ ಪಾಸುಗಳು ಬೇಕಾಗುತ್ತಿದ್ದಿಲ್ಲ. ಫೌಜದಾರೀ ಗುನ್ಹೆಗಳು ಕಡಿಮೆ. ಅಪರಾಧಿಗಳಿಗೆ ದಂಡದ ಶಿಕ್ಷೆಯನ್ನು ವಿಧಿಸುತ್ತಿದ್ದರು. ಬಂಡು, ರಾಜದ್ರೋಹ ಮುಂತಾದ ಅಪರಾಧಗಳಿಗೆ ಬಲಗೈ ಕಡಿಯುವ ಶಿಕ್ಷೆಯನ್ನು ಕೊಡುತ್ತಿದ್ದರು. ದೇಹಾಂತ ಶಿಕ್ಷೆಯು ಇದ್ದಿಲ್ಲ. ಹೊಲದ ತೆರಿಗೆಯು ರಾಜ್ಯದ ಮುಖ್ಯ ಉತ್ಪನ್ನವು. ಸೈನ್ಯದವರಿಗೂ ಅಧಿಕಾರಿಗಳಿಗೂ ಸಂಬಳ ಕೊಡುತ್ತಿದ್ದರು. ಬೌದ್ಧ ಜನರಲ್ಲಿ ಒಬ್ಬನೂ ಸಹ ಜೀವಂತ ಪ್ರಾಣಿಗಳನ್ನು ಕೊಲ್ಲುತ್ತಿದ್ದಿಲ್ಲ. ಮದ್ಯವನ್ನು ಕುಡಿಯುತ್ತಿದ್ದಿಲ್ಲ. ಬಳ್ಳೊಳ್ಳಿ ಉಳ್ಳಾಗಡ್ಡಿಗಳನ್ನು ತಿನ್ನುತ್ತಿದ್ದಿಲ್ಲ ಹಂದಿ ಕೋಳಿಗಳನ್ನು ಸಾಕುತ್ತಿದ್ದಿಲ್ಲ. ದನಗಳನ್ನು ಮಾರುತ್ತಿದ್ದಿಲ್ಲ. ಚಾಂಡಾಲರು ಊರ ಹೊರಗೆ ಇರುತ್ತಿದ್ದರು. ಊರೊಳಗೆ ಬರುವಾಗ ಅವರು ಕಟ್ಟಿಗೆ ಬಡಿದು ಸಪ್ಪಳ ಮಾಡಬೇಕಾಗುತ್ತಿತ್ತು.

೧೦. **ಕುಮಾರಗುಪ್ತ**:—ಇ. ಸ. ೪೧೫ರಲ್ಲಿ ಚಂದ್ರಗುಪ್ತನು ತೀರಿಕೊಂಡ ಮೇಲೆ ಅವನ ಮಗನಾದ ಕುಮಾರಗುಪ್ತನು ಪಟ್ಟಕ್ಕೆ ಕೂತನು. ಇವನು ೪೦ವರ್ಷ ವೈಭವದಿಂದ ರಾಜ್ಯವಾಳಿ ತನ್ನ ರಾಜ್ಯ ವಿಸ್ತಾರವನ್ನು ಬೆಳಿಸಿದನು. ಮತ್ತು ಸುತ್ತಲಿನ ಪ್ರದೇಶಗಳನ್ನು ಗೆದ್ದುಕೊಂಡಮೇಲೆ ಅಶ್ವಮೇಧಯಜ್ಞವನ್ನು ಮಾಡಿದನು. ಇವನ ವಿಷಯಕ್ಕೆ ಹೆಚ್ಚಿನ ಸಂಗತಿಗಳು ಗೊತ್ತಾಗಿಲ್ಲ. ಇವನ ಆಳಿಕೆಯ ಕಡೆಯ ವರ್ಷಗಳಲ್ಲಿ ಪುಷ್ಯಮಿತ್ರರೆಂಬ ಇರಾಣದ ಜನರು ಇವನ ರಾಜ್ಯದಮೇಲೆ ದಾಳೀಮಾಡಲು ಕುಮಾರಗುಪ್ತನು ಅವರನ್ನು ಸೋಲಿಸಿ ಹಿಂದಕ್ಕೆ ಓಡಿಸಿದನು.

೧೧. **ಸ್ಕಂದಗುಪ್ತ**:—ಇವನು ಪಟ್ಟಕ್ಕೆ ಕೂತಮೇಲೆ ಹೂಣರೆಂಬ ಮಧ್ಯ ಏಶಿಯದ ಕ್ರೂರ ವನಚರರ ತಂಡಗಳು ಹಿಂದುಸ್ತಾನದ ಮೇಲೆ ದಾಳೀಮಾಡಹತ್ತಿದವು. ಸ್ಕಂದಗುಪ್ತನು ಈ ತಂಡಗಳನ್ನು ಸೋಲಿಸಿ ತಿರುಗಿ ಅಟ್ಟಿದನು. ಆದರೆ ಹೊಸ ಹೊಸ ತಂಡಗಳು ಪದೇಪದೇ ದಾಳೀಮಾಡಿದ್ದರಿಂದ ಗುಪ್ತವಂಶದ ಅರಸರ ಪ್ರಾಬಲ್ಯವು ಕಡಿಮೆಯಾಗಿ ಅಳಿಗಾಲವು ಪ್ರಾರಂಭವಾಯಿತು. ಮೊಗಲ ವಂಶದ ಕಡೆಯ ವೈಭವಶಾಲಿಯಾದ ಬಾದಶಹನು ಔರಂಗಜೇಬನಿದ್ದಂತೆ ಗುಪ್ತವಂಶದ ಕಡೆಯ ದೊಡ್ಡ ಅರಸನು ಸ್ಕಂದಗುಪ್ತನಾದನು. ಇವನು ತನ್ನ ಅಜ್ಜನಂತೆ ವಿಕ್ರಮಾದಿತ್ಯನೆಂಬ ಬಿರುದನ್ನು ಧರಿಸಿದ್ದನು.

೧೨. **ಹಿಂದುಧರ್ಮದ ಉದಯಕಾಲವು**:—ಗುಪ್ತ ಅರಸರು ಹಿಂದು ಧರ್ಮವನ್ನು ಪಾಲಿಸುತ್ತಿದ್ದು ವಿಷ್ಣುಪಾಸಕರಾಗಿದ್ದರು. ಆದರೆ ಬೌದ್ಧರಿಗೂ ಜೈನರಿಗೂ ತಮ್ಮ ತಮ್ಮ ಧರ್ಮವನ್ನು ಪಾಲಿಸಲಿಕ್ಕೆ ಪೂರ್ಣ ಸ್ವಾತಂತ್ರ್ಯವಿತ್ತು. ಆದರೆ

ಈ ಕಾಲದಲ್ಲಿ ಇವೆರಡೂ ಧರ್ಮಗಳ ಪ್ರಾಬಲ್ಯವು ಕಡಿಮೆಯಾಗಿ ಬ್ರಾಹ್ಮಣ ಧರ್ಮದ ವರ್ಚಸ್ಸು ಹೆಚ್ಚಿತು. ಆದಕಾರಣ ಸಂಸ್ಕೃತದ ಅಭ್ಯಾಸವು ಹೆಚ್ಚು ರೂಢವಾಯಿತು. ಅತಿ ಪ್ರಾಚೀನ ಸಂಸ್ಕೃತ ಶಿಲಾ ಶಾಸನವು ಮಧುರೆಯ ಹತ್ತಿರ ದೊರೆತದ್ದು ಇ. ಸ. ೧೫೪ನೇ ಇಸವಿಯದು ಆಗಿದೆ. ಇದು ಕನಿಷ್ಕನ ಕಾಲದ್ದೆಂದು ನಿಶ್ಚಿತವಾಗಿದೆ. ಮತ್ತೊಂದು ಗಿರಿನಾರಿನ ಗುಡ್ಡದಮೇಲೆ ದೊರೆತ ಶಿಲಾಶಾಸನದ ಮೇಲೆ ಉತ್ತಮ ಸಂಸ್ಕೃತದಲ್ಲಿ ಸೌರಾಷ್ಟ್ರದ ಸತ್ರಪನಾದ ರುದ್ರದಮನನು ಯುದ್ಧದಲ್ಲಿ ಹೊಂದಿದ ಜಯದ ವರ್ಣನೆಯಿರುವದು.

೧೩. **ವಾಙ್ಮಯ ವೃದ್ಧಿ:**— ಈ ಕಾಲಕ್ಕೆ ಪ್ರಸಿದ್ಧಿಗೆ ಬಂದ ಕಾಲಿದಾಸನು ಸಂಸ್ಕೃತ ಕವಿಗಳಲ್ಲಿ ನಕ್ಷತ್ರದಂತೆ ಹೊಳೆಯುತ್ತಾನೆ. ಆದ್ದರಿಂದ ಇವನಿಗೆ ಸಂಸ್ಕೃತ ಶೇಕ್ಸಪಿಯರನೆಂದೆನ್ನುವರು. ಇವನು ಉಜ್ಜಯನಿಯಲ್ಲಿ ಆಸ್ಥಾನ ಕವಿಯಾಗಿದ್ದನು. ಇವನು ಬರೆದ ಗ್ರಂಥಗಳಲ್ಲ ಶಾಕುಂತಲ ನಾಟಕವು ಜಗಪ್ರಸಿದ್ಧವಾಗಿರುವದು, ಋತುಸಂಹಾರ, ಮೇಘದೂತ, ವಿಕ್ರಮೋರ್ವಶೀಯವೆಂಬ ಕಾವ್ಯನಾಟಕಗಳು ಶನೇ ಚಂದ್ರಗುಪ್ತ (ವಿಕ್ರಮಾದಿತ)ನ ಕಾಲಕ್ಕೆ ಅಂದರೆ ಇ. ಸ. ೪೧೩-೪೫೫ರೊಳಗೆ ಬರೆಯಲ್ಪಟ್ಟವು. ರಘುವಂಶ, ಕುಮಾರಸಂಭವ ಎಂಬ ಮಹಾಕಾವ್ಯಗಳಾದರೂ ಇವನಿಂದಲೇ ರಚಿತವಾಗಿವೆ. ಕಾಲಿದಾಸನ ಹೊರತಾಗಿ ವಿಕ್ರಮಾದಿತ್ಯನ ಸಭೆಯಲ್ಲಿ ಬೇರೆ ಜನ ಪಂಡಿತರಿದ್ದರು. ಅವರಲ್ಲಿ ಅಮರಸಿಂಹನೆಂಬವನು ಭಂಡೋಬದ್ಧವಾದ ಕೋಶವನ್ನು ಬರೆದನು. ಧನ್ವಂತರಿಯು ಮಹಾವೈದ್ಯನೂ, ಕ್ಷಪಣಕ ಮತ್ತು ವರಾಹಮಿಹಿರರೆಂಬವರು ಪ್ರಸಿದ್ಧ ಜ್ಯೋತಿಷಿಗಳೂ ಆಗಿದ್ದರು. ವರರುಚಿಯು ವ್ಯಾಕರಣ ಗ್ರಂಥವನ್ನು ಬರೆದನು. ಘಟಕರ್ಪರನು ಶಿಲ್ಪಕಲೆಯಲ್ಲಿ ನಿಷ್ಣಾತನಿದ್ದನು. ಶಂಕು ಎಂಬವನು ಭೂಮಿತಿಯ ಶಾಸ್ತ್ರದಲ್ಲಿ ನಿಪುಣನು ವೇತಾಳಭಟ್ಟನು ಮಂತ್ರವಿದ್ಯೆಯಲ್ಲಿ ಕುಶಲನಿದ್ದನು. ಈ ೯ ಮಂದಿ ಪಂಡಿತರಿಗೆ ನವರತ್ನಗಳೆಂಬ ಹೆಸರಿತ್ತು. ಪಂಚತಂತ್ರವೆಂಬ ಗ್ರಂಥವಾದರೂ ವಿಕ್ರಮನ ಕಾಲದಲ್ಲಿಯೇ ಬರೆಯಲ್ಪಟ್ಟಿತು.

ಈ ಕಾಲಕ್ಕೆ ಅಥವಾ ಅಪಕ್ಕೂ ಮೊದಲು ಮುದ್ರಾರಾಕ್ಷಸ, ಮೃಚ್ಛಕಟಿಕವೆಂಬ ನಾಟಕಗಳೂ ವಾಯುಪುರಾಣವೂ ಬರೆಯಲ್ಪಟ್ಟವು. ಯಾಜ್ಞವಲ್ಕ್ಯನು ಸ್ಮೃತಿಯನ್ನೂ, ದಂಡಿಯು ದಶಕುಮಾರ ಚರಿತವನ್ನೂ, ವಾಮನ ಮತ್ತು ವಿಜಯಾದಿತ್ಯರು ವ್ಯಾಕರಣವನ್ನೂ, ಭಾರವಿಯು ಕಿರಾತಾರ್ಜುನೀಯವನ್ನೂ, ಪ್ರವರಸೇನನೆಂಬ ಕಾಶ್ಮೀರದ ಅರಸನು ಪ್ರಾಕೃತದಲ್ಲಿ ಸೇತುಕಾವ್ಯವನ್ನೂ, ಭರ್ತೃಹರಿಯು ಶೃಂಗಾರ-ನೀತಿ-ವೈರಾಗ್ಯ ಶತಕಗಳನ್ನೂ ಹೆಚ್ಚುಕಡಿಮೆ ಇದೇ ಕಾಲಕ್ಕೆ ಬರೆದರು.

೧೪. **ಶಾಸ್ತ್ರಗಳು:**— ಈ ಕಾಲಕ್ಕೆ ವೈದ್ಯ, ಜ್ಯೋತಿಷ ಮತ್ತು ಗಣಿತಶಾಸ್ತ್ರಗಳ ಅಭ್ಯಾಸವು ಭರದಿಂದ ನಡೆಯಿತು. ಜ್ಯೋತಿಷಶಾಸ್ತ್ರದ ಸಿದ್ಧಾಂತಗ್ರಂಥಗಳು ಬರೆಯಲ್ಪಟ್ಟವು. ಆರ್ಯಭಟ್ಟ (ಜನ್ಮ ಇ. ಸ. ೪೭೬) ನೆಂಬ ಪ್ರಸಿದ್ಧ ಜ್ಯೋತಿಷಿಯು

ಹಣಗಳ ನಿಜವಾವ ಕಾರಣವನ್ನು ಕಂಡುಹಿಡಿದು ಪೃಥ್ವಿಯು ತನ್ನ ಮೈಸುತ್ತ ತಿರು
ವದನ್ನು ಸ್ಪಷ್ಟವಾಡಿ ತೋರಿಸಿವನು ವರಾಹಮಿಹಿರನು (ಇ. ಸ. ೫೦೫–೮೭)
ಕತ್‌ಸಂಹಿತೆಯೆಂಬ ಜಾತಕ ಗ್ರಂಥವನ್ನು ಬರೆದನು. ಚರಕನು ವೈದ್ಯಶಾಸ್ತ್ರದ
ಬದ್ಧ ಗ್ರಂಥಕಾರನು. ಇವನು ತನ್ನ ಗ್ರಂಥದಲ್ಲಿ–ವನಸ್ಪತಿ, ಖನಿಜಪದಾರ್ಥ ಮತ್ತು
ತುಗಳಿಂದ ಬೇರೆ ಬೇರೆ ಔಷಧಗಳನ್ನು ಹೇಗೆ ಸಿದ್ಧಪಡಿಸಬೇಕೆಂಬುದನ್ನು ಬರೆದಿ
ನು. ಸುಶ್ರುತನೆಂಬವನು ಶಸ್ತ್ರಕ್ರಿಯೆಯ ವಿಷಯವಾಗಿ ಒಂದು ಗ್ರಂಥವನ್ನು
ದಿರುವನು. ಅವರಲ್ಲಿ ೭೦೦ ಬೇರೆ ಬೇರೆ ಪ್ರಕಾರದ ಶಸ್ತ್ರಗಳ ಹೆಸರುಗಳನ್ನೂ ಅವುಗಳ
ರ್ಮಣೆಯನ್ನೂ ಕೊಟ್ಟಿರುತ್ತಾನೆ. ಈ ಕಾಲದಲ್ಲಿ ಹಿಂದುಜನರು ಅಂಕಗಣಿತ ಬೀಜಗ
ಣಿತಗಳಲ್ಲಿ ಗ್ರೀಕರಿಗಿಂತ ಮುಂದುವರಿದಿದ್ದರು. ಬ್ರಹ್ಮಗುಪ್ತನೆಂಬ ಗಣಿತಜ್ಞನು
ಸ. ೫೭೦ರಲ್ಲಿ ಹುಟ್ಟಿದನು.

೧೫. **ಲಲಿತ ಕಲೆಗಳು**:–ಸಮುದ್ರಗುಪ್ತನು ಸಂಗೀತ ಕಲೆಯಲ್ಲಿ ನಿಷ್ಣಾತನಿದ್ದ
ನು ಹಿಂದೆ ಹೇಳಿದೆ. ಆದದರಿಂದ ಅವನ ಕಾಲದಲ್ಲಿ ಸಂಗೀತ ವಿದ್ಯೆಗೆ ಹೆಚ್ಚು ಉತ್ತೇಜ
ನ ದೊರೆತಿರಲಿಕ್ಕೆ ಬೇಕು. ಶಿಲ್ಪಕಲೆ, ಕೆತ್ತಿಗೆಯ ಕೆಲಸ, ಬಣ್ಣಕೊಡುವ ಕಲೆ ಇವು
ಪ್ತರ ಕಾಲದಲ್ಲಿ ಊರ್ಜಿತಸ್ಥಿತಿಯಲ್ಲಿದ್ದವು. ಗುಪ್ತ ಅರಸರು ಕಟ್ಟಿಸಿದ ಅನೇಕ
ಮಂದಿರಗಳನ್ನು ಮುಸಲ್ಮಾನ ಅರಸರು ಕೆಡಿಸಿದ್ದರಿಂದ ಈ ಕಲೆಗಳ ದೃಷ್ಟೋತ್ಪತ್ತಿಯು
ಇನ ಜನರಿಗೆ ಆಗುವಂತಿಲ್ಲ. ಆದರೂ ಸಾರನಾಥದಲ್ಲಿಯ ಗುಡಿಯೂ, ಸಮುದ್ರಗು
ಪ್ತ ಕಾಲಕ್ಕೆ ಮಾಡಿದ ದಿಲ್ಲಿಯ ಲೋಹಸ್ತಂಭವೂ, ನಾಲಂದಾದಲ್ಲಿಯ ಬುದ್ಧನ
ಹೊಟ್ಟು ಎತ್ತರವಾದ ತಾಮ್ರದ ಮೂರ್ತಿಯೂ, ಬರ್ಮಿಂಗಹಮದಲ್ಲಿದ್ದ ೭೫
ಟು ಎತ್ತರವಾದ ಸುಲ್ತಾನಗಂಜದ ಬುದ್ಧನ ಲೋಹದ ಗೊಂಬೆಯೂ ಆ ಕಾಲದ
ಅಭಿವೃದ್ಧಿಯ ಸಾಕ್ಷಿಗಳಾಗಿವೆ. ಅಜಂತಾದಲ್ಲಿ ಸುಂದರವಾಗಿ ಕೊರೆದ ೨ ಗುಡಿ
ಗಳು ಇದೇ ಕಾಲಕ್ಕೆ ಸಿದ್ಧವಾದವು.

೧೬. **ಪರದೇಶಗಳೊಡನೆ ವ್ಯವಹಾರ**—ಇ. ಸ. ೩೫೭ರಿಂದ ೫೭೧
ರವರೆಗೆ ಇಲ್ಲಿಂದ ಚೀನ ದೇಶಕ್ಕೆ ಹತ್ತು ಸಾರಿ ವಕೀಲರೂ ರಾಯಭಾರಿಗಳೂ ಕಳುಹಿ
ಸಿದ್ದರು. ಚೀನದ ಸಂಗಡ ವ್ಯಾಪಾರವು ಬೆಳೆಯಿತು. ಇದಲ್ಲದೆ ಫಾಹಯಾನನಿಂದ
ಪ್ರಭಾವಿತನಾಡಿ ಚೀನದಿಂದ ಬೌದ್ಧಧರ್ಮದ ತತ್ವಗಳನ್ನು ಕಲಿಯಲಿಕ್ಕೆ ಅನೇಕ ಚಿನೀ
ಯಾತ್ರಿಕರು ಇಲ್ಲಿಗೆ ಬಂದರು. ಇಲ್ಲಿಂದ ಅನೇಕ ಧರ್ಮೋಪದೇಶಕರು ಅಲ್ಲಿಗೆ
ಹೋದರು. ಕುಮಾರಜೀವನೆಂಬ ಉಪದೇಶಕನು ಚೀನಕ್ಕೆ ೩೮೫ನೇ ಇಸವಿಯಲ್ಲಿ
ಹೋದನು. ಜಾವಾ, ಬೋರ್ನಿಯೊ ಮೊದಲಾದ ಪೂರ್ವದ ನಡುಗಡ್ಡೆಗಳ ಸಂಗಡ
ಈ ಪ್ರಕಾರದ ವ್ಯವಹಾರವು ನಡದೇ ಇತ್ತು. ಕಾಶ್ಮೀರದ ರಾಜಪುತ್ರನಾದ ಗುಣವ
ರ್ಮನು ಜಾವಾಕ್ಕೆ ಹೋಗಿ ಅಲ್ಲಿಯ ಜನರಿಗೆ ಬೌದ್ಧಧರ್ಮದ ಉಪದೇಶವನ್ನು

ಮಾಡಿದನು. ಅಜಂತಾದಲ್ಲಿದ್ದ ಚಿತ್ರಗಳ ಮೇಲಿಂದ ಚಾಲುಕ್ಯ ಅರಸರ ಕಡೆಗೆ ಇ
ಂದವರು ತಮ್ಮ ರಾಯಭಾರಿಗಳನ್ನು ಕಳಿಸಿದ್ದರೆಂದು ಗೊತ್ತಾಗುತ್ತದೆ. ರೋಮ
ತಕ್ಕವರ್ತಿಗಳ ಕಡೆಗೆ ಹಿಂದುಸ್ತಾನದಿಂದ ೪೩೬, ೪೬೧, ೫೩೦ ಇ. ಗಳಲ್ಲಿ ಶ
ಗುಂಡಳಗಳು ಹೋಗಿದ್ದವು. ಆವದರಿಂದ ಬಂಗಾರದ ನಾಣ್ಯಗಳಿಗೆ ದೀನಾರ ಎಂ
ರೋಮದ ನಾಣ್ಯದ ಹೆಸರು ಗುಂಟಾಗಿತ್ತು. ಇದಲ್ಲದೆ ಪಶ್ಚಿಮದ ಬಂದರಗಳಿಂ
ಈಜಿಪ್ತ ಮತ್ತು ಯುರೋಪಗಳಿಗೆ ವ್ಯಾಪಾರಕ್ಕಾಗಿ ಹಡಗಗಳು ಹೋಗುತ್ತಿದ್ದವು.

೧೭. **ಹೂಣರು**:—ಮಧ್ಯ ಏಸಿಯದಿಂದ ಹೂಣರು ಹಿಂದುಸ್ತಾನ್ತದ ಮೇ
ಸ್ವಾರೀ ಮಾಡಿದ್ದರಿಂದ ಗುಪ್ತ ವಂಶದ ಅಳಿಗಾಲವು ಪ್ರಾರಂಭವಾಯಿತೆಂದು ಹಿಂ
ಹೇಳಿದ್ದೇವೆ. ಇವರು ಇರಾಣ ಕಾಬೂಲಗಳನ್ನು ಗೆದ್ದುಕೊಂಡು ಹಿಂದುಸ್ತಾನ
ಎಂದು ಇಲ್ಲಿ ನೆಲೆಗೊಳ್ಳಹತ್ತಿದರು. ಅವರ ಮುಖ್ಯಸ್ಥನಾದ ತೋರಮಾನನೆಂಬವ
ಇ. ಸ. ೫೦೦ರಲ್ಲಿ ಮಾಳವದ ಕೆಲವು ಭಾಗವನ್ನು ಗೆದ್ದು ಅರಸನಾಗಿ ಆಳಹತ್ತಿದನ
ಅವನ ಮಗನಾದ ಮಿಹಿರಗುಲನು ಪಂಜಾಬದಲ್ಲಿ ಸಾಕಲ (ಸಿಯಾಲಕೋಟ)ವನ್ನ
ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯವಾಳಹತ್ತಿದನು. ಮುಂದೆ ೫೨
ರಲ್ಲಿ ಮಾಳವದ ಹಿಂದು ಅರಸನಾದ ಯಶೋಧರ್ಮನು ಮಗಧದ ಗುಪ್ತ ಅರ
ಸಹಾಯದಿಂದ ಮಿಹಿರಗುಲನನ್ನು ಕಾಶ್ಮೀರಕ್ಕೆ ಓಡಿಸಿದನು.

೧೪. **ವಲ್ಲಭೀ ರಾಜ್ಯವು**:—೫ನೇ ಶತಕದ ಕೊನೆಗೆ ಈಗಿನ ಗುಜರಾತದ
ಮೈತ್ರಕವೆಂಬ ಹೆಸರಿನ ಇರಾಣದ ಜನರು ತಳವೂರಿ ವಲ್ಲಭೀ ಎಂಬ ಪಟ್ಟಣವನ್ನ
ರಾಜಧಾನಿಯನ್ನಾಗಿ ಮಾಡಿಕೊಂಡು ಆಳಹತ್ತಿದರು. ಈ ವಲ್ಲಭೀ ವಂಶದ ಅರಸ
೨೦೦ ವರ್ಷರಾಜ್ಯವಾಳಿದರು. ೬ನೇ ಶತಕದಲ್ಲಿ ಈ ರಾಜ್ಯವು ಒಳ್ಳೇ ಘನ
ಗೇರಿತು. ಬಿಹಾರದ ನಾಲಂದಕ್ಕಿಂತ ಪ್ರಸಿದ್ಧವಾದ ಬೌದ್ಧ ವಿದ್ಯಾಪೀಠವು ವಲ್ಲಭಿಯ
ಲ್ಲಿತ್ತು.

ಹೂಣರ ಕೂಡ ಬಂದ ಗುರ್ಜರರೆಂಬ ಜನರು ಭಡೋಚದಲ್ಲಿಯೂ, ರಜಪೂ
ತಸ್ತಾನದ ಭಿನಮಾಳದಲ್ಲಿಯೂ ರಾಜ್ಯವನ್ನು ಸ್ಥಾಪಿಸಿದರು.

———— ೦ ————

೧೫ ನೇ ಅಧ್ಯಾಯ

ಪ್ರತಾಪಿಯಾದ ಹರ್ಷವರ್ಧನನು

೧. ಹರ್ಷಮಹಾರಾಜನು:— (ಇ. ಸ. ೬೦೬–೬೪೭) ದಿಲ್ಲಿಯ ಉತ್ತರಕ್ಕೆ ಶ್ರೀಕಂಠವೆಂಬ ರಾಜ್ಯದಲ್ಲಿ ಹೂಣರನ್ನು ಓಡಿಸಿದ ಪ್ರಭಾಕರವರ್ಧನನೆಂಬ ಅರಸನು ಆಳುತ್ತಿದ್ದನು. ಅವನ ರಾಜಧಾನಿಯು ಠಾಣೇಶ್ವರ (ಸ್ಥಾನೇಶ್ವರ) ವಾಗಿತ್ತು. ಈ ಅರಸನು ೬೦೫ನೇ ಇಸವಿಯಲ್ಲಿ ತೀರಿಕೊಂಡಮೇಲೆ ಅವನ ಹಿರೀಮಗನು ಪಟ್ಟಕ್ಕೆ ಕೂತನು. ಆದರೆ, ಬಂಗಾಲದ ಅರಸನಾದ ಶಶಾಂಕನೆಂಬವನು ಮೋಸದಿಂದ ಅವನನ್ನು ಕೊಂದದ್ದರಿಂದ ಅವನ ತಮ್ಮನಾದ ಹರ್ಷನು ತನ್ನ ೧೬ನೇ ವರ್ಷದ ವಯಸ್ಸಿನಲ್ಲಿ ಪಟ್ಟಕ್ಕೆ ಕೂತನು. ಇವನು ಶೂರನಿದ್ದದರಿಂದ ೫ ವರ್ಷ ಎಡಬಿಡದೆ ಯುದ್ಧಮಾಡಿ ದಕ್ಷಿಣದ ಹೊರತಾಗಿ ಉಳಿದ ಎಲ್ಲ ದಿಕ್ಕುಗಳಲ್ಲಿದ್ದ ಅರಸರನ್ನು ಗೆದ್ದನು. ಮತ್ತು ತನ್ನ ರಾಜ್ಯದ ವಿಸ್ತಾರವನ್ನು ಬೆಳಸಿದನು. ನಂತರ **ಕನೋಜವನ್ನು** ತನ್ನ ರಾಜಧಾನಿಯನ್ನಾಗಿ ಮಾಡಿ ಅದರ ಸುತ್ತಲೂ ಭದ್ರವಾದ ಕೋಟೆಯನ್ನು ಕಟ್ಟಿಸಿದನು. ಈ ಪಟ್ಟಣವು ೪ಮೈಲು ಉದ್ದ ೧ ಮೈಲು ಅಗಲವಾಗಿತ್ತು. ಅದರಲ್ಲಿ ಅನೇಕ ಸುಂದರವಾದ ಅರಮನೆಗಳೂ ಹರ್ಮ್ಯಗಳೂ ಕಟ್ಟಲ್ಪಟ್ಟವು. ಇದಲ್ಲದೆ ಅಸಂಖ್ಯ ಹಿಂದು ದೇವಾಲಯಗಳೂ ಬೌದ್ಧ ಮಠಗಳೂ ಸ್ಥಾಪಿಸಲ್ಪಟ್ಟವು.

೨. ಚಾಲುಕ್ಯರ ಸಂಗಡ ಯುದ್ಧ:— ಹರ್ಷನು ದಕ್ಷಿಣದಲ್ಲಿ ಆಳುತ್ತಿದ್ದ ಚಾಲುಕ್ಯರ ಸಂಗಡ ಯುದ್ಧಮಾಡುವದಕ್ಕಾಗಿ ೬೨೦ನೇ ಇಸವಿಯಲ್ಲಿ ಹೊರಟನು. ಆಗ ಬದಾಮಿಯಲ್ಲಿ ೨ನೇ ಪುಲಕೇಶಿಯೆಂಬ ಪ್ರಸಿದ್ಧ ಅರಸನು ಆಳುತ್ತಿದ್ದನು. ಈ ಯುದ್ಧದಲ್ಲಿ ಹರ್ಷನು ಪೂರ್ಣವಾಗಿ ಸೋತನು. ಆದದರಿಂದ ನರ್ಮದೆಯ ದಕ್ಷಿಣಕ್ಕೆ ರಾಜ್ಯವಿಸ್ತಾರವನ್ನು ಮಾಡಲಿಕ್ಕೆ ಹರ್ಷನಿಗೆ ಅನುವು ದೊರೆಯಲಿಲ್ಲ.

೩. ರಾಜ್ಯಕಾರಭಾರ:— ಹರ್ಷನು ತನ್ನ ದೇಶದ ರಾಜ್ಯಕಾರಭಾರವನ್ನು ತಾನೇ ನೋಡುವದಕ್ಕಾಗಿ ಮಳೆಗಾಲದ ಹೊರತಾಗಿ ಉಳಿದ ದಿವಸಗಳಲ್ಲಿ ಪ್ರವಾಸ ಮಾಡುತ್ತಿದ್ದನು. ಈ ಕಾಲಕ್ಕೆ ಹುವೇನತ್ಸಾಂ ನೆಂಬ ಚೀನದ ಪ್ರವಾಸಿಯು ಹಿಂದು ಸ್ಥಾನಕ್ಕೆ ಬಂದು ಕನೋಜದಲ್ಲಿದ್ದನು. ಹರ್ಷನ ರಾಜ್ಯದಲ್ಲಿ ಸುವ್ಯವಸ್ಥೆ ಇತ್ತೆಂದು ಅವನು ಅಭಿಪ್ರಾಯ ಪಡುತ್ತಾನೆ. ಹರ್ಷನು ಮಾಡುತ್ತಿದ್ದ ಸಹಿಯ ಪ್ರಕಾರವು ಕೆಳಗೆ ಬರೆದಂತೆ ಅದೆ:—ಸ್ವಹಸ್ತೋ ಮಮ ಮಹಾರಾಜಾಧಿ ರಾಜಶ್ರೀ ಹರ್ಷಸ್ಯ. ಆದರೆ ಗುಪ್ತರ ಕಾಲಕ್ಕೆ ಕಂಡುಬರುತ್ತಿದ್ದ ಸೌಮ್ಯ ಪದ್ಧತಿಯು ಬದಲಾಗಿ ಅಪರಾಧಿಗಳಿಗೆ ಕ್ರೂರ ಶಿಕ್ಷೆಯನ್ನು ವಿಧಿಸುತ್ತಿದ್ದರು. ಕಳ್ಳರ ಹಾವಳಿಯು ಮಾರ್ಗಗಳ ಮೇಲೆ ಆಗಹತ್ತಿತ್ತು. ಶಿಕ್ಷಣವು ಜನರಲ್ಲಿ ಬಹಳ ಪ್ರಸಾರವಾಗಿದ್ದಲ್ಲದೆ ಮಗಧದ ನಾಲಂದಾ ಎಂಬಲ್ಲಿ ಬೌದ್ಧಮತವು ಪ್ರಸಿದ್ಧ ವಿದ್ಯಾಪೀಠವಾಗಿತ್ತು. ಹರ್ಷನು ವಿದ್ವಾಂಸನಿದ್ದು ಪಂಡಿತರಿಗೆ

ಆಶ್ರಯ ಕೊಡುತ್ತಿದ್ದನು. ಅವನು ಸಂಸ್ಕೃತದಲ್ಲಿ ನಾಗಾನಂದವೆಂಬ ನಾಟಕವನ್ನೂ ಅನೇಕ ಕವಿತೆಗಳನ್ನೂ ವ್ಯಾಕರಣವನ್ನೂ ಬರೆದಿರುವನು. ಅವನ ಆಸ್ಥಾನದಲ್ಲಿದ್ದ ಬಾಣ ಕವಿಯು ಹರ್ಷಚರಿತ, ಕಾದಂಬರಿ ಮೊದಲಾದ ಗ್ರಂಥಗಳನ್ನು ಬರೆದಿರುವನು. ಹರ್ಷ ಚರಿತದಲ್ಲಿ ಹರ್ಷನ ವೃತ್ತಾಂತವನ್ನು ಐತಿಹಾಸಿಕ ಕಾದಂಬರಿಯಂತೆ ಬರೆದಿದ್ದಾನೆ.

೪. **ಧಾರ್ಮಿಕ ವಿಚಾರ**:—ಹರ್ಷನು ಬಹಳ ಧಾರ್ಮಿಕವೃತ್ತಿಯವನಾಗಿದ್ದು ದಿನಾಲು ಎಷ್ಟೋ ತಾಸುಗಳನ್ನು ಧ್ಯಾನ ಪೂಜೆಗಳಲ್ಲಿ ಕಳೆಯುತ್ತಿದ್ದನು. ಇವನು ಶೈವೋಪಾಸಕನಾಗಿದ್ದರೂ ಸೂರ್ಯನನ್ನೂ ಬುದ್ಧನನ್ನೂ ಪೂಜಿಸುತ್ತಿದ್ದನು. ತನ್ನ ಆಳಿಕೆಯ ಕಡೆಯ ೭ವರ್ಷಗಳಲ್ಲಿ ಬೌದ್ಧಧರ್ಮದ ತತ್ವಗಳನ್ನು ಅನುಸರಿಸಲಿಕ್ಕೂ ಅಶೋಕನಂತೆ ಬೌದ್ಧಧರ್ಮ ಪ್ರಸಾರಮಾಡಲಿಕ್ಕೂ ಯತ್ನಿಸಿದನು. ಆದದರಿಂದ ತನ್ನ ರಾಜ್ಯದಲ್ಲಿ ಎಲ್ಲರೂ ಅಹಿಂಸೆಯ ವ್ರತವನ್ನು ಪಾಲಿಸಬೇಕೆಂದೂ ಮಾಂಸಾಹಾರವನ್ನು ಮಾಡಕೂಡದೆಂದೂ ಕಟ್ಟಪ್ಪಣೆ ಮಾಡಿದನು. ಇದನ್ನು ವಿರೋಧ ನಡೆದವರಿಗೆ ದೇಹಾಂತ ಶಿಕ್ಷೆಯು ವಿಧಿಸಲ್ಪಡುತ್ತಿತ್ತು.

೫. **ಹುವೆನತ್ಸಾಂಗ** (ಅಥವಾ ಯುವಾನಚ್ವಾಂಗ):— ಈ ಪ್ರಸಿದ್ಧ ಚೀನದ ಪ್ರವಾಸಿಯು ತನ್ನ ವಯಸ್ಸಿನ ೨೯ನೇ ವರ್ಷ ಹಿಂದುಸ್ತಾನಕ್ಕೆ ಹೊರಟನು (ಇ. ಸ ೬೨೯) ಅವನು ಬರೆದ ವೃತ್ತಾಂತವು ಕಾದಂಬರಿಯಷ್ಟು ಮನೋರಂಜಕವಾಗಿರುವದು. ಇವನೂ ಫಾಹಿಯಾನನಂತೆ ಹಿಂದುಸ್ತಾನದ ಪವಿತ್ರ ಭೂಮಿಯಾತ್ರೆಗಾಗಿ ಬಂದಿದ್ದನು. ಇವನು ಇಲ್ಲಿ ೬೩೦ ರಿಂದ ೬೪೩ರ ವರೆಗೆ ೧೩ ವರ್ಷ ಇದ್ದು ಹಿಂದುಸ್ತಾನದಲ್ಲೆಲ್ಲ ಸಂಚಾರ ಮಾಡಿದನು. ಹರ್ಷನ ರಾಜ್ಯದಲ್ಲಿ ೬೩೩ ರಿಂದ ೬೪೩ರ ವರೆಗೆ ೮ ವರ್ಷ ಇದ್ದು ಅಲ್ಲಿಯ ಎಲ್ಲ ಸಂಗತಿಗಳನ್ನು ಸೂಕ್ಷ್ಮವಾಗಿ ಬರೆದಿಟ್ಟಿರುವನು. ಇವನು ೬೪೫ರಲ್ಲಿ ಸ್ವದೇಶಕ್ಕೆ ಹೋದನು. ಚೀನದ ಬಾದರಾಯಣನು ಇವನಿಗೆ ಬಹಳ ಮರ್ಯಾದೆ ಮಾಡಿ ಸ್ಮೃತಿಕಾರನೆಂಬ ಬಿರುದು ಕೊಟ್ಟನು. ನಮ್ಮಲ್ಲಿ ಮನುವಿನ ಹೆಸರು ಸ್ಮರಣೀಯವಾಗಿದ್ದಂತೆ ಹುವೆನತ್ಸಾಂಗನ ಹೆಸರು ಚೀನದಲ್ಲಿ ಉಳಿದದೆ.

ಹುವೆನತ್ಸಾಂಗನ ಸನ್ಮಾನಾರ್ಥವಾಗಿ ಹರ್ಷನು ಕನೋಜ ಮತ್ತು ಪ್ರಯಾಗಗಳಲ್ಲಿ ರಾಜಸಭೆಗಳನ್ನು ಕೂಡಿಸಿದನು. ಈ ಸಭೆಗಳಿಗೆ ೨೦ ಜನ ಮಾಂಡಲಿಕ ಅರಸರೂ, ವಿದ್ವಾಂಸರೂ, ಸಾಧುಗಳೂ ಬಂದಿದ್ದರು. ಹರ್ಷನು ತನ್ನ ದ್ರವ್ಯವನ್ನೆಲ್ಲ ಬ್ರಾಹ್ಮಣ, ಜೈನ, ಬೌದ್ಧ ಸಾಧುಗಳಿಗೂ ಪಂಡಿತರಿಗೂ ದಾನಮಾಡುತ್ತಿದ್ದನು. ಮತ್ತು ಬುದ್ಧ, ಸೂರ್ಯ, ಶಿವ, ಇನರ ಉತ್ಸವ ಪ್ರತಿಮೆಗಳನ್ನು ವೈಭವದಿಂದ ಪಟ್ಟಣದ ಮೆರೆಸುತ್ತಿದ್ದನು. ಹರ್ಷನು ೫ ವರ್ಷಕ್ಕೊಮ್ಮೆ ಸಭೆಗೂಡಿಸಿ ಇದೇ ಪ್ರಕಾರ ತನ್ನಲ್ಲಿದ್ದ ಹಣವನ್ನೆಲ್ಲ ದಾನ ಮಾಡುತ್ತಿದ್ದನು. ೬೪೩ ರಲ್ಲಿ ನೆರೆಯಿಸಿದ ಪ್ರಯಾಗ ಸಭೆಯು ಅವನ ಕಾಲದ ೬ನೇ ಮತ್ತು ಕೊನೆಯ ಸಭೆಯು.

೬. ಈ ಕಾಲದ ಪರಿಸ್ಥಿತಿ

೧. **ಧಾರ್ಮಿಕ ವಿಚಾರ**:—ಇ. ಸ. ೩೦೦ ರಿಂದ ೬೫೦ ರ ವರೆಗಿನ ಕಾಲವನ್ನು ನೀರಿಕ್ಷಿಸಿದರೆ ಬೌದ್ಧಧರ್ಮದ ಪ್ರಾಬಲ್ಯವು ಹಿಂದುಸ್ತಾನದಲ್ಲಿ ಕಡಿಮೆಯಾಗಹತ್ತಿ ಬ್ರಾಹ್ಮಣ ಧರ್ಮದ ವರ್ಚಸ್ಸು ಬೆಳೆಯಹತ್ತಿತು. ಆವವರಿಂದ ಆಗಿನ ಕಾಲದ ಬೌದ್ಧಜನರು ಸಹ ಅನೇಕ ದೇವತೆಗಳಲ್ಲಿ ಭಕ್ತಿಯನ್ನೂ ಮೂರ್ತಿಗಳ ಪೂಜೆಯನ್ನೂ, ಧಾರ್ಮಿಕ ಮೆರವಣಿಗೆಗಳನ್ನೂ ಮಾಡಹತ್ತಿದರು. ಹಿಂದು ಧರ್ಮಿಗಳು ಬೌದ್ಧರಂತೆ ಕಾಡು ಜನರನ್ನು ತಮ್ಮ ಧರ್ಮದಲ್ಲಿ ಸೇರಿಸಿಕೊಂಡದ್ದಲ್ಲದೆ ಅನೇಕ ದೇವಾಲಯಗಳನ್ನು ಕಟ್ಟಿಸಿದರು. ಮತ್ತು ಸಾವಾನ್ಯ ಜನರಿಗೆ ಧರ್ಮದ ತತ್ವಗಳನ್ನು ತಿಳಿಸಲೆಕೆಂದು ದೇಶಭಾಷೆಯ ಉಪಯೋಗವನ್ನು ಮಾಡಹತ್ತಿದರು. ಗಲ ಪುರಾಣಗಳಲ್ಲಿ ಕೆಲವು ಮೊದಲೇ ಬರೆಯಲ್ಪಟ್ಟಿದ್ದರೂ ಬಹಳ ಪುರಾಣಗಳು ಈ ಕಾಲದಲ್ಲಿ ಬರೆಯಲ್ಪಟ್ಟವು. ಮತ್ತು ಹಳೇ ಪುರಾಣಗಳು ತಿದ್ದಿ ಸುಧಾರಿಸಲ್ಪಟ್ಟವು. ಗುಪ್ತ ಅರಸರಲ್ಲಿ ಮೂವರು ಅಶ್ವಮೇಧ ಯಜ್ಞವನ್ನು ಮಾಡಿದ್ದಲ್ಲದೆ ಪರಮಭಾಗವತವೆಂಬ ಹೆಸರಿನಿಂದ ಸಂಬೋಧಿಸಲ್ಪಡುತ್ತಿದ್ದರು. ಪರದೇಶದಿಂದ ಬಂದಂಥ ಇಲ್ಲವೆ ನೀಚ ಯೋನಿಯಲ್ಲಿ ಹುಟ್ಟಿದಂಥ ಜನರು ಅರಸರಾದರೆ ಅವರು ಕ್ಷತ್ರಿಯರೆಂದು ಅವರಿಗೆ ಹಿಂದು ಧರ್ಮದಲ್ಲಿ ಪ್ರವೇಶವಾಗುತ್ತಿದ್ದುದರಿಂದ ಅವರು ಬ್ರಾಹ್ಮಣ ಧರ್ಮದ ಅಭಿಮಾನಿಗಳಾದರು. ಹೀಗೆ ಶಕರು, ಗುಪ್ತರು, ಹೂಣರು ಕ್ಷತ್ರಿಯ ಅರಸರಾದರು. ಫಾಹಿಯಾನನು ಹಿಂದುಸ್ತಾನಕ್ಕೆ ಬಂದಾಗ (೩೯೯–೪೧೧) ಬೌದ್ಧಧರ್ಮದಷ್ಟೇ ಬ್ರಾಹ್ಮಣ ಧರ್ಮವು ಪ್ರಚಾರದಲ್ಲಿತ್ತು. ಆದರೆ ಶ್ರವಸ್ತಿ, ಕಪಿಲವಸ್ತು, ಕುಸಿನಗರ, ಗಯಾ, ಇವು ಬೌದ್ಧರ ಕ್ಷೇತ್ರಗಳಾಗಿದ್ದರೂ ಹಾಳು ಪಟ್ಟಣಗಳಾಗಿದ್ದವು. ಹರ್ಷನು ಬೌದ್ಧಧರ್ಮಕ್ಕೆ ಬಹಳ ಉತ್ತೇಜನಕೊಡುತ್ತಿದ್ದನು. ಹುಯೆನತ್ಸಾಂಗನು ಬಂದಾಗ ಬೌದ್ಧ ಮತಗಳು ಮುರಕಳಿಗೆ ಬಂದಿದ್ದವು.

೨. **ಕಾಯಿದೆ ಮತ್ತು ರಾಜ್ಯವ್ಯವಸ್ಥೆ** :— ಹೀಗೆ ಹಿಂದು ಧರ್ಮದ ಪ್ರಾಬಲ್ಯವಾದದರಿಂದ ಮನುವಿನ ಧರ್ಮಶಾಸ್ತ್ರದಂತೆ ರಾಜ್ಯವ್ಯವಸ್ಥೆಯು ನಡೆದಿತ್ತು. ಜಾತಿನಿರ್ಬಂಧವು ರೂಢಿಯಲ್ಲಿತ್ತು. ಮತ್ತು ಜಾತಿಗಳಂತೆ ಜನರು ಉದ್ಯೋಗಗಳನ್ನು ಮಾಡುತ್ತಿದ್ದರು. ಕೊಡೋಣ, ಕೊಳ್ಳೋಣ, ಆಸ್ತಿ, ಕರಾರು ಮೊದಲಾದ ದಿವಾಣೀ ಹಕ್ಕುಗಳ ಸಂಬಂಧವಾಗಿ ಸರಿಯಾದ ನೇಮಗಳಿದ್ದವು. ನ್ಯಾಯಕೋರ್ಟುಗಳಲ್ಲಿಯು ಪುರಾವೆ ಪದ್ಧತಿಗಳ ವಿಷಯಕ್ಕೆ ನಿಶ್ಚಿತವಾದ ಕಟ್ಟುಗಳಿದ್ದವು. ಫೌಜದಾರೀ ಕಾಯಿದೆಯಲ್ಲಿ ಇಷ್ಟು ಸಮತ್ವವು ಇದ್ದಿಲ್ಲ. ಗುನ್ಹೆಗಳಿಗೆ ವಿವರಿಸುವ ಶಿಕ್ಷೆಯು ಗುನ್ಹೆಗಾರನ ಜಾತಿಯ ಮೇಲಿಂದ ನಿರ್ಣಯಿಸಲ್ಪಡುತ್ತಿತ್ತು. ಆದರೂ ಶಿರಚ್ಛೇದನೆಯ ಶಿಕ್ಷೆಯು ಸಾವಾನ್ಯವಿದ್ದಿಲ್ಲ. ದಂಡ, ಪಟಕೆ ಹೊಡೆಯುವದು, ಕೈಕಾಲು ಕಡಿಯುವದು, ಹೆಸ್ಸು ಪಾರು

ಮಾಡುವದು, ಗಲ್ಲಿಗೆ ಹಾಕುವದು ಇವೇ ಆಗಿನ ಶಿಕ್ಷೆಯ ಪ್ರಕಾರಗಳು. ಗುಪ್ತರ ಕಾಲದಲ್ಲಿ ದೇಹಾಂತ ಶಿಕ್ಷೆಯನ್ನು ಕೊಡುವಂಥ ಅಪರಾಧಗಳು ಕಡಿಮೆ ಇದ್ದವು. ಕಳ್ಳರ ಹಾವಳಿಯು ದೇಶದಲ್ಲಿ ಇದ್ದಿಲ್ಲ.

೩. **ಜನರ ಸ್ಥಿತಿ:** — ಜನರು ಸಂಪನ್ನರೂ ಸುಶೀಲರೂ ಇದ್ದು ಬಹಳ ದಾನಧರ್ಮವಮಾಡುತ್ತಿದ್ದರೆಂದು ಫಾಹಯಾನನು ಹೇಳುತ್ತಾನೆ. ಆದದರಿಂದ ದೇಶದಲ್ಲಿ ಅನೇಕ ಧರ್ಮಾರ್ಥ ದನದ ಹಾಗೂ ಜನರ ದವಾಖಾನೆಗಳು ಇದ್ದವು. ಆದರೆ ಹೂಣರು ದಾಳಿ ಹೂಡಹತ್ತಿದ ಮೇಲೆ ದೇಶದಲ್ಲಿ ಶಾಂತತೆಯೂ ಸುಶಿಕ್ಷಿತತೆಯೂ ಕಡಿಮೆಯಾದವು. ಆದರೆ ಹರ್ಷನ ಕಾಲದಲ್ಲಿ ಜನರಲ್ಲಿ ಮತ್ತೆ ಸುಖಸಮಾಧಾನಗಳು ನೆಲೆಗೊಂಡವು.

ಈ ಕಾಲದ ಮುಖ್ಯ ಸಂಗತಿಗಳು

ಇ. ಸ.	
೩೨೦	ಗುಪ್ತವಂಶದ ಪ್ರಾರಂಭ. ಚಂದ್ರಗುಪ್ತನು ಪಟ್ಟಕ್ಕೆ ಕೂತದ್ದು.
೩೩೦	ಸಮುದ್ರಗುಪ್ತನು ಅರಸನಾದದ್ದು.
೩೬೦	ಸಿಂಹಳ ದ್ವೀಪದ ಅರಸನಾದ ಮೇಘವರ್ಮನು ರಾಯಭಾರಿಯನ್ನು ಸಮುದ್ರಗುಪ್ತನ ಕಡೆಗೆ ಕಳಿಸಿದ್ದು.
೩೮೦	೨ನೇ ಚಂದ್ರಗುಪ್ತ (ವಿಕ್ರಮಾದಿತ್ಯ)ನು ಸಿಂಹಾಸನವನ್ನೇರಿದ್ದು.
೩೯೫	ಪಶ್ಚಿಮ ಹಿಂದುಸ್ತಾನವನ್ನು ವಶಮಾಡಿಕೊಂಡದ್ದು.
೪೧೫- ೧೧	ಗುಪ್ತಸಾಮ್ರಾಜ್ಯದಲ್ಲಿ ಫಾಹಯಾನನ ಸಂಚಾರ.
೪೦೫	ಕುಮಾರಗುಪ್ತನು ಪಟ್ಟಕ್ಕೆ ಕೂತದ್ದು.
೪೪೮	ಹೂಣರು ಹಿಂದುಸ್ತಾನಕ್ಕೆ ಬರಹತ್ತಿದ್ದು.
೪೫೫	ಸ್ಕಂದಗುಪ್ತನು ಅರಸನಾದದ್ದು. ಹೂಣರಸಂಗಡ ಮೊದಲನೇ ಯುದ್ಧ
೪೭೬	ಪ್ರಸಿದ್ಧ ಜ್ಯೋತಿಷ ಶಾಸ್ತ್ರಜ್ಞನಾದ ಆರ್ಯಭಟ್ಟನ ಜನ್ಮ
೪೮೦–೯೦	ಗುಪ್ತ ಸಾಮ್ರಾಜ್ಯದ ಅಳಿಗಾಲ
೪೮೪	ಹೂಣರು ಇರಾಣದ ಅರಸನಾದ ಫಿರೋಜನನ್ನು ಕೊಂದದ್ದು.
೪೯೦-೫೭೦	ಪಶ್ಚಿಮ ಹಿಂದುಸ್ತಾನದಲ್ಲಿ ವಲ್ಲಭೀ ವಂಶದವರು ಆಳಿದ್ದು.
೪೯೯	ಬುದ್ಧಗುಪ್ತನ ಸಮಾಪ್ತಿ
೫೦೦	ಮಾಳವದಲ್ಲಿ ತೋರಮಾನನು ಅರಸನಾದದ್ದು.
೫೦೨	,, ಮಿಹಿರಗುಲನು ,,
೫೦೫	ವರಾಹಮಿಹಿರನ ಜನ್ಮ

೫೨೪ ಮಿಹಿರಗುಲನು ಹಿಂದು ಅರಸುಗಳಿಂದ ಪೋಲಿಸಲ್ಪಟ್ಟನು.

೫೪೨ ಮಿಹಿರಗುಲನ ಮರಣ.

೫೭೮ ಬ್ರಹ್ಮಗುಪ್ತನ ಜನ್ಮ

೬೦೬ ಹರ್ಷವರ್ಧನನು ಅರಸನಾದದ್ದು

೬೦೬–೧೮ ಉತ್ತರ ಹಿಂದುಸ್ತಾನವನ್ನು ಹರ್ಷನು ವಶಮಾಡಿಕೊಂಡದ್ದು.

೬೧೦ ಚಾಲುಕ್ಯ ವಂಶದ ೩ನೇ ಪುಲಿಕೇಶಿಯು ಹರ್ಷನನ್ನು ಸೋಲಿಸಿದ್ದು.

೬೨೨ ಮಹಮ್ಮದ ಪೈಗಂಬರರು ಮದೀನಾಕ್ಕೆ ಓಡಿ ಹೋದದ್ದು. ಹಿಜರೀ ಶಕದ ಪ್ರಾರಂಭ

೬೨೯–೪೫ ಹುವೆನತ್ಸಾಂಗನ ಪ್ರವಾಸ

೬೪೧ ಅರಬರು ಇರಾಣವನ್ನು ಗೆದ್ದದ್ದು.

೬೪೨ ೨ನೇ ಪುಲಕೇಶಿಯನ್ನು ಪಲ್ಲವರು ಸೋಲಿಸಿದ್ದು.

೬೪೩ ಕನೋಜ ಪ್ರಯಾಗಗಳಲ್ಲಿ ಹರ್ಷನು ನಿಲಿಯಿಸಿದ ಸಭೆಗಳು.

೬೪೫ ಹುವೆನತ್ಸಾಂಗನು ಚೀನಕ್ಕೆ ಮುಟ್ಟಿದ್ದು.

೬೪೭ ಹರ್ಷನ ಮರಣ. ಅವನ ಮಂತ್ರಿಯು ಪಟ್ಟವನ್ನು ಆಕ್ರಮಿಸಿದ್ದು.

೬೬೪ ಹುವೆನತ್ಸಾಂಗನ ಮರಣ.

೧೬ನೇ ಅಧ್ಯಾಯ

ರಾಜಪುತ್ರರು (ರಜಪೂತರು)

೧. **ಹರ್ಷಸಾಮ್ರಾಜ್ಯವು ಹಂಚಿ ಹೋದದ್ದು**— ಹರ್ಷನು ತೀರಿ ಕೋದ ಮೇಲೆ ಪಟ್ಟಕ್ಕೆ ಬಾಧ್ಯಸ್ಥರಿಲ್ಲದ್ದರಿಂದ ಅವನ ಮಂತ್ರಿಯು ತಾನೇ ಪಟ್ಟಕ್ಕೆ ಕೂತನು. ಆದರೆ ಅವನು ಚೀನದ ರಾಯಭಾರಿಗೆ ಅಪಮಾನ ಮಾಡಿದ್ದರಿಂದ ಚೀನದ ಮಾಡಶಹನು ದಂಡು ಕಳಿಸಿ ಅವನನ್ನು ಹೆಡೆಮುರಿಗೆಕಟ್ಟಿ ತರಿಸಿಕೊಂಡನು. ನಂತರ ಸಾಮ್ರಾಜ್ಯದ ನೆರೆಯಲ್ಲಿದ್ದ ಪ್ರಾಂತಗಳ ಮಾಂಡಲಿಕ ಅರಸರು ಸ್ವತಂತ್ರರಾದರು. ಗುಜರಾತದಲ್ಲಿ ವಲ್ಲಭೀವಂಶದವರೂ, ಕನೋಜ, ನೇಪಾಳಗಳಲ್ಲಿ ಅಲ್ಲಿಯ ಅರಸರೂ ಸ್ವತಂತ್ರರಾದರು. ಹರ್ಷಸಾಮ್ರಾಜ್ಯದ ಹೊರಗಿನ್ದ ಕಾಶ್ಮೀರ, ಕಾಬೂಲ, ಪಂಜಾಬ ಮತ್ತು ಸಿಂಧು ರಾಜ್ಯಗಳು ಮುಸಲ್ಮಾನರ ದಾಳಿಯವರೆಗೆ ಸ್ವತಂತ್ರವಾಗಿಯೇ ಉಳಿ ನವು. ಹೀಗೆ ೨ನೇ ಗುಪ್ತ ವಂಶದವರ ವಶವಲ್ಲಿ ಬಿಹಾರ ಮತ್ತು ಬಂಗಾಲದ ಉತ್ತರ ಭಾಗಗಳು ಮಾತ್ರ ಉಳಿದವು. ಈ ವಂಶದವರು ೬೭೦ರಿಂದ ೮೫೫ನೇ ಇಸ ವಿಯ ವರೆಗೆ ಅಪ್ರಸಿದ್ಧರಾಗಿ ಆಳಿದರು.

೨. **ರಾಜಪುತ್ರರ ಉದಯ**:--ಪರದೇಶಗಳಿಂದ ಇಲ್ಲಿಗೆ ಬಂದು ನೆಲೆಗೊಂಡ ಶಕರು, ಹೂಣರು ಮುಂತಾದವರು ಕಾಲಕ್ರಮದಿಂದ ಇಲ್ಲಿಯ ಹಿಂದುಗಳಂತೆ ಇರಹತ್ತಿ ದರು. ಮತ್ತು ಬ್ರಾಹ್ಮಣಧರ್ಮದ ಅಭಿಮಾನಿಗಳಾಗಿದ್ದರು. ಅನೇಕ ದೇವಾಲಯಗ ಳನ್ನು ಕಟ್ಟಿಸಿದರು. ಇವರಲ್ಲಿ ಮಧ್ಯಏಸಿಯದ ಜನರಂತೆ ಶೂರತನವೂ ಹಿಂದುಗ ಳಂತೆ ಧರ್ಮಾಭಿಮಾನವೂ ಕಂಡುಬರುತ್ತಿದ್ದವು. ಹರ್ಷಸಾಮ್ರಾಜ್ಯವು ಮುರಿದು ಹೋದ ಮೇಲೆ ಇವರು ಉತ್ತರ ಹಿಂದುಸ್ತಾನದೊಳಗೆ ಅಲ್ಲಲ್ಲಿ ಸಣ್ಣ ಸಣ್ಣ ರಾಜ್ಯಗ ಳನ್ನು ಮಾಡಿಕೊಂಡು ಆಳಹತ್ತಿದರು. ಹೀಗೆ ಕ್ಷತ್ರಿಯರ ಹೊಸ ಜಾತಿಯೇ ನಿರ್ಮಾಣ ವಾಯಿತು. ಈ ಜಾತಿಯ ಮುಖ್ಯಸ್ಥರು ತಾವು ಹಿಂದುದೇವತೆಗಳ ವಂಶದವರೆಂದೂ ರಾಜಪುತ್ರರೆಂದೂ ಹೇಳಹತ್ತಿದರು. ಇವರೇ ರಜಪೂತರು. ಇವರು ತಮ್ಮ ತಮ್ಮೊ ಳಗೆ ಬಡದಾಡುತ್ತಿದರಿಂದ ಮುಸಲ್ಮಾನರಿಗೆ ತುತ್ತಾದರು.

೩. **ಗುರ್ಜರರು**:--ಹೂಣರ ಕೂಡ ಗುರ್ಜರರೆಂಬ ಜನರು ಮಧ್ಯ ಏಸಿಯ ದಿಂದ ಬಂದರೆಂದು ಹಿಂದೆ ಹೇಳಿದ್ದೇವೆ. ಅವರು ಮೊದಲು ಪಂಜಾಬದಲ್ಲಿ ನೆಲೆಗೊಂ ಡಿದ್ದು ಸಾವಕಾಶವಾಗಿ ದಕ್ಷಿಣಕ್ಕೆ ಸಾಗಿಬಂದು ೮ನೇ ಶತಮಾನದ ಕೊನೆಯೊಳಗೆ ಗುಳವಾ ಮತ್ತು ರಜಪೂತಸ್ತಾನದ ಪೂರ್ವಭಾಗಗಳನ್ನು ಗೆದ್ದುಕೊಂಡರು. ಮುಂದೆ ಗುರ್ಜರ ಮುಖ್ಯಸ್ಥರು ೨ನೇ ಗುಪ್ತವಂಶದವರು ಆಳುತ್ತಿದ್ದ ಕನೋಜವನ್ನು ಗೆದ್ದು ಕೊಂಡು ಗಂಗಾನದಿಯ ಉತ್ತರದ ಪ್ರದೇಶವನ್ನು ಕ್ರಮೇವಶಮಾಡಿಕೊಂಡರು ನಂತರ

ಜಾಹೀರಾತು

ವ್ಹ. ಫಾ. ಪರೀಕ್ಷೆಯ ಉಮೇದವಾರರಿಗೆ ಅತ್ಯುಪಯುಕ್ತವಾದ

ಕನ್ನಡ ನಿಬಂಧರತ್ನಾವಳಿ

ಶಿದ್ದಿ ಬೆಳಿಸಿದ ಹೊಸ ಆವೃತ್ತಿಯು ವಾರಾಟಕ್ಕೆ ಸಿದ್ಧವಾಗಿದೆ.

ಬೆಲೆ :—೧೪ ಆಣೆ.

ಪ್ರಾಥಮಿಕ ಮತ್ತು ಇಂಗ್ಲಿಷ ಶಾಲೆಗಳ ಹಾಗು ಟ್ರೇನಿಂಗ ಸಂಸ್ಥೆಗಳ ಇನಾಮು ಮತ್ತು ಲಾಯಬ್ರರಿಗಳಿಗಾಗಿ ಮಂಜೂರಾಗಿದೆ.

ಇದರಲ್ಲಿ ವರ್ಣನಪರ, ಕಥನಪರ, ಚಿಂತನಪರ ವಿಷಯಗಳೂ ಪತ್ರವ್ಯವಹಾರದ ಮಾದರಿಗಳೂ ಬರೆಯಲ್ಪಟ್ಟಿರುವವು. ಮತ್ತು ರಾಜಕೀಯ ಪತ್ರವ್ಯವಹಾರದ ಅಂದರೆ ಪೋರ್ಟ ಹಾಗು ಅರ್ಜಿಗಳ ಕೆಲವು ಮಹತ್ವದಮಾದರಿಗಳನ್ನು ಬರೆದುತೋರಿಸಿರುತ್ತದೆ.

ಪತ್ತೆ—(೧) ರಾ. ರಾ ಬಿ. ಜಿ. ದಿವೇಕರ ಮಾಳಿಗುಡ್ಡ ಧಾರವಾಡ.

(೨) ರಾ. ರಾ. ಎ. ಆರ್. ಶಿವನಾಗಪ್ಪ, ವಾಗ್ವಿಲಾಸ

ಬುಕ್ ಡಿಪೊ, ಹುಬ್ಬಳ್ಳಿ.

ಜಾಹೀರಾತು

ವ್ಹ. ಫಾ. ಪರೀಕ್ಷೆಯ ವಿದ್ಯಾರ್ಥಿಗಳ ಸಲುವಾಗಿ ಸಿದ್ಧವಾದ

ಇತಿಹಾಸದ ಟಿಪ್ಪಣಿ

ಬೆಲೆ ೯ ಆಣೆ

ಕಳೆದ ವರ್ಷ ನಮ್ಮ ಭೂಗೋಲದ ಟಿಪ್ಪಣಿಯನ್ನು ಅನೇಕ ವಿದ್ಯಾರ್ಥಿಗಳು ಆನಂದದಿಂದ ಓದಿ ಇತಿಹಾಸದ ಟಿಪ್ಪಣಿಯನ್ನು ಇಚ್ಛಿಸಿದ್ದರಿಂದ ಅದು ಈಗ ಸಿದ್ಧವಾಗಿದೆ. ಈ ಎರಡೂ ಟಿಪ್ಪಣಿಗಳನ್ನು ಓದಿದವರು ಆಯಾ ವಿಷಯಗಳ ಪರೀಕ್ಷೆಯಲ್ಲಿ ತಪ್ಪದೆ ಪಾಸಾಗುವರೆಂದು ಅನುಭವದಿಂದ ಹೇಳುವೆವು. ಇವುಗಳಲ್ಲಿ ಒಟ್ಟಿಗೆಗಿ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ. ೪ ಆ. ಬೆಲೆಯುಳ್ಳ ಸಂತಾನಶಾಸ್ತ್ರವೆಂಬ ಅಮೂಲ್ಯ ಗ್ರಂಥವನ್ನೂ, ೧೨ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ. ಬೆಲೆಯುಳ್ಳ ಚಲುಕ್ಯರ ಪುಲಿಕೇಶಿ ಎಂಬ ಐತಿಹಾಸಿಕ ಕಾದಂಬರಿಯನ್ನೂ ಬಹುಮಾನವಾಗಿ ಕೊಡುವೆವು. ಬಹುಮಾನ ಬೇಡಾದವರಿಗೆ ರೂಪಾಯಿಗೆ ಎರಡು ಆಣೆಯಂತೆ ಕವಿಶನ್ ಕೊಡುವೆವು. ಭೂಗೋಲ ಟಿಪ್ಪಣಿಯ ಬೆಲೆಯು ೬ ಆಣೆ.

ಸಬರದ ಅಂಡ ಬ್ರದರ್ಸ ಧಾರವಾಡ.

ಕರ್ನಾಟಕದ ಇತಿಹಾಸದೊಳಗಿನ

ಸುಲಭವಾದ ಕಥೆಗಳು

ವೆ. ನ. ಮಗದಾಳ, ಬಿ. ಎ

ಇವರಿಂದ ರಚಿತವಾದದ್ದು.

ಹೆಣ್ಣು ಮತ್ತು ಗಂಡುಮಕ್ಕಳ ಪ್ರಾಥಮಿಕ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾಗಿದೆ.

ಚಿತ್ರಸಹಿತವಾದದು.

ಕ್ರಯ ೮ ಆಣೆ.

ಅನುಕ್ರಮಣಿಕೆ.

ಕಥೆ.		ಪುಟ.
೧	ನಮ್ಮ ಕನ್ನಡನಾಡು	೧
೨	೨ನೇ ಪುಲಿಕೇಶಿ	೩
೩	೬ನೇ ವಿಕ್ರಮಾದಿತ್ಯ	೫
೪	ವಿಕ್ರಮನ ಆಳಿಕೆ	೭
೫	ಹೊಯ್ಸಳ ವಿಷ್ಣುವರ್ಧನ	೯
೬	ಕಂತಿ	೧೨
೭	ಜಕ್ಕಣ್ಣಾಚಾರ್ಯ	೧೪
೮	ಬಸವನೂ ಚನ್ನಬಸವನೂ	೧೬
೯	ಮುಸಲ್ಮಾನರು ಕನ್ನಡನಾಡಿಗೆ ಬಂದದ್ದು	೧೮
೧೦	ವಿದ್ಯಾರಣ್ಯನೂ ವಿಜಯನಗರವೂ	೨೧
೧೧	ಹೊಡದ ಹುಂಡಿ	೨೨
೧೨	ಘನವಂತನಾದ ೨ನೇ ದೇವರಾಯನು	೨೫
೧೩	ಯುಸುಫ್ ಆದಿಲಶಹ	೨೮
೧೪	೨ನೇ ಕೃಷ್ಣದೇವರಾಯನ ದಿಗ್ವಿಜಯ	೩೦

ಕಥೆ.		ಪುಟ
೧೫	ಗೆಲವಿನ ಉಬ್ಬು	೩೬
೧೬	೧೫೬೫	೩೮
೧೭	ಚಾಂದಬೀಬಿ	೪೦
೧೮	ಎಚ್ಚಮ್ಮನ ರಾಜಭಕ್ತಿ	೪೮
೧೯	ಯದುರಾಯ	೫೩
೨೦	ಪುರ-ದರದಾಸ, ಕನಕದಾಸ	೫೫
೨೧	ರಾಜಒಡೆಯರ	೬೨
೨೨	ಸಂಚಿಯ ಹೊನ್ನಮ್ಮ	೬೯
೨೩	ಶಿವಾಜಿ	೭೦
೨೪	ಹೈದರ ಅಲ್ಲಿ	೭೭
೨೫	ವೀರಮಲ್ಲಮ್ಮ	೭೯
೨೬	ಕನ್ನಡಿಗರ ದುರ್ದಿನಗಳು	೮೧
೨೭	ಕನ್ನಡನಾಡಿನ ಕೊಳ್ಳಿ	೮೩
೨೮	ಟೀಪು ಸುಲ್ತಾನ—ಮೈಸೂರಹುಲಿ	೮೫
೨೯	ಪೂರ್ಣಯ್ಯನವರು	೮೯
೩೦	ಮಹಾರಾಣಿ ಲಕ್ಷ್ಮಮ್ಮಣ್ಣಿ	೯೧
೩೧	ಕನ್ನಡಿಗರ ಸುದಿನಗಳು	೯೩
೩೨	ಪ್ರಾರ್ಥನೆ	೯೫

ಮ್ಯಾಕಮಿಲನ ಆ್ಯಂಡ ಕಂಪನಿ, ಲಿ.

ಮುಂಬಯಿ.

EASY STORIES FROM THE HISTORY OF THE KARNATAK

BY V. N. MAGDAL, B. A.

Price 8 Annas.

ಕನ್ನಡ ಶಾಲಾ ಪತ್ರಿಕೆ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. .

ಪುಟ ೬೪ | ಆಗಷ್ಟ ೧೯೨೨ | ಸಂ. ೫

ಸ್ಪುಟ ವಿಚಾರಗಳು

೧. ಅಭಿನಂದನ

ಟ್ರೇನಿಂಗ ಕಾಲೇಜವು ಪುನಃ ಪ್ರಾರಂಭವಾದದ್ದಕ್ಕಾಗಿ ಅನೇಕ ಸದ್ಗೃಹಸ್ಥ
ದ ಅಭಿನಂದನ ಪತ್ರಗಳು ನಮ್ಮ ಕಡೆಗೆ ಬಂದವೆ. ಅವುಗಳಿಗೆಲ್ಲ ವ್ಯಕ್ತಿಶಃ ಉತ್ತರ
ಡುವದು ಅಶಕ್ಯವಿದ್ದದರಿಂದ ಅಭಿನಂದನ ಪತ್ರಗಳನ್ನು ಕಳಿಸಿದ ಸದ್ಗೃಹಸ್ಥರಿಗೆಲ್ಲ
ನ್ಮ ಪ್ರೇಮಪೂರ್ವಕ ವಂದನೆಗಳನ್ನು ಸಮರ್ಪಿಸುವೆವು. ನಮ್ಮ ಕಡೆಗೆ ಬಂದ
ಗಳಲ್ಲಿ ಒಂದರ ಸಾರಾಂಶವನ್ನು ಕೆಳಗೆ ಕೊಟ್ಟಿದ್ದೇವೆ.

"ಪುನಃ ಟ್ರೇ. ಕಾ. ವು ಪ್ರಾರಂಭವಾವ ಸಂಗತಿಯನ್ನು ಕೇಳಿ ಓದಿ ಆನಂದ
ಮಾನಂದವಾಯಿತು. ಬಡವರ ಮನೆಗೆ ಭಾಗೀರಥಿಯು ತಾನಾಗಿಯೇ ಬಂದಷ್ಟು
ತೋಷವಾಯಿತು. ಅದ್ದರಿಂದ ನಮ್ಮ ಮಿತ್ರರಲ್ಲಿ ಆನಂದ ಪ್ರದರ್ಶನವು ಮಾಡ
ಟ್ಟಿ ಪಿತಾಮಹರಾದ ದಿ. ಬ. ರೊದ್ದರಾಯರ ಸಾಹಸ ಪ್ರಯತ್ನಗಳ ಬಗ್ಗೆಯೂ
ಗಳಲ್ಪಟ್ಟಿತು. ಇನ್ನು ಮುಂದೆ ಏನೊಂದೂ ಆತಂಕವಿಲ್ಲದೆ ದೇವರು ಸಾಗಮಾಡ
ಂದು ಈಶ್ವರ ಪ್ರಾರ್ಥನೆಯು ಮಾಡಲ್ಪಟ್ಟಿತು.

ಕನ್ನಡಭಾಷೆಯ ಅಭಿವೃದ್ಧಿಗೆ ಕೇರುಬಡಿದಂತಾಗಿತ್ತು. ಈಗ ಆ ಕುತು
ರಾದಂತಾಯಿತು. ಸಂಕಟತಡುವವನೂ ಕಳೆಯುವವನೂ ದೇವನೇ ಅಲ್ಲವೇ?
ಕರ್ನಾಟಕದಲ್ಲಿ ಕನ್ನಡಭಾಷೆಯು ತನ್ನ ಮರ್ಯಾದೆಯನ್ನು ಕಾಯ್ದುಕೊಂಡು
ವ ವೇಳೆಯು ಉಳಿದಂತಾಯಿತು. ಸುಃ! ಆನಂದ! ಆನಂದ!! ಪರಮಾನಂದ!!!"

ಟ್ರೇ. ಕಾ. ವು ಉಳಿಯಬೇಕಾದರೆ ನಮ್ಮಲ್ಲಿಯ ಮುಂದಾಳುಗಳ ಪ್ರಯತ್ನವೂ ಒಂದು ಕಾರಣವಾಗಿದೆ. ಆವರೆ ಮುಖ್ಯವಾಗಿ ಈಗಿನ ಶಿಕ್ಷಣಮಂತ್ರಿಗಳಾದ ನಾಡ ದಾರ ದಿ. ಬ. ಹರಿಲಾಲ ದೇಸಾಯಿಯವರ ಸಂಪೂರ್ಣ ಸಹಾನುಭೂತಿಯೂ ವಿಶೇಷ ಕಾರಣವು. ಗುಜರಾಥದಲ್ಲಿಯ ಪ್ರೇಮಚಂದ ರಾಯಚಂದ ಟ್ರೇನಿಂಗ ಕಾಲೇಜ ಅವಸ್ಥೆಯೂ ನಮ್ಮಲ್ಲಿಯ ಟ್ರೇ. ಕಾ. ದಂತೆ ಆಗಿತ್ತು. ಅಲ್ಲಿಯ ಮುಂದಾಳುಗಳ ಈ ಕಾರ್ಯದಲ್ಲಿ ಒಳ್ಳೇ ಜಾಗ್ರತೆಯಿಂದ ಪ್ರವರ್ತಿಸಿದ್ದಲ್ಲದೆ ಒಂದು ಶಿಷ್ಟಮಂಡಳವನ್ನು ಶಿಕ್ಷಣ ಮಂತ್ರಿಗಳ ಕಡೆಗೆ ಕಳುಹಿಸಿ ತಮ್ಮ ಟ್ರೇ. ಕಾ. ವನ್ನು ಇಡಲೇಬೇಕೆಂದು ಆಗ್ರಹದ ವಿನಂತಿಯನ್ನು ಮಾಡಿಕೊಂಡರು. ಹೊಸ ರಾಜಕೀಯ ಸುಧಾರಣೆಯ ಪ್ರಚಾರವು ನಮ್ಮಲ್ಲಿ ಬಂದಂದಿನಿಂದ ಶಿಕ್ಷಣಖಾತೆಯು ಮೊದಲಿಗಿಂತ ಬೆಳೆದೀತೆಂದು ಜನರು ಆಶಿಸಿದ್ದರು. ಅದು ಹೋಗಿ ಮೊದಲಿದ್ದದ್ದರಲ್ಲಿಯೇ ಕಡಿಮೆಯಾದದ್ದನ್ನು ನೋಡಿ ಜನರ ಮನಸ್ಸು ಕುಗ್ಗಿ ಹೋಗಿತ್ತು. ಆದರೆ ನಮ್ಮ ಸುದೈವದಿಂದ ಮುಂಬಯಿ ಇಲಾಖೆಯಲ್ಲಿ ಶಿಕ್ಷಣಖಾತೆಗೆ ಸಮರ್ಥರಾದ ಮಂತ್ರಿಗಳು ಬಂದದರಿಂದ ಅವರ ಟ್ರೇನಿಂಗ್ ಕಾಲೇಜಗಳ ಅಸ್ಥಿಪಂಜರಗಳಲ್ಲಿ ಜೀವಕಳೆಯನ್ನು ತುಂಬಿ ಅವುಗಳಿಗೆ ಮೊದಲಿನ ಸ್ವರೂಪವನ್ನು ಕೊಟ್ಟಿದ್ದಲ್ಲದೆ ಇನ್ನೂ ಅವುಗಳ ಅಭಿವೃದ್ಧಿದಶೆಯನ್ನು ತ ಬೇಕೆಂದಿರುವರು. ಅದಕ್ಕಾಗಿ ಮುಂಬಯಿ ಇಲಾಖೆಯ ಜನತೆಲ್ಲರೂ ನಾ. ದಿ. ಬ ದೇಸಾಯಿಯವರನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಸರಿ.

೨. ಟ್ರೇನಿಂಗ ಕಾಲೇಜದ ಅಭಿವೃದ್ಧಿ

ಹೀಗೆ ಪ್ರಯತ್ನಪೂರ್ವಕವಾಗಿ ಶಿಕ್ಷಣ ಮಂತ್ರಿಗಳು ನಮಗೆ ತಿರುಗಿಕೊಟ್ಟ ಧಾರವಾಡದ ಟ್ರೇನಿಂಗಕಾಲೇಜವನ್ನು, ಪೂರ್ವದ ಸ್ಥಿತಿಗೆ ತರುವದು ಕರ್ನಾಟಕ ಸ್ಕೂಲಬೋರ್ಡುಗಳ ಕೈಯ್ಯಲ್ಲಿ ಅದೆ ನಮ್ಮಲ್ಲಿಯ ಸಂಸ್ಥೆಯನ್ನು ಎತ್ತಿಹಿಡಿಯಲಿಕ್ಕೆ ಪರಭಾಗದ ಮುಂದಾಳುಗಳು ಮನಃಪೂರ್ವಕವಾಗಿ ಪ್ರಯತ್ನಮಾಡುವದನ್ನು ನೋಡಿ ನಮ್ಮಲ್ಲಿಯ ಸ್ಕೂಲಬೋರ್ಡುಗಳು ಉತ್ಸಾಹದಿಂದ ಮುಂದೆಬಂದು ಎರಡನೆಯ ವರ್ಷದ ಟ್ರೇಂಡರ ಬೇಡಿಕೆಯನ್ನು ಮಾಡಿ ಟ್ರೇನಿಂಗ್ ಕಾಲೇಜವು ಮೊದಲಿನಂತೆ ಆಗುವದಕ್ಕೆ ಸಹಾಯವನ್ನು ಮಾಡುವದಲ್ಲದೆ ಆಂಥ ಟ್ರೇಂಡಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸಿ ಪ್ರಾಥಮಿಕ ಶಿಕ್ಷಣವನ್ನು ಯಶಸ್ವಿಯಾಗಿ ಮಾಡುವದೂ ಅವುಗಳ ಕರ್ತವ್ಯವಾಗಿದೆ

ಟ್ರೇಂಡರ ಸಂಖ್ಯೆಯು ಹೆಚ್ಚಾಯಿತು, ಹೆಚ್ಚಾಯಿತೆಂಬ ಕೂಗಾಟವನ್ನೇ ಮುಂ ಮಾಡಿ ಶಿಕ್ಷಣ ಕಲೆಯನ್ನರಿಯದ (ಅಂಟ್ರೇಂಡ) ವ್ಹ. ಫಾ. ಪಸಾದ ಜನರನ್ನು ನೇಮಿಸಿಕೊಳ್ಳುವದರಿಂದ ಪ್ರಾ. ಶಿ. ದ ಹಾನಿಯು ಎಷ್ಟಾಗುವದೆಂಬದನ್ನು ಅವರು ವಿಚಾರಪೂರ್ವಕವಾಗಿ ವಿಮರ್ಶಿಸಿದಲ್ಲಿ ಮತ್ತು ಕನ್ನಡ ಭಾಷೆಯ ಅಭ್ಯಾಸಕ್ಕೆ ಉತ್ತೇಜ

ವಿಲ್ಲಪಂತಾಗಿ ಭಾಷೆಯ ಅವಸ್ಥೆಯು ಮುಂದೆ ಎಷ್ಟು ಹೀನಸ್ಥಿತಿಗೆ ಹೋಗಬಹುದೆಂಬ ದನ್ನು ಆಲೋಚಿಸಿದಲ್ಲಿ ಅವರು ಈ ಬಗ್ಗೆ ಸಹಾನುಭೂತಿಪೂರ್ವಕವಾಗಿ ವಿಚಾರಮಾಡಿ ಧಾರವಾಡ, ಬೆಳಗಾಂವ, ವಿಜಾಪೂರ ಜಿಲ್ಲೆಗಳಿಂದ ಆಯಾ ಜಿಲ್ಲೆಗಳ ಪ್ರಮಾಣ ಕ್ಕನುಸರಿಸಿ ಟ್ರೇಂಡರನ್ನು ಬೇಡಿದರೆ ಪ್ರಾ. ಶಾಲೆಗಳ ಸುಸ್ಥಿತಿಗೂ ಕನ್ನಡ ಭಾಷೆಯ ಅಭ್ಯಾಸಕ್ಕೂ ಉತ್ತೇಜನವನ್ನುಂಟು ಮಾಡುವರೆಂಬ ವಿಷಯದಲ್ಲಿ ಸಂದೇಹವಿಲ್ಲ.

ಈಗಿನ ನೇಮಗಳಂತೆ ಟ್ರೇನಿಂಗದ ಲಾಭವು ಬ್ರಾಹ್ಮಣರಿಗಿಂತ ಬ್ರಾಹ್ಮಣೇತರಿಗೇ ಆಗುವಮಂಟು. ೧೯೨೪ನೇ ಇ. ಯಿಂದ ೩ ವರ್ಷಗಳಲ್ಲಿ ಬ್ರಿಟಿಶ್ ಜಿಲ್ಲೆಗಳಲ್ಲಿ ಟ್ರೇಂಡರಾದ ೭೫ ಜನರಲ್ಲಿ ೮ ಜನ ಬ್ರಾಹ್ಮಣರೂ ೬೭ ಜನ ಬ್ರಾಹ್ಮಣೇತರರೂ ಇದ್ದರು. ಒಟ್ಟಿಗೆ ಬ್ರಾಹ್ಮಣ, ಪಂಚಾಳ ಮುಂತಾದ ಮುಂದರಿದ ಜನರನ್ನು ನೂರಕ್ಕೆ ೨೫ ರಂತೆ ತೆಗೆದುಕೊಳ್ಳಬೇಕೆಂಬ ನೇಮನಿರುವದು. ಆದದರಿಂದ ಬ್ರಾಹ್ಮಣೇತರ ಬಹು ಸಂಖ್ಯೆಯುಳ್ಳ ಬೋರ್ಡುಗಳು ಮೇಲಿನ ಸಂಗತಿಯನ್ನು ಅವಗಾಹನೆಗೆ ತಂದು ಟ್ರೇ. ಕಾ. ವನ್ನು ಪೂರ್ವದ ಸ್ಥಿತಿಗೆ ತರುವದು ಶಕ್ಯವದೆ.

ಇನ್ನು ಮುಂದೆ ಒಂದೊಂದು ಭಾಗಕ್ಕೆ ಒಂದೊಂದು ಸಂಪೂರ್ಣ ಟ್ರೇನಿಂಗ ಕಾಲೇಜವು ಇರಲೇಬೇಕೆಂಬ ಧೋರಣವನ್ನು ಶಿಕ್ಷಣ ಮಂತ್ರಿಗಳು ತಮ್ಮೊದುರಿಗೆ ಇಟ್ಟುಕೊಂಡಿರುವರೆಂದು ಕೇಳುತ್ತೇವೆ. ಆದದರಿಂದ ಇಂಥ ಅನುಕೂಲ ಪರಿಸ್ಥಿತಿಯು ಉಪಯೋಗವನ್ನು ಸ್ಕೂಲಬೋರ್ಡುಗಳು ಮಾಡಿಕೊಳ್ಳದೇ ಬಿಡಲಾರವೆಂದು ನಂಬಿದ್ದೇವೆ. ೧೯೨೩ನೇ ಇಸ್ವಿಯಲ್ಲಿ ಧಾರವಾಡದಂತೆ ಅಹಮ್ಮದಾಬಾದದ ಟ್ರೇನಿಂಗ ಕಾಲೇಜವಲ್ಲಿಯೂ ಒಂದನೇ ವರ್ಷದ ಒಂದೇ ವರ್ಗವನ್ನು ಇಡಬೇಕೆಂದು ಸರ ಕಾರದವರು ಮೊದಲು ಗೊತ್ತುಮಾಡಿದ್ದರು. ಆದರೆ ಸ್ವಾಭಿಮಾನವುಳ್ಳ ಗುಜರಾ ಥದ ಜನರೂ ಅಹಮ್ಮದಾಬಾದ ಸುರತಗಳ ಮುನಸಿಪಾಲಿಟಿಯವರೂ ಡಿಸ್ಟ್ರಿಕ್ಟ ಬೋರ್ಡಿನವರೂ ತಮಗೆ ಹೆಚ್ಚಿನ ಯೋಗ್ಯತೆಯ ಟ್ರೇಂಡರು ಅವಶ್ಯವಾಗಿ ಬೇಕೆಂಬ ಆಗ್ರಹವನ್ನು ತೋರಿಸಿದ್ದರಿಂದ ೧ನೇ ವರ್ಷದಲ್ಲಿ ೬೦ ವಿದ್ಯಾರ್ಥಿಗಳನ್ನೂ ೨ನೇ ವರ್ಷ ದಲ್ಲಿ ೨೫ ವಿದ್ಯಾರ್ಥಿಗಳನ್ನೂ ಇಟ್ಟುಕೊಳ್ಳಬೇಕೆಂದು ಸರಕಾರದವರು ಗೊತ್ತುಪಡಿಸಿ ದರು. ಕರ್ನಾಟಕದ ಜನರು ಈಗಿನಂತೆ ಆ ಕಾಲಕ್ಕೆ ಈ ಪ್ರಶ್ನದ ವಿಷಯವಾಗಿ ಆಸ್ಥೆಯನ್ನು ತೋರಿಸಿದ್ದರೆ ಟ್ರೇ. ಕಾ. ದಲ್ಲಿ ೨ನೇ ವರ್ಷದ ವರ್ಗವು ಉಳಿಯ ಬಹುದಾಗಿತ್ತು. ಆದುದರಿಂದ ಇನ್ನು ಮುಂದೆ ಪ್ರಾಥಮಿಕ ಶಿಕ್ಷಣದ ಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡ ಕರ್ನಾಟಕದ ಮುಂದಾಳುಗಳು ಯೋಗ್ಯ ಉತ್ಸಾಹವನ್ನು ತೋರಿಸುವರೆಂದು ನಂಬುತ್ತೇವೆ.

ತುಲನೆಗಾಗಿ ಬೇರೆ ಬೇರೆ ಭಾಗಗಳಲ್ಲಿಯ ಟ್ರೇಂಡ ಜನರ ಸಂಖ್ಯೆಯನ್ನು ಕೆಳಗೆ ಕೊಟ್ಟಿದ್ದೇವೆ.

ಇ. ಸ. ೧೯೨೪ರಲ್ಲಿದ್ದ ಸಂಖ್ಯೆ.

ಭಾಗ	೩ನೇ ವರ್ಷ	೨ನೇ ವರ್ಷ	೧ನೇ ವರ್ಷ	ಒಟ್ಟು ಟ್ರೋಂಡರ ಸಂಖ್ಯೆ
ಮುಂಬೈ	೬೦೬	೭೫೧	೧೮೮೫	೩೪೪೨
ಮಧ್ಯ	೭೫೫	೧೩೨೯	೧೮೪೪	೩೯೨೮
ಉತ್ತರ	೪೮೨	೬೪೯	೧೭೯೨	೩೩೨೩
ದಕ್ಷಿಣ	೯೪೦	೧೧೨೪	೧೧೯೫	೩೨೪೯
ಸಿಂಧ	೬೭೯	೩೪೪	೪೧೨	೧೪೭೯

ಮೇಲಿನ ಕೋಷ್ಟಕದಿಂದ ದಕ್ಷಿಣಭಾಗದಲ್ಲಿ ೧ನೇ ವರ್ಷದ ಟ್ರೋಂಡ ಸಂಖ್ಯೆಯು ಉತ್ತರ ಮಧ್ಯ ಮತ್ತು ಸಿಂಧ ಭಾಗಗಳಿಗಿಂತ ಪ್ರಮಾಣಕ್ಕನುಸಾರವಾ ನೋಡಿದರೆ ಕಡಿಮೆಯದೆಂಬದು ಗೊತ್ತಾಗುವದು. ೩ನೇ ವರ್ಷದವರ ಸಂಖ್ಯೆಯ ಸಿಂಧಕ್ಕಿಂತ ನಮ್ಮಲ್ಲಿ ಕಡಿಮೆಯದೆ. ೩ನೇ ವರ್ಷದ ಟ್ರೋಂಡರ ಸಂಖ್ಯೆಯು ಮಾತ್ರ ನಮ್ಮ ಭಾಗದಲ್ಲಿ ಹೆಚ್ಚಿರುವದು. ಅವರೆ ಈ ನಾಲ್ಕು ವರ್ಷಗಳ ಅವಧಿಯಲ್ಲಿ ಕ ಸಂಖ್ಯೆಯು ಮರಣ, ಪೆನಶನ್ ಮೊದಲಾದ ಕಾರಣಗಳಿಂದ ನೂರಕ್ಕೆ ವರ್ಷಕ್ಕೆ ರಂತೆ ಕಡಿಮೆಯಾಗಿ ೩ನೇ ವರ್ಷದ ಟ್ರೋಂಡರ ಸಂಖ್ಯೆಯು ೭೭೨ ಆಗಿರಬಹುದು ಮತ್ತು ೩ನೇ ವರ್ಷದ ವರ್ಗವು ಕಳೆದ ನಾಲ್ಕು ವರ್ಷಗಳಿಂದ ಇಲ್ಲದ್ದರಿಂದ ಹೊಸ ಜನರ ಪೂರ್ತಿಕೆಯಿಲ್ಲ. ಆದದರಿಂದ ೩ನೇ ವರ್ಷದ ವರ್ಗವನ್ನು ಇಲ್ಲಿಯ ಟ್ರೋ. ಕಾ ದಲ್ಲಿ ಇಡುವದು ಅವಶ್ಯವದೆಯೆಂಬದು ಗೊತ್ತಾಗುವದು.

೩ ಗುಜರಾಥದಲ್ಲಿ ಅತಿವೃಷ್ಟಿ

ಗುಜರಾಥವಲ್ಲಿಯೂ ಕಾಠೇವಾಡ ಸಿಂಧಪ್ರಾಂತಗಳ ಕೆಲಕೆಲವು ಭಾಗಗಳಲ್ಲಿಯೂ ಈ ತಿಂಗಳಲ್ಲಿ ಅತಿವೃಷ್ಟಿಂದ ಅತಿಶಯ ಹಾನಿಯಾಗಿ ಹಾಹಾಕಾರವೆದ್ದಿರವದು. ನೂರಾರು ಜನರು ಪ್ರಾಣಕ್ಕೆ ಎರವಾದರು; ಅಸಂಖ್ಯ ಧನಕರುಗಳು ನೀರಲ್ಲಿ ಮುಳುಗಿ ಸತ್ತವು; ಹತ್ತಿಪ್ಪತ್ತು ಸಾವಿರ ಗುಡಿಸಲುಗಳು ತೇಲಿಹೋದವು. ಸಾವಿರಾರ ಮನೆಗಳು ನೆಲಸಮವಾದವು; ಬೆಳೆಗಳೂ ಹೊಲಗಳೂ ಕೊಚ್ಚಿಕೊಂಡು ಹೋದವು ಬಡೋದೆಯ ನಗರದಲ್ಲಿಯೂ ಪ್ರಾಣಿಸಂಗ್ರಹಾಲಯದಲ್ಲಿಯೂ ನೀರು ನಿಂತು ಅಪರಿಮಿತ ಹಾನಿಯಾಗಿದೆ. ಹೀಗೆ ಅಸಂಖ್ಯಜನರು ಮೇಘರಾಜನ ಕೋಪದಿಂದ ನಿರಾಶ್ರಿತರಾಗಿದ್ದಾರೆ. ಹೀಗೆ ಹಾನಿಗೆ ಗುರಿಯಾಗಿ ನಿರಾಶ್ರಿತರಾದವರ ಸಹಾಯಕ್ಕಾಗಿ ಸರಕಾರದವರೂ ಬೇರೆ ಬೇರೆ ಸಂಸ್ಥೆಗಳವರೂ ಮುಂದಾಳುಗಳೂ ಮುಂದೆ ಪ್ರಯತ್ನ ಮಾಡು

ತ್ತಿರುವರು. ಅಲ್ಲಲ್ಲಿ ಸಣ್ಣ ದೊಡ್ಡ ಕಮಿಟಿಗಳನ್ನು ಕೂಡಿಸಿ ಹಣ ಕೂಡಿಸಹತ್ತಿರುವರು. ಈ ರೀತಿ ಸಾರ್ವಜನಿಕ ವರ್ಗಣಿಯಿಂದ ಸದ್ಯಕ್ಕೆ ಮುಂಬಯಿಯಲ್ಲಿ ೭–೮ ಲಕ್ಷ ರೂಪಾಯಿಗಳು ಕೂಡಿರುವವು. ಮತ್ತು ಸರಕಾರದವರು ೯೦ ಲಕ್ಷ ರೂ. ಗಳ ರೆಗೆ ಸಹಾಯ ಮಾಡುವದನ್ನು ನಿಶ್ಚಯಿಸಿರುವರು. ಕೋಟ್ಯವಧಿ ರೂಪಾಯಿಗಳು ನಷ್ಟವಾಗಿ ಅಸಂಖ್ಯ ಜನರು ನಿರಾಶ್ರಿತರಾಗಿರುವಾಗ ಎಷ್ಟು ಜನರು ಎಷ್ಟು ವಿಧದಿಂದ ಸಹಾಯ ಮಾಡಿದರೂ ಕಡಿಮೆಯೇ ಎನಿಸಹತ್ತಿರುವದು. ಹೀಗಿರುವದರಿಂದ ಪ್ರತಿಯೊಬ್ಬನು ತನ್ನ ಕೈಲಾದಮಟ್ಟಿಗೆ ಇಂತಹ ನಿರಾಶ್ರಿತರಿಗೆ ನೆರವಾಗುವದು ಕರ್ತವ್ಯವೂ ಶ್ರೇಯಸ್ಕರವೂ ಆಗಿರುವದು. ಆದ್ದರಿಂದ ನಮ್ಮ ವಾಚಕರಲ್ಲಿ ಯಾರಾದರೂ ಸಹಾಯ ಮಾಡಲಿಚ್ಛಿಸಿ ತಮಗೆ ದೊರೆದಷ್ಟು ಹಣವನ್ನು ನಮ್ಮ ಕಡೆಗೆ ಕಳುಹಿಸಿದರೆ ಅದನ್ನು ಮಧ್ಯನರ್ತಿ ಸಂಸ್ಥೆಗೆ ಮುಟ್ಟಿಸುವ ವ್ಯವಸ್ಥೆ ಮಾಡುವೆವು. ಸರಕಾರೀ ನೌಕರರು ಈ ನಿರಾಶ್ರಿತರ ಸಹಾಯಕ್ಕಾಗಿ ವರ್ಗಣಿಯನ್ನು ಕೂಡಿಸಲಿಕ್ಕೆ ಅಡ್ಡಿಯಿಲ್ಲವೆಂದು ಸರಕಾರದವರು ನಿರ್ಣಯಿಸಿರುವರು.

ಹೊಸ ಶೋಧಗಳ ಆಗತ್ಯ

ಪ್ರೊ. ಯದುನಾಥ ಸರಕಾರರವರ ಭಾಷಣ

ಮೊನ್ನಿನ ಅಗಷ್ಟ ತಿಂಗಳಲ್ಲಿ ಮುಂಬಯಿಯಲ್ಲಾದ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದ ಸಮಯದಲ್ಲಿ ಕಲಕತ್ತೆಯ ವಿಶ್ವವಿದ್ಯಾಲಯದ ವ್ಹಾಯಿಸ್ ಚಾನ್ಸೆಲರರಾದ ಪ್ರೊ. ಯದುನಾಥ ಸರಕಾರರವರು ಒಂದು ಭಾಷಣವನ್ನು ಮಾಡಿದರು. ಅದರ ಸಾರಾಂಶವನ್ನು ಇಲ್ಲಿ ಕೊಡುವೆವು.

"ಮುಂಬಯಿಯ ವಿಶ್ವವಿದ್ಯಾಲಯವು ಯೋಗ್ಯತಾವಂತರಾದ ಹಾಗು ಸತ್ಯಶೀಲರಾದ ಜನರನ್ನು ಉಂಟುಮಾಡಿ ಈ ಪ್ರಾಂತದೊಳಗಿನ ಸಾರ್ವಜನಿಕ ಕಾರ್ಯಗಳಿಗೆ ಚೆನ್ನಾಗಿ ನೆರವಾಗಿರುವದು. ಮತ್ತು ನೈತಿಕ ಹಾಗು ಸಾರ್ವಜನಿಕ ಹಿತದ ಕಾರ್ಯಗಳನ್ನು ಮಾಡುವಂಥ ಜನರು ಇತ್ತಿತ್ತ ಹೆಚ್ಚುಹೆಚ್ಚಾಗಿ ಹೊರಡಹತ್ತಿರುವರು. ಹಾಗು ದೇಶಭಾಷೆಗಳಲ್ಲಿ ಮೇಲ್ತರಗತಿಯ ಉದ್ಗ್ರಂಥಗಳು ಹುಟ್ಟಲಿಕ್ಕೆ ಇವರಿಂದ ಸಹಾಯವಾಗಿದೆ. ಇಂಗ್ಲಿಷ ಶಿಕ್ಷಣದ ಸಹಾಯದಿಂದ ಸದ್ಯದ ರಾಜಕೀಯ ವಾತಾವರಣವುಂಟಾಗಲಿಕ್ಕೆ ಕಾರಣವಾಗಿದೆ. ಒಟ್ಟಿನ ಮೇಲೆ ಪಾಶ್ಚಾತ್ಯ ಸುಧಾರಣೆಗಳನ್ನು ಈ ದೇಶದಲ್ಲಿ ಹಬ್ಬಿಸುವ ಮಹತ್ವದ ಕಾರ್ಯವನ್ನು ಇದು ಕೈಕೊಂಡಿರುವದೆಂದು ಹೇಳಬಹುದು.

ವಿಶ್ವವಿದ್ಯಾಲಯದ ಅಭಿವೃದ್ಧಿಯ ಕಾರ್ಯದಲ್ಲಿ ಅತಿ ಮಹತ್ವದ ಮಾತೆಂದರೆ **ಹೊಸ ಶೋಧನ ಕಾರ್ಯಗಳು.** ಭರತಖಂಡವು ಬೌದ್ಧಿಕ ವಿಷಯಗಳಲ್ಲಿ ಪರ

ದೇಶಗಳಿಗೆ ಋಣಿಯಾಗಕೂಡದು. ನಮ್ಮ ದೇಶವು ಬೇರೆ ಬೇರೆ ಕಲೆಗಳಲ್ಲಿಯ
ಶಾಸ್ತ್ರೀಯ ವಿಷಯಗಳಲ್ಲಿಯೂ ಪರಾವಲಂಬಿಯಾಗಕೂಡದು; ನಮ್ಮ ದೇಶದ ಮಾ
ಸಿಕವಿಕಾಸವು ಸರಿಯಾಗಿ ಆಗಬೇಕು; ಎಂದು ಅಪೇಕ್ಷಿಸಿದರೆ ಅದು ಈ ವಿಷಯ
ಳಲ್ಲಿ ಪರದೇಶಗಳಿಗೆ ಋಣಿಯಾಗಕೂಡದು. ಇಷ್ಟೇ ಅಲ್ಲ; ಪರದೇಶದವರು ಈ ವಿ
ಯಗಳನ್ನು ನಮ್ಮವರಿಂದಲೇ ಕಲಿತುಕೊಳ್ಳುವಂತೆ ಮಾಡಬೇಕು. ಹೊಸ ಹೊ
ಶೋಧಗಳು ಅಥವಾ ನೂತನ ಸತ್ಯ ಸಂಗತಿಗಳ ಉತ್ಪತ್ತಿ ಇವು ಶಿಕ್ಷಣ ಸೃಷ್ಟಿಯೊ
ಗಿನ ಅತಿ ಮಹತ್ವದ ಹಾಗು ವೈಭವದ ವಿಷಯಗಳು. ಮಾನವಜಾತಿಯ ಬುದ್ಧಿವಿ
ಸದ ಪರಮಾವಧಿಯೇ ವಿಶ್ವವಿದ್ಯಾಲಯದ ಶಿಕ್ಷಣದ ಉಚ್ಚತರದ ಹಾಗು ಎಂದ
ಮರೆಯಲಾಗದ ಧ್ಯೇಯವಾಗಿರುವದು.

ಹೊಸ ಶೋಧಗಳಲ್ಲಿ ತೊಡಗಿದ ವಿದ್ಯಾರ್ಥಿಗಳು ನೂತನ ವಿಚಾರಕ್ರಮವನ
ಹುಟ್ಟಿಸುವ ಶೋಧಕ ಜಗತ್ತಿನಲ್ಲಿ ಸಂಚರಿಸುವ ದಾರಿಕಾರರಾಗಿರುವರು. ಅ
ಮೇಲೆ ಯಾವಾಗ ಯಾವ ತರದ ಸಂಕಟಗಳು ಬರಬಹುದೆಂಬದರ ಕಲ್ಪನೆಯಿರ
ದಿಲ್ಲ. ಇಂತಹ ಶೋಧಕ ವಿದ್ಯಾರ್ಥಿಗಳು ಸತ್ಯ ಹಾಗು ಅಸತ್ಯಗಳ ನಡುವೆ ಅಲೆದ
ಸತ್ಯವನ್ನು ಕಂಡುಕೊಳ್ಳಬೇಕಾಗುವದು. ಇಂತಹ ಸತ್ಯಶೋಧಕರ ಉತ್ತಮ ವ
ವಿನ್ದ ಹೊರತು ವಿಶ್ವವಿದ್ಯಾಲಯವು ತನ್ನ ಕರ್ತವ ವನ್ನು ಸರಿಯಾಗಿ ಮಾಡಿತೆಂ
ಹೇಳಲಿಕ್ಕೆ ಬರುವಂತಿರುವದಿಲ್ಲ.

ಯೋಗ್ಯವಾದ ನೂತನ ಸಂಗತಿಗಳನ್ನು ಶೋಧಿಸುವದರಿಂದ ಮನುಷ್ಯರ ಶ
(Character) ದ ಮೇಲೆಯೂ ಪರಿಣಾಮವಾಗುವದು. ಜಗತ್ತಿನಲ್ಲಿರುವ ಎ
ಶೋಧಕರು "ಸತ್ಯಾನ್ವೇಷಿಗಳ ಒಂದು ಸಂಘ"ವನ್ನು ಮಾಡಿಕೊಂಡಿರುವರು. ಅವ
ದೇಶ ವಿದೇಶದವರೆಂಬ ಮತ್ಸರಭಾವವಿಲ್ಲ; ಜಾತಿ ಪರಜಾತಿಯವರೆಂಬ ಭೇದಭಾ
ಯಿಲ್ಲ; ಸತ್ಯದ ಶೋಧನೆಯ ಕಾರ್ಯಕ್ಕೆ ಅಂತ್ಯವೇ ಇಲ್ಲ. ಇಷ್ಟೇ ಅಲ್ಲ, ಅದ
ತೊಡಗಿದವರಿಗೆ ವಿಶ್ರಾಂತಿಯೂ ಕೂಡ ಇಲ್ಲ. ಹೀಗೆಂದು ಆ ಕಾರ್ಯದಲ್ಲಿ ತೊ
ಗುವವರು ಹಿಂದೆ ಮುಂದೆ ನೋಡುತ್ತ ಅಳಿಮನಸ್ಸು ಮಾಡುವಂತೆಯೂ ಇಲ್ಲ.

ಹೊಸ ಶೋಧಗಳನ್ನು ನಡೆಯಿಸುವ ವಿಷಯಕ್ಕೆ ವಿಶ್ವವಿದ್ಯಾಲಯಗಳೇ ಹೆ
ಯೋಗ್ಯವಾದ ಸ್ಥಾನಗಳಾಗಿರುವವು. ಬೇಕಾದಷ್ಟು ಶ್ರೀಮಂತನೇ ಆಗಲಿ, ಬುದ್ಧಿ
ತನೇ ಆಗಲಿ ವ್ಯಕ್ತಿಶಃ ಈ ಕಾರ್ಯವನ್ನು ಕೈಕೊಂಡರೆ ಅದು ಸಾಧ್ಯವಾಗುವ
ತುಂಬಾ ಕಠಿಣವಾಗುವದು. ವಿಶ್ವವಿದ್ಯಾಲಯದಲ್ಲಿ ಉತ್ತಮೋತ್ತಮ ಗ್ರಂಥಸಂ
ಹವಿರುವ ಹಾಗು ಮೇಲ್ತರದ ಎಲ್ಲ ನಿಯತಕಾಲಿಕ (Magazines) ಗಳು ಬರು
ರುವಂಥ ಒಂದು ವಾಚನಾಲಯವನ್ನು ಸ್ಥಾಪಿಸಬೇಕು. ನುತ್ತು ಯಾವತ್ತು ತ
ಶಾಸ್ತ್ರೀಯ ವಿಷಯದ ಉಪಕರಣಗಳ ಸಂಗ್ರಹವುಳ್ಳ ಒಂದು ಪ್ರಯೋಗಶಾಲೆಯ

ಆರಂಭಿಸಬೇಕು. ಮತ್ತು ಬೇರೆ ಬೇರೆ ಶಾಖೆಗಳಲ್ಲಿ ಶೋಧದ ಕಾರ್ಯಗಳನ್ನು ಕೈಕೊಂಡಿರುವಂಥ ಶೋಧಕರ ಸಮುದಾಯವನ್ನು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಕೆಲಸ ಮಾಡಲಿಕ್ಕೆ ತೊಡಗಿಸಬೇಕು. ಮತ್ತು ಆ ಬೇರೆ ಬೇರೆ ಶಾಖೆಗಳಲ್ಲಿ ಶೋಧನ ಕಾರ್ಯವನ್ನು ಕೈಕೊಂಡವರು ಪರಸ್ಪರ ನೆರವಾಗಿ ಒಮ್ಮನಸ್ಸಿನಿಂದ ಕೆಲಸ ಮಾಡು ವಂತೆ ಮಾಡಬೇಕು. ಯಾಕಂದರೆ, ಯಾವ ಮನುಷ್ಯನೇ ಆಗಲಿ, ಅವನು ಬೇಕಾ ದಷ್ಟು ಬುದ್ಧಿಶಾಲಿಯಾಗಿದ್ದರೂ ಎಲ್ಲ ವಿಷಯಗಳಲ್ಲಿ ನಿಷ್ಣಾತನಾಗಿರುವದು ಸಂಭವ ನೀಯವಲ್ಲ. ಒಂದು ಶಾಖೆಯಲ್ಲಿ ಶೋಧದ ಕಾರ್ಯವನ್ನು ನಡೆಯಿಸಿರುವನವನ ವಿಚಾರ ಕ್ರಮಗಳೂ ಅದರ ಫಲಿತವೂ ಮತ್ತೊಬ್ಬನ ಕಾರ್ಯಕ್ಕೆ ಸಹಾಯಕಾರಿಯಾಗಬ ಹುದು. ಮತ್ತು ಬೇರೆ ಬೇರೆ ಜನರು ವ್ಯಕ್ತಿಗತವಾಗಿ ನಡೆಯಿಸಿರುವ ಶೋಧನಕಾ ರ್ಯಗಳಲ್ಲಿ ಒಬ್ಬನು ಮಾಡಿದ್ದನ್ನೇ ಮತ್ತೊಬ್ಬನು ಮಾಡುವದರಿಂದಾಗುವಂಥ, ಶ್ರಮವು ನಿರರ್ಥಕವಾಗುವಂಥ ಪ್ರಸಂಗಗಳು ವಿಶ್ವವಿದ್ಯಾಲಯದ ಆಡಳಿತೆಯ ಕೆಳಗೆ ಕೆಲಸ ಮಾಡುವದರಿಂದ ತಪ್ಪಿ ಹೋಗುವವು. ಹಿಂದೆ ಇಂತಹ ಎಷ್ಟೋ ಪ್ರಸಂಗ ಗಳು ಒದಗಿ ಒಬ್ಬರು ಮಾಡಿದ ಶ್ರಮವು ಇನ್ನೊಬ್ಬರು ಮಾಡಿದ ಅದೇತರವ ಶೋಧ ದಿಂದ ನಿರರ್ಥಕವಾಗಿ ಹೋದ ಉದಾಹರಣೆಗಳಿರುವವು.

ನಮ್ಮ ದೇಶದಲ್ಲಿ ಅಸಂಖ್ಯ ಸ್ವಾಭಾವಿಕ ಸೃಷ್ಟಿಶಕ್ತಿಗಳೂ ಸೃಷ್ಟಿಸಂಪತ್ತುಗಳೂ ಇರುವ ಸ್ಥಳಗಳಿರುವವು. ಆದರೆ ಶಾಸ್ತ್ರೀಯ ಜ್ಞಾನದ ಅಭಾವದ ಮೂಲಕ ಅವೆಲ್ಲ ನಿರರ್ಥಕವಾಗಿವೆ. ಜರ್ಮನ್ ದೇಶದಲ್ಲಿ ಹುಟ್ಟಿದಂಥ ಶಾಸ್ತ್ರೀಯ ಶೋಧಕರೂ ಶಾಸ್ತ್ರೀಯ ಜ್ಞಾನವೂ ನಮ್ಮ ದೇಶದಲ್ಲಿ ಆಗಿಪ್ಪರೆ ನಮ್ಮ ದೇಶದ ಸಂಪತ್ತು ವಿಪುಲ ವಾಗಿ ಅಭಿವೃದ್ಧಿ ಹೊಂದಬಹುದಾಗಿದ್ದಿತು. ನಮ್ಮ ದೇಶದಲ್ಲಿ ಶಾಸ್ತ್ರೀಯ ಶೋಧನ ಕಾರ್ಯವು ಅಸಾಧ್ಯ ಕೋಟಿಯಲ್ಲಿ ಗಣನೆಯಾಗಿಲ್ಲ. ನಮ್ಮಲ್ಲಿಯೂ ಇಂತಹ ಶೋಧಕ ಮಹನೀಯರು ಆಗಿರುವರು. ಯುರೋಪಖಂಡಕ್ಕೆ ಶಾಸ್ತ್ರೀಯ ವಿಷಯ ದಲ್ಲಿಯೂ ತತ್ತ್ವಜ್ಞಾನದಲ್ಲಿಯೂ ಅನೇಕ ಸಂಗತಿಗಳನ್ನು ಕಲಿಸಿದಂಥ ಇಬ್ಬರು ಮಹ ನೀಯರಿಗೆ ಹಿಂದುಸ್ತಾನವು ಜನ್ಮಕೊಟ್ಟಿರುವದು. ಸರ್ ಜಗದೀಶಚಂದ್ರ ಬೋಸರೂ ಡಾ॥ ರವೀಂದ್ರನಾಥ ಠಾಕೂರರೂ ಪರದೇಶದ ಶೋಧಕರು ಅನುಕೂಲ ಸ್ಥಿತಿಯಲ್ಲಿ ಮಾಡಿರುವಂಥ ಮಹತ್ಕಾರ್ಯಗಳನ್ನೇ ಇಲ್ಲಿಯೂ ಮಾಡಿ ತೋರಿಸಿರುವರು.

ಉದ್ಯೋಗ ವ್ಯವಸಾಯಗಳಲ್ಲಿಯೂ ಬುದ್ಧಿ ಶಕ್ತಿಯಲ್ಲಿಯೂ ಮುಂಬಯಿ ಇಲಾ ಖೆಯು ಮಿಕ್ಕ ಭಾಗಗಳಿಗಿಂತ ಕಡಿಮೆ ತರಗತಿಯದೆಂದು ಹೇಳಲು ಕಾರಣವಿಲ್ಲ. ಶೋಧಕರಿಗೆ ಅವಶ್ಯವಾದ ಇತಿಹಾಸ, ಭಾಷೆ, ಸೃಷ್ಟಿಸಂಪತ್ತು ಮುಂತಾದ ಸಾಮಗ್ರಿ ಗಳೂ ಈ ಇಲಾಖೆಯಲ್ಲಿ ಕಡಿಮೆಯಾಗಿಲ್ಲ. ವಿಶ್ವವಿದ್ಯಾಲಯದವರು ಈ ವಿಷಯದಲ್ಲಿ ತಕ್ಕ ನಿಬಂಧನೆಗಳನ್ನು ಮಾಡಿಕೊಂಡು ವಿದ್ಯಾರ್ಥಿಗಳ ಲಕ್ಷ್ಯವನ್ನು ಈ ಕಡೆಗೆ ಆಕ ರ್ಷಿಸಿಕೊಳ್ಳುವದೇ ಮುಖ್ಯ ಮಾತಾಗಿದೆ. ಮತ್ತು ಇಂತಹ ಶೋಧಗಳ ಯೋಗ್ಯ

ವಾದ ಕ್ರಮವನ್ನೇ ಗೊತ್ತುಪಡಿಸುವದೂ ಆವಶ್ಯಕ ಮಾತಾಗಿದೆ. ವಿಶ್ವವಿದ್ಯಾಲಯದ ಚಾಲಕರಲ್ಲಿ ಕೆಲವರು ಈ ವಿಷಯಗಳಲ್ಲಿ ಮನಸ್ಸು ಹಾಕಿದವರಿದ್ದು ಆ ಕೆಲಸದಲ್ಲಿ ತೊಡಗಿದವರಿಗೆ ಅಡಿಗಡಿಗೆ ಒದಗುವಂಥ ತೊಂದರೆಗಳನ್ನು ನಿವಾರಿಸಿ ತಕ್ಕ ಸಹಾಯ ಮಾಡುವದೂ ಒಂದು ಮಹತ್ವದ ಮಾತಾಗಿದೆ. ಶೋಧನಕಾರ್ಯವೂ ದೇಶದ ಒಂದು ಕರ್ತವ್ಯವೆಂದೂ ಕಲಕತ್ತೆ, ಲಖನೌ, ಬನಾರಸ ಮತ್ತು ಅಲೀಗಡ ವಿಶ್ವವಿದ್ಯಾಲಯಗಳಂತೆ ಮುಂಬಯಿ ವಿಶ್ವವಿದ್ಯಾಲಯದಲ್ಲಿಯೂ ವಿದ್ಯಾವಂತರಾದ ಜನರು ಹೊರಟು ಅದರಿಂದ ರಾಜಕೀಯ ಆಡಳಿತೆಗಳಿಗೂ ಹೆಚ್ಚು ಅನುಕೂಲವಾಗುವದೆಂಬ ಸಂಗತಿಯನ್ನೂ ಮುಂಬಯಿಯ ಸರಕಾರದ ದೃಷ್ಟಿಪಥಕ್ಕೂ ತಂದು ಕೊಡಬೇಕು.

ನಮ್ಮ ರಾಜಕೀಯ ಮುಂದಾಳುಗಳಿಗೆ ದೇಶದ ಬೌದ್ಧಿಕ ಪ್ರಗತಿಯೂ ಸ್ವಾತಂತ್ರ್ಯವೂ ಅಂತಿಮ ಧ್ಯೇಯಗಳಾಗಿರುವವು. ಮತ್ತು ಈ ಧ್ಯೇಯದ ಸಾಧನೆಗೆ ನಮ್ಮ ವಿಶ್ವವಿದ್ಯಾಲಯಗಳು ಪ್ರಾಮುಖ್ಯವಾಗಿ ಪ್ರಯತ್ನ ಮಾಡತಕ್ಕದ್ದು. ದಿನದಿನಕ್ಕೆ ಮುಂದಡಿಯಿಡುತ್ತ ನಡೆದಿರುವ ಜಗತ್ತಿನಲ್ಲಿ ಬದುಕಿ ಬಾಳಬೇಕಾಗಿರುವ ನಮ್ಮ ಜನತೆಯೂ ವಿಶ್ವವಿದ್ಯಾಲಯಗಳೂ ಈ ಮಾತನ್ನು ಇನ್ನು ಮುಂದೆ ದುರ್ಲಕ್ಷಿಸುವಂತಿಲ್ಲ. ಕಾರ್ಖಾನರು, ಶಾಲಾ ಶಿಕ್ಷಕರು, ಭಾಷಾಂತರಕಾರರು, ನಕಲು ಮಾಡುವವರು, ಇಂಜನೀಯರರು ಮುಂತಾದವರ ತಂಡವನ್ನು ತಯಾರಿಸುವ ಸಾಲೆ ಕಾಲೇಜಗಳನ್ನು ನೋಡಿ ಈ ವಿಶ್ವವಿದ್ಯಾಲಯದ ಯೋಗ್ಯತೆಯನ್ನು ನಿರ್ಣಯಿಸುವ ಕಾಲವು ಹಿಂದಾಗಿಹೋಗಿದೆ. ಜಗತ್ತಿನ ಜ್ಞಾನಭಾಂಡಾರಕ್ಕೆ ನಮ್ಮಿಂದ ಏನಾದರೂ ಕಾಣಿಕೆಯು ದೊರೆಯಲೇಬೇಕಾಗಿದೆ. ಪರದೇಶಗಳಿಂದ ಬಂದ ಬಟ್ಟೆಗಳಿಂದ ನಮ್ಮ ದೇಶದ ಜನತೆಯ ಶರೀರವನ್ನೂ ಮನಸ್ಸನ್ನೂ ಮುಚ್ಚಿಕೊಂಡು ಜೋಪಾನ ಮಾಡುವ ಸ್ಥಿತಿಯು ಇನ್ನು ಎಷ್ಟು ದಿವಸ ತಾನೆ ನಡೆಯಬೇಕು ? ಜನತೆಯ ಬುದ್ಧಿಶಕ್ತಿಯ ಹಾಗು ನೂತನ ಶೋಧಗಳ ಔಷಧ ಯಂತ್ರಗಳ ಸಾಮಗ್ರಿಗಳು ನೂತನ ಜೀವನಕ್ರಮದ ಸಾಧನಗಳು ಮುಂತಾದವುಗಳ ವಿಷಯದಲ್ಲಿ ಕೇವಲ ಪರಾವಲಂಬಿಯಾಗಿರುವ ದೇಶಕ್ಕೆ ಪರದೇಶದವರು ಕೊಟ್ಟ ಸ್ವರಾಜ್ಯವು ಎಷ್ಟು ಕಾಲ ತಾನೇ ಬಾಳಬಹುದು ? ಇಂಥವರಿಗೆ ಪರರ ಅನುಗ್ರಹದಿಂದ ದೊರೆವ ರಾಜಕೀಯ ಸ್ವಾತಂತ್ರ್ಯವು ಹೇಗೆ ತಾನೇ ಸ್ಥಿರವಾಗಿ ಬಹುದು ?

ಕೊನೆಗೆ, ಮುಂಬಯಿ ವಿಶ್ವವಿದ್ಯಾಲಯದ ಪದವೀಧರರು ತಾವು ತೇಲಂಗ ರಾನಡೆ, ಭಾಂಡಾರಕರ ಮತ್ತು ರಾಜವಾಡೆ ಮುಂತಾದ ಲೋಕಮಾನ್ಯ ವ್ಯಕ್ತಿಗಳ ವಂಶ ಪರಂಪರೆಯಲ್ಲಿ ಸೇರಿದವರೆಂಬ ಅಭಿಮಾನವನ್ನು ಮುಂದಿಟ್ಟುಕೊಂಡು ಕೆಲಸ ಮಾಡಿ ಶ್ರೇಯೋವಂತರಾಗಲೆಂದೂ ತನ್ಮೂಲಕ ಭರತಖಂಡದ ಕಲ್ಯಾಣ ಕರ್ತರಾಗಲೆಂದೂ ಆಶಿಸುವೆನು.

ಮ್ಮ ಪೂರ್ವದ ರಾಜಧಾನಿಯಾದ ಉಜ್ಜಯನಿಯನ್ನು ಬಿಟ್ಟು ಕನೋಜವನ್ನೇ
ಜ್ಯದ ಮುಖ್ಯಪಟ್ಟಣವನ್ನಾಗಿ ಮಾಡಿದರು. ಈ ಅರಸರಿಗೆ ಮುಂದೆ ತೋಮರ
ಂಬ ಹೆಸರು ಉಂಟಾಯಿತು. ಕೆಲಕಾಲ ಇವರು ವೈಭವದಿಂದ ಆಳಿದ ನಂತರ
ಕ್ಷಿಣದ ರಾಷ್ಟ್ರಕೂಟರು ಇವರನ್ನು ಸೋಲಿಸಿದ್ದರಿಂದ ಇವರ ವರ್ಚಸ್ಸು ತೀರ ಕಡಿ
ಯಾಯಿತು.

ಭೋಜನು :—(೮೪೦–೯೦) ಇವರಲ್ಲಿ ಮಿಹಿರ ಪರಿಹಾರನೆಂಬ ಅರಸನು
ೋಜನೆಂದು ಪ್ರಸಿದ್ಧನಾದನು. ಇವನ ಕಾಲಕ್ಕೆ ಬಂದ ಒಬ್ಬ ಅರಬೀ ಪ್ರವಾಸಿಯು
ನೋಜದ ಬಲವಾದ ದಳವನ್ನು ನೋಡಿ ಆಶ್ಚರ್ಯಪಟ್ಟನು. ಅವನ ದಂಡಿನಲ್ಲಿ
ತ್ತಮ ಕುದುರೆಯ ಸವಾರರ ಮತ್ತು ಸಾಂಡಣೇ (ಒಂಟೆಯ) ಸ್ವಾರರ ಪಥಕಗಳ
ವು. ಅರಸನು ಬಹಳ ಶ್ರೀಮಂತನಾಗಿದ್ದನು. ಇವನ ರಾಜ್ಯದಲ್ಲಿ ಕಳ್ಳರ ಭಯವು
ಶೃಷ್ಟಾ ಇದ್ದಿಲ್ಲ. ಇವನು ವರಾಹದೇವರನ್ನೂ ಲಕ್ಷ್ಮೀದೇವಿಯನ್ನೂ ಪೂಜಿಸುತ್ತಿ
ನು. ಆದವರಿಂದ ಇವನ ನಾಣ್ಯದ ಮೇಲೆ ವರಾಹದೇವರ ಚಿತ್ರವೂ ಆದಿವರಾಹ
ಂಬ ಶಬ್ದವೂ ಇರುವವು.

ಮಹೇಂದ್ರಪಾಲನು :— ಭೋಜನ ತರುವಾಯ ಅವನ ಮಗನಾದ ಮಹೇಂ
ಪಾಲನು ಪಟ್ಟಕ್ಕೆ ಕೂತನು. ಇವನ ಕಾಲಕ್ಕೆ ರಾಜಶೇಖರನೆಂಬ ಕವಿಯು ದಕ್ಷಿಣ
ದ ಕನೋಜಕ್ಕೆ ಬಂದು ಮಹೇಂದ್ರಪಾಲನ ಆಶ್ರಯದಲ್ಲಿದ್ದನು. ಅವನು ಕರ್ಪೂರ
ಂಜರೀ ಎಂಬ ನಾಟಕವನ್ನು ಪ್ರಾಕೃತ ಭಾಷೆಯಲ್ಲಿ ಬರೆದನು. ಈ ಕಾಲಕ್ಕೆ ಚಾಂಡೇ
ರು ಬುಂದೇಲಖಂಡದಲ್ಲಿ, ಚವ್ಹಾಣರು ಅಜಮೀರದಲ್ಲಿ, ಪರಮಾರ (ಪವಾರ) ರು
ಾಳವದಲ್ಲಿ ಸ್ವತಂತ್ರರಾಗಿ ಆಳಹತ್ತಿದರು. ಹೀಗೆ ತೋಮರರ ರಾಜ್ಯವು ಕಡಿಮೆಯಾ
ತ್ತ ಹೋಗಿ ದಿಲ್ಲಿಯ ಸುತ್ತಲು ಸ್ವಲ್ಪ ಪ್ರದೇಶವು ಮಾತ್ರ ಅವರ ವಶದಲ್ಲಿ ಉಳಿ
ತು. ನಂತರ ಪೃಥ್ವಿರಾಜನ ಕಾಲಕ್ಕೆ ಅಜಮೀರ ದಿಲ್ಲಿ ರಾಜ್ಯಗಳು ಕೂಡಿ ಒಂದೇ
ಜ್ಯವಾಯಿತು.

೪. **ಚಾಂಡೇಲರು** :—ಇವರ ರಾಜಧಾನಿಯು ಬುಂದೇಲಖಂಡದಲ್ಲಿ
ಹೋಬಾ ಎಂಬ ಪಟ್ಟಣವು. ಕಲಿಂಜರದ ಭದ್ರವಾದ ಕೋಟೆಯು ಇವರ ರಾಜ್ಯದ
ು. ಈ ಪ್ರದೇಶದಲ್ಲಿ ಇವರು ಯಮುನಾನದಿಯಿಂದ ಕಾಲುವೆಗಳನ್ನು ಮಾಡಿಸಿದರು.
ಅರಸರು ಕಟ್ಟಡಗಳನ್ನು ಕಟ್ಟಿಸುವದರಲ್ಲಿ ನಿಪುಣರಿದ್ದರು. ಆದದರಿಂದ ಅಲ್ಲಿ
ೀಕ ಗುಡಿಗಳನ್ನು ಕಟ್ಟಿಸಿದರು. ಈ ವಂತದಲ್ಲಿ ಪ್ರಸಿದ್ಧಿಗೆ ಬಂದ ಅರಸರಲ್ಲಿ **ಧಂಗ**
ಬವನು ಗಿಜನಿಯ ಮುಸಲ್ಮಾನರು ಮೊದಲನೇ ಸಾರಿ ದಾಂಡುಮಾಡಿದಾಗ ಉತ್ತ
ಎಲ್ಲ ಅರಸರನ್ನು ಕೂಡಿಸಿಕೊಂಡು ಮುಸಲ್ಮಾನರ ಕೂಡ ಯುದ್ಧಮಾಡಿ
ೀತನು. ಮತ್ತೊಬ್ಬನಾದ ಕೀರ್ತಿವರ್ಮನು ಚೇದಿ (ಈಗಿನ ಮಧ್ಯಪ್ರಾಂತದ ಉತ್ತರ
ಗ) ಯ ಪ್ರಸಿದ್ಧ ಅರಸನಾದ ಕರ್ಣನನ್ನು ಸೋಲಿಸಿದನು. (ಇ. ಸ. ೧೦೬೦)

ಇವನ ಕಾಲಕ್ಕೆ ವೇದಾಂತದ ತತ್ವಗಳನ್ನು ತಿಳಿಸುವಂಥ ಪ್ರಬೋಧ ಚಂದ್ರೋದ
ವೆಂಬ ನಾಟಕವು ರಚಿತವಾಗಿ ನಟಿಸಲ್ಪಟ್ಟಿತು. (೧೦೬೫) ಮುಂದೆ ಈ ವಂಶದ
ಬಲಹೀನರಾದ್ದರಿಂದ ಮುಸಲ್ಮಾನರಿಗೆ ವಶರಾದರು. ಮೊಂಗೀರ ಜಿಲ್ಲೆಯಲ್ಲಿ ಗಿಧೂ
ರಾಜನು ಈ ವಂಶದವನು.

೫. **ಚೇದಿಯ ರಾಜ್ಯ**:—ಕಲಚೂರಿ ಅಥವಾ ಹೈಹಯವಂಶದವರು ಗೊ
ವರಿ ನರ್ಮದೆಗಳ ನಡುವಿನ ಪ್ರದೇಶದಲ್ಲಿ ಜಬಲಪುರದ ನೆರೆಯಲ್ಲಿ ತ್ರಿಪುರಿ (ತಿವಾ
ಎಂಬ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದರು. ಚೇದಿರಾಜ
ಮಧ್ಯಪ್ರದೇಶವಾದ್ದರಿಂದ ಅಲ್ಲಿಯ ಅರಸರು ಉತ್ತರ ದಕ್ಷಿಣಗಳ ಅರಸರ ಕೂಡ ಮೆ
ದಮೇಲೆ ಯುದ್ಧವಾಡಬೇಕಾಗುತಿತ್ತು. ಇವರಲ್ಲಿ ಪ್ರಸಿದ್ಧನಾದ ಗಾಂಗೇಯಿದೇ
(೧೦೧೫–೪೦) ಉತ್ತರದ ಪ್ರದೇಶವನ್ನು ಗೆದ್ದುಕೊಂಡನು. ಇವನ ಮಗ
ಕರ್ಣನು (೧೦೭೦) ಮಾಳವದ ಪ್ರಸಿದ್ಧ ಅರಸನಾದ ಭೋಜನನ್ನು ಸೋಲಿಸ
ಸಹಾಯವಮಾಡಿದನು. ಆದರೆ ಚಾಂಡೇಲ ಮನೆತನದ ಕೀರ್ತಿವರ್ಮನು ಇವನ
ಸೋಲಿಸಿದನೆಂದು ಹಿಂದೆ ಹೇಳಿದೆ. ೧೩ನೇ ಶತಕದಲ್ಲಿ ವರಂಗಳದ ಗಣಪತಿಯವ
ದೇವಗಿರಿಯ ಯಾದವರೂ ಪ್ರಬಲರಾಗಿ ಗೋದಾವರಿ ದಂಡೆಗಿದ್ದ ಪ್ರದೇಶವನ್ನು
ಚೂರಿ ಮನೆತನದವರಿಂದ ಕಸುಕೊಂಡರು. ಮತ್ತು ವಾಘೆಲಾ ರಜಪೂತರು ನ
ದೆಯ ದಂಡೆಗಿದ್ದ ಪ್ರದೇಶವನ್ನು ಗೆದ್ದರು. ಆದದರಿಂದ ಈಗ ಈ ಪ್ರದೇಶಕ್ಕೆ ಬಘ
ಖಂಡವೆನ್ನುವರು.

೬. **ಮಾಳವದ ಪರಮಾರರು** (ಪವಾರರು) :— ಈ ಅರಸರಿಲ್ಲ
ವಿದ್ವಾಂಸರೂ ವಿದ್ಯಾ ಪಕ್ಷಪಾತಿಗಳೂ ಇದ್ದುದರಿಂದ ಬಹು ವಿಶ್ರುತರಾಗಿದ
ಪೂರ್ವದ ಅವಂತೀ ರಾಜ್ಯವೆಲ್ಲವು ಇವರ ವಶದಲ್ಲಿತ್ತು. ಉಜ್ಜಯಿನಿ ಮತ್ತು ಧ
(ಧಾರಾ ನಗರ) ಇವು ಅವರ ರಾಜಧಾನಿಗಳು. ಇವರಲ್ಲಿ **ಮುಂಜ** (ವಾಕ್ಪತಿ, ೯೭
೯೯೫) ಮತ್ತು **ಭೋಜ** (೧೦೧೦–೧೦೬೦) ರಾಜರು ಪ್ರಸಿದ್ಧರು. ಇವರ ಕಾಲ
ದಕ್ಷಿಣದಲ್ಲಿ ಚಾಲುಕ್ಯರು ಪ್ರಬಲರಾಗಿದ್ದರು. ಅವರು ಮುಂಜರಾಜನ ಸಂಗಡ ಗೋ
ವರಿ ದಂಡೆಗೆ ಯುದ್ಧ ಮಾಡಿ ಅವನನ್ನು ಪೂರ್ಣವಾಗಿ ಸೋಲಿಸಿದರು. ಭೋ
ರಾಜನ ಸಭೆಯಲ್ಲಿ ಅನೇಕ ಪಂಡಿತರೂ ಕವಿಗಳೂ ಇದ್ದರು. ಇವನು ಧಾರಾನಗರ
ಅನೇಕ ಸುಂದರವಾದ ಕಟ್ಟಡಗಳನ್ನು ಕಟ್ಟಿಸಿದನು. ಆದರೆ ೧೦೬೦ ರಲ್ಲಿ ಚೆ
ಗುಜರಾತಗಳ ಅರಸರು ಇವನನ್ನು ಸೋಲಿಸಿದರು. ನಂತರ ಪರಮಾರರ ಬೆ
ಕಡಿಮೆಯಾಯಿತು.

೭. **ಬಿಹಾರ ಬಂಗಾಲಗಳ ಪಾಲರೂ ಸೇನರೂ**:— ಹರ್ಷನ
ನಾಯ ಬಂಗಾಲದಲ್ಲಿ ಆಳಿದ ಅರಸರಲ್ಲಿ **ಆದಿಶೂರ**ನೆಂಬವನು ಪ್ರಸಿದ್ಧನಿದ್ದ

ನು ೭೦೦ನೇ ಇಸವಿಯ ಸುಮಾರಕ್ಕೆ ಆಳಿದಂತೆ ತೋರುತ್ತದೆ. ಆದಿಶೂರನು ಹ್ಮಣ ಧರ್ಮದ ಪಕ್ಷಪಾತಿಯಾಗಿದ್ದನು. ಇವನ ರಾಜಧಾನಿಯು ಗೌರ ಅಥವಾ ಣಾವತಿ ಎಂಬದು.

ಆದಿಶೂರನ ನಂತರ ಎಷ್ಟೋ ವರ್ಷಗಳಾದ ಮೇಲೆ ಪಾಲ ಮನೆತನದ ಅರ ು ಆಳಹತ್ತಿದರು. ಅವರಲ್ಲಿ **ಧರ್ಮಪಾಲನು** ಲಗಿಂನೇ ಇಸವಿಯ ಸುಮಾರಕ್ಕೆ ೋಜದ ಅರಸನನ್ನು ಪಟ್ಟದಿಂದ ತಳ್ಳಿ ಉತ್ತರ ಹಿಂದುಸ್ತಾನವನ್ನೆಲ್ಲ ಕೈವಶ ಮಾಡಿ ಂಡನು. ಪಾಲರು ಬೌದ್ಧ ಧರ್ಮದ ಪುರಸ್ಕರ್ತರಾಗಿದ್ದರು. ಧರ್ಮ ಪಾಲನು ಮಶಿಲಾ (ಈಗಿನ ಭಾಗಲಪುರ ಜಿಲ್ಲೆಯಲ್ಲಿ ಪಥರ ಘಾಟ) ಎಂಬಲ್ಲಿ ಬೌದ್ಧ ನನ್ನೂ ವಿದ್ಯಾಪೀಠವನ್ನೂ ಸ್ಥಾಪಿಸಿದನು.

ಪಾಲವಂಶದ ೯ನೇಯವನಾದ **ಮಹೀಪಾಲನು** ೯೭೮ ರಿಂದ ೧೦೩೮ ರವರೆಗೆ ನನು. ಇ. ಸ. ೧೦೨೩ರಲ್ಲಿ ರಾಜೇಂದ್ರ ಚೋಳನು ಉತ್ತರಕ್ಕೆ ಬಂದು ಇವನ ್ಯವನ್ನು ಸುಲಿದನು.

ಸೇನ ವಂಶದಲ್ಲಿ ಬಲ್ಲಾಳ ಸೇನನೆಂಬವನು ೧೧೦೬ ರಿಂದ ೧೧೧೯ ರವರೆಗೆ ನನು. ಈ ವಂಶದವರು ದಕ್ಷಿಣದ ಬ್ರಾಹ್ಮಣರೆಂದೂ ಚೋಳರಾಜನಕೂಡ ಬಂಗಾ ಬಂದು **ಅಲ್ಲಿ ವಾಸವಾಗಿ** ಪ್ರಬಲರಾದರೆಂದೂ ಕಂಡು ಬರುತ್ತದೆ. ಕಾಯಸ್ಥ, ್ಯರೆಂಬ ಜಾತಿಗಳು ಬಂಗಾಲದಲ್ಲಿ ಇವರ **ಕಾಲದಲ್ಲಿಯೇ** ಉಂಟಾದವು.

೮. **ಮುಸಲ್ಮಾನರ ದಾಳಿ**:— ಇ. ಸ. ೯೮೬-೯೭ ರಲ್ಲಿ ಗಿಜನಿಯ ಾರನಾದ **ಸಬಕ್ತಗೀನನು** ಮೊದಲನೇ ಸಾರಿ ಹಿಂದುಸ್ತಾನ ಮೇಲೆ ದೌಡು ಡಿದನು. ಪಂಜಾಬದ ಜಯಪಾಲ ರಾಜನು **ಅವನೆ** ಸಂಗಡ ಯುದ್ಧ ಮಾಡಿದನು. ರ್ಷಗಳ ನಂತರ ಮತ್ತೆ ಸಬಕ್ತಗೀನನು ಎರಡನೇ ಸಾರೆ ದೌಡು ಮಾಡಲು ಜಯ ನು ಕನೋಜ ಮತ್ತು ಚಾಂಡೇಲಗಳ ಅರಸರನ್ನು ಕೂಡಿಸಿಕೊಂಡು ಅವನ ಕೂಡ ಸ್ಥ **ಹೂಡಿದನು**. ಆದರೆ ಯುದ್ಧದಲ್ಲಿ ಸೋತನು.

ಸುಲ್ತಾನ ಮಹಮೂದನು:—ಸಬಕ್ತಗೀನನು ತೀರಿಕೊಂಡ ನಂತರ ಮಹ ದನು ಸುಲ್ತಾನ ಎಂಬ ಬಿರುದು ಧರಿಸಿ ೯೯೭ ರಲ್ಲಿ ಪಟ್ಟಕ್ಕೆ ಕೂತನು. ಇವನು ುಲ್ತಾನೀ ಧರ್ಮದ ಅಭಿಮಾನಿಯಾಗಿದ್ದು ಒಳ್ಳೇ ಸಾಹಸಿಯೂ ಪರಾಕ್ರಮಿಯೂ ದ್ದನು. ಹಿಂದುಸ್ತಾನದ ಮೇಲೆ ದೌಡು ಮಾಡಿ ಸಂಪತ್ತು ಗಳಿಸಬೇಕೆಂದು ನಿಶ್ಚೈಸಿ ಮೂದನು ೧೦೦೧ ರಲ್ಲಿ ಹಿಂದುಸ್ತಾನಕ್ಕೆ ದಂಡೆತ್ತಿ ಬಂದು ಜಯಪಾಲನನ್ನು ಾವರದ ಹತ್ತರ ಸೋಲಿಸಿದನು; ಮತ್ತು ಅವನನ್ನೂ ಅವನ ಕುಟುಂಬದವರನ್ನೂ ುಲ್ಲಿಟ್ಟು ಬಹಳ ಹಣ ತೆಗೆದುಕೊಂಡು ಅವರನ್ನು ಬಿಡುಗಡೆ ಮಾಡಿದನು. ಈ ಮಾನವನ್ನು ಸಹಿಸಲಾರದೆ ಜಯಪಾಲನು ತನ್ನ ಮಗನಾದ ಆನಂದಪಾಲನಿಗೆ ್ಯವನ್ನು ಒಪ್ಪಿಸಿ ಚಿತೆಯಲ್ಲಿ ಸುಟ್ಟುಕೊಂಡು ಸತ್ತನು.

ಮಹಮೂದನು ಚಳಿಗಾಲದ ಪ್ರಾರಂಭಕ್ಕೆ ಗಿಜನಿಯಿಂದ ಹೊರಟು ಹಿಂ
ಸ್ತಾನಕ್ಕೆ ಬರುತ್ತಿದ್ದನು. ಮತ್ತೆ ೧೦೦೮ರ ನಂತರ ದೌಡು ಮಾಡಿದಾಗ ಆನಂದ
ಲನು ಉಜ್ಜಯಿನಿ, ಗ್ವಾಲೇರ, ಕನೋಜ, ದಿಲ್ಲಿ, ಅಜಮೀರಗಳ ಅರಸರನ್ನು ಕೂಡಿ
ದೊಡ್ಡ ದಂಡಿನೊಡನೆ ಪೇಶಾವರದ ಹತ್ತರ ಮಹಮೂದನಿಗೆ ಎದುರಾದನು. ಆ
ಭದಲ್ಲಿ ಹಿಂದು ಜನರು ಹುರುಪಿನಿಂದ ಮುಸಲ್ಮಾನ ದಂಡಿನ ಮೇಲೆ ಸಾಗಿ ಹೋ
ಸ್ವಲ್ಪ ನಿಮಿಷಗಳಲ್ಲಿಯೇ ಅವರಲ್ಲಿ ೩—೪ ಸಾವಿರ ಜನರನ್ನು ಕೊಂದುಹಾಕಿದರ
ಹೀಗೆ ಜಯವು ಹಿಂದುಗಳಿಗೆ ಸಿಗುವದೆನ್ನುವಷ್ಟರಲ್ಲಿಯೇ ಆನಂದಪಾಲನು ಏರಿದ ಆ
ಯು ಬೆದರಿ ಓಡಿಹೋಯಿತು. ಅದನ್ನು ನೋಡಿ ಹಿಂದು ಸೈನಿಕರು ಓಡಹತ್ತಿದರ
ಈ ಸಂಧಿಯನ್ನು ಸಾಧಿಸಿ ಮುಸಲ್ಮಾನ ಸವಾರರು ಹಿಂದು ಸೈನ್ಯವನ್ನು ಬಿನ್ನಭ್ಯ
ಸಾವಿರ ಜನರನ್ನು ಕೊಂದದ್ದಲ್ಲದೆ ಅಪರಿಮಿತ ದ್ರವ್ಯವನ್ನು ಒಯ್ದರು.

೧೦೧೮ರಲ್ಲಿ ಮಹಮೂದನು ಕಾಂಗ್ರಾ ಅಥವಾ ಭೀಮನಗರ, ಮಥುರಾ, ಕನೌ
ಜಗಳ ಗುಡಿಗಳನ್ನು ಸುಲಿದು ಬೆಳ್ಳಿ, ಬಂಗಾರ, ಮುತ್ತು, ವಜ್ರ, ವೈಡೂರ್ಯ, ಪಚ
ಗಳನ್ನು ಹೇರಿಕೊಂಡು ಸ್ವದೇಶಕ್ಕೆ ಹೋದನು.

ಮತ್ತೆ ೧೦೨೪ ರಲ್ಲಿ ಕಾಠೇವಾಡದಲ್ಲಿದ್ದ ಸೋಮನಾಥ ಅಥವಾ ಪ್ರಭಾಸ ಪಟ
ಣದ ಪ್ರಸಿದ್ಧ ದೇವಾಲಯವನ್ನು ಸುಲಿದು ಹೇರಳ ದ್ರವ್ಯವನ್ನು ಒಯ್ದನು. ಹಿಂದ
ಜನರು ಶೂರತನದ ಪರಮಾವಧಿಯನ್ನು ತೋರಿಸಿದರು. ಮತ್ತು ೫೦,೦೦೦ ಜನರ
ಗುಡಿಯ ಸುತ್ತಲು ಮಡಿದರು

ಮಹಮೂದನ ಕಾಲದಲ್ಲಿ ಫಿರ್ದೂಸಿ ಕವಿಯು ಪಾರ್ಸೀ ಭಾಷೆಯಲ್ಲಿ ಶಹ
ನಾಮಾ ಎಂಬ ಕಾರ್ಯವನ್ನು ಬರೆದನು.

೯. **ಆಲ್ಬೆರೂನಿ**:— (೯೭೩—೧೦೪೮) ಮಹಮೂದನ ದರಬಾರಿನಲ್ಲಿ ಆಲ್ಬೆ
ರೂನಿಯು ವಿಖ್ಯಾತನಾದ ಪಂಡಿತನೂ ಅಗಾಧ ಶಾಸ್ತ್ರಜ್ಞನೂ ಆಗಿದ್ದನು. ಅವನ
ಸುಲ್ತಾನನ ಸಂಗಡ ಹಿಂದುಸ್ತಾನಕ್ಕೆ ಬಂದು ಹೊಸದಾಗಿ ಗೆದ್ದುಕೊಂಡ ಪಂಜಾಬ
ಪ್ರಾಂತದಲ್ಲಿ ಇದ್ದು ಸಂಸ್ಕೃತವನ್ನು ಅಭ್ಯಾಸಿಸಿ ಹಿಂದು ತತ್ವಜ್ಞಾನವನ್ನು ಅರಿತ
ಕೊಂಡನು. ಅವನು ಹಿಂದುಸ್ತಾನದ ಜನರ ಪರಂಪರೆ, ನಡೆನುಡಿ, ಧಾರ್ಮಿಕ ವಿಚಾರ
ವೊದಲಾದವುಗಳ ವಿಷಯಕ್ಕೆ ನಿಷ್ಪಕ್ಷಪಾತ ಬುದ್ಧಿಯಿಂದ ವಿಸ್ತೃತವಾದ ಗ್ರಂಥವನ್ನು
ಬರೆದಿಟ್ಟಿದ್ದಾನೆ. ಭಗವದ್ಗೀತೆಯ ವಿಷಯಕ್ಕೆ ಅವನ ಪ್ರೇಮವು ಅವರ್ಣನೀಯವಾಗಿತ್ತು
ಅವನು ಬರೆದ ಗ್ರಂಥದ ವಿಷಯಕ್ಕೆ ಒಬ್ಬ ವಿದ್ವಾಂಸನು ಅನ್ನುವದೇನಂದರೆ—

ಆಗಿನ ಕಾಲಕ್ಕೆ ಎಲ್ಲಿ ನೋಡಿದಲ್ಲಿ ಕತ್ತಿಗಳ ಕಡಕಡಾಟವೂ, ಪಟ್ಟಣಗಳ
ಸುಡೋಣವೂ, ಗುಡಿಗಳ ಸುಲಿಯೋಣವೂ ನಡೆದಿದ್ದರೂ ಆಲ್ಬೆರೂನಿಯು (ಹಿಂದುಸ್ತಾ

ನದ ಇತಿಹಾಸದ) ಶೋಧದ ಕೆಲಸವನ್ನು ಶಾಂತಮನಸ್ಕನಾಗಿ ಮಾಡಿದ್ದು ನೋಡಿದರೆ ಅತ್ಯಗಾಧವಾಗುತ್ತದೆ.'

ಅವನು ಜ್ಯೋತಿಷ, ಗಣಿತ, ಕಾಲಮಾಪನ, ಭೂಗೋಲ, ಪದಾರ್ಥವಿಜ್ಞಾನ, ರಸಾಯನ, ಖನಿಜಶಾಸ್ತ್ರಗಳಲ್ಲಿ ನಿಷ್ಣಾತನಿದ್ದು ಈ ಶಾಸ್ತ್ರಗಳ ಮೇಲೆ ಅವನು ಬರೆದ ಗ್ರಂಥಗಳು ವಿದ್ವಾಂಸರಿಗೆ ಸಹ ಭಾಷಾಂತರಿಸಲಿಕ್ಕೆ ಕಠಿಣವಾಗಿರುವವು.

೧೦. **ಕನೋಜದ ಗಹರವಾರರು**:— ಕನೋಜದ ಪರಿಹಾರ ವಂಶವು ಲಯವಾದ ಮೇಲೆ ಗಹರವಾರ ವಂಶದವರು ೧೦೯೦ ರಲ್ಲಿ ಪಟ್ಟಕ್ಕೆ ಕೂತರು. ಈ ಮನೆತನದಲ್ಲಿ ಗೋವಿಂದ ಚಂದ್ರನೆಂಬವನು ೧೧೦೦–೧೧೫೦ ರ ವರೆಗೆ ಆಳಿದನು. ಇವನು ಕನೋಜರಾಜ್ಯದ ವಿಸ್ತಾರವನ್ನೂ ವೈಭವವನ್ನೂ ಬಹಳ ಬೆಳಿಸಿದನು. ಇವನು ಕೊರಿಸಿದ ಶಿಲಾಶಾಸನಗಳು ಈಗ್ಯೂ ಅನೇಕವಿರುವವು.

ರಾಜಾಜಯಚಂದ:—ಇವನ ಮೊಮ್ಮಗನಾದ ಜಯಚಂದ (ಜಯಚಂದ್ರ) ನು ಆಗಿನ ಕಾಲಕ್ಕೆ ಹಿಂದುಸ್ತಾನದಲ್ಲಿ ಅತಿಪ್ರಸಿದ್ಧ ಅರಸನಾಗಿದ್ದನು. ಅವನ ರಾಜಧಾನಿಯು ಕಾಶೀಪಟ್ಟಣವಾಗಿತ್ತು. ಇವನ ಮಗಳಾದ ಸಂಯುಕ್ತೆಯನ್ನು ಸ್ವಯಂವರದ ಕಾಲಕ್ಕೆ ಅಜಮೀರದ ಪೃಥ್ವೀರಾಜನು ಓಡಿಸಿಕೊಂಡು ಹೋದದ್ದು ಪ್ರಸಿದ್ಧವದೆ.

೧೧೯೪ ರಲ್ಲಿ ಘೋರದ ಮಹಮ್ಮದನು ಹಿಂದುಸ್ತಾನಕ್ಕೆ ದಂಡೆತ್ತಿ ಬಂದಾಗ ಜಯಚಂದನನ್ನು ಯಮುನಾನದಿಯ ದಂಡೆಯ ಮೇಲೆ ಚಂದ್ರಾವರ ಎಂಬಲ್ಲಿ ಸೋಲಿಸಿದನು. ಈ ಯುದ್ಧದಲ್ಲಿ ಜಯಚಂದನು ತೀರಿಹೋದನು.

೧೧. **ಅಜಮೀರದ ಚವ್ಹಾಣರು**:— ಇವರಲ್ಲಿ ಪೃಥ್ವೀರಾಜನು ಪ್ರಸಿದ್ಧನು. ಇ. ಸ. ೧೧೭೮ ರ ಸುಮಾರಿಗೆ ಕನೋಜದ ಅರಸನ ಮಗಳನ್ನು ಓಡಿಸಿಕೊಂಡು ಬಂದನೆಂದು ಹಿಂದೆ ಹೇಳಿದ್ದೇವೆ. ಇವನು ೧೧೮೬ ರಲ್ಲಿ ಚಾಂಡೇಲರನ್ನು ಸೋಲಿಸಿದನು. ೧೦ ವರ್ಷಗಳ ನಂತರ ಘೋರದ ಮಹಮ್ಮದನು ಹಿಂದುಸ್ತಾನದ ಮೇಲೆ ದೌಡು ಮಾಡಿದಾಗ ಸೋತು ಯುದ್ಧದಲ್ಲಿ ಮಡಿದನು. ತಾಯಿಯಿಂದ ಇವನಿಗೆ ತೋಮರರ ದಿಲ್ಲೀರಾಜ್ಯವು ಸಿಕ್ಕಿತ್ತು.

ಪೃಥ್ವೀರಾಜನು ಶೂರನೂ ಉದಾರಸ್ವಭಾವದವನೂ ಆಗಿದ್ದನು. ಇವನ ಸಭೆಯಲ್ಲಿದ್ದ ಚಾಂದಬನದಾಯೀ ಎಂಬವನು ಇವನ ಸಮಗ್ರ ಚರಿತ್ರವನ್ನು ಚಾಂದರಾಯಿಸಾ ಎಂಬ ಹಿಂದೀಗ್ರಂಥದಲ್ಲಿ ಬರೆದಿರುವನು. ಅದರಲ್ಲಿ ಮೊದಲು ೫೦೦೦ ಕವಿತೆಗಳಿದ್ದು ಅವು ಬೆಳೆಯುತ್ತ ೧ ಲಕ್ಷದ ಮೇಲೆ ಆಗಿವೆ.

೧೨. **ಕಾಶ್ಮೀರದ ಅರಸರು**:— ಒನೇಶತಕದಲ್ಲಿ ಈ ಮನೆತನದಲ್ಲಿ ಪ್ರಸಿದ್ಧನಾದವನೆಂದರೆ ಲಲಿತಾದಿತ್ಯನು (ಮುಕ್ತಾಪೀಡನು). ಇವನು ೬೩೦ ನೆ ಸುಮಾರಿಗೆ

ಇದ್ದಂತೆ ತಿಳಿಯುತ್ತದೆ. ಇವನು ಪಂಜಾಬ, ಕನೋಜ, ದಾರ್ಬಸ್ತಾನ, ಕಾಬೂಲಗಳನ್ನು ಗೆದ್ದು ತನ್ನ ರಾಜ್ಯದ ವಿಸ್ತಾರವನ್ನು ಬೆಳಿಸಿದನು. ೧೩ನೇ ಶತಕದಲ್ಲಿ ಜಯಸಿಂಹನೆಂಬ ಅರಸನು ಪ್ರಸಿದ್ಧನಾದನು. ಅವನು ೧೧೭೭ ಶಕರ ವರೆಗೆ ಆಳಿದನು. ಇವನ ಕಾಲಕ್ಕೆ ಆಗಿಹೋದ ಕಲ್ಹಣನೆಂಬ ಕವಿಯು ರಾಜತರಂಗಿಣಿ ಎಂಬ ಗ್ರಂಥವನ್ನು ಬರೆದನು. ಅದರಲ್ಲಿ ಕಾಶ್ಮೀರದ ಅರಸರ ಚರಿತ್ರವಿರುವದು.

ಮುಂದೆ ೧೩೪೦ ರಲ್ಲಿ ಶಹಾ ಅಮೀರನೆಂಬವನು ಕಾಶ್ಮೀರವನ್ನು ವಶಮಾಡಿಕೊಂಡನು. ಅವನ ವಂಶದವರು ಅಕಬರನ ಕಾಲದ ವರೆಗೆ ಆಳಿದರು.

ಈ ಕಾಲದ ಮುಖ್ಯ ಸಂಗತಿಗಳು

ಇ. ಸ.	
೬೪೭	ಹರ್ಷನ ಮರಣ
೭೦೦	ಬಂಗಾಲದಲ್ಲಿ ಆದಿಸುರನು ಆಳಹತ್ತಿದ್ದು
೭೧೨	ಅರಬರು ಸಿಂಧಪ್ರಾಂತವನ್ನು ಗೆದ್ದುಕೊಂಡದ್ದು
೭೫೧	ಕನೋಜದ ಅರಸನಾದ ಯಶೋವರ್ಮನು ಚೀನಕ್ಕೆ ರಾಯಭಾರಿಗಳನ್ನು ಕಳುಹಿಸಿದ್ದು
೭೫೫-೭೬೯	ಕಾಶ್ಮೀರದ ಲಲಿತಾದಿತ್ಯನ ಆಳಿಕೆ
೭೪೦	ಕಾಶ್ಮೀರದ ಅರಸನಾದ ಲಲಿತಾದಿತ್ಯನು ಯಶೋವರ್ಮನನ್ನು ಸೋಲಿಸಿದ್ದು
೭೫೦	ಗೋಪಾಲನು ಬಂಗಾಲದಲ್ಲಿ ಪಾಲವಂಶವನ್ನು ಸ್ಥಾಪಿಸಿದ್ದು
೮೧೦	ಬಂಗಾಲದ ಧರ್ಮಪಾಲನು ಕನೋಜದ ಒಬ್ಬ ಅರಸನನ್ನು ತಳ್ಳಿ ಮತ್ತೊಬ್ಬನನ್ನು ಪಟ್ಟಕ್ಕೆ ಕೂಡ್ರಿಸಿದನು
೮೧೬	ಪರಮಾರ ವಂಶದವರು ಧಿನಮಾಳದಿಂದ ಕನೋಜಕ್ಕೆ ರಾಜಧಾನಿಯನ್ನು ಒಯ್ದದ್ದು
೮೫೦-೯೦	ಕನೋಜದ ಭೋಜ ಅಥವಾ ಮಿಹಿರನು ಆಳಿದ್ದು
೯೬೩-೪	ದಿಲ್ಲಿಯ ಸ್ಥಾಪನೆ
೯೪೨-೯೬	ಗುಜರಾಥದಲ್ಲಿ ಮೂಲರಾಜನ ಆಳಿಕೆ
೯೫೦-೯೯	ಚಾಂಡೇಲ ಮನೆತನದ ಪ್ರಸಿದ್ಧ ಅರಸನಾದ ಢಂಗನ ಆಳಿಕೆ
೯೭೩-೧೦೪೮	ಪ್ರಸಿದ್ಧ ಮುಸಲ್ಮಾನೀ ಗ್ರಂಥಕಾರನಾದ ಆಲ್ಬೆರೂನಿಯ ಕಾಲ
೯೯೭	ಸುಲ್ತಾನ ಮಹಮೂದನು ಗಿಜನಿಯಲ್ಲಿ ಪಟ್ಟಕ್ಕೆ ಕೂತದ್ದು
೧೦೧೦	,, ,, ಜಯಪಾಲನನ್ನು ಸೋಲಿಸಿದ್ದು

೧೦೦೮–೧೯ „ „ ಆನಂದಪಾಲನನ್ನು ಸೋಲಿಸಿ ಕಾಂಗ್ರ ತೆಗೆದು ಕೊಂಡದ್ದು

೧೦೧೮–೧೯ „ „ ಕನೋಜವನ್ನು ಗೆದ್ದುಕೊಂಡದ್ದು

೧೦೧೮–೬೦ ಮಾಳವದಲ್ಲಿ ಪವಾರ ವಂಶದ ಭೋಜರಾಜನು ಆಳಿದ್ದು

೧೦೨೩ ಬಂಗಾಲದಲ್ಲಿ ರಾಜೇಂದ್ರಚೋಳನು ದಾಳೀಮಾಡಿದ್ದು

೧೦೨೩–೨೬ ಸುಲ್ತಾನ ಮಹಮೂದನು ಸೋಮನಾಥವನ್ನು ಸುಲಿದದ್ದು

೧೦೩೦ „ „ ಸತ್ತದ್ದು

೧೦೩೮ ಬಂಗಾಲದ ಅರಸನಾದ ನಯಪಾಲನು ಅತೀಸಾ ಎಂಬವನನ್ನು ತಿಬೇಟಕ್ಕೆ ಬೌದ್ಧಧರ್ಮ ಪ್ರಸಾರಕ್ಕಾಗಿ ಕಳುಹಿಸಿದನು

೧೦೪೯-೧೧೦೦ ಚಾಂಡೇಲ ಅರಸನಾದ ಕೀರ್ತಿವರ್ಮನ ಆಳಿಕೆ

೧೧೦೦–೬೦ ಕನೋಜದ ಗೋವಿಂದಚಂದ್ರನ ಆಳಿಕೆ

೧೧೦೮–೧೯ ಬಲ್ಲಾಳ ಸೇನನು ಬಂಗಾಲದ ಒಂದು ಭಾಗದಲ್ಲಿ ಆಳುತ್ತಿದ್ದದ್ದು

೧೧೮೨ ಪೃಥ್ವೀರಾಜನು ಚಾಂಡೇಲದ ಪರಮಾಲನನ್ನು ಸೋಲಿಸಿದ್ದು

೧೧೯೨ ಪೃಥ್ವೀರಾಜನ ಸೋಲು ಮತ್ತು ಮರಣ

೧೭ನೇ ಅಧ್ಯಾಯ

ಈ ಕಾಲದ ಪರಿಸ್ಥಿತಿ

ಧಾರ್ಮಿಕ ವಿಚಾರ:— ಹರ್ಷ ಮಹಾರಾಜನ ಮರಣದನಂತರ ಆಗಿ ಹೋದ ೫೦೦ ವರ್ಷಗಳಲ್ಲಿ ಹಿಂದುಸ್ತಾನದ ಜನರ ಧಾರ್ಮಿಕ ವಿಚಾರದಲ್ಲಿ ಏನೇನು ಹೆಚ್ಚುಕಡಿಮೆಗಳಾದವೆಂಬದನ್ನು ತಿಳಿದುಕೊಳ್ಳುವದು ಅವಶ್ಯವಾಗಿದೆ. ಈ ಕಾಲದಲ್ಲಿ ಬೌದ್ಧಧರ್ಮವು ಕಳೆಗುಂದಿ ಹಿಂದು ಧರ್ಮಕ್ಕೆ ಪ್ರಾಬಲ್ಯವು ವಿಶೇಷವಾಯಿತು. ಮುಸಲ್ಮಾನೀ ಧರ್ಮವು ಹಿಂದುಸ್ತಾನದಲ್ಲಿ ಪ್ರವೇಶವಾಯಿತು. ರಜಪೂತರ ಉದಯವಾದದರಿಂದ ಹಿಂದು ಧರ್ಮಕ್ಕೆ ರಾಜಾಶ್ರಯವು ದೊರೆಯಿತು. ಆದರೆ ರಜಪೂತರು ಜೈನರಿಗೂ ಬೌದ್ಧರಿಗೂ ಯಾವ ಪ್ರಕಾರದ ಹಿಂಸೆಯನ್ನು ಮಾಡಲಿಲ್ಲ. ಈ ಕಾಲದಲ್ಲಿ ಕೆಲವು ಜೈನ ಧರ್ಮಗ್ರಂಥಗಳು ಬರೆಯಲ್ಪಟ್ಟವು.

ಬೌದ್ಧ ಧರ್ಮವು ಕಳೆಗುಂದಲಿಕ್ಕೆ ಅನೇಕ ಕಾರಣಗಳುಂಟಾದವು. ಬುದ್ಧ ಅಶೋಕ ಕನಿಷ್ಕರ ಕಾಲದ ಸಾತ್ವಿಕ ಧರ್ಮಾಚರಣೆಯು ಬದಲು ಅನೇಕ ಪ್ರಕಾರದ ಪೂಜಾ ವಿಧಾನಗಳೂ ಉತ್ಸವಗಳೂ ರೂಢಿಯಲ್ಲಿ ಬಂದದರಿಂದ ಬೌದ್ಧಧರ್ಮದ ಉಚ್ಚ ಸ್ವರೂಪವು ಇಲ್ಲದಂತಾಯಿತು. ಧರ್ಮಸಂಘದಲ್ಲಿ ಗೃಹಸ್ಥರಿಗಿಂತ ವೈದಿಕರಿಗೆ ಕೆಚ್ಚು ಮನ್ನಣೆಯಿದ್ದದರಿಂದ ಸಾಮಾನ್ಯ ಜನರು ಧರ್ಮ ಸಂಘವನ್ನು ಸೇರಲಿಕ್ಕೆ ಒಪ್ಪದಂತಾದರು. ಬೌದ್ಧ ಧರ್ಮದಲ್ಲಿ ಸಾಮಾನ್ಯ ಜನರಿಗೆ ರುಚಿಸುವಂಥ ವಿಧಾನಗಳನ್ನು ಹಿಂದು ಧರ್ಮದಲ್ಲಿ ಸೇರಿಸಿದ್ದರಿಂದ ಹಿಂದುಧರ್ಮವೇ ಹೆಚ್ಚು ಜನ ಪ್ರಿಯವಾಯಿತು. ಕುಮಾರಿಲಭಟ್ಟ ಮತ್ತು ಶಂಕರಾಚಾರ್ಯರ ಉಪದೇಶದಿಂದಲೂ ಗ್ರಂಥಗಳಿಂದಲೂ ಎಷ್ಟೋ ಜನರ ಮನಸ್ಸು ಹಿಂದು ಧರ್ಮದ ಕಡೆಗೆ ಒಲಿಯಿತು. ಆದರೆ ಹಿಂದು ಧರ್ಮದ ಸ್ವರೂಪದಲ್ಲಿ ಎಷ್ಟೋ ಹೆಚ್ಚು ಕಡಿಮೆಗಳಾದವು. ಮೊದಲು ಶಿವ, ವಿಷ್ಣು, ಸೂರ್ಯ ದೇವತೆಗಳ ಪೂಜೆಯನ್ನು ಮಾಡುತ್ತಿದ್ದರು. ಮುಂದೆ ೧೧ನೇ ಶತಕದಲ್ಲಿ ಕಾಲಿ, ದೇವಿ, ಗಣಪತಿ, ಸ್ಕಂದ (ಷಣ್ಮುಖ) ಮುಂತಾದ ದೇವತೆಗಳ ಪೂಜೆಯನ್ನು ಮಾಡಹತ್ತಿದರು. ಮತ್ತು ಶಕ್ತಿಯ ಉಪಾಸನೆಯು ಹೆಚ್ಚಾಗಿ ಪಶುಬಲಿ, ಮದ್ಯಪಾನ ಮೊದಲಾದ ಅನಿಷ್ಟ ಪ್ರಕಾರಗಳು ರೂಢಿಯಲ್ಲಿ ಬಂದವು. ಅನೇಕ ಜಾತಿಗಳು ತಲೆದೋರಿದ್ದರಿಂದ ಜಾತಿ ಜಾತಿಗಳಲ್ಲಿ ಮತ್ಸರವುಂಟಾಗಿ ಧರ್ಮದ ನಿಜ ಸ್ವರೂಪವನ್ನು ಜನರು ಮರೆತುಬಿಟ್ಟರು.

ಕುಮಾರಿಲಭಟ್ಟ:— ೮ನೇ ಶತಕದ ಪ್ರಾರಂಭದಲ್ಲಿ ಪ್ರಸಿದ್ಧನಾಗಿ ಹೋದ ಕುಮಾರಿಲಭಟ್ಟನು ಬೌದ್ಧ ಜೈನ ಧರ್ಮಗಳ ವಿರುದ್ಧವಾಗಿ ಜನರಿಗೆ ಉಪದೇಶಿಸಿ ಹಿಂದುಧರ್ಮದ ಕಡೆಗೆ ಅವರ ಮನಸ್ಸನ್ನು ತಿರುಗಿಸಿದನು. ವೈದಿಕ ಪದ್ಧತಿಯಂತೆ

ಯುಷ್ಟ್ಯಯಾಗಾದಿಗಳನ್ನು ಮಾಡುವದು ಅವಶ್ಯವೆಂದು ಪ್ರತಿಪಾದಿಸಿದನು. ಇವನು ಪೂರ್ವ ಮೀಮಾಂಸಾ ಶಾಸ್ತ್ರದಲ್ಲಿ ಹೇಳಿದ ತತ್ವಗಳನ್ನು ಉಪದೇಶಿಸಿದನು.

ಶಂಕರಾಚಾರ್ಯರ:— (೭೮೮–೮೨೦)! ಹಿಂದುಸ್ತಾನದ ಇತಿಹಾಸದಲ್ಲಿ ಧಾರ್ಮಿಕ ಜಾಗ್ರತಿಯನ್ನುಂಟು ಮಾಡಿದವರಲ್ಲಿ ಶಂಕರಾಚಾರ್ಯನು ಬುದ್ಧ ಮಹಾವೀರರಷ್ಟು ವಿಖ್ಯಾತನಾಗಿ ಹೋದನು. ಅವನು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದನು. ಬಾದರಾಯಣನ ಬ್ರಹ್ಮಸೂತ್ರಗಳಿಗೆ ವಿಸ್ತೃತವಾದ ಟೀಕೆಯನ್ನು ಬರೆದು ಬೌದ್ಧ ಜೈನಮತಗಳ ಪ್ರಾಬಲ್ಯವನ್ನು ಅಡಗಿಸಿ ಬಿಟ್ಟನು. ಹಿಂದುಸ್ತಾನದಲ್ಲೆಲ್ಲ ಸಂಚಾರಮಾಡಿ ಜನರಿಗೆ ಅದ್ವೈತ ಮತದ ತತ್ವಗಳನ್ನು ಉಪದೇಶಿಸಿದನು. ಹಿಂದುಸ್ತಾನದ ನಾಲ್ಕು ದಿಕ್ಕುಗಳಲ್ಲಿ ಅಂದರೆ ಉತ್ತರಕ್ಕೆ ಬದರಿ, ದಕ್ಷಿಣಕ್ಕೆ ಶ್ರೀಗಿರಿ (ಶ್ರಿಂಗೇರಿ), ಪೂರ್ವಕ್ಕೆ ಜಗನ್ನಾಥಪುರಿ, ಪಶ್ಚಿಮಕ್ಕೆ ದ್ವಾರಕೆಯಲ್ಲಿ ಮಠಗಳನ್ನು ಸ್ಥಾಪಿಸಿದನು. ಇವನ ಮತದಂತೆ ಅಹಂಬ್ರಹ್ಮಾಸ್ಮಿ (ನಾನು ಬ್ರಹ್ಮನು) ಎಂಬ ತತ್ವವು ಮುಖ್ಯವಾದದ್ದು. ಮಾಯೆಯೆಂಬ ಅಜ್ಞಾನದಿಂದ ಜೀವಾತ್ಮವು ಬ್ರಹ್ಮ ಸ್ವರೂಪವೆಂಬದನ್ನು ಮರೆತುಬಿಡುತ್ತದೆ. ಸೃಷ್ಟಿಯು ಮಾಯೆಯ ವಿಕಾರವು. ಹೀಗೆ ವೇದಾಂತವೆಂಬ ಹಿಂದುಧರ್ಮದ ತತ್ವಜ್ಞಾನವನ್ನು ಜನರಿಗೆ ತಿಳಿಸಿಕೊಟ್ಟನು.

ಶಂಕರಾಚಾರ್ಯನು ಮಲಬಾರದ ನಂಬುದರೀ ಬ್ರಾಹ್ಮಣ ವಂಶದವನು ಬಾಲ್ಯದಲ್ಲಿಯೇ ಸನ್ಯಾಸಿಯಾಗಿ ಧರ್ಮೋಪದೇಶಮಾಡಹತ್ತಿದನು. ೩೨ನೇ ವರ್ಷದ ವಯಸ್ಸಿನಲ್ಲಿ ಬದರಿಯಲ್ಲಿಯೇ ತೀರಿದನು.

೨. ಬ್ರಾಹ್ಮಣ ಕ್ಷತ್ರಿಯರ ಪ್ರಾಬಲ್ಯ:— ಬ್ರಾಹ್ಮಣರ ವರ್ಚಸ್ಸು ಹೆಚ್ಚಾಗಲಿಕ್ಕೆ ಹಿಂದುಧರ್ಮದ ತತ್ವಗಳ ಪ್ರಸಾರವೂ ರಾಜಪುತರ ಪ್ರಾಬಲ್ಯವೂ ಕಾರಣಗಳಾದವು. ಮತ್ತು ಬ್ರಾಹ್ಮಣರ ನಡೆನುಡಿಗಳನ್ನು ಉಳಿದವರು ಅನುಸರಿಸಹತ್ತಿದರು. ರಾಜಪುತರು ತಮ್ಮ ರಾಜ್ಯವ್ಯವಸ್ಥೆಯನ್ನೂ ರಾಜ್ಯಕಾರಭಾರವನ್ನೂ ಬ್ರಾಹ್ಮಣರ ವಿಚಾರದಂತೆ ಮಾಡಹತ್ತಿದರು. ಮತ್ತು ತಾವು ಪುರಾಣಗಳಲ್ಲಿ ಹೇಳಿದ ಪ್ರಸಿದ್ಧ ಕ್ಷತ್ರಿಯ ರಾಜರ ವಂಶದವರೆಂದು ಹೇಳಹತ್ತಿದರು. ಮತ್ತು ಅವರಂತೆ ತಾವೂ ನಡೆಯಹತ್ತಿದರು. ಮನುಸ್ಮೃತಿಯಲ್ಲಿ ಹೇಳಿದ ನಿಯಮಗಳಂತೆ ಮುಲಕೀ ಮತ್ತು ಫೌಜದಾರೀ ವ್ಯವಹಾರವು ನಡೆಯಹತ್ತಿತು. ಆದದರಿಂದ ಬ್ರಾಹ್ಮಣರಿಗೆ ಯಾವ ಪ್ರಕಾರದ ತೆರಿಗೆ ಕರಗಳಿದ್ದಿಲ್ಲ; ಮತ್ತು ಅವರಿಗೆ ಹೆಚ್ಚಿನ ಶಿಕ್ಷೆಯನ್ನು ವಿಧಿಸುತ್ತಿದ್ದಿಲ್ಲ. ರಾಜಪುತ ಅರಸರು ಮೊದಲಿನ ಕ್ಷತ್ರಿಯರಂತೆ ಯಜ್ಞಗಳನ್ನು ಮಾಡುತ್ತಿದ್ದರು; ಸ್ವಯಂವರ ಸಮಾರಂಭವನ್ನು ನೆರವೇರಿಸುತ್ತಿದ್ದರು; ಪ್ರೇಮದಲ್ಲಿಯೂ ಯುದ್ಧದಲ್ಲಿಯೂ ಹೆಚ್ಚಳವನ್ನು ಪಡೆಯುವದಕ್ಕಾಗಿ ಒಬ್ಬರ ಕೂಡೊಬ್ಬರು ಸ್ಪರ್ಧೆಯನ್ನು ಮಾಡುತ್ತಿದ್ದರು. ಒಕ್ಕಲಿಗರು, ವ್ಯಾಪಾರಸ್ಥರು ಮೊದಲಾದ ಮಿಕ್ಕ ಸಾಮಾನ್ಯ ಜನರಿಗೆ ದಂಡಿ

ನಲ್ಲಿ ಸೇರಲೇಬೇಕೆಂಬ ಅಗತ್ಯವು ಇಲ್ಲದ ಹಾಗಾದ್ದರಿಂದ ಅವರು ತನ್ನು ತಮ್ಮ ಉದ್ಯೋಗಗಳನ್ನು ಮಾಡುತ್ತ ಸುಖದಿಂದ ಇದ್ದರು.

೩. **ವಾಙ್ಮಯ**:—ಈ ಕಾಲದಲ್ಲಿ ಹಿಂದುಧರ್ಮದ ಪುನರುಜ್ಜೀವನವಾದದ ರಿಂದ ಸಂಸ್ಕೃತದಲ್ಲಿ ಅನೇಕ ಧಾರ್ಮಿಕ ಗ್ರಂಥಗಳು ಸಿದ್ಧವಾದವು. ಅವುಗಳಲ್ಲಿ ಶಂಕರಾಚಾರ್ಯನು ಬರೆದ ಭಗವದ್ಗೀತೆ, ಉಪನಿಷತ್ತು, ಬ್ರಹ್ಮಸೂತ್ರಗಳ ಭಾಷ್ಯಗಳು ಅತಿ ಪ್ರಸಿದ್ಧವಾದವು. ರಾಜಪುತ ಅರಸರು ವಾಙ್ಮಯ ಪ್ರೇಮಿಗಳಿದ್ದದರಿಂದ ಅನೇಕ ಕವಿಗ್ರಂಥಕಾರರಿಗೆ ಆಶ್ರಯ ಕೊಡುತ್ತಿದ್ದರು. ಪರಮಾರ ವಂಶದ ಮುಂಜ ಭೋಜ ರಾಜರಿಬ್ಬರೂ ಅನೇಕ ಕಾವ್ಯ ನಾಟಕಗಳನ್ನು ಬರೆಯಿಸಿದ್ದಲ್ಲದೆ ಪ್ರಸಿದ್ಧ ಗ್ರಂಥಕಾರರಿದ್ದರು. ಈ ಕಾಲದ ಕವಿಗಳಲ್ಲಿ **ಭವಭೂತಿಯು ಉತ್ತರರಾಮಚರಿತ** ಮಾಲತೀಮಾಧವಗಳೆಂಬ ನಾಟಕಗಳನ್ನು ಬರೆದನು. ಈತನು ಮೊದಲು ಕನೋಜದ ಅರಸನಾದ ಯಶೋವರ್ಮನ ಸಭೆಯಲ್ಲಿಯೂ ನಂತರ ಅವನನ್ನು ಸೋಲಿಸಿದ ಲಲಿತಾದಿತ್ಯನ ಸಭೆಯಲ್ಲಿಯೂ ಇದ್ದನು. ಇ. ಸ. (೭೩೦). **ಮಾಘ** ಕವಿಯು **ಶಿಶುಪಾಲವಧವೆಂಬ** ಕಾವ್ಯವನ್ನು ಬರೆದನು. (ಇ. ಸ. ೮೦೦). ನೈಷಧ ಕಾವ್ಯವನ್ನು ಬರೆದ **ಶ್ರೀಹರ್ಷನು** ಕನೋಜದ ಜಯಚಂದ್ರನ ಸಭೆಯಲ್ಲಿದ್ದನು. (ಇ. ಸ. ೧೧೯೦). ಇದಲ್ಲದೆ **ಮುದ್ರಾರಾಕ್ಷಸವನ್ನು** ಬರೆದ **ವಿಶಾಖದತ್ತನೂ** (ಇ. ಸ. ೮೦೦) **ಭಟ್ಟ ನಾರಾಯಣನೂ** (ಇ. ಸ. ೮೫೦) **ರಾಜಶೇಖರನೂ**(ಇ. ಸ. ೯೦೦)ಕನೋಜದ ತೋಮರ ಅರಸರ ದರಬಾರಿನಲ್ಲಿದ್ದರು. ಗೀತಗೋವಿಂದವನ್ನು ಬರೆದ **ಜಯದೇವನು** ೧೧೦೦ ರಲ್ಲಿದ್ದನು. **ಸೋಮದೇವ, ಕ್ಷೇಮೇಂದ್ರ, ಬಿಲ್ಹಣ** ಕವಿಗಳು ೧೨ನೇ ಶತಕದಲ್ಲಿ ಕಾಶ್ಮೀರದಲ್ಲಿ ಪ್ರಸಿದ್ಧರಾದರು. ರಾಜತರಂಗಿಣಿಯನ್ನು ಬರೆದ **ಕಲ್ಹಣನೂ** ಇದೇ ಕಾಲದಲ್ಲಿಯೇ ಇದ್ದನು.

೪. **ಸಾಮಾಜಿಕ ಸ್ಥಿತಿ**:—ಈ ಕಾಲದಲ್ಲಿ ರಾಜಪುತರ ಪ್ರಾಬಲ್ಯವೇ ವಿಶೇಷವಾಗಿತ್ತು. ಅವರು ಉಚ್ಚ ಕುಲದವರಾದ್ದರಿಂದ ಸಮಾಜದಲ್ಲಿ ತಮ್ಮ ಶ್ರೇಷ್ಠತೆಯನ್ನು ಕಾಯ್ದುಕೊಳ್ಳಲಿಕ್ಕೆ ಹವಣಿಸುತ್ತಿದ್ದರು. ಒಕ್ಕಲತನ, ವ್ಯಾಪಾರ ಮೊದಲಾದ ಉದ್ಯೋಗಗಳು ತಮಗೆ ತಕ್ಕ ಉದ್ಯೋಗಗಳಲ್ಲೆಂದು ಅವರ ತಿಳಿವಳಿಕೆ. ಅದದರಿಂದ ಇತರರು ಈ ಉದ್ಯೋಗಗಳನ್ನು ಮಾಡುತ್ತಿದ್ದರು. ಧರ್ಮವನ್ನೂ ವಿದ್ಯೆಯನ್ನೂ ಕಾಯ್ದುಕೊಳ್ಳುವ ಭಾರವು ಬ್ರಾಹ್ಮಣರದಾಗಿತ್ತು. ಕೆಲವು ರಾಜ್ಯಗಳಲ್ಲಿ ಬ್ರಾಹ್ಮಣ ಮಂತ್ರಿಗಳೂ ಇದ್ದರು. ರಾಜಪುತರಲ್ಲಿ ತಮ್ಮ ಹೆಣ್ಣುಮಕ್ಕಳನ್ನು ತಮಗಿಂತ ಶ್ರೇಷ್ಠ ಮನೆತನಗಳಿಗೆ ಕೊಡುತ್ತಿದ್ದರು. ಮತ್ತು ತಮಗಿಂತ ಕಡಿಮೆ ಪ್ರತಿಯ ಮನೆತನಗಳಿಂದ ಹೆಣ್ಣು ತಂದು ಮದುವೆಯಾಗುತ್ತಿದ್ದರು. ಗೃಹಿಣಿಯರ ಪಾತಿವ್ರತ್ಯದ ಕಲ್ಪನೆಯು ಬಹಳ ಉದಾತ್ತವಾಗಿತ್ತು. ಆದದರಿಂದ **ಜೋಹರ, ಸತಿ** ಎಂಬ ಪದ್ಧತಿಗಳು ಅವರಲ್ಲಿ ರೂಢವಾದವು. ಜೋಹರ ಅಂದರೆ ಶತ್ರುಗಳು ಪಟ್ಟಣವನ್ನು ಮುತ್ತಿ

ಸಗೆದುಕೊಳ್ಳುವರೆಂಬ ಸಂಶಯವುಂಟಾದಕೂಡಲೆ ಎಲ್ಲ ಹೆಣ್ಣುಮಕ್ಕಳು ಅಪಮಾನಕ್ಕಿಂತ ಮರಣವೇ ಲೇಸೆಂದೆಣಿಸಿ ದೊಡ್ಡ ಚಿತೆಯಲ್ಲಿ ಹಾರಿಕೊಳ್ಳುವದು. ಗಂಡನು ತೀರಿದಮೇಲೆ ಹೆಂಡತಿಯು ಅವನ ಚಿತೆಯಲ್ಲಿ ಹಾರಿಕೊಂಡು ಸಾಯುವದಕ್ಕೆ ಸತಿ ಹೋಗುವದು ಎಂದು ಅನ್ನುತ್ತಿದ್ದರು. ಈ ಕಾಲದಲ್ಲಿ ಗುಡಿಗಳು ಹೆಚ್ಚಾದವು. ಅದರಿಂದ ಯಾತ್ರಿಕರು ಹೆಚ್ಚಾದರು. ರಾಜಪುತರು ಧಾರ್ಮಿಕವೃತ್ತಿಯವರಾದದರಿಂದ ಯುದ್ಧವು ನಡೆದಾಗ ಸಹ ಯಾತ್ರಿಕರಿಗೆ ಯಾವಪ್ರಕಾರದ ತೊಂದರೆಯೂ ಆಗುತ್ತಿದ್ದಿಲ್ಲ. ದಕ್ಷಿಣ ಹಿಂದುಸ್ತಾನದಲ್ಲಿ ಭವ್ಯವಾದ ಗುಡಿಗಳನ್ನು ಕಲ್ಲಿನಿಂದ ಕಟ್ಟಿದ್ದರಿಂದ ಉತ್ತರದಲ್ಲಿಯೂ ಅವುಗಳಂತೆ ಗುಡಿಗಳನ್ನು ಕಲ್ಲಿನಿಂದ ಕಟ್ಟಿಹತ್ತಿದರು. ಶಂಕರರಾಮಾನುಜರಿಂದ ಹಿಂದು ಧರ್ಮಕ್ಕೆ ಕಳೆಯೇರಿತು. ಆದರೆ ಜೈನ ಧರ್ಮದ ಪ್ರಾಬಲ್ಯವು ವಿಶೇಷ ಕಡಿಮೆಯಾಗಲಿಲ್ಲ. ಆ ತತ್ವಗಳು ಹಿಂದುಜನರ ನಡೆನುಡಿಗಳಲ್ಲಿ ಸೇರಿಕೊಂಡವು.

೧೮ನೇ ಅಧ್ಯಾಯ

ದಕ್ಷಿಣದ ರಾಜ್ಯಗಳು

೧. **ಸಾಮಾನ್ಯ ವಿವೇಚನೆ:**—ದಕ್ಷಿಣ ಹಿಂದುಸ್ತಾನದ ಬಗ್ಗೆ ಕ್ರಿ. ಶ. ೮ ಹಿಂದಿನಕಾಲದ ಇತಿಹಾಸವು ನಿಶ್ಚಿತವಾಗಿ ಗೊತ್ತಾಗಿಲ್ಲ. ಆದರೆ ಉತ್ತರದಲ್ಲಿ ಮೌರ್ಯರೂ ಗುಪ್ತ ಅರಸರೂ ಆಳುತ್ತಿದ್ದಾಗ ದಕ್ಷಿಣದಲ್ಲಿ ಅನೇಕ ರಾಜಮನೆತನಗಳು ಆಗಿಹೋದವು. ಅವುಗಳಲ್ಲಿ * ಆಂಧ್ರರಾಜ್ಯ, ಕನ್ನಡರಾಜ್ಯ, ತಮಿಳ ರಾಜ್ಯ ಎಂಬ ಮೂರು ಮುಖ್ಯ ರಾಜವಂಶಗಳು ಕಂಡುಬರುವವು. ಆಂಧ್ರರಲ್ಲಿ ಪ್ರಸಿದ್ಧರಾದ ಶಾತವಾಹನರು ತುಂಗಭದ್ರೆಯಿಂದ ಗೋದಾವರಿಯವರೆಗೆ ಇದ ಪ್ರದೇಶದಲ್ಲಿ ಕ್ರಿ. ಪೂ. ೨೫೦ ರಿಂದ ೪೫೦ ವರ್ಷ ರಾಜ್ಯವಾಳಿದರು. ಕನ್ನಡ ರಾಜ್ಯಗಳ ವಿಸ್ತಾರವು ದಕ್ಷಿಣಕ್ಕೆ ಮೈಸೂರಿಂದ ಪ್ರಾರಂಭವಾಗಿ ಉತ್ತರಕ್ಕೆ ಗೋದಾವರಿಯವರೆಗೆ ಹಬ್ಬಿತ್ತು. ಇವುಗಳಲ್ಲಿ ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಕಲಚೂರ್ಯರು, ಹೊಯ್ಸಳರು ಇವರ ರಾಜ್ಯಗಳು ಮುಖ್ಯವಾದವುಗಳು. ತಮಿಳ ರಾಜ್ಯಗಳು ತೀರ ದಕ್ಷಿಣದಲ್ಲಿ ಅಂದರೆ ಕಂಚಿ, ತ್ರಿಚನಾಪಳ್ಳಿ, ಮಧುರೆಗಳ ಸುತ್ತಲಿನ ಪ್ರದೇಶದಲ್ಲಿ ಮತ್ತು ಮಲಬಾರದಲ್ಲಿ ಇದ್ದವು. ಇವುಗಳಲ್ಲಿ ಪಾಂಡ್ಯ, ಚೋಳ, ಚೇರ, ಪಲ್ಲವ ಇವು ಮುಖ್ಯವಾದವುಗಳು.

ಆಂಧ್ರಭೃತ್ಯರು

೨. ಅಶೋಕನ ಶಾಸನಗಳಲ್ಲಿ ರಾಷ್ಟ್ರಕೂಟರ ಮತ್ತು ಆಂಧ್ರರ ಉಲ್ಲೇಖವಿರುವದು. ಮೆಗ್ಯಾಸ್ಥೆನೀಸನ ಲೇಖದಿಂದ ಆಂಧ್ರರಲ್ಲಿ ಸೈನ್ಯಬಲವೂ ಯುದ್ಧ ಸನ್ನಾಹವೂ ಮಗಧರಾಜ್ಯದ ಹೊರ್ತಾಗಿ ಮಿಕ್ಕ ರಾಜ್ಯಗಳಿಗಿಂತ ಮಿಗಿಲಾಗಿದ್ದವೆಂದು ಗೊತ್ತಾಗುತ್ತದೆ. ಅಶೋಕನ ಮರಣದ ನಂತರ ಆಂಧ್ರರು ಸ್ವತಂತ್ರರಾದರು. ಅವರ ಮನೆತನದ ಹೆಸರು ಶಾತವಾಹನ. ಮತ್ತು ಅವರು ಶಾತಕರಣಿಯೆಂಬ ಬಿರುದನ್ನು ಧರಿಸುತ್ತಿದ್ದರು. ಈ ವಂಶದವರು ಕ್ರಿ. ಪೂ. ೨೩೦ ರಿಂದ ಇ. ಸ. ೨೩೭ರ ವರೆಗೆ ಆಳಿದರು. ಕೃಷ್ಣಾನದಿಯ ದಂಡೆಗಿದ್ದ ಅಮರಾವತಿ ಪಟ್ಟಣವು ಇವರ ರಾಜಧಾನಿಯಾಗಿತ್ತು. ಈ ವಂಶದಲ್ಲಿ ಒಟ್ಟಿಗೆ ೩೦ ಮಂದಿ ಅರಸರು ಆಳಿದರು. ಕ್ರಿ. ಪೂ. ೨೭ರಲ್ಲಿ ಶಾತವಾಹನ ವಂಶದ ಅರಸರಲ್ಲೊಬ್ಬನು ಕಣ್ವವಂಶದ ಅರಸನನ್ನು ಪಟ್ಟದಿಂದ ತಳ್ಳಿ ತಾನೇ ಪಟ್ಟಕ್ಕೆ ಕುಳಿತನು. ಕ್ರಿ. ಶ. ೧೭೩–೨೦೨ರ ವರೆಗೆ ಆಳಿದ ಗೌತಮೀಪುತ್ರ ಯಜ್ಞಶ್ರೀ ಎಂಬ ಅರಸನು ಒಳ್ಳೇ ಪ್ರಸಿದ್ಧನಾಗಿದ್ದನು. ಈ ವಂಶದ ಅರಸರು ಗುಜರಾತ ಉಜ್ಜಯಿನಿ

* ಆಂಧ್ರರ ವಿಷಯಕ್ಕೆ ೪೪–೪೫ನೇ ಪುಟಗಳನ್ನು ನೋಡು.

* ತಮಿಳರ ವಿಷಯಕ್ಕೆ ೪೬ನೇ ಪುಟ ನೋಡು.

ಗಳಲ್ಲಿ ಆಳುತ್ತಿದ್ದ ಸತ್ರಪರನ್ನು ಸೋಲಿಸಿ ತಮ್ಮ ರಾಜ್ಯದ ವಿಸ್ತಾರವನ್ನು ಪೂರ್ವ ಸಮುದ್ರತೀರದಿಂದ ಪಶ್ಚಿಮ ಸಮುದ್ರತೀರದವರೆಗೆ ಬೆಳಿಸಿದರು. ಗುಜರಾತಿನಲ್ಲಿ ೧೪೫–೧೫೦ರ ವರೆಗೆ ಆಳಿದ ರುದ್ರದಮನನೆಂಬ ಸತ್ರಪನು ಆಂಧ್ರರಾಜರಿಂದ ಕೊಂಕಣವನ್ನೂ ಪಶ್ಚಿಮದ ಭಾಗವನ್ನೂ ಗೆದ್ದುಕೊಂಡನು.

೫. ಆಂಧ್ರರ ಕಾಲದ ಪರಿಸ್ಥಿತಿ:— ಬ್ರಾಹ್ಮಣ ಮತ್ತು ಬೌದ್ಧ ಧರ್ಮಗಳು ಒಂದನ್ನೊಂದು ದ್ವೇಷಿಸದೆ ಎರಡೂ ಊರ್ಜಿತ ಸ್ಥಿತಿಯಲ್ಲಿ ಇದ್ದವು. ಆದರೆ ಬ್ರಾಹ್ಮಣ ಧರ್ಮವು ಬೌದ್ಧಧರ್ಮಕ್ಕಿಂತ ಹೆಚ್ಚು ಜನಪ್ರಿಯವಾಗಿತ್ತು. ಆದರೂ ಬೌದ್ಧಧರ್ಮದ ರೂಢಿಗಳು ಜನರಲ್ಲಿ ನೆಲೆಗೊಂಡಿದ್ದವು. ಅರಸರು ಬೌದ್ಧಧರ್ಮದ ಮಠಗಳನ್ನು ಕಟ್ಟಿಸುವದರಲ್ಲಿಯೂ ಅನ್ನಛತ್ರಗಳನ್ನು ಇಡುವದರಲ್ಲಿಯೂ ತಮ್ಮ ಹಣವನ್ನು ವೆಚ್ಚಮಾಡುತ್ತಿದ್ದರು. ಈ ಕಾಲದಲ್ಲಿ ಗುಡ್ಡದಲ್ಲಿ ಕೊರೆದ ಅನೇಕ ಗುಡಿಗಳು ಕಟ್ಟಲ್ಪಟ್ಟವು. ಇದರ ಮೇಲಿಂದ ಆಗಿನ ಕಾಲದ ಜನರು ಶಿಲ್ಪಕಲೆಯಲ್ಲಿ ಒಳ್ಳೇ ನಿಷ್ಣಾತರಿದ್ದರೆಂದು ತೋರುತ್ತದೆ. ಪ್ರತಿಷ್ಠಾನ, ಧಾನ್ಯಕಟಕ, ಕಲ್ಯಾಣ, ಅಮರಾವತಿ, ಭರುಕಚ್ಛ (ಭಡೋಚ) ಮುಂತಾದ ಪಟ್ಟಣಗಳಿಗೆ ವ್ಯಾಪಾರದ ರಾಜಮಾರ್ಗಗಳಿದ್ದವು. ದಾರಿಯ ಮೇಲೆ ಕಳ್ಳರ ಹಾವಳಿಯು ಇದ್ದಿಲ್ಲ. ವ್ಯಾಪಾರೋದ್ಯೋಗಗಳು ಊರ್ಜಿತ ಸ್ಥಿತಿಯಲ್ಲಿದ್ದವು. ಭಡೋಚ, ವಸಯಿ ಮುಂತಾದ ಬಂದರಗಳಿಂದ ಪರದೇಶಗಳ ಕೂಡ ವ್ಯಾಪಾರವು ನಡೆಯುತ್ತಿತ್ತು. ಪಟ್ಟಣಗಳ ವ್ಯವಸ್ಥೆಯು ನಿಗಮ ಸಭೆಗಳ ಮುಖಾಂತರ ಜನರಿಂದ ಸ್ವತಂತ್ರವಾಗಿ ಮಾಡಲ್ಪಡುತ್ತಿತ್ತು.

೬. ಕನ್ನಡ ರಾಜ್ಯಗಳು

೪. ಕದಂಬರು:— ಕದಂಬ ರಾಜ್ಯ ಮನೆತನದ ಪ್ರಾರಂಭವು ಎಂದಿನಿಂದ ಹೇಗೆ ಆಯಿತೆಂದು ಹೇಳುವದಕ್ಕೆ ನಿಶ್ಚಿತವಾದ ಆಧಾರಗಳೇನೂ ಇರುವದಿಲ್ಲ. ಆದರೆ ಕ್ರಿ. ಪೂ. ೩೪೨ರಲ್ಲಿ ಅಶೋಕನು ಬನವಾಸಿಯ ಕದಂಬ ಅರಸನ ಕಡೆಗೆ ರಕ್ಷಿತನೆಂಬ ಬೌದ್ಧ ಧರ್ಮೋಪದೇಶಕನನ್ನು ಕಳಿಸಿದ್ದನೆಂದೂ ಕ್ರಿ. ಪೂ. ೧೦೦ರಲ್ಲಿ ಬನವಾಸಿಯ ಒಬ್ಬ ವ್ಯಾಪಾರಸ್ಥನು ಕಾರ್ಲೆಯ ಗುಡ್ಡದೊಳಗೆ ಗುಡಿಗಳನ್ನು ಕಟ್ಟಿಸಿದನೆಂದೂ ಗೊತ್ತಾಗುವದು. ಈ ಆಧಾರಗಳ ಮೇಲಿಂದ ಕ್ರಿ. ಪೂ. ದಲ್ಲಿಯೇ ಕದಂಬರು ಬನವಾಸಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ವೈಭವದಿಂದ ಆಳುತ್ತಿದ್ದರೆಂದು ಅನುಮಾನಿಸಲು ಅಡ್ಡಿಯಿಲ್ಲ. ಕ್ರಿ. ಶ. ೪೫೦ರ ವರೆಗಿನ ಇವರ ಇತಿಹಾಸವು ಇದಕ್ಕೂ ಹೆಚ್ಚಾಗಿ ಉಪಲಬ್ಧವಿಲ್ಲ. ಅರ್ವಾಚೀನ ಕದಂಬರಲ್ಲಿ ಮೂರು ಮನೆತನಗಳು ಬನವಾಸಿ, ಹಲಸಿ, ಹಾನಗಲ್ಲು ಮುಂತಾದ ಕಡೆಯಲ್ಲಿ ಬೇರೆ ಬೇರೆ ಕಾಲದಲ್ಲಿ ಆಳಿದವೆಂದು ಗೊತ್ತಾಗುವದು. ಇವರು ಬ್ರಾಹ್ಮಣ ವಂಶದವರೆಂದು ವಿಹಿನಸೆಂಟಿಸ್ಮಿಥನು ಅನ್ನುತ್ತಾನೆ.

೧ನೇ ಮನೆತನ(೪೫೦–೫೯೦)— ಕಕುತ್ಸವರ್ಮನೆಂಬವನು ಈ ಮನೆತನದ ಮೂಲ ಪುರುಷನು. ಇವನ ತರುವಾಯ ಶಾಂತಿವರ್ಮನೆಂಬವನು ಆಳಿದನು. ಇವನ ಯವನಾದ **ಮೃಗೇಶವರ್ಮ**ನೆಂಬವನು ಇ. ಸ ೫೦೦ರಲ್ಲಿ ಗಂಗ ಪಲ್ಲವ ಅರಸರನ್ನು ಸೋಲಿಸಿದನು. ಇವನ ಕಾಲಕ್ಕೆ ಕದಂಬರ ರಾಜ್ಯವು ಘನತೆಗೇರಿತ್ತು. ಇವನ ತರುವಾಯ ಆಳಿದ ರವಿವರ್ಮನು ಕ್ರಿ. ಶ. ೫೭೦ರಲ್ಲಿ ಮತ್ತೆ ಪಲ್ಲವರನ್ನು ಸೋಲಿಸಿದನು. ಈ ಮನೆತನದ ಅರಸರು ಹಲಸಿ ಮತ್ತು ಬನವಾಸಿಗಳನ್ನು ತಮ್ಮ ರಾಜಧಾನಿಗಳನ್ನಾಗಿ ಮಾಡಿಕೊಂಡಿದ್ದರು.

೨ನೇ ಮನೆತನ (೬೫೦–೧೦೫೦):– ಈ ಮನೆತನದಲ್ಲಿ ಒಟ್ಟಿಗೆ ೧೪ ಜನ ಅರಸರು ಆಳಿದರು. **ಮಯೂರವರ್ಮನು** ಈ ಮನೆತನದ ಮೂಲ ಪುರುಷನು. ಅವನು ಒಳ್ಳೇ ಪ್ರಸಿದ್ಧನಾಗಿ ಹೋದನು. ಇವನು ಅಹಿಚ್ಛತ್ರ (ರೋಹೀಖಂಡದಲ್ಲಿಯ ರಾಮನಗರ) ದಿಂದ ಬ್ರಾಹ್ಮಣರನ್ನು ಕರೆಯಿಸಿ ಅವರಿಗೆ ಆಶ್ರಯಕೊಟ್ಟನು. ಉತ್ತರ ಮತ್ತು ದಕ್ಷಿಣ ಕಾನಡಾ ಜಿಲ್ಲೆಯೊಳಗಿನ **ಈಗಿನ ಹವಿಕರು ಆ ಬ್ರಾಹ್ಮಣರ** ವಂಶದವರೆಂದು ಹೇಳುವರು. ಮಯೂರವರ್ಮನು ಕಾಂಚಿಯ ಪಲ್ಲವ ಅರಸರನ್ನು ಗೆದ್ದು ತನ್ನ ರಾಜ್ಯದ ವಿಸ್ತಾರವನ್ನು ಬೆಳಿಸಿದನು.

೩ನೇ ಮನೆತನ (೧೦೫೦–೧೩೦೦):– ತೈಲನು ಈ ಮನೆತನದ ಮೊದಲನೆಯ ಅರಸನು. ಈ ವಂಶದ ಅರಸರು ಹಾನಗಲ್ಲು ಬನವಾಸಿಗಳನ್ನು ರಾಜಧಾನಿಗಳನ್ನಾಗಿ ಮಾಡಿಕೊಂಡಿದ್ದರು.

೫. ಗಂಗರು:—ಈ ವಂಶದ ಪೂರ್ವಜರು ಅಯೋಧ್ಯೆಯಲ್ಲಿ ಆಳುತ್ತಿದ್ದರು. ಆವರಲ್ಲಿ ಪದ್ಮನಾಭನೆಂಬುವನು ಗೃಹಕಲಹಕ್ಕೆ ಬೇಸತ್ತು ದಕ್ಷಿಣಕ್ಕೆ ಬಂದನು. ಇವನ ಮಗನಾದ ಮಾಧವನೆಂಬವನು ಜೈನಾಚಾರ್ಯನಾದ ಸಿಂಹನಂದಿಯ ವರಪ್ರಸಾದದಿಂದ ಗಂಗವಾಡಿಯ ರಾಜ್ಯವನ್ನು ಸ್ಥಾಪಿಸಿದನು. ಮೊದಲು ಕೋಲಾರವು ಇವನ ರಾಜಧಾನಿಯಾಗಿತ್ತು; ಬಳಿಕ ತಳಕಾಡು; ಆ ಮೇಲೆ ಮಾನ್ಯಪುರ ಇವು ಅನುಕ್ರಮವಾಗಿ ರಾಜಧಾನಿಗಳಾಗಿದ್ದವು. ಈ ವಂಶದವರು ಕದಂಬ, ಚಾಲುಕ್ಯ, ರಾಷ್ಟ್ರಕೂಟ ಮುಂತಾದವರೊಡನೆ ಶರೀರಸಂಬಂಧವನ್ನು ಮಾಡಿ ಮನೆತನದ ಘನತೆಯನ್ನು ಹೆಚ್ಚಿಸಿದರು. ಗಂಗಅರಸರಿಗೂ ಕದಂಬರಿಗೂ ಮೇಲಿಂದ ಮೇಲೆ ಜಗಳಗಳು ಆಗುತ್ತಿದ್ದವು.

ಮಾಧವನು ಈ ವಂಶದ ಮೂಲ ಪುರುಷನು. ಇವನ ಮಗನಾದ **೨ನೇ** ಮಾಧವನು ದೊಡ್ಡ ಕವಿಯೂ ನೀತಿಶಾಸ್ತ್ರ ವಿಶಾರದನೂ ಆಗಿದ್ದನೆಂದು ಕಂಡುಬರುವದು. ಇವನ ಮಗನಾದ ಹರಿವರ್ಮನ ಕಾಲದಲ್ಲಿ ತಳಕಾಡು ಗಂಗರ ರಾಜಧಾನಿಯಾಗಿ ಮಾಡಲ್ಪಟ್ಟಿತು. ಈ ವಂಶದ **ದುರ್ವಿನೀತ**ನೆಂಬವನು ವೈದಿಕ ಧರ್ಮಾಭಿಮಾನಿಯಾಗಿದ್ದು ವರ್ಣಾಶ್ರಮ ರಕ್ಷಕನಾಗಿದ್ದನು. ಇವನ ಆಳಿಕೆಯಲ್ಲಿ ಗಂಗ ರಾಜ್ಯವು ಘನತೆ

ೀರಿತು. ಪುನ್ನಟರು ಇವನ ಮಾಂಡಲಿಕರಾದರು. ದುರ್ವಿನೀತನು ಕಾಂಚಿಯ ಅರಸ ನಾದ ಜಯಸಿಂಹನನ್ನು ಸೋಲಿಸಿ ಅವನ ರಾಜ್ಯದ ಕೆಲವು ಭಾಗವನ್ನು ತನ್ನ ರಾಜ್ಯಕ್ಕೆ ಸೇರಿಸಿದನು. ಅವನು ಕ್ರಿ. ಶ. ೬೫೦ರಲ್ಲಿ ತೀರಿಕೊಂಡನೆಂದು ತಿಳಿ ಯುತ್ತದೆ. ಈ ವಂಶದ ಭೂರಿಶ್ರವನೆಂಬವನು ಪಲ್ಲವ ಅರಸನಾದ ನರಸಿಂಹವರ್ಮ ನನ್ನು ಸೋಲಿಸಿ ಶ್ರೀವಲ್ಲಭನೆಂಬ ಹೆಸರು ಪಡೆದನು. **ಶ್ರೀಪುರುಷ**ನೆಂಬವನು ಗಂಗ ವಂಶದ ಅರಸರಲ್ಲಿ ಒಳ್ಳೇ ಖ್ಯಾತಿವಂತನು. ಇವನು ತಳಕಾಡಿನಿಂದ ಮಾನ್ಯಪುರಕ್ಕೆ ರಾಜಧಾನಿಯನ್ನು ವೈದನು. ಇವನು ಪಲ್ಲವರನ್ನು ಸಂಪೂರ್ಣವಾಗಿ ಸೋಲಿಸಿದನು. ಬಾಣ ಅರಸರು ಇವನ ವಶರಾದರು. ಈ ಕಾಲಕ್ಕೆ ಶ್ರೀಪುರುಷನನ್ನು ಎದುರಿಸು ವಂಥ ಅರಸರು ದಕ್ಷಿಣದಲ್ಲಿ ಯಾರೂ ಇದ್ದಿಲ್ಲ.

ಈ ವಂಶದ ೨ನೇ ಶಿವಮಾರನೆಂಬವನ ಕಾಲಕ್ಕೆ ರಾಷ್ಟ್ರಕೂಟರು ಒಳ್ಳೇ ಪ್ರಬಲ ರಾಗಿ ಗಂಗವಾಡಿಯ ರಾಜ್ಯವನ್ನು ಆಕ್ರಮಿಸಿ ಶಿವಮಾರನನ್ನು ಸೆರೆಯಲ್ಲಿಟ್ಟರು. ಕ್ರಿ. ಶ. ೭೯೪ರಲ್ಲಿ ರಾಷ್ಟ್ರಕೂಟರ ಅರಸನಾದ ಗೋವಿಂದನೆಂಬವನು ಈ ಶಿವಮಾರ ನನ್ನು ಬಿಡುಗಡೆ ಮಾಡಿದನು. ಆದರೆ ಶಿವಮಾರನು ಹಗೆತನವನ್ನು ಬಿಡಲಿಲ್ಲ. ಆದ ರಿಂದ ಗೋವಿಂದನು ಪುನಃ ಇವನನ್ನು ನಿರ್ಬಂಧದಲ್ಲಿಟ್ಟನು. ಕಡೆಗೆ ಗಂಗರು ರಾಷ್ಟ್ರಕೂಟರೊಂದಿಗೆ ಒಪ್ಪಂದಮಾಡಿಕೊಂಡು ತಮ್ಮ ರಾಜ್ಯವನ್ನು ತಿರುಗಿ ತಕ್ಕೊಂ ಡರು. ರಾಜಮಲ್ಲನೆಂಬವನ ಕಾಲದಿಂದ ಗಂಗರು ಪುನಃ ಪ್ರಬಲರಾಗತೊಡಗಿದರು. ಬೂತುಗನೆಂಬ ಗಂಗ ಅರಸನು ರಾಷ್ಟ್ರಕೂಟರ ಅರಸನಾದ ಅಮೋಘವರ್ಷನ ಮಗ ಳನ್ನು ಮದುವೆಯಾಗಿ ತನ್ನ ರಾಜ್ಯದ ವಿಸ್ತಾರವನ್ನು ಬೆಳಿಸಿದನು. ರಾಜಮಲ್ಲನ ದಂಡನಾಯಕನಾದ ಚಾಮುಂಡರಾಯನೆಂಬವನು ಶ್ರವಣಬೆಳಗುಳದ ಗೋಮಟೇಶ್ವರ ಸ್ವಾಮಿಯನ್ನು ಪ್ರತಿಷ್ಠೆಮಾಡಿದನು. ಈ ಮೂರ್ತಿಯು ೫೬॥ ಫೂಟು ಎತ್ತರವದೆ. ಜಗತ್ತಿನಲ್ಲಿ ಇಷ್ಟು ಎತ್ತರವಾದ ಮೂರ್ತಿಯು ಬೇರೊಂದಿಲ್ಲ.

ರಾಜಮಲ್ಲನ ತರುವಾಯ ರಕ್ಕಸನೆಂಬವನು ಗಂಗರಾಜ್ಯಕ್ಕೆ ಅರಸನಾದನು. ಇವನು ದುರ್ಬಲನಿದ್ದನು. ಚೋಳವಂಶದ ರಾಜೇಂದ್ರಚೋಳನೆಂಬವನು ಗಂಗವಾಡಿ ಯನ್ನು ಮುತ್ತಿ ರಕ್ಕಸನನ್ನು ಓಡಿಸಿದನು.

೭. **ಚಾಲುಕ್ಯರು**:—ಈ ವಂಶದ ಅರಸರು ಅಯೋಧ್ಯೆಯಲ್ಲಿ ಬಹುಕಾಲ ರಾಜ್ಯ ವಾಳಿದರು. ಅವರಲ್ಲಿ **ಜಯಸಿಂಹ**ನೆಂಬವನು ಕ್ರಿ. ಶ. ೫ನೇ ಶತಮಾನದ ಕೊನೆಯಲ್ಲಿ ನರ್ಮದೆಯನ್ನು ದಾಟಿ ದಕ್ಷಿಣಕ್ಕೆ ಬಂದನು. ಆಗ ದಕ್ಷಿಣದಲ್ಲಿ ರಾಷ್ಟ್ರಕೂಟರು ಒಳ್ಳೇ ಪ್ರಬಲರಾದ ಅರಸರಾಗಿದ್ದರು. ಜಯಸಿಂಹನು ರಾಷ್ಟ್ರಕೂಟರ ಇಂದ್ರನೆಂಬ ಅರಸ ನನ್ನು ಸೋಲಿಸಿ ಇಂದುಕಾಂತಿಯಲ್ಲಿ(ಅಜಂತಾದಲ್ಲಿ) ತನ್ನ ರಾಜ್ಯವನ್ನು ಸ್ಥಾಪಿಸಿದನು. ಇವನಿಂದ ೩ನೇ ತಲೆಯವನಾದ ಮೊದಲನೇ **ಪುಲಕೇಶಿಯು** ಕದಂಬರನ್ನು ಮುರಿ ಬಡಿದು ಬಾದಾಮಿಗೆ ತನ್ನ ಸಿಂಹಾಸನವನ್ನು ಒಯ್ದನು. ಮತ್ತು ಅಶ್ವಮೇಧಯಾಗ

ವನ್ನು ಮಾಡಿ, 'ರಣವಿಕ್ರಮ' ಎಂಬ ಬಿರುದು ಧರಿಸಿದನು. ಇವನ ಮಗನಾದ **ಕೀರ್ತಿವರ್ಮ**ನು ಬಹು ಶೂರನಿದ್ದುದರಿಂದ ಕದಂಬ ಮೊದಲಾದ ಅರಸರನ್ನು ಸೋಲಿಸಿ ತನ್ನ ರಾಜ್ಯವನ್ನು ವಿಸ್ತಾರಗೊಳಿಸಿದನು. ಬದಾಮಿಯ ಗುಡ್ಡದೊಳಗಿನ ಗುಡಿಗಳು ಕೀರ್ತಿವರ್ಮನ ಕಾಲದಲ್ಲಿಯೇ ಕೊರೆಯಿಸಲ್ಪಟ್ಟವು. ಇವನು ಕ್ರಿ. ಶ. ೫೯೭ರಲ್ಲಿ ತೀರಿಕೊಂಡನು.

✓ **೧. ೨ನೇ ಪುಲಕೇಶಿ**:— ೬೧೦–೪೨ ಇವನು ಕೀರ್ತಿವರ್ಮನ ಹಿರಿಯ ಮಗನು. ತಂದೆಯು ತೀರಿದಾಗ ಪುಲಕೇಶಿಯು ಚಿಕ್ಕವನಿದ್ದುದರಿಂದ ಮಂಗಳೇಶನೆಂಬ ಅವನ ಕಕ್ಕನು ರಾಜ್ಯಕಾರಭಾರ ಮಾಡಹತ್ತಿದನು. ಪುಲಕೇಶಿಯು ವಯಸ್ಸಿಗೆ ಬಂದ ಬಳಿಕ ರಾಜ್ಯಸೂತ್ರವನ್ನು ತನ್ನ ಕೈಯ್ಯಲ್ಲಿ ತೆಗೆದುಕೊಳ್ಳಲಿಕ್ಕೆ ಇಚ್ಛಿಸಿದನು. ಆದರೆ ಮಂಗಳೇಶನಿಗೆ ಇದು ಸರಿಬೀಳಲಿಲ್ಲ. ಆದ್ದರಿಂದ ಇವರಿಬ್ಬರ ನಡುವೆ ಕಾಳಗವಾಗಿ ಮಂಗಳೇಶನು ಯುದ್ಧದಲ್ಲಿಕೊಲ್ಲಲ್ಪಟ್ಟನು. ಬಳಿಕ ಕ್ರಿ. ಶ. ೬೧೦ರಲ್ಲಿ **ಪುಲಕೇಶಿ**ಯು ಮಹಾರಾಜನೆಂಬ ಬಿರುದುಧರಿಸಿ ಪಟ್ಟಕ್ಕೆ ಕುಳಿತನು.

✓ **೨. ಪುಲಕೇಶಿಯ ವಿಜಯ**ಗಳು:— ಪುಲಕೇಶಿಯು ಚಾಲುಕ್ಯವಂಶದ ಅರಸರಲ್ಲಿ ಒಳ್ಳೇ ಪರಾಕ್ರಮಿಯೂ ಖ್ಯಾತಿವಂತನೂ ಆಗಿದ್ದನು. ಇವನು ರಾಷ್ಟ್ರಕೂಟರ ಅರಸನಾದ ಗೋವಿಂದನನ್ನು ಸೋಲಿಸಿ ಅವನನ್ನು ತನ್ನ ಮಾಂಡಲಿಕನನ್ನಾಗಿ ಮಾಡಿದನು. ಕೊಂಕಣದ ಉತ್ತರದಲ್ಲಿದ್ದ ಲಾಟದೇಶವನ್ನು ಗೆದ್ದು ತನ್ನ ರಾಜ್ಯಕ್ಕೆ ಕೂಡಿಸಿದನು. ಗಂಗ, ಕದಂಬ, ಮೌರ್ಯ, ಗುರ್ಜರ ರಾಜರನ್ನು ಮುರಿದು ಮೂಲೆಗೊತ್ತಿದನು. ಚೋಳ-ಚೇರ-ಪಾಂಡ್ಯರನ್ನೂ ಕಾಂಚಿಯ ಪಲ್ಲವರನ್ನೂ ಗೆದ್ದು 'ದಕ್ಷಿಣಾಪಥೇಶ್ವರ'ನೆಂಬ ಹೆಸರನ್ನು ಪಡೆದನು. ಕನೋಜದಲ್ಲಿ ಆಳುತ್ತಿದ್ದ ಸಿಲಾದಿತ್ಯ (ಹರ್ಷವರ್ಧನ)ನೆಂಬ ಪ್ರತಾಪಶಾಲಿಯು ಈ ಕಾಲಕ್ಕೆ ಉತ್ತರ ಹಿಂದುಸ್ತಾನವನ್ನು ಗೆದ್ದು ಇಡೀಹಿಂದುಸ್ತಾನದ ಸಾರ್ವಭೌಮನಾಗಬೇಕೆಂದು ದೊಡ್ಡ ದಂಡಿನೊಡನೆ ದಕ್ಷಿಣಕ್ಕೆ ಬಂದನು. ಆದರೆ ಪುಲಕೇಶಿಯು ಇವನನ್ನು ನರ್ಮದೆಯ ದಂಡೆಯಲ್ಲಿ ಸೋಲಿಸಿದನು. ಈ ದೊಡ್ಡ ವಿಜಯದ ನೆನಪಿಗಾಗಿ ಪುಲಕೇಶಿಯು 'ಪರಮೇಶ್ವರ'ನೆಂಬ ಬಿರುದು ಧರಿಸಿದನು. ಚಾಲುಕ್ಯವಂಶದ ಮುಂದಿನ ಅರಸರೆಲ್ಲರು ಈ ಬಿರುದನ್ನು ಬಹು ಅಭಿಮಾನದಿಂದ ಧರಿಸುತ್ತಿದ್ದರು. ಈ ಪ್ರಕಾರ ಪುಲಕೇಶಿಯು ವಿಂಧ್ಯ ಪರ್ವತದಿಂದ ರಾಮೇಶ್ವರದವರೆಗೆ ತನ್ನ ವಿಜಯಧ್ವಜವನ್ನು ಮೆರೆಯಿಸಿ ಅಶ್ವಮೇಧ ಯಜ್ಞವನ್ನು ಮಾಡಿ ಸತ್ಯಾಶ್ರಯನೆಂಬ ಅಭಿಧಾನವುಳ್ಳವನಾದನು. ಇವನೇ ದಕ್ಷಿಣದ ಮೊದಲನೆಯ **ಚಕ್ರವರ್ತಿ**ಯು.

✓ **೩. ಪುಲಕೇಶಿಯ ರಾಜ್ಯವ್ಯವಸ್ಥೆ**:—ಪುಲಕೇಶಿಯು ನ್ಯಾಯದಿಂದಲೂ ಧರ್ಮಾಚರಣೆಯಿಂದಲೂ ಪ್ರಜೆಗಳಿಗೆ ಸುಖವಾಗುವಂತೆ ಆಳಿದನು. ಇವನು ತನ್ನ

ವಿಸ್ತಾರವಾದ ಸಾಮ್ರಾಜ್ಯವನ್ನು ವಿಭಾಗಿಸಿ ಪೂರ್ವಭಾಗದ ಆಂಧ್ರ ಪ್ರದೇಶಕ್ಕೆ ತನ್ನ ತಮ್ಮನಾದ ವಿಷ್ಣುವರ್ಧನನನ್ನೂ ಲಾಟದೇಶಕ್ಕೆ ಮತ್ತೊಬ್ಬ ತಮ್ಮನಾದ ಜಯಸಿಂಹನನ್ನೂ ಸಾಮಂತರನ್ನಾಗಿ ನೇಮಿಸಿದನು. ಮುಂದೆ ಇವರು ಸ್ವತಂತ್ರರಾಗಿ ವಿಷ್ಣುವರ್ಧನನ ಸಂತತಿಯವರು ಪೂರ್ವಚಾಲುಕ್ಯರೆಂತಲೂ, ಜಯಸಿಂಹನ ಸಂತತಿಯವರು ಪಶ್ಚಿಮಚಾಲುಕ್ಯರೆಂತಲೂ ಹೆಸರು ಪಡೆದು ಬಹುಕಾಲ ರಾಜ್ಯವಾಳಿದರು. ಹಿಂದು ಸ್ತಾನದಲ್ಲಿ ಮಾತ್ರವಲ್ಲದೆ ಪರದೇಶಗಳಲ್ಲಿಯೂ ಪುಲಕೇಶಿಯ ಕೀರ್ತಿಯು ಹಬ್ಬಿತು. ಇರಾಣದ ಬಾದಶಹನು ಇವನ ಕೀರ್ತಿಯನ್ನು ಕೇಳಿ ರಾಯಭಾರಿಯನ್ನು ಕಳುಹಿಸಿ ಕೊಟ್ಟನು. (ಇ. ಸ. ೬೨೫) ಆ ರಾಯಭಾರಿಯು ಪುಲಕೇಶಿಯ ರಾಜಸಭೆಗೆ ಬಂದ ಚಿತ್ರವು ಅಜಂತಾದ ಗುಡಿಯಲ್ಲಿ ಅದೆ. ಅದನ್ನು ಇಲ್ಲಿ ಕೊಟ್ಟಿದೆ.

೪. **ಹುವೆನ್‌ತ್ಸಾಂಗನು:**— ಈ ನೇ ಪುಲಕೇಶಿಯ ಆಳಿಕೆಯಲ್ಲಿ ಚೀನದೇಶದ ಬೌದ್ಧ ಯಾತ್ರಿಕನಾದ ಹುವೆನ್‌ತ್ಸಾಂಗನು ಹಿಂದುಸ್ತಾನದಲ್ಲಿ ಸಂಚಾರಮಾಡಿ ಇವನ ಸಾಮ್ರಾಜ್ಯವನ್ನೂ ಪ್ರಜೆಗಳನ್ನೂ ಹೀಗೆ ಬಣ್ಣಿಸಿದ್ದಾನೆ. "ಈ ದೇಶದ ಭೂಮಿಯು ಬೆಳೆಯುಳ್ಳದ್ದು. ಹವೆಯು ಉಷ್ಣ. ಜನರು ವಿದ್ಯಾಪ್ರಿಯರು. ಅವರ ಆಚಾರ-ವಿಚಾರಗಳು ಯೋಗ್ಯವಾದಂಥವು. ಸ್ವಭಾವವು ಸೊಕ್ಕಿನದು. ಪರೋಪಕಾರಿಗಳು; ಮತ್ತು ಎರಡನೆಯವರು ಮಾಡಿದ ಉಪಕಾರವನ್ನು ನೆನೆಯಿಸುವರು. ಕೇಡುಮಾಡಿದವರ ಸೇಡನ್ನು ತೀರಿಸಿಕೊಳ್ಳದೆ ಬಿಡರು. ಅಪಮಾನವನ್ನು ಸಹಿಸಲಾರರು. ಶರಣಾಗತರನ್ನು ಕೊಲ್ಲುವದಿಲ್ಲ. ನ್ಯಾಯದಿಂದ ಯುದ್ಧಮಾಡುವರು. ಅರಸನಾದ ಪುಲಕೇಶಿಯು ಕ್ಷತ್ರಿಯನು. ಇವನು ಬಹಳ ದರ್ಪವುಳ್ಳವನು. ಇವನು ಧಾರ್ಮಿಕನೂ ದಯಾಳುವೂ ಆಗಿರುವನು. ಪ್ರಜೆಗಳು ಇವನ ಕೂಡ ಸಂಪೂರ್ಣ ಭಕ್ತಿಯಿಂದ ನಡೆದುಕೊಳ್ಳುವರು. ಇವನ ಸೈನ್ಯವು ದೊಡ್ಡದು. ಅದರಲ್ಲಿ ಪರಾಕ್ರಮಿಗಳೂ ಧೈರ್ಯಶಾಲಿಗಳೂ ಆದ ಅನೇಕ ದಂಡಾಳುಗಳಿರುವರು. ಈ ಜಂಟರು ಯುದ್ಧದ ಪ್ರಸಂಗದಲ್ಲಿ ಮುಂದೆ ಇರುವರು. ಮದವೇರಿದ ನೂರಾರು ಆನೆಗಳಿಂದ ಶತ್ರುಗಳನ್ನು ತುಳಿಸುವರು. ಇಂಥ ದಂಡಿನ ಮುಂದೆ ಶತ್ರುಗಳ ಆಟವೇನೂ ಸಾಗುವದಿಲ್ಲ. ಆದದರಿಂದ ಪುಲಕೇಶಿಯು ನೆರೆಯ ಅರಸರನ್ನು ತುಚ್ಛಿಸುತ್ತಾನೆ. ರಾಜಸಭೆಯ ವೈಭವವು ಘನವಾಗಿರುವದು. ಇವನ ರಾಜ್ಯಕ್ಕೆ ಮಹಾರಾಷ್ಟ್ರವೆನ್ನುತ್ತಾರೆ."

೫. **ಪುಲಕೇಶಿಯ ಕೊನೆ:**— ಪುಲಕೇಶಿಯು ಹೀಗೆ ಬಾಹುಬಲದಿಂದ ಕರ್ನಾಟಕದ ಸಾಮ್ರಾಜ್ಯವನ್ನು ವಿಸ್ತರಿಸಿ ಒಳ್ಳೇ ವೈಭವದಿಂದ ಆಳುವದನ್ನು ನೋಡಿ ಚಾಲುಕ್ಯರ ಜನ್ಮದ್ವೇಷಿಗಳಾದ ಪಲ್ಲವರಿಗೆ ಸಹನವಾಗಲಿಲ್ಲ. ನರಸಿಂಹವರ್ಮನೆಂಬ ಪಲ್ಲವ ಅರಸನು ಚೋಳ, ಚೇರ, ಪಾಂಡ್ಯ ಅರಸರ ಸಹಾಯವನ್ನು ಹೊಂದಿ ದೊಡ್ಡ ದಂಡಿನೊಡನೆ ಬಾದಾಮಿಯನ್ನು ಮುತ್ತಿದನು. ಆಗ ಪುಲಕೇಶಿಗೂ ನರಸಿಂಹವರ್ಮ

ನಿಗೂ ಘೋರವಾದ ಕಾಳಗವಾಗಿ ಪುಲಕೇಶಿಯು ರಣಾಂಗಣದಲ್ಲಿ ವೀರಸ್ವರ್ಗವನ್ನು ಹೊಂದಿದನು. (ಕ್ರಿ. ಶ. ೬೪೨) ಬಳಿಕ ಪಲ್ಲವರು ಬದಾಮಿಯನ್ನು ಸುಟ್ಟು ಹಾಳುಮಾಡಿದರು.

೬. ಪುಲಕೇಶಿಗೆ ವಿನಯಾದಿತ್ಯ, ಚಂದ್ರಾದಿತ್ಯ, ವಿಕ್ರಮಾದಿತ್ಯರೆಂಬ ಮೂವರು ಮಕ್ಕಳಿದ್ದರು. ಅವರಲ್ಲಿ ಹಿರಿಯವನಾದ ವಿನಯಾದಿತ್ಯನು ಪುಲಕೇಶಿಯ ತರುವಾಯ ರಾಜ್ಯವಾಳಿ ತೀರಿಕೊಳ್ಳಲು ಚಂದ್ರಾದಿತ್ಯನ ಮಗನು ಪಟ್ಟವೇರಿದನು. ಆದರೆ ಇವನು ಚಿಕ್ಕವನಿದ್ದದರಿಂದ ಅವನ ತಾಯಿಯಾದ ವಿಜಯಾ ಮಹಾದೇವಿ ಎಂಬವಳು ತಾನೇ ಕಾರಭಾರ ಸಾಗಿಸುತ್ತಿದ್ದಳು.

೭. **ವಿಕ್ರಮಾದಿತ್ಯ**(?—೬೮೦):—ಇವನ ಆಳಿಕೆಯಲ್ಲಿಯೂ ಪಲ್ಲವರ ಹಾವಳಿಯು ತಪ್ಪಲಿಲ್ಲ. ವಿಕ್ರಮಾದಿತ್ಯನು ಚೋಳ, ಚೇರ, ಪಾಂಡ್ಯ ಅರಸರೊಡನೆ ಹೋರಾಡಿ ಪಲ್ಲವರನ್ನು ಶಿಕ್ಷಿಸುವದಕ್ಕಾಗಿ ಕಾಂಚಿಗೆ ಹೊರಟನು. ಆಗ ಅಲ್ಲಿ ಆಳುತ್ತಿದ್ದ ರಾಜಸಿಂಹನೆಂಬ ಪಲ್ಲವ ಅರಸನನ್ನು ನೋಲಿಸಿ ಕಾಂಚಿಯ ದೇವಸ್ಥಾನಕ್ಕೆ ಹೇರಳ ದ್ರವ್ಯವನ್ನು ಕೊಟ್ಟನು. ಇವರಿಂದ ಚಾಲುಕ್ಯ ಸಾಮ್ರಾಜ್ಯಕ್ಕೆ ಬಂದೊದಗಿದ ತೊಂದರೆಯು ದೂರಾಗಿ ಮತ್ತೇ ಪುಲಕೇಶಿಯ ಕಾಲದ ಗೌರವವು ಪುನಃ ಪ್ರಾಪ್ತವಾಯಿತು. ವಿಕ್ರಮಾದಿತ್ಯನು ಕ್ರಿ. ಶ. ದ ೬೮೦ರಲ್ಲಿ ತೀರಿಕೊಂಡನು.

೮. **ವಿನಯಾದಿತ್ಯ** (೬೮೦—೬೯೬):— ವಿಕ್ರಮಾದಿತ್ಯನ ತರುವಾಯ ಅವನ ಮಗನಾದ ವಿನಯಾದಿತ್ಯನು ಸಿಂಹಾಸನವನ್ನೇರಿದನು. ಸ್ವಲ್ಪ ದಿವಸಗಳಲ್ಲಿಯೆ ಪಲ್ಲವರು ಮತ್ತೆ ತಲೆಯೆತ್ತಿದರು. ವಿನಯಾದಿತ್ಯನು ಪಲ್ಲವರನ್ನೂ ಅವರ ಸಹಾಯರನ್ನೂ ಮುರಿಬಡಿದು ಗಂಗರೇ ಮೊದಲಾದವರನ್ನು ಸಾಮಂತರನ್ನಾಗಿ ಮಾಡಿದನು. ಮತ್ತು ಸಿಂಹಲದ್ವೀಪದವರಿಂದ ಕಪ್ಪಕಾಣಿಕೆಗಳನ್ನೆತ್ತಿದನು. ಈ ಪ್ರಕಾರ ವಿನಯಾದಿತ್ಯನು ಸಾಮ್ರಾಜ್ಯಕ್ಕೆ ಶತ್ರುಬಾಧೆಯಿಲ್ಲದಂತೆ ಮಾಡಿ ಕ್ರಿ. ಶ. ೬೯೬ ರಲ್ಲಿ ಮರಣ ಹೊಂದಿದನು.

೯. **ವಿಜಯಾದಿತ್ಯ** (೬೯೬—೭೩೩):—ಇವನು ವಿನಯಾದಿತ್ಯನ ಮಗನು. ಇವನ ಆಳಿಕೆಯಲ್ಲಿ ಪಟ್ಟದಕಲ್ಲಿನಲ್ಲಿ ಸಂಗಮೇಶ್ವರ ದೇವಾಲಯವು ಕಟ್ಟಲ್ಪಟ್ಟಿತು. ವಿಜಯಾದಿತ್ಯನು ಯಾವತೊಂದರೆಯೂ ಇಲ್ಲದೆ ೩೭ ವರ್ಷ ರಾಜ್ಯವಾಳಿದನು.

೧೦. **ಎರಡನೇ ವಿಕ್ರಮಾದಿತ್ಯ** (೭೩೪-೭೪೬)— ವಿಜಯಾದಿತ್ಯ ಹಿರಿಯ ಮಗನಾದ ಎರಡನೇ ವಿಕ್ರಮಾದಿತ್ಯನು ಕ್ರಿ. ಶ. ೭೩೪ರಲ್ಲಿ ಪಟ್ಟಕ್ಕೆ ಬಂದು ೧೨ ವರ್ಷ ವೈಭವದಿಂದ ರಾಜ್ಯವಾಳಿದನು. ಇವನು ಪಲ್ಲವರ ಮೇಲೆ ದಂಡೆತ್ತಿ ಹೋಗಿ ನಂದಿಪೋತವರ್ಮನೆಂಬವನನ್ನು ಕೊಂದು ಕಾಂಚಿಯನ್ನು ಹಿಡಕೊಂಡನು. ಮತ್ತ ಪಾಂಡ್ಯಚೋಳರನ್ನು ಗೆದ್ದು ದಕ್ಷಿಣ ಸಮುದ್ರದ ದಂಡೆಯ ಮೇಲೆ ಜಯಸ್ತಂಭವನ್ನ ನಿಲ್ಲಿಸಿದನು.

೧೧. ಎರಡನೇ ಕೀರ್ತಿವರ್ಮ (೭೪೮-೭೫೪):—೨ನೇ ವಿಕ್ರಮಾದಿತ್ಯನ ಮರಣದ ನಂತರ ಅವನ ಮಗನಾದ ೨ನೇ ಕೀರ್ತಿವರ್ಮನು ೧೦ ವರ್ಷ ರಾಜ್ಯವಾಳಿದನು. ಇವನ ಕಾಲಕ್ಕೆ ಉತ್ತರದಲ್ಲಿ ರಾಷ್ಟ್ರಕೂಟರೂ ದಕ್ಷಿಣದಲ್ಲಿ ಪಲ್ಲವರೂ ಯುದ್ಧಗಳನ್ನು ಹೂಡಿದರು. ಮತ್ತು ಅನೇಕ ಸಾಮಂತರಾಜರು ಸ್ವತಂತ್ರರಾಗಲಿಕ್ಕೆ ಯತ್ನಿಸತೊಡಗಿದರು. ಇದರಿಂದ ಚಾಲುಕ್ಯರ ಕಸುವು ಕಡಿಮೆಯಾಗತೊಡಗಿತ್ತು. ೨ನೇ ಕೀರ್ತಿವರ್ಮನ ತರುವಾಯ ರಾಷ್ಟ್ರಕೂಟರು ಚಾಲುಕ್ಯರ ಸಾಮ್ರಾಜ್ಯವನ್ನು ಆಕ್ರಮಿಸಿದರು.

೧೨. ಈ ಕಾಲದ ಕರ್ನಾಟಕದ ಸ್ಥಿತಿ:—ಬದಾಮಿಯ ಚಾಲುಕ್ಯರು ಸುಮಾರು ಎರಡು ಶತಮಾನಗಳ ವರೆಗೆ ಕರ್ನಾಟಕ ಸಾಮ್ರಾಜ್ಯವನ್ನಾಳಿದರು. ಈ ವಂಶದ ಅರಸರೆಲ್ಲರೂ ಬಹು ಶೂರರು. ವೈದಿಕಮತದ ಉದ್ಧಾರಕ್ಕಾಗಿ ಬಹಳ ಪ್ರಯತ್ನಪಟ್ಟರು. ಇವರ ಆಳಿಕೆಯಲ್ಲಿ ಕನ್ನಡ ಭಾಷೆಯು ಊರ್ಜಿತಸ್ಥಿತಿಯನ್ನು ಹೊಂದಿತು. ಎಷ್ಟೋ ಶಿಲಾಶಾಸನಗಳು ಕನ್ನಡದಲ್ಲಿಯೇ ಬರೆಯಲ್ಪಟ್ಟವು. ಶಿಲ್ಪ ಚಿತ್ರಕಲೆಗಳಿಗೆ ಉತ್ತೇಜನವು ದೊರೆಯಿತು. ಅಜಂತಾದಲ್ಲಿ ಲೋಕವಿಖ್ಯಾತವಾದ ಕೆತ್ತಿಗೆಯ ಕೆಲಸಗಳು ಮಾಡಲ್ಪಟ್ಟವು. ದೊಡ್ಡ ದೊಡ್ಡ ವರ್ತಕರು ಹಡಗುಗಳ ವ್ಯಾಪಾರ ಮಾಡುತ್ತಿದ್ದರು. ರಾಜಪುತರೂ ಉಳಿದ ಅರಸರೂ ಸಾಮಂತರಾಜರಾಗಿದ್ದರು. ಪ್ರಜೆರಿಗೆ ಸುಖಸಮಾಧಾನಗಳು ದೊರೆಯಬೇಕೆಂಬದೇ ಈ ರಾಜರ ಮುಖ್ಯ ಧ್ಯೇಯವಾಗಿತ್ತು.

ಕಲ್ಯಾಣದ ಚಾಲುಕ್ಯರು.

೭ ಚಾಲುಕ್ಯರ ೨ನೇ ಮನೆತನ(೯೭೩-೧೧೮೯):— ಕ್ರಿ. ಶ. ೯೭೩ರಲ್ಲಿ ಚಾಲುಕ್ಯವಂಶದ ೨ನೇ ತೈಲಪನು ರಾಷ್ಟ್ರಕೂಟರ ಕಡೆಯ ಅರಸನಾದ ೪ನೇ ಕಕ್ಕನನ್ನು ಸೋಲಿಸಿ ಕಲ್ಯಾಣ ಪಟ್ಟಣದಲ್ಲಿ ಪುನಃ ಚಾಲುಕ್ಯರ ರಾಜ್ಯವನ್ನು ಸ್ಥಾಪಿಸಿದನು. ಮುಂದೆ ಈ ವಂಶದ ಅರಸರು ಸುಮಾರು ೨೦೦ ವರ್ಷಗಳವರೆಗೆ ಆಳಿದರು. ಅವರಲ್ಲಿ ೧ನೇ ಸೋಮೇಶ್ವರ ಮತ್ತು ವಿಕ್ರಮಾದಿತ್ಯ ಇವರು ಒಳ್ಳೇ ಪ್ರಸಿದ್ಧರಾಗಿದ್ದರು.

೧. ೨ನೇ ತೈಲಪ:—(೯೭೩-೯೯೭) ಇವನಿಗೆ ಆಹವ ಮಲ್ಲದೇವ, ಸತ್ಯಾಶ್ರಯ ಕುಲತಿಲಕ ಎಂಬ ಬೇರೆಹೆಸರುಗಳೂ ಇದ್ದವು. ಸವದತ್ತಿಯ ರಟ್ಟರೂ, ಕೊಂಕಣದ ಶಿಲಾಹಾರರೂ, ಚೇದಿಯ ಅರಸರೂ, ಇವನ ಮಾಂಡಲಿಕರಾಗಿದ್ದರು. ಇವನು ಚೋಳರ ಕೂಡ ಯುದ್ಧಮಾಡಿ ಅವರನ್ನು ಸೋಲಿಸಿದನು. ಮತ್ತು ಇಡೀ ಕುಂತಳ ದೇಶವನ್ನು ಗೆದ್ದು ಕುಂತಳೇಶ್ವರನೆಂಬ ಬಿರುದು ಧರಿಸಿದನು. ಮಾಳವದ ಪರಮಾರ ವಂಶದ ಮುಂಜನೆಂಬ ಅರಸನು ದೊಡ್ಡ ದಂಡಿನೊಡನೆ ಗೋದಾವರಿಯನ್ನು ದಾಟಿ ಬರಲು ತೈಲಪನು ಅವನನ್ನು ಸೋಲಿಸಿ ಸೆರೆಹಿಡಿದನು. ಮುಂಜನು ತಪ್ಪಿಸಿಕೊಳ್ಳಲಿಕ್ಕೆ ಪ್ರಯತ್ನಮಾಡಿದ್ದರಿಂದ ಕೊಲ್ಲಲ್ಪಟ್ಟನು. ಈ ಮೇರಿಗೆ ಕರ್ನಾಟಕದ ವರ್ಚಸ್ಸನ್ನು ಮತ್ತೆ ಮಾಳವದ ವರೆಗೆ ಹಬ್ಬಿಸಿ ತೈಲಪನು ೯೯೭ರಲ್ಲಿ ತೀರಿಕೊಂಡನು.

೨. ಸತ್ಯಾಶ್ರಯ:— (೯೯೭–೧೦೦೮) ತೈಲಪನ ತರುವಾಯ ಅವನ ಮಗನಾದ ಸತ್ಯಾಶ್ರಯನು ೯೯೭ರಲ್ಲಿ ಪಟ್ಟವೇರಿದನು. ಇವನ ಆಳಿಕೆಯಲ್ಲಿ ಚೋಳವಂಶದ ರಾಜರಾಜನೆಂಬವನು ಕರ್ನಾಟಕದ ಮೇಲೆ ದಾಳಿಯನ್ನು ಮಾಡಲು ಸತ್ಯಾಶ್ರಯನು ಅವನನ್ನು ಸೋಲಿಸಿ ಹಿಂದಕ್ಕಟ್ಟಿದನು ರನ್ನಕವಿಯು ಈ ಸತ್ಯಾಶ್ರಯನನ್ನು ಭೀಮಸೇನನಿಗೆ ಹೋಲಿಸಿ ಗದಾಯುದ್ಧವೆಂಬ ಗ್ರಂಥವನ್ನು ಬರೆದನು.

೩. ೨ನೇ ಜಯಸಿಂಹ:— (೧೦೦೮–೪೨) ಇವನು ಸತ್ಯಾಶ್ರಯನ ಕಿರಿಯ ಮಗನು. ಇವನಿಗೆ ಜಗದೇಕಮಲ್ಲನೆಂಬ ಬಿರುದಿತ್ತು. ಇವನು ಪರಮಾರರ ಭೋಜ ರಾಜನನ್ನು ಸೋಲಿಸಿ ಉತ್ತರದಲ್ಲಿ ತನ್ನ ರಾಜ್ಯವನ್ನು ವಿಸ್ತಾರಗೊಳಿಸಿದನು. ಮತ್ತು ಚೋಳವಂಶದ ರಾಜೇಂದ್ರ ಚೋಳನನ್ನು ಗೆದ್ದು ಅವನ ರಾಜ್ಯದ ಕೆಲವು ಭಾಗವನ್ನು ಕಸುಕೊಂಡನು.

೪. ೧ನೇ ಸೋಮೇಶ್ವರ:— (೧೦೪೨–೬೮) ಜಯಸಿಂಹನ ತರುವಾಯ ಅವನ ಮಗನಾದ ಸೋಮೇಶ್ವರನು ಪಟ್ಟವೇರಿದನು. ಇವನಿಗೆ ಆಹವ ಮಲ್ಲನೆಂಬ ಬಿರುದಿತ್ತು. ಇವನ ಆಳಿಕೆಯಲ್ಲಿ ಚೋಳರು ಕರ್ನಾಟಕದ ಮೇಲೆ ದಾಳಿಮಾಡಿ ಲಕ್ಷ್ಮೇಶ್ವರನನ್ನು ಸುಟ್ಟು ಅಲ್ಲಿಯ ದೇವಾಲಯಗಳನ್ನು ನಾಶಪಡಿಸಿದರು. ಆದರೆ ಇವನು ಮುಂದೆ ಸ್ವಲ್ಪ ದಿವಸಗಳಲ್ಲಿಯೇ ದಂಡೆತ್ತಿಹೋಗಿ ಚೋಳರ ಸೇಡು ತೀರಿಸಿಕೊಂಡನು. ದೇವಗಿರಿಯ ಯಾದವರೂ, ಹಾನಗಲ್ಲಿನ ಕದಂಬರೂ, ಸವದತ್ತಿಯ ರಟ್ಟರೂ, ಗಂಗರೂ, ಹೊಯ್ಸಳರೂ ಇವನ ಮಾಂಡಲಿಕರಾಗಿದ್ದರು. ಸೋಮೇಶ್ವರನು ಉತ್ತರದಲ್ಲಿ ಆಸಾಮು ಬಂಗಾಲಗಳ ಮೇಲೆಯೂ ದಕ್ಷಿಣದಲ್ಲಿ ಸಿಂಹಲದ್ವೀಪದ ಮೇಲೆಯೂ ದಾಂಡು ಮಾಡಿದನು. ಕೇರಳದ ಅರಸರನ್ನು ಗೆದ್ದು ಕಾಂಚಿಯನ್ನು ಸುಲಿದನು. ಇವನಿಗೂ ಚೋಳ ಅರಸನಾದ ರಾಜಾಧಿರಾಜನಿಗೂ ಕೃಷ್ಣಾನದಿಯ ದಂಡೆಯಲ್ಲಿದ್ದ ಕೊಪ್ಪದ ಹತ್ತಿರ ಯುದ್ಧವಾಗಿ ಸೋಮೇಶ್ವರನು ರಾಜಾಧಿರಾಜನನ್ನು ಕೊಂದನು. ಇವನ ಆಳಿಕೆಯಲ್ಲಿ ಚಾಲುಕ್ಯರ ರಾಜ್ಯವು ಘನತೆಗೇರಿತು. ಇವನ ಮಕ್ಕಳಲ್ಲಿ ೨ನೆಯವನಾದ ೬ನೇ ವಿಕ್ರಮಾದಿತ್ಯನು ಶೂರನೂ ಚತುರನೂ ಇದ್ದನು. ಆದದರಿಂದ ಇವನನ್ನೇ ಯುವರಾಜನನ್ನಾಗಿ ಮಾಡಬೇಕೆಂದು ಸೋಮೇಶ್ವರನು ಯೋಚಿಸಿದನು. ಆದರೆ ವಿಕ್ರಮನು ಈ ಬಹುಮಾನಕ್ಕೆ ಒಪ್ಪದೆ ಗಂಗವಾಡಿಯ ಮಂಡಲೇಶನಾದನು. ಆಗ ಹಿರಿಯ ಮಗನಾದ ೨ನೇ ಸೋಮೇಶ್ವರನು ಯುವರಾಜನಾದನು. ಆಹವಮಲ್ಲನು ಜ್ವರದಿಂದ ಪೀಡಿತನಾಗಿ ತುಂಗಭದ್ರೆಯಲ್ಲಿ ಹಾರಿಕೊಂಡು ಪ್ರಾಣಬಿಟ್ಟನು.

೫. ೨ನೇ ಸೋಮೇಶ್ವರ:— ಇವನು ಪಟ್ಟಕ್ಕೆ ಬಂದು ಸ್ವಲ್ಪ ದಿವಸಗಳಲ್ಲಿಯೇ ದುರ್ನಡತೆಯಿಂದ ಪ್ರಜೆಗಳನ್ನು ಕಾಡತೊಡಗಿದನು. ಮತ್ತು ತಮ್ಮನಾದ ವಿಕ್ರಮನೊಡನೆ ಯುದ್ಧಹೂಡಿದನು. ಆದರೆ ವಿಕ್ರಮನು ಇವನನ್ನು ಸುಲಭವಾಗಿ ಸೋಲಿಸಿ ತಾನೇ ಪಟ್ಟವೇರಿದನು.

೬. ೩ನೇ ವಿಕ್ರಮಾದಿತ್ಯ:—(೧೦೭೬–೧೧೨೬) ಇವನು ಸುಮಾರು ೫೦ ವರ್ಷ ರಾಜ್ಯವಾಳಿದನು. ವಿಕ್ರಮನ ಆಳಿಕೆಯಲ್ಲಿ ಚಾಲುಕ್ಯರ ರಾಜ್ಯವು ಪರಮಾವಧಿ ಘನತೆಗೇರಿತು. ತಂದೆಯಿರುವಾಗಲೇ ಇವನು ಆಸಾಮ ಬಂಗಾಲಗಳ ಮೇಲೆ ದಾಂಡು ಮಾಡಿ ಉತ್ತರದಲ್ಲಿ ತನ್ನ ವರ್ಚಸ್ಸು ಕೂಡಿಸಿದ್ದನು; ಮತ್ತು ಚೋಳ ಅರಸನಾದ ವೀರರಾಜೇಂದ್ರನ ಮಗಳನ್ನು ಮದುವೆಯಾಗಿ ಚಾಲುಕ್ಯರಿಗೂ ಚೋಳರಿಗೂ ಬಹು ಕಾಲದಿಂದಿದ್ದ ಹಗೆತನವನ್ನು ಇಲ್ಲದಂತೆ ಮಾಡಿಕೊಂಡಿದ್ದನು. ದೇವಗಿರಿಯ ಯಾದವರು, ಕೊಂಕಣ ಮತ್ತು ಕೊಲ್ಹಾಪುರಗಳ ಶಿಲಾಹಾರರು, ಗೋವೆ ಹಾನಗಲ್ಲು ಬನವಾಸಿಗಳ ಕದಂಬರು, ಗುತ್ತಲದ ಗುತ್ತರು, ಸವದತ್ತಿಯ ರಟ್ಟರು, ಗಂಗವಾಡಿಯ ಹೊಯ್ಸಳರು, ಪಾಂಡ್ಯರು ಇವರೇ ಮೊದಲಾದವರು ವಿಕ್ರಮನಿಗೆ ಮಾಂಡಲಿಕರಾಗಿದ್ದರು. ಇವನ ತಮ್ಮನಾದ ಜಯಸಿಂಹನು ಯುವರಾಜನಾಗಿದ್ದು ಕುಲೋತ್ತುಂಗ ಚೋಳನ ಸಹಾಯದಿಂದ ಯುದ್ಧ ಹೂಡಿದನು. ಆದರೆ ವಿಕ್ರಮಾದಿತ್ಯನು ಜಯಸಿಂಹನನ್ನು ಸೋಲಿಸಿ ಓಡಿಸಿದನು. ವಿಕ್ರಮನ ಪಟ್ಟದರಸಿಯರಲ್ಲಿ ಲಕ್ಷ್ಮೀದೇವಿ, ತಾರಾದೇವಿ, ಚಂಡಲದೇವಿ ಎಂಬವರು ಬೇರೆ ಬೇರೆ ಭಾಗಗಳ ಒಡತಿಯರಾಗಿದ್ದರು.

ವಿಕ್ರಮನು ಪಟ್ಟಕ್ಕೆ ಕುಳಿತಂದಿನಿಂದ ಒಂದು ಹೊಸ ಶಕವನ್ನು ಪ್ರಾರಂಭಿಸಿದನು. ಇವನು ಪಂಡಿತರಿಗೂ ಕವಿಗಳಿಗೂ ಆಶ್ರಯ ಕೊಡುತ್ತಿದ್ದನು. ಇವನ ಆಸ್ಥಾನ ಕವಿಯಾದ ಬಿಲ್ಹಣನು ವಿಕ್ರಮಾಂಕದೇವಚರಿತನೆಂಬ ಕಾವ್ಯವನ್ನೂ ಮತ್ತೊಬ್ಬ ಕವಿಯಾದ ವಿಜ್ಞಾನೇಶ್ವರನು ಮಿತಾಕ್ಷರವೆಂಬ ಗ್ರಂಥವನ್ನೂ ಬರೆದರು. ಇವನು ಎಲ್ಲ ಧರ್ಮಗಳಿಗೂ ಸರಿಯಾಗಿ ಉತ್ತೇಜನಕೊಟ್ಟನು. ಕೆಲವು ಜಿನಾಲಯಗಳನ್ನು ಕಟ್ಟಿಸಿದ್ದಲ್ಲದೆ ಬೌದ್ಧ ವಿಹಾರಗಳಿಗೆ ಉಂಬಳಿಹಾಕಿಕೊಟ್ಟನು. ಇವನ ತರುವಾಯ ಇವನ ೨ನೇ ಮಗನಾದ ೩ನೇ ಸೋಮೇಶ್ವರನು ಪಟ್ಟವೇರಿದನು.

೭. ೩ನೇ ಸೋಮೇಶ್ವರ:— (೧೧೨೬–೧೧೩೮) ಇವನ ಆಳಿಕೆಯಲ್ಲಿ ಹೊಯ್ಸಳರು, ಗಂಗರು, ಕದಂಬರು, ಪಾಂಡ್ಯರು, ಶಿಲಾಹಾರರು ಮುಂತಾದವರು ಸ್ವತಂತ್ರರಾಗಲಿಕ್ಕೆ ಇಚ್ಛಿಸಿದರು. ಆದರೆ ಸೋಮೇಶ್ವರನು ದೊಡ್ಡ ದಂಡಿನೊಡನೆ ಹೊರಟು ಇವರೆಲ್ಲರನ್ನು ದಂಡಿಸಿದನು. ಇವನು ಸಂಸ್ಕೃತದಲ್ಲಿ ಅಭಿಲಷಿತಾರ್ಥ ಚಿಂತಾಮಣಿ ಎಂಬ ಗ್ರಂಥವನ್ನು ಬರೆದನು.

೮ ಜಗದೇಕಮಲ್ಲ:— (೧೧೩೮–೧೧೫೦)– ಇವನು ೩ನೇ ಸೋಮೇಶ್ವರನ ಹಿರಿಯ ಮಗನು. ಇವನ ಆಳಿಕೆಯಲ್ಲಿ ಹೊಯ್ಸಳ ಮೊದಲಾದ ಮಾಂಡಲಿಕ ರಾಜರು ಸ್ವತಂತ್ರರಾಗಲಿಕ್ಕೆ ಯತ್ನಿಸಿದರು.

೯. ೩ನೇತೈಲಪ (೧೧೫೦–೧೧೬೮) ಜಗದೇಕಮಲ್ಲನ ತರುವಾಯ ಅವನ ತಮ್ಮನಾದ ೩ನೇ ತೈಲಪನು ೧೧೫೦ರಲ್ಲಿ ಪಟ್ಟವೇರಿದನು. ಇವನ ಆಳಿಕೆಯಲ್ಲಿ ಚಾಲು

ಕ್ಯರ ರಾಜ್ಯವು ಮುರಕಳಿಗೆ ಬಂದಿತು. ಮಾಂಡಲಿಕನಾದ **ಕಲಚೂರ್ಯ** ವಂಶದ ಬಿಜ್ಜಳನು ಪ್ರಬಲನಾಗಿ ರಾಜ್ಯಸೂತ್ರಗಳನ್ನೆಲ್ಲ ತನ್ನಕೈಯಲ್ಲಿ ತೆಗೆದುಕೊಂಡನು. ಮುಂದೆ ಕಾಕತೀಯ ವಂಶದ ಪ್ರೋಳನು ದಂಡೆತ್ತಿ ಬಂದು ತೈಲಪನನ್ನು ಯುದ್ಧದಲ್ಲಿ ಕೊಂದನು. ಈ ಸಂಧಿಯನ್ನು ಸಾಧಿಸಿ ಬಿಜ್ಜಳನು ಕಲ್ಯಾಣ ಪಟ್ಟಣದಲ್ಲಿ ತಾನೇ ಪಟ್ಟವೇರಿದನು.

ರಾಷ್ಟ್ರಕೂಟರು.

೮. **ರಾಷ್ಟ್ರಕೂಟರು**– (೭೫೩–೯೭೩) ಇವರ ವಂಶಜರು ಮೊದಲು ನಾಸಿಕ ಜಿಲ್ಲೆಯೊಳಗಿನ ಮಯೂರಖಂಡಿಯಲ್ಲಿ ಆಳುತ್ತಿದ್ದರು. ಶಾತವಾಹನರು ಕರ್ನಾಟಕದಲ್ಲಿ ಆಳುತ್ತಿದ್ದಾಗ ರಾಷ್ಟ್ರಕೂಟರು ಅವರಿಗೆ ಅಧೀನರಾಗಿ ಆಳುತ್ತಿದರು. ಮುಂದೆ ಗುಜರಾಥದ ಸತ್ರಪರಿಗೂ ಕದಂಬ ಅರಸರಿಗೂ ಇವರು ಮಾಂಡಲಿಕರಾಗಿದ್ದರೆಂದು ಕಂಡುಬರುತ್ತದೆ. ಮೊದಲಿನಿಂದ ಇವರು ಸ್ವತಂತ್ರರಾಗಲಿಕ್ಕೆ ಸಮಯವನ್ನು ನೋಡುತ್ತಿದ್ದರು. ಇವರು ಆಳುವ ಸೀಮೆಗೆ ರಟ್ಟಪಾಡಿಯೆಂಬ ಹೆಸರು ಇತ್ತು. ಇವರು ೮ನೇ ಶತಮಾನದಿಂದ ಪ್ರಬಲರಾಗಿ ಸ್ವತಂತ್ರದಿಂದ ಆಳಹತ್ತಿದರು. ೯ನೇ ಶತಮಾನದಲ್ಲಿ ಇವರು ಮಾನ್ಯಖೇಟ (ಮಳಖೇಡ)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ದಂತಿವರ್ಮನಿಂದಲೇ ರಾಷ್ಟ್ರಕೂಟರ ನಿಜವಾದ ಇತಿಹಾಸವು ಪ್ರಾರಂಭವಾಯಿತೆಂದು ಹೇಳಬಹುದು.

೧. **ದಂತಿವರ್ಮ**— (೭೫೫–೭೬೦) ಇವನು ಚಾಲುಕ್ಯವಂಶದ ಕಡೆಯ ಅರಸನಾದ ಕೀರ್ತಿವರ್ಮನನ್ನು ಸೋಲಿಸಿ ರಾಷ್ಟ್ರಕೂಟರ ಸ್ವಾತಂತ್ರ್ಯವನ್ನು ಸ್ಥಾಪಿಸಿದನು. ಇವನ ಕಾಲದಲ್ಲಿ ರಾಷ್ಟ್ರಕೂಟರ ರಾಜ್ಯವು ನರ್ಮದೆಯಿಂದ ತುಂಗಭದ್ರೆಯವರೆಗೆ ಹಬ್ಬಿತು. ಇವನಿಗೆ "ರಾಜಾಧಿರಾಜ ಪರಮೇಶ್ವರ"ನೆಂಬ ಬಿರುದಿತ್ತು. ದಂತಿವರ್ಮನು ಪರಾಕ್ರಮಿಯಾಗಿದ್ದರೂ ಲೋಕಪ್ರಿಯನಾಗಿದ್ದಿಲ್ಲ. ಇವನ ಕಕ್ಕನಾದ ಕೃಷ್ಣನು ಇವನನ್ನು ಕೊಂದು ಸಿಂಹಾಸನವನ್ನು ಆಕ್ರಮಿಸಿದನು.

೨. **೧ನೇ ಕೃಷ್ಣ**—(೭೬೦–೭೭೫) ಇವನು ರಾಷ್ಟ್ರಕೂಟರ ರಾಜ್ಯವನ್ನು ಸ್ಥಿರಪಡಿಸುವದಕ್ಕಾಗಿ ಚಾಲುಕ್ಯರೊಂದಿಗೆ ಹೋರಾಡಿ ಮತ್ತೆ ಅವರನ್ನು ಜಯಿಸಿದನು. ಲೋಕವಿಖ್ಯಾತವಾದ ವೇರೂಳದ ಕೈಲಾಸೇಶ್ವರನ ಗುಡಿಯು ಇವನ ಕಾಲದಲ್ಲಿಯೇ ಕಟ್ಟಲ್ಪಟ್ಟಿತು.

೩. **೨ನೇ ಗೋವಿಂದ**— (೭೭೫–೭೯೦) ಕೃಷ್ಣನ ತರುವಾಯ ಅವನ ಮಗನಾದ ಗೋವಿಂದನು ಪಟ್ಟವೇರಿದನು. ಇವನು ಪರಾಕ್ರಮಿಯಾಗಿದ್ದರೂ ವಿಷಯಾಸಕ್ತನಾದ್ದರಿಂದ ರಾಜ್ಯಕಾರಭಾರದಲ್ಲಿ ಹೆಚ್ಚಾಗಿ ಮನಸ್ಸು ಹಾಕುತ್ತಿದ್ದಿಲ್ಲ. ಆದದರಿಂದ ತನ್ನ ತಮ್ಮನಾದ ಧ್ರುವನಿಗೆ ಇವನು ರಾಜ್ಯವನ್ನು ಒಪ್ಪಿಸಿದನು.

೪. **ಧ್ರುವ**—ಇವನು ಒಳ್ಳೇ ಪರಾಕ್ರಮಿಯೂ ಚತುರನೂ ಆಗಿದ್ದನು. ಗಂಗರಾಜನನ್ನು ಗೆದ್ದು ಸೆರೆಯಲ್ಲಿಟ್ಟನು. ಮತ್ತು ಪಲ್ಲವರಾಜನನ್ನೂ ಸೋಲಿಸಿದನು

ಇವನಿಗೆ 'ರಣಾವಲೋಕ'ನೆಂಬ ಬಿರುದಿತ್ತು. ಭಿನಮಾಳದ ವತ್ಸರಾಜನನ್ನು ಸೋಲಿಸಿ ಅವನಿಂದ ಶ್ವೇತಛತ್ರಗಳನ್ನು ಕಸುಕೊಂಡನು.

೫. **೩ನೇ ಗೋವಿಂದ**–(೭೯೪–೮೧೫)ಧ್ರುವನ ತರುವಾಯ ಅವನ ಮಗನಾದ ೩ನೇ ಗೋವಿಂದನು ೭೯೪ರಲ್ಲಿ ಪಟ್ಟವೇರಿದನು. ಇವನು ರಾಷ್ಟ್ರಕೂಟರ ಅರಸರಲ್ಲಿ ಒಳ್ಳೆಯೆಹೆಸರಾದವನು. ಇವನ ಆಳಿಕೆಯ ಆರಂಭದಲ್ಲಿ ರಾಷ್ಟ್ರಕೂಟ ಮನೆತನದ ಶತ್ರುಗಳಾದ ೧೨ಜನ ಮಾಂಡಲಿಕ ರಾಜರು ಒಳಸಂಚುಮಾಡಿ ಬಂಡಾಯವನ್ನೆಬ್ಬಿಸಿದರು. ಆದರೆ ಗೋವಿಂದನು ಹೆದರದೆ ಒಬ್ಬನೇ ಧೈರ್ಯದಿಂದ ಕಾದಿ ಅವರೆಲ್ಲರನ್ನು ಮುರಿದು ಮೂಲೆಗೊತ್ತಿದನು. ಗಂಗರಾಜನಾದ ಶಿವಮಾರನು ಕಳೆದುಕೊಂಡ ತನ್ನ ಸ್ವಾತಂತ್ರ್ಯವನ್ನು ಪುನಃ ದೊರಕಿಸಬೇಕೆಂದು ಇವನೊಡನೆ ಕಾಳಗಮಾಡಿ ಮಡಿದು ಹೋದನು. ಗೋವಿಂದನು ದಂಡೆತ್ತಿ ಬರುವನೆಂಬ ಸುದ್ದಿಯನ್ನು ಕೇಳಿ ಗುಜರಾಥದ ಅರಸನು ಓಡಿ ಹೋಗಲು ಇವನು ತನ್ನ ತಮ್ಮನಾದ ಇಂದ್ರನನ್ನು ಲಾಟದೇಶಕ್ಕೆ (ದಕ್ಷಿಣಗುಜರಾಥ) ಸುಭೇದಾರನನ್ನಾಗಿ ನೇಮಿಸಿದನು. ಬಳಿಕ ಮಾಳವದ ಮೇಲೆ ದಾಂಡುಮಾಡಿದನು. ಚಾಲುಕ್ಯ ಮತ್ತು ಪಲ್ಲವ ಅರಸರನ್ನು ಗೆದ್ದು ಅವರಿಂದ ಕಪ್ಪ ಕಾಣಿಕೆ ತೆಗೆದುಕೊಂಡನು. ಇವನ ಕಾಲದಲ್ಲಿ ರಾಷ್ಟ್ರಕೂಟರ ರಾಜ್ಯವು ವಿಂಧ್ಯಾದ್ರಿಯಿಂದ ತುಂಗಭದ್ರೆಯವರೆಗೂ ಪೂರ್ವಸಮುದ್ರದಿಂದ ಪಶ್ಚಿಮ ಸಮುದ್ರದ ವರೆಗೂ ಹಬ್ಬಿತ್ತು. ಇವನಿಗೆ ಪ್ರಭೂತವರ್ಷನೆಂಬ ಬಿರುದಿತ್ತು.

೬. **ನೃಪತುಂಗ** (ಅಮೋಘವರ್ಷ) (೮೧೫–೮೭೭)–ಗೋವಿಂದನ ತರುವಾಯ ಅವನ ಮಗನಾದ ನೃಪತುಂಗನು ಪಟ್ಟವೇರಿ ೬೩ ವರ್ಷ ರಾಜ್ಯವಾಳಿದನು. ಇವನ ಆಳಿಕೆಯಲ್ಲಿ ಚಾಲುಕ್ಯರೂ ಗಂಗರೂ ಸ್ವಾತಂತ್ರ್ಯವನ್ನು ಪಡೆಯುವದಕ್ಕಾಗಿ ಹವಣಿಸಿದರು. ಆದರೆ ಅಮೋಘವರ್ಷನು ಇವರೊಡನೆ ಸಂಧಿಯನ್ನು ಮಾಡಿಕೊಂಡು ಸ್ನೇಹಬೆಳಿಸಿದನು. ಮಳಖೇಡವು ಇವನ ಕಾಲದಲ್ಲಿಯೇ ರಾಜಧಾನಿಯಾಗಿ ಮಾಡಲ್ಪಟ್ಟಿತು. ವ್ಯವಸ್ಥೆಯು ಚನ್ನಾಗಿ ಉಳಿಯಬೇಕೆಂದು ಇವನು ರಾಜ್ಯದಲ್ಲಿ ಕೊಂಕಣ, ಬನವಾಸಿ, ಮಂತ್ರವಾಡಿ, ಪುಲಿಗೆರೆ ಮುಂತಾದ ಹಲವು ಭಾಗಗಳನ್ನು ಮಾಡಿ ಅಲ್ಲಲ್ಲಿಗೆ ಸಾಮಂತರಾಜರನ್ನು ನೇಮಿಸಿದನು. ಅಮೋಘವರ್ಷನು ವಿದ್ಯಾಪಕ್ಷಪಾತಿಯಾಗಿದ್ದನಲ್ಲದೆ ಸ್ವತಃ ಉತ್ತಮ ಕವಿಯಾಗಿದ್ದನು. ಇವನ ಆಸ್ಥಾನದಲ್ಲಿ ಅನೇಕಮಂದಿ ಕವಿಗಳಿದ್ದರು. ನೃಪತುಂಗನು ಬರೆದ 'ಕವಿರಾಜಮಾರ್ಗ' ವೆಂಬ ಗ್ರಂಥವು ಸದ್ಯಕ್ಕೆ ಕನ್ನಡದಲ್ಲಿ ಉಪಲಬ್ಧವಿರುವ ಗ್ರಂಥಗಳಲ್ಲಿ ಮೊದಲನೇದಾಗಿದೆ. ಇವನಿಗೆ ಸರಸ್ವತೀ ತೀರ್ಥಾವತಾರ, ನರಲೋಕಚಂದ್ರ ಮುಂತಾದ ಅನೇಕ ಬಿರುದುಗಳಿದ್ದವು. ಇವನು ಮುಪ್ಪಿನಲ್ಲಿ ತನ್ನ ರಾಜ್ಯವನ್ನು ಮಗನಿಗೆ ಒಪ್ಪಿಸಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿದನು. ಇವನು ದಿಗಂಬರ ಜೈನರಿಗೆ ಉದಾರಾಶ್ರಯವನ್ನು ಕೊಟ್ಟದ್ದರಿಂದ ಆ ಮತವು ಬೆಳಕಿಗೆ ಬಂತು.

೭. **೨ನೇ ಕೃಷ್ಣ**—ಇವನು ನೃಪತುಂಗನ ಮಗನು. ಇವನ ಆಳಿಕೆಯಲ್ಲಿ ಚಾಲುಕ್ಯರ ಅರಸನಾದ ೩ನೇ ವಿಜಯಾದಿತ್ಯನು ದಾಳಿಮಾಡಿ ಮಾನ್ಯಖೇಟವನ್ನು ಸುಟ್ಟನು. ಆದರೆ ಕೃಷ್ಣನು ಕಲಚೂರ್ಯರ ಅರಸನಾದ ಕಕ್ಕಲನ ಮಗಳನ್ನು ಮದುವೆಯಾಗಿ ಕಕ್ಕಲನ ಸಹಾಯದಿಂದ ಚಾಲುಕ್ಯರನ್ನು ಸೋಲಿಸಿ ಅವರ ರಾಜ್ಯವನ್ನು ಆಕ್ರಮಿಸಿ ಸೇಡು ತೀರಿಸಿಕೊಂಡನು. ಇವನಾದರೂ ತಂದೆಯಂತೆಯೇ ಕವಿಗಳಿಗೆ ಆಶ್ರಯಕೊಟ್ಟು ಕನ್ನಡ ವಾಙ್ಮಯವನ್ನು ಊರ್ಜಿತಸ್ಥಿತಿಗೆ ತಂದನು.

೮. **೩ನೇ ಇಂದ್ರ**—ಎರಡನೇ ಕೃಷ್ಣನ ತರುವಾಯ ಅವನ ಮಗನಾದ ಜಗತ್ತುಂಗನು ಪಟ್ಟವೇರದೆ ಮೊಮ್ಮಗನಾದ ೩ನೇ ಇಂದ್ರನು ಪಟ್ಟವೇರಿದನು. ಕನೋಜದ ಮೇಲೆ ದಂಡೆತ್ತಿಹೋಗಿ ಅಲ್ಲಿಯ ಅರಸನಾದ ಮಹಿಪಾಲನನ್ನು ಪಟ್ಟದಿಂದ ತಳ್ಳಿದನು. ಇವನು ಕಲಚೂರ್ಯ ರಾಜಪುತ್ರಿಯಾದ ವಿಜಾಂಬೆಯನ್ನು ಮದುವೆಯಾಗಿದ್ದನು. ಇವನಿಗೆ ೨ನೇ ಅಮೋಘವರ್ಷಣ ಮತ್ತು ೪ನೆಯ ಗೋವಿಂದ ಎಂಬ ಇಬ್ಬರು ಮಕ್ಕಳಿದ್ದರು.

೯. **೪ನೇ ಗೋವಿಂದ**— ತಂದೆಯ ಮರಣದ ತರುವಾಯ ಗೋವಿಂದನು ತನ್ನ ಅಣ್ಣನಾದ ಅಮೋಘವರ್ಷನನ್ನು ಓಡಿಸಿ ತಾನೇ ಅರಸನಾದನು. ಇವನ ಆಳಿಕೆಯಲ್ಲಿ ಚಾಲುಕ್ಯವಂಶದ ಅರಸರು ಯುದ್ಧಹೂಡಿದರು. ಆದರೆ ಗೋವಿಂದನು ಇವರೆಲ್ಲರನ್ನೂ ದಂಡಿಸಿ "ವೀರನಾರಾಯಣ"ನೆಂಬ ಬಿರುದನ್ನು ಧರಿಸಿದನು. ಇವನು ತನ್ನ ಆಳಿಕೆಯ ಕೊನೆಯ ಭಾಗದಲ್ಲಿ ದುರಾಚಾರಕ್ಕೆ ಬಿದ್ದದರಿಂದ ರಾಜ್ಯದಲ್ಲಿ ಅವ್ಯವಸ್ಥೆಯುಂಟಾಯಿತು.

೧೦. **ವಡ್ಡಿಗ**— ೪ನೇ ಗೋವಿಂದನು ಮಕ್ಕಳಿಲ್ಲದೆ ತೀರಿಕೊಂಡದ್ದರಿಂದ ಇವನ ತರುವಾಯ ಇವನ ಕಕ್ಕನಮಗನಾದ ವಡ್ಡಿಗನು ಪಟ್ಟವೇರಿದನು. ಇವನು ತನ್ನ ಮಗಳನ್ನು ಗಂಗರಾಜನಾದ ಬೂತುಗನಿಗೆ ಕೊಟ್ಟು ಪುಲಿಗೆರೆ, ಕಿಸುನಾಡು, ಬಾಗೆ ನಾಡು ಮುಂತಾದವುಗಳನ್ನು ವರದಕ್ಷಿಣೆಯಾಗಿ ಕೊಟ್ಟನು.

೧೧. **೩ನೇ ಕೃಷ್ಣ** (೯೪೦–೯೭೦):—ಇವನ ಕಾಲದಲ್ಲಿ ರಾಷ್ಟ್ರಕೂಟರ ಸಾಮ್ರಾಜ್ಯವು ಪರಮಾವಧಿ ಘನತೆಯನ್ನು ಹೊಂದಿತು. ಇವನು ಗಂಗರೊಡನೆ ಯುದ್ಧಮಾಡಿ ಅವರನ್ನು ಸೋಲಿಸಿದನು. ಪಲ್ಲವ ಅರಸನನ್ನು ಸೆರೆಹಿಡಿದು ಕಾಂಚೀಪಟ್ಟಣವನ್ನು ಕೈವಶಮಾಡಿಕೊಂಡನು. ಗುಜರಾಥದಲ್ಲಿ ಆಳುತ್ತಿದ್ದ ತನ್ನ ಬಂಧು ರಾಜನನ್ನು ಶಿಕ್ಷಿಸಿದನು. ದಕ್ಷಿಣಕ್ಕೆ ದಂಡೆತ್ತಿಹೋಗಿ ಪಾಂಡ್ಯ-ಚೋಳರನ್ನು ಜಯಿಸಿ ಅವರ ರಾಜ್ಯವನ್ನು ಸಾಮಂತರಿಗೆ ಹಂಚಿಕೊಟ್ಟನು. ಮತ್ತು ಸಿಂಹಳದ್ವೀಪದ ಅರಸನನ್ನು ದಂಡಿಸಿ ರಾಮೇಶ್ವರದ ಬಳಿಯಲ್ಲಿ ಒಂದು ರಣಗಂಬವನ್ನು ಹೂಳಿಸಿದನು. ಕೃಷ್ಣನು ಒಳ್ಳೇ ಪರಾಕ್ರಮಿಯೂ ಧರ್ಮಿಷ್ಠನೂ ವಿದ್ಯಾಪಕ್ಷಪಾತಿಯೂ ಆಗಿದ್ದನು.

ಕ ನ್ನ ಡ

ಶಾ ಲಾ ಪ ತ್ರ ಕ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬೪	ಅಕ್ಟೋಬರ ೧೯೨೭	ಸಂ. ೭.

ಸ್ಫುಟವಿಚಾರಗಳು

೧. ಶಾಲಾಪತ್ರಿಕೆಯ ಧೋರಣ.

ಶಾಲಾಪತ್ರಿಕೆಯು ಈಗ ೬೪ ವರ್ಷಗಳಿಂದ ನಡಿಸಲ್ಪಟ್ಟಿದ್ದು ಅದರ ಧೋರಣದಲ್ಲಿ ವಿಶೇಷ ಹೆಚ್ಚು ಕಡಿಮೆಯಾದಂತೆ ಕಂಡುಬರುವದಿಲ್ಲ. ಈ ಪತ್ರಿಕವು ವಿದ್ಯಾಖಾತೆಯ ಮೇಲ್ವಿಚಾರಣೆಯ ಕೆಳಗೆ ಹೊರಡುತ್ತಿರುವದರಿಂದ ಸರಕಾರೀ ಪ್ರಕಟನೆಗಳು, ವ್ಹ-ಫಾ. ಪರೀಕ್ಷೆಯ ಪರಿಣಾಮ ಮೊದಲಾದ ಸಂಗತಿಗಳನ್ನು ಶಿಕ್ಷಕರ ತಿಳುವಳಿಕೆಗಾಗಿ ಪ್ರಸಿದ್ಧಿಸುವದು ಅಗತ್ಯದ ಮಾತಾಗಿದೆ. ಶಿಕ್ಷಣ, ಭಾಷೆ ಮುಂತಾದ ವಿಷಯಗಳ ಸುಧಾರಣೆಯ ಬಗ್ಗೆ ಪ್ರತಿ ಒಂದು ಅಂಕದಲ್ಲಿ ಲೇಖಗಳು ಇದ್ದೇ ಇರುವವು. ಇನ್ನು ಪ್ರಾಥಮಿಕ ಶಾಲೆಗಳ ಹಾಗು ಟ್ರೇನಿಂಗ ಹೊಂದತಕ್ಕ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಹೊಸ ಮಾದರಿಯ ಪುಸ್ತಕಗಳನ್ನು ಬರೆದು ಪ್ರಸಿದ್ಧಿಸುವದು ಅವಶ್ಯವಾದದರಿಂದ ಈಗ ೩ ವರ್ಷಗಳಿಂದ ಕ್ರಮಶಃ ಅವುಗಳನ್ನು ಪ್ರಸಿದ್ಧಿಸುವ ಕೆಲಸವು ನಡೆದದೆ.

೨. ಮಾಧ್ಯಮಿಕ ಶಿಕ್ಷಕರ ಸಮ್ಮೇಲನ.

ಮುಂಬಯಿ ಇಲಾಖೆಯ ಮಾಧ್ಯಮಿಕ ಶಿಕ್ಷಕರ ಸಮ್ಮೇಲನವು ಅಕ್ಟೋಬರ ತಿಂಗಳ ೧೭, ೧೮, ೧೯ ನೇ ತಾರೀಖುಗಳ ದಿವಸ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ಮೈಸೂರ ವಿದ್ಯಾಖಾತೆಯ ಅಕ್ಟಿಂಗ ಡಾಯರೇಕ್ಟರರಾದ ಮಿ. ಸುಬ್ಬರಾವ ಎಮ್. ಎ. ಬ್ಯಾರ ಎಟ್‌ಲಾ ಇವರ ಅಧ್ಯಕ್ಷತೆಯ ಕೆಳಗೆ ಜರಗಿತು. ಮತ್ತು ಇದರೊಂದಿಗೆ ಶಿಕ್ಷಣ ಪ್ರದರ್ಶನವೂ ಕೂಡಿಸಲ್ಪಟ್ಟಿತ್ತು. ಈ ಪ್ರದರ್ಶನದಲ್ಲಿ ಭೂಗೋಲ ವಿಷಯು

ವನ್ನು ತಿಳಿಸುವದಕ್ಕೆ ಸಹಾಯ ವಾಗುವಂಥ ಅನೇಕ ಉಪಕರಣಗಳೂ ಕರ್ನಾಟಕ ಇತಿಹಾವನ್ನು ಸ್ಪಷ್ಟೀಕರಿಸುವಂಥ ತಾಮ್ರಪಟ, ಚಿತ್ರ, ಹಸ್ತಲಿಖಿತ ಪುಸ್ತಕ, ತಾಡ ವಾಲೆಯ ಪ್ರತಿ ಮೊದಲಾದವುಗಳನ್ನಿಟ್ಟಿದ್ದರು.

೧೭ನೇ ತಾ॥ ನ ದಿವಸ ಮುಂಜಾನೆ ೮ ಗಂಟೆಗೆ ಪ್ರಿನ್ಸಿಪಾಲ ಹ್ಯಾಮಟನ್ ಇವರು ಶಿಕ್ಷಣ ಪ್ರದರ್ಶನವನ್ನು ತೆರೆಯುವ ಸವಾರಂಭವನ್ನು ಮಾಡಿದರು. ಮಧ್ಯಾಹ್ನದ ೩ ಗಂಟೆಗೆ ಸ್ವಾಗತ ಕಮಿಟಿಯ ಚೆಅರಮನ್ನರಾದ ಮಿ. ಎಮ್. ಆರ್. ಸಾಖರಿ ಇವರು ತಮ್ಮ ಭಾಷಣವನ್ನು ಓದಿದರು. ಅದರಲ್ಲಿ ಅವರು—" ಕರ್ನಾಟಕವು ಪ್ರಾಚೀನ ಕಾಲದಲ್ಲಿ ವಿದ್ಯೆ – ಕಲೆ – ವೈಭವಗಳಿಂದ ತುಂಬಿ ತುಳುಕುತ್ತಿತ್ತು. ಆದರೆ ಈಗ ಕರ್ನಾಟಕವು ಹೀನಾವಸ್ಥೆಗೆ ಬಂದಿರುವದರಿಂದ ಶಿಕ್ಷಣಾಭಿವೃದ್ಧಿಯಬಗ್ಗೆ ಹೆಚ್ಚು ಪ್ರಯತ್ನವಾಡುವದು ಅವಶ್ಯವೆಂದು ಉದ್ಗಾರತೆಗೆದರು. " ನಂತರ ಅಧ್ಯಕ್ಷರಾದ ಮಿ. ಸುಬ್ಬರಾವ ಇವರು ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಅದರ ಸಾರಾಂಶವೇ ನಂದರೆ— " ತಾವು ಶಿಕ್ಷಣ ವಿಷಯದ ತಜ್ಞರಂತೆ ಭಯಂಕರ ವಿಚಾರವುಳ್ಳವರಲ್ಲ ವೆಂದೂ ಮಾಧ್ಯಮಿಕ ಶಿಕ್ಷಣದ ವಿಷಯವನ್ನು ಸಾಧಾರಣವಾಗಿ ಅಭ್ಯಾಸಿಸುವವರಲ್ಲಿ ತಾವು ಒಬ್ಬರೆಂದೂ ಹೇಳಿದರು. ಸದ್ಯಕ್ಕೆ ಶಿಕ್ಷಣ ಹೊಂದತಕ್ಕವರಲ್ಲಿ ಎಲ್ಲ ಪ್ರಕಾರದ ಜನರು ಸಮಾವೇಶವಾಗಿರುವರು ; ಮತ್ತು ಅವರ ಪರಿಸ್ಥಿತಿಯಾದರೂ ಅಷ್ಟು ಉತ್ತಮ ತರದ್ದಿರುವದಿಲ್ಲ. ಆದ್ದರಿಂದ ಈಗ ಮಾಧ್ಯಮಿಕ ಶಿಕ್ಷಣವು ಹೇಗೆ ಇರಬೇಕೋ ಹಾಗೆ ಇರುವದಿಲ್ಲ. ಮತ್ತು ಪೂರ್ವದಲ್ಲಿ ಯಾವಪ್ರಕಾರವಾಗಿತ್ತೋ ಹಾಗೂ ಇಲ್ಲ. ಮಾಧ್ಯಮಿಕ ಶಿಕ್ಷಣವು ೧೧–೧೨ ವರ್ಷದ ವಯಸ್ಸಿನಲ್ಲಿ ಪ್ರಾರಂಭವಾಗಬೇಕು ; ಮತ್ತು ಈ ಶಿಕ್ಷಣದ ಮುಖ್ಯ ಉದ್ದೇಶವು ಎಲ್ಲ ರೀತಿಯಿಂದ ವ್ಯಕ್ತಿಯ ವಿಕಾಸವೂ ವ್ಯವಹಾರೋಪಯುಕ್ತವೂ ಆಗುವಂತೆ ಇರಬೇಕು. ಶಾಲೆಯಲ್ಲಿ ಗೊಂದಲಹಾಕುವ ಉಲಕೋಚಿ ಹುಡುಗನು ಚಟುವಟಿಕೆಯಿಲ್ಲದ ಬುದ್ಧಿವಂತ ಹುಡುಗನಿಗಿಂತ ಆಯುಷ್ಯದಲ್ಲಿ ಯಶಸ್ವಿಯಾಗುವನು. ಹುಡುಗರು ಪ್ರಾಥಮಿಕ ಶಾಲೆಯಲ್ಲಿ ೬ವರ್ಷ, ಮಾಧ್ಯಮಿಕ ಶಾಲೆಯಲ್ಲಿ ೫ವರ್ಷ, ಕಾಲೇಜದಲ್ಲಿ ೩ವರ್ಷ ಶಿಕ್ಷಣಹೊಂದಿದರೆ ಸಾಕೆಂಬುದು ನನ್ನ ಅಭಿಪ್ರಾಯವು. ಶಿಕ್ಷಣ ಕ್ರಮದಲ್ಲಿ ದೇಶಭಾಷೆಗಳಿಗೆ ಸಾಕಷ್ಟು ಯೋಗ್ಯಸ್ಥಾನವಿಲ್ಲದಿರುವದು ದುಃಖದಾಯಕವಾದ ಸಂಗತಿಯು. ಮಾಧ್ಯಮಿಕ ಶಾಲೆಗಳಲ್ಲಿ ಎಲ್ಲ ವಿಷಯಗಳನ್ನು ಮಾತೃಭಾಷೆಯಲ್ಲಿಯೇ ಕಲಿಸತಕ್ಕದ್ದು. ಕಾಲೇಜದಲ್ಲಿಮಾತ್ರ ಇಂಗ್ಲಿಷ ಭಾಷೆಯಲ್ಲಿ ಕಲಿಸುವದು ಇಷ್ಟವು. ಹೆಣ್ಣುಮಕ್ಕಳು ಎಲ್ಲ ಕೆಲಸಗಳಲ್ಲಿ ಗಂಡಸರಿಗಿಂತ ಕಡಿಮೆ ಯೋಗ್ಯತೆಯವರಲ್ಲವೆಂಬದು ತಿಳಿಯಹತ್ತಿದೆ. ಆದರೆ ಆಯಾದೇಶದ ಪರಿಸ್ಥಿತಿಯಂತೆ ಸ್ತ್ರೀಯರ ಸ್ವಭಾವ, ಅವರ ಜೀವಿತಕ್ರಮ, ಅವರು ಹೊತ್ತ ಹೊಣೆಗಾರಿಕೆ ಇವುಗಳಿಗೆ ಸರಿಯಾಗಿ ಸ್ತ್ರೀಶಿಕ್ಷಣದಲ್ಲಿ ಮಹತ್ವದ ಹೆಚ್ಚುಕಡಿಮೆಯಾಗುವದು ಅತ್ಯವಶ್ಯವದೆ. "

ತಾ॥ ೧೮ನೇ ದಿವಸ ಪ್ರಾತಃಕಾಲದಲ್ಲಿ ಸಂಸ್ಕೃತ ಮತ್ತು ಭೂಗೋಲವ ಮೂದ ರಿಯ ಪಾಠಗಳಾದವು. ಒಳಕ ಇಂಗ್ಲಿಷ ಭಾಷೆಯನ್ನು ಆರಂಭದ ವಿದ್ಯಾರ್ಥಿಗಳಿಗೆ ಡಾಯರೆಕ್ಟ ಪದ್ಧತಿಯಿಂದ (ಇಂಗ್ಲಿಷದಿಂದ ಇಂಗ್ಲಿಷ) ಕಲಿಸಬೇಕೋ? ಅಥವಾ ಪೂರ್ವದ ಭಾಷಾಂತರ ಪದ್ಧತಿಯಿಂದ ಕಲಿಸಬೇಕೋ ? ಎಂಬ ಬಗ್ಗೆ ಚರ್ಚೆಯಾಯಿತು. ಆ ಕಾಲಕ್ಕೆ ಫರ್ಗ್ಯೂಸನ್ ಕಾಲೇಜದ ಇಂಗ್ಲಿಷ ಪ್ರೊಫೆಸರರಾದ ರಾಜವಾಡೆಯವರು ಅಧ್ಯಕ್ಷರಿದ್ದರು. ಕರ್ನಾಟಕ ಕಾಲೇಜದ ಪ್ರಿನ್ಸಿಪಾಲರಾದ ಹ್ಯಾಮಟನ್ ಸಾಹೇಬರೂ ಮುಂಬೈ ಸೆಕಂಡರಿ ಕಾಲೇಜದ ಪ್ರಿನ್ಸಿಪಾಲರಾದ ಹ್ಯಾಮಲೇ ಸಾಹೇಬರೂ ಇಂಗ್ಲಿಷ ಭಾಷೆಯನ್ನು ಡಾಯರೆಕ್ಟ ಮೆಥಡ್ಡಿನಿಂದ ಕಲಿಸಿದರೆ ವಿದ್ಯಾರ್ಥಿಗಳಿಗೆ ಚೆನ್ನಾಗಿ ಜ್ಞಾನ ವಾಗುವದೆಂದು ಪ್ರತಿಪಾದಿಸಿದರು. ಮತ್ತು ನೆರೆದ ಶಿಕ್ಷಕರಲ್ಲಿಯೂ ಬಹುಮತವು ಡಾಯರೆಕ್ಟ ಮೆಥಡ್ಡಿಗೆ ಅನುಕೂಲವಾಗಿತ್ತು. ಪ್ರೊ. ರಾಜವಾಡೆಯವರು ಮಾತ್ರ ಹಳೇ ಪದ್ಧತಿಯಿಂದಲೇ ಕಲಿಸಬೇಕೆಂಬ ಆಗ್ರಹವನ್ನು ತೋರಿಸಿದರು. ಮಧ್ಯಾಹ್ನದ ಮೇಲೆ ಕೆಲವು ಠರಾವುಗಳು ಪಾಸಾದವು.

ತಾ॥ ೧೯ನೇ ದಿವಸ ಪ್ರಾತಃಕಾಲದಲ್ಲಿ ಇಂಗ್ಲಿಷ ಕವಿತೆಯ ಪಾಠವನ್ನು ಮಿ. ಹ್ಯಾಮಲೆ ಇವರು ಕಲಿಸಿ ತೋರಿಸಿದರು. ಮಧ್ಯಾಹ್ನದಮೇಲೆ ಕೆಲವು ಠರಾವುಗಳು ಪಾಸುಮಾಡಲ್ಪಟ್ಟವು.

ತಾ॥ ೧೮ ಹಾಗು ೧೯ನೇ ದಿವಸ ಪಾಸಾದ ಒಟ್ಟು ಠರಾವುಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ:—

೧. ಈಗ ಸರಕಾರದಿಂದ ನೇಮಿಸಲ್ಪಟ್ಟ ಎರಡೂ ಶಿಕ್ಷಣ ಕಮೀಟಿಗಳಲ್ಲಿ ಕರ್ನಾಟಕದ ವತಿಯಿಂದ ಒಬ್ಬರೂ ಸಭಾಸದರಿರುವದಿಲ್ಲ. ಆದ್ದರಿಂದ ಪ್ರತಿ ಒಂದು ಕಮೀಟಿಯಲ್ಲಿ ಕರ್ನಾಟಕದ ಒಬ್ಬೊಬ್ಬ ಮೇಂಬರರಿರಬೇಕು.

೨. ಧಾರವಾಡದಲ್ಲಿ ಒಂದು ಹೊಸ ಮೆಡಿಕಲ್ ಸ್ಕೂಲನ್ನು ಸ್ಥಾಪಿಸಬೇಕು.

೩. ಬೆಳಗಾಂವಿಯಲ್ಲಿ ಆಗುವ ಹೊಸ ಆರ್ಟ್ಸ್‌ಕಾಲೇಜಕ್ಕೆ ಸರಕಾರದಿಂದ ತಕ್ಕಷ್ಟು ಉತ್ತೇಜನವು ದೊರೆಯಬೇಕು.

೪. ಪ್ರಾಥಮಿಕ ಶಿಕ್ಷಕರಿಗೆ ಸಾತೆ–ಪರಾಂಜಪೆ ಸ್ಕೀಮಿನಂತೆ ತೀವ್ರ ಪಗಾರವು ದೊರೆಯಬೇಕು.

೫. ದೊಡ್ಡ ದೊಡ್ಡ ಪ್ರಾಥಮಿಕ ಸಾಲೆಗಳಿಗೆ ಇಂಗ್ಲಿಷ ಕಲಿಸುವ ವರ್ಗವನ್ನು ಜೋಡಿಸಬೇಕು.

೬. ಅಂಟ್ರೇಂಡ ಜನರಕಡೆಗೆ ಪ್ರಾಥಮಿಕ ಶಿಕ್ಷಣವನ್ನು ಒಪ್ಪಿಸುವದು ಸುರಕ್ಷಿತವಲ್ಲದ್ದರಿಂದ ಈಗಿನ ಟ್ರೇನಿಂಗ ಸಂಸ್ಥೆಯನ್ನು ಬೆಳಿಸಿ ಸಂಪೂರ್ಣ ಟ್ರೇನಿಂಗ ಕಾಲೇಜವನ್ನು ಪುನಃ ಸ್ಥಾಪಿಸತಕ್ಕದ್ದು.

ಶಿಕ್ಷಣ ಮಂತ್ರಿಗಳ ವಿಚಾರಗಳು

ಇದೇ ನವಂಬರ ತಿಂಗಳ ೬ನೆಯ ತಾರೀಖಿನ ದಿವಸ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ನಮ್ಮ ವಿದ್ಯಾಖಾತೆಯ ಮಂತ್ರಿಗಳಾದ ನಾ. ದಿವಾನ ಬಹಾದ್ದೂರ ಹರಿಲಾಲ ದೇಸಾಯಿಭಾಯಿಯವರ ಅಧ್ಯಕ್ಷತೆಯಲ್ಲಿ ಇನಾಮಿನ ಸಮಾರಂಭವು ನೆರವೇರಿಸಲ್ಪಟ್ಟಿತು. ಆ ಸಮಯದಲ್ಲಿ ದಿ. ಬ. ರವರು ಮಾಡಿದ ಭಾಷಣವು ಮಹತ್ವದ್ದಾಗಿರುವದರಿಂದ ಇಲ್ಲಿ ಕೊಟ್ಟಿರುವೆವು.

ದಿ. ಬಾ. ರೊದ್ದರಾಯರು ಈ ಟ್ರೇನಿಂಗ ಕಾಲೇಜದ ದೆಶೆಯಿಂದ ಮಾಡಿದ ಪ್ರಯತ್ನಗಳ ಬಗ್ಗೆ ಅವರನ್ನೂ ಮನೋವೇಧಕವಾದ ರಿಪೋರ್ಟನ್ನು ಓದಿದ್ದಕ್ಕಾಗಿ ಮಿ. ದೇಶಪಾಂಡೆಯವರನ್ನೂ ಪ್ರಶಂಸಿಸುತ್ತೇನೆ. ಸಾಕಷ್ಟು ಟ್ರೇಂಡ ಶಿಕ್ಷಕರಿಲ್ಲದಿದ್ದರೆ ಪ್ರಾಥಮಿಕ ಶಿಕ್ಷಣವು ಸರಿಯಾಗಿ ಸಾಗಬಹುದೆಂದು ನಾನಾಗಲಿ ಸರಕಾರವಾಗಲಿ ತಿಳಿದುಕೊಂಡಿಲ್ಲ. ಆದರೆ ಈ ದಕ್ಷಿಣಭಾಗದಲ್ಲಿ ಟ್ರೇಂಡ ಶಿಕ್ಷಕರ ಪ್ರಮಾಣವು ೭೦ ಕ್ಕಿಂತ ಹೆಚ್ಚಿಗೆ ಇರುವದು. ಪ್ರಾ. ಶಿ. ಕ್ಕೆ ಸಂಬಂಧಿಸಿದ ಕಾಯದೆಯ ನಿಯಮಗಳಲ್ಲಿ ನೂರಕ್ಕೆ ೫೦ ರಂತೆ ಟ್ರೇಂಡರಿದ್ದರೆ ಸಾಕೆಂದು ಗೊತ್ತಾಗಿದೆ. ಇದಲ್ಲದೆ ವಿದ್ಯಾರ್ಥಿಗಳಿಗೆ ಕಾಲೇಜದಲ್ಲಿರುವಾಗ ಸ್ಕಾಲರಶಿಪ್ಪು ಕೊಡಬೇಕಾಗುವದು; ಪಾಸಾದ ಕೂಡಲೆ ನೌಕರಿಯನ್ನು ಕೊಡುವ ಜವಾಬದಾರಿಯಿರುವದು; ನಂತರ ಸ್ಕೇಲಿನಂತೆ ಅವರಿಗೆ ಪಗಾರವನ್ನು ಕೊಡಬೇಕಾಗುವದು. ಮೊದಲು ಸ್ಕಾಲರಶಿಪ್ಪಿನ ದರವು ೫ ರೂಪಾಯಿ ಇದ್ದಿತು. ಮುಂದೆ ಏರುತ್ತ ಹೋಗಿ ಹದಿನೈದು ರೂಪಾಯಿಯಾಗಿತ್ತು. ಈಗ ಅದು ರು. ೧೫–೮–೦ ಆಗಿದೆ. ಶಿಕ್ಷಕರ ಪಗಾರದ ಮಾನವೂ ಒಂದಕ್ಕೆ ಎರಡಾಗಿದೆ. ಈ ಎಲ್ಲ ಅಡಚಣೆಗಳ ಮೂಲಕವಾಗಿ ಗುಜರಾಥದ ಪಾಗು ದಕ್ಷಿಣಭಾಗದ ಟ್ರೇನಿಂಗ ಕಾಲೇಜಗಳನ್ನು ನಿಲ್ಲಿಸಿಬಿಡುವ ವಿಚಾರವು ಕಳೆದ ಜೂನ್ ತಿಂಗಳಲ್ಲಿ ನಡೆದಿತ್ತು. ಆ ಮೇಲೆ ದಿ. ಬ. ರೊದ್ದರಾಯರ ವಿನ್ನಹದ ಮೇರೆಗೆ ಈ ವರ್ಷದ ಮಟ್ಟಿಗೆ ನಿಮ್ಮ ಟ್ರೇನಿಂಗ ಕಾಲೇಜವನ್ನು ಪುನಃ ಪ್ರಾರಂಭಿಸಿದೆವು. ಸರಕಾರದ ಮೇಲೆ ಮೇಲೆ ಹೇಳಿದ ಮೂರೂ ತ್ತರದ ಜವಾಬದಾರಿಯನ್ನು ಹಾಕದೆ ಇದ್ದರೆ ನಿಮ್ಮ ಟ್ರೇನಿಂಗ ಕಾಲೇಜವನ್ನು ನಡಿಸಲಿಕ್ಕೆ ಏನೊಂದೂ ಅಡಚಣೆಯಿರುವದಿಲ್ಲ.

ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಅಭ್ಯಾಸಕ್ರಮದಲ್ಲಿ ತಕ್ಕ ಬದಲಾವಣೆ ಸುಧಾರಣೆಗಳನ್ನು ಮಾಡುವ ಉದ್ದೇಶದಿಂದ ಒಂದು ಕಮಿಟಿಯು ನೇಮಕವಾಗಿದೆ. ಅವರು ಮುಂದಿನ ಜೂನ್ ತಿಂಗಳಲ್ಲಿ ತಮ್ಮ ವರದಿಯನ್ನು ಪ್ರಕಟಿಸುವರು. ಅಲ್ಲಿಯವರೆಗೆ ಈ ಬಗ್ಗೆ ಹೆಚ್ಚಿಗೆ ಏನೂ ಹೇಳಲು ಸಾಧ್ಯವಿಲ್ಲ. ಔದ್ಯೋಗಿಕ ಹಾಗು ಒಕ್ಕಲತನದ ಶಿಕ್ಷಣದ ವಿಷಯವಾಗಿಯೂ ಈ ಕಮಿಟಿಯ ನಿರ್ಣಯವು ಪ್ರಕಟವಾಗುವವರೆಗೆ ನಾವೆಲ್ಲರೂ ಮಾರ್ಗಪ್ರತೀಕ್ಷೆ ಮಾಡಬೇಕಾಗಿದೆ. ವಿದ್ಯಾರ್ಥಿಗಳ ಶಾರೀರಿಕ

ಶಿಕ್ಷಣದ ಬಗ್ಗೆ ಪಾಲಕರೂ ಶಿಕ್ಷಕರೂ ಸಾಕಷ್ಟು ಲಕ್ಷ ಪೂರೈಸದೆ ಇರುವದರಿಂದ ನಮ್ಮ ವಿದ್ಯಾರ್ಥಿ ಪೀಳಿಗೆಯು ತೀರ ಅಶಕ್ತವೂ ನಿಸ್ತೇಜವೂ ಆಗಹತ್ತಿದೆ. ಆ ಬಗ್ಗೆ ಎಲ್ಲರೂ ಎಚ್ಚರಪಡುವದು ಅವಶ್ಯವು. ಮುಂಬಯಿಯ ವಿಶ್ವವಿದ್ಯಾಲಯದವರು ಈ ಮೊದಲೇ ತಮ್ಮ ಕಾಲೇಜಗಳಲ್ಲಿ ಶಾರೀರಕ ಶಿಕ್ಷಣ ಕೊಡಬೇಕೆಂದು ಗೊತ್ತುಮಾಡಿ ಕೊಂಡಿರುವರು. ಈ ವಿಷಯದಲ್ಲಿಯೂ ಬೇರೊಂದು ಕಮಿಟಿಯು ನೇಮಕವಾಗಿದ್ದು ಅದು ತಕ್ಕ ಸೂಚನೆಗಳನ್ನು ಮಾಡಬಹುದಾಗಿದೆ.

ಸದ್ಯದಲ್ಲಿ ನಮ್ಮವರ ಶಿಕ್ಷಣಕ್ಕೆ ನಿಶ್ಚಿತವಾದ ಧ್ಯೇಯವೇ ಇಲ್ಲವಾಗಿದೆ. ಚಿಕ್ಕ ಮಕ್ಕಳು ಪ್ರಾಥಮಿಕ ಶಾಲೆಗೂ ಅಲ್ಲಿಂದ ಮಾಧ್ಯಮಿಕ ಸಾಲೆಗೂ ಕೊನೆಗೆ ಕಾಲೇಜಕ್ಕೂ ಯಾವದೊಂದು ನಿಶ್ಚಿತವಾದ ಗೊತ್ತುಗುರಿಯಿಲ್ಲದೆ ಸಾಗುತ್ತಿರುವರು. ಇದರಿಂದ ಕಾಲೇಜದಿಂದ ಹೊರಟವರಿಗೆ ಮುಂದೆ ಏನು ಮಾಡಬೇಕೆಂಬುದೇ ಗೊತ್ತಾಗುವದಿಲ್ಲ. ಆದ್ದರಿಂದ ಸರಕಾರದ ನೌಕರಿಗೆ ಬೇಕಾದಷ್ಟಕ್ಕಿಂತ ಹೆಚ್ಚು ಜನರು ಕಲಿತು ಹೊರಬೀಳುತ್ತಾರೆ. ಪಾಲಕರು ಅವರನ್ನು ಸಾಲೆಗೆ ಕಳಿಸುವ ಉದ್ದೇಶ ಏನೆಂಬುದನ್ನು ತಿಳಿದುಕೊಳ್ಳಬೇಕು. ಮತ್ತು ಸಾಲೆಗಳಲ್ಲಿ ತಮ್ಮ ಮಕ್ಕಳಿಗೆ ಯಾವತರದ ಶಿಕ್ಷಣವು ದೊರೆಯಬೇಕೆಂಬುದನ್ನು ಗೊತ್ತುಮಾಡಿಕೊಳ್ಳಬೇಕು. ಈ ಮೊದಲು ನಮ್ಮವರು ಔದ್ಯೋಗಿಕ ಶಿಕ್ಷಣದ ವಿಷಯವಾಗಿ ವಿಚಾರಮಾಡಬೇಕಾಗಿದ್ದಿತು.

ಪ್ರಾಥಮಿಕ ಶಾಲೆಗಳ ಮೇಲಿನ ಇಯತ್ತೆಗಳಲ್ಲಿ ಇಂಗ್ಲೀಷು ಕಲಿಸುವ ಯೋಜನೆಯಿರತಕ್ಕದ್ದು. ಮೇಲಿನ ಮೂರು ಇಯತ್ತೆಗಳಲ್ಲಿ ಇಂಗ್ಲೀಷ ಅಭ್ಯಾಸ ಕ್ರಮವನ್ನು ಸೇರಿಸುವದರಿಂದ ಚಿಕ್ಕಮಕ್ಕಳು ಹಾಯಸ್ಕೂಲಿಗೆ ಹೋಗುವದಕ್ಕಾಗಿ ತಮ್ಮ ಹೊಲಮನೆಗಳನ್ನೂ ಊರನ್ನೂ ತಂದೆತಾಯಿಗಳನ್ನೂ ಬಿಟ್ಟುಹೋಗುವ ಪ್ರಸಂಗವುಂಟಾಗುವದಿಲ್ಲ. ಪ್ರಾಥಮಿಕ ಶಾಲೆಯ ಅಭ್ಯಾಸ ಕ್ರಮವನ್ನು ಮುಗಿಸಿ ಮುಲಕೀ ಪರೀಕ್ಷೆ ಪಾಸಾದ ಹುಡುಗನು ಮುಂದೆ ಎರಡೇವರ್ಷಗಳನ್ನು ಇಂಗ್ಲೀಷ ಅಭ್ಯಾಸಕ್ಕಾಗಿ ಕಳೆದರೆ ಮೆಟ್ರಿಕ್ ಪರೀಕ್ಷೆಯಲ್ಲಿ ಪಾಸಾಗಬಹುದು. ಇಂಗ್ಲೀಷ ಸ್ಕೂಲುಗಳಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಪಾಸಾದ ಅಂಟ್ರೆಂಡರ ಕಡೆಗೆ ಆರಂಭದ ಇಯತ್ತೆಗಳನ್ನು ಒಪ್ಪಿಸುವದರಿಂದ ಬಾಲಕರ ಗಣಿತ ಮುಂತಾದ ವಿಷಯಗಳ ಅಭ್ಯಾಸವು ಸರಿಯಾಗಿ ಆಗುವದಿಲ್ಲ. ಆದರೆ ಆ ವಿಷಯಗಳನ್ನು ಪ್ರಾ. ಶಾಲೆಗಳಲ್ಲಿ ಟ್ರೇಂಡ ಶಿಕ್ಷಕರು ಹೆಚ್ಚು ಚನ್ನಾಗಿ ಕಲಿಸಬಲ್ಲರು.

ಈಗಿನ ಶಿಕ್ಷಣಕ್ರಮದಿಂದ ನಮ್ಮ ವಿದ್ಯಾರ್ಥಿಗಳ ಶಾರೀರಕ ಮಾನಸಿಕ ಸ್ಥಿತಿಗಳು ಕುಗ್ಗತ್ತ ನಡೆದಿವೆ. ಈಕಡೆಗೆ ಶಿಕ್ಷಕರೂ ಪಾಲಕರೂ ಸಾಕಷ್ಟು ಲಕ್ಷಪೂರೈಸುವದು ಅತ್ಯವಶ್ಯವಾಗಿದೆ. ನಮ್ಮ ದೇಶವು ಸದ್ಯಕ್ಕೆ ಸೈನ್ಯದ ವೆಚ್ಚಕ್ಕಾಗಿ ೬೦ ಕೋಟಿ ರೂಪಾಯಿಗಳನ್ನು ಹಾಕಬೇಕಾಗಿದೆ. ಆದರೆ ನಮ್ಮಲ್ಲಿ ಶಾರೀರಿಕ ಹಾಗೂ ಸೈನ್ಯದ ಶಿಕ್ಷಣ

ದ ಬಗ್ಗೆ ಯೋಗ್ಯ ವ್ಯವಸ್ಥೆ ಇದ್ದರೆ ಪ್ರಸಂಗ ಬಂದಾಗ ನಾವು ನಮ್ಮ ದೇಶವನ್ನು ಶತ್ರುಗಳಿಂದ ಸಂರಕ್ಷಿಸಿಕೊಳ್ಳಲು ಸಮರ್ಥರಾಗುತ್ತಿದ್ದೆವು. ಮತ್ತು ಈಗ ವೆಚ್ಚವಾಗುವ ಅರುವತ್ತು ಕೋಟಿ ರೂಪಾಯಿಗಳಲ್ಲಿ ದೊಡ್ಡಭಾಗವನ್ನು ಉಳಿಸಿಕೊಂಡು ಶಿಕ್ಷಣ ವೊದಲಾದ ಉಪಯುಕ್ತ ವಿಷಯಗಳಿಗಾಗಿ ಉಪಯೋಗಿಸಿಕೊಳ್ಳಬಹುದಾಗಿದ್ದಿತು.

ಟ್ರೇನಿಂಗ ಕಾಲೇಜದಲ್ಲಿ ಎರಡನೇ ವರ್ಷದ ವರ್ಗವನ್ನಿಡಬೇಕೆಂಬ ವಿಷಯದಲ್ಲಿ ಸರಕಾರವವರು ನಿಮಗೆ ಅನುಕೂಲವಾಗಿ ನಿರ್ಣಯಿಸುವರೆಂದು ನಂಬಿದ್ದೇನೆ.

ದಿ. ಬ. ರೆಂದ್ದರಾಯರು ಆಭಾರನನ್ನು ಮನ್ನಿಸಿದ ನಂತರ ಸಭಾ ವಿಸರ್ಜನವಾಯಿತು.

ನಾ. ಶಿಕ್ಷಣಮಂತ್ರಿಗಳೂ ಪ್ರಾ. ಶಿಕ್ಷಕರೂ

ಮುಂಬೈ ಇಲಾಖೆಯ ಶಿಕ್ಷಣಮಂತ್ರಿಗಳಾದ ದಿ. ಬ. ಹರಿಲಾಲ ದೇಸಾಯಿಯವರು ತಾ॥ ೬–೧೧–೧೯೨೯ನೇ ದಿವಸ ಧಾರವಾಡಕ್ಕೆ ಆಗಮಿಸಿದ್ದರಷ್ಟೇ? ಈ ಸುಸಂಧಿಯನ್ನು ಸಾಧಿಸಿ ಅದೇ ದಿವಸ ಧಾರವಾಡ ಶಹರದ ಪ್ರಾ. ಶಿಕ್ಷಕ–ಶಿಕ್ಷಿಕೆಯರು ಶ್ರೀ. ವಿಶ್ವನಾಥರಾವ ಜೋಗ ಎಮ್. ಎಲ್. ಸಿ. ಇವರ ನೇತೃತ್ವದ ಕೆಳಗೆ ನಾ. ಮಿನಿಷ್ಟರ ಸಾಹೇಬರವರ ದರ್ಶನಾರ್ಥವಾಗಿ ಹೋಗಿದ್ದರು. ಕೆಲವು ಆರಿಸಿದ ಶಿಕ್ಷಕ–ಶಿಕ್ಷಿಕೆಯರಿಗೆ ಮಾತ್ರ ಒಳಗೆ ಬರಲು ಅಪ್ಪಣೆದೊರೆಯಿತು. ಪ್ರಾರಂಭಕ್ಕೆ ಸಾತೆ ಪರಾಂಜಪೆ ಸ್ಕೀಮನ್ನು ತೀವ್ರವಾಗಿ ಅಮಲಿನಲ್ಲಿ ತರುವ ಬಗ್ಗೆ ವಿನಂತೀಮಾಡಿಕೊಳ್ಳಲ್ಪಟ್ಟಿತು. ಅದಕ್ಕೆ ನಾ. ಸಾಹೇಬರು–"ಈ ಸ್ಕೀಮನ್ನು ಅಮಲಿನಲ್ಲಿ ತರಬೇಕಾದರೆ ಅಜಮಾಸು ೧೫–೨೦ ಲಕ್ಷ ರೂಪಾಯಿ ಹೆಚ್ಚು ವೆಚ್ಚಬರುವದು; ಆದರೆ ಸರಕಾರಕ್ಕೆ ಹಣದ ಕೊರತೆಯಿರುವ ಮೂಲಕ ಪ್ರಾ. ಶಿಕ್ಷಕರು ಈ ಯೋಜನೆಯ ಆಶೆಯನ್ನು ಎಷ್ಟು ಮಾತ್ರವೂ ಮಾಡಕೂಡದೆಂದು ಖಂಡಿತವಾಗಿ ಹೇಳಿದರು." ಬಳಿಕ ಪ್ರಾ. ಶಿಕ್ಷಕರ ಪಗಾರದ ಬಗ್ಗೆ ಮೊದಲಿದ್ದ ಹಾಗು ಸದ್ಯಕ್ಕೆ ಅಮನಲ್ಲಿರುವ ಸ್ಕೇಲುಗಳ ವಿಷಯವಾಗಿಯೂ ಮಹರ್ಷತೆಯ ವಿಷಯವಾಗಿಯೂ ಕೆಲವು ಮನೋರಂಜಕ ಪ್ರಶ್ನೋತ್ತರಗಳಾದವು, ನಾ. ಸಾಹೇಬರು ಸದಯಾಂತಃಕರಣದಿಂದಲೂ ಶಾಂತಚಿತ್ತದಿಂದಲೂ ಶಿಕ್ಷಕರ ಕೊರತೆಗಳನ್ನು ಕೇಳಿಕೊಂಡು ಇನ್ನು ಮುಂದೆ ಪ್ರಾ. ಶಿಕ್ಷಕರಿಗೆ ಸಾಧ್ಯವಿದ್ದ ಮಟ್ಟಿಗೆ ಈಗಿನಕಿಂತ ಹೆಚ್ಚು ಪಗಾರವು ದೊರೆಯುವಂತೆ ಒಂದು ನಿರ್ದುಷ್ಟವಾದ ಹೊಸಯೋಜನೆಯನ್ನು ತೀವ್ರವಾಗಿ ಮಾಡುವೆನೆಂದು ಆಶ್ವಾಸನಕೊಟ್ಟರು. ಸದ್ಯಕ್ಕೆ ಹೆ॥ ಮಾ॥ ರಿಗೆ ಕೊಡತಕ್ಕ ಅಲಾವನ್ಸದ ಬಗ್ಗೆ ಅಜಮಾಸು ೬॥ ಲಕ್ಷ ರು. ಗಳ

ವೆಚ್ಚವು ಆಗಹತ್ತಿದೆ. ಇವನ್ನು ನಿಲ್ಲಿಸಿ ಮತ್ತೆ ಕೆಲವು ಹೆಚ್ಚು ಹಣವನ್ನು ಕೊಟ್ಟು ಬೇರೊಂದು ಸ್ಕೀಲನ್ನು ಅಮಲಿನಲ್ಲಿ ತರುವ ವಿಚಾರವು ನಡೆದಿರುವದು. ಮತ್ತು ಈ ಹೊಸಯೋಜನೆಯಿಂದ ಶಿಲೆಕ್ಮನ್‌ಗ್ರೇಡು ಮಾತ್ರ ಯಾರಿಗೂ ದೊರೆಯಲಾರದೆಂದು ಹೇಳಿದರು. ತರುವಾಯ ವಿದ್ಯಾರ್ಥಿಗಳಿಗೆ ಖಾಸಗಿ ಶಿಕ್ಷಣವನ್ನು ಕೊಡದೆ ಎಲ್ಲ ಶಿಕ್ಷಕರು ಮನಮುಟ್ಟಿ ಕೆಲಸಮಾಡಬೇಕೆಂದು ಉಪದೇಶಮಾಡಿದರು. ಕಡೆಗೆ ಹೊಸನಿಯಮದ ಪ್ರಕಾರ ೪೦ ಹುಡುಗರಿಗೆ ಒಬ್ಬ ಶಿಕ್ಷಕನಿರಬೇಕೆಂಬ ವಿಷಯದ ನಿರ್ಧಾರವಾಗಿ ಈ ತೊಂದರೆಯನ್ನಾದರೂ ತಪ್ಪಿಸಲಿಕ್ಕೆ ಶಕ್ಯವಿದ್ದಮಟ್ಟಿಗೆ ಪ್ರಯತ್ನ ಮಾಡುವೆನೆಂದು ಹೇಳಿದರು.

ಈ ಮೇರೆಗೆ ಬಡ ಪ್ರಾ. ಶಿಕ್ಷಕರ ಹೊಟ್ಟೆಬಟ್ಟೆಗಳ ಪ್ರಶ್ನೆಯಬಗ್ಗೆ ಒಳ್ಳೇ ಸಹಾನುಭೂತಿಯನ್ನು ವ್ಯಕ್ತಪಡಿಸಿ ಶಿಕ್ಷಕವರ್ಗವನ್ನು ಸಂತೋಷ ಪಡಿಸಿದ್ದಕ್ಕಾಗಿ ನಾ. ಶಿಕ್ಷಣ ಮಂತ್ರಿಗಳಿಗೂ ತಮ್ಮ ಅಮೂಲ್ಯ ವೇಳೆಯನ್ನು ವೆಚ್ಚಮಾಡಿ ಹೆಚ್ಚು ಶ್ರಮತೆಗೆದುಕೊಂಡು ನಾ. ಮಿನಿಸ್ಟರ ಸಾಹೇಬರ ದರ್ಶನದ ಲಾಭವನ್ನು ಒದಗಿಸಿಕೊಟ್ಟದ್ದಕ್ಕಾಗಿ ಶ್ರೀ. ಜೋಗರಾಯರಿಗೂ ಪ್ರಾ. ಶಿಕ್ಷಕವರ್ಗವು ತುಂಬಾ ಋಣಿಯಾಗಿರುವದು.

ಕೇ. ಗ. ಜೋಶಿ,
ಧ. ನೀ. ಕಾಳಪ್ಪನವರ.

ಶಿಕ್ಷಕರಿಗೆ ಸೂಚನೆಗಳು

(ಮಿ. ಎಸ್. ಆರ್. ತಟ್ಟಿ ಬಿ. ಎ. ಮತ್ತು ಮಿ. ಎನ್. ವ್ಹಿ. ಕುಡಿ)

ಶಾಲಾಪತ್ರಕದ ಕಳೆದ ತಿಂಗಳ ಅಂಕದಲ್ಲಿ ' ಗಣಿತ ' ವಿಷಯದ ಹೊಸದಾಗಿ ಗೊತ್ತುಪಡಿಸಿದ ಅಭ್ಯಾಸಕ್ರಮವನ್ನು ಪ್ರಕಟಿಸಿರುವರಷ್ಟೇ ? ಈ ಸಾರಿ ಆ ವಿಷಯಗಳನ್ನು ಕಲಿಸುವ ಕ್ರಮದ ಸಂಬಂಧದಿಂದ ಕೆಲವು ಸೂಚನೆಗಳನ್ನು ಹೇಳಿರುವೆವು.

ಬಾಲಕರ ಇಯತ್ತೆ- ಅಂಕಗಣಿತ

ಬಿನ್ನ ಇಯತ್ತೆಯಲ್ಲಿ ಬಾಲಕರಿಗೆ ವಸ್ತುಗಳಲ್ಲಿ ಗುಂಪುಗಳನ್ನು ಕಲ್ಪಿಸಿ ಎಣಿಸಲಿಕ್ಕೆ ಕಲಿಸಬೇಕೆಂದು ಹೇಳಿದೆ. ಇದರಿಂದ ಸ್ವಲ್ಪ ಎಣಿಕೆಗಳನ್ನು ಕಲಿತ ಹುಡುಗರು ಹೆಚ್ಚು ವಸ್ತುಗಳನ್ನು ಎಣಿಸಲಿಕ್ಕೆ ಸಮರ್ಥರಾಗುವರು. ಉದಾಹರಣೆ ಹತ್ತರವರೆಗೆ ಎಣಿಕೆಗಳನ್ನು ಕಲಿತ ಹುಡುಗರ ಕಡೆಗೆ ೨೭ ಮಣಿಗಳನ್ನು ಕೊಟ್ಟರೆ ಮೂರು ಮೂರರಂತೆ ಗುಂಪುಮಾಡಿ ಮೂರರ ಗುಂಪುಗಳು ಒಂಬತ್ತು ಎಂದಾಗಲಿ ನಾಲ್ಕು ನಾಲ್ಕರಂತೆ ಗುಂಪು ಮಾಡಿ ಎಣಿಸಿನೋಡಿ ಳರ ಗುಂಪು ಆದು ಮೇಲೆ ಮೂರು ಬಿಡಿ ಮಣಿಗಳು

ಎಂದಾಗಲಿ ಹೇಳಲಿಕ್ಕೆ ಬರುವದು. ಇದರಿಂದ ಪ್ರತ್ಯಕ್ಷ ಉಪಯೋಗವಾಗುವ ವಸ್ತುಗಳ ಎಣಿಕೆಗಿಂತಲೂ ಹೆಚ್ಚಿನ ಇನ್ನೊಂದು ಗೂಢ ವಿಚಾರವಿರುವದು. ಇವರಿಂದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ದಶಕೇತರ ಪದ್ಧತಿಗಳ ಕಲ್ಪನೆಯು ಅಭ್ಯಾಸವು ತಾನಾಗಿ ಹುಟ್ಟುತ್ತಿರುವದು. ಈ ತರದ ಗುಂಪುಗಳನ್ನು ಮಾಡಿ ಎಣಿಸುವ ಪದ್ಧತಿಯು ತೀರ ಸ್ವಾಭಾವಿಕವಾಗಿರುವದು. ಅಶಿಕ್ಷಿತ ಹಳ್ಳಿಯ ಹೆಣ್ಣುಮಕ್ಕಳು ಕುಳ್ಳು ಮುಂತಾದವುಗಳನ್ನು ಕೈ (೫ ರ ಗು.) ಒಡ್ಡಿ (೪ ರ ಗುಂಪು) ಮುಂತಾದವುಗಳ ಸಹಾಯದಿಂದ ಎಣಿಸುತ್ತಿರುವರು.

ಭೂಮಿತಿ.

ಈ ಇಯತ್ತೆಯಲ್ಲಿ ಹೇಳಿದ ಭೂಮಿತಿಯ ಆಕೃತಿಗಳ ಜ್ಞಾನವನ್ನು ಸರಿಯಾಗಿ ಮಾಡಿಕೊಡಲಿಕ್ಕೆ ಕಿಂಡರಗಾರ್ಟನದ ೨, ೩, ೪ನೆಯ ಕರಣದ ಉಪಕರಣಗಳು ಅವಶ್ಯವಾಗಿ ಬೇಕಾಗುವವು. ಅಂಥ ಉಪಕರಣಗಳು ಇಲ್ಲದಂಥ ಪ್ರಸಂಗದಲ್ಲಿ ಶಿಕ್ಷಕರು ಅವುಗಳನ್ನು ಕಾರ್ಡುಬೋರ್ಡಿನ ಘನ ಇಟ್ಟಂಗಿಗಳನ್ನೂ ಚಂಡುಗಳನ್ನೂ ಒದಗಿಸಿಕೊಂಡು ಕಲಿಸಬೇಕು.

೧ನೆಯ ಇಯತ್ತೆ–ಅಂಕಗಣಿತ.

ಈ ಇಯತ್ತೆಗಾಗಿ ಹೇಳಿರುವ ಬೇರೀಜು ವಜಾಬಾಕಿಗಳಲ್ಲಿ ನೂರರ ವರೆಗಿನ ಯಾವದೊಂದು ಸಂಖ್ಯೆಗೆ ಹತ್ತರ ಒಳಗಿನ ಯಾವದೊಂದು ಸಂಖ್ಯೆಯನ್ನು ಕೂಡಿಸುವದು ಎಂದು ಹೇಳಿದೆ. ಮುಂದೆ ಪಾಟಿಯು ಮೇಲೆ ಮೂಡತಕ್ಕ ದೊಡ್ಡ ಹಾಗು ಹೆಚ್ಚು ಸಂಖ್ಯೆಗಳ ಬೇರೀಜು ವಜಾಬಾಕಿಗಳಿಗೆ ಸಹಾಯವಾಗಬೇಕೆಂಬುವದೇ ಇದರ ಮುಖ್ಯ ಉದ್ದೇಶವಾಗಿದೆ. ಆದ್ದರಿಂದ ಬೇರೀಜು ಮಾಡುವಾಗ ಬರುವ ನೂರರವರಿಗಿನ ಸಂಖ್ಯೆಗಳಿಗೆ ಹತ್ತರ ಒಳಗಿನ ಯಾವದೊಂದು ಸಂಖ್ಯೆಯನ್ನು ಕೂಡಿಸಿ ತಟ್ಟನೆ ಉತ್ತರ ಹೇಳುವದಕ್ಕೆ ಬಾಲಕರು ಸಮರ್ಥರಾಗುವಂತೆ ಮಾಡಬೇಕಾಗುವದು. ಆದರೆ ವಜಾಬಾಕಿಯ ಪ್ರಸಂಗದಲ್ಲಿ ಈ ಸ್ಥಿತಿಯಿರುವದಿಲ್ಲ. ಬಾಲಕರಿಗೆ ಇಪ್ಪತ್ತರ ವರೆಗಿನ ಯಾವದೊಂದು ಸಂಖ್ಯೆಯಲ್ಲಿ ಹತ್ತರ ಒಳಗಿನ ಯಾವದೊಂದು ಸಂಖ್ಯೆಯನ್ನು ವಜಾಕಳೆದು ತಟ್ಟನೆ ಉತ್ತರ ಹೇಳುವದಕ್ಕೆ ಬಂದರೆ ಸಾಕು.

ಒಂದೇ ಸಂಖ್ಯೆಯನ್ನು ಹಲವು ಸಾರೆ ಇಟ್ಟು ಕೂಡಿಸುವದು – ಈ ವಿಷಯ ವಿಭಾಗದಲ್ಲಿ ಬಾಲಕರಿಗೆ ಗುಣಾಕಾರವು ಬೇರೀಜಿನ ಸಂಕ್ಷಿಪ್ತ ಕೃತಿಯಿರುವದೆಂಬ ಕಲ್ಪನೆಯನ್ನು ತಂದುಕೊಡಬೇಕಾಗಿರುವದು. ಆದರೆ ಗುಣಿಲೆ ಚಿಹ್ನದ ಕಲ್ಪನೆಯನ್ನು ಮುಂದಿನ ಇಯತ್ತೆಯಲ್ಲಿ ಹೇಳಿರುವದರಿಂದ ಇಲ್ಲಿ ಅದನ್ನು ಉಪಯೋಗಿಸಿ ಗೊಂದಲ ಮಾಡಿಕೊಳ್ಳಲಿಕ್ಕೆ ಹೋಗಬಾರದು. ಯಾವದೊಂದು ಚಿಹ್ನದ ಅರ್ಥವನ್ನು ಸರಿಯಾಗಿ ತಿಳಿದುಕೊಂಡ ಹೊರತು ಅದನ್ನು ಉಪಯೋಗಿಸುವದು ಸರಿಯಲ್ಲ. ಆದ್ದರಿಂದ

ಈ ಇಯತ್ತೆಯಲ್ಲಿ ಮಗ್ಗಿಗಳನ್ನು ಬರೆಯುವಾಗ ಗುಣಕಾರಗಳನ್ನಷ್ಟೇ ಒಂದರ ಕೆಳಗೊಂದು ಬರೆಯುತ್ತ ಹೋಗಬೇಕು. ಉದಾ:—ಮೂರರ ಮಗ್ಗಿಯನ್ನು ಬರೆಯುವಾಗ ೩, ೬, ೯, ೧೨, ೧೫, ಇತ್ಯಾದಿಯನ್ನು ಒಂದರಕೆಳಗೊಂದರಂತೆ ಸಾಲಾಗಿ ಬರೆಯುತ್ತ ಹೋಗಬೇಕು. ಒಂದೊಂದೇ ಸಂಗತಿಯನ್ನು ಬರೆಯುವಾಗ ಮೂರು ಒಂದಲೆ (ಒಂದು ಸಾರೆ) ಮೂರು, ಮೂರು ಎರಡಲೆ ಆರು, ಇತ್ಯಾದಿಯಾಗಿ ಅಕ್ಷರದಿಂದ ಬರೆಯಬಹುದು. (೨. ಕ.) ಮಗ್ಗಿಗಳ ಮೇಲಿಂದ ಭಾಗಾಕಾರದ ಪ್ರಶ್ನೆಗಳನ್ನು ಕೇಳುವಾಗ ಎರಡು ಎಷ್ಟಲೆ ೮, ಮೂರು ಎಷ್ಟಲೆ ೯ ಇತ್ಯಾದಿಯಾಗಿ ಕೇಳಬೇಕು. ಇದರಂತೆ ೨೦ ರೂ. ಗಳಲ್ಲಿ ೪ ರೂ. ಗಳ ಗುಂಪು ಎಷ್ಟಾಗುವವು; ೨೦ ಸೇರು ಕಾಳಿನಲ್ಲಿ ೪ ಸೇರಿನ ಅಳತೆಗಳು ಎಷ್ಟಾಗುವವು, ಈ ಪ್ರಶ್ನೆಗಳಿಂದ ಬಾಲಕರಿಗೆ ಭಾಗಾಕಾರಕ್ಕಿದ್ದ ಎರಡು ಅರ್ಥಗಳಲ್ಲಿ "ಅಳತೆ" ಎಂಬ ಅರ್ಥದ ಕಲ್ಪನೆಯು ಸರಿಯಾಗಿ ಆಗುವಂತೆ ಮಾಡಬೇಕು.

ಭೂಮಿತಿ.

ಹಳ್ಳಿಗಳಲ್ಲಿ ಹೆಣ್ಣು ಮಕ್ಕಳು ಮಾಡುತ್ತಿರುವ ರಂಗೋಲಿಯ ಸುಲಭ ಆಕೃತಿಗಳನ್ನು ಈ ಯತ್ತೆಯಲ್ಲಿ ಮಾಡಿಸಬಹುದು.

ಪೆಟ್ಟಿಗೆ ಮುಂತಾದವುಗಳಿಗೆ ದಪ್ಪವಿರುವದೆಂಬ ಕಲ್ಪನೆಯನ್ನು ಬಿಟ್ಟು ಅವುಗಳ ಮೇಲ್ಮೈಗಳ ಚಿತ್ರಗಳನ್ನು ಮಾತ್ರ ತೆಗೆಯಿಸಬೇಕು.

ಉದಾಹರಣೆ ಪೆಟ್ಟಿಗೆಯ ಚಿತ್ರ

೨ನೆಯ ಇಯತ್ತೆ—ಅಂಕಗಣಿತ

೨. ಬ. ಗುಣಕಾರವನ್ನು ಕಲಿಸುವಾಗ ಗುಣ್ಯಕ್ಕೆ ಒಂಟಿ ಅಂಕಿಯಿಂದ ಗುಣಿಸುವದು, ೧೦ ರಿಂದ ಗುಣಿಸುವದು, ೨೦, ೩೦, ೪೦, ೫೦, ಇತ್ಯಾದಿ ಸಂಖ್ಯೆಗಳಿಂದ ಗುಣಿಸುವದು. ಆ ಮೇಲೆ ೧೨, ೨೮, ೫೬ ಇಂಥ ಬೇಕಾದ ಸಂಖ್ಯೆಗಳಿಂದ ಗುಣಿಸುವದು, ಈ ರೀತಿ ನಾಲ್ಕು ಮೆಟ್ಟಿಲುಗಳನ್ನು ಕಲ್ಪಿಸಿಕೊಳ್ಳತಕ್ಕದ್ದು. ಮತ್ತು ಕೊನೆಯ ಮೆಟ್ಟಿಲಿನಲ್ಲಿ ಗುಣಾಕಾರವನ್ನು ಕಲಿಸುವಾಗ ಎಡಗಡೆಯ ಅಂಕಿಯಿಂದ ಗುಣಾಕಾರವನ್ನು ಮಾಡಲಿಕ್ಕೆ ಪ್ರಾರಂಭಿಸಬೇಕೆಂದು ಹೇಳಿದೆ. ಈ ಪ್ರಸಂಗದಲ್ಲಿ ಮೊದಲನೇ ಸಾರಿ ಬಂದ ಗುಣಾಕಾರದ ಕೆಳಗೆ ಎರಡನೇ ಸಾರಿ ಬಂದ ಗುಣಾಕಾರವನ್ನು ಒಂದು ಸ್ಥಾನ ಬಲಕ್ಕೆ ಸರಿಸಿ ಬರೆಯಬೇಕಾಗುವದು. ಇದರ ಕಾರಣವು ಕೆಳಗೆ ಹೇಳುವ ಉದಾಹರಣೆಯಿಂದ ಸ್ಪಷ್ಟವಾಗುವದು.

೨೩೬×೪೭=೨೩೬×೪೦+೨೩೬×೭

೨೩೬×೪೦ = ೯೪೪೦
೨೩೬×೭ = ೧೬೫೨
∴ ಈ ಕೃತಿಯನ್ನು ಸಂಕ್ಷೇಪವಾಗಿ ಮಾಡುವಾಗ ಸ್ಥಾನದ ಮೇಲಿಂದ ಸಂಖ್ಯೆಯೊ
ಳಗಿನ ಅಂಕಿಗಳ ಬೆಲೆಯು ಗೊತ್ತಾಗುವವರಿಂದ ಈ ಎರಡೂ ಸಾಲುಗಳನ್ನು

೯೪೪೦
೧೬೫೨

೧೧೦೯೨

ಹೀಗೆ ಬರೆಯುವೆವು.

೨. ಕ. ಈ ಇಯತ್ತೈಯಲ್ಲಿ ಭಾಗಾಕಾರದ ಎರಡು ಅರ್ಥಗಳನ್ನು ವಿವರಿಸಿ ತಿಳಿ
ಸಿಕೊಡಬೇಕು. ಈ ಎರಡೂ ಅರ್ಥಗಳು ಕೆಳಗಿನ ಎರಡು ಉದಾಹರಣೆಗಳಿಂದ
ಸ್ಪಷ್ಟವಾಗುವವು.

(೧) ೨೦ಸೇರು ಜೋಳವನ್ನು ನಾಲ್ಕು ಜನರಿಗೆ ಹಂಚಿದರೆ ಒಬ್ಬೊಬ್ಬರಿಗೆ ಎಷ್ಟು
ಬರುವವು ?

(೨) ೨೦ಸೇರು ಜೋಳವನ್ನು ನಾಲ್ಕು ನಾಲ್ಕು ಸೇರಿನಂತೆ ಅಳೆದರೆ ಎಷ್ಟು
ಅಳತೆಗಳು ಆಗುವವು ?

ಇವುಗಳಿಗೆ ಕ್ರಮವಾಗಿ ಹಂಚುವ ಭಾಗಾಕಾರ ಹಾಗು ಅಳತೆಯ ಭಾಗಾಕಾರ
ಎರಡು ಹೆಸರು ಕೊಡಬಹುದು. ಮೊದಲನೆಯ ಪ್ರಶ್ನೆಯನ್ನು ೨೦ಸೇರಿನ ನಾಲ್ಕ
ನೆಯ ಭಾಗವು ಎಷ್ಟಾಗುವದು ಎಂಬ ರೂಪದಿಂದ ಕೇಳಿ ರೂಢಿ ಮಾಡಿಸಬೇಕು. ಇದ
ರಿಂದ ನಾಲ್ಕನೆಯಭಾಗ ಎರಡನೆಯಭಾಗ ಮೂರನೆಯಭಾಗ ಮುಂತಾದ ಅಪೂರ್ಣಾಂಕ
ಗಳ ಕಲ್ಪನೆಯನ್ನು ತಂದು ಕೊಟ್ಟಂತಾಗುವದು. ಮೇಲಿನ ಮೊದಲನೇ ಉದಾಹರ
ಣೆಯನ್ನು ಪ್ರತ್ಯಕ್ಷವಾಗಿ ಮಾಡಿಸುವಾಗ ಕೆಳಗಿನಂತೆ ಮಾಡಬೇಕಾಗುವದು.

೧ನೇ	೨ನೇ	೩ನೇ	೪ನೇ	
೧ಸೇ.	೧ಸೇ.	೧ಸೇ.	೧ಸೇ.	೪ಸೇ
೧ ,,	೧ ,,	೧ ,,	೧ ,,	೪ಸೇ
೧ ,,	೧ ,,	೧ ,,	೧ ,,	೪ಸೇ
೧ ,,	೧ ,,	೧ ,,	೧ ,,	೪ಸೇ
೧ ,,	೧ ,,	೧ ,,	೧ ,,	೪ಸೇ
೨೦ಸೇರು	೨೦ಸೇರು	೨೦ಸೇರು	೨೦ಸೇರು	೨೦ಗುಂಪು.

ಇದೇ ಕೃತಿಯಿಂದಲೇ ಎರಡನೇ ಪ್ರಶ್ನೆಯ ಉತ್ತರವನ್ನಾದರೂ ಹೇಳಲಿಕ್ಕೆ ಬರುವದೆಂಬದು ಬಲಕ್ಕೆ ಬರೆದ ನಾಲ್ಕುನಾಲ್ಕು ಸೇರಿನ ಜಗುಂಪುಗಳ ಮೇಲಿಂದ ತಿಳಿದುಬರುವದು.

ಮೇಲಿನ ಉದಾಹರಣೆಯಿಂದ ಪಾಲು ಮಾಡುವದು ಮತ್ತು ಅಳತೆಮಾಡುವದು ಈ ಎರಡು ಕೃತಿಗಳಲ್ಲಿ ಎಷ್ಟು ನಿಕಟಸಂಬಂಧವಿರುವದೆಂಬದು ತಾನೇ ಕಂಡು ಬರುವದು.

ಭೂಮಿತಿ.

೧. ಡಿಝೂಯಿನುಗಳು. ಮೊದಲನೆಯ ಇಯತ್ತೆಯಲ್ಲಿ ಹೇಳಿರುವ ದಂಗೋಲಿಯ ಹೆಚ್ಚು ಕಠಿಣವಾದ ಆಕೃತಿಗಳನ್ನು ಮಾಡಿಸತಕ್ಕದ್ದು. ಇಲ್ಲಿ ಚೌರಸ ಮತ್ತು ಕಾಟಕೋನ ಚೌಕೋನಾಕೃತಿಯ ವಸ್ತುಗಳ ಪಾ ್ಯನುಗಳನ್ನು ರೂಲಪಟ್ಟಿ ಕಾಟಕೋಸಪಟ್ಟಿ ಇವುಗಳ ಸಹಾಯದಿಂದ ತೆಗೆಯಿಸಬೇಕು.

ಏನೆಯ ಇಯತ್ತೆ—ಅ

೬. ಒಂಟಅಂಕಿಯ ಭಾಗಾಕಾರವನ್ನು ಸಂಕ್ಷೇಪವಾಗಿ ಬಾಯಿಯಿಂದಲೇ ಮಾಡಿಸಿ ಭಾಗಾಕಾರವನ್ನೂ ಶೇಷವನ್ನೂ ತೆಗೆದು ಹಚ್ಚಲಿಕ್ಕೆ ಕಲಿಸಬೇಕು.

ಉದಾ:—

ಅ) ೩೭೫
೪೬೯ (೭ಬಾಕಿ)

೪. ೨=೨= ೧/೨ ಅಂದರೆ ಒಂದು ಎರಡನೆಯ ಅಂಶ ಅಂದರೆ ಎಷ್ಟು ಆರನೆಯ ಅಂಶಗಳು, ಎಷ್ಟು ಹನ್ನೆರಡನೆಯ ಅಂಶಗಳು ಇತ್ಯಾದಿ ಪ್ರಶ್ನೆಗಳಿಗೆ ಉತ್ತರಕೊಡಲು ಹುಡುಗರು ಸಮರ್ಥರಾಗತಕ್ಕದ್ದು.

೫. ಕಾಗದ ಮಡಿಚುವದು. ವರ್ತುಳಾಕಾರದ ಕಾಗದಗಳನ್ನು ಮಡಿಚಿ ಅರ್ಧ, ಕಾಲು, ಮುಕ್ಕಾಲು, ಎಂಟನೆಯ ಅಂಶ, ಮೂರು ಎಂಟನೆಯ ಅಂಶ ಇತ್ಯಾದಿ ಅಪೂರ್ಣಾಂಕಗಳನ್ನು ತೋರಿಸುವದಕ್ಕೆ ಕಲಿಸಬೇಕು ಮತ್ತು, ಈ ಮಡಿಚಿದ ಕಾಗದದ ಸಹಾಯದಿಂದ ೨=೨=೨ ಇತ್ಯಾದಿ ಸಮೀಕರಣಗಳ ಸತ್ಯತೆಯನ್ನು ವಿವರಿಸಬೇಕು.

ನಾಲ್ಕನೆಯ ಇಯತ್ತೆ— ಅಂಕಗಣಿತ

೪. ಬ. ದೇಶೀಪದ್ಧತಿಯ ಪ್ರಕಾರ ಬಡ್ಡಿಯನ್ನು ತೆಗೆಯುವದು.

ಅಸಲು × ಮುದ್ದತು × ಬಡ್ಡಿದರ=ಕಚ್ಚೆಗಳು

೧೦೦ ಕಚ್ಚೆ=೧ ರೂ—

ಈ ಪದ್ಧತಿಯಿಂದ ಬಡ್ಡಿಯ ಆಕಾರಮಾಡುವದು.

ಉದಾ :— ೧೦೦ಕ್ಕೆ ೧ ವ. ಕ್ಕೆ ೫ ರೂ. ಬಡ್ಡಿಯಂತೆ ೨೫೦ ರೂ. ಗಳಿಗೆ ೩ ವರ್ಷಕ್ಕೆ ಬಡ್ಡಿ ಎಷ್ಟಾಗುವದು.

ಮುದ್ದಲು ಮುದ್ದತು ಬಡ್ಡಿದರ

೨೫೦ × ೩ × ೫ = ೩೭೫೦ ಕಚ್ಚೆಗಳು

೧೦೦ ಕಚ್ಚೆಗಳು ಅಂದರೆ ೧ ರೂಪಾಯಿ

∴ ೩೭೫೦ ಕಚ್ಚೆ=೩೭ ರೂ. ೮ ಆಣೆ ∴ ೩೭ ರೂ. ೮ ಅ. ಉತ್ತರ.

ಮಹತ್ವ ಮಾಪನ.

ಸಂಖ್ಯೆಯ ಕಲ್ಪನೆಯನ್ನು ತಿಳಿಸುವಾಗ ಬಾಲಕರಿಗೆ ವಸ್ತುಗಳು ಅವುಗಳ ಎಣಿಕೆ ಇವುಗಳಲ್ಲಿರುವ ಸಂಬಂಧವನ್ನು ವಿವೇಚಿಸಿ ಹೇಳಿರುವೆವು. ಅದರಂತೆ ಅಳತೆ ತೂಕ ಮುಂತಾದವುಗಳಿಗೂ ಪದಾರ್ಥಗಳಿಗೂ ಇರುವ ಸಂಬಂಧವನ್ನೂ ಆ ತೂಕ ಅಳತೆಗಳಿಂದ ಹೊರಡುವ ವಿಧ್ಯ ಸಂಖ್ಯೆಗಳ ಕಲ್ಪನೆಯನ್ನೂ ಬಾಲಕರು ಅರಿತಿರುವರು. ಮತ್ತು ಈ ಎಲ್ಲ ಪ್ರಸಂಗಗಳಲ್ಲಿ ಅಳತೆಯ ಸಾಧನವಾದ ಎಕ್ಕಂ (ಪರಿಮಾಣ) ವು ಆ ಅಳತೆ ಮಾಡಬೇಕಾಗಿರುವ ವಸ್ತುವಿನ ಜಾತಿಯದೇ ಇರಬೇಕಾಗುವದು. ಅಂದರೆ ಬೆಲೆಯನ್ನು ರೂಪಾಯಿ ಮುಂತಾದವುಗಳಿಂದಲೂ ತೂಕ ಅಳತೆಗಳನ್ನು ಸೇರು ಮುಂತಾದವುಗಳಿಂದಲೂ ಉದ್ದಳತೆಯನ್ನು ಫೂಟು ಮೊಳ ಮುಂತಾದವುಗಳಿಂದಲೂ ಅಳೆಯಬೇಕಾಗುವದು. ಅದರಂತೆ ಪದಾರ್ಥಗಳ ಮೇಲ್ಮೈ, ಮತ್ತು ಪಿಂಡ ಇವುಗಳನ್ನು ಅಳತೆಮಾಡುವಾಗ ಮೈಲ್ಮೈ ಮತ್ತು ಪಿಂಡವುಳ್ಳ ಬೇರೆ ಪದಾರ್ಥಗಳನ್ನು ಎಕ್ಕಂದಂತೆ ಉಪಯೋಗಿಸಬೇಕಾಗುವದೆಂಬದನ್ನು ಹುಡುಗರ ಲಕ್ಷ್ಯದಲ್ಲಿ ತಂದು ಕೊಡಬೇಕು. ಉದಾ:— ಉದ್ದ ಅಗಲ ಎಂಬ ಎರಡು ಅಳತೆಗಳುಳ್ಳ ಮೇಜಿನ ಮೇಲ್ಮೈಯನ್ನು ಅಳೆಯುವಾಗ ಕಾಗದದಂಥ ಮತ್ತೊಂದು (ಉದ್ದ ಅಗಲ ಅಳತೆಗಳುಳ್ಳ) ಮೇಲ್ಮೈಯುಳ್ಳ ಪದಾರ್ಥವನ್ನು ಅಳತೆಗಾಗಿ (ಎಕ್ಕಂ ದಂತೆ) ಉಪಯೋಗಿಸಿಕೊಳ್ಳಬೇಕಾಗುವದು. ಇದೇ ಮೇರೆಗೆ ಪೆಟ್ಟಿಗೆಯ ಅವಕಾಶ (ಪಿಂಡ)ದ ಅಳತೆಯನ್ನು ತಿಳಿದುಕೊಳ್ಳಬೇಕಾದರೆ ಇಟ್ಟಂಗಿಯಂಥ ಉದ್ದ, ಅಗಲ, ಎತ್ತರ ಎಂಬ ಮೂರು ಅಳತೆಗಳಿರುವ ಬೇರೊಂದು ಪಿಂಡವುಳ್ಳ ಪದಾರ್ಥವನ್ನೇ ಉಪಯೋಗಿಸಿಕೊಳ್ಳಬೇಕಾಗುವದು. ಈ ಪ್ರಸಂಗಗಳಲ್ಲಿ ವಿದ್ಯಾರ್ಥಿಗಳು ಪ್ರತ್ಯಕ್ಷ ಅಳತೆ ಮಾಡಿ ನೋಡಿ ಮೇಜಿನ ಮೇಲ್ಮೈಯಲ್ಲಿ ತನ್ನ ಪುಸ್ತಕದ ಆಕಾರದ ಅಳತೆಗಳು ಇಂತಿಷ್ಟು ಆಗುವವು ಎಂಬದನ್ನು ತಿಳಿದುಕೊಳ್ಳಲಿ. ಮತ್ತು ಇದರಂತೆ ಅನೇಕ ಉದಾಹರಣೆಗಳನ್ನು ಪ್ರತ್ಯಕ್ಷ ನೋಡಿ ಪದಾರ್ಥಗಳ ಮೇಲ್ಮೈ ಪಿಂಡ ಮುಂತಾದವುಗಳನ್ನು ತಿಳಿಯುವ ಕ್ರಮದ ಕಲ್ಪನೆಯನ್ನು ಸರಿಯಾಗಿ ತಂದುಕೊಳ್ಳುವಂತೆ ಮಾಡತಕ್ಕದ್ದು. ಹೀಗೆ ಅಳತೆ ಮಾಡುವಾಗ ಎಲ್ಲ ಅಳತೆಗಳನ್ನು ಅಳೆದು ನೋಡಲಿಕ್ಕೆ ಅನುಕೂಲವಾಗುವಂಥ ಒಂದು ಸಾಮಾನ್ಯ ಪರಿಮಾಣದ ಅವಶ್ಯಕತೆಯುಂಟೆಂಬದನ್ನು ಹುಡುಗರ ಮನಸ್ಸಿನಲ್ಲಿ ಬಿಂಬಿಸು

ವಂತೆ ಮಾಡಬೇಕು. ಆ ಮೇಲೆ ಅಷ್ಟೇ ಉದ್ದ ಅಷ್ಟೇ ಅಗಲ ಇರುವಂಥ ಪರಿಮಾಣವನ್ನು ಕ್ಷೇತ್ರಮಾಪನಕ್ಕೆ ಎಕ್ಕಂ ಎಂದು ತಿಳಿದುಕೊಳ್ಳುವದೂ ಅಷ್ಟೇ ಉದ್ದ ಅಷ್ಟೇ ಅಗಲ ಮತ್ತು ಅಷ್ಟೇ ಎತ್ತರವಿರುವ ಪರಿಮಾಣವನ್ನು ಘನಮಾಪನಕ್ಕೆ ಎಕ್ಕಂ ಎಂದು ಕಲ್ಪಿಸಿಕೊಳ್ಳುವದೂ ಸುಲಭವಾಗುವದೆಂಬ ಮಾತನ್ನು ಸ್ಪಷ್ಟೀಕರಿಸಿ ಕೊಡತಕ್ಕದ್ದು. ಇಷ್ಟಾದ ಬಳಿಕ ಈಗ ನಾವು ಉಪಯೋಗಿಸುತ್ತಿರುವ ಎಕ್ಕಮುಗಳಾದ ಚೌರಸ ಇಂಚು, ಚೌರಸಫೂಟು, ಹಾಗು ಘನ ಇಂಚು ಘನ ಫೂಟು ಇವುಗಳ ಅರ್ಥವನ್ನು ತಿಳಿಸಿಕೊಡಬೇಕು. ಅದಕ್ಕಾಗಿ ಕಾಗದವಲ್ಲಿ ಕತ್ತರಿಸಿದ ತುಂಡುಗಳು ಘನ ಇಂಚು, ಘನಫೂಟು ಇವುಗಳನ್ನು ಪ್ರತ್ಯಕ್ಷವಾಗಿ ತೋರಿಸಿ ಅವುಗಳ ಕಲ್ಪನೆಯನ್ನು ವಿವರಿಸಿ ಹೇಳಬೇಕು.

ಚೌ. ಇಂಚು. —ಚೌ. ಫೂ.



—ಘನಫೂಟು

ಪ್ರತಿಯೊಂದು ಶಾಲೆಯಲ್ಲಿ ಎಡಕ್ಕೆ ತೋರಿಸಿದಂಥ ಒಂದು ಕಟ್ಟಿಗೆಯ ಆಕೃತಿಯನ್ನು ಘನಫೂಟು ಘನ ಇಂಚು ಚೌರಸ ಫೂಟು, ಚೌರಸ ಇಂಚು ಇವುಗಳನ್ನು ತೋರಿಸುವದಕ್ಕಾಗಿ ಒದಗಿಸಿಕೊಳ್ಳುವದು. ಉತ್ತಮ ಪಕ್ಷವಾಗಿದೆ.

ಕಾಟಕೋನ ಚೌಕೋನಾಕೃತಿಯ ಕ್ಷೇತ್ರಫಲವನ್ನು ತೆಗೆಯುವಾಗ ಪ್ರತ್ಯಕ್ಷ ಉದಾಹರಣೆಗಳಿಂದ ತಿಳಿಸಿಕೊಡಬೇಕು. ಉದಾಹರಣೆ, ೫ ಇಂಚು ಉದ್ದ ೩ ಇಂಚು ಅಗಲ ಇರುವ ಒಂದು ಕಾಟಕೋನ ಚೌಕೋನಾಕೃತಿಯ ಕ್ಷೇತ್ರವೆಷ್ಟು. ಈ ಉದಾಹರಣೆಯನ್ನು ಇಷ್ಟೇ ಅಳತೆಯಿರುವ ಕಾಗದದ ತುಂಡುಗಳನ್ನು ಹುಡುಗರ ಕೈಯೊಳಗೆ ಕೊಟ್ಟು ಅವರ ಉದ್ದ ಹಾಗು ಅಗಲ ಅಳತೆಗಳ ಗುಂಟ ಇಂಚಿನ ಗುರುತುಗಳನ್ನು ಮಾಡಿಸಿ ಆ ಗುರುತುಗಳನ್ನು ಗೆರೆಗಳಿಂದ ಕೂಡಿಸಿ ಎಡಕ್ಕೆ ತೋರಿಸಿದಂತೆ ಚೌಕು ಮನೆಗಳನ್ನು ಮಾಡಿಸಬೇಕು. ಆ ಮೇಲೆ ಕೊಟ್ಟ ಕಾಗದದಲ್ಲಿ ಐದೈದು ಚೌಕುಗಳ

೧	೨	೩	೪	೫
೨				
೩				

ಮೂರು ಸಾಲುಗಳುಆಗುವವೆಂಬದನ್ನೂ ಪ್ರತಿಯೊಂದು ಚೌಕವು ಒಂದು ಇಂಚು ಉದ್ದ ಒಂದು ಇಂಚು ಅಗಲ ಅಂದರೆ ಒಂದು ಚೌರಸ ಇಂಚು ಇರುವದೆಂಬದನ್ನೂ ತಿಳಿಸಿಕೊಡಬೇಕು. ಇದೇ ಕಾಗದದಲ್ಲಿ ಇಂಥ ೧೫ ಚೌರಸಗಳು ಇರುವದರಿಂದ ಐದು ಇಂಚು ಉದ್ದ ಮೂರು ಇಂಚು ಅಗಲ ಇರುವ ಕಾಗದದ ಕ್ಷೇತ್ರವು ೧೫ ಚೌರಸ ಇಂಚು ಆಗುವದೆಂದು ಹುಡುಗರು ಮನಗಾಣುವರು.

ಇದೇ ರೀತಿಯಾಗಿ ಕಿಂಡರ ಗಾರ್ಟನ ೩ನೇ ಕರಣದ ಪೆಟ್ಟಿಗೆಯನ್ನು ಉಪಯೋಗಿಸಿಕೊಂಡು ಘನ ಅಳತೆಯ ಕ್ರಮವನ್ನು ಘನಫಲವನ್ನೂ ತೆಗೆಯುವ ಕ್ರಮವನ್ನೂ ಅನೇಕ ಪ್ರತ್ಯಕ್ಷ ಉದಾಹರಣೆಗಳಿಂದ ತಿಳಿಸಿಕೊಡಬೇಕು. ಇಷ್ಟಾದಬಳಿಕ ಕ್ಷೇತ್ರಫಲವೆಂದರೆ ಉದ್ದ ಅಗಲಗಳ ಗುಣಾಕಾರದಷ್ಟು ಚೌರಸ ಅಳತೆಗಳಿಂದೂ ಘನಫಲವೆಂದ ಉದ್ದ, ಅಗಲ, ಎತ್ತರ ಇವುಗಳ ಗುಣಾಕಾರವಷ್ಟು ಘನ ಅಳತೆಗಳಿಂದೂ ಹುಡುಗರಿಗೆ ತಿಳಿಸಿಕೊಡಬೇಕು.

ಕೋನಗಳ ಕಲ್ಪನೆಯನ್ನು ಮಾಡಿಕೊಡುವದು.

ಪೂರ್ವಕ್ಕೆ ನೋರೆಮಾಡಿ ನಿಂತವನು ತನ್ನ ಸುತ್ತಲೂ ಒಂದು ಸುತ್ತು ತಿರುಗಿ ಪುನಃ ಪೂರ್ವಕ್ಕೆ ನೋರೆಮಾಡಿ ನಿಂತರೆ ಅವನು ಒಂದು ಸುತ್ತು ತಿರುಗಿದನೆಂದು ಹೇಳುತ್ತೇವೆ. ಪೂರ್ವಕ್ಕೆ ನೋರೆ ಮಾಡಿದವನು ಪಶ್ಚಿಮಕ್ಕೆ ನೋರೆಯಾಗುವಂತೆ ತಿರುಗಿ ನಿಂತರೆ ಅವನು ಅರ್ಧಸುತ್ತು ತಿರುಗಿದನೆಂದು ಹೇಳಬಹುದು. ಪೂರ್ವಕ್ಕೆ ಇದ್ದವನು ದಕ್ಷಿಣಕ್ಕೆ ತಿರುಗಿ ನಿಂತರೆ ಗಿರ್ಧ ಸುತ್ತು ತಿರುಗಿದನೆಂದು ಹೇಳಬಹುದು. ಹೀಗೆ ತಿರುಗಿವ್ವರ ಅಳತೆಗೆ ಕೋನವೆಂಬ ಹೆಸರು. ಇದನ್ನು ಆಕೃತಿಯಿಂದ ತೋರಿಸಬಹುದು. ಪೂರ್ವದಿಕ್ಕನ್ನು ತೋರಿಸಲಿಕ್ಕೆ ಒಂದು ಗೆರೆಯನ್ನೂ ದಕ್ಷಿಣವನ್ನು ತೋರಿಸರಿಕ್ಕೆ ಒಂದು ಗೆರೆಯನ್ನೂ ತೆಗೆದು ಅವುಗಳನ್ನು ಕೂಡಿಸಿದರೆ ನಡುವೆ ಆಗುವ ಮೂಲೆಯೇ ಈ ಕೋನದ ಆಕೃತಿಯಾಗುವದು.



ಕೋನವನ್ನು ಗುರ್ತಿಸುವದಕ್ಕೆ ಆಕೃತಿಯಲ್ಲಿ ತೋರಿಸಿದಂತೆ ದುಂಡುಗೆರೆಯನ್ನು ಉಪಯೋಗಿಸುವರು. ಈ ಕೋನದ ಅಳತೆಯು ಒಂದು ಸುತ್ತಿನ ನಾಲ್ಕನೇಭಾಗವಿದುವದರಿಂದ ಇದಕ್ಕೆ ೧ಕಾಟಕೋನವೆನ್ನುವರು. ಇದಕ್ಕಿಂತಲೂ ಸಣ್ಣದಾದ ಒಂದು ಕೋನವನ್ನು ತಕ್ಕೊಳ್ಳೋಣ. ಉದಾಹರಣಾರ್ಥವಾಗಿ ಪೂರ್ವದಿಂದ ಆಗ್ನೇಯಕ್ಕೆ ತಿರುಗಿದ್ದನ್ನು ಆಕೃತಿಯಿಂದ ತೋರಿಸೋಣ. ಆಗ್ನೇಯವೆಂದರೆ ಪೂರ್ವ ದಕ್ಷಿಣಗಳ ನಡುವಿನ ಮೂಲೆ.



ಇದರ ಅಳತೆಯು ಎಷ್ಟು ? ೧ ಸುತ್ತಿನ ಎನೇ ಭಾಗ ಅಥವಾ ೬ ಸುತ್ತು ಅಥವಾ ೨ ಕಾಟಕೋನ ಎಂದು ಹೇಳಬಹುದು. ಇದಕ್ಕಿಂತಲೂ ಬೇಕಾದಷ್ಟು ಕಡಿಮೆಯಾವ ಕೋನಗಳನ್ನು ಅಳೆಯಲಿಕ್ಕೆ ಬರಬೇಕೆಂದು ೧ ಗಿರ್ಧ ಸುತ್ತಿನಲ್ಲಿ ಅಥವಾ ಒಂದು ಕಾಟಕೋನದಲ್ಲಿ ಸರಿಯಾದ ಭಾಗಗಳನ್ನು ಮಾಡಿರುತ್ತಾರೆ. ಅವುಗಳಿಗೆ ಅಂಶಗಳೆಂದು ಹೆಸರು. ಅರ್ಧ

ಕಾಟಕೋನವೆಂದರೆ ೪೫ ಅಂಶಗಳಾಯಿತು, " ೪೫ ಅಂಶ " ಇದನ್ನು ೪೫೦ ಹೀಗೆ ಆ ಸಂಖ್ಯೆಯ ಬಲಗಡೆ ಮೇಲಕ್ಕೆ ಒಂದು ಸಣ್ಣ ಪೂಜೆಯನ್ನಿಟ್ಟು ಬರೆದು ತೋರಿಸುತ್ತಾರೆ. ಕೋನಗಳನ್ನು ತಿಳಿಸಿಕೊಡಲಿಕ್ಕೆ ಗಡಿಯಾರದ ಮುಳ್ಳುಗಳ ದೃಷ್ಟಾಂತವು ಒಳ್ಳೇ ಅನುಕೂಲವಾಗುವದು. ಗಡಿಯಾರದ ದೊಡ್ಡಮುಳ್ಳು ೧೨ ರಿಂದ ೩ ಈ ಅಂಕಿಗೆ ಬಂದರೆ ೧ ನಿರ್ಧ ಸುತ್ತು, ೧ ಕಾಟಕೋನ ಅಥವಾ ೯೦ ಅಂಶ ತಿರಿಗಿದಂತಾಯಿತು. '೬' ಅಂಕಿಗೆ ಬಂದರೆ ೧ಲಂ ತಿರಿಗಿದಂತಾಯಿತು. '೯' ಅಂಕಿಗೆ ಬಂದರೆ ೨೭೦ ಅಂಶ ತಿರುಗಿದಹಾಗಾಯಿತು. ಪುನಃ ೧೨ ಕ್ಕೆ ಬಂದರೆ ೩೬೦ ಅಂಶ ತಿರುಗಿದಂತಾಯಿತು. ೧೨ ರಿಂದ ೧ ಕ್ಕೆ ಬಂದರೆ, ೨ ಕ್ಕೆ ಬಂದರೆ ಎಷ್ಟೆಷ್ಟು ಅಂಶ ತಿರುಗಿದಂತಾಗುವದು?

ಶಿಕ್ಷಕರು ರಟ್ಟಿನಿಂದ ಮುಳ್ಳುಗಳ ಸಹಿತ ಗಡಿಯಾರದ ತೋರಿಯನ್ನು ವಿದ್ಯಾರ್ಥಿಗಳಿಂದ ಮಾಡಿಸಬೇಕು. ಇದರಂತೆ ಹೋಕಾಯಂತ್ರದ ದಿಕ್ಕುಗಳನ್ನು ತೋರಿಸುವ ಒಂದು ರಟ್ಟಿನ ವರ್ತುಳವನ್ನು ಮಾಡಿಸಬೇಕು. ಅದರ ಮೇಲಿಂದ ಕೆಳಗಿನಂಥ ಪ್ರಶ್ನಗಳನ್ನು ಕೇಳಿ ಕೋನಗಳ ಜ್ಞಾನವನ್ನು ದೃಢೀಕರಿಸಬೇಕು.

ಪೂರ್ವದಿಂದ ನೈಋತ್ಯಕ್ಕೆ ತಿರುಗಿದರೆ ಎಷ್ಟು ಅಂಶ ತಿರಿಗಿದ ಹಾಗಾಯಿತು ಇ.

ತ್ರಿಕೋನಗಳ ಕ್ಷೇತ್ರಫಲ.

ಒಂದರಮೇಲೊಂದರಂತೆ ಇಟ್ಟರೆ ಸಂಪೂರ್ಣ ಹೊಂದಿಕೆಯಾಗುವಂಥ ಎರಡು ತ್ರಿಕೋಣಗಳನ್ನು ತೆಗೆದುಕೊಂಡು ಅವುಗಳಲ್ಲಿ ಒಂದನ್ನು ಅದರ ಎತ್ತರವನ್ನು ತೋರಿಸುವ ಗೆರೆಯು ಹೊರಡುವಂತೆ ಅಂಪರೆ ಕೆಳಗಡೆಯ ಅಂಚು ಒಂದರಮೇಲೊಂದು ಬರುವಂತೆಯೂ ತಿರೋಬಿಂದುವಿನಿಂದ ಆ ಗೆರೆಯು ಹೊರಡುವಂತೆಯೂ ಮುಡಿಚಬೇಕು. ಮತ್ತು ಆ ಗೆರೆಗುಂಟ ಆ ತ್ರಿಕೋನವನ್ನು ಹರಿದು ಎರಡು ತುಂಡು ಮಾಡು. ಹಾಗೂ ಎರಡೂ ತುಂಡುಗಳನ್ನು ಇನ್ನೊಂದು ತ್ರಿಕೋನಕ್ಕೆ ಆಕೃತಿಯಲ್ಲಿ ತೋರಿಸಿದಂತೆ ಹೊಂದಿಬಿಟ್ಟರೆ ಒಂದು ಕಾಟಕೋನ ಚೌಕೋನಾಕೃತಿಯು ಹೊರಡುವದು. ಉದಾಃ—



ಇ ಬ ಕ ಇದೊಂದು ತ್ರಿಕೋನವದೆ ಇದರ ಮೇಲೆ ಇಟ್ಟರೆ ಸಂಪೂರ್ಣವಾಗಿ ಹೊಂದಿಕೆ ಯಾಗುವಂಥ ಇನ್ನೊಂದು ತ್ರಿಕೋಣವನ್ನು ತೆಗೆದುಕೊಂಡು ಲಂಬ (ಇ ಫ) ರೇಖೆಯು ಅಂದರೆ ಆ ತ್ರಿಕೋಣದ ಎತ್ತರವನ್ನು ತೋರಿಸುವ ರೇಷೆಯು ಹೊರಡುವಂತೆಯೂ ಬ ಫ, ಫ ಕ, ರೇಖೆಗಳು ಒಂದರ ಮೇಲೊಂದು ಬರುವಂತೆಯೂ ಆ ಮುಡಿಚಿದ ಗೆರೆಯು ಇ, ಬಿಂದುವಿನಿಂದ ಆರಂಭವಾಗುವಂತೆಯೂ ಮುಡಿಚಿ ಹರಿಯುವಾಗ ಬೇರೆ ಎರಡು

ತ್ರಿಕೋನಗಳು ಹುಟ್ಟುವವು. ಆ ತ್ರಿಕೋನಗಳನ್ನು ಆಕೃತಿಯಲ್ಲಿ ತೋರಿಸಿದಂತೆ ಮೊದಲಿನ ತ್ರಿಕೋನಕ್ಕೆ ಹೊಂದಿಸಲಾಗಿ ಅ ಬ ಕ ಡ ಇದೊಂದು ಕಾಟಕೋನ ಚೌಕೋನಾಕೃಯು ಹುಟ್ಟುವದು. ಈ ಕಾಟಕೋನ ಚೌಕೋನಾಕೃತಿಯು ಮೂಲ ಇ ಬ ಕ ತ್ರಿಕೋನದ ಇಮ್ಮಡಿ ಇರುವದೆಂಬದನ್ನು ಮೊದಲು ಹರಿದ ತ್ರಿಕೋನವನ್ನು ಮೊದಲಿನಂತೆಯೇ ಹೊಂದಿಸಿ ನೋಡಿಯೂ ತಿರಿಗಿ ಕಾಟಕೋಣ ಚೌಕೋನಾಕೃತಿಯಾಗಿ ಇಟ್ಟುಕೊಂಡೂ ವಿದ್ಯಾರ್ಥಿಗಳು ಮನಗಾಣಬಹುದು. ಮತ್ತು ಈ ಕಾಟಕೋನ ಚೌಕೋನದ ಕ್ಷೇತ್ರಫಲವನ್ನು ತೆಗೆಯಬೇಕಾದರೆ ಮೂಲ ತ್ರಿಕೋನದ ಎತ್ತರ ಮತ್ತು ತಳ ಇವುಗಳ ಗುಣಾಕಾರ ಮಾಡಬೇಕಾಗುವದೆಂಬದಂತೂ ಪ್ರತ್ಯಕ್ಷವಾಗಿಯೇ ಇರುವದು. ಮತ್ತು ಈ ಕಾಟಕೋನ ಚೌಕೋನದ ಕ್ಷೇತ್ರವು ಮೂಲ ತ್ರಿಕೋನದ ಕ್ಷೇತ್ರದ ಇಮ್ಮಡಿಯಿರುವದೆಂಬದೂ ಪ್ರತ್ಯಕ್ಷವಾಗಿಯೇ ಸಿದ್ಧವಾಗಿದೆ. ಆದ್ದರಿಂದ ಈ ತ್ರಿಕೋನದ ಕ್ಷೇತ್ರಫಲವನ್ನು ತೆಗೆಯುವಾಗ $\frac{\text{ತಳ}\times\text{ಎತ್ತರ}}{೨}$ ಎಂಬ ಮಾತು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಬರುವದು. ಇದೇ ರೀತಿಯಾಗಿ ಅನೇಕ ತ್ರಿಕೋಣಗಳ ಕ್ಷೇತ್ರವನ್ನು ತೆಗೆಯುವ ಕ್ರಮವನ್ನು ಪ್ರತ್ಯಕ್ಷ ಕೃತಿಗಳಿಂದ ಮಾಡಿತೋರಿಸಿದ ಬಳಿಕ—

ತ್ರಿಕೋನದ ಕ್ಷೇತ್ರ $=\frac{\text{ತಳ}\times\text{ಎತ್ತರ}}{೨}$ = ತಳ $\times\frac{೧}{೨}$ ಎತ್ತರ ಎಂಬ ಮಾತನ್ನು ಹೇಳಬಹುದು.

ಇದರಲ್ಲಿ ಹೇಳಿದ ಭೂಮಿತಿಯೊಳಗಿನ ಪಾರಿಭಾಷಿಕಗಳು ಸಾರಣಿ ಮುಂತಾದವು ಶಿಕ್ಷಕರ ತಿಳುವಳಿಕೆಗಾಗಿಯೇ ಇರುವವಲ್ಲದೆ ವಿದ್ಯಾರ್ಥಿಗಳಿಗೆ ಕಲಿಸುವಾಗ ಈ ಪಾರಿಭಾಷಿಕಗಳನ್ನೂ ಸಾರಣಿಯನ್ನೂ ಉಪಯೋಗಿಸಕೂಡದು.

೫. ಅಡ್ಡತಿಡ್ಡ ಆಕೃತಿಯ ವಸ್ತುಗಳ ಘನಫಲವನ್ನು ಅವು ಹೊರಚಲ್ಲುವ ನೀರಿನ ಅಳತೆಯಿಂದ ಗೊತ್ತುಮಾಡುವದು ವಿದ್ಯಾರ್ಥಿಗಳಿಗೆ ಅನವಶ್ಯಕವಾಗಿರುವದರಿಂದಲೂ ದುರ್ಬೋಧವಾಗಿರುವದರಿದಲೂ ಈ ಇಯತ್ತೆಯಲ್ಲಿ ಇಂಥ ಆಕೃತಿಗಳ ಘನಫಲವನ್ನು ಕಲಿಸುವದು ಬಿಟ್ಟುಬಿಡಬಹುದು.

ಆದರ್ಶಭೂತ ಶಿಕ್ಷಕರು.

ಸ್ವ. ವಾ. ದಾಸೋ ಶ್ರೀಧರ ಜೋಶಿ.

ಶ್ರೀ. ದಾಸೋಪಂತ ಜೋಶಿಯವರ ಊರು ಗೋಕಾವಿಯು. ಅವರ ಅಣ್ಣಂದಿರೊಬ್ಬರಿದ್ದರು. ಹೆಚ್ಚಿನ ಅವರ ಮನೆತನದ ಮಾಹಿತಿಯು ದುರ್ದೈವದಿಂದ ಗೊತ್ತಿಲ್ಲ !

೩೧ ೧೨೮೨ ಇ! ಸುಮಾರಕ್ಕೆ ಅವರು ಸವದತ್ತಿಯಿಂದ ಕಿತ್ತೂರ ೧ ನೆಯ ನಂ. ಕನ್ನಡ ಶಾಲೆಗೆ ಹೆಡ್ ಮಾಸ್ತರರಾಗಿ ಬಂದರು. ಆಗ ಅವರ ವಯಸ್ಸು ೩೫–೪೦ ರ ಒಳಗೆ ಇರಬಹುದು. ನಿಲವು ಮಧ್ಯಮ. ಮೈ ದುಂಡಕಟ್ಟಿನದು. ಮುಖಮುದ್ರೆ ಆಕರ್ಷಕವು. ಸಿಂಹ ಅಥವಾ ಧನುರ್ಲಗ್ನದಲ್ಲಿ ಅವರ ಜನ್ಮವಾಗಿರಬೇಕು. ಉಡಿಗೆ ತೊಡಿಗೆ ಆಗಿನ ಕಾಲಕ್ಕೆ ತಕ್ಕ ನಾಗರಿಕತೆಯದು. ಒಂದು ಸ್ವಚ್ಛವಾದ ಉಪ್ಪರಣಿಯನ್ನು ಹೊರುತ್ತಿದ್ದರು. ಕಯ್ಯಲ್ಲಿ ಚಡಿಯು. ಕೈಕೆಳಗಿನವರ ಮೇಲೂ ಹುಡುಗರ ಮೇಲೂ ವರ್ಜಸ್ಸು ಇತ್ತು; ಇಷ್ಟೇ ಅಲ್ಲ, ಊರವರೂ ಅವರಿಗೆ ಹೆದರುತ್ತಿದ್ದರು.

ಆ ವೇಳೆಗೆ ಮ. ರಸೆಲ್ ಸಾಹೇಬರೆಂಬುವವರು ಎ. ಇ. ರಾಗಿರಬೇಕು. ಕೈ. ವಾ. ರಾವಜೀರಾವ ಕರಂದಿಕರರು ಡೆಪೂಟಿಗಳಾಗಿದ್ದರು. ಇನ್ನೊಬ್ಬರು ಸಾರಸ್ವತ ಗೃಹಸ್ಥರೂ (ಅವರ ಹೆಸರು ರಾವಜೀ ಅಂತಾ ಇರಬೇಕು.) ಡೆಪೂಟಿಗಳಿದ್ದರು.

ಶ್ರೀ. ದಾಸೋಪಂತರು ಸಾಲೆಗೆ ಬೇಗನೆ ಬರುತ್ತಿದ್ದರು; ಅಷ್ಟರೊಳಗೇ ಅಸಿಸ್ಟಂಟರೂ ಹುಡುಗರೂ ಗಡಿಬಿಡಿಯಿಂದ ಬಂದೇ ಬರುತ್ತಿದ್ದರು; ಬಂದು ಖುರ್ಚಿಗೆ ಧೂಡಿಕೆಯನ್ನು ಹಾಕಿ ಹುಡುಗರು ಮೇಜಿನ ಮೇಲೆ ತಂದಿಟ್ಟ ಸಂಪಿಗೆಯ ಹೂವನ್ನು ಕಯ್ಯೊಳಗೆ ತಕ್ಕೊಂಡು (ಬೇರೆ ಋತುಗಳಲ್ಲಿ–ಗುಲಾಬಿ, ಮಲ್ಲಿಗೆ) ಎಲ್ಲ ವರ್ಗಗಳಿಗೆ ಹೋಗಿ ತಿರುಗಾಡಿ ಬಂದು ಕೂಡ್ರುವ ಸಾಂಪ್ರದಾಯವಿತ್ತು. ಆಯಾ ವರ್ಗದ ಜಾಣ ಹುಡುಗರನ್ನು ಮಾತಾಡಿಸಿ ಅಸಿಸ್ಟಂಟರಿಗೆ ಹೇಳುವದನ್ನು ತಪ್ಪದೆ ಹೇಳಿಬರುತ್ತಿದ್ದರು; ಮತ್ತು ಸಾಲೆಯ ಸ್ವಚ್ಛತೆ, ಹಿತ್ತಲದಲ್ಲಿಯ ಹೊರಿಗಿನ ಗಿಡ, ಕರಿ ಹಲಗೆ ನಕ್ಷೆಗಳು. ವೇಳಾಪತ್ರಿಕೆ, ಸೂಟಿಯ ಪತ್ರಿಕೆ ಇವೆಲ್ಲವು ವ್ಯವಸ್ಥಿತವಾಗಿರುವಂತೆ ಯಾವಾಗಲೂ ಜಾಗರೂಕರಾಗಿರುತ್ತಿದ್ದರು. ಆಗ ೬ನೆಯ ಇತ್ತಿಗೆ ಮುಲಕೀಪರೀಕ್ಷೆಯಾಗುತ್ತಿತ್ತು. ಆ ಸಾಲೆಗೆ ೩ ಇಯತ್ತಿಗಳ ಇಂಗ್ಲಿಷಕ್ಲಾಸನ್ನೂ ಸೇರಿಸಿದ್ದರಿಂದ ಆಂಗ್ಲೋ ವ್ಯಾರ್ನಾಕ್ಯುಲರಸ್ಕೂಲ ಕಿತ್ತೂರ ಎಂದು ಸುಂದರವಾದ ಕನ್ನಡ ಇಂಗ್ರಜೀ ಅಕ್ಷರಗಳ ಹಲಗೆಯೂ ಸಾಲೆಯ ಬಾಗಿಲಿಗೆ ಹಚ್ಚಲ್ಪಟ್ಟಿತ್ತು.

ದಾಸೋಪಂತರದು ಯಾವ ಪರೀಕ್ಷೆಯಾಗಿತ್ತೋ ನಮಗೆ ತಿಳಿಯದು. ಬಹುಶಃ ಇಂಗ್ಲಿಶ್ ಪಬ್ಲಿಕ್ ಸರ್ವಿಸ್ ಆಗಿರಬಹುದು. ಆದರೂ ಅವರ ವಕ್ತೃತ್ವವು ಅಸ್ಖಲಿ

ತವೂ ಆಕರ್ಷಕವೂ ಇತ್ತು. ಅವರಿಗೆ ಇಂಗ್ಲಿಶ್ ಕನ್ನಡ ವಾಚನ ಹಾಗು ಕವಿತೆಯ ಮೇಲೆ ಹೆಚ್ಚು ಲಕ್ಷ್ಯವಿತ್ತು. ಗಣಿತ ಮೊದಲಾದದ್ದು ಕಡಿಮೆ ಎಂದು ಹಿಂದೆ ಉಪಾಧ್ಯಾಪಕರು ಗುಣಗುಟ್ಟುವದು ನೆನಪಿದೆ. ತಮ್ಮ ಕೈಕೆಳಗೆ ರಾ. ಹಣಮಂತ ಗೋವಿಂದ ಶಿರಗುಪ್ಪಿ (ಈಗ್ಯೆ ಪ. ಡೆ. ಇರಬೇಕು.)ಯವರನ್ನು ಇಂಗ್ಲಿಶಕಲಿಸಲಿಕ್ಕೂ ರಾ. ಹಂಚಿನಾಳ ಎಂಬವರನ್ನು ಗಣಿತಕಲಿಸಲಿಕ್ಕೂ ಬೇರೆ ಕಡೆಯಿಂದ ಬೇಡಿ ವರ್ಗವಾಡಿಸಿಕೊಂಡಿದ್ದರು. ಈ ವರಿಬ್ಬರೂ ತಮ್ಮ ವಿಷಯದಲ್ಲಿ ಒಳ್ಳೇ ತರಬೇತಾದವರಿದ್ದರು.

ಇಂಗ್ರಜೀ ಮೂರು ಇಯತ್ತೆಗಳು ಮುಗಿದ ಬಳಿಕ ಹುಡುಗರು ಬೆಳಗಾಂವಿ ಘಾರವಾಡಕ್ಕೆ ಹೋಗಬೇಕಾಗುತ್ತದೆಂದು ಖಾಸಗೀರೀತಿಯಿಂದ ೪–೫ ಇಯತ್ತೆಗಳನ್ನು ಕಲಿಸುವ ಯೋಜನೆಯನ್ನೂ ಅಲ್ಲಿಯೇ ಮಾಡಿದ್ದರು. ಪರಸ್ಥಳದ ಹುಡುಗರದೆಸೆಯಿಂದ ಸಾಲೆಯೊಳಗೆ ಬೋರ್ಡಿಂಗಿನ ವ್ಯವಸೆ ಮಾಡಿದ್ದರು. ಪ್ರತಿಯೊಬ್ಬನಿಗೆ ೭ ರೂ ತಕ್ಕೊಳ್ಳುತ್ತಿದ್ದರು. ಇಷಲ್ಲದೆ ಹೆಣ್ಣುಮಕ್ಕಳ ವರ್ಗವನ್ನು ಬೆಳಿಸಿ ಕರೆಯುವ ಕಸೀದೀ ಹೇಳುವ ಹೆಣ್ಣುಮಕ್ಕಳನ್ನೂ (ಕಸೀದಿಬಲ್ಲ ಒಬ್ಬ ಅಯ್ಯನವರನ್ನು ಇಟ್ಟಿದ್ದರು.) ಡ್ರಾಯಿಂಗಬಲ್ಲ ಒಬ್ಬ ಮಾಸ್ತರರನ್ನೂ (ಅ. ಒಳಗಿನವರ ೩) ಇಟ್ಟಿದ್ದರು. ಇವರ ಕಾಲದಲ್ಲಿ ಸಾಲೆಯ ಹುಡುಗರ ಸಂಖ್ಯೆಯು ಇಮ್ಮಡಿಗೆ ಸಮೀಪಿಸಿತ್ತು. ದೊಡ್ಡ ಕಟ್ಟಡವು ತುಂಬಿ ಮುಂದಿನ ಎರಡು ಮಳಿಗೆಗಳಲ್ಲಿ ವರ್ಗಗಳನ್ನು ಹಾಕುವ ಪ್ರಸಂಗ ಬಂದಿತ್ತು.

ಬಹುತರವಾಗಿ ಮೇಲಿನ ಇಯತ್ತೆಯ ವಿದ್ಯಾರ್ಥಿಗಳು ರಾತ್ರಿಯಲ್ಲಿ ಶಾಲೆಯೊಳಗೆ ಮಲಗುವ ವ್ಯವಸ್ಥೆಯಾಗಿತ್ತು. ಅವರ ಮೇಲೆ ಅ. ರ ಯೋಜನೆಯನ್ನು ಮಾಡಿ ತಾವು ಬಂದು ನೋಡಿ ಹೋಗುತ್ತಿದ್ದರು. ಹುಡುಗರು ಪಟ್ಟಿಹಾಕಿ ಎಣ್ಣೆಬತ್ತಿ ಮಾಡಿಕೊಳ್ಳುತ್ತಿದ್ದರು. ಶಾಲೋಪಯೋಗಿ ಪುಸ್ತಕಗಳು ಅಲ್ಲೇ ಮಾರಾಟಕ್ಕೆ ಸಿಗುವ ಅನುಕೂಲತೆಯನ್ನು ಮಾಡಿದ್ದರು. ಸಾಲೆಯ ಮುಂಬದಿಯಲ್ಲಿ ಮಲ್ಲಕಂಬ ಮೊದಲಾದ ತಾಲೀಮಿನ ಸಾಧನಗಳಿದ್ದು ವೇಳೆವೇಳೆಗೆ ಕಲಿಸುವ ಏರ್ಪಾಡು ಆಗಿತ್ತು. ಸಂಜೆಯ ಮುಂದೆ ಎಲ್ಲ ಹುಡುಗರನ್ನು ಕರಕೊಂಡು ಅರ್ಧ ಮೈಲಿನಮೇಲೆ ಬೈಲೊಳಗೆ ಚಂಡು ಫುಟಬಾಲ್ ಆಡಿಸಿಕೊಂಡು ಬರುತ್ತಿದ್ದರು.

ಸಾಮಾನ್ಯವಾಗಿ ಎಲ್ಲ ಶಿಕ್ಷಕರೂ ಹೀಗೆ ವ್ಯವಸ್ಥೆಯನ್ನಿಟ್ಟಿರಬಹುದು; ಇನ್ನು ಆದರ್ಶಭೂತತ್ವವೇನು? ಎಂದು ವಾಚಕರು ಹಾತೊರೆದು ಸಂದೇಹಗೊಂಡು ಕೇಳಬಹುದು; ಸ್ವಲ್ಪತಡೆಯಿರಿ. ಶ್ರೀ. ದಾಸೋಪಂತರು ಮನೆಯಿಂದ ಹೊರಬಿದ್ದರೆಂದರೆ ಹೊರಗಿದ್ದ ಗಂಡಸರು ಹೆಂಗಸರು ಒಳಗೆ ಹೋಗುತ್ತಿದ್ದರು. ಹುಡುಗರಂತೂ 'ಯಃಪಲಾಯತಿಸಜೀವತಿ' ಎಂದು ಓಡಿಹೋಗುತ್ತಿದ್ದವು. ಸಾಲೀತಪ್ಪಿಸಿದ ಹುಡುಗರ ಪಾಡಂತೂ ಹೇಳಲೇಬೇಡ, ಕಿಡಿಕಿಸಂದರಿಯೊಳಗಿಂದ ನೋಡಿ ಮಾಸ್ತರರು ದಾಟುವವರೆಗೆ ಉಸಲು ಬಿಡದಂತೆ ಕೂಡುತ್ತಿದ್ದವು! ಯಾರಾದರೂ ಭೆಟ್ಟಿಯಾದರೆ, ಆಚಾರ್ಯರೆ

ನಿಮ್ಮ ಹುಡುಗನನ್ನು ಶಾಲೆಗೆ ಯಾಕೆ ಹಾಕಲಿಲ್ಲ. ಕಡಬಾಚಾರ್ಯನನ್ನೇ ಮಾಡು ವಿರೋ ಪತ್ರೀ ಅಯ್ಯನವರಂತೆ ದಿನಾಲು ಹೂವುತುಳಿಸಿ ತರಿಸಿದರಾಯಿತೇ ? ಶಟ್ಟರೇ ೨-೩ ಎತ್ತಾ ಕಲಿಸಿ ಬಿಟ್ಟಿದೆ. ಬಾಯಿಲೆಕ್ಕದಿಂದೇ ಮುಕ್ತಿಯಾಯಿತೋ! ಇಂಗ್ಲಿಶ್‌ಕಲಿ ಕರೇನು ಘಾತವಾಗುತ್ತದೆ. ಮೊದಲಾಗಿ ಗದ್ದರಿಸಿಕೊಳ್ಳುತ್ತಿದ್ದರು. ಅವರ ಮಾತಿಗೆ ಹೂ ಅನ್ನದೆ ಒಬ್ಬರೂ ಹೋಗುತ್ತಿರಲಿಲ್ಲ!

ರೇವಣಸಿದ್ಧಯ್ಯನೆಂಬ ಒಬ್ಬ ಸಶಕ್ತರೂಪವಂತ ತರುಣನು ಮುಲ್ಕೀಪರೀಕ್ಷೆ ಕೊಟ್ಟು ೬ರೂ. ಸಂಬಳದ ಮೇಲೆ ಬೈಲೂರಿಂಬ ೫ ಮೈಲು ಅಂತರದ ಹಳ್ಳಿಯಲ್ಲಿ ಮಾಸ್ತರನಾ ಗಿದ್ದನು. ಆತನಿಗೆ ದಿನಾಲು ಸಿಟ್ಟುವಾಡಿ ಇಂಗ್ಲಿಶ್ ಕಲಿಯಬಾರದೆ? ಅನ್ನುತ್ತಿದ್ದರು. ಅವನು ಮಾಸ್ತರರ ಮಾರಿತಪ್ಪಿಸಿ ಹಾಯಹತ್ತಲು, ಅವನ ತಾಯಿಯನ್ನು ಕರೆಯಿಸಿ 'ನಿಮ್ಮ ಹುಡುಗ ಗೋರಾಗುಮಠಾ ಲಕ್ಕಪುಷ್ಟಯಿದ್ದಾನೆ. ಇಂಗ್ರಜೀ ಯಾಕೆ ಕಲಿಸ ವಲ್ಲರಿ. ಇನ್ನೂ ವಯಸ್ಸು ಸಣ್ಣದದೆ. ಮದಿವೀಮಾಡಿ ಹೆಂಡತಿನ್ನ ಕೊರಳಲ್ಲಿ ಕಟ್ಟರ್ರಿ ವಿರೇನು'?' ಎಂದು ಕೇಳಲು ಆ ಪ್ರಾಣಿ--ಎಲ್ಯಾರ ೬ ರೂ. ತರತಾನ್ರಿ ಬಿಡಿಸಿದರೇನು ಗತಿ ಅಂದಳು, ಆಕೆಗೆ ಸಿಟ್ಟುವಾಡಿ, ಸೋಮವಾರಪೇಟೆಯ ೨ನೇ ನಂಬರ ಶಾಲೆಗೆ ಆ ಹುಡುಗನನ್ನು ವರ್ಗಮಾಡಿಸಿ ತಾವು ೨-೩ ಇಯತ್ತೆ ಇಂಗ್ಲಿಶ್ ಕಲಿಸಿ, ಧಾರವಾ ಡದ ಸಾಹುಕಾರ ಶ್ರೀ ಟೆಂಗಿನಕಾಯಿ ಚನ್ನಮಲ್ಲಪ್ಪನವರಿಗೆ ಪತ್ರಕೊಟ್ಟು ಕಳಿಸಿದರು. ಆತನು ಮುಂದೆ ಎಲ್.ಸಿ. ಈ. ಪರೀಕ್ಷೆಯ ಉತ್ತಮತರಗತಿಯಲ್ಲಿ ಪಾಸಾಗಿ ೨೫೦ ರೂ. ಉಚಿತಪಡೆದು ಆ ಹಣದಿಂದ ಕಿಲ್ಲೆಯೊಳಗಿನ ಈಶ್ವರ ದೇವಾಲಯವನ್ನು ಜೀರ್ಣೋ ದ್ಧಾರ ಮಾಡಿಸಿದನು. ಕೊನೆಗೆ ಕಿತ್ತೂರ ಸಾಹೇಬರೆಂದು ಧಾರವಾಡದಲ್ಲಿ ಡಿ॥ ಡಿ॥ ಸಿ॥ ಆಗಿ ಪೆನ್ಶೆನ್‌ಪಡೆದು ಕೈ. ವಾ. ಆದನು! ಶ್ರೀ. ರೇವಣಸಿದ್ಧಯ್ಯನವರ ಉನ್ನತಿಗೆ ದಾಸೋಪಂತರೇ ಮೂಲಕಾರಣರು, ಖಂಡಿತ. ಸೆ॥ ಶ್ಯಾಮಾಜಿ ಗೋಪಾಳ ಕಿತ್ತೂರ ಎಂಬವರು ೩ನೇ ವರ್ಷದ ಟ್ರೇಂಡರಾಗಿ ೨ನೆ ನಂಬರ ಶಾಲೆ ಹೆಡ್‌ಮಾಸ್ತರರಾಗಿದ್ದರು ಅವರ ತಲೆ ಕುಕ್ಕಿಕುಕ್ಕಿ ಇಂಗ್ರಜೀ ಪ್ರಾರಂಭಮಾಡಿಸಿ ಮ್ಯಾಟ್ರಿಕ್ ಮಾಡಿಸಿದರು.

ಇಂಗ್ರಜಿ ೫ನೇ ಇಯತ್ತೆಯಲ್ಲಿದ್ದ ಸುಸ್ವರೂಪಿ ಹಾಗು ಗಾಯನಕಲೆಯುಳ್ಳ "ಕೃಷ್ಣಾಜಿ ರಾಮಚಂದ್ರ ಕೊಳ್ಳಿ" ಎಂಬ ಗರಗದ ವಿದ್ಯಾರ್ಥಿಗೆ ತಮ್ಮ ಹಿರಿಮಗ ಳನ್ನು ಕೊಟ್ಟು ಮದುವೆಮಾಡಿದರು. ಚಿಕ್ಕಮಗಳನ್ನು ಕಲಭಾವಿ ದೇಶಪಾಂಡೆರಲ್ಲಿ ಕೊಟ್ಟರು. ಸದರಿ ಕೊಳ್ಳಿ ಇವರು ಇಂದೂರಲ್ಲಿ ಡಾಕ್ಟರರಾಗಿದ್ದಾರೆ. ಸಣ್ಣ ಮಗಳ ಮಕ್ಕಳಿಬ್ಬರೂ ಡಾಕ್ಟರರ ಆಶ್ರಯದಿಂದ ಪದವೀಧರರಾಗಿರುವರು.

ದಾಸೋಪಂತರ ಪ್ರೋತ್ಸಾಹನದಿಂದೇ ಕೇ. ಜೀ. ಕಿತ್ತೂರ ಎಂಬವರು ಎಲ್. ಎಲ್. ಬೀ. ಆಗಿ ಮುನ್ಸಿಫರಾಗಿದ್ದರು. ಡಾ. ಜಂಗೀ ಎಂಬವರು ಈಗ್ಯೂ ಶಹಾಪೂರಿ ನಲ್ಲಿರುವರು. ಕಿತ್ತೂರ ಪ್ರಾಂತಕ್ಕೆ ಇಂಗ್ರಜಿಯ ಹಾಗು ನೌಕರಿಯ ಸಂಸ್ಕಾರವು ದಾಸೋಪಂತರಿಂದಾಯಿತೆನ್ನಲು ಸಂದೇಹವೇ ಇಲ್ಲ.

ಅವರ ಕಯ್ಯೊಳಗೆ ತಾಲೀಮು ಕಲಿತ ಶ್ರೀ ರಾಜೂ ಶಟವಾಜಿ ಎಂಬ ಮರಾಠಾ ಗೃಹಸ್ಥನು ಒಂದು ಸರ್ಕಸನ್ನು ಮಾಡಿದ್ದನು.

ದಾಸೋಪಂತರ ಕಾಲದಲ್ಲಿ ೨ ಬ್ರಾಹ್ಮಣ ೨ ಇತರ ಹೆಣ್ಣುಮಕ್ಕಳು ೩ ಎತೆ ಇಂಗ್ಲಿಶ್‌ಪಾಸಾಗಿ ೫ರೆ, ಬಂಗಾರದ ಹೂವು ಇನಾಮುಪಡೆದಿದ್ದರು. ಒಬ್ಬಾಕಿ ಈಗ್ಯೂ ಬೆಳವಡಿಯಲ್ಲಿ ಮಾಸ್ತರಳಾಗಿರಬಹುದು.

ಒಮ್ಮೆ ಪರೀಕ್ಷೆಯ ಬಕ್ಷೀಸಸಮಾರಂಭಕ್ಕೆ ದಾಸೋಪಂತರು ಹಾಕಿಸಿದ ಹಂದರದಂಥ ದೊಡ್ಡ ಹಂದರವನ್ನು ಕಿತ್ತೂರ ಸಾವಕಾರರ ಮನೆಯ ಮದುವೆಯೊಳಗೂ ನಾವು ಕಂಡಿಲ್ಲ !

ಕೆಳಗಿನ ಇಯತ್ತೆಯೊಳಗಿನ ಹುಷಾರಹುಡುಗರನ್ನು ಪರೀಕ್ಷೆ ಇಲ್ಲದೆ ಮೇಲೆ ತಕ್ಕೊಂಡು ಬೇಗನೆ ಅವರು ಇಂಗ್ಲಿಶ್ ಕಲಿಯುವಂತೆ ಮಾಡಿದ್ದು ಈ ಲೇಖಕನಿಗೆ ಗೊತ್ತಿದೆ.

ನಡುನಡುವೆ ವರ್ಗದಲ್ಲಿ ಎಲ್ಲ ಹುಡುಗರನ್ನು ಕರೆಯಿಸಿ "ನೀವೆಲ್ಲರೂ ಮುಂದೆ ಏನಾದೀರೆಂಬದನ್ನು ಹೇಳಲಿಕ್ಕೆ ಬರುವಂತಿಲ್ಲ- ಒಬ್ಬನು ಮಾಮಲೇದಾರನೂ ಆಗಬಹುದು, ಇನ್ನೊಬ್ಬನು ಬಂದಿಖಾನೆಗೂ ಹೋಗಬಹುದು. ಒಳ್ಳೇ ಹಾದಿಹಿಡಿದು ಅಭ್ಯಾಸಮಾಡಿದರೆ ಕಲ್ಯಾಣವೇ ಇದೆ.

ನಿಮ್ಮಂತೆ ತಬಕದಹೊನ್ನೀಹಳ್ಳಿ ಹುಡುಗನೊಬ್ಬನು ಇಂಗ್ರಜೀ ಕಲಿಯುತ್ತಿದ್ದನು. ಅವನ ಜಾಣ್ಮೆಯನ್ನು ನೋಡಿ ಡೆಪೂಟೇ ಅವರು ಹೆಣ್ಣು ಕೊಟ್ಟು ಕಲಿಸಿ ಎಲ್. ಸಿ. ಈ ಪರೀಕ್ಷೆಕೊಡಿಸಿದರು. ಅವನು ಎಗ್ಸಿಕ್ಯೂಟಿವ್ ಇಂಜನಿರಯರನಿದ್ದಾನೆ. ಹಾಗೆ ನೀವೂ ಯಾಕೆ ಮುಂದೆ ಬರಲಿಲ್ಲ; ಮೊದಲಾದ ಪ್ರೋತ್ಸಾಹನದ ಹರಟೆಯನ್ನು ಬಡಿಯುತ್ತಿದ್ದರು. (ಧಾರವಾಡ ಮಾಳಮಡ್ಡಿಯಲ್ಲಿ ಮೊದಲಿಗೆ ಕಾಣುವ ಬಂಗಲೆಯ ವಕೀಲರೇ ಆ ಇಂಜನೀಯರ ಗಾಯತೊಂಡೆಯವರು.)

ವಾಚಕರೇ ಇಂಥ ಮಾಸ್ತರರ ಚರಿತ್ರವುಳ್ಳ ಒಂದು ಗ್ರಂಥವೇ ಆಗತಕ್ಕದ್ದು. ಇರಲಿ ಅಳಲಿ ಭಕ್ತಿಯಿಂದಲೂ ಕೃತಜ್ಞತೆಯಿಂದಲೂ ಇಷ್ಟು ದಿಗ್ದರ್ಶನವನ್ನು ಮಾಡಿರುತ್ತದೆ. ಕೊನೆಗೆ ಹೇಳುವದೆಂದರೆ – ಕಿತ್ತೂರ ಊರಹೆಸರು ಮುಂದೆ ಬಂದಿದ್ದಪಕ್ಷಕ್ಕೆ ಅದರ ಅರ್ಧದ ಮೇಲೆ ಶ್ರೇಯಸ್ಸು ದಾಸೋಪಂತರಿಗೇ ಇದೆ.

ಅದೇ ಕಿತ್ತೂರು ಈಗ ೪೦ ವರ್ಷಗಳಿಂದ ಇಂಗ್ರಜೀ ಸಾಲೆಗೆ ಎರವಾದಂತಾಗಿದೆ! ಒಬ್ಬ ಕರ್ತೃತ್ವಶಾಲಿಮಾಸ್ತರನಿಂದ ಜನಸಾಮಾನ್ಯಕ್ಕೆ ಎಷ್ಟು ಹಿತವಾಗುವನೆಂಬದನ್ನು ದಾಸೋಪಂತರ ಅಲ್ಪಚರಿತ್ರದಿಂದ ಊಹಿಸಬಹುದು. ಈ ಲೇಖಕನಿಗೆ "ಮಹತ್ವಾಕಾಂಕ್ಷೆ"ಯೆಂಬ ಶಬ್ದವು ನೆಟ್ಟನೆ ಹೊದಲು ದಾಸೋಪಂತರಿಂದೇ ಗೊತ್ತಾಯಿತು. ಅವರ ಆತ್ಮಕ್ಕೆ ಶಾಂತಿ ಇರಲಿ!

—ಕಾಮ್ಯಾನಂದ

ಪುಸ್ತಕಪರಿಚಯ

ಮಹಾರಾಣಿ ಲಕ್ಷ್ಮೀಬಾಯಿ. (ದ್ವಿತೀಯ ಮುದ್ರಣ) ಕ್ರೌನ್ ಪುಟ ೧೬೦ ಒಳ್ಳೆಯಬಾಯಿಂಡ್; ಬೆಲೆ ೧ ರು. ಪುಸ್ತಕದೊರೆಯುವ ಸ್ಥಳ—ಸರಸ್ವತೀಮಂದಿರ; ಧಾರವಾಡ.

ಕನ್ನಡದಲ್ಲಿ ಅನೇಕ ಗ್ರಂಥಗಳನ್ನು ಬರೆದು ಕನ್ನಡಿಗರ ಪರಿಚಯದ ಲೇಖಕರಾದ ಮಿ. ಕುರಡಿ ಇವರಿಂದ ರಚಿತವಾದುದು. ಇದು ೧೮೫೭ನೆಯ ಇಸವಿಯ ಬಂಡಾಯದಲ್ಲಿ ತನ್ನ ಅಸದೃಶಪರಾಕ್ರಮದಿಂದ ಜಗತ್ತಿಗೆ ಆಶ್ಚರ್ಯವನ್ನುಂಟುಮಾಡಿದ ವೀರನಾರಿಯೂ, ಅನುಕರಣೀಯವಾದ ಪಾತಿವ್ರತ್ಯ, ತೀಕ್ಷ್ಣವಾದ ರಾಜತಂತ್ರಪಾಟವ, ಉಜ್ವಲವಾದ ದೇಶಭಕ್ತಿ, ನಿಸ್ಸೀಮವಾದ ಔದಾರ್ಯ, ಅತುಲವಾದ ಈಶ್ವರಭಕ್ತಿ ಮೊದಲಾದ ಗುಣಗಳ ರಾಶಿಯಿಂದ ಪ್ರಪಂಚಕ್ಕೆ ಪೂಜ್ಯಳೂ ಆದ ಝಾನ್ಸಿ ಮಹಾರಾಣಿ ಲಕ್ಷ್ಮೀಬಾಯಿಯ ಅದ್ಭುತಚರಿತ್ರವು; ಪಾಠಕರ ಮನಃಸರೋವರದಲ್ಲಿ ಭಾವತರಂಗಗಳ ಮೇಲೆ ಭಾವತರಂಗಗಳನ್ನುಂಟುಮಾಡಿ ಅವರನ್ನು ಪುಲಕಿತರನ್ನಾಗಿ ಮಾಡುವ ನಾನಾರಸಮಯ ಘಟನೆಗಳುಳ್ಳದು; ರಸೋಚಿತವಾಗಿ ಒಮ್ಮೆ ಲಲಿತವೂ ಒಮ್ಮೆ ಓಜಸ್ವಿಯೂ ಆದ ಕುರಡಿಯವರ ಸರಳ ಭಾಷಾಶೈಲಿಯಿಂದ ಗ್ರಂಥವು ಪಠನೀಯವಾಗಿರುವದೆಂದು ಬೇರೆಯಾಗಿ ಹೇಳಬೇಕಾಗಿಲ್ಲ. ಸಂಸ್ಕೃತವಾಙ್ಮಯದೊಳಗಿನ ಪ್ರಕರಣೋಚಿತಪದ್ಯಗಳು, ಬಣ್ಣದ ಕೆಲವು ಚಿತ್ರಗಳು ಇವುಗಳಿಂದ ಪುಸ್ತಕದ ಶೋಭೆಯು ಹೆಚ್ಚಿದೆ. ಇದು ಕನ್ನಡ ವಾಙ್ಮಯದ ಸಂಗ್ರಾಹ್ಯಪುಸ್ತಕಗಳಲ್ಲೊಂದಾಗಿರುವದೆಂದೂ ಶಾಲೆ—ಕಾಲೇಜುಗಳ ಪಠ್ಯಪುಸ್ತಕವಾಗಲು ತಕ್ಕುದೆಂದೂ ಹೇಳದಿರಲಾರೆವು. ರಾಜಕಾರಣ ಮೊದಲಾದ ಒಂದೆರಡು ಪರಭಾಷೆಯ ಶಬ್ದಗಳನ್ನೂ, ಉಡುಗೆರೆ ಎಂಬ ವಿಕೃತ ಶಬ್ದವನ್ನೂ, ಮುದ್ರಣದ ಕೆಲವು ದೋಷಗಳನ್ನೂ ಮುಂದಿನ ಮುದ್ರಣದಲ್ಲಿ ಸರಿಪಡಿಸಿಕೊಳ್ಳುವರೆಂದು ನಂಬಿದ್ದೇವೆ.

—ಸಾ. ಸಾ. ಪ.

ಪ್ರಕಟನೆ

ಸರಕಾರಿ ತರಾವ ಎ. ಡಿ. ನಂ. ೨೬೪೬. ತಾ॥ ೨೯-೧೦-೧೯೨೭.

ಮೈ॥ ಎ. ಇ. ವ. ಭಾ ರವರ ಪತ್ರ ನಂ. ಬಿ. ೫೮೬೬ ತಾ॥ ೯-೧೧-೧೯೨೭ ನೇದ್ದರ ಪ್ರಕಾರ ತಿಳಿಸುವದೇನಂದರೆ— ೧೯೨೮ ನೇ ಎಪ್ರಿಲ್‌ದಿಂದ ಹೆಣ್ಣುಮಕ್ಕಳ ಸಹಾ. ಪರೀಕ್ಷೆಗೆ ೩ ರೂ. ಫೀ ತಕ್ಕೊಳ್ಳಬೇಕೆಂದು ಗೊತ್ತುಮಾಡಿದೆ.

S. L. UGRANKAR
ಎ. ಇ. ವ. ಭಾ.

೧೯೨೭

ಧಾರವಾಡ ಸೆಂಟರ

ನಂ.	ಹೆಸರು.	ಗುಣಗಳು.
೧	ರಾಮಚಂದ್ರ ಶಂಕರರಾವ ಕುಲಕರ್ಣಿ	೩೬೨
೨	ಚಿದಾನಂದಯ್ಯ ಶಿವರುದ್ರಯ್ಯ ಹಿರೇಮಠ	೩೫೮
೩	ಲಿಂಗನಗೌಡಾ ಹಿರೇಗೌಡಾ ಹಿರೇಗೌಡರ	೩೫೪
೪	ಶಿವನಗೌಡಾ ಕೆಂಚನಗೌಡಾ ಸಾವುಕಾರ	೩೪೭
೫	ಜೀವಾಜಿ ಚಿದಂಬರ ನಿಂಬರ್ಗಿ	೩೩೮
೬	ತಿಪ್ಪಣ್ಣಾ ಗೋವಿಂದಪ್ಪಾ ಯಾವಗಲ್ಲ	೩೩೭
೭	ಕೃಷ್ಣಾಜಿ ಖಂಡೋ ಪಾಟೀಲ	೩೩೬
೮	ಶ್ರೀನಿವಾಸ ನರಸಿಂಹಾಚಾರ್ಯ ಆಲೂರ	೩೩೫
೯	ವೆಂಕಪ್ಪಾ ಹನುಮಪ್ಪಾ ಹೆಬ್ಬಾಳ	೩೩೫
೧೦	ರಘುನಾಥ ಗಂಗಾಧರಭಟ್ಟ ಮೋಡಿ	೩೩೪
೧೧	ಶಂಕರ ಗೋವಿಂದ ಗೋಡಖಿಂಡಿ	೩೩೩
೧೨	ಚನಬಸಪ್ಪಾ ರಾಚಪ್ಪಾ ನೇಕಾರ	೩೨೭
೧೩	ಪರಪ್ಪಾ ಬಸಪ್ಪಾ ಕೌಲೂರ	೩೨೭
೧೪	ಶಿವರುದ್ರ ಭಾಸ್ಕರಪ್ಪಾ ಮನುವಾಚಾರ್ಯ	೩೨೭
೧೫	ಧೀರೇಂದ್ರ ಕೃಷ್ಣಾಚಾರ್ಯ ಶಿರಹಟ್ಟಿ	೩೨೬
೧೬	ನಾರಾಯಣ ಪಾಂಡುರಂಗ ಕುಲಕರ್ಣಿ	೩೨೫
೧೭	ಚಿನ್ನಪ್ಪಗೌಡಾ ಮುದಿಗೌಡಾ ಗಡ್ಡಿಗೌಡರ	೩೨೪
೧೮	ಕೃಷ್ಣಾ ಜಿ ಅನಂತರಾವ ಹೆರೂರ	೩೨೪
೧೯	ಮಹಾದೇವ ಭೀಮಭಟ್ಟ ಜೋಶಿ	೩೨೩
೨೦	ಹಣಮಂತ ನೀಲಕಂಠ ಕುಲಕರ್ಣಿ	೩೨೧
೨೧	ಶಂಕರಪ್ಪಾ ಲಿಂಗಪ್ಪಾ ಪಾಗಾದ	೩೨೧
೨೨	ಬಸಪ್ಪಾ ಎಲ್ಲಪ್ಪಾ ಹೆಬ್ಬಳ್ಳಿ	೩೧೯
೨೩	ಶಿವಾಜಿ ಭೀಮಾಜಿ ಕುಲಕರ್ಣಿ	೩೧೮
೨೪	ಶಿದ್ದಪ್ಪಾ ಲಿಂಗಪ್ಪಾ ಜಾಬಣ್ಣವರ	೩೧೫
೨೫	ವೀರಪ್ಪಾ ಗದಿಗೆಪ್ಪಾ ಹೊಸಮನಿ	೩೧೫

೨೬	ನಿಂಬಪ್ಪ ಚನ್ನಪ್ಪಾ ಪಲ್ಲೇದ	೩೧೬
೨೬	ರಾಮಪ್ಪಾ ಧನಾಜಿ ಲವಾಣಿ	೩೧೬
೨೮	ನಾರಾಯಣ ತಮ್ಮಾಜಿ ಪುರೋಹಿತ	೩೧೫
೨೮	ವೆಂಕಪ್ಪಾ ಶಿವಪ್ಪಾ ತಗಲ್ದಾರ	೩೧೪
೩೦	ತಿಮ್ಮಾಜಿ ಲಿಂಗೋ ಕುಲಕರ್ಣಿ	೩೧೪
೩೧	ಚಿಕ್ಕೋ ಬಾಳಾಜಿ ಕುಲಕರ್ಣಿ	೩೧೩
೩೨	ಅನಂತ ಪುಟ್ಟಾಚಾರ್ಯ ನಗರ	೩೧೨
೩೩	ಫಕ್ಕೀರಸಾಬ ನಬೀಸಾಬ ನದಾಫ	೩೧೧
೩೪	ಸೋಮಪ್ಪಾ ಮುದಕಪ್ಪಾ ರಿತ್ತೀಯವರ	೩೧೧
೩೫	ಚನಬಸಯ್ಯಾ ಪುಟ್ಟಯ್ಯಾ ಕನಗತ್ತಿ	೩೧೦
೩೫	ಲಕ್ಷ್ಮಣ ಬಸವರಡ್ಡಿ ಮುಳ್ಳೂರ	೩೧೦
೩೫	ಸಂಗಪ್ಪಾ ಶಿವಪ್ಪಾ ನಾಗನೂರ	೩೧೦
೩೮	ದೇವೇಂದ್ರಪ್ಪಾ ಉಡಚಪ್ಪಾ ಅಡವಿಯವರ	೩೦೯
೩೮	ಪರಸಪ್ಪಾ ಕೊಟ್ರಪ್ಪಾ ಸಾಲಿ	೩೦೯
೩೮	ವೆಂಕಟೇಶ ಅನಂತರಾವ ಭಂಡಿವಾಡ	೩೦೯
೪೧	ಬಸಪ್ಪಾ ದುರಗವ್ವಾ ತಳವಾರ	೩೦೭
೪೧	ಜೀವಾಜಿ ನರಶಿಂಹ ವೈದ್ಯ	೩೦೭
೪೩	ನಿಂಗಾ ಬಸಪ್ಪಾ ಕನ್ನಗೌಡರ	೩೦೬
೪೪	ರಾಮಚಂದ್ರ ಶ್ರೀನಿವಾಸ ಕುಲಕರ್ಣಿ	೩೦೫
೪೫	ಮಾರ್ತಂಡ ಕೃಷ್ಣ ವರಗೇರಿ	೩೦೪
೪೬	ಸುಬ್ಬಾಜಿ ಖಂಡೋ ಕುಲಕರ್ಣಿ	೩೦೧
೪೭	ಬಸಪ್ಪಾ ಫಕ್ಕೀರಪ್ಪಾ ತಳವಾರ	೩೦೦
೪೭	ನರಶಿಂಹ ಭೀಮರಾವ ಹುದ್ದಾರ	೩೦೦
೪೯	ಬಶೆಟ್ಟೆಪ್ಪಾ ಚನ್ನಪ್ಪಾ ಅಂಗಡಿ	೨೯೯
೪೯	ಮಲ್ಹಾರ ಉರ್ಫ ಗಿರಿಯಪ್ಪಾ ಹೆಣಮಂತ ಕುಲಕರ್ಣಿ	೨೯೯
೪೯	ವಿರುಪಾಕ್ಷ ಬಸಪ್ಪಾ ಕುಂದಗೋಳ	೨೯೯
೫೨	ಹನುಮಂತ ಹೆಣಮಂತಪ್ಪಾ ಮರಾಠಾ	೨೯೮
೫೩	ಚನಬಸಪ್ಪಾ ಬಸಪ್ಪಾ ಕಂಠಿ	೨೯೬
೫೩	ಕಲ್ಲನಗೌಡಾ ಗಾಡಪ್ಪಗೌಡಾ ಕಬ್ಬೂರ	೨೯೬
೫೩	ನಾಗಪ್ಪಾ ಮುದುಕಪ್ಪಾ ಭಾಪಿ	೨೯೬

೫೩	ಶೇಷಗಿರಿ ವೆಂಕಟೇಶ ಕಾಂತನವರ	೨೯೭
೫೭	ಗೋವಿಂದ ರಾಘವೇಂದ್ರ ಮುತಾಲೀಕ ಪಾಟೀಲ	೨೯೬
೫೭	ರಾಜೇಸಾಬ ಬಿಲ್ಲೇಸಾಬ ಅಬ್ಬಿಗೇರಿ	೨೯೬
೫೯	ದ್ಯಾಮಪ್ಪ ದ್ಯಾಮಪ್ಪ ವಡ್ಡರ	೨೯೫
೫೯	ರಾಘವೇಂದ್ರ ನರಸಿಂಹಾಚಾರ್ಯ ಹಾವನೂರ	೨೯೫
೫೯	ಶ್ರೀನಿವಾಸ ರಾಘವೇಂದ್ರ ಪಾಟೀಲ	೨೯೫
೬೨	ದತ್ತಾತ್ರಯ ಸದಾಶಿವರಾವ ಕುಲಕರ್ಣಿ	೨೯೪
೬೨	ವಿರುಪಾಕ್ಷಪ್ಪ ಶಾಂತವೀರಪ್ಪ ಜತ್ತಿ	೨೯೪
೬೪	ಪರಶುರಾಮ ಗುರುನಾಥ ದೇಶಪಾಂಡೆ	೨೯೩
೬೪	ವೀರಪ್ಪ ಬಸಪ್ಪ ಗೌಡ್ರ	೨೯೩
೬೬	ಪಂಚಾಕ್ಷರಿ ವೀರಪ್ಪ ಮೆಣಶಿನಕಾಯಿ	೨೯೨
೬೬	ವೆಂಕಟೇಶ ವಾದಿರಾಚಾರ್ಯ ಪುರೋಹಿತ	೨೯೨
೬೬	ವೀರನಗೌಡಾ ಭರಮಗೌಡಾ ಮುದಿಗೌಡರ	೨೯೨
೬೯	ಬಾಳಕೃಷ್ಣ ಶಂಕರ ಮುತಾಲಿಕ	೨೯೧
೬೯	ಬಸಪ್ಪ ವಿರುಪಣ್ಣಾ ನಾಲಿ	೨೯೧
೭೧	ಅರ್ಜುನ ಕೃಷ್ಣ ಕುಲಕರ್ಣಿ	೨೯೦
೭೧	ಗಣೇಶ ಶ್ರೀನಿವಾಸ ಕುಲಕರ್ಣಿ	೨೯೦
೭೧	ಮುರಿಗಿ ವೀರಭದ್ರಪ್ಪ ಬಾಳೀಕಾಯಿ	೨೯೦
೭೧	ರುದ್ರಪ್ಪ ಗುರುಬಸಪ್ಪ ಮುದವಿ	೨೯೦
೭೧	ವೀರಭದ್ರಪ್ಪ ಬಸಪ್ಪ ಐರಸಂಗ	೨೯೦
೭೬	ಬಸನಗೌಡಾ ಶಿವನಗೌಡಾ ಕರಿಬಸನಗೌಡರ	೨೮೯
೭೬	ಗುರುಶಾಂತಪ್ಪ ಮುರಿಗೆಪ್ಪ ಬೆಲ್ಲದ	೨೮೯
೭೬	ಕರೆಗೌಡಾ ಸಿದ್ದಬಸನಗೌಡಾ ಕರಬಸಲ್ಲವರ	೨೮೯
೭೬	ವೀರಯ್ಯಾ ಅಯ್ಯಪ್ಪಯ್ಯಾ ಸರಗಣಾಚಾರಿ	೨೮೯
೮೦	ಲಿಂಗಪ್ಪಾ ಬಸಪ್ಪಾ ಡೊಣಗನವರ	೨೮೮
೮೦	ಲಿಂಗೋ ಬಾಳಾಜಿ ಕುಲಕರ್ಣಿ	೨೮೮
೮೨	ಎಲ್ಲಪ್ಪಾ ಗದಿಗೆಪ್ಪಾ ಕುಸೂಗಲ್ಲ	೨೮೭
೮೨	ಗುರಪ್ಪಾ ಪರಪ್ಪಾ ಬ್ಯಾಳಿ	೨೮೭
೮೨	ಮಲ್ಲಾರಿ ಹನುಮಂತಪ್ಪ ಮೋರಿ	೨೮೭
೮೨	ರಘುನಾಥ ಹನುಮಂತಾಚಾರ್ಯ ಭಾದ್ರಿ	೨೮೭
೮೨	ಶಿವಪಾ. ಮಲ್ಲಪಾ. ಕೊಳ್ಳೂರ	೨೮೭

೮೭	ಕಲ್ಲಯ್ಯಾ ಸಂಗಯ್ಯಾ ಸರಗಣಾಚಾರ ಮಠ	೨೮೬
೮೭	ಮಲ್ಲನಗೌಡಾ ಕಲ್ಲನಗೌಡಾ ಪಾಟೀಲ	೨೮೬
೮೭	ಮರುಳಶಿದ್ದನಗೌಡಾ ಮುರುದಾನಗೌಡಾ ಮರಿಯಜ್ಜನಗವಡರ	೨೮೬
೯೦	ಫಕ್ಕೀಪ್ಪಾ ಪ್ರಭಪ್ಪಾ ಜಂಗೇರಿ	೨೮೫
೯೦	ಗದಿಗೆಪ್ಪಾ ಉಜ್ಜಪ್ಪಾ ಮಾಳಾಪೂರ	೨೮೫
೯೦	ಲಕ್ಷ್ಮಣ ಬಸಪ್ಪಾ ಬಡಿಗೇರ	೨೮೫
೯೦	ಮಲ್ಲಪ್ಪಾ ವಿರುಪಾಕ್ಷಪ್ಪಾ ಹುಲಗೂರ	೨೮೫
೯೦	ನಾಗಪ್ಪಾ ಮಾಯಪ್ಪಾ ಮಾಡೊಳ್ಳಿ	೨೮೫
೯೦	ಶಾಂತಾಚಾರ್ಯ ನರಸಿಂಹಾಚಾರ್ಯ ಘೊಳಿ	೨೮೫
೯೦	ಸಿದ್ದಯ್ಯಾ ವೀರಯ್ಯಾ ಮಠದ	೨೮೫
೯೭	ಬಸಪ್ಪಾ ಕನಕಪ್ಪಾ ಪೂಜಾರ	೨೮೪
೯೭	ಲಕ್ಷ್ಮಣ ಗೋವಿಂದಪ್ಪಾ ಕಿಟಬ್ಬೂರ	೨೮೪
೯೭	ತಿರಕಾ ಭರಮಕ್ಕಾ ಮಾದಿಗಾರ	೨೮೪
೧೦೦	ಅಬ್ದುಲ ರಹಿಮಾನ ಬಂದೂ ಸಾಹೇಬ ಮುಲ್ಲಾನವರ	೨೮೩
೧೮೦	ಚನ್ನಪ್ಪಾ ಚನಬಸಪ್ಪಾ ಬೆಟದೂರ	೨೮೩
೧೦೦	ಲಿಂಗೋ ಚಿದಂಬರ ಕುಲಕರ್ಣಿ	೨೮೩
೧೦೦	ಪುರದಯ್ಯಾ ಕೊಟ್ರಯ್ಯಾ ಸಾಲೀಮಠ	೨೮೩
೧೦೪	ವೀರಪ್ಪಾ ಗುರಬಸಪ್ಪಾ ದಳವಾಯಿ	೨೮೨
೧೦೫	ಲಕ್ಷ್ಮಣ ಹಣಮಂತರಾವ ಸುಬ್ಬಣ್ಣವರ	೨೮೧
೧೦೫	ಶಂಕರ ಎಲ್ಲೋ ಕುಲಕರ್ಣಿ	೨೮೧
೧೦೫	ವೀರಪ್ಪಾ ಮಲ್ಲಪ್ಪಾ ಹಿರಗುಳಿ	೨೮೧
೧೦೪	ಚನಮಲ್ಲಪ್ಪಾ ಬಸಪ್ಪಾ ನೀರಲಿಗಿ	೨೮೦
೧೦೪	ದೇವೇಂದ್ರಪ್ಪಾ ಅನಂತಪ್ಪಾ ಹೋಮಕರ	೨೮೦
೧೦೪	ಗುಂಡಪ್ಪಾ ಫಕ್ಕೀರಪ್ಪಾ ಹಲಸೂರ	೨೮೦
೧೦೪	ಖಾಜೇಸಾಹೇಬ ಹುಶೇನಸಾಹೇಬ ಬಗಲ	೨೮೦
೧೦೪	ಲಕ್ಷ್ಮಪ್ಪಾ ಸಿದ್ದಪ್ಪಾ ಕಳಕಾಪೂರ	೨೮೦
೧೦೪	ಪ್ರಲ್ಹಾದ ಲಕ್ಷ್ಮಣ ಕುಲಕರ್ಣಿ	೨೮೦
೧೦೪	ರಾಮಪ್ಪಾ ಕಾಶಪ್ಪಾ ಬಾಲೋಜಿ	೨೮೦
೧೦೪	ವೆಂಕಟೇಶ ಎಲ್ಲೋ ಕುಲಕರ್ಣಿ	೨೮೦
೧೧೬	ಬಸನಗೌಡಾ ಭರಮನಗೌಡಾ ಹೊಸಗೌಡರ	೨೭೯
೧೧೬	ಬಸವಣ್ಣೆಪ್ಪಾ ಸಂಗಪ್ಪಾ ಅಂಗಡಿ	೨೭೯

೧೧೬	ಗುರುಪಾದಯ್ಯಾ ಮರುಳಯ್ಯಾ ಹಿರೇಮಠ	೨೭೯
೧೧೯	ಬಸಪ್ಪಾ ಗದಿಗೆಪ್ಪಾ ಸೋಮನಕಟ್ಟಿ	೨೭೮
೧೧೯	ಚಿಕ್ಕೋ ಪಾರ್ತಂಡ ಕುಲಕರ್ಣಿ	೨೭೮
೧೧೯	ನಾಗೇಶ ಶಂಕರ ಕುಲಕರ್ಣಿ	೨೭೮
೧೧೯	ನಿಂಗಪ್ಪಾ ಹಣಮಪ್ಪಾ ಪರಸರಡ್ಡಿ	೨೭೮
೧೨೩	ಬಂಡೋ ಕೃಷ್ಣ ದಿವಾಕರ	೨೭೬
೧೨೩	ಬಸಪ್ಪಾ ನೀಲಪ್ಪಾ ತಡಶಿ	೨೭೬
೧೨೩	ಮಲ್ಲಾರ ಗಣೇಶ ನಾಡಿಗೇರ	೨೭೬
೧೨೬	ಗಂಗಯ್ಯಾ ಗದಿಗಯ್ಯಾ ಹಿರೇಮಠ	೨೭೫
೧೨೬	ಜವಾಲಖಾನ ಬುಡಣಖಾನ ಕುಲಕರ್ಣಿ	೨೭೫
೧೨೬	ಲಿಂಗಪ್ಪಾ ಫಕ್ಕೀರಪ್ಪಾ ಕಳ್ಯಾಳ	೨೭೫
೧೨೬	ಮಧ್ವ ರಾಘವೇಂದ್ರ ನರಸಾಪೂರ	೨೭೫
೧೨೬	ನೇಮಚಂದ್ರ ಬೆನಕಪ್ಪಾ ಬೋಗಾರ.	೨೭೫
೧೩೧	ಹುಸೇನ ಅಬ್ದುಲಕರಿಮಸಾಬ ಡಂಬಳ	೨೭೪
೧೩೧	ರಾಘವೇಂದ್ರ ಗುರುರಾವ ಮುರನಾಳ	೨೭೪
೧೩೧	ಸ್ವಾಮಿ ಅಣ್ಣಾಚಾರ್ಯ ಕೊಲ್ಹಹಳ್ಳಿ	೨೭೪
೧೩೪	ಭಾಸ್ಕರ ಮಹರುದ್ರಪ್ಪಾ ಸಿಂಗಟಾಲೂರ	೨೭೩
೧೩೪	ದೇವಪ್ಪಾ ಲಿಂಗಪ್ಪಾ ಮಡಿವಾಳರ	೨೭೩
೧೩೬	ಲಿಕ್ಷ್ಮಣ ಬಿಂದಾಚಾರ್ಯ ವರಾಹಮೂರ್ತಿ	೨೭೨
೧೩೬	ಲಿಂಗನಗೌಡಾ ಗಡ್ಡೀಗೌಡಾ ಹೊಸಮನಿ	೨೭೨
೧೩೬	ಶಂಕರ ಬಸಪ್ಪಾ ಮರಳಪ್ಪನವರ	೨೭೨
೧೩೬	ಸೋಮಪ್ಪಾ ಮಲ್ಲಪ್ಪಾ ವಿಭೂತಿ	೨೭೨
೧೪೦	ಭೀಮಾಜಿ ಗುರುನಾಥ ಕುಲಕರ್ಣಿ	೨೭೧
೧೪೦	ದಾಸಾಚಾರ್ಯ ಭೀಮಾಚಾರ್ಯಿ ತಂಗೋಡ	೨೭೧
೧೪೨	ಎಲ್ಲಿಪ್ಪಾ ಶಿವಪ್ಪಾ ಸುಬ್ಬಣ್ಣವರ	೨೭೦
೧೪೨	ನರಸಿಂಹ ರಾಮಚಂದ್ರ ಕುಲಕರ್ಣಿ	೨೭೦
೧೪೨	ವೀರಭದ್ರ ವೀರಪ್ಪಾ ಅರ್ಕಸಾಲಿ	೨೭೦
೧೪೫	ಫಕ್ಕೀರಪ್ಪಾ ಅಡಿವೆಪ್ಪಾ ಗುಡಗುಂಟಿ	೨೬೯
೧೪೫	ನಿಂಗನಗೌಡಾ ಕಲ್ಲವಗೌಡಾ ಪಾಟೀಲ	೨೬೯
೧೪೫	ವೀರಭದ್ರ ಸಂಗಪ್ಪಾ ಸವನೂರ	೨೬೯

(ಅಪೂರ್ಣ)

ಜೈನಧರ್ಮವು ಒಳ್ಳೇ ಊರ್ಜಿತಸ್ಥಿತಿಯಲ್ಲಿತ್ತು. ಆದರೆ ಹಿಂದೂಧರ್ಮದವರೂ ಜೈನರೂ ಪ್ರೀತಿಯಿಂದ ಇದ್ದರು.

ಚೋಳರು.

೧. **ಪರಾಂತಕ** (೯೦೭–೯೫೪)—ಚೋಳರ ಇತಿಹಾಸವು ಪರಾಂತಕನ ಕಾಲದಿಂದ ಅಂದರೆ ೯೦೭ರಿಂದ ನಿಶ್ಚಿತವಾಗಿ ಗೊತ್ತಾಗಿದೆ. ಇವನ ತಂದೆಯಾದ ಆದಿತ್ಯನು ಪಲ್ಲವರನ್ನು ಸೋಲಿಸಿ ತನ್ನ ರಾಜ್ಯವಿಸ್ತಾರವನ್ನು ಬೆಳಿಸಿದನು. ಪರಾಂತಕನು ೪೨ ವರ್ಷ ರಾಜ್ಯವಾಳಿ ಪಾಂಡ್ಯ ಅರಸರನ್ನು ಸೋಲಿಸಿ ಅವರ ರಾಜಧಾನಿಯಾದ ಮದುರೆಯನ್ನು ಕೈವಶಮಾಡಿಕೊಂಡನು. ಮತ್ತು ಸಿಂಹಳದ್ವೀಪದ ಮೇಲೆ ದಂಡೆತ್ತಿ ಹೋಗಿದ್ದನು. ಇವನು ಮಹತ್ವಾಕಾಂಕ್ಷಿಯಾದ್ದರಿಂದ ಇವನ ಕಾಲದಲ್ಲಿ ಚೋಳ ರಾಜ್ಯವು ಘನತೆಗೇರಿತು.

೨. **ರಾಜರಾಜ** (೯೮೫–೧೦೧೮)—ಚೋಳ ಅರಸರಲ್ಲಿ ಅತಿ ಪ್ರಸಿದ್ಧರಾದ ಅರಸರಿಂದರೆ ರಾಜರಾಜನು ಮತ್ತು ಅವನ ಮಗನಾದ ರಾಜೇಂದ್ರ ಚೋಳನು. ರಾಜರಾಜನು ಮೊದಲು ಕೇರಳರಾಜ್ಯವನ್ನು ಗೆದ್ದು ಬಳಿಕ ಪೂರ್ವದ ಚಾಲುಕ್ಯರ ರಾಜ್ಯವನ್ನು ತಕ್ಕೊಂಡನು. ಕಲ್ಯಾಣದ ಚಾಲುಕ್ಯರ ಮೇಲೆ ದೌಡುಮಾಡಿದ್ದಲ್ಲದೆ ಪಾಂಡ್ಯರನ್ನು ಸೋಲಿಸಿದನು. ಆ ಮೇಲೆ ಕಲಿಂಗ (ಓಡಿಸಾ), ಸಿಂಹಳದ್ವೀಪ, ಮಲಬಾರಗಳನ್ನು ಕೈವಶಮಾಡಿಕೊಂಡನು. ಬಲಿಷ್ಠವಾದ ಹಡಗುಪಡೆಯ ಸಹಾಯದಿಂದ ಲಕ್ಷದೀವ, ಮಾಲದೀವ ನಡುಗಡ್ಡೆಗಳನ್ನು ಹಿಡಕೊಂಡು ತನ್ನ ರಾಜ್ಯಕ್ಕೆ ಸೇರಿಸಿದನು. ತಂಜಾವರದ ದೇವಾಲಯಗಳನ್ನು ಇವನೇ ಕಟ್ಟಿಸಿದನು. ೧೦೧೪ರಲ್ಲಿ ರಾಜ್ಯಕಾರಭಾರವನ್ನು ತನ್ನ ಮಗನಾದ ರಾಜೇಂದ್ರನಿಗೆ ಒಪ್ಪಿಸಿ ತಾನು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿದನು.

೩. **ರಾಜೇಂದ್ರ ಚೋಳದೇವ** (೧೦೧೪–೧೦೫೪)—ಇವನು ತಂದೆಗಿಂತಲೂ ಖ್ಯಾತಿವಂತನು. ಇವನು ದೊಡ್ಡದೊಂದು ಹಡಗುಪಡೆಯನ್ನು ಬಂಗಾಲ ಉಪಸಾಗರದೊಳಗಿಂದ ಕಳಿಸಿ ಬ್ರಹ್ಮದೇಶದ ಪೇಗೂ ಪ್ರಾಂತವನ್ನೂ ಅಂದಮಾನ-ನಿಕೋಬಾರ ದ್ವೀಪಗಳನ್ನೂ ವಶಮಾಡಿಕೊಂಡನು. ಬಂಗಾಲದ ಅರಸನಾದ ಮಹೀಪಾಲನನ್ನು ಸೋಲಿಸಿ 'ಗಂಗೈಕೊಂಡ' ಎಂಬ ಬಿರುದು ಧರಿಸಿದನು. ಮತ್ತು ಗಂಗೈಕೊಂಡಚೋಳಪುರಂ ಎಂಬ ಹೊಸ ರಾಜಧಾನಿಯನ್ನು ಸ್ಥಾಪಿಸಿ ಅಲ್ಲಿ ಒಂದು ಸುಂದರವಾದ ಸರೋವರವನ್ನು ಕಟ್ಟಿಸಿದನು. ಷಡಕ್ಷರಿ ಕವಿಯು ರಾಜಶೇಖರವಿಳಾಸವೆಂಬ ಕನ್ನಡ ಕಾವ್ಯದಲ್ಲಿ ಈತನ ಚರಿತ್ರೆಯನ್ನು ಸರಸವಾಗಿ ಬಣ್ಣಿಸಿದ್ದಾನೆ.

೪. **ರಾಜಾಧಿರಾಜ** (೧೦೪೨–೧೦೫೨)—ಇವನು ರಾಜೇಂದ್ರ ಚೋಳದೇವನ ಮಗನು. ಇವನು ಚೇರ-ಪಾಂಡ್ಯರನ್ನು ಗೆದ್ದನು; ಮತ್ತು ಸಿಂಹಳದ್ವೀಪದವರೆಗೆ ದೌಡುಮಾಡಿ ಎಷ್ಟೋ ಅರಸರಿಂದ ಕಪ್ಪವನ್ನೆತ್ತಿದನು. ಕೃಷ್ಣಾನದಿಯ ದಂಡೆಯಲ್ಲಿದ್ದ ಕೊಪ್ಪದ ಯುದ್ಧದಲ್ಲಿ ಚಾಲುಕ್ಯರಿಗೆ ಸೋತು ಮರಣಹೊಂದಿದನು.

೫. **ಅಧಿರಾಜೇಂದ್ರ** — ಇವನು ರಾಮಾನುಜಾಚಾರ್ಯನ ದ್ವೇಷಿಯಾಗಿದ್ದು ಅವನನ್ನು ಚೋಳರಾಜ್ಯದಿಂದ ಓಡಿಸಿದನು. ಅಧಿರಾಜನು ೧೮೭೪ರಲ್ಲಿ ತೀರಿಕೊಂಡನು.

೬. **ಕುಲೋತ್ತುಂಗಚೋಳ** — ಇವನು ಶೂರನೂ ವಿಚಾರಿಯೂ ಇದ್ದನು. ೪೯ವರ್ಷ ರಾಜ್ಯವಾಳಿ ಅನೇಕ ರಾಜ್ಯಗಳನ್ನು ಗೆದ್ದುಕೊಂಡನು. ೬ನೇ ವಿಕ್ರಮಾದಿತ್ಯನಿಗೆ ತನ್ನ ಮಗಳನ್ನು ಕೊಟ್ಟು ಚಾಲುಕ್ಯರ ಸ್ನೇಹವನ್ನು ಬೆಳಿಸಿದನು. ಭೂಮಿಯನ್ನು ಅಳೆದು ಕಂದಾಯದ ಪದ್ಧತಿಯನ್ನು ಗೊತ್ತುಪಡಿಸಿದನು.

೭. **ಚೋಳರ ರಾಜ್ಯವ್ಯವಸ್ಥೆ**:–ಚೋಳ ರಾಜ್ಯದಲ್ಲಿ ಕೆಲವು ಹಳ್ಳಿಗಳನ್ನುಕೂಡಿಸಿ ಮಾಡಿದ ಭಾಗಕ್ಕೆ ಕೂರಂ ಎನ್ನುತ್ತಿದ್ದರು. ಇಂಥ ಕೆಲವು ಕೂರಮ್‌ಗಳ ಸಮೂಹಕ್ಕೆ ನಾಡು (ಜಿಲ್ಲೆ) ಎಂಬ ಹೆಸರು. ಕೆಲವು ನಾಡುಗಳು ಕೂಡಿ ಒಂದು ಕೊಟ್ಟಮ್ ಆಗುತ್ತಿತ್ತು. ಇಂಥ ಕೆಲವು ಕೊಟ್ಟಮ್‌ಗಳು ಕೂಡಿದ್ದಕ್ಕೆ ಮಂಡಲವೆನ್ನುತ್ತಿದ್ದರು. ಇಡೀ ರಾಜ್ಯದಲ್ಲಿ ಇಂಥ ಆರು ಮಂಡಲಗಳಿದ್ದವು. ಕೂರಮ್ಮದ ಕಾರಭಾರವು ಒಂದುಮಹಾಸಭೆಯ ಮುಖಾಂತರವಾಗಿ ನಡೆಯುತ್ತಿತ್ತು. ಇದರ ಸಭಾಸದರನ್ನು ವರ್ಷಕ್ಕೊಮ್ಮೆ ಆರಿಸುತ್ತಿದ್ದರು. ಮಹಾಸಭೆಯವರು ನ್ಯಾಯ,ಕಂದಾಯ ಮುಂತಾದ ಎಲ್ಲ ಕೆಲಸಗಳನ್ನು ಸ್ವತಂತ್ರವಾಗಿಯೇ ಮಾಡುತ್ತಿದ್ದರು. ಆದರೆ ಇವರ ಮೇಲ್ವಿಚಾರಣೆಯನ್ನು ಸರಕಾರದ ಅಧಿಕಾರಸ್ಥರು ಮಾಡುತ್ತಿದ್ದರು. ಭೂಮಿಯನ್ನು ಅಳೆದು ಕಂದಾಯವನ್ನು ಗೊತ್ತುಪಡಿಸುತ್ತಿದ್ದರು. ಪ್ರಜೆಗಳು ಉತ್ಪನ್ನದ ೧/೩ ಭಾಗವನ್ನು ಸರಕಾರಕ್ಕೆ ಕೊಡಬೇಕಾಗುತ್ತಿತ್ತು. ಇದಲ್ಲದೆ ಕೆಲವು ಚಿಕ್ಕಪುಟ್ಟ ಕರಗಳಿದ್ದವು. ಎಲ್ಲಕೂಡಿ ಒಟ್ಟು ಉತ್ಪನ್ನದ ೧೫ ಭಾಗವು ಸರಕಾರಕ್ಕೆ ಸಲ್ಲುತ್ತಿತ್ತು. ಈ ತೆರಿಗೆಯನ್ನು ಧಾನ್ಯಗಳ ರೂಪದಿಂದಾಗಲಿ, ಹಣದ ರೂಪದಿಂದಾಗಲಿ ಕೊಡಬೇಕಾಗುತ್ತಿತ್ತು. ಆ ಕಾಲಕ್ಕೆ ಬಂಗಾರದ ನಾಣ್ಯಗಳ ಹೊರತು ಬೇರೆ ನಾಣ್ಯಗಳಿದ್ದಿಲ್ಲ. ಈ ನಾಣ್ಯಗಳ ತೂಕವು ೨೮ ಗುಂಜಿ ಇರುತ್ತಿತ್ತು. ಪ್ರಜೆಗಳಲ್ಲಿ ಜಗಳಗಳೂ ಬಡದಾಟವೂ ಕಡಿಮೆ. ಚಿಲ್ಲರ ಸ್ವಲ್ಪ ನ್ಯಾಯಗಳಿದ್ದರೂ ತಮ್ಮಲ್ಲಿಯೇ ತೀರಿಸಿಕೊಳ್ಳುತ್ತಿದ್ದರು. ಚೋಳ ಅರಸರ ಕಾಲಕ್ಕೆ ದೇಶದಲ್ಲಿ ಶಾಂತತೆಯೂ ವ್ಯವಸ್ಥೆಯೂ ಚೆನ್ನಾಗಿದ್ದು ಪ್ರಜೆಗಳು ಸುಖದಿಂದಿದ್ದರು.

೮. **ಶಿಲ್ಪಕಲೆ**:— ಚೋಳರ ಹಾಗು ಪಲ್ಲವರ ಶಿಲ್ಪಕಲೆಗಳು ಒಂದೇ ಮಾದರಿಯವು. ಚೋಳ ಅರಸರು ದಕ್ಷಿಣ ಅರ್ಕಾಟ ಜಿಲ್ಲೆಯೊಳಗಿನ ದಾದಾಪುರದಲ್ಲಿ ಸುಂದರವಾದ ಅನೇಕ ದೇವಾಲಯಗಳನ್ನು ಕಟ್ಟಿಸಿರುವರು. ತಂಜಾವರ ಮತ್ತು ಗಂಗೈಕೊಂಡ ಚೋಳ ಪುರಮ್ ಎಂಬಲ್ಲಿ ಕೆಲವು ಗುಡಿಗಳನ್ನೂ ಭವ್ಯವಾದ ಹಲವು ಗೋಪುರಗಳನ್ನೂ ಕಟ್ಟಿಸಿದರು. ತಂಜಾವರದಲ್ಲಿ ಅನೇಕ ಸುಂದರವಾದ ಮೂರ್ತಿಗಳನ್ನು ಕೊರೆಯಿಸಿರುವರು. ತಂಜಾವರದಲ್ಲಿಯ ಗೋಪುರವು ಒಂದೇ ಕಲ್ಲಿನಲ್ಲಿ ಕೊರೆಯಲ್ಪ

ಟ್ಟದ್ದು ೬೦ ಟನ್ ಭಾರವುಳ್ಳದ್ದಿದ್ದಿರಬಹುದು. ಮತ್ತು ಇವರ ವಿಸ್ತಾರವು ತಿಳಿಯಲಾಗದಷ್ಟು ಪೂರ್ಣ ಅದೆ. ಇದನ್ನು ಒಯ್ಯಲಿಕ್ಕೆ ೪ ಮೈಲು ಉದ್ದವಾದ ಇಳಿಜಾರಾದ ದಾರಿಯನ್ನು ಮಾಡಿಸಿದ್ದರಂತೆ. ಕಾವೇರಿ ಮುಂತಾದ ನದಿಗಳಿಗೆ ಒಡ್ಡು ಹಾಕಿ ಕಾಲುವೆಗಳನ್ನು ಮಾಡಿದ್ದರು. ಗಂಗೈಕೊಂಡ ಚೋಳಪುರದಲ್ಲಿದ್ದ ಸರೋವರದ ಕಾಲುವೆಯು ೧೬ ಮೈಲು ಉದ್ದವಾಗಿತ್ತು. ಚೋಳರಾಜ್ಯದಲ್ಲಿ ಉತ್ತಮವಾದ ರಾಜಮಾರ್ಗಗಳಿದ್ದವು.

೯. **ಧರ್ಮ**:— ಚೋಳವಂಶದ ಅರಸರು ಶೈವರಾಗಿದ್ದರೂ ಉಳಿದ ಧರ್ಮಗಳಬಗ್ಗೆ ಸಹಾನುಭೂತಿಯುಳ್ಳವರಾಗಿದ್ದರು. ಆದರೆ ಹೊಯ್ಸಳ ರಾಜ್ಯದೊಳಗಿನ ಜೈನ ಗುಡಿಗಳನ್ನು ಹಾಳುಮಾಡಿದರು. ಕರಿಕಾಲ ಚೋಳನೆಂಬ ಅರಸನು ರಾಮಾನುಜಾಚಾರ್ಯನನ್ನು ಓಡಿಸಿದ ಸಂಗತಿಯು ಹಿಂದೆಯೇ ಉಲ್ಲೇಖಿಸಲ್ಪಟ್ಟಿದೆ. ಚೋಳ ಅರಸನು ತಮಿಳವಾಙ್ಮಯಕ್ಕೆ ವಿಶೇಷವಾಗಿ ಉತ್ತೇಜನಕೊಟ್ಟರು.

ಪಾಂಡ್ಯರು.

೧. **ಪಾಂಡ್ಯರು**:— ಕ್ರಿ. ಪೂ. ೨೦ ರಲ್ಲಿ ಅಗಸ್ತ್ಯನ ಸೀಸ್ಸುರನು ಪಾಂಡ್ಯ ಅರಸನ ಕಡೆಗೆ ಒಬ್ಬ ವಕೀಲನನ್ನು ಕಳುಹಿದ್ದನೆಂದೂ ಕ್ರಿ. ಶ. ದ ೧೪೦ ರಲ್ಲಿ ಟಾಲೇಮಿ ಎಂಬವನು ಪಾಂಡ್ಯರ ವ್ಯಾಪಾರಸ್ಥಳ, ಬಂದರ ಮೊದಲಾದವುಗಳನ್ನು ವರ್ಣಿಸಿರುವನೆಂದೂ ಉಲ್ಲೇಖವದೆ. ಮತ್ತು ಕಾತ್ಯಾಯನನು ಕ್ರಿ. ಶ. ದ ಪೂರ್ವದಲ್ಲಿ ಬರೆದ ತನ್ನ ಗ್ರಂಥದಲ್ಲಿ ಪಾಂಡ್ಯ ಅರಸರ ಉಲ್ಲೇಖಮಾಡಿರುವನು. ಇವೆಲ್ಲ ಆಧಾರಗಳಿಂದ ಪಾಂಡ್ಯರು ಬಹು ಪುರಾತನಕಾಲದಿಂದಲೇ ಆಳುತ್ತಿದ್ದರೆಂದು ಗೊತ್ತಾಗುವದು. ಆದರೆ ಪೂರ್ವದಲ್ಲಿ ಆಳಿದ ಅರಸರ ಬಗ್ಗೆ ಯಾವ ಸಂಗತಿಗಳೂ ಉಪಲಬ್ಧವಿಲ್ಲ. ೩ನೇ ಶತಮಾನದಲ್ಲಿ ನೇದುಮಚೇಲಿ ಎಂಬ ಅರಸನು ಆಳುತ್ತಿದ್ದನು. ೪ನೇ ಶತಕದಲ್ಲಿ ಆಳಿದ ಅರಿಕೇಸರಿ ಎಂಬ ಪಾಂಡ್ಯ ಅರಸನು ಪಲ್ಲವರನ್ನು ಸೋಲಿಸಿದನು. ಆದರೆ ಮುಂದೆ ಅಪರಾಜಿತನೆಂಬ ಪಲ್ಲವ ಅರಸನು ವರಗುಣವರ್ಮನ್ ಎಂಬ ಪಾಂಡ್ಯರಾಜನನ್ನು ಗೆದ್ದನು. ೧೧ನೇ ೧೩ನೇ ಶತಮಾನಗಳಲ್ಲಿ ಪಾಂಡ್ಯರು ಚೋಳರಿಗೆ ಅಂಕಿತರಾಗಿ ಇರಬೇಕಾಯಿತು. ೧೧೭೬ರಲ್ಲಿ ಸಿಂಹಳ ದ್ವೀಪದ ಅರಸನು ಪಾಂಡ್ಯರಾಜ್ಯದ ಮೇಲೆ ದಾಳಿ ಮಾಡಿದನು. ಆದರೆ ದಕ್ಷಿಣದ ಎಲ್ಲ ಅರಸನು ಒಟ್ಟುಗೂಡಿ ಅವನನ್ನು ಓಡಿಸಿದರು. ೧೩ನೇ ಶತಮಾನದಲ್ಲಿ ಪಾಂಡ್ಯರು ಪುನಃ ತಮ್ಮ ಸ್ವಾತಂತ್ರ್ಯವನ್ನು ಸಂಪಾದಿಸಿದರು. ಜಟಾವರ್ಮ ಸುಂದರನ ಕಾಲದಲ್ಲಿ (೧೨೭೧–೧೩೧೮) ಪಾಂಡ್ಯರಾಜ್ಯವು ನೆಲ್ಲೂರಿಂದ ಕನ್ಯಾಕುಮಾರಿಯವರೆಗೆ ಹಬ್ಬಿತ್ತು. ೧೩೧೦ ರಲ್ಲಿ ಮುಸಲ್ಮಾನರ ದಾಳಿಗಳು ಪ್ರಾರಂಭವಾದಾಗ ದಕ್ಷಿಣದ ತಮಿಳ ರಾಜ್ಯಗಳಲ್ಲಿ ಪಾಂಡ್ಯರಾಜ್ಯವು ಒಳ್ಳೇ ಘನತೆಯಲ್ಲಿತ್ತು.

೨. **ಹುವೆನತ್ಸಾಂಗ**:—ಇವನು ಪಾಂಡ್ಯರಾಜ್ಯದ ವಿಷಯವಾಗಿ ಕೆಲವು ಸಂಗತಿಗಳನ್ನು ಸಂಗ್ರಹಿಸಿರುವನು. ಅವು ಯಾವವೆಂದರೆ– ಈ ಕಾಲಕ್ಕೆ ಪಾಂಡ್ಯರು ಪಲ್ಲವರ ಮಾಂಡಲಿಕರಾಗಿದ್ದರು. ಬೌದ್ಧಧರ್ಮವು ಲಯಹೊಂದಿತ್ತು; ಮತ್ತು ಬೌದ್ಧ ಮತ

ಗಳು ಹಾಳಾಗಿದ್ದವು. ಆದರೆ ಮದುರೆಯ ಪೂರ್ವಕ್ಕೆ ಅಶೋಕನ ತಮ್ಮನಾದ ಮಹೇಂದ್ರನು ಕಟ್ಟಿಸಿದ ಸ್ತೂಪವು ಮಾತ್ರ ಇತ್ತು. ದಿಗಂಬರ ಜೈನ ಪಂಥದ ಅನುಯಾಯಿಗಳು ವಿಶೇಷವಾಗಿದ್ದರು. ಸ್ವಲ್ಪ ಕಾಲದನಂತರ ಕೂನ (ಸುಂದರ)ನೆಂಬ ಅರಸನು ಅನೇಕ ಜೈನರನ್ನು ಬಹು ಕ್ರೂರತನದಿಂದ ಕೊಲ್ಲಿಸಿದನು ಪಲ್ಲವರಿಗೂ ಪಾಂಡ್ಯರಿಗೂ ಬಹುದಿವಸಗಳಿಂದ ಹಗೆತನವಿತ್ತು. ಪಾಂಡ್ಯರಾಜ್ಯದಲ್ಲಿ ಆಸಂಖ್ಯ ಹಿಂದೂ ದೇವಾಲಯಗಳಿದ್ದವು.

೩. **ಮಾರ್ಕೊಪೋಲೊ**:— ವೆನಿಸಿನ ಪ್ರವಾಸಿಯಾದ ಮಾರ್ಕೊಪೋಲೋ ಎಂಬವನು ೧೨೪೪ ಹಾಗು ೧೨೯೩ರಲ್ಲಿ ಪಾಂಡ್ಯರ ರಾಜಧಾನಿಯಾದ ಕೋರಕಾಯಿಗೆ ಬಂದಿದ್ದನು. ಇವನು ಪಾಂಡ್ಯರಾಜ್ಯದ ವಿಷಯವಾಗಿ ಬರೆದಿಟ್ಟ ಅಭಿಪ್ರಾಯವೇನೆಂದರೆ- ಕೋರಕಾಯಿಯು ತಾಮ್ರಪರ್ಣೀತೀರದಲ್ಲಿ ಪ್ರಸಿದ್ಧವಾದ ಬಂದರವಾಗಿರುವದು. ಇಲ್ಲಿ ಮುತ್ತಿನ ವ್ಯಾಪಾರವು ವಿಶೇಷವಾಗಿ ನಡೆಯುವದು. ಇಲ್ಲಿಂದ ವ್ಯಾಪಾರದ ಹಡಗಗಳು ಬಹುದೂರ ಹೋಗುವವು- ಮದುರೆಯು ರಾಜಧಾನಿಯಾಗಿದ್ದರೂ ಪಾಂಡ್ಯ ಅರಸನು ಕೋರಕಾಯಿಯಲ್ಲಿಯೇ ಇದ್ದು ಮುತ್ತಿನ ವ್ಯಾಪಾರಮಾಡುತ್ತಿದ್ದನು. ಇವನ ಹತ್ತರ ಸಂಪತ್ತು ಬಹಳ ಇತ್ತು. ಮತ್ತು ಅವನು ಬಿಲೆಯುಳ್ಳ ಆಭರಣಗಳನ್ನು ಧರಿಸುವನು ಪರದೇಶದ ಪ್ರವಾಸಿಕರಿಗೂ ವ್ಯಾಪಾರಸ್ಥರಿಗೂ ಚೆನ್ನಾಗಿ ಆಶ್ರಯಕೊಡುವನು. ನ್ಯಾಯದಿಂದಲೂ ಧರ್ಮದಿಂದಲೂ ರಾಜ್ಯವಾಳುವನು. ರೇವೆಕೂತು ಕೋರಕಾಯಿ ಬಂದರವು ಬಂದಾದ ಮೇಲೆ ಕಾಯಲ್ ಬಂದರದಲ್ಲಿ ವ್ಯಾಪಾರವು ಭರದಿಂದ ಸಾಗ ಹತ್ತಿತು. ಪಾಂಡ್ಯರು ಗ್ರೀಸ, ರೋಮ, ಅರಬಸ್ತಾನ ಮತ್ತು ಚೀನ ದೇಶಗಳ ಸಂಗಡ ವ್ಯಾಪಾರಮಾಡುತ್ತಿದ್ದರು.

ಚೇರರು ಅಥವಾ ಕೇರಳರು.

೧. ಕ್ರಿ. ಶ. ದ ಮೊದಲನೇ ಶತಮಾನದಿಂದಲೇ ಇವರ ರಾಜ್ಯವಿತ್ತು. ಇವರು ಚೋಳ ಮತ್ತು ಪಾಂಡ್ಯ ಅರಸರ ಅಣ್ಣತಮ್ಮಂದಿರು. ಕೇರಳ ರಾಜ್ಯದಲ್ಲಿ ೫ ನಾಡುಗಳೂ ಅನೇಕ ಬಂದರಗಳೂ ಇದ್ದವು. ಇವರು ಅರಬಸ್ತಾನ ಮತ್ತು ಯುರೋಪದ ರಾಷ್ಟ್ರಗಳ ಸಂಗಡ ಯಾಲಕ್ಕಿ ಮೆಣಸುಗಳ ವ್ಯಾಪಾರಮಾಡುತ್ತಿದ್ದರು. ಚೇರರು ಬಹುದಿವಸ ಚೋಳರ ಮಾಂಡಲಿಕರಾಗಿಯೇ ಇದ್ದದರಿಂದ ಅವರ ಕೆಲವು ಪದ್ಧತಿಗಳು ಇವರಲ್ಲಿ ಸೇರಿಕೊಂಡಿದ್ದವು. ಜಂಕುಟ್ಟುವನ್ ಎಂಬ ಈ ವಂಶದ ಅರಸನು ನೇದುಮಚೇಲಿ ಎಂಬ ಪಾಂಡ್ಯರಾಜನ ಸಮಕಾಲೀನನು.

ಈ ಕಾಲದ ಮುಖ್ಯ ಸಂಗತಿಗಳು

೬೧೦–೬೩೫	ಮಹೇಂದ್ರವರ್ಮ ಪಲ್ಲವನ ಆಳಿಕೆ
೬೦೮–೬೪೨	ಚಾಲುಕ್ಯರ ೨ನೇ ಪುಲಕೇಶಿಯ ಆಳಿಕೆ
೬೫೦	ಪೂರ್ವಚಾಲುಕ್ಯರ ವೆಂಗಿವಂಶಸ್ಥಾಪನೆ

೬೨೦ ಪುಲಕೇಶಿಯು ಹರ್ಷವರ್ಧನನನ್ನು ಸೋಲಿಸಿದ್ದು

೬೨೫–೬೪೫ ನರಸಿಂಹ ಪಲ್ಲವನ ಆಳಿಕೆ ಮತ್ತು ಕೂನ (ಸುಂದರ)ನು ಜೈನರನ್ನು ಕೊಲ್ಲಿಸಿದ್ದು

೬೪೦ ಹುವೆನತ್ಸಾಂಗನು ಕಾಂಚಿಯಲ್ಲಿ ಇದ್ದದ್ದು.

೬೪೧ ಪುಲಕೇಶಿಯ ರಾಜ್ಯದಲ್ಲಿ ಹುವೆನತ್ಸಾಂಗನ ಆಗಮನ

೬೪೨ ನರಸಿಂಹವರ್ಮನಿಂದ ಪುಲಕೇಶಿಯು ಸೋತದ್ದು.

೬೪೦ ಚಾಲುಕ್ಯರು ಪಲ್ಲವರನ್ನು ಸೋಲಿಸಿದ್ದು.

೭೫೨ ರಾಷ್ಟ್ರಕೂಟರು ಪೂರ್ವದ ಚಾಲುಕ್ಯರನ್ನು ಸೋಲಿಸಿ ಪಟ್ಟದಿಂದ ತಳ್ಳಿದ್ದು.

೭೬೦ ರಾಷ್ಟ್ರಕೂಟವಂಶವ ೧ನೇ ಕೃಷ್ಣನು ಪಟ್ಟವೇರಿದ್ದು.

೮೧೫–೮೭೭ ರಾಷ್ಟ್ರಕೂಟರ ಅಮೋಘವರ್ಷನ ಆಳಿಕೆ

೯೦೭ ಚೋಳವಂಶದ ಪರಾಂತಕನು ಪಟ್ಟವೇರಿದ್ದು.

೯೭೩ ತೈಲನು ಕಲ್ಯಾಣದಲ್ಲಿ ೩ನೇ ಚಾಲುಕ್ಯವಂಶವನ್ನು ಸ್ಥಾಪಿಸಿದ್ದು

೯೮೩ ಶ್ರವಣ ಬೆಳಗುಳದ ಗುಮಟೇಶ್ವರ ಮೂರ್ತಿಯ ಸ್ಥಾಪನೆ.

೯೮೫ ರಾಜರಾಜ ಚೋಳನು ಪಟ್ಟವೇರಿದ್ದು.

೧೦೭೩ ರಾಜೇಂದ್ರ ಚೋಳದೇವನು ಬಂಗಾಲದ ಮೇಲೆ ದಾಳಿ ಮಾಡಿದ್ದು.

೧೦೫೭–೭೩ ಕೊಪ್ಪದ ಕಾಳಗ (ಚಾಲುಕ್ಯರು ಚೋಳರನ್ನು ಸೋಲಿಸಿದ್ದು)

೧೦೭೬–೧೧೨೬ ಚಾಲುಕ್ಯವಂಶದ ವಿಕ್ರಮಾದಿತ್ಯನ ಆಳಿಕೆ

೧೧೧೦–೪೧ ಹೊಯ್ಸಳರ ಬಿಟ್ಟಿಗ (ವಿಷ್ಣುವರ್ಧನ)ನ ಆಳಿಕೆ

೧೧೬೦–೬೨ ಬಿಜ್ಜಳನ ಆಳಿಕೆ ಮತ್ತು ಲಿಂಗವಂತ ಮತಸ್ಥಾಪನೆ

೧೩೮೪–೯೩ ಮಾರ್ಕೋಪೋಲೋನು ಪಾಂಡ್ಯರ ರಾಜಧಾನಿಯಾದ ಕಾಯಲ್ ಪಟ್ಟಣಕ್ಕೆ ಹೋದದ್ದು.

೧೩೧೦ ಮಲಿಕಕಾಫರನು ದಕ್ಷಿಣ ಹಿಂದುಸ್ತಾನದಲ್ಲಿ ದಾಳಿ ಮಾಡಿದ್ದು.

೧೩೧೪ ಯಾದವ ವಂಶದ ಹರಿಪಾಲನ ಮರಣ ಮತ್ತು ದ್ವಾರ ಸಮುದ್ರದ ಹೊಯ್ಸಳ ರಾಜ್ಯದ ಸಮಾಪ್ತಿ

೧೩೩೬ ವಿಜಯನಗರದ ರಾಜ್ಯಸ್ಥಾಪನೆ.



ಸಿದ್ಧನಾಥ ವಾಚನ ಮಂದಿರ.
ಧಾರವಾಡ.

ಕನ್ನಡ

ಶಾಲಾ ಪತ್ರಕ

ಸಂಪಾದಕ:—ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬೪	ನವಂಬರ, ದಿಶಂಬರ ೧೯೨೭	ಸಂ. ೮, ೯

ಸ್ಫುಟವಿಚಾರಗಳು

೧. ಸಿವ್ಹಾದ ಪ್ರಾಥಮಿಕ ಶಾಲೆಗಳ ಮೆಡಿಕಲ ಇನಸ್ಪೆಕ್ಶನ್ನ

ಸಿವ್ಹಾದ ಪ್ರಾ. ಶಾ. ಗಳಲ್ಲಿ ಕಲಿಯುತ್ತಿರುವ ಬಾಲಕರ ಮೆಡಿಕಲ ಇನಸ್ಪೆಕ್ಶನ್ನಿನ ಪ್ರಯೋಗವನ್ನು ಮೇಜರ ವೆಬ್ಬ ಎಂಬ ಹೆಲ್ತ ಆಫೀಸರರು ೧೯೨೩ನೇ ಇಸವಿಯ ಸಪ್ಟಂಬರ ತಿಂಗಳಲ್ಲಿ ಪ್ರಾರಂಭಿಸಿದರು. ಈ ಪದ್ಧತಿಯು ಹಿಂದುಸ್ಥಾನದಲ್ಲಿ ಬೇರೆ ಕಡೆಗೆ ಅಮಲಿನಲ್ಲಿ ಇಲ್ಲದ್ದರಿಂದ ಮಹತ್ವದ್ದಾಗಿದೆ. ಜಗತ್ತಿನ ಬೇರೆ ರಾಷ್ಟ್ರಗಳಲ್ಲಿ ಪ್ರಚಲಿತವಾದ ಪದ್ಧತಿಯ ಮೇರೆಗೆ ಸಿವ್ಹಾದಲ್ಲಿಯಾದರೂ ಈ ಪದ್ಧತಿಯಲ್ಲಿ ಸರ್ವಾನೇಶವಾದ ಸಂಗತಿಗಳು ಯಾವವೆಂದರೆ:— (೧) ಪ್ರತಿಯೊಬ್ಬ ಬಾಲಕನ ಆರೋಗ್ಯ ಪರೀಕ್ಷೆಯನ್ನು ೨ ತಿಂಗಳಿಗೊಮ್ಮೆ ಮಾಡಿ ಏನಾದರೂ ರೋಗವು ಆಗುವಂತಿದ್ದರೆ ಅದನ್ನು ಪ್ರತಿಬಂಧಿಸುವದು ಮತ್ತು ರೋಗವು ಆಗಿದ್ದರೆ ತಕ್ಕ ಉಪಚಾರ ಮಾಡಿ ಪ್ರತಿಹಾರಮಾಡುವದು. (೨) ರೋಗದಿಂದ ಬಳಲುತ್ತಿರುವ ಬಾಲಕರಿಗೆ ನಿಶ್ಚಿತವಾದ ಉಪಚಾರ ಮಾಡುವದು. (೩) ಮೇಲಿನ ಅನುಭವದಿಂದ ರಿಪೋರ್ಟನ್ನು ಕಾಲ ಕಾಲಕ್ಕೆ ಬರೆಯುವದು. ಮತ್ತು ಅವುಗಳನ್ನು ಒಟ್ಟುಗೂಡಿಸಿ ವಾರ್ಷಿಕ ರಿಪೋರ್ಟನ್ನು ಸಿದ್ಧಪಡಿಸುವದು. (೪) ಶಾಲೆಯ ಮನೆಯನ್ನೂ ಸುತ್ತಲಿನ ಸ್ಥಳವನ್ನೂ ಪ್ರತಿ ತಿಂಗಳು ತಪಾಸುಮಾಡಿ ರಿಪೋರ್ಟು ಬರೆಯುವದು ಮತ್ತು ಅವುಗಳನ್ನು ಒಟ್ಟುಗೂಡಿಸಿ ವಾರ್ಷಿಕ ರಿಪೋರ್ಟ ಸಿದ್ಧಪಡಿಸುವದು.

೧೯೨೩–೨೪ರಲ್ಲಿ ೭೫೧೧ ಮಂದಿ ಪ್ರಾ. ಶಾ. ಗಳ ಬಾಲಕರನ್ನು ತಪಾಸು ಮಾಡಲು ಅವರಲ್ಲಿ ನೂರಕ್ಕೆ ೬೭ ಮಂದಿಗೆ ಉಪಚಾರವು ಅವಶ್ಯವೆಂದು ಕಂಡು ಬಂದಿತು. ಆದರೆ ೧೯೨೪ನೇ ಇಸವಿಯ ಕೊನೆಗೆ ಉಪಚಾರ ಹೊಂದತಕ್ಕವರ ಸಂಖ್ಯೆಯು ಕಡಿಮೆಯಾಗಿ ನೂರಕ್ಕೆ ೫೫.೦೫ ಆಯಿತು. ಮುಂದೆ ಇಂಗ್ಲಿಷ ಶಾಲೆಗಳಲ್ಲಿ ಕಲಿಯತಕ್ಕ ವಿದ್ಯಾರ್ಥಿಗಳನ್ನೂ ಪರೀಕ್ಷಿಸಬೇಕೆಂದು ಗೊತ್ತುಮಾಡಿದ್ದರಿಂದ ೧೯೨೫ನೇ ಇಸವಿಯ ಪ್ರಾರಂಭದಲ್ಲಿ ಎಲ್ಲ ವಿದ್ಯಾರ್ಥಿಗಳನ್ನು ಪರೀಕ್ಷಿಸಲು ನೂರಕ್ಕೆ ೮೧ ಜನರಿಗೆ ಉಪಚಾರವು ಅವಶ್ಯವೆಂದು ಗೊತ್ತಾಯಿತು. ಆದರೆ ಅದೇ ವರ್ಷದ ಕೊನೆಗೆ ಈ ಸಂಖ್ಯೆಯು ಕಡಿಮೆಯಾಗಿ ನೂರಕ್ಕೆ ೩೦ ಆಯಿತು. ೧೯೨೬ನೇ ಇಸವಿಯ ಪ್ರಾರಂಭದಲ್ಲಿ ನೋಡಲು ಬಾಲಕರಲ್ಲಿ ನೂರಕ್ಕೆ ೪೩ ಮಂದಿಗೆ ಮತ್ತು ಬಾಲಿಕೆಯರಲ್ಲಿ ೭೫ ಜನರಿಗೆ ಉಪಚಾರವು ಅವಶ್ಯವೆಂದು ಕಂಡು ಬಂತು. ಮತ್ತು ಒಟ್ಟು ವಿದ್ಯಾರ್ಥಿಗಳಲ್ಲಿ ನೂರಕ್ಕೆ ೪೫ ಜನರ ಸ್ವಚ್ಛತೆ ಮತ್ತು ಆರೋಗ್ಯದ ವಿಷಯಕ್ಕೆ ಹೆಚ್ಚು ಲಕ್ಷ ಕೊಡಬೇಕೆಂದು ಶಿಕ್ಷಕ ಶಿಕ್ಷಕಿಯರಿಗೆ ಹೇಳಬೇಕಾಯಿತು. ಆದರೆ ಅದೇ ವರ್ಷದ ಕೊನೆಗೆ ಈ ಸಂಖ್ಯೆಯು ಕಡಿಮೆಯಾಗಿ ಬಾಲಕರಲ್ಲಿ ನೂರಕ್ಕೆ ೧೫ ಜನರಿಗೆ, ಬಾಲಿಕೆಯರಲ್ಲಿ ನೂರಕ್ಕೆ ೪೩.೨ ಜನರಿಗೆ ಉಪಚಾರವು ಅವಶ್ಯವೆಂದು ತಿಳಿಯಿತು. ಸ್ವಚ್ಛತೆಯ ವಿಷಯಕ್ಕೆ ಬಾಲಕರಲ್ಲಿ ನೂರಕ್ಕೆ ೨೧ ಮಂದಿಗೆ ಬಾಲಿಕೆಯರಲ್ಲಿ ೨೦ ಜನರಿಗೆ ಹೆಚ್ಚು ಲಕ್ಷ ಪೂರೈಸಬೇಕೆಂದು ಶಿಕ್ಷಕರಿಗೆ ಹೇಳಬೇಕಾಯಿತು. ೧೯೨೭ನೇ ಇಸವಿಯ ಪ್ರಾರಂಭಕ್ಕೆ ಬಾಲಕರಲ್ಲಿ ೩೯-೬ ಜನರಿಗೆ, ಬಾಲಿಕೆಯರಲ್ಲಿ ೬೩ ಜನರಿಗೆ ಉಪಚಾರವು ಅವಶ್ಯವೆಂದು ಕಂಡುಬಂತು. ಮತ್ತು ಸ್ವಚ್ಛತೆಯ ವಿಷಯದಲ್ಲಿ ನೂರಕ್ಕೆ ೪೪.೭ ಹುಡುಗರ ಕಡೆಗೆ ಮತ್ತು ೩೭-೩ ಹುಡಿಗೆಯರಿಗೆ ಶಿಕ್ಷಕರು ಲಕ್ಷಕೊಡಬೇಕೆಂದು ಹೇಳಲಾಯಿತು. ೧೯೨೫–೨೬ನೇ ಸಾಲಿನಲ್ಲಿ ಸಿವ್ಹಾ ದೊಳಗಿನ ಸಾಲೆಗಳೊಳಗಿನ ಹೆಣ್ಣು ಮತ್ತು ಗಂಡುಮಕ್ಕಳ ಸರಾಸರಿ ಎತ್ತರ, ತೂಕ ಮತ್ತು ಎದೆಯ ಅಳತೆಗಳನ್ನು ಗೊತ್ತುಮಾಡಿತು. ಸದ್ಯಕ್ಕೆ ಸಿವ್ಹಾ ದೊಳಗಿನ ೨೭ ಸಾಲೆಗಳೊಳಗಿನ ವಿದ್ಯಾರ್ಥಿಗಳ ಶಾರೀರಕ ಸ್ಥಿತಿಯು ಚೆನ್ನಾಗಿರುವದಾಗಿಯೂ ಅವರ ಮೇಲೆ ಹೇಳಿದ ಅಳತೆಗಳೂ ತೂಕವೂ ಸಮಾಧಾನಕರವಾಗಿ ಇರುವವೆಂದು ಗೊತ್ತಾಗಿದೆ.

ಮಧ್ಯಾಹ್ನದಲ್ಲಿ ಹುಡುಗರಿಗೆ ಊಟದ ವ್ಯವಸ್ಥೆ ಮಾಡುವದು, ಎಲ್ಲ ಹುಡುಗರಿಗೆ ತಕ್ಕುಂಥ ಆಟಗಳನ್ನು ಆಡಿಸುವದು ಮುಂತಾದ ವ್ಯಾಯಾಮದ ವ್ಯವಸ್ಥೆ ಮಾಡುವದು ಮತ್ತು ಅವರ ಆರೋಗ್ಯದ ಸಂಬಂಧದಿಂದ ಮೇಲಿಂದ ಮೇಲೆ ತಪ್ಪದೆ ತಪಾಸುಮಾಡುವದು ಮುಂತಾದವುಗಳಿಂದ ಈ ರೀತಿಯಾಗಿ ಹುಡುಗರ ಆರೋಗ್ಯವು ಸುಧಾರಿಸಲಿಕ್ಕೆ ಅನುಕೂಲವಾಗಿರುವದು.

ತೀರ ಬಡವರಾದ ಜನರು ತಮ್ಮ ಮಕ್ಕಳಿಗೆ ಚಾಳೀಸುಗಳನ್ನು ಕೊಡುವದಕ್ಕೆ ಸಾಧ್ಯವಿಲ್ಲದಿರುವದರಿಂದ ಸಿವ್ಹಾದ ಮ್ಯುನಿಸಿಪಾಲಿಟಿಯವರು ಅಂಥವರ ಮಕ್ಕಳಿಗೆ

ಪುಕ್ಕಟೆಯಾಗಿ ಚಾಳೀಸುಗಳನ್ನು ಕೊಡಿಸುವರು. ೧೯೨೩ರಲ್ಲಿ ನೂರರಲ್ಲಿ ೪. ೧ ವಿದ್ಯಾರ್ಥಿಗಳಿಗೆ ದೃಷ್ಟಿದೋಷವಿರುವದು ಕಂಡು ಬಂದಿತು. ಅಂಥವರಿಗೆಲ್ಲಾ ಚಾಳೀಸು ಗಳು ಕೊಡಲ್ಪಟ್ಟವು. ೧೯೨೬ರಲ್ಲಿ ನೂರರಲ್ಲಿ ೧೦.೫ ರಂತೆ ವಿದ್ಯಾರ್ಥಿಗಳಿಗೆ ದೃಷ್ಟಿ ದೋಷವಿರುವದೆಂದು ತಿಳಿದು ಬರಲು ಅವರಿಗೆ ತಕ್ಕ ಉಪಚಾರಗಳು ಮಾಡಲ್ಪಟ್ಟವು. ೧೯೨೭ ರಲ್ಲಿ ನೂರರಲ್ಲಿ ಒಬ್ಬನಿಗೆ ಮಾತ್ರ ಕಣ್ಣಿನಲ್ಲಿ ದೋಷವಿರುವದೆಂದು ಗೊತ್ತಾ ಯಿತು. ಮತ್ತು ಅಂಥವರಿಗೆ ಚಾಳೀಸುಗಳು ಕೊಡಲ್ಪಟ್ಟವು. ವ್ಯವಸ್ಥಿತವಾದ ಡಾಕ್ಟರ ತಪಾಸಣೆಯು ಅಮಲಿನಲ್ಲಿ ಬಂದಂದಿನಿಂದ ಬಾಲಕರ ಸ್ವಚ್ಛತೆಯ ವಿಷಯದಲ್ಲಿ ಒಡೆದು ಕಾಣುವಂಥ ಸುಧಾರಣೆಯಾಗಿರುವದು. ಇಲ್ಲಿ ಬಾಲಕರ ಆರೋಗ್ಯರಕ್ಷಣೆಯ ಸಂಸ್ಥೆ ಯೂ ಸಾಲೆಗಳೊಳಗಿನ ಬಾಲಕರ ಆರೋಗ್ಯ ತಪಾಸಣೆಯ ಕೆಲಸಗಾರರೂ ಪರಸ್ಪರ ಸಹಕಾರಿತೆಯಿಂದ ಕೆಲಸಮಾಡುತ್ತಿರುವರು. ಚಿಕ್ಕಮಕ್ಕಳು ಹುಟ್ಟಿದಂದಿನಿಂದ ಅವರ ಆರೋಗ್ಯ ವಿಷಯದ ಮಾಹಿತಿಯುಳ್ಳ ಕಾರ್ಡುಗಳನ್ನು ಡಾಕ್ಟರಿಣಿಯರು ತುಂಬಿ ಆ ಬಾಲಕರು ಸಾಲೆಗೆ ಹೋಗಹತ್ತಿದ ಕೂಡಲೆ ಶಾಲೆಯನ್ನು ತಪಾಸು ಮಾಡುವ ಡಾಕ್ಟ ರರ ಕಡೆಗೆ ಕಳುಹಿಸಿ ಕೊಡುವರು. ಇದರಿಂದ ಸಿಮ್ಲಾದೊಳಗಿರುವ ೨೭ ಸಾಲೆಗಳಲ್ಲಿ ಯಾವದೇ ಒಂದು ಸಾಲೆಗೆ ಹೋಗುವ ಬಾಲಕರ ಹುಟ್ಟಿದಂದಿನಿಂದ ಈ ವರೆಗಿನ ಆರೋಗ್ಯವಿಷಯಕ ಮಾಹಿತಿಯು ಆ ಡಾಕ್ಟರರಿಗೆ ದೊರೆಯುವದು. ಹೀಗೆ ವ್ಯವಸ್ಥಿತ ರೀತಿಯಿಂದ ಬಾಲಕರ ಆರೋಗ್ಯದ ತಪಾಸಣೆ ಮಾಡುವದರಿಂದ ಇಡೀ ಸಮಾಜದ ಆರೋಗ್ಯವರ್ಧನಕ್ಕೆ ಕಾರಣವಾಗಿರುವದು. ರೋಗಗಳನ್ನು ಕಂಡು ಹಿಡಿದು ಔಷ ಧೋಪಚಾರಗಳಿಂದ ಅವುಗಳ ನಿವಾರಣೆ ಮಾಡುವದಿಷ್ಟೇ ಇದರ ಉದ್ದೇಶವಲ್ಲ. ಆರೋಗ್ಯವಿಷಯದ ಮಹತ್ವದ ಜ್ಞಾನವನ್ನು ಬೆಳಿಸುವದೂ ಜನರಲ್ಲಿ ಅದನ್ನು ಹಬ್ಬಿಸು ವದೂ ಮುಖ್ಯ ಉದ್ದೇಶಗಳಾಗಿವೆ. ಸಾಲೆಗಳಲ್ಲಿ ಈ ತರದ ತಪಾಸಣೆ ಮುಂತಾ ದವುಗಳನ್ನು ಮಾಡಿ ಆರೋಗ್ಯರಕ್ಷಣೆಯ ಮಾರ್ಗವನ್ನು ಗೊತ್ತುಮಾಡಿಕೊಡುವದ ರಿಂದ ಜನರಲ್ಲಿ ಅದರ ಪ್ರಸಾರವು ಹೆಚ್ಚಾಗಲಿಕ್ಕೆ ಕಾರಣವಾಗುವದು. ಸಿಮ್ಲಾದೊಳ ಗಿನ ಸಾಲೆಗಳ ವಿದ್ಯಾರ್ಥಿಗಳ ತಪಾಸಣೆ ಮುಂತಾದವುಗಳ ಸಂಗಡಲೇ ಜನರೊಳಗೆ ಆರೋಗ್ಯರಕ್ಷಣೆಯ ಸಂಬಂಧದ ಜ್ಞಾನಪ್ರಸಾರಣೆಯ ಕಾರ್ಯವೂ ನೆರವೇರಿಸಲ್ಪ ಡುತ್ತಿರುವದು. ೧೯೨೩ನೇ ಇಸ್ವಿ ಸಪ್ಟಂಬರ ತಿಂಗಳಲ್ಲಿ ಈ ಸಂಸ್ಥೆಯು ಕೆಲಸವನ್ನು ಆರಂಭಿಸಿದಂದಿನಿಂದ ನಮ್ಮ ಕಲ್ಪನೆಗಿಂತಲೂ ಹೆಚ್ಚಾಗಿ ಅದರಿಂದ ಲಾಭವಾದದ್ದು ಕಂಡುಬಂದಿರುವದು.

೨. ವಾಚನಾಲಯಕ್ಕೆ ೧ ಲಕ್ಷ ರೂ. ಗಳ ದಾನ

ಪುಣೆಯ ಫರ್ಗ್ಯುಸನ್ ಕಾಲೇಜಕ್ಕೆ ಅದರ ಪುಸ್ತಕಾಲಯದ ಉನ್ನತಿಗಾಗಿ ಮುಂಬಯಿಯ ಮಿಃ ಸಿ. ಎನ್. ವಾಡಿಯಾ ರವರ ಔದಾರ್ಯದ ದಾನವು :—

ಮಿ. ವಾಡಿಯಾರವರು ತಮ್ಮ ಔದಾರ್ಯ ಪರೋಪಕಾರಗಳ ಬಗ್ಗೆ ಮುಂಬಯಿಯಲ್ಲಿಯೂ ಹೊರಗೂ ವಿಶ್ರುತರಿದ್ದಾರೆ. ಇವರು ಪೂನ್ನೆ ಪುಣೆಯ ಫರ್ಗ್ಯುಸನ್ ಕಾಲೇಜನಲ್ಲಿ ಒಂದು ಪುಸ್ತಕಾಲಯವನ್ನು ಏರ್ಪಡಿಸುವದಕ್ಕೋಸ್ಕರ ಒಂದು ಲಕ್ಷ ರೂಪಾಯಿಯ ರಕಮನ್ನು ಡೆಕ್ಕನ್ ಎಜುಕೇಶನ್ ಸೊಸಾಯಿಟಿಯ ವಶಕ್ಕೆ ಒಪ್ಪಿಸಿರುವರು. ಈ ದಾನವು ಕಾಲೇಜಕ್ಕೆ ದೊರೆತ ಮೇಲಾದ ಆಶ್ರಯವೆಂದು ಹೇಳಬೇಕಾಗಿದೆ. ಯಾಕಂದರೆ ಯೋಗ್ಯವಾದ ಇಮಾರತಿನಲ್ಲಿ ವ್ಯವಸ್ಥೆಗೊಳಿಸಿದ ದೊಡ್ಡ ಪುಸ್ತಕಾಲಯವಿದ್ದ ಹೊರತು ಯಾವದೊಂದು ವಿದ್ಯಾದಾನದ ಸಂಸ್ಥೆಯು ತನ್ನ ನಿಜವಾದ ಕಾರ್ಯವನ್ನು ಮಾಡಲು ಅಸಮರ್ಥವಾಗುವದು. ಪುಸ್ತಕಾಲಯವೇ ವಿದ್ಯಾಲಯದ ಜೀವನಾಧಾರವು. ಲಂಡನ್ ವಿಶ್ವವಿದ್ಯಾಲಯದ ಕಾಲೇಜಗಳು ಬ್ರಿಟಿಶ ಮ್ಯೂಝಿಯಮದ ಹತ್ತರ ಇರುವದರಿಂದ ಬಹಳ ಅನುಕೂಲವಾಗಿದೆ. ಬೊಡ್ಲಿಯನ್ ಪುಸ್ತಕಾಲಯವಿಲ್ಲದಿದ್ದರೆ ಆಕ್ಸಫೋರ್ಡಕ್ಕೂ, ಯುನಿವ್ಹರ್ಸಿಟಿಯ ಪುಸ್ತಕಾಲಯವಿಲ್ಲದಿದ್ದರೆ ಕೆಂಬ್ರಿಜಕ್ಕೂ ಈಗಿದ್ದ ಮಹತ್ವವು ಬರುವ ಸಂಭವವು ತೀರಕಡಿಮೆ ಇತ್ತು. ಮಿ॥ ವಾಡಿಯಾರವರು ಫರ್ಗ್ಯುಸನ್ ಕಾಲೇಜಕ್ಕೆ ಅದರ ಪುಸ್ತಕಾಲಯದ ಇಮಾರತಿಗಾಗಿಯೂ ಉನ್ನತಿಗಾಗಿಯೂ ಒಂದು ಲಕ್ಷ ರೂಪಾಯಿಯನ್ನು ಕೊಡುವಾಗ ಬಹಳ ದೂರದ ವರೆಗೆ ವಿಚಾರಮಾಡಿರುವರೆಂದು ಹೇಳಬಹುದು. ಇವರು ಈ ದಾನದಿಂದ, ವಿದ್ಯಾರ್ಥಿಗಳಿಗೆ ಫರ್ಗ್ಯುಸನ್ ಕಾಲೇಜಿನಲ್ಲಿ ಸುಗಮವಾದ ಉಚ್ಚ ಶಿಕ್ಷಣವು ಇನ್ನು ಮುಂದೆ ದೊರೆಯಲಿಕ್ಕೆ ಹೆಚ್ಚು ಅನುಕೂಲ ಮಾಡಿಕೊಟ್ಟಿರುವರೆಂದು ಹೇಳಬಹುದು. ಕಾಲೇಜುಗಳಲ್ಲಿ ಜಗತ್ತಿಗೆ ಹೆಸರಾದ ಪ್ರೊಫೆಸರರು ಇರಬಹುದು ; ಆದರೆ ವಿದ್ಯಾರ್ಥಿಗಳು ಸ್ವಾವಲಂಬಿಗಳಾಗುವವರೆಗೆ ಅವರ ಶ್ರಮವು ಸಫಲವಾಗದು. ವಿದ್ಯಾರ್ಥಿಗಳು ಪುಸ್ತಕಾಲಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳದಿದ್ದರೆ ಅವರೇ ದೋಷಕ್ಕೆ ಪಾತ್ರರು. ಮಿ. ವಾಡಿಯಾರವರು ಕೊಟ್ಟ ಈ ದಾನವು ಔದಾರ್ಯದ ಹಾಗು ಜಾಣತನದ ಕುರುಹು ಆಗಿರುವದು.

೩ ಶಹರಾದ ಅಮಾನುಲ್ಲಾಖಾನರು.

ಅಫಗಾಣಿಸ್ಥಾನದ ಶಹರಾದ ಅಮಾನುಲ್ಲಾಖಾನ ಸಾಹೆಬರು ಪಾಶ್ಚಾತ್ಯರಾಷ್ಟ್ರಗಳಲ್ಲಿ ಪ್ರವಾಸ ಮಾಡುವ ಉದ್ದೇಶದಿಂದ ತಮ್ಮ ದೇಶದಿಂದ ಹೊರಟು ಮುಂಬೈಗೆ ದಿಶಂಬರ ೧೫ಳಕ್ಕೆ ಬಂದು ರಜಪುತಾನಾ ಎಂಬ ಹೆಸರಿನ ಬೋಟಿನಿಂದ ಶನಿವಾರ ೧೭ನೇ ತಾ. ನ ದಿವಸ ವಿಲಾಯತಿಗೆ ಹೊರಟುಹೋದರು. ಇವರು ಪ್ರಜಾಹಿತನಿರತರೂ ಸಾರಾಸಾರ ವಿಚಾರವುಳ್ಳವರೂ ಇಸ್ಲಾಮಿಧರ್ಮದ ಅಭಿಮಾನಿಗಳೂ ಹಿಂದೂ ಮುಸಲ್ಮಾನ ಪ್ರಜೆಗಳನ್ನು ಸಮದೃಷ್ಟಿಯಿಂದ ನೋಡುವವರೂ ಬ್ರಿಟಿಶ ಸರಕಾರದ ಮಿತ್ರರಾಜರೂ ಆದದರಿಂದ ಮುಂಬೈ ನಾಗರಿಕರು ಇವರಿಗೆ ಅಪೂರ್ವವಾದ ಸ್ವಾಗತವನ್ನು

ಮಾಡಿದರು. ಮುಸಲ್ಮಾನ ಜನರ ಉತ್ಸಾಹವನ್ನು ವರ್ಣಿಸುವದು ಸಾಧ್ಯವಲ್ಲ. ಜನರು ಕೊಟ್ಟ ಮಾನಪತ್ರಗಳಿಗೆ ಉತ್ತರ ಕೊಡುವಾಗ ಅವರು ಹೇಳಿದ್ದೇನೆಂದರೆ :—

ಕಳೆದ ಶುಕ್ರವಾರ ತಾ॥ ೧೬–೧೨–೨೭ನೇ ದಿವಸ ಮುಂಬಯಿಯಲ್ಲಿ ಅಫಗಾಣಿಸ್ತಾನದ ರಾಜರಿಗೆ ಖಿಲಾಫತ ಕಮಿಟಿಯ ಪರವಾಗಿ ಮಾನಪತ್ರವು ಕೊಡಲ್ಪಟ್ಟಿತು. ಆ ದಿವಸವು ಮುಸಲ್ಮಾನರಿಗೆ ಪವಿತ್ರದಿವಸವಾಗಿದ್ದದರಿಂದ ಮಧ್ಯಾಹ್ನದ ಉಪಾಸನೆ (ನಿಮಾಜಿ) ಗೆ ರಾಜರು ಜುಮ್ಮಾಮಶೀದಿಗೆ ಬಂದಿದ್ದರು. ಸುಮಾರು ೫೦,೦೦೦ ಮಂದಿ ಮಹಮ್ಮದೀಯರು ಪ್ರಾರ್ಥನೆಗೆ ಸೇರಿದ್ದರು. ಪ್ರಾರ್ಥನೆಯು ಮುಗಿದ ಮೇಲೆ ರಾಜರು ಧರ್ಮಪರವಾಗಿ ಹೇಳಿದ ಉಪದೇಶದ ಮಾತುಗಳಲ್ಲಿ ಮೆಹತ್ವದ ಸಂಗತಿಗಳನ್ನು ಇಲ್ಲಿ ಕೊಟ್ಟಿರುತ್ತೇವೆ.

ಮಹಮ್ಮದೀಯ ಬಂಧುಗಳೇ ನೀವು ಹಿಂದುಜನರ ಧಾರ್ಮಿಕ ಆಚರಣೆಗಳಿಗೂ ನಡೆನುಡಿಗಳಿಗೂ ಮಾನಕೊಟ್ಟರೆ ಅವರು ನಿಮ್ಮ ಧರ್ಮದ ಆಚಾರ ವಿಚಾರಗಳಿಗೆ ಮಾನಕೊಡುವರು. ಇತರರ ದಾರ್ಮಿಕ ವಿಶ್ವಾಸಕ್ಕೆ ನೀವು ಮೂಗುಮುರಿದರೆ ನಿಮ್ಮ ಧರ್ಮದ ತಿರಸ್ಕಾರಕ್ಕೆ ನೀವು ಆಸ್ಪದ ಕೊಟ್ಟಂತಾಗುವದು. ಇಷ್ಟೇ ಅಲ್ಲ ನೀವು ಪರಧರ್ಮದ ಅಸಹಿಷ್ಣುತೆಯಿಂದ ನಮ್ಮ ಧರ್ಮದ ತತ್ವಗಳನ್ನು ಜಗತ್ತಿಗೆ ಸಾರಿದ ಮಹಾತ್ಮನ ಉಪದೇಶವನ್ನು ಅಪಮಾನಗೊಳಿಸಿದಂತಾಗುವದು.

ಮುಂಬಯಿ ಕಾರ್ಪೊರೇಶನ್‌ದಿಂದ ಕೊಡಲ್ಪಟ್ಟ ಮಾನಪತ್ರದ ಸಮಾರಂಭದಲ್ಲಿ ಶಹರು ಅಂದದ್ದೇನೆಂದರೆ:—ಹಿಂದು ಮುಸಲ್ಮಾನರು ಪರಸ್ಪರ ಪ್ರೇಮಭಾವದಿಂದ ವರ್ತಿಸಬೇಕೆಂತಲೂ ಎಲ್ಲರಿಗೂ ದೇವರು ಒಬ್ಬನೇ ಇರುವನೆಂತಲೂ ವಿಶ್ವಬಂಧುತ್ವದ ಕಡೆಗೆ ಲಕ್ಷ್ಯವಿಟ್ಟು ಐಕ್ಯವನ್ನು ಪ್ರಚಾರದಲ್ಲಿ ತರಬೇಕೆಂತಲೂ ಉಪದೇಶಿಸಿದರು. ಕಟ್ಟಕಡೆಗೆ ಹೇಳಿದ್ದೇನಂದರೆ—ನೀವು ಈ ದೇಶದಲ್ಲಿ ಸಿದ್ಧವಾದ ಪದಾರ್ಥಗಳನ್ನೇ (ಅವು ನೆಟ್ಟಗೆ ಇರಲಿ ಇಲ್ಲದಿರಲಿ) ಉಪಯೋಗಿಸತಕ್ಕದ್ದು. ಇದೇ ಉದ್ಯೋಗ ಕೈಗಾರಿಕೆಗಳ ಉನ್ನತಿಯ ಮಾರ್ಗವು. ರಾಜರು ಸ್ವಂತದ ಸಂಬಂಧದಿಂದ:—ನಾನು ಅಫಗಾಣಿಸ್ತಾನದ ಸೇವಕನು. ಬಡವರಿಗಿಂತ ಬಡವನು. ನನ್ನ ಪ್ರಜೆಗಳು ನನ್ನನ್ನು ಅರಸನನ್ನು ಮಾಡಿದರು. ನುತ್ತು ಅದಕ್ಕೆ ಪ್ರತಿಫಲವಾಗಿ ನಾನು ಅವರ ಕಲ್ಯಾಣಕ್ಕಾಗಿ ಯಾವಾಗಲೂ ಯತ್ನಿಸುತ್ತೇನೆ.

ಬುದ್ಧಕಾಲಿನ ವಿಶ್ವವಿದ್ಯಾಲಯ

(ಲೇ :—ಹನುಮಂತ ನಾಗನೂರ ಬಾ. ಗೋಕಾಕ.)

ನಮ್ಮ ಭರತಖಂಡದ ವೈಭವಸೂರ್ಯನು ಕೆಲವೊಂದು ಕಾಲದಲ್ಲಿ ಅತ್ಯುನ್ನತ ಶಿಖರದ ಮೇಲೆ ನಲಿದಾಡುತ್ತಿದ್ದನು. ವಿದ್ಯಾಸಂಪತ್ತುಗಳ ಪ್ರಾಪ್ತಿಗೋಸುಗ ಮಿಕ್ಕು ಳಿದದೇಶದ ಜನರು ದೀನವದನದಿಂದ ಭಾರತವನ್ನು ಯಾಚಿಸುತ್ತಿದ್ದರು. ಬುದ್ಧ ಸಂಸ್ಕೃತಿಯ ಪ್ರಚಂಡ ತೆರೆಯ ಮುಂದೆ ಜಗತ್ತಿನ ಎಲ್ಲ ಜನರು ತಲೆವಾಗಿದ್ದರು. ಯಾವದೇ ವಿದ್ಯೆಯಲ್ಲಿ ಅಂತಿಮ ನಿಷ್ಣಾತ ಜನರು ಹಿಂದುಸ್ಥಾನದಲ್ಲಿಯೇ ಸಿಗುತ್ತಿದ್ದರು. ಕಾನಪುರದ ಖ್ರಿಸ್ತಕಾಲೇಜದ ಪ್ರೊಫೆಸರರಾದ ತ್ರಿಪಾಠಿಯೆಂಬ ವಿದ್ವಾನ ಸಂಶೋಧಕರು ಬುದ್ಧಕಾಲದಲ್ಲಿ ಏಳ್ಗೆಗೆ ಬಂದಿದ್ದ ತಕ್ಷಶಿಲಾ, ಬನಾರಸ, ನಾಲಂದಾ, ವಿಕ್ರಮಶಿಲಾ ಈ ವಿದ್ಯಾಪೀಠಗಳ ಬಗ್ಗೆ ಕೆಳಗೆ ಬರೆದಂತೆ ಸುಲಲಿತವಾಗಿ ಬರೆದಿರುವರು. "ನಿಗತ ವಿಭವ ಜಿತರಾಷ್ಟ್ರದ ಪೂರ್ವೇತಿಹಾಸವು ಬಲುಸೊಗಸಾಗಿರುತ್ತದೆ. ಮತ್ತು ಸತ್ವತೊರಿದ ಜನರಿಗೆ ಆ ಇತಿಹಾಸ ಪರಶೀಲನೆಯು ಅವರ ಸತ್ವದ ನೆನಪು ಮಾಡಿಕೊಡುತ್ತದೆ."

ನಾಲಂದಾದಲ್ಲಿಯ ಆಶ್ರಮ ಸ್ಥಾಪನೆಯ ಕಾಲವು ಇನ್ನೂ ಗೊತ್ತಾಗಿಲ್ಲ. ತಿಬೇಟ ಇತಿಹಾಸಕಾರನಾದ ತಾರಾನಾಥನ ಮತವು ಅಶೋಕನ ಕಾಲಕ್ಕೆ ನಿರ್ಮಾಣವಾಗಿರಬೇಕೆಂಬದಾಗಿದೆ. ಆದರೆ ಹುವೆನತ್ಸಾಂಗನೆಂಬ ಚೀನೀ ಪ್ರವಾಸಿಗನು ಬುದ್ಧನಿರ್ವಾಣ ಸಮಯಕ್ಕೆಂದು ಮತಪಡುವನು. ಪ್ರೊಫೆಸರ ಸಾಮಘರನು ಕ್ರಿ. ಶ. ೪೫೦ರಲ್ಲಿ ಸ್ಥಾಪನೆಯಾಗಿದೆಯೆಂದು ನಿಶ್ಚಿತನೂಡಿರುವನು. ಏನೇ ಇರಲಿ ಈ ವಿದ್ಯಾಪೀಠವು ಕ್ರಿ. ಶ. ೪೦೦–೬೦೦ ಇಸವಿಯ ನಡುವೆ ಚನ್ನಾಗಿ ಪ್ರಸಿದ್ಧವಾಗಿರಬೇಕೆಂಬದಾಗಿ ಧ್ವನಿತವಾಗುತ್ತದೆ.

ಬುದ್ಧಧರ್ಮಿಯ ಜನರು ಈ ಆಶ್ರಮವು ಬಲುಪವಿತ್ರನೆಂದು ತಿಳಿಯುತ್ತಿದ್ದರು. ಸ್ವತಃ ಗೌತಮಬುದ್ಧನು ಮೂರು ತಿಂಗಳು ಅಲ್ಲಿದ್ದು ಪುನೀತಮಾಡಿರುವನೆಂದು ತಿಳಿಯುವರು.

ಈ ವಿದ್ಯಾಪೀಠದ ಕಟ್ಟಡವನ್ನು ಮೊದಲು ಶಕ್ರಾದಿತ್ಯನು ಕಟ್ಟಿಸಿದನು. ಮುಂದೆ ಆತನ ಮಗನು ಬುದ್ಧಗುಪ್ತನು ಮೊದಲಿನ ಆಶ್ರಮದ ಪೂರ್ವಕ್ಕೆ ಸಂಘಾರಾಮವನ್ನು ಕಟ್ಟಿಸಿದನು. ಮುಂದೆ ನರಶಿಂಹಗುಪ್ತ ಬಲಾದಿತ್ಯನು ನೈಋತ್ಯಕ್ಕೆ, ಮತ್ತು ಆತನ ಮಗ ಪ್ರಜಾರಾಸನು ಪೂರ್ವಕ್ಕೆ ಹೀಗೆ ಎರಡು ಸಂಘಾರಾಮಗಳನ್ನು ಕಟ್ಟಿಸಿದರು. ಮುಂದೆ ಒಬ್ಬ ರಾಜನು ಉತ್ತರಕ್ಕೆ ದೊಡ್ಡದೊಂದು ಸಂಘಾರಾಮಕಟ್ಟಿಸಿ ಈ ಕಟ್ಟಡಗಳ ಸುತ್ತಲು ಆವಾರ ಕಟ್ಟಿಸಿದನು. ಈ ತೆರದಿಂದ ಈ ವಿದ್ಯಾಲಯವು ಸಿದ್ಧವಾಗಲು ಈ ರಾಜರ ಪರಿಶ್ರಮವು ಕಾರಣೀಭೂತವಾಗಿರುತ್ತದೆ.

ಹೂವೆನ್ನತ್ಸಾಂಗ ಮತ್ತು ಶಾಮನ ವ್ಹಿನಲಿ ಇವರು ಕೆಳಗೆ ಬರೆದಂತೆ ವರ್ಣಿಸಿರುವರು.

ಈ ಪೀಠವು ಪರ್ವತದ ಶಿಖರದ ಮೇಲೆ ನಿಚ್ಚಳವಾಗಿ ಅತ್ಯಂತ ಮನೋಹರವಾಗಿ ಕಾಣುತ್ತದೆ. ವೇಧಶಾಲೆಯು ಬಲು ಎತ್ತರಮೇಲಿದ್ದು ಕೃತ್ರಿಮ ಜಲದಲ್ಲಿಂದ ನೀಲಕಮಲಗಳು ಇತಸ್ತತಃ ಹೊಂಬಣ್ಣದ ಕನಕಕಮಳದ ದಟ್ಟಣೆಯಲ್ಲಿಂದ ಮೆಲ್ಲ ಮೆಲ್ಲನೆ ತಲೆಚಾಚುತ್ತಲಿವೆ. ಈ ಸೂಕ್ಷ್ಮಹೂವಿಗೆ ಪ್ರಖರ ರವಿಕಿರಣಗಳ ತಾಪವಾಗದಂತೆ ಆಮ್ರವೃಕ್ಷಗಳು ತಮ್ಮ ಶೀತಲ ಛಾಯಾಛತ್ರವನ್ನು ಹಿಡಿದಿರುತ್ತವೆ.

ಈ ತೆರದ ನಂದನವನದಲ್ಲಿ ವಿದ್ಯಾರ್ಥಿಗಳು ವಿದ್ಯಾರ್ಜನೆಯನ್ನು ಭರದಿಂದ ಸಾಗಿಸುತ್ತಿದ್ದರು. ಆ ನಯನಮನೋಹರವಾದ ತಾಣದಲ್ಲೀಗ ಕೇವಲ ಕಲ್ಲಿನ ರಾಶಿಗಳು ಮಾತ್ರ ಉಳಿದಿವೆ. ಗೋಡೆಯು ಉಳಿದ ಭಾಗವನ್ನು ಪುರಾಣವಸ್ತುಸಂಶೋಧಕರು ಕಾದಿಟ್ಟಿರುವರು. ಈ ಅವಶೇಷ ನೋಡಿಯೇ ತಜ್ಞರು "ಆ ಕಾಲದ ಶಿಲ್ಪ ಕಲೆಯು ಮಿಗಿಲಾದ ಪೂರ್ಣಾವಸ್ಥೆಗೆ ಮುಟ್ಟಿತೆಂದ"ರಿಯುವರು.

ಶಾಮನ ವ್ಹಿನಲಿ ಈತನು ನಾಲಂದಾದಲ್ಲಿಯ ವಿದ್ಯಾಪೀಠದಲ್ಲಿ ೧೦೦೦೦ ಗುರು ಶಿಷ್ಯರ ಸಂಖ್ಯೆ ಇತ್ತೆಂತಲೂ, ಮತ್ತು ಇಲ್ಲಿ ಮೇಲಾದ ಬುದ್ಧಿಮತ್ತೆಯ ಜನರು ಇದ್ದು ಅವರ ಶಿಕ್ಷಣನೈಪುಣ್ಯವಿಷಯದ ಖ್ಯಾತಿ ದೂರ ದೂರ ದೇಶದವರೆಗೆ ಹಬ್ಬಿತ್ತೆಂತಲೂ, ಅವರು ನೀತಿವಂತರಿದ್ದು ಆಶ್ರಮದ ಕಟ್ಟಳೆಗಳನ್ನು ಅತಿ ನಿಯಮದಿಂದ ಪಾಲಿಸುತ್ತಿದ್ದರೆಂತಲೂ ಮತಪಟ್ಟಿರುವನು.

ಹೂವೆನತ್ಸಾಂಗನು ನಾಲಂದಾ ವಿದ್ಯಾಲಯದಲ್ಲಿ ಕಲಿಯುವಾಗ್ಗೆ ಮುಖ್ಯಾಧ್ಯಾಪಕನು ಶೀಲಭದ್ರನೆಂಬವನಿದ್ದನು. ಈ ಆಚಾರ್ಯನು ಪೂರ್ವಬಂಗಾಲದಲ್ಲಿಯ ಒಬ್ಬ ಬ್ರಾಹ್ಮಣರಾಜನ ಮಗನಿದ್ದು ಆಚಾರ್ಯನು ಧರ್ಮಪಾಲನ ಶಿಷ್ಯನಾಗಿದ್ದನು. ಧರ್ಮಪಾಲನ ನಂತರ ಮುಖ್ಯಾಧ್ಯಾಪಕನು ಶೀಲಭದ್ರನೇ ಆದನು. ವೈದ್ಯಕಿ ಮತ್ತು ಜ್ಯೋತಿಷ್ಯಗಳಲ್ಲಿ ಪಾರಂಗತನಾದ ನಾಗಾರ್ಜುನ, ಸರ್ವಮಾನ್ಯ ಬುದ್ಧ ಚರಿತ್ರಕಾರ ಅಶ್ವಘೋಷರಂಥ ಅನೇಕ ಕರ್ತೃತ್ವಶಾಲಿ ಅಧ್ಯಾಪಕರು ಆಗ್ಗೆ ಮಿಂಚಿಹೋದರು.

ಇವರಲ್ಲಿ ಅನೇಕ ಅಧ್ಯಾಪಕರು ತಿಬೇಟದೇಶದಲ್ಲಿ ಹೋಗಿ ತಮ್ಮ ಬುದ್ಧಿಮತ್ತೆಯಿಂದ ಬುದ್ಧಾನುನಾಮಗಳನ್ನು ಮಾಡಿದರು. ಕಮಲಶೀಲ, ಪದ್ಮಸಂಭವ ಇವರನ್ನು ತಿಬೇಟದ ಆಗಿನ ರಾಜನಾದ ಖ್ರಿ ಸ್ಥೋದನತ್ಸನು ಮರ್ಯಾದೆಯಿಂದ ಕರೆಕಳುಹಿಸಿದ್ದನು. ಈ ಆಚಾರ್ಯರು 'ಸಾಮಯ' ದಲ್ಲಿ ಬುದ್ಧವಿಹಾರವನ್ನು ಕ್ರಿ. ಶ. ೭೯೯ ರಲ್ಲಿ ಸ್ಥಾಪಿಸಿದರು.

ನಾಲಂದಾ ವಿದ್ಯಾಪೀಠಕ್ಕೆ ಮಗಧ ರಾಜನು ೧೦೦ ಹಳ್ಳಿಗಳ ಉತ್ಪನ್ನವನ್ನು ಉಂಬಳಿಯಾಗಿ ಕೊಟ್ಟಿದ್ದನು. ಶ್ರೀಮಂತ ಜನರ ವರ್ಷಾಶನ, ಅರವಿ–ಅಂಚಡಿ ಇವುಗಳ ವರ್ಷಾವು ಆಶ್ರಮದ ಮೇಲೆ ಒಂದೇಸವನೆಯಾಗುತ್ತಿತ್ತು.

ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಹೊಟ್ಟೆ ಬಟ್ಟೆಯ ಯಾವತರದ ಚಿಂತೆ ಇದ್ದಿಲ್ಲ. ಅಂತೇ ಸದಾಕಾಲ ಅಧ್ಯಯನ ಮತ್ತು ಧಾರ್ಮಿಕ ಕೃತ್ಯದಲ್ಲಿಯೇ ಕಾಲ ಕಳೆಯುತ್ತಿದ್ದರು.

ಈ ವಿದ್ಯಾಲಯದ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದಮೇಲೆ ಉಮೇದವಾರರಿಗೆ ಅಪ್ಪಣೆ ಸಿಗುತ್ತಿತ್ತು. ಪ್ರವೇಶ ಪರೀಕ್ಷೆಯ ವಿಷಯಗಳು ಬಲು ಬಿಗಿಯಾಗಿರುತ್ತಿದ್ದವು. ಉಮೇದವಾರರಲ್ಲಿ ಗಂಂಕ್ಕೆ ಳಂರಂತೆ ಪಾಸಾಗುವದು ಕಠಿಣವಾದ ಸಂಗತಿಯಾಗಿತ್ತು.

ಹುವೆನ್‌ತ್ಸಾಂಗನು ಬರೆದಿರುವದೇನಂದರೆ:—"ತೀರ ಪ್ರಭಾತ ಸಮಯದಿಂದ ರಾತ್ರಿಯವರೆಗೆ ಗುರುಶಿಷ್ಯರಲ್ಲಿ ಪ್ರಶ್ನೋತ್ತರಗಳು ನಡೆಯುತ್ತಿದ್ದವು. ವಿದ್ಯಾಭ್ಯಾಸದ ವೇಳಾಪತ್ರಿಕೆಯು ಘಟಿಕಾದಿಂದ ನಡೆಯುತ್ತಿತ್ತು. ಈ ಘಟಿಕಾ ಪತ್ರಿಕೆಯ ಮೇಲೆ ಒಬ್ಬ ಸ್ವತಂತ್ರಕಾವಲಗಾರನು ಇರುತ್ತಿದ್ದನು. ಶಿಕ್ಷಣವು ಪ್ರಾಯಶಃ ಬಾಯಿಂದಲೇ (ತೊಂಡಿ) ನಡೆಯುತ್ತಿತ್ತು. ಬುದ್ಧ ಧರ್ಮದ ತತ್ವಗಳೆಲ್ಲ ಈ ಶಿಕ್ಷಣ ಕ್ರಮದಲ್ಲಿ ಅಡಕವಾಗಿದ್ದವಲ್ಲದೆ ವೇದ, ವೇದಾಂಗ, ತರ್ಕಶಾಸ್ತ್ರ, ವ್ಯಾಕರಣ, ವೈದ್ಯಶಾಸ್ತ್ರ, ಸಾಂಖ್ಯ ಮತ್ತು ಮಿಕ್ಕುಳಿದ ಶಾಸ್ತ್ರಗಳನ್ನು ವಿದ್ಯಾರ್ಥಿಗಳಿಂದ ಓದಿಸುತ್ತಿದ್ದರು."

ಧರ್ಮ ಹಬ್ಬುಗೆಯ ಬಗ್ಗೆ ನಾಲಂದಾದಲ್ಲಿ ಬುದ್ಧ ಭಿಕ್ಷುಕರು ದೂರ ದೂರ ದೇಶಗಳಿಗೆ ಹೋಗುತ್ತಿದ್ದರು. ಈ ಕೆಲಸದಲ್ಲಿ ನಾಲಂದಾ ವಿದ್ಯಾಪೀಠಕ್ಕಿಂತಲೂ ತಕ್ಷಶಿಲಾ ವಿದ್ಯಾಪೀಠವು ಹೆಚ್ಚಿಗೆ ಪ್ರಸಿದ್ಧವಿತ್ತು. ತಕ್ಷಶಿಲಾದಲ್ಲಿ ನಾಲಾಂದಾದಂತೆ ಒಂದೇ ವಿದ್ಯಾಲಯವಿರದೆ ಬೇರೆ ಬೇರೆ ಆಚಾರ್ಯರ ಕೈಕೆಳಗೆ ಹಲವು ವಿದ್ಯಾಪೀಠಗಳು ಇದ್ದವು. ಮುಂದೆ ಸಾಮ್ರಾಟ್ ಅಶೋಕನು ಇವೆಲ್ಲ ಒಟ್ಟುಗೂಡಿಸಿ ಒಂದೇ ದೊಡ್ಡ ವಿದ್ಯಾಪೀಠ ಮಾಡಿದನು. ಈ ಪೀಠದಲ್ಲಿ ರಾಜನೀತಿವಿಷಯಕ ಶಿಕ್ಷಣವನ್ನು ಸಹ ಕೊಡುತ್ತಿದ್ದರು. ಅಶೋಕನ ಹಿಂದುಗಡೆ ಅಭಿಮಾನಾಸ್ಪದ ಮತ್ತೂ ಆದರ್ಶ ಭೂತ ಮಗಧ ಸಾಮ್ರಾಜ್ಯ ಶಕಟ ನಡಿಸುವ ಎಲ್ಲ ರಾಜ ಪುರುಷರು ಈ ವಿದ್ಯಾಲಯದಲ್ಲಿಯೇ ಶಿಕ್ಷಣ ಹೊಂದಿದರು.

ಹಲವು ಶತಮಾನಗಳ ವರೆಗೆ ಈ ವಿದ್ಯಾಪೀಠದಲ್ಲಿಯ ಬುದ್ಧ ಭಿಕ್ಷುಕರು ಧರ್ಮ ಪ್ರಸಾರಾರ್ಥ ಒಂದೇಸವನೇ ಏಶಿಯಾ ಖಂಡದಲ್ಲಿಯ ಎಲ್ಲ ದೇಶಗಳಿಗೆ ಹೋಗುತ್ತಿದ್ದರು. ಈ ವಿದ್ಯಾವಿಭೂಷಿತ ರತ್ನಗಳಿಂದಲೇ ಭಾರತೀಯರ ಕಲಾ, ಧರ್ಮ, ತತ್ವ ಜ್ಞಾನ, ಇವುಗಳ ಹಬ್ಬುಗೆಯು ಎಲ್ಲಜಗತ್ತಿಗೆ ಆಗಿ ಹೋಯಿತು. ಬುದ್ಧ ಭಿಕ್ಷುಕಗಳ ವಿದ್ವತ್ತೆಗೆ ಮೆಚ್ಚಿ 'ಫಾಹಿಯಾನ' 'ಹುವೆನ್‌ತ್ಸಾಂಗ'ರಂಥ ಯಾತ್ರಿಕರು ತಮ್ಮ ಆಯುಷ್ಯದ ಬಹುಕಾಲವನ್ನು ಹಿಂದುಸ್ಥಾನದಲ್ಲಿಯೇ ಕಳೆದರು.

ಆಶ್ರಮದಲ್ಲಿ ಒಂದು ಗ್ರಂಥಾಲಯವಿದ್ದು ಅಲ್ಲಿ ಹಲವು ಗ್ರಂಥಗಳನ್ನಿಟ್ಟಿದ್ದರು. ಈ ಗ್ರಂಥಾಲಯಕ್ಕೆ 'ಧರ್ಮಗಂಜ' ವೆಂದು ಕರೆಯುತ್ತಿದ್ದರು. ಇದನ್ನು ಬೇರೆ ಬೇರೆ ಮೂರು ಕಟ್ಟಡಗಳಲ್ಲಿ ವಿಭಾಗಿಸಿದ್ದರು. ಈ ಕಟ್ಟಡಗಳಿಗೆ 'ರತ್ನಸಾಗರ' 'ರತ್ನೋದಧಿ' 'ರತ್ನರಂಜಕ' ಹೀಗೆ ಹೆಸರಗಳಿರುವವು. 'ರತ್ನೋದಧಿ' ಎಂಬದು ಒಂಬತ್ತು ಅಂತಸ್ತಿನದು ಇದ್ದು ಅದರಲ್ಲಿ ಕೇವಲ ಧಾರ್ಮಿಕ ಪೊತ್ತಿಗೆಗಳನ್ನೇ ಇಟ್ಟಿದ್ದರು. ಮಹಮ್ಮದಬಖ್ತ್ಯಾರ ಖಿಲಜಿಯು ಕ್ರಿ. ಶ. ೧೧೯೦ ರಲ್ಲಿ ಬಂಗಾಲದ ಮೇಲೆ ದಾಳಿ ಮಾಡಿದಾಗ್ಗೆ ಈ ಗ್ರಂಥಭಾಂಡಾರ ಸುಟ್ಟು ಹಾಳುಮಾಡಿದನು ಈ ಅಸುರನಿಗೆ ಯಾತರ ಅರಿವು; ಮುಂದೆ ಅಲ್ಲಿಯ ಆಚಾರ್ಯರು ಕಟ್ಟಡವನ್ನು ದುರಸ್ತ ಮಾಡಿದರು; ಆದರೆ ಗ್ರಂಥ ಸಂಗ್ರಹವು ಸುಟ್ಟದ್ದು ಸೂರೆ ಆಗಿಯೇ ಹೋಯಿತು. ಮರಳಿ ಅದರ ಹಾನಿಯು ತುಂಬಿ ಎಂದೂ ಬರಲಿಲ್ಲ !

ನಾಲಂದಾ ವಿದ್ಯಾಪೀಠವು ತನ್ನ ಗೌರವವನ್ನು ಕಳಕೊಂಡ ಕಾಲವು ನಿಶ್ಚಿತ ವಾಗಿ ಗೊತ್ತಾಗಿಲ್ಲ. ಹೂಎನ್‌ತ್ಸಾಂಗನು ಇಲ್ಲಿದ್ದಾಗ್ಯೆ ಅಂದರೆ ಕ್ರಿ. ಶ. ೬೭೩ರಿಂದ ೬೪೭ರ ವರೆಗೆ ಈ ವಿದ್ಯಾಲಯವು ತನ್ನ ಕೀರ್ತಿ ಶಿಖರದಮೇಲೆ ವಿರಾಜಿಸುತ್ತಿಂಬದರಲ್ಲಿ ಸಂದೇಹಯವಿಲ್ಲ.

ಇತ್ತೀಚೆಗೆ ಹಲವು ಕಾರಣಗಳಿಂದ ವಿದ್ಯಾಪೀಠಕ್ಕೆ ಅಳಿಗಾಲವು ಹತ್ತಿತು. ಕ್ರಿ. ಶ. ೮೦೦ನೇ ಇಸ್ವಿಯಲ್ಲಿ ವಿಕ್ರಮ ಶಿಲಾದಲ್ಲಿ ಒಂದು ವಿಶ್ವವಿದ್ಯಾಲಯವು ಪ್ರಸಿದ್ಧಿಗೆ ಬಂದಿತ್ತು. ಇದರಿಂದಲೂ ಸಹ ನಾಲಂದಾ ವಿದ್ಯಾಪೀಠದ ಮಹತ್ವ ಕಡಿಮೆಯಾಯಿ ತೆಂದು ಕೆಲ ವಿದ್ವಾನರ ಊಹೆ ಇರುವದು. ಆದರೆ ಡಾ. ಹರಪ್ರಸಾದಶಾಸ್ತ್ರೀ ಇವರು ೧೦-೧೧ನೇ ಶತಮಾನದಲ್ಲಿಯೂ ಸಹ ಚನ್ನಾಗಿ ಪ್ರಸಿದ್ಧವಿದ್ದು ವಿಕ್ರಮಶಿಲೆಯ ಪ್ರತಿ ಸ್ಪರ್ಧೆಯಾಗಿತ್ತೆಂದೆನ್ನುವರು. ಡಾ. ಕೆಲಹಾರ್ನರು "ನಾಲಂದಾ ವಿಶ್ವವಿದ್ಯಾಲಯದ ನಿಷ್ಕಲಂಕ ಚಂದ್ರಮನಿಗೆ ಒಂಬತ್ತನೇ ಶತಮಾನದ ಮುಂದಿನ ಅರ್ಧದಿಂದ ಇಳಿಕೆಯ ಕಾಲವು ಹತ್ತಿತೆಂ"ದೆನ್ನುವರು; ಆದರೂ ೧೧ನೇ ಶತಮಾನದವರೆಗೆ ಅಂತೂ ಇಂತೂ ಜೀವ ಹಿಡಿದಿತ್ತು. ಮುಂದೆ ಮುಸಲ್ಮಾನರ ಆಸುರೀ ಲಾಲಸೆಯಿಂದ ಜೀವಿಸಲಿಕ್ಕೆ ಅಸ ಮರ್ಥವಾಯಿತು.

ಈ ತೆರನಾದ ಕೇವಲ ಆರ್ಯಾವರ್ತದಲ್ಲಿಯಷ್ಟೇ ಅಲ್ಲ. ಇಡೀ ಜಗತ್ತಿಗೆ ಭೂಷಣಾಸ್ಪದವಾದ ಈ ಶಿಕ್ಷಣ ಸಂಸ್ಥೆಯು ಪರಕೀಯರಿಂದ ನಾಶವಾಯಿತು !! ಅಲ್ಲಿ ಈಗ್ಗೆ ವಿಸ್ತೀರ್ಣವಾದ ಮೈದಾನವೂ, ಬಿದ್ದ ಕಟ್ಟಡಗಳ ಅವಶೇಷವೂ ಕಾಣುತ್ತವೆ!!! "ಇತಿ ಶಮ ಶಮಾಪ್ತಃ..... ಹಾಹಾಶ ಸಜೌ ಶಮ:" ಇದೇ ನಿಜವಾದದ್ದು.

ಬಿದರಬೆಟ್ಟ

(ಲೇಖಕ:—ನರಸಿಂಹಾಚಾರ್ಯ **ಕಾವ್ಯಾನಂದ**)

ಮಲ್ಲಾಡಿನ ಒಬ್ಬ ವೃದ್ಧ ಗೃಹಸ್ಥನು ಹಿತ್ತಲಿನಲ್ಲಿದ್ದ ಹೂತುಲಸಿಯನ್ನು ತೆಗೆದು ಕೊಂಡು ವೃಂದಾವನಕಟ್ಟೆಯ ಮೇಲೆ ಕುಳಿತಿದ್ದನು. ಬಿಜಾಪುರದ ಕಡೆಯಿಂದ ಬಂದ ಅತನ ಪ್ರೀತಿಯ ಮೊಮ್ಮಗನು ಹತ್ತರ ಬಂದು ಕೂತು, ಬಿಜ್ಞಾಸೆಯಿಂದ ಕೇಳ ಲಾರಂಭಿಸಿದನು. ಅವರ ಸಂವಾದವನ್ನು ಇದರಡಿ ಬರಿದಿರುತ್ತೇನೆ:—

ಮೊಮ್ಮಗ—ಅಜ್ಜಾ, ನಿಮ್ಮ ಹೊರಬೀಲಿಯಲ್ಲಿ ಎತ್ತರವಾಗಿ ಬೆಳೆದ ಈ ಗಿಡ ಗಳ ಗುಂಪು ಯಾತರದು ?

ಅಜ್ಜ—ನಿನಗೆ ಏತರದರ ಹಾಗೆ ಕಾಣುತ್ತದೆ ?

—ನನಗೆ ಅಲ್ಲದ (ಹಸೆಸುಂತಿಯ) ಗಿಡದಂತೆ ತೋರುತ್ತದೆ.

—ನೀನು ಅದನ್ನೆಲ್ಲಿ ನೋಡಿರುವಿ ?

—ನಮ್ಮ ತುಲಸೀವೃಂದಾವನದಲ್ಲಿ.

—ಅಲ್ಲಿ ಇಷ್ಟು ದೊಡ್ಡ ಗಿಡಗಳು ಬೆಳಿಯುವ ಸಂಭವವಿದೆಯೇ ?

—ಇಲ್ಲ; ಅಲ್ಲಿ ಹೇಗೆ ಬೆಳದಾವು ?

—ಇದರ ಎಲೆಗಳು ಖಾರಗೆಣಸನ್ನು (ಅಲ್ಲವನ್ನು) ಹೋಲುತ್ತಿದ್ದರೂ ಇದು ಅಲ್ಲವಲ್ಲ. ಇದಕ್ಕೆ ಬಿದರು ಅನ್ನುತ್ತಾರೆ. ಈ ಗಿಡಗಳ ಗುಂಪಿಗೆ ಬಿದರ ಬೆಟ್ಟಿನ್ನುವರು. ಇವು ನಿಮ್ಮ ಬೆಳವಲನಾಡಿನಲ್ಲಿ ಅಷ್ಟು ಬೆಳಿಯುವದಿಲ್ಲ. ನೀರಿನ ಅಸರಕ್ಕೆ ಹಚ್ಚಿದರೆ ಮಾತ್ರ ಬೆಳಿಯಬಹುದು.

—ಇದು ಏತಕ್ಕೆ ಬರುತ್ತದೆ?

—ಇದರಿಂದ ಜನಗಳಿಗೆ ಬಹಳ ಉಪಯೋಗವುಂಟು. ಇದರಲ್ಲಿ ನಾಲ್ಕಾರು ಜಾತಿಗಳಿರುತ್ತವೆ. ಒಳ್ಳೇಗಡುತರವಿರುವದಕ್ಕೆ ಡವಗೆ ಯೆಂದೂ ಅದಕ್ಕೂ ಸಣ್ಣಾಗಿರು ವದಕ್ಕೆ ಗಳವೆಂತಲೂ ಅದಕ್ಕೆ ಸಣ್ಣಾಗಿರುವದಕ್ಕೆ ಸೀಬು ಎಂತಲೂ ಅನ್ನುವರು. ಮೇಲೆ ನೋಡು, ನಮ್ಮ ಚಪ್ಪರದಲ್ಲಿ ಕಾಣುವವೇ ಗಳಗಳು; ನಿಮ್ಮಲ್ಲಿ ನೂಳಗೆಗೆ ಹಾಕಿರು ವವು ಅವು ಸೀಬುಗಳು; ಬೊಂಬರು ಏರುವಗಣಿಯೇ ಡವಗೆ, ಡವಗೆಗಳನ್ನು ಬಡವರು ಮನೆಗಳಿಗೆ ಎಳೆಗಳ ಬದಲಾಗಿ ಹಾಕುತ್ತಾರೆ. ಇದರ ಜಾತಿಗೇ ಬಿದರೆಂಬ ಹೆಸರು.

—ಇದಿಷ್ಟೇ ಅಹುದಲ್ಲೊ, ಮತ್ತೇನು ಉಪಯೋಗ ?

—ಇದರ ಮೊಳಕೆಗೆ ಕಳಲ ಎನ್ನುವರು, ಅದರ ಪಲ್ಲೆಯನ್ನು ಬಹು ಜನರು ತಿನ್ನುತ್ತಾರೆ. ಇದು ಮೂಲಂಗೀ ಪಲ್ಲೆಯಂತಾಗುವದು; ಅದರ ಉಪ್ಪಿನ ಕಾಯಿ

ಯನ್ನು ಹಾಕುತ್ತಾರೆ. ಕಳಲೆಯು ಉಷ್ಣಗುಣವುಳ್ಳದ್ದು. ಇದರ ತೊಪ್ಪಲವನ್ನು ದನಗಳು ತಿನ್ನುತ್ತವೆ. ತೊಪ್ಪಲ ಕಷಾಯವನ್ನು ಬಹುಮೂತ್ರ ರೋಗದವರಿಗೆ ಕೊಡುತ್ತಾರೆ. ಇದು ಬಾಳೆಯಂತೆ ಈದು ಸಾಯುವ ಗಿಡವು. ಬಾಳೆ ಒಂದೇ ವರ್ಷಕ್ಕೆ ಈಯುತ್ತದೆ. ಇದು ಹತ್ತೆಂಟು ವರ್ಷದ್ದಾಗಿ ಬಹಳ ಬಲಿತ ಬಳಿಕ ಈದು ಒಣಗಿ ಹೋಗುತ್ತದೆ.

ಈದ ಮೇಳೆಗೆ ಇದರ ತುಂಬೆಲ್ಲ ಕೊನೆಗಳಾಗುತ್ತವೆ. ಅದರಲ್ಲಿ ಆಗುವ ಕಾಳಿಗೆ ಬಿದರಕ್ಕಿಯೆನ್ನುವರು. ಬಿದರಕ್ಕಿ ಸೀರ ಗೋದಿಯಂತಿರುತ್ತದೆ. ಬಡವರು ಅದರ ರೊಟ್ಟಿ ಮಾಡಿ ತಿನ್ನುತ್ತಾರೆ. ಬಿದರು ಬರಗಾಲಕ್ಕೆ ಈಯುವದೆಂದು ಮಲ್ಲಾಡಿನ ಜನರು ತಿಳಿಯುತ್ತಾರೆ.

—ನಮ್ಮ ಚಿಕ್ಕಡೀ ತಳಕ್ಕೆ ಹಾಕಿದೆ ಅದೂ ಬಿದರೇ ಏನು ?

—ಅಹುದು, ಅದು ಡವಗೀ ಜಜ್ಜಿ ಮಾಡಿದ ತಟ್ಟಿಯು. ಮೇದಾರ ಜಾತಿಯೇ ಬಿದರಿನ ಮೇಲೆ ಹೊಟ್ಟೇ ತುಂಬಿಕೊಳ್ಳುತ್ತಿದೆ. ಕಣಜ, ತಟ್ಟಿ, ಮರ, ಕೆರಸಿ, ಬುಟ್ಟಿ, ಸಾರಣಿಗಿ (ಜಲ್ಲಡಿ), ಕೆರಸಿ, ಓರೋಳಿಗೆ, ...ಬಳಿಗಿ, (ಎಲಿಹಾಕುವದಕ್ಕೆ ಮಾಡಿದವು) ಸಾಂಗಸೆ (ಮುಚ್ಚಳದ ಪೆಟ್ಟಿಗೆ), ಗೊಡೆ (ನೀರು ಗೊಜ್ಜುವ ಬುಟ್ಟಿ), ಹರಿಗೋಲು (ಬಿದರ ಇಲ್ಲವೆ ಬೆತ್ತದ ೨೦ ಜನರು ಕೂಡ್ರುವಂಥ ಬುಟ್ಟಿ ಇದರ ಮೇಲೆ ತೊಗಲು ಹಾಕಿರುತ್ತಾರೆ. ನದೀ ದಾಟಲಿಕ್ಕೆ ಬರುವದು) ಮೊದಲಾದವುಗಳು ಆಗುವವು.

—ಅಹುದು, ಇವೆಲ್ಲ ಬಹಳ ಉಪಯೋಗದ ಜೀನಸುಗಳು. ಮರ ಬುಟ್ಟಿಯಿಲ್ಲದಿದ್ದರೆ ಅಕ್ಕಿ ಹಿಟ್ಟು ಹೇಗೆ ನೆಟ್ಟಗಾದಾವು ?

—ನಿನಗೆ ಬೇಸರ ಬಂದಿತೇನು ? ತುಸು ಸುಮ್ಮನೆ ಕೇಳಿದರೆ ಇನ್ನೂ ಹೇಳುವೆನು.

—ಇಲ್ಲ, ಬೇಸರಿಕೆಯಿಲ್ಲ; ನಮ್ಮೂರಿಗೆ ಹೋಗಿ ಗೊತ್ತಿಲ್ಲದವರಿಗೆ ಹೇಳುತ್ತೇನೆ. ಅವರಿಗೆ ಇದನ್ನು ಕೇಳಿ ಮೋಜೆನಿಸುತ್ತದೆ ! ನನಗೂ ಅವರು ಜಾಣನಿದ್ದಾನೆ ಕೃಷ್ಣ, ಆನ್ನುವರು.

—ಬಹಳ ಒಳ್ಳೇದು, ಹಾಗಾದರೆ ಕೇಳು—ಪೊಳ್ಳು ಗಳಗಳ ಗಣ್ಣು ಸಾರಮಾಡಿ ಕೊಳವಿಗಳನ್ನು ಮಾಡುತ್ತಾರೆ. ಅವುಗಳಿಗೆ ಸೆಡ್ಡೀಕೊಲೆನ್ನುವರು. ಅವು ಕೂರಿಗೆಯ ಮುಖ್ಯಾಂಗಗಳು. ಅವುಗಳಿಲ್ಲದಿದ್ದರೆ ಬಿತ್ತಲಿಕ್ಕೇ ಬರಲಿಕ್ಕಿಲ್ಲ. ಇದರ ಇನ್ನೊಂದು ಜಾತಿಗ ಸೇವಿಗೇ ಬಿದರು ಎನ್ನುವರು. ಅದರಿಂದ ನುಣುಪಾದ ಸೇವಿಗೇ ಕೋಲುಗಳೂ ಬಡಿಗೆಗಳೂ ನೇಕಾರರ ಕೋಲುಗಳೂ ಆಗುತ್ತವೆ. ದನಕಾಯುವ ಹುಡುಗರು ಸಂಪಾಗಿ ಊದುವ ಕೊಳಲುಗಳು ಇವರವೇ. ಶ್ರೀ. ಕೃಷ್ಣನು ನಿನ್ನಷ್ಟಿರುವಾಗ

ಕೊಳಲನ್ನೂದುತ್ತಿದ್ದನು. ಅದರಿಂದ ಆತನಿಗೆ ವೇಣು-ಕೊಳಲ-ಗೋಪಾಲ ಅಂತಾ ಹೆಸರು ಬಿದ್ದಿದೆ.

—ಅಜ್ಜಾ ನನಗೊಂದು ಕೊಳಲು ಮಾಡಿಸಿ ಕೊಡು, ಕೊಡತೀ ?

—ನೀನು ಊರಿಗೆ ಹೋಗುವಾಗ್ಗೆ, ಕೊಳಲೊಂದೇ ಏಕೆ, ಓಕಳೀ ಗೊಜ್ಜುವ ಜೀಕಲಳಿಗಿ, ಚಿನ್ನಿಕೋಲು, ಊದಗೊಳವಿ ಮೊದಲಾದವುಗಳನ್ನು ಮಾಡಿಸಿಕೊಡುತ್ತೇನೆ. ಮೇದಾರರು ಬಿದರು ಒಡಿಯುವಾಗ ಬೆಣಚಿಗಲ್ಲಿನಂಥ ಹಗುರಾದ ಪದಾರ್ಥ ಹೊರಡುತ್ತದೆ. ಅದಕ್ಕೆ ಬಿದರ ಸುಣ್ಣವೆನ್ನುವರು. ಅದರ ಗುಣವು ಶೀತವಿರುತ್ತದೆ, ಅದೂ ಔಷಧಕ್ಕೆ ಬರುತ್ತದೆ. ಪರದೇಶದ ಕಲಾಕುಶಲರು ಬಿದರಿನಿಂದ ಹಲ್ಲುಜ್ಜುವ ಬ್ರುಶ್ಯಗಳನ್ನೂ ಕಾಗದವನ್ನೂ ಮಾಡುತ್ತಾರಂತೆ. ಬೆತ್ತದ ಬಡಿಗೆ ಖುರ್ಚಿಗಳನ್ನು ನೋಡಿರುವಿಯಲ್ಲಾ, ಆ ಬೆತ್ತವೂ ಇದರ ಜಾತಿಯದೇ. ಈ ಬಿದರ ಜಾತಿಯು ಮನುಷ್ಯನ ಅನ್ನವಸ್ತ್ರ ಮೊದಲಾದವುಗಳಿಗೆ ಬಹಳೇ ಉಪಯುಕ್ತವಾದದ್ದು. ನೀನು ದೊಡ್ಡವನಾದ ಹಾಗೆ ನಿನಗೆ ನಾನು ಹೇಳಿದ್ದನ್ನು ಬಿಟ್ಟು ಇನ್ನೂ ಸಾವಿರಾರು ಉಪಯೋಗಗಳು, ತಿಳಿದುಬಂದಾವು. ನಾಳೆ ಶಿವರಾತ್ರಿಗೆ ಗೋಕರ್ಣಕ್ಕೆ ಹೋಗೋಣ, ಆಗ ಅಲ್ಲಿ ನಿನಗೆ ಇನ್ನೂ ಎಷ್ಟೋ ಚಂದದ ಬಿದರು ಬೆತ್ತದ ಸಾಮಾನುಗಳು ಕಣ್ಣಿಗೆ ಬೀಳುವವು.

ತಮ್ಮಾ ಊಟಕ್ಕೆ ಬಾ, ಎಂದು ಅವರಕ್ಕ ಕರೆಯಲು, ಕೃಷ್ಣನು ಎದ್ದನು. ಅವರಜ್ಜನು ಹರೀರಾಮ ಅನ್ನುತ್ತ ಒಳಗೆ ಹೋದನು.

ಹದಿನೈದನೇ ಶತಮಾನದ ದಕ್ಷಿಣ ದೇಶವು

ಲೇಖಕ:—ಗುರುನಾಥ ಗೋವಿಂದ ಉಸ್ಪಾರ, ಯವುಕಮಮರಡಿ.

ದಕ್ಷಿಣ ಹಿಂದುಸ್ತಾನದ ಇತಿಹಾಸದಲ್ಲಿ ಹದಿನೈದನೇ ಶತಮಾನವು ಬಹಳೇ ಮಹತ್ವದ್ದಾಗಿರುವದು, ಯಾಕಂದರೆ ಈ ಕಾಲದಲ್ಲಿ ಆದ ಘಟನೆಗಳಿಂದ ಇತಿಹಾಸದ ಗತಿಯು ತಿರುಗಿತು. ಈ ಘಟನೆಗಳಲ್ಲಿ ಎರಡು ಮಹತ್ವವುಳ್ಳವಾಗಿವೆ:—

(೧) ಬಾಮನೀ ಸಾಮ್ರಾಜ್ಯದ ಪತನ ಮತ್ತು (೨) ಪೋರ್ತುಗೀಜ ವ್ಯಾಪಾರಿಗಳ ಆಗಮನ. ಬಾಮನೀ-ಸಾಮ್ರಾಜ್ಯವು ನಾಶವಾದಮೇಲೆ (೧) ವಿಜಾಪೂರ (೨) ಅಹಮದ ನಗರ (೩) ಗೋವಳಕೊಂಡ (೪) ಬೇದರ (೫) ಎಲಿಚಪೂರ ಈ ಐದು ರಾಜ್ಯಗಳು ಸ್ಥಾಪಿಸಲ್ಪಟ್ಟವು. ಅವುಗಳ ಸಂಪೂರ್ಣ ಶಕ್ತಿಯು ಪರಸ್ಪರರ ಕಲಹ-ಸಂಗ್ರಾಮಗಳಲ್ಲಿ ನಷ್ಟವಾಯಿತು. ಇದು ಒಂದು ರೀತಿಯಿಂದ ಒಳಿತೇ ಆಯಿತು, ಹೇಗಂದರೆ ಈ ಮುಸಲ್ಮಾನ ರಾಜ್ಯಗಳ ಪರಸ್ಪರರ ವೈಮನಸ್ಸು ಛತ್ರಪತಿ ಶಿವಾಜಿ ಮಹಾರಾ

ಜರಿಗೆ ಮಹಾರಾಷ್ಟ್ರದ ತಳಪದಿಯನ್ನು ಹಾಕುವದಕ್ಕೆ ಬಹಳೇ ಅನುಕೂಲಸ್ಥಿತಿಯನ್ನು ಒದಗಿಸಿಕೊಟ್ಟಿತು.

(೧) ಸನ್ ೧೪೮೯ ಇ. ಯಲ್ಲಿ ಯುಸುಫ ಆದಿಲಶಹನು ವಿಜಾಪುರದ ಸ್ವಾಧೀನತೆಯನ್ನು ಸಾರಿದ್ದು.

(೨) ಅಹಮದನಗರದ ಅಹಮದ ನಿಜಾಮುಶಹನು ೧೪೯೦ ಇ. ಯಲ್ಲಿ ಸ್ವತಂತ್ರ ರಾಜನಾಗಲಿಕ್ಕೆ ಸಾರಿದ್ದು.

(೩) ಗೋವಳಕುಂಡದಲ್ಲಿ ಸನ್ ೧೫೧೭ ಇ. ಯಲ್ಲಿ ಸುಲ್ತಾನ ಅಲಿ ಕುತುಬ ಶಹನು ಸ್ವತಂತ್ರ ರಾಜ್ಯ ಸ್ಥಾಪಿಸಿದ್ದು.

(೪) ೧೪೯೨ ಇ. ಯಲ್ಲಿ ಬೇದರದ ಪ್ರತಿನಿಧಿ ಕಾಸೀಮ ಬರೀದಶಹನು ಸ್ವತಂತ್ರ ಬಾದಶಹನಾಗಲು ಸಾರಿದ್ದು.

(೫) ಎಲಿಚಪುರವನ್ನು ಫತಹುಲ್ಲಾ ಇಮಾದಶಹಾನು ಸ್ವತಂತ್ರ ಮಾಡಿದ್ದು.

ಈ ಕಾಲದ ಪರಿಸ್ಥಿತಿಯ ಪರಿಚಯವನ್ನು ಮಾಡಿಕೊಡುವ ಅನೇಕ ಗ್ರಂಥಗಳು ಸಿದ್ಧವಿರುವವು. ಅವುಗಳನ್ನು ಸೌಲಭ್ಯಕ್ಕಾಗಿ ನಾವು ನಾಲ್ಕು ಭಾಗಗಳಲ್ಲಿ ವಿಭಾಗಿಸಬಹುದಾಗಿದೆ. (೧) ಇತಿಹಾಸ-ಪರಿಸ್ಥಾ ಮೊದಲಾವ ಇತಿಹಾಸ ಗ್ರಂಥಗಳು; ಮುಸಲ್ಮಾನ ದೃಷ್ಟಿಯಿಂದ ತೆಗೆದುಕೊಂಡಿವೆ. (೨) ಮರಾಠಬಖರ ಅಥವಾ ಹಿಂದೂ ಇತಿಹಾಸ (೩) ಮುಸಲ್ಮಾನೀ ಇತಿಹಾಸಗಳ ಆಧಾರಗಳ ಮೇಲಿಂದ ಬರೆದ ಇಂಗ್ಲಿಷ ಇತಿಹಾಸ ಗ್ರಂಥಗಳು (೪) ಆ ಕಾಲದಲ್ಲಿ ಭರತಖಂಡದ ಪ್ರವಾಸವನ್ನು ಮಾಡುವವರಿಂದ ಬರೆದ ವೃತ್ತಾಂತಗಳು.

ಹದಿನೈದನೇ ಶತಮಾನದಲ್ಲಿ ಮೂವರು ಪ್ರವಾಸಿಕರು ಬಂದಿದ್ದರು. ಅವರ ಅನುಭವದಿಂದ ನಾವು ಆ ಕಾಲದ ಸ್ಥಿತಿಯನ್ನು ತಕ್ಕಮಟ್ಟಿಗೆ ಗೊತ್ತುಮಾಡಿಕೊಳ್ಳಬಹುದಾಗಿದೆ. ಮೊದಲನೇ ಪ್ರವಾಸಿಯು ನಿಕೋಲೋಕೊಂಟೀ ಎಂಬ ವೆನಿಸದ ನಿವಾಸಿಯು; ಈತನು ಸನ್ ೧೪೨೦ ಇ. ಯಲ್ಲಿ ದಮಸ್ಕಸದಿಂದ ಪರಿವಾರ ಸಹಿತ ಹೊರಟನು. ಭರತಖಂಡಕ್ಕೆ ಹೊರಡುವ ಮೊದಲು ಅವನು ದಮಸ್ಕಸದಲ್ಲಿ ವ್ಯಾಪಾರ ಮಾಡುತ್ತಿದ್ದನು. ಸನ್ ೧೪೨೧ ಇ ಯಲ್ಲಿ ಅವನು ವಿಜಯನಗರಕ್ಕೆ ಹೋದನು. ಅಲ್ಲಿ ಆ ಕಾಲದಲ್ಲಿ ಹಿಂದೂ ಸಮ್ರಾಜದ ಮೊದಲನೇ ದೇವರಾಯನು ರಾಜ್ಯವಾಳುತ್ತಿದ್ದನು. ನಿಕೋಲೋಕೊಂಟಿಯು ಹಿಂದುಸ್ಥಾನದಿಂದ ಜಾವಾಕ್ಕೂ ಚೀನಕ್ಕೂ ಹೋಗಿದ್ದನು. ಆ ಮೇಲೆ ಮಲಬಾರ ಸಮುದ್ರತೀರದ ಸವಿೂಪದಿಂದ ಅವನು ತನ್ನ ದೇಶಕ್ಕೆ ತಿರುಗಿ ಹೋದನು. ನಿಕೋಲೋ-ಕೋಂಟಿಯು ಸುಮಾರು ೨೫ ವರ್ಷಗಳ ವರೆಗೆ ಪೂರ್ವ ದೇಶದಲ್ಲಿಯೇ ಭ್ರಮಣ ಮಾಡಿ ನಂತರ ಫಾರ್ಸಿ ಭಾಷೆಯ ಅಭ್ಯಾಸವನ್ನು ಜನ್ನಾಗಿ ಮಾಡಿದನು. ತನ್ನ ಪ್ರವಾಸವಲ್ಲಿ ಅವನು ಫಾರ್ಸಿದೇಶದ ನಿವಾಸಿಯಂತೆ ಇದ್ದನು.

ಆತನು ತನ್ನ ಆಚಾರ, ವಸ್ತ್ರಾಭರಣಗಳಲ್ಲಿ ಪರಿವರ್ತನೆಯನ್ನು ಮಾಡಿಕೊಂಡಿದ್ದನು. ಮಿಶ್ರದೇಶದ ಸವಿೂಪದಲ್ಲಿ ಬಂಧಿಸಲ್ಪಟ್ಟಿದ್ದರಿಂದ ಆತನು ಪರಿವಾರದೊಡನೆ ಕ್ರಿಶ್ಚನ್ ಧರ್ಮಕ್ಕೂ ನಡೆವಳಿಕೆಗೂ ನಮಸ್ಕಾರ ಮಾಡಬೇಕಾಯಿತು. ಯಾಕಂದರೆ ಒಂದು ವೇಳೆ ಅವನು ಹಾಗೆ ಮಾಡದಿದ್ದರೆ ಧರ್ಮಾಂಧ ಮುಸಲ್ಮಾನರಿಂದ ತನ್ನ ಸಂಪತ್ತನ್ನೂ ಹೆಂಡರು–ಮಕ್ಕಳನ್ನೂ ಉಳಿಸಿಕೊಳ್ಳುವದು ಕಠಿಣವಾಗುತ್ತಿತ್ತು. ಸ್ವದೇಶಕ್ಕೆ ಮುಟ್ಟಿದ ಮೇಲೆ ಅವನು ಪೋಪನ ಎನುರಿನಲ್ಲಿ ಇದಕ್ಕೆ ಪಶ್ಚಾತ್ತಾಪಪಟ್ಟು ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಪುನಃ ಕ್ರಿಸ್ತೀ ಧರ್ಮವನ್ನು ಸ್ವೀಕರಿಸಿದನು. ನಿಕೋಲಕೋಂಟಿಯು ಇತಿಹಾಸಕಾರನಾಗಿದ್ದಿಲ್ಲ, ಅದಕ್ಕಾಗಿ ಅವನು ತನ್ನ ಪ್ರವಾಸದಲ್ಲಿಯ ಸಂಗತಿಯನ್ನು ತಾನಾಗಿಯೇ ಏನೂ ಬರೆದಿಡುವದಿಲ್ಲ. ಆವನ ಪಶ್ಚಾತ್ತಾಪ ಮತ್ತು ಪ್ರಾಯಶ್ಚಿತ್ತ ಕಾಲದಲ್ಲಿ ಪೋಪನ ಗುಮಾಸ್ತನ ಹತ್ತಿರ ಬರೆದುಕೊಟ್ಟಿದ್ದು ಅವನ ಯಾತ್ರೆಯ ಅನುಭವದ ರೂಪವಲ್ಲಿರುವದು. ಹೀಗಿದ್ದರೂ ಆ ವರ್ಣನೆಯು ಅನೇಕ ಸ್ಥಳಗಳಲ್ಲಿ ಸಾರಾಸಾರ ವಿಚಾರದಿಂದ ಅಸತ್ಯವಾದದ್ದೆಂದು ಗೊತ್ತಾಗುವದು. ಆದರೂ ಅದರಲ್ಲಿ ಕೆಲಮಟ್ಟಿಗೆ ಐತಿಹಾಸಿಕ ಸಾಮಗ್ರಿಯು ದೊರೆಯುವಂತಿದೆ.

ಎರಡನೆಯ ಪ್ರವಾಸಿಯು ಕಮಾಲುದ್ದೀನ ಅಬ್ದುಲ್ ರಜಾಕನೆಂಬ ಹೆಸರಿನ ಮುಸಲ್ಮಾನನಿದ್ದನು. ಅವನು ತಿಮೂರನ ಎರಡನೆಯ ಮಗನಾದ ಶಹಾರುಖಮಿರ್ಜಾನ ದರಬಾರದಲ್ಲಿ ಮರ್ಯಾದೆಯ ಸ್ಥಳದಲ್ಲಿ ಇದ್ದನು. ಅಬ್ದುಲ್‌ರಜಾಕನು ರಾಯಭಾರಿಯ ರೂಪದಿಂದ ಭರತಖಂಡಕ್ಕೆ ಬಂದಿದ್ದನು. ಆದರೆ ಇದಕ್ಕೆ ಯೋಗ್ಯವಾದ ಪ್ರಮಾಣಗಳು ದೊರೆಯುವದಿಲ್ಲ. ಐತಿಹಾಸಿಕ ಪ್ರಮಾಣಗಳಿಂದ ಸಿದ್ಧವಾಗುವದೇನೆಂದರೆ ಅತನನ್ನು ಕಾಲಿಕತ್ತದ ಝಾಮೋರಿನ್ನನ ರಾಜ್ಯದಲ್ಲಿ ಇಸ್ಲಾಮದ ಪ್ರಚಾರಕ್ಕಾಗಿ ಕಳಿಸಿಕೊಟ್ಟಿದ್ದಾಗಿತ್ತು. ಅತ್ಯಾಚಾರಿ ತೈಮೂರನ ಭಯವು ಆ ಕಾಲದಲ್ಲಿಯೂ ಒಂದು ರೀತಿಯಲ್ಲಿ ಇನ್ನೂ ಉಳಿದಿತ್ತು. ಆ ಕಾಲದಲ್ಲಿಯೂ ಭರತಖಂಡದ ರಾಜನೀತಿಯು ಹೊರದೇಶದ ಮುಸಲ್ಮಾನ ಬಾದಶಹರ ಮಿತ್ರತ್ವ ಹಾಗೂ ಸಹಾಯವನ್ನು ನೋಡಿ ಹೆಚ್ಚುಕಡಿಮೆಯಾಗುತ್ತಿತ್ತು. ಜೈನಪುರದ ಸುಲ್ತಾನ ಇಬ್ರಾಹೀಮಶಹನು ಆ ಕಾಲದಲ್ಲಿ ಬಂಗಾಲದ ಮೇಲೆ ದಾಳಿಯ ಸೌರಣೆಯನ್ನು ಮಾಡಿದ್ದನು ಅದರಿಂದ ಬಂಗಾಲದಲ್ಲಿ ಶಹಾನಸಿರುದ್ದೀನಶಹನು ಅಂಜಿದವನಾಗಿ ಶಹಾರುಖಮಿರ್ಜಾನನ್ನು ಕರೆದನು. ಆದರೆ ಅಂಶತಃ ಪಾರ್ಸಿಯ ರಾಜದೂತನು ಮುಂದೆ ಬಿದ್ದದರಿಂದ ಸುಲ್ತಾನನು ಏರಾಟದ ವಿಚಾರವನ್ನು ಬಿಟ್ಟುಬಿಟ್ಟನು. ಇದರ ಪ್ರಭಾವವು ಕಾಲಿಕಟದ ಝಾಮೋರಿನ್ನನ ಮೇಲೆಯೂ ಬಿತ್ತು. ಮತ್ತು ಅವನು ಶಹಾರುಖಮಿರ್ಜಾನ ಪ್ರಭಾವದಿಂದ ಲಾಭಹೊಂದುವದಕ್ಕಾಗಿ ನಿಶ್ಚಯಮಾಡಿಕೊಂಡು ತನ್ನ ವತಿಯಿಂದ, ಒಬ್ಬ ಮುಸಲ್ಮಾನ ರಾಯಭಾರಿಯನ್ನು ಕಳಿಸಿಕೊಟ್ಟು, ಶಹಾರುಖಮಿರ್ಜಾನನಿಗೆ 'ಕಾಲಿಕಟದಲ್ಲಿ ವಾಸಿಸುವ ಮುಸಲ್ಮಾನರಿಗೆ ಶಾಹ

ಫಾರಸದ ಹೆಸರಿನ ಪುಸ್ತಕವನ್ನು ಓದಲು ಅನುಮತಿಯನ್ನು ಕೊಡಿರಿ.' ಎಂದು ಪ್ರಾರ್ಥಿಸಿದನು. ಝೂವೋರಿನನು ಶಹನ ಆಳಿಕೆಗೆ ಒಪ್ಪಿದನೆಂದು ತೋರಿಸುವದೇ ಆ ಪುಸ್ತಕ ಓದುವದನ್ನು ಕೇಳಿದ್ದರ ಅರ್ಥವಾಗಿತ್ತು. ಆದರೆ ಆ ಮಾತು ನಿಜವಾಗಿರಲಿಲ್ಲ; ಇದೊಂದು ಝೂವೋರಿನನ ರಾಜನೀತಿಯ ತಂತ್ರವು; ಮತ್ತು ಈ ತಂತ್ರದಿಂದ ತನ್ನ ವಿರೋಧಿಯು ಸಂಶಯದಲ್ಲಿರಬೇಕೆಂಬದೇ ಅವನ ಉದ್ದೇಶ್ಯವಾಗಿತ್ತು. ಇದು ಝೂವೋರಿನನ ರಾಜನೀತಿಯ ನಡತೆಯಾಗಿತ್ತು. ಮತ್ತು ಅವನು ಈ ತರಹದಿಂದ ತನ್ನ ವಿರೋಧಿಯು ಸಂಶಯದಲ್ಲಿರುವದನ್ನು ಅಪೇಕ್ಷಿಸುತ್ತಿದ್ದನು. ಝೂವೋರಿನನ ಈ ಭಾವವು ಶಹಾರೂಖಮಿರ್ಜಾನನಿಗೆ ಯಾವ ಕೆಲಸಕ್ಕೂಬರುತ್ತಿರಲಿಲ್ಲ. ಆದರೆ ಕಾಲಿಕಟದ ಇಸ್ಲಾಮ ಮತಾನುಯಾಯಿ ರಾಯಭಾರಿಯ ಪ್ರೇರಣೆಯಿಂದ ಅವನು ಈ ಸಮಯದ ಲಾಭವನ್ನಾಡಿಕೊಂಡು ಧರ್ಮ ಪ್ರಚಾರಾರ್ಥವಾಗಿ ಅಬ್ದುಲ್‌ರಜಾಕನಿಗೆ ನಿಯಮಿಸಿದ್ದಾಯಿತು. ನಿಜವಾಗಿ ಅಬ್ದುಲ್ ರಜಾಕನು ಈ ರೂಪದಿಂದ ದಕ್ಷಿಣದೇಶದಲ್ಲಿ ಬಂದದ್ದಕ್ಕೆ ಯಾವ ಪ್ರಮಾಣಗಳೂ ಇರುವದಿಲ್ಲ. ಅವನು ೧೪೪೨ ಇ. ಯಲ್ಲಿ ಹಿರಾತದಿಂದ ಹೊರಟು, ಎಪ್ರೇಲ ೧೪೪೩ ಇ. ಯಲ್ಲಿ ವಿಜಯನಗರಕ್ಕೆ ಮುಟ್ಟಿದನು. ಈ ವರ್ಷದ ಅಂತ್ಯದಲ್ಲಿ ಅವನು ಸ್ವದೇಶಕ್ಕೆ ತಿರುಗಿಹೋದನು. ಆ ಕಾಲದಲ್ಲಿ. ಎನೆಯ ದೇವರಾಯನ (೧೪೨೩–೧೪೪೬) ಆಳಿಕೆಯಿತ್ತು. ಅಬ್ದುಲ್‌ರಜ್ಜಾಕನು ತನ್ನ ಪ್ರವಾಸದ ವರ್ಣನೆಯನ್ನು ತಾನೇ ಬರೆದ ತಿಮೂರಲೇನ ವಂಶದ ಇತಿಹಾಸ ಗ್ರಂಥವಾದ "ಮತಲಾ ಉಸ್ಸಾ ಆದೀನ"ದಲ್ಲಿ ಬಹಳವಾಗಿ ಕೊಟ್ಟಿರುವನು.

ಮೂರನೆಯ ಪ್ರವಾಸಿಯ ಹೆಸರು "ಅಥಾನಾಟಿಯಾಸನಿಕಿಟನ" ಎಂದಿರುವದು. ಇವನು ರಸಿಯಾದೇಶದ ನಿವಾಸಿಯಾಗಿದ್ದನು. ೧೪೭೪ ಇ. ಯಲ್ಲಿ ಭರತಖಂಡಕ್ಕೆ ಬಂದು ಸುಮಾರು ೪ ವರ್ಷ ದಕ್ಷಿಣ ದೇಶದಲ್ಲಿದ್ದನು. ಈತನು ಕುದುರೆಯ ವ್ಯಾಪಾರ ಮಾಡುತ್ತಿದ್ದನು. ಈತನು ತನ್ನ ಪ್ರವಾಸದ ವರ್ಣನೆಯಲ್ಲಿ ಭರತಖಂಡದಲ್ಲಿಯ ವಾನರ ರಾಜ್ಯದ ವರ್ಣನೆಯನ್ನು ಬಹಳೇ ಮನೋರಂಜಕವಾಗಿ ಕೊಟ್ಟಿರುವನು. ಇದರ ಮೇಲೆ ಈಗಿನ ಐತಿಹಾಸಿಕ ವಿದ್ವಾಂಸರು ವಿಶ್ವಾಸವಿಡಲು ಸಿದ್ಧರಿರುವದಿಲ್ಲ.

ದಕ್ಷಿಣ ಭಾರತದಲ್ಲಿ ಏಕಛತ್ರ ರಾಜ್ಯ ಸಂಬಂಧವಾಗಿ ಇತಿಹಾಸವು ಅಷ್ಟೊಂದು ಆಧಾರವನ್ನು ಕೊಡುವದಿಲ್ಲ. ಬಹಳೇ ಪ್ರಾಚೀನಕಾಲದಿಂದ ಅಲ್ಲಿ ಎಷ್ಟೋ ಸ್ವತಂತ್ರ ರಾಜ್ಯಗಳು ಅಸ್ತಿತ್ವದಲ್ಲಿದ್ದವು. ಸನ್ ೧೩೯೪ ಇ. ಯಲ್ಲಿ ಅಲ್ಲಾಉದ್ದೀನ ಖಿಲಜಿಯು ಆಕ್ರಮಣಮಾಡುವ ಕಾಲದಲ್ಲಿ, ಕೆಳಗೆ ಕಾಣಿಸಿದ ನಾಲ್ಕು ರಾಜವಂಶಗಳು ಅಲ್ಲಿ ರಾಜ್ಯ ಕಾರಭಾರವನ್ನು ಮಾಡುತ್ತಿದ್ದವು.

೧. ಉತ್ತರದಲ್ಲಿ ಮತ್ತು ವಾಯವ್ಯದಲ್ಲಿ ಯಾದವವಂಶವು. ಅದರಿಂದ ಕೊಲ್ಲಾಪುರದ ಸಿಲಹರ ರಾಜವಂಶವು ಹೊರಟಿರುವದು.

೨. ಮಧ್ಯ ಮತ್ತು ಪೂರ್ವದಲ್ಲಿ ವರಂಗಲದ ಕಾಕತ್ಯರು.

೩. ದ್ವಾರಸಮುದ್ರದ ಹೊಯಸಲ ರಾಜವಂಶವು. ಅವರ ಆಳಿಕೆಯು ಕೃಷ್ಣಾ ಮತ್ತು ಕಾವೇರಿಯ ಕೆಳಗಿನ ಭೂಭಾಗದಲ್ಲಿ ಸಮುದ್ರದ ಒಂದು ತಟದಿಂದ ಮತ್ತೊಂದು ತಟದವರೆಗೆ ನಡೆಯುತ್ತಿತ್ತು.

೪. ಮದುರೆಯ ಪಾಂಡ್ಯರು, ಅವರ ಆಳಿಕೆಯು ಕಾವೇರಿಯ ದಡದ ಯಾವತ್ತು ಉಳಿದ ಭಾಗದ ಮೇಲಿತ್ತು. ಚೋಳರನ್ನು ಇವರು ಗೆದ್ದಿದ್ದರು. ಮತ್ತು ಕೇರಲವೂ ಹೆಚ್ಚುಕಡಿಮೆ ಮಾನದಿಂದ ಇವರ ಸ್ವಾಧೀನತೆಯಒಪ್ಪಿಕೊಂಡಿತ್ತು.

ಈ ಸಾಮ್ರಾಜ್ಯಗಳಲ್ಲಿ ಕ್ರಮವಾಗಿ ಮರಾಠಿ, ತೆಲಗು, ಕನ್ನಡ ಮತ್ತು ತಮಿಳ ಭಾಷೆಗಳು ನಡೆಯುತ್ತಿದ್ದವು. ಇದರಿಂದ ಗೊತ್ತಾಗುವದೇನಂದರೆ ಈ ಭಾಷೆಗಳ ರೂಪರೇಖೆಯು ಹದಿಮೂರನೆಯ ಶತಮಾನದಲ್ಲಿಯೇ ಆಗಿಹೋಗಿತ್ತು. ಈ ನಾಲ್ಕು ರಾಜ್ಯಗಳು ಪರಸ್ಪರವಾಗಿ ಜಗಳಾಡುತ್ತಿದ್ದವು. ಬಹುತರವಾಗಿ ಜಯಾಪಜಯದೊಡಸೆಯೇ ರಾಜ್ಯಗಳಮೇರೆಯಲ್ಲಿಯೂ ಹೆಚ್ಚುಕಡಿಮೆಯಾಗುತ್ತಿತ್ತು. ಹದಿನಾಲ್ಕನೆಯ ಶತಮಾನದಲ್ಲಿ ಈ ನಾಲ್ಕು ರಾಜ್ಯಗಳು ಮುಸಲ್ಮಾನರ ಕೈಕೆಳಗೆ ಬಂದವು. ಆದರೆ ಕಾಕತೀಯ ರಾಜವಂಶವು ಹದಿನೈದನೆಯ ಶತಮಾನದ ಪ್ರಾರಂಭದವರೆಗೆ ಕಾಳಗವಾಡುತ್ತ ನಡೆದಿತ್ತು. ದಕ್ಷಿಣದ ವಾಯವ್ಯ ಮತ್ತು ಮಧ್ಯಭಾಗಗಳು ೧೩೪೭ರಲ್ಲಿ ಬಹಮನೀರಾಜ್ಯವು ಸ್ಥಾಪಿತವಾದ್ದರಿಂದ ಪಾರತಂತ್ರ್ಯಹೊಂದಿ ಹಿಂದುಗಳ ಕೈಯಿಂದ ಹೋದದ್ದಾಯಿತು. ಒಡಿಸಾದ ಗಂಗ ಮತ್ತು ಕೋಂಡವಿಡದ ರೇಡಿಯು ಸುಮಾರು ಒಂದು ಶತಮಾನವು ಮತ್ತು ಆ ವಿರೋಧಕ್ಕಾಗಿ ಶೌರ್ಯತನದಿಂದ ನಡಿಸಿದ್ದಾಯಿತು. ಅದರಿಂದ ಕಾಕತೀಯರೂ ಸಾಗಿಸಿದರು. ಕೇರಲದ ಸಣ್ಣ ಸಣ್ಣ ರಾಜ್ಯಗಳು ಮತ್ತೆ ಪ್ರಾರಂಭಿಸಿದವು. ಯಾಕಂದರೆ ಇಸ್ಲಾಮಿಯರ ದಾಳಿಯು ಅಲ್ಲಿಯವರೆಗೆ ಮುಟ್ಟಿದ್ದಿಲ್ಲ. ಹದಿನೈದನೇ ಶತಮಾನದ ಅಂತ್ಯದಲ್ಲಿ ದಕ್ಷಿಣ ಹಿಂದುಸ್ತಾನದಲ್ಲಿ ಎರಡು ಪ್ರಮುಖರಾಜ್ಯಗಳು ಇದ್ದವು. ಒಂದು ಬಹಮನೀರಾಜ್ಯವು ಎರಡನೆಯದು ವಿಜಯನಗರ ರಾಜ್ಯವು. ಇದನ್ನು ಹೊಯಿಸಾಲ ಬಲ್ಲಾಳರಾಜ್ಯದ ತಳಹದಿಯ ಮೇಲೆ ಈ ವಂಶದ ಒಬ್ಬ ಪುರುಷನು ೧೩೩೬ನೆ ಇ. ಯಲ್ಲಿ ಸ್ಥಾಪಿಸಿದ್ದನು. ಕಾಲಿಕತ್ತದಿಂದ ಸಿಂಹಳದವರೆಗೆ ತುಸು ಭೂಭಾಗವನ್ನು ಳಿದು ವಿಜಯನಗರ ಸಾಮ್ರಾಜ್ಯದ ಪತಾಕೆಯು ಕಾವೇರೀ ತುಂಗಭದ್ರಾ ನದಿಗಳ ನಡುವಿನ ಯಾವತ್ತೂ ದಕ್ಷಿಣ ದೇಶದ ಮೇಲೆ ಬೀಸುತ್ತಿತ್ತು. ಪಶ್ಚಿಮ ದಂಡೆಗೆ ಗೋವೆಯಿಂದ ಮುಂಗಳೂರದವರೆಗಿನ ಪ್ರದೇಶವೂ ಈ ಸಾಮ್ರಾಜ್ಯದಲ್ಲಿಯೇ ಸೇರಿತ್ತು. ಕೃಷ್ಣಾ ಮತ್ತು ತುಂಗಭದ್ರೆಯ ದುಆಬ, ಕೃಷ್ಣಾನದಿಯ ಡೆಲ್ಟಾದ ಮಧ್ಯವರ್ತಿಯ ಭಾಗ, ತೆಲಂಗ ಮತ್ತು ಒಡಿಸಾಗಳಮೇಲೆ ಬಹಮನೀರಾಜ್ಯ ಮತ್ತು ವಿಜಯನಗರ ರಾಜ್ಯಗಳ ಸಂಗ್ರಾಮವು ನಡೆಯುತ್ತಿರುತ್ತಿತ್ತು. ಅಬ್ದುಲ್ ರಜ್ಜಾಕನ ಅಭಿಪ್ರಾಯ

ನೇನಂದರೆ ಆ ಕಾಲದಲ್ಲಿ ಕಾಲಿಕಟದ ಝಮೋರಿನನು ವಿಜಯನಗರದ ಅಂಕಿತನಾಗಿದ್ದಿಲ್ಲ. ಆದರೆ ಅದಕ್ಕೆ ಅಂಜಿದವನಾಗಿದ್ದನೆಂಬದು ನಿಜ. ಮಲಬಾರವನ್ನೂ ಅತನು ವಿಜಯನಗರ ರಾಜ್ಯದ ಸೀಮೆಯನ್ನಾಗಿ ಬರದಿರುವನು. ತಂಜಾವರ ಮತ್ತು ಮಧುರೆಯ ಚೋಳ ಮತ್ತು ಪಾಂಡ್ಯ ರಾಜವಂಶಗಳೂ ವಿಜಯನಗರದ ಆಧೀನತೆಯಲ್ಲಿದ್ದವು. ಈ ಪ್ರಕಾರ ಉತ್ತರ ಮತ್ತು ದಕ್ಷಿಣಕರ್ನಾಟಕ ಪ್ರದೇಶದಲ್ಲಿಯೂ ವಿಜಯನಗರ ಸಾಮ್ರಾಜ್ಯದ ಎಷ್ಟೋ ಭಾಗವು ವಿದ್ಯಮಾನವಾಗಿತ್ತು. ಈ ಎಲ್ಲವೂ ಕಪ್ಪಕೊಡುತ್ತಿದ್ದವು, ಮತ್ತು ಅವಶ್ಯಕತೆಯಿದ್ದರೆ ಸೈನಿಕಸಹಾಯವನ್ನೂ ಕೊಡುತ್ತಿದ್ದವು.

ಮೇಲ್ಕಾಣಿಸಿದ ದಕ್ಷಿಣಭಾಗವನ್ನು ಬಿಟ್ಟು ಸಮಸ್ತ ಮಹಾರಾಷ್ಟ್ರದಲ್ಲಿ ಬಹಮನೀ ಸಾಮ್ರಾಜ್ಯವಿತ್ತು. ಕೃಷ್ಣಾನದಿಯ ದಕ್ಷಿಣಭಾಗವನ್ನು ಬಿಟ್ಟು ಯಾವತ್ತು ತೆಲಂಗಣ ಪ್ರಾಂತದಮೇಲೂ ಇವರ ಅಧಿಕಾರವಿತ್ತು. ಇದರಲ್ಲಿ ಮುಂಬಯಿ ಇಲಾಖೆಯ ಮರಾಠಿಪ್ರಾಂತ, ನಿಜಾಮರಾಜ್ಯ, ವರಾಡ ಮತ್ತು ಉತ್ತರಸರಕಾರ ಇವೂ ಇದ್ದವು. ಹದಿನೈದನೇ ಶತಮಾನದ ಉತ್ತರಾರ್ಧದಲ್ಲಿ ಸದ್ಯದ ಮಧ್ಯಪ್ರಾಂತದ ದಕ್ಷಿಣಭಾಗವೂ ಈ ರಾಜ್ಯದಲ್ಲಿತ್ತು. ವಿಜಯನಗರ ಸಾಮ್ರಾಜ್ಯದಲ್ಲಿ ಕನ್ನಡ ಮತ್ತು ತೆಲಗು ಭಾಷೆಗಳೂ, ಬಾಮನೀರಾಜ್ಯದಲ್ಲಿ ಮರಾಠಿ ಹಾಗು ತೆಲಗು ಭಾಷೆಗಳೂ ಇದ್ದವೆಂದು ಹೇಳಬಹುದು.

ಅಬ್ದುಲ್ ರಜಾಕ ಮತ್ತು ನಿಕಿಟನರು ಬರೆಯುವದೇನಂದರೆ—ನಾವು ನಮ್ಮ ಪ್ರವಾಸದಲ್ಲಿ ಎಲ್ಲೆಡೆಯಲ್ಲಿಯೂ, ಬಹುಜನರಿಂದ ತುಂಬಿತುಳುಕುತ್ತಿರುವ ಮತ್ತು ಸುಖ ಸಮೃದ್ಧಿಶಾಲಿಯಾದ ನಗರ ಮತ್ತು ಗ್ರಾಮಗಳು ಕಂಡುಬರುತ್ತಿದ್ದವು. ಕೊಂಟಿಯು ಬರೆಯುವದೇನಂದರೆ ಈ ಕಾಲದಲ್ಲಿ ಭಯಂಕರ ರೋಗದ (೧೫ನೇ ಶತಮಾನದಲ್ಲಿ ಯುರೋಪಖಂಡದಲ್ಲಿ ಯಾವರೋಗವು ಹಬ್ಬಿತ್ತೋ ಅದರ) ಸುದ್ದಿಯು ಕೂಡ ಭರತಖಂಡದಲ್ಲಿದ್ದಿಲ್ಲ. ದೇಶವೆಲ್ಲ ಬಹುಜನ ಪೂರ್ಣವಿದ್ದಿತೆಂದು ಸಿದ್ಧವಾಗುವದು. ದೇಶದಲ್ಲಿ ಕೃಷಿ, ಶಿಲ್ಪ ಮತ್ತು ವ್ಯವಸಾಯಗಳು ಒಳ್ಳೇ ಉನ್ನತಿಯಲ್ಲಿದ್ದವು. ಆ ಕಾಲದಲ್ಲಿಯ ಪ್ರಜಾಜನರ ಸಮೃದ್ಧಿಯ ಮತ್ತು ಅರಸನ ಪ್ರಜಾವಾತ್ಸಲ್ಯದ ಒಂದು ಉದಾಹರಣೆಯನ್ನು ಕೊಟ್ಟರೆ ಸಮುಯೋಚಿತವಾಗಬಹುದು. ಒಂದು ದಿನ ಸುಲ್ತಾನ ಫಿರೋಜಶಹಾ ಬಾಮನಿ ಬಾದಶಹನು (೧೩೯೭ರಿಂದ ೧೪೨೨ ಇ. ವರೆಗೆ ಆಳಿದನು.) ಎಲ್ಲಿಯೋ ಹೊರಟಿದ್ದನು. ಮಾರ್ಗದಲ್ಲಿ ಓರ್ವ ಭಿಕ್ಷುಕನನ್ನು ನೋಡಿ ಅವನು ಅತನ ಭಿಕ್ಷಾಪಾತ್ರೆಯನ್ನು ನೋಡಲು ಅದರಲ್ಲಿ ಭಿಕ್ಷೆ ದೊರೆತ ತುಸು ಜೋಳದ ಧಾನ್ಯಗಳು ಬಿದ್ದಿದ್ದವು. ಇದರಿಂದ ಸುಲ್ತಾನನಿಗೆ ವಿಚಾರಹುಟ್ಟಿದ್ದೇನಂದರೆ ಜೋಳವು ಅಷ್ಟೊಂದು ಉತ್ತಮ ಭೋಜ್ಯವಲ್ಲ. ಮತ್ತು ಮನುಷ್ಯರಿಗೆ ಇದಕ್ಕೂ ಹೆಚ್ಚಾದ (ಪೌಷ್ಟಿಕ) ಆಹಾರವು ದೊರೆಯಬೇಕು. ಈ ವಿಚಾರವನ್ನು ತಿಳಿದುಕೊಂಡು ತನ್ನ ರಾಜ್ಯದಲ್ಲಿ ಗೋದಿಯ ಭೂಮಿಗೆ ನಿಶೇಷ ವ್ಯವಸ್ಥೆಯನ್ನು ಮಾಡಿ

ದನು. ಮತ್ತು ಭಿಕ್ಷುಕರ ಭಿಕ್ಷಾಪಾತ್ರೆಯಲ್ಲಿಯೂ ಗೋದಿಯು ಬೀಳುವ ವರೆಗೆ ಈ ಕಾರ್ಯದಲ್ಲಿಯೇ ತೊಡಗಿದವನಾದನು. ಗೋದಾವರೀ ಕೃಷ್ಣೆಗಳಿಂದ ತೊಯ್ಯುವ ಪ್ರದೇಶದಲ್ಲಿ, ಬಾವನ್ನೀಕಾಲದ ಜಲಾಶಯಗಳು ಈಗ್ಯೂ ಇರುವವು. ಅವುಗಳ ಸಹಾಯದಿಂದ ಬತ್ತದ ಎರಡನೆಯ ಬೆಳೆಯನ್ನು ಮಾಡಿಕೊಳ್ಳುತ್ತಿದ್ದರು. ಇದರಿಂದ ಈ ಕಾಲದ ರಾಜಕೀಯ ಅಧಿಕಾರಿಗಳ ಯೋಗ್ಯತೆಯು ಪ್ರಕಟವಾಗುವದು. ಈ ಕಾಲದಲ್ಲಿಯೇ ಹಣ್ಣಿನ ತೋಟಗಳನ್ನು ಮಾಡಿದರು. ಮತ್ತು ಬೇದರದಲ್ಲಿ ಕೇಶರದ ಹೊಲದ ವ್ಯವಸ್ಥೆಯನ್ನುಮಾಡಿತ್ತು. ಹದಿನೈದನೇ ಶತಮಾನದಲ್ಲಿ ದಕ್ಷಿಣಹಿಂದುಸ್ತಾನದಿಂದ ಅನೇಕತರದ ಮಸಾಲೆಯೊಡನೆ ರೇಷಿಮೆ, ಮತ್ತು ನೂಲಿನ ತರತರದ ಬಟ್ಟೆಗಳು ದೂರದೇಶಕ್ಕೆ ಹೋಗುತ್ತಿದ್ದವು.

ನಿಕಿಟನನು ಬರೆದಿರುವದೇನಂದರೆ ಬೇದರದ ಪೇಟೆಯಲ್ಲಿ ಒಂದಾದರೂ ವಿದೇಶ ವಸ್ತುವು ಮಾರುತ್ತಿದ್ದಿಲ್ಲ. ಯಾವತ್ತು ವಸ್ತುಗಳು ಸ್ವದೇಶದಲ್ಲಿಯೇ ನಿರ್ಮಿತವಾಗುತ್ತಿದ್ದವು. ಹೊರಗಿನಿಂದ ಕೇವಲ ಕುದುರೆಗಳನ್ನು ಮಾತ್ರ ತರಿಸುತ್ತಿದ್ದರು. ಇದರ ಹೊರ್ತಾಗಿ ಯಾವದೇ ಎರಡನೆಯ ವಸ್ತುವಿನ ಸಲುವಾಗಿ ಹೊರಗಿನವರ ಮೋಹವನ್ನು ನೋಡಬೇಕಾಗುತ್ತಿದ್ದಿಲ್ಲ. ಹೆಚ್ಚಾಗಿ ಜನರು ಅನೇಕ ತರದ ರತ್ನದ ಖಣಿಗಳಲ್ಲಿ ಕೆಲಸಮಾಡುತ್ತಿದ್ದರು. ಮತ್ತು ಶಿಲ್ಪ ಮುಂತಾದ ಕಾರ್ಯಗಳಲ್ಲಿ ತೊಡಗಿರುವರಾಗಿದ್ದರು. ಇದರಿಂದ ಗೊತ್ತಾಗುವದೇನಂದರೆ ಆ ಕಾಲದಲ್ಲಿ ದಕ್ಷಿಣಭಾರತವು ವೈಭವಶಾಲಿಯಾಗಿತ್ತು. ಕೈಂಬೆ, ಟೌಲ, ಉಭೋಲ, ಮುಂಗಳೂರ, ಕಾಲಿಕಟ ಮತ್ತು ಕ್ವಿತಿನ ಈ ಬಂದರಗಳಿಂದ್ಯಬಹಳ ವ್ಯಾಪಾರವಾಗುತ್ತಿತ್ತು. ಅಲ್ಲಿ ಯಾವಾಗಲೂ ಜನದಟ್ಟಣೆಯಿರುತ್ತಿತ್ತು. ಭಾರತೀಯರಲ್ಲಿ ವಿದ್ಯಾಪೂರ್ಣತೆಯಿತ್ತು. ಕೊಂಕಣದ ದಂಯಲ್ಲಿ ವಾಸಿಸುವ ಬಹು ಜನರು ತಮ್ಮ ಸ್ವತಂತ್ರ ಹಡಗಗಳನ್ನಿಟ್ಟಿದ್ದರು. ಮತ್ತು ಇವರಲ್ಲಿಯು ಕೆಲಜನರು ಸಮುದ್ರಗಳ್ಳರ ಕೆಲಸವನ್ನೂ ಮಾಡುತ್ತಿದ್ದರು. ಅವರಿಗೆ ಅರಬೀ ಸಮುದ್ರದೊಳಗಿನ ವ್ಯಾಪಾರಸ್ಥರು ಅಂಜುತ್ತಿದ್ದರು. ಗಿಲನೆಯ ಶತಮಾನದಲ್ಲಿ ಅಂಗ್ರೆ ಎಂಬ ಹೆಸರಿನ ಇವರ ಒಬ್ಬ ಸರದಾರನು ಇಸ್ಟ ಇಂಡಿಯಾ ಕಂಪನಿಯಿಂದ ಅರಬೀ ಮುದ್ರದ ಅಧಿಪತ್ಯಕ್ಕಾಗಿ ದೊಡ್ಡ ಸಂಗ್ರಾಮವನ್ನು ಮಾಡುವಷ್ಟು ಪ್ರಬಲನಾಗಿದ್ದನು.

ಕಾಲಿಕಟದಲ್ಲಿ ದೊಡ್ಡ ಗೋದಿಗಳಿದ್ದವು. ಮತ್ತು ನಿಶ್ಚಿತ ದಲಾಲಿಯಿಂದ ವ್ಯಾಪಾರವು ನಡೆಯುವಂತೆ ವ್ಯವಸ್ಥೆಯಿತ್ತು. ಇದರಿಂದಆ ಕಾಲದ ವ್ಯಾಪಾರವು ದೊಡ್ಡ ಪ್ರಮಾಣದಲ್ಲಿತ್ತೆಂದು ಗೊತ್ತಾಗುವದು. ಕೊಂಟೆಯು ಭಾರತೀಯ ಹಡಗದ ವರ್ಣನೆಯನ್ನು ಮಾಡುತ್ತ ಬರೆಯುವದೇನಂದರೆ ಯುರೋಪದ ಹಡಗಕ್ಕಿಂತಲೂ ಈ ಹಡಗಗಳು ಎಷ್ಟೋ ಚನ್ನಾಗಿರುವವು. ಕೆಲಕೆಲವು ವ್ಯಾಪಾರಸ್ಥರ ಬಳಿಯಲ್ಲಿ ೪೦–೫೦ ಹಡಗಗಳಿದ್ದವು. ಪ್ರತಿಯೊಂದು ಹಡಗದ ಬೆಲೆಯು ಬಹುತರವಾಗಿ ೫೦ ಸಾವಿರಬಂಗಾರದನಾಣ್ಯಗಳಾಗಿದ್ದವು. ಮಾಲು ವಿಕ್ರಯವಾದ ನಂತರ ನೂರಕ್ಕೆ ೨೫ ದಲಾಲಿಯ

ವಸೂಲು ಮಾಡಲ್ಪಡುತ್ತಿತ್ತು. ಒಂದು ವೇಳೆ ಯಾವದೇ ಕಾರಣದಿಂದ ಜೀನಸು ಮಾರದಿದ್ದರೆ ಏನೂ ದಲಾಲಿಯನ್ನು ತೆಗೆದುಕೊಳ್ಳುತ್ತಿರಲಿಲ್ಲ. ಈ ಕಾಲದಲ್ಲಿ ಕಾಲಿ ಕಟದಹೊರ್ತಾಗಿ ಅನ್ನ ಸ್ಥಳಗಳಲ್ಲಿ ಕಾಗದವು ದೊರೆಯುತ್ತಿದ್ದಿಲ್ಲ. ಮತ್ತು ಅದರ ಕೆಲಸವನ್ನು ಎಲೆಗಳಿಂದ ಮಾಡುತ್ತಿದ್ದರು. ಅರಿವೆಯ ಮೇಲೂ ಬರೆಯುತ್ತಿದ್ದರು.

ಮೂರೂ ಪ್ರವಾಸಿಕರಲ್ಲಿ ಯಾರೂ ಆ ಕಾಲದಲ್ಲಿ ಹಬ್ಬಿದ ಯಾವ ರೋಗದ ಉಲ್ಲೇಖವನ್ನೂ ಮಾಡಿರುವದಿಲ್ಲ. ಇಷ್ಟುವರ್ಷಗಳ ವರೆಗೆ ಭ್ರಮಣ ಮಾಡುತ್ತಿದ್ದರೂ ಯಾವದೇ ಸಾಂಕ್ರಾಮಿಕ ರೋಗಗಳು ಅವರಿಗೆಕಂಡುಬರಲಿಲ್ಲ. ಇದರ ಅರ್ಥವೇನೆಂದರೆ ಆ ಕಾಲದಲ್ಲಿ ಜನತೆಯ ಸ್ವಾಸ್ಥ್ಯೆಯು ಬಹಳೇ ಚನ್ನಾಗಿತ್ತು, ಮತ್ತು ಸ್ವಚ್ಛತೆಯ ಬಗ್ಗೆ ಎಚ್ಚರಿಕೆಯೂ ಇರುತ್ತಿತ್ತು. ಆ ಕಾಲದಲ್ಲಿ ಕಳವಾದ ಜೀನಸನ್ನು ತಂದೊಪ್ಪಿಸಬೇಕು. ಇಲ್ಲವೆ ಕಳವಾದ ಜೀನಸಿನ ಬೆಲೆಯನ್ನು ಕೊಡಬೇಕು ಈ ಶರ್ತುಗಳಿಂದ ಕಾಲದಲ್ಲಿ ಚೌಕಿದಾರರ ನೇಮಣೂಕಿಯಾಗುತ್ತಿತ್ತು. ಮೇಲೆ ಹೇಳಿದಂತೆ ಆ ಸಮಯದಲ್ಲಿ ಕೆಲವು ಸ್ಥಳಗಳಲ್ಲಿ ರತ್ನದ ಖಣಿಗಳಿದ್ದವು. ಅದರಿಂದ ಬಹಳೇ ಜನರು ಕೆಲಸದಲ್ಲಿ ತೊಡಗುತ್ತಿದ್ದರು. ಪ್ರವಾಸಿಗಳು ಈ ವಿಷಯವಾಗಿ ವಿಸ್ತಾರವಾಗಿ ವರ್ಣನೆಯನ್ನು ಮಾಡಿರುವರು. ಕೊಹಿನೂರು ರತ್ನವು ಗೋವಲಕೊಂಡದ ಖಣಿಯಲ್ಲಿಯೇ ದೊರಿತದ್ದೆಂಬದನ್ನು ಹೇಳುವ ಅವಶ್ಯಕತೆಯಿಲ್ಲ. ಅಬ್ದುಲ್‌ರಜಾಕನು ಬರೆದಿರುವದೇನದಂರೆ ವಿಜಯನಗರದಲ್ಲಿ ರತ್ನಗಳ ಕ್ರಯವಿಕ್ರಯಕ್ಕಾಗಿ ಒಂದು ಬೇರೆ ಪೇಟೆಯೇ ತಯಾರಿಸಲ್ಪಟ್ಟಿತ್ತು.

ಆ ಕಾಲದಲ್ಲಿ ಹೊನ್ನು, ಟಂಕೆ ಮೊದಲಾದ ಹೆಸರಿನ ಬಂಗಾರ, ಬೆಳ್ಳಿ ತಾಮ್ರಗಳನ್ನು ನಾಣ್ಯಗಳು ನಡೆಯುತ್ತಿದ್ದವು. ಟಂಕಸಾಲೆಯಲ್ಲಿ ಬಂಗಾರವನ್ನು ತೆಗೆದು ಕೊಂಡು ಹೋದವರಿಗೆ ಸರಕಾರೀ ಖರ್ಚಿನಿಂದ ಸಿಕ್ಕೆಯನ್ನು ಹೊಡೆದುಕೊಡುತ್ತಿದ್ದರು. ಆನೆಗಳನ್ನು ಹಿಡಿಯುವದೂ ಸಾಕುವದೂ ಬಹಳೇ ಭರದಿಂದ ನಡೆಯುತ್ತಿತ್ತು. ಈ ಪ್ರವಾಸಿಗಳು ವಿಜಯನಗರ ಮತ್ತು ಬೇದರದ ವರ್ಣನೆಯನ್ನು ಮಾಡುವಾಗ ದಕ್ಷಿಣ ಭಾರತವಾಸಿಗಳು ಆ ಕಾಲದಲ್ಲಿ ಅತ್ಯಂತ ಸಮೃದ್ಧಿಶಾಲಿಯಾಗಿದ್ದರೆಂದು ಬರೆದಿರುವರು.

ಕೊಂಟೇಯು ಬರೆಯುವದೇನಂದರೆ ವಿಜಯನಗರವು ಸುಮಾರು ೬೦ ಮೈಲು ಪರಿಘದಲ್ಲಿ ವ್ಯಾಪಿಸಿರುವದು. ಅಬ್ದುಲ್ ರಜಾಕನು ಬರೆಯುವದೇನಂದರೆ ವಿಜಯನಗರದ ಉತ್ತರ ದ್ವಾರವು ದಕ್ಷಿಣದಿಂದ ಎಂಟು ಮೈಲು ಅಂತರದ ಮೇಲಿತ್ತು. ನಗರದ ರಕ್ಷಣೆಗಾಗಿ ಏಳು ಪ್ರಾಕಾರಗಳು ತಯಾರಿಸಲ್ಪಟ್ಟಿದ್ದವು. ಮೊದಲಿನ ಮೂರು ಪ್ರಾಕಾರಗಳಲ್ಲಿ ತೋಟ ಉಪವನ ಮತ್ತು ನಾನಾತರದ ಬೈಲು (ಆಟ) ಪ್ರದೇಶಗಳು ಇದ್ದವು. ಅವು ಒಂದು ದೊಡ್ಡ ಕೆರೆಯಿಂದ ನೀರುನ್ನುಣ್ಣುತ್ತಿದ್ದವು. ಕೆಳಭಾಗದಲ್ಲಿ ಕೋಟೆಯಿತ್ತು. ಅದರ ಮಧ್ಯಭಾಗದಲ್ಲಿ ರಾಜಪ್ರಾಸಾದ, ಟಂಕಸಾಲೆ ಮಂತ್ರಿ ಮುಂಡಲದ ಕಚೇರಿ, ಮುಖ್ಯ ನ್ಯಾಯಾಲಯ ಮತ್ತು ಮುಖ್ಯಾಧಿಕಾರಿಗಳ ಆಫೀಸುಗಳಿದ್ದವು.

ಶಹರದ ಒಣಿ ಹಾಗು ಪೇಟೆಗಳಲ್ಲಿ ಕಲ್ಲಿನಿಂದ ಕಟ್ಟಿದ ಅನೇಕ ಕಾಲುವೆಗಳು ಹರಿಯುತ್ತಿದ್ದವು. ಪ್ರತಿಯೊಂದು ವಸ್ತುವಿನ ಮಾರಾಟದ ಬಗ್ಗೆ ಒಂದು ಪೇಟೆಯು ಇರುತ್ತಿತ್ತು. ರತ್ನ ಹಾಗೂ ಮುತ್ತುಗಳಿಗಾಗಿ ಪ್ರತ್ಯೇಕವಾದ ಒಂದು ಪೇಟೆಯಿತ್ತು. ಒಂದು ಪೇಟೆಯಲ್ಲಿ ಕೇವಲ ಹೂವುಗಳೇ ಮಾರಲ್ಪಡುತ್ತಿದ್ದವು. ಶಾಹೀಮೊಹಲ್ಲೆಯ ಎಡಭಾಗದಲ್ಲಿ ಕೌನ್ಸಿಲಭವನ, ಪ್ರಧಾನ ಮಂತ್ರಿಯ ಕಚೇರಿ ಮತ್ತು ನ್ಯಾಯಾಸ್ಥಾನಗಳಿದ್ದವು. ಅವುಗಳ ಹಿಂದೆ ಈ ಅಧಿಕಾರಿಗಳು ವಾಸಿಸುವ ಗೃಹಗಳನ್ನು ನಿರ್ಮಿಸಿದ್ದರು. ಬೀದಿಯ ಬಲಭಾಗದಲ್ಲಿ ಟಂಕಸಾಲೆಯಿತ್ತು. ಪ್ರತಿಯೊಂದು ಪ್ರಾಕಾರವು ಅಥವಾ ಕೋಟೆಯು ಒಂದು ಸ್ವತಂತ್ರ ನಗರದ ರೂಪದಲ್ಲಿತ್ತು. ಶಹರದ ಅವಶೇಷಗಳು ಮಾತ್ರ ಈಗಲೂ ಗೋಚರವಾಗುವವು. ಅದರಿಂದ ಇದರ ವಿಸ್ತಾರದ ಕಲ್ಪನೆಯಾಗುವದು. ವಿಜಯನಗರವು ೧೩೨೬ ಇ. ಯಲ್ಲಿ ಸ್ಥಾಪಿಸಲ್ಪಟ್ಟಿತ್ತು. ಆದರೆ ಸುಮಾರು ಎರಡುನೂರು ವರ್ಷಗಳಿಗಿಂತ ಹೆಚ್ಚಾಗಿ ಬಾಳಿ ನಂತರ ೧೫೬೫ ಇ. ಯಲ್ಲಿ ಪೂರ್ಣ ನಷ್ಟವಾಯಿತು.

ಹದಿನೈದನೇ ಶತಮಾನದಲ್ಲಿ ದಕ್ಷಿಣ ಹಿಂದುಸ್ಥಾನದಲ್ಲಿ ಹಿಂದು ಹಾಗು ಇಸ್ಲಾಮ ಧರ್ಮಗಳು ಮುಖ್ಯ ಧರ್ಮಗಳಾಗಿದ್ದವು. ಸಮುದ್ರತಟದಲ್ಲಿ ತುಸುಮಟ್ಟಿಗೆ ಯಹೂದಿ ಮತ್ತು ಈಸಾಯಿಗಳೂ ಇದ್ದರು. ಹಿಂದುಗಳಲ್ಲಿ ಬೌದ್ಧಮತದ ಲೋಪವಾಗಿ ಹೋಗಿತ್ತು. ಮತ್ತು ಜೈನಮತದ ಮೊದಲಿನ ಪ್ರಭಾವವು ಉಳಿದಿದ್ದಿಲ್ಲ. ಜೈನಮತದ ಸ್ಥಾನವನ್ನು ವಶ್ಚಿಮೋತ್ತರಗಳಲ್ಲಿ ಲಿಂಗವಂತ ಮತವೂ ಮತ್ತು ದಕ್ಷಿಣ ಪೂರ್ವದಲ್ಲಿ ವೈಷ್ಣವ ಮತವೂ ಆಕ್ರಮಿಸಿದ್ದವು.

ವ್ಯಾಪಾರದ ಮೇಲೆ ಹಿಂದೂ ಅರಸರ ಪೂರ್ಣ ಅಧಿಕಾರವಿತ್ತು. ಹದಿನೈದನೇ ಶತಮಾನದ ಮೊದಲೇ ಸಮುದ್ರಮಾರ್ಗದಿಂದ ಅರಬಸ್ಥಾನ ಮತ್ತು ಇರಾಣದ ವ್ಯಾಪಾರಸ್ಥರು ದಕ್ಷಿಣದಲ್ಲಿ ಮುಟ್ಟಿದ್ದರು. ಹಿಂದೂರಾಜರು ಅವರ ಸಂಗಡ ಚಲೋ ರೀತಿಯಿಂದ ಇರುತ್ತಿದ್ದರು. ಎಲ್ಲಿ ಬಂದರದ ಸವಿೂಪದಲ್ಲಿ ಅವರ ವಾಸಸ್ಥಳವಿತ್ತೊ ಅಲ್ಲಿ ಅವರೇ ಮಾಡಿದ ಕಾಯಿದೆಯು ನಡೆಯುತ್ತಿತ್ತು. ಮತ್ತು ಅವರಲ್ಲಿಯೇ ಕಾಜಿ ಮೊದಲಾದವರನ್ನು ಮಾಡಿಕೊಳ್ಳುತ್ತಿದ್ದರು. ಒಂದು ರೀತಿಯಿಂದ ವ್ಯಾಪಾರದ ಎಲ್ಲ ಕಾರಭಾರವನ್ನು ಅವರ ಮೇಲೆಯೇ ಬಿಟ್ಟುಬಿಟ್ಟಿದ್ದರು. ಹದಿನೈದನೇ ಶತಮಾನದ ಮೊದಲೇ ಹಿಂದೂ ರಾಜರು ಮುಸಲ್ಮಾನರಿಗೆ ಮುಲ್ಕೀ ಹಾಗು ದಂಡಿನ ವಿಭಾಗದಲ್ಲಿ ನೌಕರಿಯನ್ನು ಕೊಡಲು ಪ್ರಾರಂಭಿಸಿದ್ದರು. ವಿಜಯನಗರದ ಅರಸರು ತಮ್ಮ ಇಸ್ಲಾಮ ಪ್ರಜೆಗಳ ಹಾಗು ಇಸ್ಲಾಮ ನೌಕರರಿಗಾಗಿ ಸರಕಾರೀ ಖರ್ಚಿನಿಂದ ಒಂದು ಮಸೀದೆಯನ್ನು ಕಟ್ಟಿಸಿದ್ದರು. ಮತ್ತು ತಮ್ಮ ಮುಂದೆ ಅದರದೊಡನೆ ಒಂದು ಚೌಕದಲ್ಲಿ ಕುರಾಣವನ್ನು ನೋಡುವದಕ್ಕಾಗಿ ಇಟ್ಟಿದ್ದರು. ಅದರಿಂದ ಮುಸಲ್ಮಾನ ಧರ್ಮದ ಬಗ್ಗೆ ಅವರದು ಹಿಂದುಧರ್ಮದಷ್ಟೇ ಲಕ್ಷವಿರುವದೆಂಬದು ತಿಳಿಯುವದು. ಹದಿನೈದನೆ

ಶತಮಾನದ ದಕ್ಷಿಣ ಹಿಂದುಸ್ತಾನದ ಒಂದು ನೋಟವಿರುವದು. ಇದರ ವಿಷಯವಾಗಿ ಮತ್ತು ತುಸು ಹೆಚ್ಚುಕಡಿಮೆ ಹೇಳಬಹುದಾಗಿದೆ. ಆದರೆ ಆ ಕಾಲದ ಪರಿಸ್ಥಿತಿಯನ್ನು ಸದ್ಯದ ಸ್ಥಿತಿಗೆ ತುಲನೆಮಾಡುವದಕ್ಕಾಗಿ ಈ ಸಾಮಗ್ರಿಯು ಪರ್ಯಾಪ್ತವಾಗಬಹುದು.

ಚಿಕ್ಕಮಕ್ಕಳಿಗೆ ಹೇಳುವ ಕಥೆಗಳು

(ಲೇಖಕ:—ಭೀಮಾಜಿ ಕೃಷ್ಣ ಕುಂದನಾಡಕರ, ಅ ಮೊಸ್ತರ ಕಚೇರಿ.)

ಚಿಕ್ಕಮಕ್ಕಳಿಗೆ ಕಥೆ ಕೇಳುವದೆಂದರೆ, ತುಂಬಾ ಪ್ರೀತಿ. ಅವರು ಒಂದು ವೇಳೆ ಊಟವನ್ನಾದರೂ, ಬಿಡುವರು; ನಿದ್ದೆಯನ್ನಾದರೂ ಕೆಡುವರು; ಆದರೆ ಕಥೆ ಹೇಳುವ ಸ್ಥಳದಿಂದ ಬಿಟ್ಟೇಳರು. ಮತ್ತು ಅವರಿಗೆ ಯಾರಾದರೂ ಕಥೆ ಹೇಳುತ್ತ ಅರ್ಧಕ್ಕೇ ನಿಲ್ಲಿಸಿಬಿಟ್ಟರೆ ಪೂರ್ಣವಾಗಿ ಹೇಳಬೇಕೆಂದು ಬೇಡುವರು ಇಲ್ಲದಿದ್ದರೆ ಕಾಡುವರು. ಕಡೆಗೆ ಅತ್ತುಬಿಡುವರು.

ಮನೆಯಲ್ಲಿ ಅಜ್ಜಿಯು ಸುಮ್ಮನೆ ಕುಳಿತಿದ್ದರೆ ಮನೆಯ ಮಕ್ಕಳು ಅವಳ ಬಳಿಗೆ ಬಂದು, "ಅಜ್ಜಿ, ಅಜ್ಜಿ" ನಮಗೊಂದು ಚಲೋ ಕಥೆ ಹೇಳುವಿಯಾ? ಎಂದು ದುಂಬಾಲು ಬೀಳುವರು. ಆಗ ಅವಳು ಮಕ್ಕಳಿಗೆ ಕಥೆ ಹೇಳಲಾರಂಭಿಸಿದರೆ, ಅವರು ಗದ್ದಲವನ್ನು ನೂಡದೆ ಅವಳ ಮುಖವನ್ನೂ ಹಾವಭಾವಗಳನ್ನೂ ನೋಡುತ್ತ ಕಥೆಯ ಸ್ವಾರಸ್ಯವನ್ನು ಕುಡಿಯುತ್ತಾ ಆನಂದಪರವಶರಾಗುವರು.

ಇನ್ನು ಕಥೆಗಾರನು ಯಾವ ಕಥೆಯನ್ನಾದರೂ, ಗೊತ್ತು ಗುರಿ ಇಲ್ಲದೆ; ಅಥವಾ ಉದ್ದೇಶವಿಲ್ಲದೆ ಹೇಳಬಾರದು. ನಾವು ಹೇಳುವ ಕಥೆಗಳು ಮಕ್ಕಳ ವಯಸ್ಸಿಗೆ ಅನುಗುಣವಾಗಿರಬೇಕು. ಮತ್ತು ಆ ಕಥೆಗಳಲ್ಲಿ ಚಿಕ್ಕಮಕ್ಕಳ ಚಿಕ್ಕ ಪ್ರಪಂಚದಲ್ಲಿ ಅವರು ಪ್ರತಿನಿತ್ಯವೂ, ಉಪಯೋಗಿಸುವ ಶಬ್ದಗಳೂ ಮಾತುಗಳೂ ಇರತಕ್ಕದ್ದು. ಅಂದರೆ ಪುಟ್ಟಮಕ್ಕಳ ಚಿಕ್ಕ ವ್ಯವಹಾರದಲ್ಲಿ ಬರುವ ಮಾತುಗಳ ಜತೆಯಲ್ಲಿ ಕೆಲವು ಹೊಸ ಶಬ್ದಗಳನ್ನು ಇಟ್ಟು; ಚಿಕ್ಕ ವಾಕ್ಯಗಳ ಮೂಲಕ ಕಥೆಗಳನ್ನು ಹೇಳುವದರಿಂದ ಅವರಿಗೆ ಕಥೆಯಲ್ಲಿ ಬರುವ ಹೊಸಶಬ್ದಗಳೂ: ಪದ ಪ್ರಯೋಗಗಳೂ ತಿಳಿದು ಅವರು ಅವೇ ಕಥೆಗಳನ್ನು ತಿರುಗಿ ಹೇಳುವಾಗ ಅವೇ ಮಾತುಗಳನ್ನು ಇಟ್ಟು ಹೇಳುವದರಿಂದ ಅವರಿಗೆ ಭಾಷಾಭಿವೃದ್ಧಿಯಾಗುವದು.

ಹೀಗೆ ಕಥೆಯ ಪಾಠದಲ್ಲಿ ಅವರು ಹೆಚ್ಚು ಹೆಚ್ಚು ಹೊಸಶಬ್ದಗಳನ್ನೂ ಸುಲಭವಾದ ಪದಪ್ರಯೋಗಗಳನ್ನೂ ಕಲಿತುಕೊಳ್ಳುವದರಿಂದ ಅವರಿಗೆ ಶಬ್ದ ಪ್ರಯೋ

ಗಗಳ ಬಾಹುಲ್ಯ ಉಂಟಾಗಿ ತಮ್ಮ ಮನಸಿನ ಅಭಿಪ್ರಾಯಗಳನ್ನು ನಿರಾಯಾಸವಾಗಿ ಬೇರೆಯವರಿಗೆ ತಿಳಿಸಲು ಸಮರ್ಥರಾಗುವರು. ಶಿಕ್ಷಕನು ಕಥೆಯಲ್ಲಿ ಸಂದರ್ಭಾನುಸಾರವಾಗಿ ವರ್ಣನೆಯಿಟ್ಟು ಹೇಳುವದರಿಂದ ಅವರ ಜ್ಞಾಪಕ ಶಕ್ತಿಯೂ, ಕಲ್ಪನಾ ಶಕ್ತಿಯೂ, ಅರಳುವವು. ಇದಲ್ಲದೆ ಅದರಲ್ಲಿ ಅಡಗಿರುವ ಬುದ್ಧಿಯ ಮಾತುಗಳನ್ನು ತಾವಾಗಿಯೇ ತಿಳಿದುಕೊಳ್ಳುವರು.

ಮಕ್ಕಳ ಕಥೆಗಳಲ್ಲಿ ಹೆಚ್ಚು ಹೆಸರುಗಳಾಗಲಿ ಅವರು ತಿಳಕೊಳ್ಳಲಿಕ್ಕೆ ಕಷ್ಟವಾದ ಸಂಗತಿಗಳಾಗಲಿ, ಇರಬಾರದು. ಅಂದರೆ ಅವರ ಅನುಭವದೊಳಗಿರುವ ವಿಷಯಗಳೇ ಇರತಕ್ಕದ್ದು. ಮತ್ತು ಅನೇಕ ವಿಷಯಗಳನ್ನು ಒಳಕೊಂಡಿರಬಾರದು. ಮತ್ತು ಮಕ್ಕಳ ಪರಿಚಯದಲ್ಲಿರುವ ವಿಷಯಗಳಿರುವದು ಒಳ್ಳೇದು. "ರಾಮಣ್ಣಾ ರಾಮಣ್ಣಾ ಮಾತಾಡೊ" "ಹುಲಿಯಣ್ಣಾ ಹುಲಿಯಣ್ಣಾ ಎಲ್ಲಿಗೆ ಹೋಗಿದ್ದಿ" ಹೀಗೆ ಪುನರುಕ್ತಿಗಳು ಕಥೆಯಲ್ಲಿ ಬರುವದು ಉತ್ತಮವು. ಮತ್ತು ಅಲ್ಲಲ್ಲಿ ಸಂಭಾಷಣಾ ರೂಪ ತರತಕ್ಕದ್ದು.

"ಒಂದು ಊರಲ್ಲಿ ಒಬ್ಬ ಮುದಿಕಿ ಇದ್ದಳು ಅವಳಿಗೆ ಕಣ್ಣು ಕಟ್ಟಿನ ವಿದ್ಯೆಯು ಬರುತ್ತಿತ್ತು. ಅವಳ ಹತ್ತರ ಒಂದು ಮಂತ್ರದ ಬಡಿಗೆ ಇತ್ತು. ಆ ಬಡಿಗೆಯಿಂದ ಇಲಿಯನ್ನು ಮುಟ್ಟಿದರೆ ಹುಲಿಯಾಗುತ್ತಿತ್ತು. ಹುಲಿಯನ್ನು ಮುಟ್ಟಿದರೆ ಇಲಿಯಾಗುತ್ತಿತ್ತು. ಅದನ್ನು ನಾಡಿನಲ್ಲಿ ಒಯ್ದರೆ ಕಾಡು ಆಗುವದು. ಕಾಡಿನಲ್ಲಿ ಒಯ್ದರೆ ನಾಡಾಗುವದು"— ಇದರಂತೆ "ಒಂದು ದೊಡ್ಡ ಗುಡ್ಡ; ಆ ಗುಡ್ಡದ ಮೇಲೆ ಒಂದು ದೊಡ್ಡಮನೆ. ಆ ಮನೆಯಲ್ಲಿ ಒಂದು ದೊಡ್ಡ ರಾಕ್ಷಸ ಇರುತ್ತಿತ್ತು. ಅದು ಒಂದು ದಿವಸ ಬಾಗಿಲಿಗೆ ಕೀಲೀ ಹಾಕಿಕೊಂಡು ಆಹಾರಕ್ಕಾಗಿ ಆಡವಿಯೊಳಗೆ ಹೋಗಿತ್ತು. ಬೇಟೆಯಾಡಿ ತಿರುಗಿ ಮನೆಯ ಬಾಗಿಲಿಗೆ ಬಂದು "ಬಾಗಿಲಾ! ಬಾಗಿಲಾ!! ಬಾಗಿಲಾ ತೆರಿ" ಎಂದು ಕೂಗಿತು; ಕೂಡಲೇ ಹಾಕಿದ ಕೀಲಿಯು ಕೆಳಕ್ಕೆ ಬಿದ್ದು ಬಾಗಿಲವು ಧಡಕ್ಕೆಂದು ತೆರೆಯಿತು." ಹೀಗೆ ಮಕ್ಕಳಿಗೆ ಹೇಳುವ ಕಥೆಗಳು ಆಶ್ಚರ್ಯ ಸೂಚಕವಾದ ಅದ್ಭುತ ರಸಗಳುಳ್ಳವಿರಬೇಕು. ಮತ್ತು ಕಥೆಗಳು ದುಃಖದಲ್ಲಿಯೇ ಮುಗಿಸಲ್ಪಡಬಾರದು. ಯಾಕಂದರೆ ಮಕ್ಕಳ ಮನಸ್ಸಿಗೆ ನೋವಾಗುವದು.

ಆರಿಸಿಕೊಂಡ ಕಥೆಯು ದೊಡ್ಡದಿರಬಾರದು. ಅದು ೨೦ ಮಿನಿಟುಗಳಲ್ಲಿ ಮುಗಿಯುವಂಥದಿರಬೇಕು. ಕಥೆಯು ದೊಡ್ಡದಿದ್ದರೆ ಅದು ಬೇಗ ಮುಗಿಯದೆ ಅಷ್ಟಕ್ಕೇ ಉಳಿಯುವದರಿಂದ ಹುಡುಗರ ಅಭಿರುಚಿಯು ಕೆಟ್ಟು ಹೋಗುವದು. ಮತ್ತು ಅವರಿಗೆ ಬೇಸರವಾಗಬಹುದು. ಕಥೆ ಹೇಳುವಾಗ ಹುಡುಗರಿಗೆ ನಡು ನಡುವೆ ಪ್ರಶ್ನೆಮಾಡಬಾರದು. ಕೇಳಿದರೆ ಕಥೆಯ ಸ್ವಾರಸ್ಯವೇ ಕೆಟ್ಟು ಹೋಗುವದು.

ಶಿಕ್ಷಕನು ಕಥೆ ಹೇಳುವಾಗ ಸ್ವರಪಲ್ಲಟ, ಮುಖಚರ್ಯದಲ್ಲಿ ಬದಲಾವಣೆ, ಚೇಷ್ಟೆ, ಅಂಗಸಂಜ್ಞೆ, ಹಾವಭಾವ, ಮೊದಲಾದವುಗಳನ್ನು ತಕ್ಕ ಸಮಯದಲ್ಲಿ ಉಪ

ಯೋಗಿಸುವದನ್ನು ಮಾತ್ರ ಮರಿಯಬಾರದು. ಮತ್ತು ಎಲ್ಲ ವಿದ್ಯಾರ್ಥಿಗಳನ್ನು ಸರಿಯಾಗಿ ಅರ್ಧ ವರ್ತುಲಾಕಾರವಾಗಿ ಕೆಳಗೆ ಕೂಡ್ರಿಸಿಕೊಂಡು ತಾನೂ ಕೆಳಗೆ ಕೂತು ಕಥೆ ಹೇಳಬೇಕು. ಅವರಂತೆ ಕಥೆ ಸುರುವು ಮಾಡುವಾಗ ಅತ್ತಿತ್ತ ಹರಿಬಿದ್ದ ಮಕ್ಕಳ ಮನಸ್ಸನ್ನು ತನ್ನ ಕಡೆಗ ಬರುವಂತೆ ಅವರಿಗೆ "ಮೇಲೆ ನೋಡಿರಿ. ಕೆಳಗೆ ನೋಡಿರಿ. ಕಣ್ಣುಮುಚ್ಚಿರಿ ಕಣ್ಣುತೆರೆಯಿರಿ" ಇತ್ಯಾದಿ ಸೂಚನೆಗಳಿಂದ ಚಿತ್ತವನ್ನು ದೃಢೀಕರಿಸಿಕೊಳ್ಳಬೇಕು.

ಶಿಕ್ಷಕನು ಕಥೆ ಹೇಳುವಾಗ ಕೂತ ಸ್ಥಳವನ್ನು ಬಿಟ್ಟು ಮೇಲೆ ಏಳಬಾರದು. ಮತ್ತು ತಿಳಿಯದ ಶಬ್ದಗಳಿಗಾಗಿ ತಾನು ನಟನೆ ಮಾಡಿಯೂ ಹೇಳಬಾರದು. ಕಥೆ ಹೇಳುವದು ತೀರಿದ ಮೇಲೆ ಕಥೆಗೆ ಸಂಬಂಧಿಸಿದ ಕೆಲವು ಚಿತ್ರಗಳನ್ನು ತೋರಿಸುವದು ಬಹಳ ಒಳ್ಳೇದು. ಅದರಿಂದ ಮತ್ತಿಷ್ಟು ದೃಢೀಕರಣವಾಗುವದು. ಆ ಮೇಲೆ ಚಿತ್ರಗಳ ಮೇಲಿಂದ ೩-೪ ಪ್ರಶ್ನೆಗಳನ್ನು ಕೇಳಿ ನೀತಿಯನ್ನು ಹೊರಡಿಸಬಹುದು.

ಮೇಲಿನ ಯಾವತ್ತೂ ತತ್ವಗಳನ್ನು ಮನನಮಾಡಿಕೊಂಡು ನನ್ನ ವ್ಯವಸಾಯ ಬಂಧುಗಳು ಚಿಕ್ಕಮಕ್ಕಳಿಗೆ ಕಥೆ ಹೇಳುವದರಿಂದ ಸಾಲೆ ತಪ್ಪಿಸುವ ಹುಡುಗರೂ ಕೂಡ ನಾಳೆ ಕಥೆಯುಂಟೆಂದು ಸಾಲೆಗೆ ಜಿಗಿಯುತ್ತಾ ಬರುವರು. ಮುಂಜಾನೆ ೮ ಘಂಟೆಗೂ, ಮಧ್ಯಾಹ್ನ ೩ ಘಂಟೆಗೂ, ಕಥೆ ಇಟ್ಟುಗೊಂಡಲ್ಲಿ ತಡಮಾಡಿ ಬರುವ ವಿದ್ಯಾರ್ಥಿಗಳು ಕೂಡ ಬೇಗಬರುವರು. ಮತ್ತು ನೀರಿನಂತೆ ಜಲ್ಲಿಹೋಗುವ ಮುದ್ದು ಮಕ್ಕಳ ಮನಸ್ಸು ಕಥೆ ಕೇಳುವದರಿಂದ ಸ್ಥಿರವಾಗುವದು. ಮತ್ತು ಶಿಕ್ಷಕನ ವ್ಯವಸಾಯವು ಸುಸೂತ್ರವಾಗಿ ಸಾಗುವದು.

ವ್ಹ. ಫಾ. ಪರೀಕ್ಷೆಯ ಪರಿಣಾಮವು

ಧಾರವಾಡ ಸೆಂಟರ

೧೯೨೭

(ಕಳೆದ ಸಂಚಿಕೆಯಿಂದೆ ಮುಂದೆ ಸಾಗಿದ್ದು.)

ನಂ.	ಹೆಸರು.	ಗುಣಗಳು.
೧ಳಲ	ಬಸಲಿಂಗಯ್ಯಾ ರುದ್ರಯ್ಯಾ ಸ್ಥಾವರಮಠ	೨೬೭
೧ಳಲ	ಬಶ್ಯಾ ಮಲ್ಲಪ್ಪಾ ಬೆಣ್ಣಿ	೨೬೭
೧ಳಲ	ಕೃಷ್ಣಾಜಿ ತ್ರಿಮಲರಾವ ದೇಶಪಾಂಡೆ	೨೬೭
೧ಳಲ	ಲಿಂಗೋ ಕೃಷ್ಣ ಕುಲಕರ್ಣಿ	೨೬೭

೧೪೯	ನಾರಾಯಣ ಪಾಂಡುರಂಗ ಗೋಕಾಕ	೨೬೭
೧೪೮	ಸಹದೇವ ಫಕ್ಕೀರಪ್ಪ ಹೂಗಾರ	೨೬೭
೧೪೮	ವೆಂಕಟೇಶ ಕೃಷ್ಣಾಚಾರ್ಯ ಸಿದ್ದಾಪೂರ	೨೬೭
೧೫೫	ರುದ್ರಗೌಡಾ ಬಸನಗೌಡಾ ಪಾಟೀಲ	೨೬೬
೧೫೬	ಸತ್ಯಾತ್ರಯ ಕೃಷ್ಣ ಶೇಕದಾರ	೨೬೫
೧೫೭	ಗಣೇಶ ನಾಗೇಶ ಸದರ ಜೊಯಿಸಿ	೨೬೪
೧೫೭	ಹಾಲಪ್ಪಾ ರಂಗಪ್ಪಾ ಕೊಪ್ಪದ	೨೬೪
೧೫೭	ಮುನಿಯಪ್ಪಾ ನಾರಪ್ಪಾ ಕನ್ನಾವ್ಲಾವರ	೨೬೪
೧೬೦	ಬಸವಣ್ಣೆಪ್ಪಾ ಭೀಮಪ್ಪಾ ಬೆಟಗೇರಿ	೨೬೩
೧೬೦	ಭೀಮರಾಯ ಚಿನ್ನಪ್ಪಾ ಪಾಸಣ್ಣವರ	೨೬೩
೧೬೦	ಹೊಳಲಪ್ಪಗವಡಾ ಪರ್ವತಗವಡಾ ಲಕ್ಷ್ಮೇಶ್ವರ	೨೬೩
೧೬೦	ಮುರಾರಿ ಜಗನ್ನಾಥ ಬಾಪಟ	೨೬೩
೧೬೪	ಮಿಯಾಸಾ ಫಕ್ಕೀರಸಾಹೇಬ ಸವನೂರ	೨೬೨
೧೬೪	ರಾಮಚಂದ್ರ ದತ್ತಾತ್ರಯ ಸೂಗೂರ	೨೬೨
೧೬೬	ಬಸಯ್ಯಾ ರುದ್ರಯ್ಯಾ ಹಿರೇಮಠ	೨೬೧
೧೬೬	ಛಾಯನಗವಡಾ ಯಲ್ಲಪ್ಪಗವಡಾ ಪಾಟೀಲ	೨೬೧
೧೬೬	ಕೊಟ್ರಬಸಪ್ಪಾ ಚನ್ನಬಸಪ್ಪಾ ಕರ್ಜಿಗಿ	೨೬೧
೧೬೬	ರಾಮಪ್ಪಾ ಅಡಿವೆಪ್ಪಾ ದಡ್ಡಿ	೨೬೧
೧೬೬	ಶಾಂತಪ್ಪಾ ಹುಚ್ಚಪ್ಪಾ ಹಳ್ಳಿ	೨೬೧
೧೬೬	ತ್ರಿಯುಂಬಕ ವೆಂಕಟೇಶ ದೇಸಾಯಿ	೨೬೧
೧೭೨	ಬಸಪ್ಪಾ ಕೊಟ್ರಪ್ಪಾ ಹೊಸಮನಿ	೨೬೦
೧೭೨ /	ಮಡಿವಾಳಯ್ಯಾ ಬಸಯ್ಯಾ ಚಿಕ್ಕಮಠ	೨೬೦
೧೭೨	ಎಲ್ಲರಡ್ಡಿ ಕೆಂಚರಡ್ಡಿ ರಡ್ಡೇರ	೨೬೦
೧೭೫	ಹಣಮಂತ ಭೀಮಪ್ಪಾ ನಾವಳ್ಳಿ	೨೫೯
೧೭೫	ರಾಮಚಂದ್ರ ಭಯಿರಪ್ಪಾ ದೇವಾಂಗ	೨೫೯
೧೭೫	ವೀರಭದ್ರ ಬಸಪ್ಪಾ ಹಾದೀಮನಿ	೨೫೯
೧೭೮	ಬಸಪ್ಪಾ ರಾಮಪ್ಪಾ ಭೂಮರಣ್ಣವರ	೨೫೮
೧೭೮	ಬಸವಣ್ಣೆ ಯಲ್ಲಪ್ಪಾ ಡೊಂಬರಮತ್ತೂರ	೨೫೮
೧೭೮	ಇಮಾಮ ಕರೀಮಸಾಬ ರನ್ನರ	೨೫೮
೧೭೮	ಕೃಷ್ಣಾಜಿ ಫಕ್ಕೀರಪ್ಪಾ ತಿಂಪಿ	೨೫೮

೧೮೨೨	ಹಣಮಂತಗವಡಾ ಅಯ್ಯನಗವಡಾ ಪಾಟೀಲ	೨೫೭
೧೮೨೨	ಈಶ್ವರ ದುಂಡಪ್ಪಾ ಢೋರ	೨೫೭
೧೮೨೪	ಅನಂತ ತಿಮ್ಮಾಜಿ ವೈಕುಂಠೆ	೨೫೬
೧೮೨೪	ಭೀಮಭಟ್ಟ ಗೋಪಾಳಭಟ್ಟ ಜೋಯಿಸ	೨೫೬
೧೮೨೪	ಗಣೇಶ ಶಿದ್ದಪ್ಪಾ ಅರ್ಕಸಾಲಿ	೨೫೬
೧೮೨೪	ಈಶ್ವರಗವಡಾ ಕಲ್ಲನಗವಡಾ ಪಾಟೀಲ	೨೫೬
೧೮೨೪	ವಾಸುದೇವಾಚಾರ್ಯ ಭೀಮಾಚಾರ್ಯ ಮಠಪತಿ	೨೫೬
೧೮೯೯	ಬಸಪ್ಪಾ ಅಡಿವೆಪ್ಪಾ ವೆಣಶಿನಕಾಯಿ	೨೫೫
೧೮೯೯	ಪ್ರಭು ಫಕ್ಕೀರಪ್ಪಾ ಅಂಚೂರ	೨೫೫
೧೯೧೧	ಗಂಗಾಧರಯ್ಯಾ ಶಿವಲಿಂಗಯ್ಯಾ ತುರಮರಿಮಠ	೨೫೪
೧೯೧೧	ಮಲ್ಲಪ್ಪಾ ಭೀಮಪ್ಪಾ ಮಚಕನೂರ	೨೫೪
೧೯೧೧	ರಾಮಚಂದ್ರ ಭೀಮಭಟ್ಟ ದೊನ್ನಿ	೨೫೪
೧೯೧೧	ಶಿವಯ್ಯಾ ಲಿಂಗಯ್ಯಾ ಗುಡ್ಡೀಮಠ	೨೫೪
೧೯೧೧	ಶಿದ್ಧವೀರಯ್ಯಾ ವೀರತಯ್ಯಾ ಕೊರಿಕಂಠೀಮಠ	೨೫೪
೧೯೧೧	ವೀರಪ್ಪಾ ಗದಿಗೆಪ್ಪಾ ಸಾತಣ್ಣವರ	೨೫೪
೧೯೨೨	ಭರಮನಗವಡಾ ಲಿಂಗನಗವಡಾ ಪಾಟೀಲ	೨೫೩
೧೯೨೨	ನರಶಿಂಹ ವೆಂಕಟೇಶ ಕುಲಕರ್ಣಿ	೨೫೩
೧೯೨೨	ರೇವಣಪ್ಪಾ ಬಸಪ್ಪಾ ಬಣಕಾರ	೨೫೩
೧೯೨೨	ಶಂಕರ ಸುಬ್ಬಾಜಿ ನರಗುಂದ	೨೫೩
೨೦೧೧	ದೇವೇಂದ್ರ ಶಿದ್ಲಿಂಗಪ್ಪಾ ಲಕ್ಕಣ್ಣವರ	೨೫೨
೨೦೧೧	ಗದಗಯ್ಯಾ ಬಸಯ್ಯಾ ಹುನಗುಂದ	೨೫೨
೨೦೧೧	ಹಜರತಸಾಬ ಮಹಮ್ಮದಸಾಬ ನದಾಫ	೨೫೨
೨೦೧೧	ಕಾಶೀಮಸಾಬ ಬಡೇಸಾಬ ಅಲ್ಲಾನವರ	೨೫೨
೨೦೧೧	ಲಕ್ಷ್ಮಣ ಶ್ರೀನಿವಾಸ ಕುಲಕರ್ಣಿ	೨೫೨
೨೦೧೧	ನಿಂಗಪ್ಪಾ ಯಲ್ಲಪ್ಪಾ ನಿಡಗುಂದಿ	೨೫೨
೨೦೧೧	ಸ್ವಾಮಿ ಸುಬ್ರಾವ ಕುಲಕರ್ಣಿ	೨೫೨
೨೦೨೪	ಅಂದಾನಯ್ಯಾ ಶಿವಮುದ್ದಯ್ಯಾ ಚವಕೀಮಠ	೨೫೧
೨೦೨೪	ಮಾರ್ತಂಡ ನಾರಾಯಣ ಪಾಟೀಲ	೨೫೧
೨೦೨೪	ವೆಂಕಟೇಶ ಭೀಮರಾವ ಕುಲಕರ್ಣಿ	೨೫೧
೨೧೧೧	ಅನಂತಪ್ಪಾ ದೇವೇಂದ್ರಪ್ಪಾ ಬಳಿಗಾರ	೨೫೦

೨೧೧	ಬಸನಗವಡಾ ತಿರುಕನಗವಡಾ ಪಾಟೀಲ	೨೫೦
೨೧೧	ರೇವಣಿಗವಡಾ ಶಿವುನಗವಡಾ ಬದನೀಕಾಯಿ	೨೫೦
೨೧೪	ಚಿಕ್ಕೋ ಹಣಮಂತ ಪಾಟೀಲ	೨೪೯
೨೧೪	ದತ್ತಾತ್ರಯ ಅಪ್ಪಾಜಿ ಗೋಸಾವಿ	೨೪೯
೨೧೪	ಮಾಧವ ಗಿರಿಧರ ದೇಶಪಾಂಡೆ	೨೪೯
೨೧೪	ನೀಲಾ ಮಡಿವಾಳಪ್ಪಾ ಅಗಸರ	೨೪೯
೨೧೪	ರಾಮಚಂದ್ರ ಮೇಲಗಿರಿಸಾ ಹಬೀಬ	೨೪೯
೨೧೯	ಗಣೇಶ ಗುರುನಾಥ ಕುಲಕರ್ಣಿ	೨೪೮
೨೧೯	ಕಲ್ಲಂಭಟ್ಟ ಕೃಷ್ಣಭಟ್ಟ ದಿವಾಕರ	೨೪೮
೨೨೧	ಚನಬಸಪ್ಪಾ ಫಕ್ಕೀರಪ್ಪಾ ಶಿಗ್ಲಿ	೨೪೭
೨೨೧	ದತ್ತಾತ್ರಯ.ಗಣೇಶ ನೆಗಳೂರ	೨೪೭
೨೨೧	ಗುಡ್ಡಪ್ಪಾ ನಿಂಗಪ್ಪಾ ತಳವಾರ	೨೪೭
೨೨೧	ಹಣಮಂತಪ್ಪಾ ನಿಂಗಪ್ಪಾ ಗುಟ್ಟೂರ	೨೪೭
೨೨೧	ಸದಾಶಿವ ಗಣೇಶ ದೀಕ್ಷಿತ	೨೪೭
೨೨೧	ಶಿದ್ಪಪ್ಪಾ ಫಕ್ಕೀರಪ್ಪಾ ದಿಡ್ಡಿ	೨೪೭
೨೨೭	ವೀರಭದ್ರಗೌಡಾ ವೀರನಗೌಡಾ ಪಾಟೀಲ	೨೪೬
೨೨೪	ಫಕ್ಕೀರಪ್ಪಾ ಮಹದೇವಪ್ಪಾ ಕರಡಿ	೨೪೫
೨೨೪	ಗುರನಗೌಡಾ ಬೈಲಪ್ಪಗೌಡಾ ಪಾಟೀಲ	೨೪೫
೨೨೪	ಹೊನಕೆರಪ್ಪಾ ಜುಮ್ಮಪ್ಪಾ ಮಾಯಿಕಾರ	೨೪೫
೨೨೪	ಶಂಕರ ವಿರುಪಾಕ್ಷ ದೇಶಕುಲರ್ಣಿ	೨೪೫
೨೩೨	ಬಸಪ್ಪಾ ಕೃಷ್ಟಪ್ಪಾ ಹಳೇಮನಿ	೨೪೪
೨೩೨	ಕೃಷ್ಣಾಜಿ ಚಿಕ್ಕೋ ಕುಲಕರ್ಣಿ	೨೪೪
೨೩೨	ರುದ್ರಗೌಡಾ ಚನ್ನಪ್ಪಗೌಡಾ ಶಿದ್ದನಗೌಡರ	೨೪೪
೨೩೨	ತೋಟಯ್ಯಾ ಮಡಿವಾಳಯ್ಯಾ ಕಟ್ಟೀಮನಿ	೨೪೪
೨೩೨	ವೀರಪ್ಪಾ ತಿಪ್ಪಪ್ಪಾ ಬ್ಯಾಹಟ್ಟಿ	೨೪೪
೨೩೭	ಗುರುಮಹಂತಪ್ಪ ಅಡಿವೆಪ್ಪಾ ಬೆನಕೊಪ್ಪ	೨೪೩
೨೩೭	ಗುರುಪಾದಯ್ಯಾ ವೀರಯ್ಯಾ ಪೂಜಾರ	೨೪೩
೨೩೯	ಬಂದುಸಾಬ ಫಕ್ಕೀರಸಾಬ ಯಕ್ಕಾಸಪೂರ	೨೪೨
೨೩೯	ದಾದಾಹಯಾತ ರಾಜೇಸಾಬ ನವಲೂರ	೨೪೨
೨೩೯	ಗುಡ್ಡಪ್ಪಾ ಕೆಂಚಪ್ಪಾ ಅಗಸರ	೨೪೨
೨೪೨	ಭಾಸ್ಕರ ಲಿಂಗೋ ಕುಲಕರ್ಣಿ	೨೪೧

೨೪೨	ಗುರುನಾಥ ರಾಮಚಂದ್ರ ಕುಲಕರ್ಣಿ	೨೪೧
೨೪೨	ಹನುಮಂತ ಭಾಸ್ಕರ ಜೋಶಿ	೨೪೧
೨೪೨	ಕೃಷ್ಣಾಜಿ ಹನುಮಂತರಾವ ಕುಲಕರ್ಣಿ	೨೪೧
೨೪೨	ಸಂಗಪ್ಪಾ ಶಂಕರಪ್ಪಾ ದೇಸಾಯಿ	೨೪೧
೨೪೨	ವೆಂಕಪ್ಪಾ ಬಸಪ್ಪಾ ಹೊರಕೇರಿ	೨೪೧
೨೪೨	ಯಜ್ಞೇಶ್ವರ ನಾರಾಯಣ ಹುಲಮನಿ	೨೪೧
೨೪೯	ಚಂದ್ರಾಮ ಗುರುನಾಥ ಜೋಶಿ	೨೪೦
೨೪೯	ಮಲ್ಹಾರ ಕೋಟೋ ಜೋಶಿ	೨೪೦
೨೪೯	ಮಾರ್ತಂಡ ಭಾವುರಾವ ಕುಲಕರ್ಣಿ	೨೪೦
೨೫೨	ಚನಬಸಪ್ಪಾ ಫಕ್ಕೀರಪ್ಪಾ ಬೆಟದೂರ	೨೩೯
೨೫೨	ಲಿಂಗಬಸಪ್ಪಾ ಶಿವಪ್ಪಾ ತೋಟದ	೨೩೯
೨೫೨	ರುದ್ರಮುನಿಸ್ವಾಮಿ ಗಂಗಾಧರಶಾಸ್ತ್ರಿ ಪ್ರಸನ್ನದೇವರಮಠ	೨೩೯
೨೫೫	ಬಾಳಕೃಷ್ಣ ರಾಮಭಟ್ಟ ಗ್ರಾಮಪುರೋಹಿತ	೨೩೮
೨೫೫	ಬಸಪ್ಪಾ ಚನಬಸಪ್ಪಾ ಹಾವಕ್ಕನವರ	೨೩೮
೨೫೫	ಬ್ರಹ್ಮೇಶ ಕಾಳಪ್ಪಾ ಬಳಿಗೇರ	೨೩೮
೨೫೮	ಅಂದಾನಗೌಡಾ ಯಲ್ಲಪ್ಪಗೌಡಾ ಚನ್ನಪ್ಪಗೌಡರ	೨೩೭
೨೫೯	ಬಸಪ್ಪಾ ಲಿಂಗವ್ವಾ ಬಡಿಗೇರ	೨೩೬
೨೫೯	ಫಕ್ಕೀರಯ್ಯಾ ಅಡಿವಯ್ಯಾ ನಿಡಗುಂದ	೨೩೬
೨೫೯	ಶಿವನಗೌಡಾ ಕರಿಗೌಡಾ ಗೌಡರ	೨೩೬
೨೬೨	ಬಸವಣ್ಣೆ ಮಲ್ಲಪ್ಪಾ ಬೆಂತೂರ	೨೩೫
೨೬೨	ಫಕ್ಕೀರಪ್ಪಾ ಭರಮಪ್ಪಾ ಕೊಂಗವಾಡ	೨೩೫
೨೬೨	ಹುಚ್ಚನಗೌಡಾ ತಿರಕನಗೌಡಾ ಬೆಳಕೇರಿ	೨೩೫
೨೬೨	ಕೃಷ್ಣಾಜಿ ಶ್ರೀನಿವಾಸ ಕುಲಕರ್ಣಿ	೨೩೫
೨೬೨	ಶಿದ್ರಾಮಯ್ಯಾ ಬಸವಣ್ಣೆಯ್ಯಾ ಮಠದ	೨೩೫
೨೬೨	ಅಂದಾನಗೌಡಾ ವೀರಭದ್ರಗೌಡಾ ಪಾಟೀಲ	೨೩೪
೨೬೨	ಕಾನ್ಯಾ ಮಲ್ಲಪ್ಪಾ ಕಲಾಲ	೨೩೪
೨೬೨	ಖಾಲಂದರ ಸಾಹೇಬ ಹಯಾತಸಾಹೇಬ ನಾಂದಗಾವ	೨೩೪
೨೬೨	ಶಂಕರಪ್ಪಾ ಬಸಪ್ಪಾ ಬೆಳ್ಳಿಟ್ಟಿ	೨೩೪
೨೬೧	ಬಾಳಪ್ಪಾ ಫಕ್ಕೀರಪ್ಪಾ ಜೀರಿಗಿವಾಡ	೨೩೧
೨೬೧	ಬಸಪ್ಪಾ ವೀರಪ್ಪಾ ಬಸವರಡ್ಡಿ	೨೩೧

೨೭೧	ಫಕ್ಕೀರಪ್ಪಾ ಚನವೀರಪ್ಪಾ ನೇಕಾರ	೨೩೧
೨೭೧	ಕೆಂಚನಗೌಡಾ ಹೊಳಿಯಪ್ಪಗೌಡಾ ಪಾಟೀಲ	೨೩೧
೨೭೧	ಕೃಷ್ಣಾಜಿ ತುಕಾರಾಮ ಅಂಚಿ	೨೩೧
೨೭೧	ಪ್ರಲ್ಹಾದ ಲಕ್ಷ್ಮಣರಾವ ಸತ್ತೂರ	೨೩೧
೨೭೭	ಮಹಲಿಂಗಪ್ಪಾ ಶಿವಬಸಪ್ಪಾ ಕುಬಸದ	೨೩೦
೨೭೭	ಸದಾಶಿವಪ್ಪಾ ಶಿನಪ್ಪಾ ಕಣಜಣ್ಣವರ	೨೩೦
೨೭೭	ವೀರಯ್ಯಾ ರುದ್ರಪ್ಪಯ್ಯಾ ಹಿರೇಮಠ	೨೩೦
೨೮೦	ಎಲ್ಲನಗೌಡಾ ಕೆಂಚನಗೌಡಾ ಭಾವೀಕಟ್ಟಿ	೨೨೯
೨೮೦	ಮಹಾದೇವ ವಾಸುದೇವ ಪುರಾಣಿಕ	೨೨೯
೨೮೨	ರಾಮಚಂದ್ರ ತುಕ್ಕಪ್ಪಾ ಜಾಧವ	೨೨೮
೨೮೩	ಭಾವು ನಾರಾಯಣರಾವ ದೇಶಪಾಂಡೆ	೨೨೭
೨೮೩	ಗಣೇಶ ಬಾಪುಭಟ್ಟ ಜೋಶಿ	೨೨೭
೨೮೩	ಕಲ್ಲಪಾ ಶಿವಪ್ಪಾ ಪಟ್ಟಣಶೆಟ್ಟಿ	೨೨೭
೨೮೬	ಚನ್ನಯ್ಯಾ ಶಿನಪೂಜಯ್ಯಾ ಭಿಕ್ಷಾವರ್ತಿ	೨೨೬
೨೮೬	ಚಿದಂಬರ ಈಶ್ವರಭಟ್ಟ ಕರ್ಪೂರ	೨೨೬
೨೮೬	ರಾಜೀನಾಯಿಕ ಶೇಕುನಾಯಿಕ ನಾಯಕರ	೨೨೬
೨೮೬	ರಾಮಚಂದ್ರ ಕನ್ನಪ್ಪಾ ಕಡ್ಡೀರ	೨೨೬
೨೯೦	ಗೂಳಪ್ಪಾ ಬಸಪ್ಪಾ ಕೊಪ್ಪದ	೨೨೫
೨೯೦	ಗುರುನಾಥ ರಂಗೋ ಕುಲಕರ್ಣಿ	೨೨೫
೨೯೦	ಇಮಾಮಸಾಬ ಹುಶೇನಸಾಬ ಪಿಂಜಾರ	೨೨೫
೨೯೦	ಕರವೀರಪ್ಪಾ ಫಕೀರಪ್ಪಾ ಕೊಂಗವಾಡ	೨೨೫
೨೯೦	ಕಾಶೀಮಸಾಬ ಇಮಾಮಸಾಬ ಕಳಸದ	೨೨೫
೨೯೦	ಸಂಕನಗೌಡಾ ನಾಗನಗೌಡಾ ಎಲ್ಲಪ್ಪಗೌಡರ	೨೨೫
೨೯೬	ಉಡುಪಿ ಶ್ರೀನಿವಾಸ ಕುಲಕರ್ಣಿ	೨೨೪
೨೯೭	ಹಣಮಂತ ದುರಗವ್ವಾ ಚಲವಾದಿ	೨೨೩
೨೯೮	ಹಣಮಪ್ಪಾ ಮಲ್ಲಪ್ಪಾ ಭಾವಿ	೨೨೨
೨೯೮	ರಾಮಪ್ಪಾ ಮುದಕಪ್ಪಾ ಭಂಡಿ	೨೨೨
೩೦೦	ರಂಗನಾಥ ರಾಘವೇಂದ್ರಾಚಾರ್ಯ ಪಂಚಮುಖಿ	೨೨೧
೩೦೦	ಯಲ್ಲಪ್ಪಾ ಭೀಮಪ್ಪಾ ಹೂಗಾರ	೨೨೧
೩೦೨	ಭೀಮಪ್ಪಾ ಕ್ರಿಷ್ಣಪ್ಪಾ ಕಿತ್ತೂರ	೨೨೦
೩೦೨	ಚನ್ನಬಸಪ್ಪಾ ಗದಿಗೆಪ್ಪಾ ಮಕ್ತಾಲಿ	೨೨೦

೩೦೨	ಹಣಮಂತ ಫಕೀರಪ್ಪ ರಾಮದುರ್ಗ	೨೨೦
೩೦೨	ಕರಿಯಪ್ಪ ಬಸಪ್ಪ ಬ್ಯಾಲುಣಿಶಿ	೨೨೦
೩೦೬	ಗುರನಾಥ ವೆಂಕಟೇಶ ಕುಲಕರ್ಣಿ	೨೧೯
೩೦೬	ರಾಮಚಂದ್ರಗೌಡಾ ಗೋವಿಂದಗೌಡಾ ಪಾಟೀಲ	೨೧೯
೩೦೬	ವಿರುಪಾಕ್ಷಪ್ಪಾ ಬಸಪ್ಪ ಶೀಪರಮಟ್ಟಿ	೨೧೯
೩೦೬	* * *	...
೩೧೦	ಶಿವಯೋಗಯ್ಯಾ ಗೂಳಯ್ಯಾ ಭಾವೀಮಠ	೨೧೮
೩೧೧	ಚನ್ನಪ್ಪಾ ಸಂಗಪ್ಪಾ ಹೆಬಸೂರ	೨೧೭
೩೧೧	ರಾಮಚಂದ್ರ ಲಕ್ಷ್ಮಣರಾವ ಕುಲಕರ್ಣಿ	೨೧೭
೩೧೩	ಕಲ್ಲಪ್ಪಾ ಲಿಂಗಪ್ಪಾ ಕೊಪ್ಪದ	೨೧೬
೩೧೩	ತಿಪ್ಪಣ್ಣಾ ವೀರಪ್ಪಾ ನರೇಂದ್ರ	೨೧೬
೩೧೫	ಚನ್ನಪ್ಪಾ ಬಸಪ್ಪಾ ಅಲ್ಲಾಪೂರ	೨೧೩
೩೧೫	ಚಂದ್ರಶೇಖರಯ್ಯಾ ಶಿವಮೂರ್ತಿಯ್ಯಾ ಚಿಕ್ಕಮಠ	೨೧೩
೩೧೭	ರಂಗೋ ಭೀಮರಾವ ಕುಲಕರ್ಣಿ	೨೧೧

ಅಗ್ರಿಕಲ್ಚರಲ್ ಉಮೇದವಾರರು

೧	ಬಸಪ್ಪಾ ತೋಟಪ್ಪಾ ಹಂಚಿನಾಳ	೧೭೭
೨	ಬಶೆಟ್ಟೆಪ್ಪಾ ಚನಬಸಪ್ಪಾ ಚಿಂಚಲಿ	೨೫೯
೩	ಹಸನಸಾಬ ಮಲಿಕಸಾಬ ಸೊನ್ನೆಖಾನ	೧೪೪
೪	ಸಂಗಪ್ಪ ಗೋಲಪ್ಪಾ ಗೋಲಪ್ಪನವರ	೩೩೨
೫	ಪರಸಪ್ಪಾ ಯಲ್ಲಪ್ಪಾ ಕವಲಿ	೨೭೯
೬	ಚನ್ನಪ್ಪಾ ಅಡಿವೆಪ್ಪಾ ಅಗಸರ	೨೭೮
೭	ಹೇಮರಡ್ಡಿ ಭೀಮರಡ್ಡಿ ಹುಲಕೋಟಿ	೨೭೭
೮	ಹಣಮಪ್ಪಾ ಅಂದಾನಪ್ಪಾ ಹೂಗಾರ	೨೭೨

ಧಾರವಾಡ.
ನವ್ಹಂಬರ ೧೯೨೭ನೇಇ.

G. K. Puranik,
ಪ್ರೆಸಿಡೆಂಟ ವ್ಹ. ಫಾ. ಪ. ಕಮೀಟಿ
ಧಾರವಾಡ ಸೆಂಟರ.

ಬಂದ ಪತ್ರಗಳ ಸಾರಾಂಶ

೧. **ಹಿರೇಹೊನ್ನಿಹಳ್ಳಿ** ತಾಲೂಕ ಕಲಘಟಗಿ ಜಿಲ್ಲಾ ಧಾರವಾಡ:— ಈ ಶಾಲೆಗೆ ೨೫–೮–೨೭ನೇದಿವಸ ಸುಪರವಾಯಿಝರರು ಪರೀಕ್ಷೆಗೆ ಬಂದಾಗೆ ಶಾಲೆಯ ವಿದ್ಯಾರ್ಥಿಗಳು ಗೋಸಂರಕ್ಷಣೆ, ರಾಮಚಂದ್ರನು ತಂದೆಯ ಆಜ್ಞೆಯನ್ನು ಪಾಲಿಸಿದ್ದು, ಶಕುಂತಲೆಯು ಅತ್ತೆಯಮನೆಗೆ ಹೋದದ್ದು; ಈ ಪಾಠಗಳ ಸಂಭಾಷಣೆಯನ್ನು ಬಹಳ ಚನ್ನಾಗಿ ಮಾಡಿತೋರಿಸಿದರು. ಈ ಶಾಲೆಗೆ ಚ. ಫ. ಕಟ್ಟಿ ಇವರು ಬಂದ ಬಳಿಕ ಬಹಳ ಸುಧಾರಣೆಯಾಗಿರುವದೆಂದು ಅಲ್ಲಿಯ ಅಸಿಃ ರಾದ ಭೀಮಪ್ಪ ಗಂಗಾಧರ ಎಂಬವರು ತಿಳಿಸುತ್ತಾರೆ.

೨. **ಆಲದಗೇರಿ** ತಾ. ಕೋಡ ಜಿಲ್ಲಾ ಧಾರವಾಡ:— ಈ ಶಾಲೆಗೆ ಚಾಂಡದಾನಪುರದ ಶ್ರೀ ವಿರೂಪಾಕ್ಷ ಒಡೆಯರು ತಾ. ೮–೧೨–೨೭ನೇ ದಿವಸ ಬಂದಿದ್ದರು. ಆಗ್ಗೆ ಶಾಲೆಯಲ್ಲಿಟ್ಟಿದ್ದ ಇತಿಹಾಸ ಪ್ರಸಿದ್ಧ ಪುರುಷರ ಭಾವಪಟಗಳನ್ನು ನೋಡಿ ಸಂತೋಷಪಟ್ಟರು ಇಲ್ಲಿಯ ಹೆಡ್‌ಮಾಸ್ತರ ಬಿ. ಖ. ನಾಡಿಗೇರ ಇವರು ಬಂದಂದಿನಿಂದ ಗಾಯನವೇ ಮೊದಲಾದ ಎಲ್ಲ ವಿಷಯಗಳು ಶಾಲೆಯಲ್ಲಿ ಚನ್ನಾಗಿ ಕಲಿಸಲ್ಪಡುತ್ತಲಿವೆ ಎಂದು ಪ್ರೇಕ್ಷಕರೊಬ್ಬರು ಬರೆದಿರುತ್ತಾರೆ; ಹಾಗು ಗಾಯನ ಕಲಿಸುವದಕ್ಕೋಸ್ಕರ ಹಾರ್ಮೋನಿಯಮದ ಅವಶ್ಯಕತೆಯುಂಟೆಂಬ ಮಾಸ್ತರರ ಬೇಡಿಕೆಯನ್ನು ಸಹ ಪ್ರೇಕ್ಷಕರು ತಿಳಿಸುತ್ತಾರೆ.

೩. **ಕೊಣ್ಣೂರ** ಜಿಲ್ಲಾ ಬೆಳಗಾಂವ:— ಈ ಶಾಲೆಗೆ ನೇಕನಾಮದಾರ ಗವ್ಹರ್ನರಸಾಹೇಬ ಮುಂಬಯಿ ಪ್ರಭುಗಳು ೩೧–೧೦–೨೭ನೇ ದಿವಸ ಆಗಮಿಸಿದ್ದರು. ಆಗ್ಗೆ ಮೆ. ಕಲೆಕ್ಟರಸಾಃ ರೂ ಹಾಗೂ ಡಿ. ಡಿ. ಕಲೆಕ್ಟರಸಾಃ ರೂ ಸಂಗಡ ಇದ್ದರು. ಈ ಮಹನೀಯರನ್ನು ಜಿಲ್ಲಾ ಸ್ಕೂ. ಜೋ. ಚೆಲರಮನ್ನರು ಸತ್ಕಾರಪೂರ್ವಕವಾಗಿ ಮನ್ನಿಸಿ ಕನ್ನಡ ಶಾಲೆಯ ಮತ್ತು ಗರ್ಲಶಾಲೆಯ ಹಾಗು ಉರ್ದುಶಾಲೆಯ ಮತ್ತು ಶೇತಕೀಶಾಲೆಯ ವಿದ್ಯಾರ್ಥಿಗಳ ಎಲ್ಲ ವಿಷಯಗಳನ್ನೂ ಟಿಪ್ಪಣಿಗಳನ್ನೂ ತೋರಿಸಿದರು. ಗರ್ಲಶಾಲೆಯ ವಿದ್ಯಾರ್ಥಿಯನಿಯರ ಕಸೂತಿ, ಹೆಣಿಕೆ ಮೊದಲಾದ ವಿಷಯಗಳನ್ನು ಸಹ ಚನ್ನಾಗಿ ನೋಡಿದರು. ಬಳಿಕ ದೊರೆಗಳು ಶಾಲೆಯ ವಿದ್ಯಾರ್ಥಿಗಳ ಎಲ್ಲ ಸಂಗತಿಗಳನ್ನು ನೋಡಿ ಸಂತೋಷಚಿತ್ತರಾಗಿರುವೆವೆಂದೂ, ಮರುದಿನ ಸೂಟಿಯನ್ನು ಕೊಡಬೇಕೆಂದೂ ತಿಳಿಸಿದರೆಂದು ಅಲ್ಲಿಯ ಕನ್ನಡ ಶಾಲೆಯ ಹೆಡ್‌ಮಾಸ್ತರರು ತಿಳಿಸುತ್ತಾರೆ.

೪. **ಹಿರೇಹರಕುಣಿ** ತಾಲೂಕ ಬಂಕಾಪುರ ಜಿಲ್ಲಾ ಧಾರವಾಡ:— ಈ ಊರ ಸಾಲೆಯ ಹೆಡ್‌ಮಾಸ್ತರರಾದ ರುದ್ರಪ್ಪ ನೆಲ್ಲೂರ ಇವರು ಪೆನ್‌ಶನ್‌ಹೊಂದಿ

ಹೋಗುವಕಾಲಕ್ಕೆ ಶಾಲೆಯಲ್ಲಿ ತನ್ನಿಮಿತ್ತಕವಾಗಿ ೧೮–೧೦–೨೭ನೇ ದಿವಸ ಶಾಲೆಯಲ್ಲಿ ಸಭೆಗೂಡಿಸಿ ತಾಂಬೂಲಸಮಾರಂಭ ಮಾಡಿದೆವು ಹಿಗೇಂದು ಅಲ್ಲಿಯ ಅಸಿ। ಮಾಸ್ತರರೂ ಸೊಸಾಯಿಟಿ ಸೆಕ್ರೆಟರಿಗಳೂ ತಿಳಿಸುತ್ತಾರೆ.

ಹಿರೇಒಡವಟ್ಟಿ ಜಿಲ್ಲಾ ಧಾರವಾಡ:— ಈ ಶಾಲೆಯು ತಾ. ೧೬–೯–೨೭ನೆಯ ದಿವಸ ಶ್ರೀ ಪಟ್ಟದ ಬಸವಲಿಂಗ ಮಹಾಸ್ವಾಮಿಗಳು ಆಗಮಿಸಿದರು. ಆಗ್ಗೆ ಅವರ ಕೂಡ ಸ್ಕೂಲಪಂಚರು ಬಂದು ಶಾಲೆಯ ವಿದ್ಯಾರ್ಥಿಗಳನ್ನು ಪರೀಕ್ಷಿಸಿದರು. ಶ್ರೀ. ಮಹಾಸ್ವಾಮಿಗಳವರು ಶಾಲೆಯ ಸುಸ್ಥಿತಿಯ ವಿಷಯವಾಗಿ ಸಂತೋಷಪಟ್ಟು ಶಾಲೆಯ ಉಪಯೋಗಕ್ಕಾಗಿ ಝಾಂಗಟಿ ತರಿಸಲಿಕ್ಕೆ ೧೦ರೂಪಾಯಿಗಳನ್ನೂ ಮಿಠಾಯಿಗಾಗಿ ೨ ರೂ. ಗಳನ್ನೂ ಕೊಟ್ಟರೆಂದು ಅಲ್ಲಿಯ ಹೆಡ್‌ಮಾಸ್ತರ ಹಣಮಂತಗೌಡ ಗುಡ್ಡನಗೌಡ ಕಿತ್ತೂರ ಇವರು ತಿಳಿಸುತ್ತಾರೆ.

ಶಾಲಾನೆಸ್ವಿ ತಾಲೂಕ ಕೋಡ:— ಈ ಶಾಲೆಯಲ್ಲಿ ತಾ॥ ೬–೧೦- ೨೭ನೆಯ ದಿವಸ ಶಾರದಾ ಪೂಜೆಯು ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಆಗ್ಗೆ ಶಾಲಾ ವಿದ್ಯಾರ್ಥಿಗಳು ತೆನ್ನಾಲರಾಮಕೃಷ್ಣನ ಫಾರ್ಸ, ಕುರುಬರ ಹುಡುಗನ ಫಾರ್ಸ ಚನ್ನಾಗಿಮಾಡಿ ತೋರಿಸಿದರು. ಬಳಿಕ ತಾಲೂಕ ಲೊ. ಬೋ. ಮೆಂಬರ ಬಸಲಿಂಗಪ್ಪ ಗೌಡರು ' ಶಾರದೆ ಪೂಜೆಯ ಮಹತ್ವ ' ಎಂಬ ವಿಷಯದ ಮೇಲೆ ಸರಸವಾಗಿ ಮಾತಾಡಿದ್ದರು. ಮತ್ತು ಮುಷ್ಟಿಫಂಡನ್ನು ಕೂಡಿಸಲಿಕ್ಕೆ ಉಪದೇಶಮಾಡಿದರು.

ಶಾಲಾ ಕನಕಾಪೂರ ತಾಲೂಕ ಕರ್ಜಗಿ:— ಇಲ್ಲಿಯ ಪಾಟೀಲ ನಿಂಗಪ್ಪಗೌಡರು ತಿಳಿಸುವದೇನೆಂದರೆ:— ನಮ್ಮೂರ ಶಾಲೆಗೆ ಹಸನ ಸಾ॥ ಇಂಗಳಗೊಂದಿ ಇವರು ಬಂದಂದಿನಿಂದ ಶಾಲೆಯು ಬಹಳ ಸುಧಾರಣೆ ಹೊಂದಿದೆ. ಈ ವರ್ಷ ಪರೀಕ್ಷೆಗೆ ನಿಂತ ೫೮ ವಿದ್ಯಾರ್ಥಿಗಳಲ್ಲಿ ೪೧ ಹುಡುಗರು ಪಾಸಾಗಿದ್ದಾರೆ. ಒಬ್ಬ ಒಡ್ಡರ ಹುಡುಗನು ಆರಂಭದಿಂದ ಕಲಿಯಹತ್ತಿ ಒಂದೇ ವರ್ಷದಲ್ಲಿ ೧೯ನೇ ಇಯತ್ತೆ ಪಾಸಾಗಿದ್ದಾನೆ. ನಾನು ಸಂತೋಷದಿಂದ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ೫ ರೂಪಾಯಿ ಕೊಟ್ಟಿದ್ದೇನೆ. ಇತ್ಯಾದಿ.

ಕಾಗವಾಡ:— ಇಲ್ಲಿಯ ಸ್ನೇಹಸಂವರ್ಧಕ ಮಂಡಲಿಯ ಸೆಕ್ರೆಟರಿಗಳು ತಿಳಿಸುವದೇನಂದರೆ:— "ನಮ್ಮ ಸಂಸ್ಥೆಯು ೧೯೧೬ರಲ್ಲಿ ಸ್ಥಾಪಿತವಾಗಿದೆ. ಈ ಸಂಸ್ಥೆಯ ವತಿಯಿಂದ ವಾಚನಾಲಯ, ನೋಫತ ಔಷಧಾಲಯಗಳು ನಡೆದಿರುತ್ತವೆ. ಇವಲ್ಲದೆ ಇದರ ವತಿಯಿಂದಲೇ ಶ್ರೀ ಸಮರ್ಥ ವ್ಯಾಯಾಮಮಂದಿರವು ಸಹ ಸುವ್ಯವಸ್ಥಿತವಾಗಿ ನಡೆಯಹತ್ತಿದೆ. ಅಲ್ಲಿ ವಿದ್ಯಾರ್ಥಿಗಳು ಕುಸ್ತಿ, ಮುಲಖಂಬ, ದಾಂಡಪಟ್ಟ ಮೊದಲಾದ

ವಿಷಯಗಳನ್ನು ಕಲಿಯುತ್ತಾರೆ. ಇದಕೆಲ್ಲ ಶ್ರೀಮಂತ ಬಾಪುಸಾಹೇಬ ಪಟವರ್ಧನ ರಾಗವಾಡ ಇವರ ಆಶ್ರಯವಿದೆ.

ಖಾನಾಪೂರ:— ಮಿ. ಉಗಲಾಟಿ ಸ್ಕೂಲಮಾಸ್ತರ ಗಂಗಾಪೂರ ಇವರು ಹಿಂವಕ್ಕೆ (ಸಪ್ಟಂಬರ) ಕೊಟ್ಟ ಒಗಟಿದ ಉತ್ತರವು:—"ಒಬ್ಬಳು ನೀರುತರುತ್ತಿರುವಾಗ ದಾರಿಯಲ್ಲಿ ಎತ್ತು ಬಂದು ದೂಡಲು, ಅವಳು ಬಿದ್ದದರಿಂದ ಅವಳ ತಲೆಯ ಮೇಲಿನ ಕೊಡವು ಒಡೆಯಿತು, ಬಳಿಕ ಅವಳು ದುಃಖಪಟ್ಟಳು". ಈ ಉತ್ತರವನ್ನು ಸ್ವಲ್ಪ ಹೆಚ್ಚು ಕಡಿಮೆಯಾಗಿ ಎಲ್ಲರೂ ಬರೆದಿದ್ದರೆ 'ಮಾರಪಿತಪತ್ನಿಪಿತ' ಈ ಶಬ್ದಕ್ಕೆ ಕೆಲವರು ಟಗರು ಎಂತಲೂ, ಕೆಲವರು, ಎತ್ತು ಎಂತಲೂ, ಉಳಿದವರು ಕರಡಿ ಎಂತಲೂ ಅರ್ಥಮಾಡಿದ್ದಾರೆ. ಇನ್ನೂ ಕೆಲವು ಒಗಟುಗಳನ್ನು ಕೊಟ್ಟಿದ್ದಾರೆ. ಅನುಕೂಲ ಪ್ರಕಾರ ಮುಂದ ಪ್ರಗಟಿಸುವೆವು.

ಖಾನಾಪುರ:— ಗಂಗಾಪೂರ ಮಾಸ್ತರ ಮಿ. ಉಗಲಾಟಿ ಇವರು ಕೆಲವು ಲೆಕ್ಕಗಳನ್ನು ಕೊಟ್ಟಿದ್ದಾರೆ.

(೧) ಮೂವರು ಒಂದು ಮಾವಿನಗಿಡವನ್ನು ಏರಿ ಹಣ್ಣು ಹರಕೊಂಡು ಕೆಳಗೆ ಇಳಿದು ಮಾತಾಡುತ್ತಾರೆ.

ಮೊದಲನೆಯವ:—ನನ್ನ ಹಣ್ಣುಗಳಲ್ಲಿ ಗಿಡದೊಳಗೆ ಉಳಿದ ಹಣ್ಣು ಕೂಡಿಸಲಾಗಿ ಅವು ನಿಮ್ಮಿಬ್ಬರ ಇಮ್ಮಡಿಯಾಗುತ್ತವೆ.

ಎರಡನೆಯವ:—ನನ್ನ ಹಣ್ಣುಗಳಲ್ಲಿ ಗಿಡದೊಳಗೆ ಉಳಿದ ಹಣ್ಣುಗಳನ್ನು ಕೂಡಿಸಿದರೆ ಅವು ನಿಮ್ಮಿಬ್ಬರ ಮುಮ್ಮಡಿಯಾಗುತ್ತವೆ.

ಮೂರನೆಯವ:—ನನ್ನ ಹಣ್ಣುಗಳಲ್ಲಿ ಗಿಡದೊಳಗೆ ಉಳಿದ ಹಣ್ಣುಗಳನ್ನು ಕೂಡಿಸಿದರ ಅವು ನಿಮ್ಮಿಬ್ಬರ ನಾಲ್ವಡಿ ಆಗುತ್ತವೆ.

ಆದರೆ ಒಬ್ಬೊಬ್ಬರ ಹಣ್ಣುಗಳಿಷ್ಟು ಗಿಡದಲ್ಲಿ ಉಳಿದ ಹಣ್ಣುಗಳಿಷ್ಟು ?

(೨) ತಳದಲ್ಲಿ ಆರುಫೂಟು ಅಗಲ ಮೇಲ್ಬದಿಯಲ್ಲಿ ೮ ಫೂಟು ಅಗಲ ಹಾಗು ೧೨ ಫೂಟು ಎತ್ತರವಾದ ಕಂದಕವನ್ನು ಅಗಿದು ಬಂದ ಮಣಿ ನಿಂದ ಕಂದಕದ ಎರಡೂ ಬದಿಗೆ ೭ಫೂಟು ತಳರೇಖೆಯನೇಲೆ ಸಮದ್ವಿಭುಜತ್ರಿಕೋಣಾಕೃತಿಯ ಒಡ್ಡು ಹಾಕುತ್ತ ಹೋದರೆ ಒಡ್ಡು ಎಷ್ಟು ಎತ್ತರವಾಗುವದು

ಈ ಲೆಕ್ಕವನ್ನು ಆಕೃತಿ ಸಹಿತವಾಗಿ ಬಿಡಿಸತಕ್ಕದ್ದು.

ಪ್ರಕಟನೆ ೧.

ಮೆ॥ ಡಾಯರೆಕ್ಟರ ಆಫ ಪ. ಇ. ರವರ ಪತ್ರನಂ. S–86–(C)–79 S. C. ತಾ. 28–10–1927 ನೇದ್ದರ ಪ್ರಕಾರ ಮಂಜೂರಾದ ಪುಸ್ತಕಗಳ ಯಾದಿಯು.

ನಂ.	ಪುಸ್ತಕಗಳ ಹೆಸರುಗಳು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾವಕ್ಕೋಸ್ಕರ ಮಂಜೂರಾಗಿದೆ.
೧	ಸುಭದ್ರಾ	ಬಿ. ವೆಂಕಟಕೃಷ್ಣಪ್ಪಾ	ಕೆ. ಎಸ್. ರಾಮಬ್ರದರ್ಸ	೦–೬–೦	ಮಾಧ್ಯಮಿಕ ಸಾಲೆಗಳ ವಿದ್ಯಾರ್ಥಿಗಳ ಲಾಯಬ್ರರಿಗೋಸ್ಕರ ಸದರ
೨	ಶ್ಯಾಮಕುಬ್ಜ	ಸದರ	ಸದರ	೦–೮–೦	
೩	ನವೀನ ಭರತಖಂಡ	”	ಮ್ಯಾನೇಜರ ಕಾಕ್ಸಟನ್ ಪ್ರೆಸ್ ಬೆಂಗಳೂರ	೦–೫–೦	”
೪	ನಿರ್ಮಲೆ	ಶ್ರೀರಾಮ	ಮ್ಯಾನೇಜರ ಕರ್ನಾಕಟ ಬುಕ್ಕಡಿಪೊ ಬೆಳಗಾಂವ	೦–೧೫–೦	”
೫	ಫುಟಬಾಲ ಆಟವನಿಬಂಧಗಳು		ಸದರ	೦–೪–೦	”
೬	ನೈತಿಕ ಮತ್ತು ಭಕ್ಯಿಯ ವಚನಗಳು	ಪಿ. ಜಿ. ಹಳಕಟ್ಟಿ	ಪಿ. ಜಿ. ಹಳಕಟ್ಟಿ ಹಿತಚಿಂತಕ ಬೆಂಗಳೂರ	೦–೧೦–೦	”
೭	ಬೆಂಜಾಮಿನ್ ಫ್ರಾಂಕ್ಲಿನ್	ಕೆ. ಎಲ್. ಸುಬ್ರಾವ	ಕೆ. ಎಲ್. ಸುಬ್ರಾವ ದೇಶಿ ವಿದ್ಯಾಲಯ ಬೆಂಗಳೂರ	೦–೧೫–೦	”
೮	ಭೀಷ್ಮ	ಡಿ. ಕೆ. ಭಾರದ್ವಾಜ	ಮ್ಯಾನೇಜರ ಆನಂದಾಶ್ರಮ ಬಸವನಗುಡಿ ಬೆಂಗಳೂರ	೦–೪–೦	”

(*Sd*). **N. D. Abhyankar,**
for D. P. I.

ಪ್ರಕಟನೆ ೧.

ಪ್ರಕಟನೆ ೨.

ಮೆ॥ ಡಾಯರೆಕ್ಟರ ಆಫ ಪ. ಇ. ರವರ ಪತ್ರ ನಂ. S—86 (C) –79–P–G ತಾ॥ ೨೮–೧೦–೧೯೨೬ನೇ ದ್ದರ ಪ್ರಕಾರ ಮಂಜೂರಾದ ಪುಸ್ತಕಗಳು

ನಂ:	ಪುಸ್ತಕಗಳ ಹೆಸರು.	ಗ್ರಂಥಕರ್ತನ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂಜೂರಾಗಿವೆ.
೧	ಗ್ರಾಮೋಪಾಠ ಸಾಲೆಯ ವಾಚಕ	ಕೆ. ರಂಗಾಚಾರಿಯರ	ಮ್ಯಾಕಮಿಲನ್ ಮತ್ತು ಕಂಪನಿ ಲಿ. ಹಾರ್ನಬಿ ರೋಡ ಮುಂಬೈ	೦ –೮–೦	ಪ್ರಾಥಮಿಕ ಸಾಲೆಗಳ ಪಠ್ಯ ಪುಸ್ತಕ

(*Sd*). **N. D. Abhyankar,**
for *D. P. I.*

ಪ್ರಕಟನೆ ೩.

ಮೆ॥ ಡಾಯರೆಕ್ಟರ ಆಫ. ಪ. ಇ. ರವರ ಪತ್ರ ನಂ. S. 86–(C) –75–P–G ತಾ॥ ೧೩–೧೦–೧೯೨೬ನೇದ್ದರ ಪ್ರಕಾರ ಮಂಜೂರಾದ ಪುಸ್ತಕಗಳು

ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತನ ಹೆಸರು.	ಪ್ರಕಾಶಕರ ಹೆಸರು.	ಬೆಲೆ	ಯಾತಕ್ಕೋಸ್ಕರ ಮಂಜೂರಾಗಿವೆ.
೧	ಕರ್ನಾಟಕ ಬಾಲಬೋಧೆ	ಕರಿಬಸವ ಶಾಸ್ತ್ರಿ	ಎಚ್. ಜಿ. ಲಿಂಗಣ್ಣ ಅ್ಯಂಡ ಸನ್ ಮೈಸೂರ	೦ –೪–೦	ಪ್ರಾಥಮಿಕ ಸಾಲೆಗಳ ಪಠ್ಯ ಪುಸ್ತಕ

(*Sd*). **N. D. Abhyankar,**
for *D. P. I.*

ಪ್ರಕಟನೆ ೪.

ಗಂಡುಹುಡುಗರ ವ್ಹರ್ನಾಕ್ಯುಲರ ಫಾಯನಲ್ ಪರೀಕ್ಷೆ ವಿದ್ಯೆಯಲ್ಲಿ ಹಿಂದುಳಿದ ವರ್ಗಗಳ ಉಮೇದವಾರರ ಫೀಯನ್ನು ತೆಗೆದು ಹಾಕಿಪಬಗ್ಗೆ

ಮುಂಬೈಸರಕಾಗದ ವಿದ್ಯಾಖಾತೆ.

ತರಾವ ನಂ. ೨೪೬೦

ಮುಂಬೈ ೨೯ನೇ ಅಕ್ಟೊಬರ ೧೯೨೭

... ...

ತರಾವು:— ತಾ ೩೧ನೇ ಜುಲಾಯಿ ೧೯೨೪ ರ ಸರಕಾರಿ ತರಾವ ನಂ ೨೪೬೦ ರಲ್ಲಿ ವಿದ್ಯೆಯಲ್ಲಿ ಹಿಂದುಳಿದ ವರ್ಗದ ಎಲ್ಲ ಜಾತಿಗಳ ಉಮೇದವಾರರಿಗೆ ವ್ಹ. ಫಾ. ಪರೀಕ್ಷೆಯು ಫೀಯನ್ನು ತೆಗೆದು ಹಾಕಿ ಕೊಟ್ಟ ಸಲವತ್ತು ಇನ್ನು ಮುಂದೆ, ಅವಶ್ಯಕ ವೆಂದು ಸರಕಾರಕ್ಕೆ ತೋರುವದಿಲ್ಲ. ಆದ್ದರಿಂದ, ಆ ಸವಲತ್ತು ಇನ್ನೂ ಮೂರು ವರ್ಷಗಳ ವರೆಗೆ ನಡಿಸಬೇಕೆಂದು ಮಿ। ಡಾಯರೆಕ್ಟರ ಸಾಹೇಬರು ಮಾಡಿದ ಶಿಫಾರ ಸನ್ನು ಸರಕಾರವು ಒಪ್ಪಿಕೊಳ್ಳುವದಿಲ್ಲ.

ಮುಂಬೈ ಸರಕಾರದ ಅಪ್ಪಣೆಯ ಪ್ರಕಾರ
(ಒಪ್ಪಿಸಿಕೊಟ್ಟ ಖಾತೆಗಳು)
ಸಹಿ:— ಎ. ಎಚ್. ಫ್ರೇಕಪ್
ಅಂಡರ ಸೆಕ್ರೆಟರಿ.

ಪ್ರಕಟನೆ ೫.

ನಂ. ೨೬೩೬ ತಾ ೧೩ನೇ ಮೇ ೧೯೨೭.

ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ ನಿಯಮಗಳಲ್ಲಿ ತಿದ್ದುಪಡಿ:—

ನಿಯಮ. ೧.

ಮೊದಲನೇ ವಾಕ್ಯದ ಬದಲಾಗಿ ಸೇರಿಪಡಿಸಕ್ಕದ್ದು:—

ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯು ವರ್ಷಕ್ಕೊಮ್ಮೆ ಪ್ರತಿಯೊಂದು ಜಿಲ್ಲೆಯಲ್ಲಿ; ಸಾಕಷ್ಟು ಉಮೇದವಾರರು ಬರುವ ಹಿಂದು ಅಥವಾ ಹೆಚ್ಚು ಅನುಕೂಲವಾದ ಸೆಂಟರುಗಳಲ್ಲಿ ಎಪ್ರಿಲ್ ತಿಂಗಳಲ್ಲಿ ವಿದ್ಯಾಖಾತೆಯಿಂದ ತೆಗೆದುಕೊಳ್ಳಲ್ಪಡುವದು.

ಪುರವಣಿ. ಬ.

ಪರೀಕ್ಷೆಯ ಅಭ್ಯಾಸಪತ್ರಿಕೆ.

ಅಭ್ಯಾಸಪತ್ರಿಕೆಯು ಕೊನೆಗೆ 'ಟಿಪ್ಪಣಿ' ಎಂಬಿದರ ಮುಂದಿರುವ ಭಾಗದ ಬದಲಾಗಿ ಸೇರಿಸತಕ್ಕದ್ದು:—

" ಮುಂಬಯಿ ಇಲಾಖೆಯಲ್ಲಿ ಮಾತ್ರ ಇತಿಹಾಸವು ೧೯೩೮ ರಿಂದ 'ಆವಶ್ಯಕ' ವಿಷಯವಾಗುವದು.

೧೯೩೮ ರಿಂದ ಇಲಾಖೆಯೊಳಗಿನ ಉಮೇದವಾರರು ಪ್ರಕೃತಿವಿಮರ್ಶೆ, ಡ್ರಾಯಿಂಗ, ಗಾಯನ, ಗಾಯನಗಳಲ್ಲಿ ಒಂದು ವಿಷಯವನ್ನು ಐಚ್ಛಿಕವಾಗಿ ತೆಗೆದು ಕೊಳ್ಳತಕ್ಕದ್ದು.

ಮುಂಬಯಿ ಸರಕಾರದ ಅಪ್ಪಣೆಯಪ್ರಕಾರ (ಒಪ್ಪಿಸಿದ ಖಾತೆಗಳು)

ಸಿ. ಡಬ್ಲ್ಯು, ಎ. ಟರ್ನರ,
ಸೆಕ್ರೆಟರಿ.

ಪ್ರಕಟನೆ ೬.

ನಂ. ೬೨. ಬಿ. ೭೧೪೯ ತಾ. ೭೪–೧೨–೧೯೩೭.

೧೯೩೮ ನೇ ಇಸವಿಯಲ್ಲಿ ಆಗತಕ್ಕ ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯು ಬರುವ ೧೯೩೮ನೇ ಇಸ್ವಿ ಎಪ್ರಿಲ್ ತಿಂಗಳ ತಾರೀಖು ೧೦ನೇ ಮಂಗಳವಾರ ಹಾಗು ಅದರ ಮುಂದಿನ ದಿವಸಗಳಲ್ಲಿ, ಮುಂದೆ ಹೇಳಿದ ಸೆಂಟರುಗಳಲ್ಲಿ ನಡೆಯುವದು.

ಜಿಲ್ಲೆ.	ಸೆಂಟರು.
ಧಾರವಾಡ	ಧಾರವಾಡ
	ಗದಗ
ಬೆಳಗಾಂವ	ಬೆಳಗಾಂವ
ವಿಜಾಪುರ	ವಿಜಾಪುರ
ಕಾನಡಾ	ಕಾರವಾರ

೨. ಗವ್ಹರ್ನಮೆಂಟ ಹಾಯ್‌ಸ್ಕೂಲ ಹೆಡ್‌ಮಾಸ್ತರರು 'ಸ್ಥಾನಿಕ ಪರೀಕ್ಷೆಯ ಕವಿಯಿಟಿಯ, ಚೆಅರಮನ್‌ರಾಗುವರು. ಅರ್ಜಿಗಳು ೧೯೩೮ನೇ ಮಾರ್ಚತಿಂಗಳ ೧೫ನೇ ತಾರೀಖಿಗೆ ಅಥವಾ ಅದಕ್ಕೂ ಮೊದಲು ಚೆಅರಮನ್ನರ ಕಡೆಗೆ ಮುಟ್ಟುವಂತೆ ಕಳಿಸತಕ್ಕದ್ದು.

೩. ಅರ್ಜಿಯ ಫಾರ್ಮುಗಳು, ಚೆಅರಮನ್ನರ ಕಡಿಗೆ ಬರೆದು ಕೇಳಿದರೆ, ಬೆಲೆ ಇಲ್ಲದೆ ಸಿಗುವವು.

೪. ಪ್ರತಿಯೊಬ್ಬ ಉಮೇದವಾರಳಿಗೆ ಪರೀಕ್ಷೆಯ ಫೀ ೩ ರೂ. ಇದ್ದು ಅದನ್ನು ಪರೀಕ್ಷೆಯ ಮೊದಲನೇ ದಿವಸ ಕೊಡಬೇಕಾಗುವದು.

ಜೇ. ಎಸ್. ಕಾಪ್ರಿ,
ಎಜ್ಯುಕೇಶನಲ್ ಇನಸ್ಪೆಕ್ಟರ ದ. ಭಾ.

ಪ್ರಕಟನೆ ೩

ಹಿಂದುಗಳಲ್ಲಿ ಮಧ್ಯಮ ವರ್ಗದ ಹಾಗು ಹಿಂದುಳಿದವರ ಸಲುವಾಗಿಯೂ ಮುಸಲ್ಮಾನರ ಸಲುವಾಗಿಯೂ ಕಾದಿಟ್ಟ ಮಿಡಿಲ್‌ಸ್ಕೂಲ ಸ್ಕಾಲರಶಿಪ್ಪುಗಳು.

ದಕ್ಷಿಣಭಾಗ

(ನಂ. ೩೩-S-೨೦೩೯)

೧ ಎ. ವ್ಹಿ. ಸ್ಕೂಲಗಳ ೧ನೇ ಇಯತ್ತೆಯಲ್ಲಿ ದೊರೆಯತಕ್ಕ ಸ್ಕಾಲರಶಿಪ್ ಪರೀಕ್ಷೆಯು ೧೯೨೮ನೇ ಇ. ಮಾರ್ಚತಿಂಗಳ ೧೨, ೧೩, ೧೪ ತಾರೀಕುಗಳಲ್ಲಿ (ಸೋಮವಾರ, ಮಂಗಳವಾರ, ಬುಧವಾರ) ಮಧ್ಯಾನ್ನದ ೧೨ ಗಂಟೆಗೆ ಸರಿಯಾಗಿ ಕೆಳಗೆ ಬರಿದ ಸೆಂಟರುಗಳಲ್ಲಿ ನಡೆಯುವದು.

(೧) ಧಾರವಾಡ ಹಾಯಸ್ಕೂಲ (೩) ವಿಜಾಪೂರ ಹಾಯಸ್ಕೂಲ
(೨) ಬೆಳಗಾಂವ ಸರದಾರ ಹಾಯಸ್ಕೂಲ (೪) ಕಾರವಾರ ಹಾಯಸ್ಕೂಲ

೨ ಸ್ಕಾಲರಶಿಪ್ಪುಗಳ ಸಂಖ್ಯೆಯು ಕೆಳಗೆ ಕೊಟ್ಟಂತೆ ಇರುವದು.

ಜಿಲ್ಲೆ	ಮಧ್ಯಮ ವರ್ಗದವರಬಗ್ಗೆ	ಹಿಂದುಳಿದವರಬಗ್ಗೆ	ಮುಸಲ್ಮಾನರಬಗ್ಗೆ
(೧) ಧಾರವಾಡ	೧೨	೫	೧೦
(೨) ಬೆಳಗಾಂವ	೯೨	೪	೫
(೩) ವಿಜಾಪೂರ	೧೦	೫	೬
(೪) ಕಾರವಾರ	೫	೧	೨

೩ ಪರೀಕ್ಷೆಯು ಬೆಳಗಾಂವ ಕಾರವಾರ ಸೆಂಟರುಗಳಲ್ಲಿ ಕನ್ನಡ ಮತ್ತು ಮರಾಠಿಯಲ್ಲಿ, ಧಾರವಾಡ ವಿಜಾಪೂರ ಸೆಂಟರುಗಳಲ್ಲಿ ಕನ್ನಡದಲ್ಲಿ ತೆಗೆದುಕೊಳ್ಳಲ್ಪಡುವದು. ಮುಸಲ್ಮಾನ ಉಮೇದವಾರರು ಉರ್ದುದಲ್ಲಿ ಕೂಡ್ರಬಹುದು.

೪ ದೇಶಭಾಷೆಯ ೪ನೇ ಇಯತ್ತೆಯ ಪ್ರಕಾರ ಪರೀಕ್ಷೆಯು ತೆಗೆದುಕೊಳ್ಳಲ್ಪಡುವದು.

೫ ಪರೀಕ್ಷೆಯು ಒಂದು ಕಮೀಟಿಯವರಿಂದ ತೆಗೆದುಕೊಳ್ಳಲ್ಪಡುವದು. ಆಯಾ ಸೆಂಟರಿನ ಹಾಯಸ್ಕೂಲ ಹೆಡ್ಡಮಾಸ್ತರರು ಇದರ ಅಧ್ಯಕ್ಷರಿರುತ್ತಾರೆ. ಅರ್ಜಿಗಳನ್ನು ಗೊತ್ತುಪಡಿಸಿದ ಛಾಪಿ ಫಾರ್ಮುಗಳಲ್ಲಿಯೇ ಮಾಡತಕ್ಕದ್ದು. ಫಾರ್ಮುಗಳು ಅಧ್ಯ

ಕ್ಷರ ಕಡೆಗೆ ಬೆಲೆಯಿಲ್ಲದೆ ಸಿಗುವವು. ೧೯೨೮ನೇ ಫೆಬ್ರುವರಿ ೧೫ನೇ ತಾರೀಖಿನೊಳಗಾಗಿ ಮುಟ್ಟುವಂತೆ ಅರ್ಜಿಗಳನ್ನು ಅಧ್ಯಕ್ಷರ ಕಡೆಗೆ ಕಳಿಸತಕ್ಕದ್ದು. ಅದರ ಮುಂದೆ ಬಂದ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲ. ಪರೀಕ್ಷೆಗೆ ಒಂದು ರೂಪಾಯಿ ಫಿ ಇರುವದು. ಅದನ್ನು ಅರ್ಜಿಯ ಕೂಡ ಇಲ್ಲವೆ ಪರೀಕ್ಷೆಯ ಕಾಲಕ್ಕೆ ಕೊಡತಕ್ಕದ್ದು.

೬ ೧೯೨೮ನೇ ಮಾರ್ಚ ೧ನೇ ತಾರೀಖಿಗೆ ೧೪ ವರ್ಷಗಳು ಮೀರಿದ ಹುಡುಗನಿಗೆ ಹಾಗು ಆ ತಾರೀಖಿಗೆ ೧೫ ವರ್ಷಗಳು ಮೀರಿದ ಹುಡಿಗೆಗೆ ಪರೀಕ್ಷೆಗೆ ಕೂಡ್ರಲಿಕ್ಕೆ ಬರಲಾರದು.

೭ ಪರೀಕ್ಷೆಯ ಪರಿಣಾಮವನ್ನು ಅನುಸರಿಸಿ ೧೯೨೯ನೇ ಇ. ಜೂನ ೧ನೇ ತಾರೀಖಿನಿಂದ ಎ. ವ್ಹಿ. ಸ್ಕೂಲಗಳಲ್ಲಿ ೧ನೇ ಇಯತ್ತೆಯನ್ನು ಕಲಿಯುವ ವಿದ್ಯಾರ್ಥಿಗಳಿಗೆ ಈ ಸ್ಕಾಲರಶಿಪ್ ದೊರೆಯುವದು. ಮುಂದೆ ಅದು ಮೂರು ವರ್ಷಗಳ ವರೆಗೆ ನಡೆಯುವದು. ಹುಡುಗರ ಸಾಲಿಯೊಳಗಿನ ಹಾಜರಿ, ಚಲೋ ನಡತೆ, ಅಭ್ಯಾಸ ಇವುಗಳನ್ನು ನೋಡಿ ಸ್ಕಾಲರಸಿಪ್ ಕೊಡಲ್ಪಡುವುದು. ದೇಶಭಾಷೆಯ ನಾಲ್ಕನೇ ಹಾಗು ಅದರ ಮೇಲಿನ ಇಯತ್ತೆಯಗಳಲ್ಲಿ ಕಲಿಯುವವರು ಸ್ಕಾಲರಶಿಪ್ ಪಡೆಯಲಿಕ್ಕೆ ತಕ್ಕವರೆಂದು ತಿಳಿಯಲ್ಪಡುವದು.

೮ ಸಂಸ್ಥಾನಗಳ ಎ. ವ್ಹಿ. ಸ್ಕೂಲುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಈ ಪರೀಕ್ಷೆಗೆ ಕೂಡ್ರಲಿಕ್ಕೆ ಬರಲಾರದು.

೯ ಅರ್ಜಿಗಳಲ್ಲಿ ಜಾತಿ (ಒಳಭೇದ ಸಹಿತ), ಜನ್ಮ ತಾರೀಖು ಇವುಗಳನ್ನು ಸ್ಪಷ್ಟವಾಗಿ ತೋರಿಸಬೇಕು. ಅರ್ಜಿಯ ಫಾರ್ಮಿನಲ್ಲಿ ಕಟ್ಟಕಡೆಗೆ ಒಂದು ಕೋಷ್ಟಕಿನಲ್ಲಿ ಉಮೇದವಾರರ ಹಿರಿಯರು ಇನಕಮ್‌ಟ್ಯಾಕ್ಸ ಅಥವಾ ತೆರಿಗೆಯನ್ನು ಕೊಡುತ್ತಿದ್ದರೆ ಅದನ್ನು ತೋರಿಸತಕ್ಕದ್ದು. ಯಾವ ಉಮೇದವಾರನ ಹಿರಿಯರು ಇನಕಮ್‌ಟ್ಯಾಕ್ಸ ಕೊಡುತ್ತಿರುವರೋ ಅಥವಾ ೨೦೦, ಇಲ್ಲವೇ ಅದಕ್ಕೂ ಹೆಚ್ಚು ತೆರಿಗೆಯನ್ನು ಕೊಡುತ್ತಿರುವರೋ ಅಂಥ ಉಮೇದವಾರನಿಗೆ ಈ ಪರೀಕ್ಷೆಗೆ ಕೂಡ್ರಲಿಕ್ಕೆ ಬರಲಾರದು.

ಧಾರವಾಡ
ತಾ॥ ೧೫ನೇ ಡಿಶಂಬರ ೧೯೨೭

S. L. Ugrankar,
ಆಕ್ಟಿಂಗ ಎಜುಕೇಶನಲ್ ಇನಸ್ಪೆಕ್ಟರ ದ. ಭಾ.

ವ್ಹರ್ನಾಕ್ಯುಲರ ಫಾಯನಲ್ ಪರೀಕ್ಷೆ.

ದಕ್ಷಿಣಭಾಗ. ೧೯೨೮

ಗಂಡು ಹುಡುಗರ ವ್ಹ. ಫಾ. ಪರೀಕ್ಷೆಯು ದಕ್ಷಿಣಭಾಗದ ಎಲ್ಲ ಜಿಲ್ಲೆಗಳಲ್ಲಿ ಶನಿವಾರ ೩೧ನೇ ಮಾರ್ಚ ೧೯೨೮ ಮತ್ತು ಮುಂದಿನ ದಿವಸಗಳಲ್ಲಿ ಜರಗುವದು! ಪರೀಕ್ಷೆಯ ಸೆಂಟರುಗಳು ಕೆಳಗೆ ಬರದಂತೆ ಇರುವವು. (೧) ಧಾರವಾಡ, (೨) ಬೆಳಗಾಂವಿ (೩) ವಿಜಾಪೂರ (೪) ಕಾರವಾರ (೫) ಕೊಲ್ಹಾಪೂರ ಮತ್ತು (೬) ಹುಬ್ಬಳ್ಳಿ (ಇದು ಧಾರವಾಡ ಜಿಲ್ಲೆಯೊಳಗಿನ ಉರ್ದು ವಿದ್ಯಾರ್ಥಿಗಳಿಗಾಗಿ).

೨. ಪ್ರತಿಯೊಂದು ಸೆಂಟರಿನಲ್ಲಿ ಪರೀಕ್ಷೆಯನ್ನು ಕಮೀಟಿಯವರು ತೆಗೆಕೊಳ್ಳುವರು. ಧಾರವಾಡ, ಬೆಳಗಾಂವಿ, ವಿಜಾಪೂರ, ಕಾರವಾರ, ಹುಬ್ಬಳ್ಳಿ ಉರ್ದು ಹಾಯಸ್ಕೂಲುಗಳ ಹೆಡ್ ಮಾಸ್ತರರು ಆಯಾ ಕಮೀಟಿಗಳ ಅಧ್ಯಕ್ಷರು. ಕೊಲ್ಹಾಪೂರದಲ್ಲಿ ಅಲ್ಲಿಯ ಎಜ್ಯುಕೇಶನಲ್ ಇನಸ್ಪೆಕ್ಟರರು ಅಧ್ಯಕ್ಷರಿರುವರು.

೩. ಪರೀಕ್ಷೆಗೆ ಅರ್ಜಿಮಾಡತಕ್ಕವರು ನಮೂನೆಯ ಮೇಲೆ ಉಮೇದವಾರರು ಕೂಡ್ರತಕ್ಕ ಸೆಂಟರಪ ಪ್ರೆಸಿಡೆಂಟರ ಕಡೆಗೆ ತಮ್ಮ ಅರ್ಜಿಗಳನ್ನು ೧ನೇ ಮಾರ್ಚ ೧೯೨೮ರನೇ ದಿವಸ ಅಥವಾ ಅದಕ್ಕೂ ಮುಂಚಿತವಾಗಿ ಕಳಿಸತಕ್ಕದ್ದು. ನಂತರ ಬಂದ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲ. ಅರ್ಜಿಯಲ್ಲಿ ಉಮೇದವಾರನ ಪೂರ್ಣ ಹೆಸರು, ಜಾತಿ, ಸಾಲೆಯಿಂದ ಬಂದಿದ್ದರೆ ಸಾಲೆಯ ಹೆಸರು ಮುಂತಾದ್ದನ್ನು ಬರೆಯಬೇಕು.

ಅರ್ಜಿಯ ನಮೂನೆಗಳನ್ನು ಆಯಾ ಪ್ರೆಸಿಡೆಂಟರಿಂದ ತರಿಸಿಕೊಳ್ಳಬಹುದು.

೪. ೩೧ನೇ ಮಾರ್ಚ ೧೯೨೮ಕ್ಕೆ ಉಮೇದವಾರನ ವಯಸ್ಸು ೨೫ಕ್ಕೆ ಮೀರಿರಬಾರದು. ಮತ್ತು ಅವನು ಯಾವ ಜಿಲ್ಲೆಯಲ್ಲಿ ಪರೀಕ್ಷೆಗೆ ಕೂಡ್ರಲಿಚ್ಛಿಸುವನೋ ಆ ಜಿಲ್ಲೆಯಲ್ಲಿ ೬ ತಿಂಗಳು ವಾಸಮಾಡಬೇಕು. ಈ ಬಗ್ಗೆ ಉಮೇದವಾರನು ಮಾನ್ಯವಾದ ಸಾಲೆಯ ಹೆಡ್ ಮಾಸ್ತರನಿಂದ ಸಾಲೆಗೆ ಹೋಗದವನಿದ್ದರೆ ಊರ ಗೌಡನಿಂದ ಮುನಿಸಿಪಾಲಟಿ ಅಥವಾ ಲೋಕಲ್‌ಬೋರ್ಡ ಮಾಸ್ತರರಿಂದ ಅಥವಾ ಇತರ ಸಭ್ಯ ಗೃಹಸ್ಥರಿಂದ ಸರ್ಟಿಫಿಕೀಟು ಸಹಿಮಾಡಿಸಿ ಕಳಿಸಬೇಕು.

ಹೆಣ್ಣುಮಕ್ಕಳಿಗೆ ವಯಸ್ಸಿನ ನಿರ್ಬಂಧವಿಲ್ಲ.

೫. ಧಾರವಾಡ, ಕಾನಡಾ ಜಿಲ್ಲೆಗಳ ಭಾಷೆಯು ಕನ್ನಡು. ಬೆಳಗಾವಿ, ವಿಜಾಪೂರಗಳ ಭಾಷೆ ಕನ್ನಡು ಹಾಗೂ ಮರಾಠಿ. ಕೊಲ್ಹಾಪೂರದ್ದು ಮರಾಠಿ.

ಬೆಳಗಾಂವಿ ವಿಜಾಪೂರಗಳಲ್ಲಿ ಕನ್ನಡ, ಮರಾಠಿ ಎರಡೂ ಭಾಷೆಗಳಲ್ಲಿ ಪರೀಕ್ಷೆಯು ನಡೆಯುವದು. ಧಾರವಾಡ ಕಾನಡಾ ಜಿಲ್ಲೆಗಳ ಮರಾಠೀ ಉಮೇದವಾರರು ಪರೀಕ್ಷೆಗೆ ಬೆಳಗಾಂವಿಗೆ ಹೋಗಬೇಕು.

೬. ಪರೀಕ್ಷೆಗೆ ನೇಮಿಸಿದ ಪುಸ್ತಕಗಳನ್ನು ೩–೩–೨೭ರ ಸರಕಾರೀ ಗ್ಯಾಜೇಟಿನ ೨ನೇ ಭಾಗದಲ್ಲಿ ಪ್ರಕಟಮಾಡಿದೆ.

೭. ಪರೀಕ್ಷೆಯ ಫೀ, ವಿಷಯ ಮುಂತಾದ ಉಳಿದ ಸಂಗತಿಗಳ ಬಗ್ಗೆ ಇದ್ದ ನೇಮಗಳು ಸರಕಾರೀ ಗ್ಯಾಜೇಟಿನಲ್ಲಿ ಆಗಾಗ್ಗೆ ಪ್ರಸಿದ್ಧವಾಗಿವೆ.

೮. ಕಾನಡಾ ಜಿಲ್ಲೆಯ ಹಳ್ಯಾಳ ತಾಲೂಕಿನವರು ಹಾಗೂ ಶಿರ್ಸಿ ತಾ॥ ನಲ್ಲಿ ಬನವಾಸಿಯವರು ಧಾರವಾಡ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬಹುದು. ಸಾಂಗಲಿ ಸಂಸ್ಥಾನದ ಕುಚಿ ತಾ॥ ನವರು ಸಾತಾರೆಯಲ್ಲಿ ಕೂಡ್ರಬಹುದು. ಔಂದ ಸಂಸ್ಥಾನದ ಗುಂಡಲ ತಾ॥ ನವರು ವಿಜಾಪೂರದಲ್ಲಿ ಕೂಡ್ರಬಹುದು.

೯. ಆಗ್ರಿಕಲ್ಚರಲ್ ಬಾಯಸದ ವ್ಹ. ಫಾ. ಪರೀಕ್ಷೆಯು ಇದೇ ಕಾಲದಲ್ಲಿ ಧಾರವಾಡ, ಬೆಳಗಾಂವ, ವಿಜಾಪೂರ, ಕಾರವಾರ ಸೆಂಟರುಗಳಲ್ಲಿ ನಡೆಯುವದು.

ತಾ॥ ೪–೧೦–೨೮.

J. S. Kadri.

ಎಜುಕೇಶನಲ್ ಇನಸ್ಪೆಕ್ಟರ.

ವಚನ —

ವಚನದಲ್ಲಿ ಏಕವಚನವೆಂತಲೂ, ಬಹುವಚನವೆತಂಲೂ ಎರಡುಪ್ರಕಾರಗಳುಂಟು.

ಏಕವಚನ —

ಪುಸ್ತಕವು, ನಾಯಿಯು, ಮಂಗನು, ಅವನು, ನಾನು, ನೀನು, ಕೂಸು, ಗುರುವು, ಹುಡುಗನು, ಕಳ್ಳನು, ಇತ್ಯಾದಿ ಇವು ಒಂದುವಸ್ತುವನ್ನು ಹೇಳುವವು. ಆದ್ದರಿಂದ—

ನೇ. ೧೭— ಒಂದು ವಸ್ತುವನ್ನು ತೋರಿಸುವ (ಸೂಚಿಸುವ) ಶಬ್ದಕ್ಕೆ **ಏಕವಚನ** ವೆನ್ನುವರು.

ಬಹುವಚನ—

ಪುಸ್ತಕಗಳು, ನಾಯಿಗಳು, ಮಕ್ಕಳು, ಅವರು, ನಾವು, ನೀವು, ಕೂಸುಗಳು, ಗುರುಗಳು, ಹುಡುಗರು, ಕಳ್ಳರು ಇತ್ಯಾದಿ. ಇವು ಒಂದಕ್ಕಿಂತ ಹೆಚ್ಚು ಅಂದರೆ ಅನೇಕ ವಸ್ತುಗಳನ್ನು ಸೂಚಿಸುವವು. ಆದ್ದರಿಂದ—

ನೇ. ೧೮— ಒಂದಕ್ಕಿಂತ ಹೆಚ್ಚು ವಸ್ತುಗಳನ್ನು ತೋರಿಸುವ (ಸೂಚಿಸುವ) ಶಬ್ದಕ್ಕೆ **ಬಹುವಚನ**ವೆನ್ನುವರು.

ಟೀಪು—ಹಿಂದೆ ಹೇಳಿದ ವಿಭಕ್ತಿ ಪ್ರತ್ಯಯಗಳು ಎರಡೂ ವಚನಕ್ಕೂ ಒಂದೇಯಾಗಿರುವವು.

ಕಾರಕಾರ್ಥ—

(೧) ರಾಮನು ಬರುತ್ತಾನೆ. ಎಂಬ ಮಾತಿನಲ್ಲಿ

ಪ್ರಶ್ನ— ರಾಮನು ಏನು ಮಾಡುತ್ತಾನೆ? ಉತ್ತರ— ಬರುತ್ತಾನೆ.

ಪ್ರ — ಬರುವ ಕೆಲಸ ಮಾಡುವವನು ಯಾರು? ಉತ್ತರ— ರಾಮನು.

(೨) ನಾಯಿಯು ಅನ್ನವನ್ನು ತಿನ್ನುತ್ತದೆ. ಎಂಬ ಮಾತಿನಲ್ಲಿ

ಪ್ರ — ನಾಯಿಯು ಏನು ಮಾಡುತ್ತದೆ? ಉ. ತಿನ್ನುತ್ತದ.

ಪ್ರ — ಏನನ್ನು ತಿನ್ನುತ್ತದೆ? ಉ. ಅನ್ನವನ್ನು.

ಪ್ರ — ತಿನ್ನುವ ಕೆಲಸ ಮಾಡುವದು ಯಾವದು? ಉ. ನಾಯಿಯು

ಈ ಪ್ರಕಾರ ವಿಭಕ್ತಿಗಳಿಂದ ವಾಕ್ಯದೊಳಗಿನ ಪದಗಳು ಒಂದಕ್ಕೊಂದು ಸಂಬಂಧವಾಗಿರುತ್ತವೆ.

ನೇ. ೧೯ — ವಾಕ್ಯದೊಳಗಿನ ಪದಗಳ ಸಂಬಂಧವುಳ್ಳ, ವಿಭಕ್ತಿಗಳ ಅರ್ಥವೇ **ಕಾರಕಾರ್ಥವು.**

ಟೀಪು— ವಿಭಕ್ತಿಗಳನ್ನೂ, ಅವುಗಳ ಕಾರಕಾರ್ಥಗಳನ್ನೂ, ಪ್ರತ್ಯಯಗಳನ್ನೂ ಕ್ರಮದಿಂದ ಕೆಳಗೆ ಕೊಟ್ಟಿರುತ್ತದೆ.

ವಿಭಕ್ತಿ.	ಕಾರಕಾರ್ಥ	ಏ. ಪ್ರತ್ಯಯ.
೧ ಪ್ರಥಮಾ	ಕರ್ತೃ ಅಂದರೆ ಕೆಲಸ ಮಾಡುವವ	ಉ
೨ ದ್ವಿತೀಯಾ	ಕರ್ಮ ಅಂದರೆ ಕೆಲಸ ಅಥವಾ ಕ್ರಿಯೆಗೆ ವಿಷಯವಾದದ್ದು	ಅನ್ನು
೩ ತೃತೀಯಾ	ಸಾಧನ, ಹೇತು	ಇಂದ
೪ ಚತುರ್ಥಿ	ಸಂಪ್ರದಾನ ಅಂದರೆ ಕೊಡುವದನ್ನು ಹೊಂದುವದು	ಗೆ, ಇಗೆ, ಕ್ಕೆ, ಅಕ್ಕೆ,
೫ ಪಂಚಮಿ	ಅಪಾದಾನ ಅಂದರೆ ಅಗಲುವಿಕೆಯನ್ನು ತೋರಿಸುವದು	ಇಂದ
೬ ಷಷ್ಠಿ	ಸಂಬಂಧ (ಎರಡೂ ನಾಮಗಳಲ್ಲಿ)	ಅ
೭ ಸಪ್ತಮಿ	ಅಧಿಕರಣ ಅಂದರೆ ಸ್ಥಾನ	ಅಲ್ಲಿ, ಒಳಗೆ
೮ ಸಂಭೋದನ	ಕರೆಯುವದು ಅಥವಾ ನೆನೆಯುವದು	ಏ, ಇರಾ

ಟೀಪು— ಪ್ರಥಮಾ, ದ್ವಿತೀಯಾ, ತೃತೀಯಾ, ಚತುರ್ಥಿ, ಪಂಚಮಿ, ಮತ್ತು ಸಪ್ತಮಿ ಈ ಆರು ವಿಭಕ್ತಿಗಳು ಮಾತ್ರ ಕ್ರಿಯಾಪದಕ್ಕೆ ಸಂಬಂಧಿಸಿರುತ್ತವೆ.

ನಾಮಗಳ ವಿಭಕ್ತಿ ರೂಪಗಳು.

(ಅಂತ ಅಂದರೇನು? ಲಿಂಗ ಅಂದರೇನು? ಎಂದು ಹಿಂದೆ ಹೇಳಿದೆ)

ಅದರಂತೆ ಅಕಾರಾಂತ ಪುಲ್ಲಿಂಗ " ಹುಡುಗ " ಈ ಶಬ್ದದ ಎರಡೂ ವಚನದ ವಿಭಕ್ತಿರೂಪಗಳನ್ನು ಕೆಳಗ ಸಿದ್ಧವಾಡಿ ತೋರಿಸಿರುತ್ತದೆ.

ಏಕವಚನ.

	ವಿಭಕ್ತಿ.	ಮೂಲ ಶಬ್ದ.	ನಡುವೆ ಬರುವ		ವ್ಯಂಜನ.	ಪ್ರತ್ಯಯ.		ಸಿದ್ಧರೂಪ.
೧	ಪ್ರಥಮಾ	ಹುಡುಗ	+	ನ್	+	ಉ	=	ಹುಡುಗನು
೨	ದ್ವಿತೀಯಾ	ಹುಡುಗ	+	ನ್	+	ಅನ್ನು	=	ಹುಡುಗನನ್ನು
೩	ತೃತೀಯಾ	ಹುಡುಗ	+	ನ್	+	ಇಂದ	=	ಹುಡುಗನಿಂದ
೪	ಚತುರ್ಥಿ	ಹುಡುಗ	+	ನ್	+	ಇಗೆ	=	ಹುಡುಗನಿಗೆ
೫	ಪಂಚಮಿ	ಹುಡುಗ	+	ನ್	+	ಇಂದ	=	ಹುಡುಗನಿಂದ
೬	ಷಷ್ಠಿ	ಹುಡುಗ	+	ನ್	+	ಅ	=	ಹುಡುಗನ
೭	ಸಪ್ತಮಿ	ಹುಡುಗ	+	ನ್	+	ಅಲ್ಲಿ	=	ಹುಡುಗನಲ್ಲಿ
೮	ಸಂಭೋಧನ	ಹುಡುಗ	+	ನ್	+	ಏ	=	ಹುಡುಗನೇ

ಬಹುವಚನ.

	ವಿಭಕ್ತಿ	ಮೂಲಶಬ್ದ.	ನಡುವೆ	ಬರುವ	ವ್ಯಂಜನ	ಪ್ರತ್ಯಯ.		ಸಿದ್ಧರೂಪ.
೧	ಪ್ರಥಮಾ	ಹುಡುಗ	+	ರ್	+	ಉ	=	ಹುಡುಗರು
೨	ದ್ವಿತೀಯಾ	ಹುಡುಗ	+	ರ್	+	ಅನ್ನು	=	ಹುಡುಗರನ್ನು
೩	ತೃತೀಯಾ	ಹುಡುಗ	+	ರ್	+	ಇಂದ	=	ಹುಡುಗರಿಂದ
೪	ಚತುರ್ಥಿ	ಹುಡುಗ	+	ರ್	+	ಇಗೆ	=	ಹುಡುಗರಿಗೆ
೫	ಪಂಚಮಿ	ಹುಡುಗ	+	ರ್	+	ಇಂದ	=	ಹುಡುಗರಿಂದ
೬	ಷಷ್ಠಿ	ಹುಡುಗ	+	ರ್	+	ಅ	=	ಹುಡುಗರ
೭	ಸಪ್ತಮಿ	ಹುಡುಗ	+	ರ್	+	ಅಲ್ಲಿ	=	ಹುಡುಗರಲ್ಲಿ
೮	ಸಂಬೋಧನ	ಹುಡುಗ	+	ರ್	+	ಏ,	=	ಹುಡುಗರೇ
					+	ಇರಾ	=	ಹುಡುಗರಿರಾ

ಎಲ್ಲ ಅಕಾರಾಂತ ಪುಲ್ಲಿಂಗ ನಾಮಗಳ ರೂಪಗಳು ಈ ಪ್ರಕಾರ ಸಿದ್ಧವಾಗುತ್ತವೆ. ಕುರುಡ, ಕುಂಟ, ಕುರುಬ, ಬಡಿಗ, ಚಿತ್ರಗಾರ ಇತ್ಯಾದಿ. ಇವು ಅಕಾರಾಂತ ಪುಲ್ಲಿಂಗ ನಾಮಗಳು.

ನೇ. ೨೦— ವಿಭಕ್ತಿರೂಪಗಳನ್ನು ಸಿದ್ಧಮಾಡುವಾಗ ಎಲ್ಲ ಅಕಾರಾಂತ ಪುಲ್ಲಿಂಗ ನಾಮಗಳಿಗೂ ವಿಭಕ್ತಿ ಪ್ರತ್ಯಯಕ್ಕೂ ನಡುವೆ ಏಕವಚನದಲ್ಲಿ "ನ್" ಅಕ್ಷರವೂ, ಬಹುವಚನದಲ್ಲಿ "ರ್" ಅಕ್ಷರವೂ ಬರುವದು.

ಟೀಪು:—(೧) ಅಕಾರಾಂತ ಪುಲ್ಲಿಂಗ ಅಂಕಿತನಾಮಗಳಿಗೆ ವಾತ್ರ ಬಹುವಚನವಿಲ್ಲ. ಅಂದರೆ

ಏಕವಚನ	ಬಹುವಚನ
ರಾಮನು	ರಾಮರು ಎಂದಾಗುವದಿಲ್ಲ
ಭೀಮನು	ಭೀಮರು ಎಂದಾಗುವದಿಲ್ಲ

(೨) ಪ್ರತಿಯೊಂದು ನಾಮಪದಕ್ಕೆ ಎರಡೂ ವಚನಗಳಲ್ಲಿ ವಿಭಕ್ತಿ ಪ್ರತ್ಯಯಗಳನ್ನು ಹಚ್ಚುವ ಮುಂದೆ ಆ ಪದವು ಹೊಂದಿಕೆಯಾಗುವಂತೆ ನಡುವೆ ಒಂದಾಗಲಿ, ಹಲವಾಗಲಿ ಅಕ್ಷರಗಳು ಸೇರುತ್ತವೆ. ಆದರೆ ಕೆಲವು ನಾಮಗಳಿಗೆ ಕೆಲವು ವಿಭಕ್ತಿಗಳಲ್ಲಿ ಸೇರುವದಿಲ್ಲ.

(೩) ಅಂಕಿತನಾಮದ ಹೊರತಾಗಿ ಪ್ರತಿಯೊಂದು ನಾಮಪದದ ರೂಪಗಳು ಏಕವಚನ ಬಹುವಚನಗಳಲ್ಲಿ ಕೂಡಿ ೧೬ ಕ್ಕಿಂತ ಕಡಿಮೆಯಾಗುವದಿಲ್ಲ.

(೪) ಚತುರ್ಥಿ ವಿಭಕ್ತಿಯ ನಾಲ್ಕು ಪ್ರತ್ಯಯಗಳಲ್ಲಿ ಏಕವಚನ, ಬಹುವಚನಗಳಲ್ಲಿ ಅನುಕೂಲವಾದ್ದನ್ನು ಹಾಕಬೇಕು. ಸಂಬೋಧನದ ಬಹುವಚನದಲ್ಲಿ "ಇರಾ" ಪ್ರತ್ಯಯವೂ ಬರುವದು.

ಅಕಾರಾಂತ ನಪುಂಸಕಲಿಂಗ "ಮರ" ಶಬ್ದದ ರೂಪಗಳು.

ಏಕವಚನ

ವಿಭಕ್ತಿ.	ಮೂಲಶಬ್ದ.		ನಡುವಿನ ಅಕ್ಷರ.		ವಿ. ಪ್ರತ್ಯಯ		ಸಿದ್ಧರೂಪ.
ಪ್ರ	ಮರ	+	ವ್	+	ಉ	=	ಮರವು
ದ್ವಿ	ಮರ	+	ವ್	+	ಅನ್ನು	=	ಮರವನ್ನು
ತೃ	ಮರ	+	ದ್	+	ಇಂದ	=	ಮರದಿಂದ
ಚ	ಮರ	+		+	ಕ್ಕೆ	=	ಮರಕ್ಕೆ
ಪಂ	ಮರ	+	ದ್	+	ಇಂದ		ಮರದಿಂದ
ಷ	ಮರ	+	ದ್	+	ಅ	=	ಮರದ
ಸ	ಮರ	+	ದ್	+	ಅಲ್ಲಿ	=	ಮರದಲ್ಲಿ
ಸಂ	ಮರ	+	ವ್	+	ಏ	=	ಮರವೇ

ಬಹುವಚನ

ವಿ.	ಮೂ. ಶ		ನ. ಅಕ್ಷರ.		ವಿ. ಪ್ರ.		ಸಿದ್ಧರೂಪ.
ಪ್ರ	ಮರ	+	ಗಳ್	+	ಉ	=	ಮರಗಳು
ದ್ವಿ	ಮರ	+	ಗಳ್	+	ಅನ್ನು	=	ಮರಗಳನ್ನು
ತೃ	ಮರ	+	ಗಳ್	+	ಇಂದ	=	ಮರಗಳಿಂದ
ಚ	ಮರ	+	ಗಳ್	+	ಇಗೆ	=	ಮರಗಳಿಗೆ
ಪಂ	ಮರ	+	ಗಳ್	+	ಇಂದ	=	ಮರಗಳಿಂದ
ಷ	ಮರ	+	ಗಳ್	+	ಅ	=	ಮರಗಳ
ಸ	ಮರ	+	ಗಳ್	+	ಅಲ್ಲಿ	=	ಮರಗಳಲ್ಲಿ
ಸಂ	ಮರ	+	ಗಳ್	+	ಏ	=	ಮರಗಳೇ
				+	ಇರಾ	=	ಮರಗಳಿರಾ

ಇದೇ ಪ್ರಕಾರ ಎಲ್ಲ ಅಕಾರಾಂತ ನಪುಂಸಕಲಿಂಗ ನಾಮಗಳು ಸಿದ್ಧವಾಗುತ್ತವೆ. ಗಿಡ, ಹಳ್ಳ, ಗೂಟ, ಕಮಲ, ಪುಸ್ತಕ, ಬಾಗಿಲ, ಪದಕ, ರುಮಾಲ, ಕಳಸ, ಹಡಗ ಇತ್ಯಾದಿಗಳು ಅಕಾರಾಂತ ನಪುಂಸಕಲಿಂಗ ನಾಮಗಳು ಆದ್ದರಿಂದ-

ಸೂ. ೨೧–ಅಕಾರಾಂತ ನಪುಂಸಕಲಿಂಗ ನಾಮಗಳಿಗೂ ವಿಭಕ್ತಿಪ್ರತ್ಯಯಕ್ಕೂ ನಡುವೆ ಏಕವಚನದಲ್ಲಿ ಪ್ರಥಮಾ, ದ್ವಿತೀಯಾ, ಸಂಬೋಧನಗಳಲ್ಲಿ "ವ್" ಅಕ್ಷರವೂ ತೃತೀಯಾ, ಪಂಚಮಿ, ಷಷ್ಠಿ ಸಪ್ತಮಿ, ಗಳಲ್ಲಿ "ದ" ಅಕ್ಷರವೂ ಬರುವದು. ಚತುರ್ಥಿಯ ಏಕವಚನದಲ್ಲಿ ಏನೂ ಅಕ್ಷರ ಬರುವದಿಲ್ಲ. ಬಹುವಚನದಲ್ಲಿ ಎಲ್ಲ ವಿಭಕ್ತಿಗಳ ನಡುವೆ "ಗಳ್" ಬರುವದು.

ಇಕಾಂತರಾತ "ಕವಿ" ಶಬ್ದರೂಪಗಳು.

	ಏಕವಚನ					ಬಹುವಚನ				
ವಿ.	ಮೂ. ಶ.		ನ. ಅ.		ವಿ. ಪ್ರ.	ಸಿ. ರೂಪ.				
ಪ್ರ	ಕವಿ	+	ಯ್	+	ಉ	= ಕವಿಯು	ಕವಿ	+ ಗಳ್	+ ಉ	= ಕವಿಗಳು
ದ್ವಿ	ಕವಿ	+	ಯ್	+	ಅನ್ನು	= ಕವಿಯನ್ನು	ಕವಿ	+ ಗಳ್	+ ಅನ್ನು	= ಕವಿಗಳನ್ನು
ತೃ	ಕವಿ	+	ಯ್	+	ಇಂದ	= ಕವಿಯಿಂದ	ಕವಿ	+ ಗಳ್	+ ಇಂದ	= ಕವಿಗಳಿಂದ
ಚ	ಕವಿ	+		+	ಗೆ	= ಕವಿಗೆ	ಕವಿ	+ ಗಳ್	+ ಇಗೆ	= ಕವಿಗಳಿಗೆ
ಪಂ	ಕವಿ	+	ಯ್	+	ಇಂದ	= ಕವಿಯಿಂದ	ಕವಿ	+ ಗಳ್	+ ಇಂದ	= ಕವಿಗಳಿಂದ
ಷ	ಕವಿ	+	ಯ್	+	ಅ	= ಕವಿಯ	ಕವಿ	+ ಗಳ್	+ ಅ	= ಕವಿಗಳ
ಸ	ಕವಿ	+	ಯ್	+	ಅಲ್ಲಿ	= ಕವಿಯಲ್ಲಿ	ಕವಿ	+ ಗಳ್	+ ಅಲ್ಲಿ	= ಕವಿಗಳಲ್ಲಿ
ಸಂ	ಕವಿ	+	ಯ್	+	ಏ	= ಕವಿಯೇ	ಕವಿ	+ ಗಳ್	+ ಏ	= ಕವಿಗಳೇ
									+ ಇರಾ	= ಕವಿಗಳಿರಾ

ಇದರಂತೆ ಎಲ್ಲ ಇ ಕಾರಾಂತ, ಈ ಕಾರಾಂತ, ಎ ಕಾರಾಂತ, ಏ ಕಾರಾಂತ. ಐ ಕಾರಾಂತ ಶಬ್ದಗಳು ನಡೆಯುತ್ತವೆ.

ಮುನಿ, ಋಷಿ, ಕರಡಿ, ಹುಲಿ, ಗುಡಿ, ಗಡಿ. ಇತ್ಯಾದಿ ಇಕಾರಾಂತಗಳು. ಕೆರೆ, ಎದೆ, ಮನೆ, ಕುದುರೆ, ಜಡೆ, ಇತ್ಯಾದಿ ಎಕಾರಾಂತ ನಾಮಗಳು. ಕೆ, ಮೈ, ಪೈ, ಇತ್ಯಾದಿ ಐಕಾರಾಂತ ನಾಮಗಳು—ಆದ್ದರಿಂದ.

ನೇ. ೨೨— ಎಲ್ಲ ಇ, ಈ, ಎ, ಏ, ಐಕಾರಾಂತ ನಾಮಗಳಿಗೂ, ವಿಭಕ್ತಿ ಪ್ರತ್ಯಯಕ್ಕೂ ವಡುವೆ ಏಕವಚನದಲ್ಲಿ ಚತುರ್ಥಿಯ ಹೊರತು ಉಳಿದ ವಿಭಕ್ತಿಗಳ ನಡುವೆ "ಯ್", ಅಕ್ಷರವು ಬರುವದು. ಬಹುವಚನವಲ್ಲಿ ಎಲ್ಲ ವಿಭಕ್ತಿಗಳನಡುವೆ "ಗಳ್" ಅಕ್ಷರಗಳು ಬರುವವು.

ಉಕಾರಾಂತ "ಗುರು" ಶಬ್ದರೂಪಗಳು.

	ಏಕವಚನ	ಬಹುವಚನ
ಪ್ರ	ಗುರು + ವ್ + ಉ = ಗುರುವು	ಗುರು + ಗಳ್ + ಉ =ಗುರುಗಳು
ದ್ವಿ	ಗುರು + ವ್ + ಅನ್ನು= ಗುರುವನ್ನು	ಗುರು + ಗಳ್ + ಅನ್ನು=ಗುರುಗಳನ್ನು
ತೃ	ಗುರು + ವಿನ್+ಇಂದ = ಗುರುವಿನಿಂದ	ಗುರು + ಗಳ್ + ಇಂದ=ಗುರುಗಳಿಂದ
ಚ	ಗುರು + ವ್ +ಇಗೆ = ಗುರುವಿಗೆ	ಗುರು + ಗಳ್ + ಇಗೆ =ಗುರುಗಳಿಗೆ
ಪಂ	ಗುರು +ವಿನ್+ಇಂದ = ಗುರುವಿನಿಂದ	ಗುರು + ಗಳ್ + ಇಂದ =ಗುರುಗಳಿಂದ
ಷ	ಗುರು +ವಿನ್ + ಅ = ಗುರುವಿನ	ಗುರು + ಗಳ್ + ಅ =ಗುರುಗಳ
ಸ	ಗುರು +ವಿನ್ + ಅಲ್ಲಿ = ಗುರುವಿನಲ್ಲಿ	ಗುರು + ಗಳ್ + ಅಲ್ಲಿ =ಗುರುಗಳಲ್ಲಿ
ಸಂ	ಗುರು + ವ್ + ಏ = ಗುರುವೇ	ಗುರು + ಗಳ್ + ಏ =ಗುರುಗಳೇ
		+ ಇರಾ =ಗುರುಗಳಿರಾ

ಇದರಂತೆ "ಕರು" ಎಂಬ ಶಬ್ದವು ನಡೆಯುತ್ತದೆ. ಗೋ ಶಬ್ದವಾದರೂ ಇದೇ ಪ್ರಕಾರ ನಡೆಯುವದು. (ಇದರಂತೆ ನಡೆಯುವ ಬೇರೆ ಶಬ್ದಗಳಿಲ್ಲ).

	ಏಕವಚನ	ಬಹುವಚನ
ಪ್ರ	ಗೋವು	ಗೋಗಳು
ದ್ವಿ	ಗೋವನ್ನು	ಗೋಗಳನ್ನು
ತೃ	ಗೋವಿನಿಂದ	ಗೋಗಳಿಂದ
ಚ	ಗೋವಿಗೆ	ಗೋಗಳಿಗೆ
ಪಂ	ಗೋವಿನಿಂದ	ಗೋಗಳಿಂದ
ಷ	ಗೋವಿನ	ಗೋಗಳ
ಸ	ಗೋವಿನಲ್ಲಿ	ಗೋಗಳಲ್ಲಿ

(ಉಕಾರಾಂತವಾದ "ಕೂಸು" ಶಬ್ದದಂತೆ ಅನೇಕ ಉಕಾರಾಂತಗಳು ನಡೆಯುತ್ತವೆ.

"ಕೂಸು" ಶಬ್ದದ ರೂಪಗಳು.

ವಿಭಕ್ತಿ	ಏಕವಚನ	ಬಹುವಚನ
ಪ್ರ	ಕೂಸು	ಕೂಸುಗಳು
ದ್ವಿ	ಕೂಸನ್ನು	ಕೂಸುಗಳನ್ನು
ತೃ	ಕೂಸಿನಿಂದ	ಕೂಸುಗಳಿಂದ
ಚ	ಕೂಸಿಗೆ	ಕೂಸುಗಳಿಗೆ
ಪಂ	ಕೂಸಿನಿಂದ	ಕೂಸುಗಳಿಂದ
ಷ	ಕೂಸಿನ	ಕೂಸುಗಳ
ಸ	ಕೂಸಿನಲ್ಲಿ	ಕೂಸುಗಳಲ್ಲಿ
ಸಂ	ಕೂಸೇ	ಕೂಸುಗಳೇ ಕೂಸುಗಳಿರಾ

ಇದರಂತೆ ಕಲ್ಲು, ಮುಳ್ಳು, ಮೂಗು, ಹೂವು, ಗೂಡು, ಆಳು, ಹೋಳು, ಕಣ್ಣು, ಹಲ್ಲು, ಮನಸ್ಸು, ಊರು, ಕಾಲು, ಕಡಬು, ಬೂಟು, ಇತ್ಯಾದಿ ಉಕಾರಾಂತ ಶಬ್ದಗಳು ನಡೆಯುತ್ತವೆ.

ಸೂಚನೆ:—ಹಿಂದೆ ಹೇಳಿದ ಎಲ್ಲ ಅಂತಗಳ ಎಲ್ಲ ನಾಮಗಳನ್ನು ನಡಿಸಲಿಕ್ಕೆ ಬರುವಂತೆ ಶಿಕ್ಷಕರು ರೂಢೀ ಮಾಡಿಸಬೇಕು.

ನಾಮಗಳ ವ್ಯಾಕರಣ ಮಾಡುವ ರೀತಿಯು.

೧. ರಾಮನು ಗಿಡಗಳನ್ನು ಕೊಡಲಿಯಿಂದ ಕಡಿದನು. ಈ ವಾಕ್ಯದಲ್ಲಿ ಕಡಿದನು. ಇದು ಕ್ರಿಯಾಪದವದೆ. ಉಳಿದವು ನಾಮಪದಗಳಿದ್ದು ಅವುಗಳ ವ್ಯಾಕರಣ ಮಾಡಬೇಕು.

ಪ್ರಥಮಾವಿಭಕ್ತಿ :— ರಾಮನು, ಇದರಲ್ಲಿ (೧) ಮೂಲಶಬ್ದ ರಾಮ (೨) ಅಂಕಿತನಾಮ (೩) ಅಕಾರಾಂತ (೪) ಪುಲ್ಲಿಂಗ (೫) ಪ್ರಥಮಾ ವಿಭಕ್ತಿ (೬) ಏಕವಚನ (೭) ಪ್ರಥಮಾದ ಕಾರಕಾರ್ಥ ಕರ್ತೃ (೮) ಕಡಿದನು ಈ ಕ್ರಿಯಾಪದಕ್ಕೆ ಸಂಬಂಧವು.

ದ್ವಿತೀಯಾ ವಿಭಕ್ತಿ:— ಗಿಡಗಳನ್ನು, ಇದರಲ್ಲಿ (೧) ಮೂಲಶಬ್ದ ಗಿಡ, (೨) ರೂಢನಾಮ (೩) ಅಕಾರಾಂತ (೪) ನಪುಂಸಕಲಿಂಗ (೫) ದ್ವಿತೀಯಾ ವಿಭಕ್ತಿ (೬) ಬಹುವಚನ (೭) ದ್ವಿತೀಯಾದಕಾರಕಾರ್ಥ ಕರ್ಮ (೮) ಕಡಿದನು ಈ ಕ್ರಿಯಾ ಪದಕ್ಕೆ ಸಂಬಂಧವು.

ತೃತೀಯಾ ವಿಭಕ್ತಿ:— ಕೊಡಲಿಯಿಂದ ಇದರಲ್ಲಿ (೧) ಕೊಡಲಿ ಮೂಲ ಶಬ್ದ (೨) ರೂಢನಾಮ (೩) ಇಕಾರಾಂತ (೪) ನಪುಂಸಕಲಿಂಗ (೫) ತೃತೀಯಾ ವಿಭಕ್ತಿ (೬) ಏಕವಚನ (೭) ತೃತೀಯಾದಕಾರಕಾರ್ಥ ಸಾಧನ (೮) ಕಡಿದನು ಈ ಕ್ರಿಯೆಗೆ ಸಂಬಂಧವು.

(೨) ಸೀತೆಯು ತಿರುಕನಿಗೆ ಹಣವನ್ನು ಕೊಟ್ಟಳು. ಈ ವಾಕ್ಯದಲ್ಲಿ ಕೊಟ್ಟಳು ಕ್ರಿಯಾಪದವಿದ್ದು ಉಳಿದವು ನಾಮಗಳಿರುತ್ತವೆ. ಆ ನಾಮಗಳ ವ್ಯಾಕರಣ ಮಾಡಬೇಕು.

ಸೀತೆಯು ಇದು ಪ್ರಥಮಾ ವಿಭಕ್ತಿ ಏಕವಚನವಿದ್ದು ಮೇಲೆ ಪ್ರಥಮಾ ವಿಭಕ್ತಿಯ ವ್ಯಾಕರಣಮಾಡಿದಂತೆ ಅಂದರೆ ಮೂಲ ಶಬ್ದ ಸೀತೆ, ಎಕಾರಾಂತ್ಯ ಸ್ತ್ರೀಲಿಂಗ, ಪ್ರ ವಿಭಕ್ತಿ, ಏಕವಚನ, ಪ್ರ ಕಾರಕಾರ್ಥಕರ್ತೃ ಕೊಟ್ಟಳು ಈ ಕ್ರಿಯೆಗೆ ಸಂಭಂಧವು.

ಚತುರ್ಥಿ ವಿಭಕ್ತಿ:— ತಿರುಕನಿಗೆ ಇದರಲ್ಲಿ (೧) ಮೂಲ ಶಬ್ದ ತಿರುಕ (೨) ರೂಢನಾಮ (೩) ಅಕಾರಾಂತ (೪) ಪುಲ್ಲಿಂಗ (೫) ಚತುರ್ಥೀ ವಿಭಕ್ತಿ (೬) ಏಕವಚನ (೭) ಚತುರ್ಥಿಯಕಾರಕಾರ್ಥ ಸಂಪ್ರದಾನ (೮) ಕೊಟ್ಟಳು ಈ ಕ್ರಿಯೆಗೆ ಸಂಬಂಧವು.

ಹಣವನ್ನು ಇದು ದ್ವಿ. ವಿ. ಏಕವಚನವಿದ್ದು ಹಿಂದೆ ದ್ವಿತೀಯಾ ವಿಭಕ್ತಿಯ ನಾಮವನ್ನು ನಡಿಸಿದಂತೆ ನಡಿಸಬೇಕು.

(೩) ಗಿಡದಿಂದ ಹಣ್ಣುಗಳು ಬಿದ್ದವು. ಈ ವಾಕ್ಯದಲ್ಲಿ ಬಿದ್ದವು, ಇದು ಕ್ರಿಯಾ ಪದವದೆ. ಉಳಿದವು ನಾಮಗಳವೆ ; ಅವುಗಳ ವ್ಯಾಕರಣ ಮಾಡಬೇಕು.

ಪಂಚಮೀ ವಿಭಕ್ತಿ:— ಗಿಡದಿಂದ, ಇದರಲ್ಲಿ (೧) ಮೂಲ ಶಬ್ದಗಿಡ (೨) ರೂಢನಾಮ (೩) ಅಕಾರಾಂತ (೪) ನಪುಂಸಕಲಿಂಗ (೫) ಪಂಚಮೀ ವಿಭಕ್ತಿ (೬) ಏಕವಚನ (೭) ಪಂಚಮಿಯ ಕಾರಕಾರ್ಥ ಅಪಾದಾನ(ಹಣ್ಣು ಗಿಡ ಬಿಟ್ಟು ಅಗಲಿರುತ್ತವೆ) (೮) ಬಿದ್ದವು ಈ ಕ್ರಿಯೆಗೆ ಸಂಬಂಧವು.

ಹಣ್ಣುಗಳು ಇದು ಪ್ರ. ವಿ. ಅದೆ, ಹಿಂದಿನಂತೆ ನಡಿಸಬೇಕು.

(೪) ಗುರುಗಳು ಸಾಲೆಯ ಹುಡುಗನನ್ನು ಕರೆದರು, ಈ ವಾಕ್ಯದಲ್ಲಿ ಕರೆದರು ಕ್ರಿಯಾಪದವದೆ. ಉಳಿದವು ನಾಮಗಳಿದ್ದದರಿಂದ ಅವುಗಳ ವ್ಯಾಕರಣ ಮಾಡಬೇಕು.

ಧಾರವಾಡ ಜಿಲ್ಲಾ

ಸ್ಕೂಲ್ ಬೋರ್ಡ ಪತ್ರಿಕೆ

DHARWAR DISTRICT SCHOOL BOARD MAGAZINE

ಸಂಪುಟ ೧.	ಎಪ್ರಿಲ್ ೧೯೨೮	ಸಂಚಿಕೆ ೧

ಸಂಪಾದಕ ಮಂಡಲ.

೧ ಶ್ರೀ. ಎಸ್, ಕೆ, ಹೊಸಮನಿ ಬಿ. ಎ., ಎಲೆಲ್. ಬಿ.
(ಚೇಅರಮನ್ ಡಿ. ಎಸ್. ಬಿ.)

೨ ,, ಜಿ. ಟಿಳಿ. ನಲವಡಿ ಬಿ ಎ., ಎಲೆಲ್. ಬಿ.
(ವ್ಹಾಯಿಸ್ ಚೇಅರಮನ್, ಡಿ. ಎಸ್. ಬಿ.)

೩ ,, ಡಿ. ಎಲ್. ಪಾಟೀಲ್ ಬಿ. ಎ., ಎಲೆಲ್. ಬಿ.
(ವ್ಹಾಯಿಸ್ ಪ್ರೆಸಿಡೆಂಟ್ ಡಿ. ಎಲ್. ಬಿ.)

೪ ವ್ಹಿ. ಬಿ. ಜೋಶಿ ಬಿ. ಎ. ರಿಟಾಯರ್ಡ್ ಎಜ್ಯುಕೇಶನಲ್ ಇನ್ಸ್‌ಪೆಕ್ಟರ.

೫ ಮೌ॥ ಸೈಯ್ಯದ ಫಕರುದ್ದೀನ ಸಾಹೇಬ.

ಮ್ಯಾನೇಜಿಂಗ ಏಡಿಟರ:– ಎಚ್. ಎಫ್. ಕಟ್ಟೀಮನಿ, ಬಿ. ಎ.

ಈ ಪತ್ರಿಕೆಯು ಶ್ರೀ. ಎಚ್. ಎಫ್ ಕಟ್ಟೀಮನಿ, ಇವರಿಂದಲೆ ತೋಂಟದಾರ್ಯ ಮುದ್ರಾಲಯ ಕಿಲ್ಲೆ ಧಾರವಾಡ ಇಲ್ಲಿ ಮುದ್ರಿಸಲ್ಪಟ್ಟು, ಧಾರವಾಡ ಜಿಲ್ಲಾ ಸ್ಕೂಲ್ ಬೋರ್ಡ ಕಚೇರಿಯಲ್ಲಿ ಪ್ರಸಿದ್ಧಿಸಲ್ಪಟ್ಟಿತು.

ವಿಷಯ ಸೂಚಿಕೆ.

ಏಪ್ರಿಲ್ ೧೯೨೮

ವಿಷಯಗಳು.	ಲೇಖಕರು.
೧ ಪ್ರಕಟನೆಯ ಉದ್ದೇಶ.	ಸಂಪಾದಕ.
೨ ಕವಿತೆ.	,,
೩ ಪತ್ರಿಕೆಯ ವ್ಯವಸ್ಥೆ.	,,
೪ ವಿದ್ಯಾರ್ಥಿಗಳ ನೈತಿಕ ಶಿಕ್ಷಣ.	ಶ್ರೀ ಫ ಸಾ. ಕಾಳಪ್ಪನವರ ಬಿ. ಎಂ. ಕುರ್ತಕೋಟಿ
೫ ಉತ್ತಮ ಶಿಕ್ಷಕನೆಂದರೆ ಯಾರು?	ಶ್ರೀ. ನಾಗೇಶ ಸುಬ್ರಾವ ಉಳ್ಳಾಲ. ಬಿ ಎ. ಅ. ಜೆ. ಎ. ಇನ್ಸಪೆಕ್ಟರ, ಧಾರವಾಡ
೬ ಒಕ್ಕಲಿಗರು ಮತ್ತು ಒಕ್ಕಲತನವು	ಶ್ರೀ. ಸಿ ಪಾವಟೆ, ಬಿ. ಏ ಜಿ. ಹೆ. ವಸಾ ಒಕ್ಕಲತನದ ಶಾಲೆ ಬೇವಿಹೊಸೂರ
೭ ಶಿಕ್ಷಣ ಪ್ರಪಂಚ :—	ಸಂಪಾದಕ.
ಕ್ವೀನ್ಸಲ್ಯಾಂಡಿನಲ್ಲಿ ಪ್ರಾಥಮಿಕ ಶಿಕ್ಷಣದ ವ್ಯವಸಾಯ.	
ಬೆಳಗಾಂವ ಜಿಲ್ಲಾ ಸ್ಕೂಲಬೋರ್ಡ ಗ್ಯಾಝೆಟೀಯರ.	
ನೇಮಾ ದ್ವಾರ ಶಿಕ್ಷಣ.	
೮ ವಿನೋದ.	
೯ ಸ್ಕೂಲಬೋರ್ಡಿನ ಕಾರಭಾರ :—	
೧ ಮಹತ್ವದ ಠರಾವುಗಳು.	
೨ ಶಿಕ್ಷಕರ ನೇಮಣೂಕಿಯ ಪತ್ರಿಕೆಗಳು.	
೩ ಹೊಸ ಶಾಲೆಗಳು.	
೪ ೧೯೨೮-೨೯ ಸಾಲಿನ ಆಯವ್ಯಯದ ಅಂದಾಜ ಪತ್ರಿಕೆ	

ಶ್ರೀ. ಸಿ. ಸಿ. ಹುಲಕೋಟಿ,

ಬಿ. ಎ., ಎಲೆಲ್. ಬಿ.

ಪ್ರೆಸಿಡೆಂಟ, ಡಿಸ್ಟ್ರಿಕ್ಟ ಲೋಕಲ್‌ಬೋರ್ಡ,

ಧಾರವಾಡ.

ಶ್ರೀ. ಸಿ. ಕೆ. ಹೊಸಮನಿ,

ಬಿ. ಎ., ಎಲೆಲ್. ಬಿ.

ಚೇರಮನ್, ಡಿಸ್ಟ್ರಿಕ್ಟ ಸ್ಕೂಲ್

ಬೋರ್ಡ, ಧಾರವಾಡ.

ವಿದ್ಯಾ ಗುರೂಣಾಂ ಗುರುಃ

ಧಾರವಾಡ ಜಿಲ್ಲಾ
ಸ್ಕೂಲ್ ಬೋರ್ಡ ಪತ್ರಿಕೆ

ಸಂಪುಟ ೧ | ಎಪ್ರಿಲ ೧೯೨೪ | ಸಂಚಿಕೆ ೧

ಪ್ರಕಟನೆಯ ಉದ್ದೇಶ

ಮೊಂಟೆಗೂ ಚೇಮ್ಸಫರ್ಡ ಸುಧಾರಣೆಗಳು ರೂಢಿಯಲ್ಲಿ ಬಂದಂದಿನಿಂದ ಶಿಕ್ಷಣ ಖಾತೆಯು ಜನತೆಯ ಕಡೆಗೆ ಒಪ್ಪಿಸಲ್ಪಟ್ಟಿದೆ. ಅಂದರೆ ಸರಕಾರದವರು ಕಾಯದೆ ಕೌನ್ಸಿಲಿನ ಲೋಕನಿಯುಕ್ತ ಸಭಾಸದರಲ್ಲಿ ಒಬ್ಬರನ್ನು ಶಿಕ್ಷಣ ಮಂತ್ರಿಯನ್ನಾಗಿ ನೇಮಿಸಿ ಶಿಕ್ಷಣ ಖಾತೆಯನ್ನು ಆ ಮಂತ್ರಿಯ ಆಡಳತೆಯಲ್ಲಿ ಇಟ್ಟಿದ್ದಾರೆ. ನಾ. ಡಾ. ಪರಾಂಜಪೆಯವರು ನಮ್ಮ ಇಲಾಖೆಯ ಮೊದಲನೆಯ ಶಿಕ್ಷಣ ಮಂತ್ರಿಗಳು. ಇವರ ಕಾಲಕೀರ್ದಿಯಲ್ಲಿ ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಅತ್ಯಂತ ಮಹತ್ವದ ಸುಧಾರಣೆಗಳು ಜರುಗಿದವು. ಇಲಾಖೆಯ ಪ್ರಾಥಮಿಕ ಶಿಕ್ಷಣದ ವಿಷಯವನ್ನು ಚನ್ನಾಗಿ ಪರಿಶೀಲಿಸುವದಕ್ಕೋಸ್ಕರ ಚಂದಾವರಕರ ಕಮೀಟಿಯು ೧೯೨೧ರಲ್ಲಿ ನೇಮಿಸಲ್ಪಟ್ಟಿತು. ಆ ಕಮೀಟಿಯವರು ಒತ್ತಾಯದ ಪ್ರಾಥಮಿಕ ಶಿಕ್ಷಣವು ಉಚಿತವಾಗಿ ಯಾವತ್ತು ಬಾಲಬಾಲಕಿಯರಿಗೆ ದೊರೆಯುವ ಬಗ್ಗೆ ತಮ್ಮ ವರದಿಯನ್ನು ಸಾದರ ಪಡಿಸಿದರು. ಆ ಮೇಲೆ ಕಾಯಿದೆ ಕೌನ್ಸಿಲಿನಲ್ಲಿ ಈ ವಿಷಯದ ಬಗ್ಗೆ ಚನ್ನಾಗಿ ವಿಮರ್ಶೆಯಾಗಿ ಪ್ರಾಥಮಿಕ ಶಿಕ್ಷಣ ಕಾನೂನು ೧೯೨೩ರಲ್ಲಿ ಪಾಸಾಗಿ ಪ್ರಾಥಮಿಕ ಶಿಕ್ಷಣವು ಸರಕಾರದ ಪ್ರತ್ಯಕ್ಷ ಆಡಳತೆಯಿಂದ ದೂರಾಗಿ ಸ್ಥಾನಿಕ ಸ್ವರಾಜ್ಯ ಸಂಸ್ಥೆ (ಡಿಸ್ಟ್ರಿಕ್ಟ ಲೋಕಲ್ ಬೋರ್ಡು ಮತ್ತು ಸಿಟಿ ಮುನ್ಸಿಪ್ಯಾಲಿಟಿ) ಗಳ ಆಡಳತೆಗೆ ಒಳಪಟ್ಟಿತು. ಇದೇ ಕಾಲಕ್ಕೆ ಕಾಯದೆ ಕೌನ್ಸಿಲಿನಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಹೊಸ ಕಾನೂನು ಪಾಸಾಯಿತು. ಅಂದಿನಿಂದ ಪ್ರಾಥಮಿಕ ಶಿಕ್ಷಣದ ಆಡಳತೆಗಾಗಿ ಪ್ರತಿಯೊಂದು ಜಿಲ್ಲೆಗೆ ಡಿಸ್ಟ್ರಿಕ್ಟ ಸ್ಕೂಲಬೋರ್ಡು ಎಂಬ ಹೊಸ ಸಭೆಯು ನಿರ್ಮಾಣವಾಯಿತು. ನಮ್ಮ ಜಿಲ್ಲಾ ಸಭೆಗೆ ಮು॥ ರಾ॥ ರಾ॥ ಚನ್ನಪ್ಪ ಹುಲಕೋಟಿ ಬಿ. ಎ. ಎಲೆಲ್. ಬಿ, ಇವರು ಮೊದಲನೆಯ ಲೋಕ

ನಿಯುಕ್ತ ಅಧ್ಯಕ್ಷರು ಮತ್ತು ಮ॥ ರಾ॥ ರಾ॥ ಶಿದ್ದಪ್ಪ ಹೊಸಮನಿ ಬಿ. ಎ. ಎಲೆಲ್. ಬಿ. ಇವರು ಮೊದಲನೆಯ ಸ್ಕೂಲಬೋರ್ಡು ಚೇರಮನ್ನರು ಆಗಿದ್ದಾರೆ. ಹೀಗೆ ಶಿಕ್ಷಣ ಖಾತೆಯು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕಾರಭಾರಕ್ಕೆ ಒಳ ಪಟ್ಟಂದಿನಿಂದ ಶಿಕ್ಷಣ ಪ್ರಪಂಚದಲ್ಲಿ ಅಪೂರ್ವವಾದ ಉತ್ಸಾಹವು ಮತ್ತು ಚಟ ವಟಿಕೆಯು ಕಂಡು ಬರುತ್ತವೆ. ಅದರಲ್ಲಂತೂ ನಮ್ಮ ಸ್ಕೂಲಬೋರ್ಡಿನವರ ಉತ್ಸಾಹವು ಶ್ಲಾಘನೀಯವಾಗಿದೆ. ಅವರು ತಮ್ಮಿಂದ ಜನತೆಗೆ ನಿಜವಾದ ಕಲ್ಯಾಣವು ಬಹು ಪ್ರಮಾಣದಿಂದ ಆಗಬೇಕಾದರೆ ತಮ್ಮ ಕಾರಭಾರವು ನಿರಾ ತಂಕವಾಗಿ ತಮ್ಮ ಇಚ್ಛೆಯಂತೆ ಸಾಗುವದು ಅತ್ಯವಶ್ಯವೆಂದು ಬಗೆದು ಸರಕಾರೀ ಶಿಕ್ಷಣ ಖಾತೆಯ ಕಾಮದಾರರನ್ನು ನಿರಾಕರಿಸಿ ತಮ್ಮ ಸ್ವಂತ ಕಾಮದಾರರನ್ನೇ ನೇಮಿಸಿಕೊಂಡಿರುವರು. ಆದರೆ ಸ್ಕೂಲಬೋರ್ಡ ಆ್ಯಡ್‌ಮಿನಿಸ್ಟ್ರೇಟಿವ್ಹ ಆಫೀ ಸರನನ್ನು ನೇಮಿಸಿಕೊಳ್ಳುವದರ ವಿಷಯದಲ್ಲಿ ಅವರಿಗೂ ಸರಕಾರಕ್ಕೂ ಮತ ಭೇದ ಉಂಟಾಗಿರುವದು. ಆದರೂ ಚೇರಮನ್ನರಾದ ಮ॥ ರಾ॥ ರಾ॥ ಶಿದ್ದಪ್ಪ ಹೊಸಮನಿಯವರು ವ್ಹಾಯಿಸ-ಚೇರಮನ್ನರಾದ ಮ॥ ರಾ॥ ರಾ॥ ಗಿರಿಮಲ್ಲಪ್ಪ ನಲವಡಿ ಬಿ. ಎ. ಎಲೆಲ್. ಬಿ. ಇವರ ಮತ್ತು ಬೋರ್ಡಿನ ಉಳಿದ ಯಾವತ್ತು ಮೆಂಬರರ ಸಹಕಾರತೆಯಿಂದ ಆ್ಯಡ್‌ಮಿನಿಸ್ಟ್ರೇಟಿವ್ಹ ಆಫೀಸರನಿಲ್ಲದೆ ತೀರ ಹೊಸ ಬರಾದ ನೌಕರರಿಂದಲೇ ತಮ್ಮ ಕಾರಭಾರವನ್ನು ಅತಿತೃಪ್ತಕರವಾಗಿ ನಡೆಯಿ ಸಿರುವರು. ಇದಕ್ಕಾಗಿ ಅವರನ್ನೂ ಬೋರ್ಡಿನ ಉಳಿದ ಸಭಾಸದರನ್ನೂ ಬೋರ್ಡಿನ ಕಾಮದಾರರನ್ನೂ ಸಹ ಅಭಿನಂದಿಸದೆ ಇರಲಾರೆವು. ಬೋರ್ಡಿನ ವರ ಸ್ತುತ್ಯರ್ಹವಾದ ಪರಿಶ್ರಮವು ಚನ್ನಾಗಿ ಸಫಲವಾಗಬೇಕಾದರೆ ಜನರಲ್ಲಿ ಶಿಕ್ಷಣದ ಬಗ್ಗೆ ಜಾಗ್ರತೆಯುಂಟಾಗುವದು ಅತ್ಯವಶ್ಯವು. ಲೋಕಜಾಗ್ರತೆ ಯಾಗದೆ ಶಿಕ್ಷಣ ಪ್ರಸಾರವು ಸಾರ್ವತ್ರಿಕವಾಗುವದು ದುಃಸಾಧ್ಯವು. ಕಾರಣ ಶಿಕ್ಷಣ ಕಾರಭಾರದೊಂದಿಗೆ ಲೋಕಜಾಗ್ರತೆಯ ಕಾರ್ಯವನ್ನು ಕೂಡ ಬೋರ್ಡಿ ನವರು ಕೈಕೊಳ್ಳಬೇಕಾಗಿದೆ.

ಬೋರ್ಡಿನ ಪರಿಶ್ರಮವು ಚನ್ನಾಗಿ ಸಫಲವಾಗಬೇಕಾದರೆ ಬೋರ್ಡಿನ ಒಂದು ಸ್ವತಂತ್ರ ಮುಖಪತ್ರವು ಅತ್ಯವಶ್ಯವು. ಇದುವರೆಗೆ ಬೋರ್ಡಿನ ವರು ಕನ್ನಡಿಗರ ಗಂಡುಮಕ್ಕಳ ಟ್ರೇನಿಂಗ ಸ್ಕೂಲಿನ ಹೆಡ್‌ಮಾಸ್ತರರು ಸ್ವತಃ ಪ್ರಕಟಿಸುತ್ತಿದ್ದ ಶಾಲಾಪತ್ರಿಕೆಯನ್ನು ವರ್ಗಣಿ ಮೂಲಕ ತಮ್ಮ ಎಲ್ಲ ಶಾಲೆಗಳಿಗೆ ತರಿಸಿಕೊಳ್ಳುತ್ತಿದ್ದರು. ಅದಕ್ಕೆ ಪ್ರತಿ ವರ್ಷ ೯೦ ರೂಪಾಯಿಗಳು ಸಲ್ಲುತ್ತಿ ದ್ದವು. ಅದು ಎಲ್ಲ ಕನ್ನಡ ಜಿಲ್ಲೆಗಳಿಗೆ ಸಾಮಾನ್ಯವಾಗಿದ್ದ ದರಿಂದ ಅದರಲ್ಲಿ ನಮ್ಮ ಬೋರ್ಡಿಗೆ ಸಾಕಷ್ಟು ಸ್ಥಳವು ದೊರೆಯುವದು ಸಾಧ್ಯವಿದ್ದಿಲ್ಲ. ಅಲ್ಲದೆ ಅದರ ಸಂಪಾದಕರು ಬೋರ್ಡಿಗೆ ಸಂಬಂಧವಿಲ್ಲದ ಸರಕಾರೀ ನೌಕರರಿದ್ದ ದರಿಂದ ಅದರಿಂದ ಬೋರ್ಡಿನ ಎಲ್ಲ ಮನೋರಥವು ಸಾಧಿಸುವದು ಸಾಧ್ಯವಿಲ್ಲೆಂಬದು

ಬೋರ್ಡಿನ ಕಳೆದ ಎರಡು ವರ್ಷದ ಅನುಭವದಿಂದ ಕಂಡು ಬಂದಿದೆ. ಆದ್ದರಿಂದ ಅದನ್ನು ನಿಲ್ಲಿಸಿ ಅದಕ್ಕೆ ಸಲ್ಲುತ್ತಿದ್ದ ಹಣದಲ್ಲಿಯೇ ಬೋರ್ಡಿನ ಸ್ವತಂತ್ರ ಮಾಸ ಪತ್ರಿಕೆಯನ್ನು ಹೊರಡಿಸುವದು ಸುಸಾಧ್ಯವಿದ್ದದರಿಂದಲೂ ಇದು ಅತ್ಯಂತ ಲಾಭ ದಾಯಕವಾದುದರಿಂದಲೂ ಬೋರ್ಡಿನವರು ಇದರ ಪ್ರಕಟನೆಯ ಮಹತ್‌ಕಾ ರ್ಯವನ್ನು ಕೈಕೊಂಡಿರುವರು. ಇದರಲ್ಲಿ ವಿವೇಚಿಸಲ್ಪಡುವ ವಿಷಯಗಳನ್ನು ಅವಲೋಕಿಸಿದರೆ ಇದರಿಂದ ಎಷ್ಟೊಂದು ಹಿತವಾಗುವದೆಂಬದು ಕಂಡುಬರುತ್ತದೆ.

ಇದರಲ್ಲಿ ವಿವೇಚಿಸಲ್ಪಡುವ ವಿಷಯಗಳು.

ಬೋರ್ಡಿನ ಕಾರಭಾರವು ಹೇಗೆ ಪ್ರಗತಿಪರವಾಗಿ ಸಾಗಿದೆ; ಅದರ ಪರಿಶ್ರ ಮದ ಫಲವು ಎಷ್ಟು ಲಭಿಸಿದೆ; ಸರಕಾರದ ಸಹಾಯವು ಎಷ್ಟರ ಮಟ್ಟಿಗೆ ದೊರೆ ತಿದೆ ಮತ್ತು ಎಷ್ಟು ದೊರೆಯಬೇಕಾಗಿದೆ; ಜನತೆಯ ಸಹಾನುಭೂತಿ ಸಹಾಯ ಗಳು ಎಷ್ಟು ಅವಶ್ಯವಾಗಿವೆ, ಶಾಲಾಧ್ಯಾಪಕರು ಎಷ್ಟು ದಕ್ಷತೆಯಿಂದ ಕೆಲಸ ಮಾಡಬೇಕಾಗಿದೆ; ಅವರ ಇರುವಿಕೆಯು ಹೇಗದೆ; ವಿದ್ಯಾರ್ಥಿಗಳ ಪಾಲಕರು ಯಾವ ರೀತಿಯಲ್ಲಿ ಎಚ್ಚರಪಡಬೇಕಾಗಿದೆ; ಪರಜಿಲ್ಲೆಗಳ ಬೋರ್ಡುಗಳು ಯಾವ ವಿಧದಲ್ಲಿ ಮುಂದರಿಯಹತ್ತಿವೆ; ಕಾಯದೆ ಕೌನ್ಸಿಲ್, ವಿದ್ಯಾಖಾತೆ, ವಿಶ್ವವಿದ್ಯಾ ಲಯ ಮೊದಲಾದ ಶಿಕ್ಷಣ ಸಂಸ್ಥೆಗಳ ಘೋರಣವು ಹೇಗೆ ಪರಿಣಮಿಸಹತ್ತಿದೆ; ಲೋಕಮತದ ಪ್ರವಾಹವು ಎತ್ತ ಸಾಗಿದೆ; ಸುಧಾರಿಸಿದ ಪರರಾಷ್ಟ್ರಗಳು ಶಿಕ್ಷಣದ ವಿಷಯದಲ್ಲಿ ಯಾವ ಎತ್ತುಗಡೆಗಳನ್ನು ಮಾಡಿರುವರು ಮತ್ತು ಎಷ್ಟರಮಟ್ಟಿಗೆ ತೇರ್ಗಡೆ ಹೊಂದಿರುವರು; ಶಿಕ್ಷಣ ಶಾಸ್ತ್ರಜ್ಞರು ಶಿಕ್ಷಣ ಪದ್ಧತಿಯಲ್ಲಿ ಯಾವ ಅನುಭವವನ್ನು ಪಡೆದಿರುವರ. ಮತ್ತು ಯಾವ ಹೊಸ ಪದ್ಧತಿಗಳನ್ನು ರೂಢಿಯ ಲ್ಲಿ ತರಲು ಪ್ರಯತ್ನಿಸುತ್ತಿರುವರು; ಶಿಕ್ಷಣದಲ್ಲಿ ಮುಂದುವರಿದ ದೇಶಗಳು ಹೇಗೆ ಅಭಿವೃದ್ಧಿಯನ್ನು ಪಡೆಯುತ್ತಲಿರುವವು ಮತ್ತು ಹಿಂದುಳಿದ ರಾಷ್ಟ್ರಗಳು ಹೇಗೆ ಹೀನಾವಸ್ಥೆಗೆ ಈಡಾಗಿರುವವು. ಪ್ರಪಂಚದಲ್ಲಿ ಶಾಸ್ತ್ರೀಯ, ಆರ್ಥಿಕ, ಕಲಾ ಕೌಶಲ್ಯ ಮುಂತಾದ ಪ್ರಚಲಿತ ವಿಷಯಗಳಲ್ಲಿ ಎಷ್ಟೊಂದು ಕ್ರಾಂತಿ ಮತ್ತು ಪ್ರಗತಿ ಉಂಟಾಗಿರುವವು. ಈ ಎಲ್ಲ ವಿಷಯಗಳು ಇದರಲ್ಲಿ ಸುಲಭ ಭಾಷೆಯಲ್ಲಿ ಚರ್ಚಿಸಲ್ಪಡುವವು. ಐತಿಹಾಸಿಕ, ವಾಙ್ಮಯಾತ್ಮಕ, ವಿನೋದಪರ, ನೀತಿಪರ, ಇತ್ಯಾದಿ ನಿಬಂಧನೆಗಳು ಬರೆಯಲ್ಪಡುವವು. ಚಿಕ್ಕಚಿಕ್ಕ ಕಥೆಗಳು ಇದರಲ್ಲಿ ಪ್ರಕಟಿಸಲ್ಪಡುವವು. ಇದರ ಮೇಲಿಂದ ಈ ಪತ್ರಿಕೆಯನ್ನು ಹೊರಡಿಸುವ ಉದ್ದೇ ಶವು ಎಷ್ಟು ವಿಸ್ತಾರವಾಗಿದೆ ಎಂಬದು ಗೋಚರವಾಗುವದು. ಇದು ಬೋರ್ಡಿ ಗಾಗಲಿ ಶಾಲಾಧ್ಯಾಪಕರಿಗಾಗಲಿ ವಿದ್ಯಾರ್ಥಿಗಳಪಾಲಕರಿಗಾಗಲಿ ಮತ್ತು ಬಾಲ ಶಿಕ್ಷಣ ವಿಷಯದಲ್ಲಿ ಮನಸ್ಸು ಹಾಕಿದ ವಿದ್ಯಾಭಿಮಾನಿಗಳಿಗಾಗಲಿ ಎಷ್ಟೊಂದು ಪ್ರಯೋಜನಕರವೆಂಬದು ಸ್ಪಷ್ಟ ತಿಳಿದುಬರುತ್ತದೆ.

ಇದು ಶಿಕ್ಷಣ ಪ್ರಸಾರದ ಜಯಭೇರಿ,
ಇದು ಬೋರ್ಡಿನ ಆಡಳಿತೆಯ ವಿಮಲ ದರ್ಪಣ,
ಇದು ಶಿಕ್ಷಣ ಶಾಸ್ತ್ರದ ಗೊತ್ತು,
ಇದು ಶಿಕ್ಷಣ ಕಲಾವಿಶಾರದ ಕೈಪಿಡಿ,
ಇದು ದೇಶೋನ್ನತಿಯ ರಾಜಮಾರ್ಗ,
ಇದು ವಾಙ್ಮಯದ ಭಾಂಡಾರ,
ಇದು ವಿದ್ಯೆಯ ನೆಲಗಟ್ಟು,
ಇದು ಕೋಮಲ ಬಾಲಕರ ವಿನೋದಾಗರ.

ಹೀಗಿರುವ ಈ ತಿಳಿಗನ್ನಡ ಮಾಸಪತ್ರಿಕೆಗೆ ಸಕಲ ವಿದ್ಯಾಭಿಮಾನಿಗಳು ಆದರದಿಂದ ಸ್ವಾಗತವನ್ನೀಯುವರೆಂದೂ ಶಿಕ್ಷಣ ಕಲಾವಿಶಾರದರು ತಮ್ಮ ಪರಮಾನುಭವದ ನೆರವನ್ನು ಲೇಖನಗಳ ಮೂಲಕ ಸದಾ ದಯಪಾಲಿಸುವರೆಂದೂ ಕೋರುವೆವು.

ಸಂಪಾದಕ

ಭಾವಿನಿ.

ವಿದ್ಯೆಯಿಂದಲೆ ಧರ್ಮರಕ್ಷಣ।
ವಿದ್ಯೆಯಿಂದಲೆ ಜ್ಞಾನವರ್ಧನ।
ವಿದ್ಯೆಯಿಂದಲೆ ಸ್ವಾವಲಂಬನ, ಮಾನ ಮರ್ಯಾದೆ॥
ವಿದ್ಯೆಯಿಲ್ಲದ ನರನು ದಾಸನು।
ವಿದ್ಯೆಯಿಲ್ಲದ ಸ್ತ್ರೀಯು ಮಾರಿಯು
ವಿದ್ಯೆಯಲಿ ಹಿಂದುಳಿದ ದೇಶವು ದುಃಖದಾಗರವು॥

ಸಂಪಾದಕ.

ಪತ್ರಿಕೆಯ ವ್ಯವಸ್ಥೆ

ಸಂಪಾದಕ ಮಂಡಲ
(Editorial Committee)

೧ ಶ್ರೀ. ಎಸ್. ಕೆ. ಹೊಸಮನಿ ಬಿ. ಎ. ಎಲ್‌ಎಲ್. ಬಿ
(ಚೇಅರಮನ್ ಡಿ. ಎಸ್. ಬಿ.)

೨ ,, ಜಿ. ಆರ್. ನಲವಡಿ ಬಿ. ಎ. ಎಲ್‌ಎಲ್. ಬಿ.
(ವ್ಹಾಯಿಸ್ ಚೇಅರಮನ್ ಡಿ. ಎಸ್. ಬಿ.)

೩ ,, ಡಿ. ಎಲ್. ಪಾಟೀಲ್ ಬಿ. ಎ. ಎಲ್‌ಎಲ್. ಬಿ.

೪ ,, ವ್ಹಿ. ಬಿ. ಜೋಶಿ ಬಿ. ಎ. ರಿಟಾಯರ್ಡ್ ಎಜ್ಯುಕೇಶನಲ್ ಇನ್ಸ್‌ಪೆಕ್ಟರ

೫ ಮೆ॥ ಫಕರುದ್ದೀನ ಸಾಹೇಬ

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ
(Managing Editor, Publisher & Printer)

ಶ್ರೀ. ಎಚ್. ಎಫ್. ಕಟ್ಟಿಮನಿ ಬಿ. ಎ. (ಲಾಯಿಫ್ ಮೆಂಬರ ಕೆ. ಎಲ್. ಇ. ಸೊಸಾಯಿಟಿ).

ಇದು ಧಾರವಾಡ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಆಫೀಸಿನಲ್ಲಿ ಪ್ರತಿತಿಂಗಳ ಕೊನೆಯ ಒಳಗಾಗಿ ಪ್ರಕಟವಾಗುತ್ತದೆ

ಇದು ಸಧ್ಯಕ್ಕೆ ಧಾರವಾಡಕಿಲ್ಲೆಯಲ್ಲಿರುವ ತೋಂಟದಾರ್ಯ ಮುದ್ರಾಲಯದಲ್ಲಿ ಅಚ್ಚಾಗುತ್ತದೆ.

ಇದು ಸಧ್ಯಕ್ಕೆ ಹೊದಿಕೆ ಸಹಿತ ಅಷ್ಟಪತ್ರಿಕೆ ಡೆಮಿ ೩೬ ಪುಟಗಳುಳ್ಳದ್ದಾಗಿದೆ.

ಇದರ ವರ್ಷದ ವೆಚ್ಚಕ್ಕಾಗಿ ೯೨೨ ರೂಪಾಯಿ ಗಳು ಕಾದಿಡಲ್ಪಟ್ಟಿವೆ.

ಇದು ಸರ್ವಾಂಗಸುಂದರವಾಗಿ ಸಕಲ ವಿದ್ಯಾಭಿಮಾನಿಗಳಿಗೆ ಆದರಣೀಯವಾಗುವದೆಂದು ಹಾರೈಸುತ್ತೇವೆ.

ಸಂಪಾದಕ

ವಿದ್ಯಾರ್ಥಿಗಳ ನೈತಿಕ ಶಿಕ್ಷಣವು.

ಮನುಷ್ಯನ ಸುಧಾರಣೆಗೆ ಶಿಕ್ಷಣವು ಅತ್ಯವಶ್ಯವು. ಅದರಲ್ಲಿ ಶಾರೀರಿಕ, ಮಾನಸಿಕ, ನೈತಿಕಗಳೆಂದು ಮೂರು ಮುಖ್ಯಭಾಗಗಳು; ಇವು ಮೂರೂ ಸಮಾನ ಯೋಗ್ಯತೆಯುಳ್ಳವುಗಳು. ಇವುಗಳಲ್ಲಿ ಯಾವದನ್ನೂ ಅಲಕ್ಷಿಸ ಕೂಡದು. ಈ ಮೂರೂ ಶಿಕ್ಷಣಗಳನ್ನು ಸಮನಾಗಿ ಬೆಳೆಯಿಸಿಕೊಂಡವರೇ ಇಹಪರಗಳಲ್ಲಿ ಸೌಖ್ಯವನ್ನು ಹೊಂದುವರು; ಆದರೆ ಇತ್ತಿತ್ತಲಾಗಿ ಅನೇಕ ಜನರು ಕೇವಲ ಮಾನಸಿಕ ಬೆಳವಣಿಗೆಯ ಕಡೆಗೇ ವಿಶೇಷ ಲಕ್ಷ ಗೊಟ್ಟು ಶಾರೀರಿಕ, ನೈತಿಕ ಉನ್ನತಿಗಳನ್ನು ಅಲಕ್ಷಿಸುವದು ಕಂಡುಬರುತ್ತದೆ. ಇದರಿಂದಲೇ ದೇಶದ ಅವನತಿಯಾಗಹತ್ತಿದೆ,

ಭಾವೀಪ್ರಜೆಗಳ ಭವಿತವ್ಯವು ವಿಶೇಷವಾಗಿ ಶಿಕ್ಷಕರಮೇಲೆ ಅದರೊಳಗೂ ಪ್ರಾಥಮಿಕ ಶಿಕ್ಷಕರಮೇಲೆ ಹೆಚ್ಚಿಗೆ ಅವಲಂಬಿಸಿರುತ್ತದೆ. ಆದ್ದರಿಂದ ಸಚ್ಛಿಕ್ಷಕನು ತನ್ನ ವಿದ್ಯಾರ್ಥಿಗಳಮೇಲೆ ಹೆಚ್ಚಿಗೆ ಮಮತೆಯುಳ್ಳವನಾಗಿದ್ದು ಅವರ ಮಾನಸಿಕ, ಶಾರೀರಿಕ, ನೈತಿಕ ಉನ್ನತಿಗಳಾಗುವಂತೆ ತನ್ನ ಶಿಕ್ಷಣ ಕಾರ್ಯ ಸಾಗಿಸಲಿಕ್ಕೆಬೇಕು. ಪರೀಕ್ಷೆಗಳೇ ತಮ್ಮ ಧ್ಯೇಯಗಳೆಂತಲೂ, ಪರೀಕ್ಷೆಯಲ್ಲಿ ಹೆಚ್ಚು ಹುಡುಗರು ಪಾಸಾದರೆ ತೀರಿತು, ತಮ್ಮ ಕಾರ್ಯವು ಕೈಗೂಡಿತೆಂತಲೂ ಎಷ್ಟೋಜನ ಶಿಕ್ಷಕರ ಗ್ರಹಿಕೆಯುಂಟು. ಆದರೆ ತತ್ವಶಃ ವಿಚಾರಮಾಡಿದರೆ ಈ ಮಾತು ಯಾರಿಗೂ ಸರಿದೋರಲಿಕ್ಕಿಲ್ಲ. ಎಷ್ಟೋ ಹುಡುಗರು ಸ್ವಾಭಾವಿಕವಾಗಿ ತೀಕ್ಷ್ಣಬುದ್ಧಿಯವರೂ, ಸುಸ್ವಭಾವದವರೂ, ಸತ್ಯವಂತರೂ-ಆಗಿರುತ್ತಾರೆ. ಆದರೆ ಇಂಥ ವಿದ್ಯಾರ್ಥಿಗಳು ಅನೇಕಕಾರಣಗಳ ಮೂಲಕ ಶಾಲೆಯ ಪರೀಕ್ಷೆಯಲ್ಲಿ ತೇರ್ಗಡೆಹೊಂದದಿದ್ದರೆ ಅವರಿಗೆ ದಡ್ಡರೆನ್ನಬಹುದೇ ಹೇಗೆ? ಅಥವಾ ಒಬ್ಬ ದುಷ್ಟಸ್ವಭಾವದ ಉಡಾಳ ಮಂದಬುದ್ಧಿಯ ಹುಡುಗನು ಏನಕೇನಪ್ರಕಾರೇಣ ಪರೀಕ್ಷೆಯಲ್ಲಿ ಪಾಸಾದರೆ ಅತನು ಜಾಣನೆಂದು ಅನ್ನಲಿಕ್ಕಾಗುವದಿಲ್ಲ. ಅಂದರೆ ಪರೀಕ್ಷೆಗಳೇ ವಿದ್ಯಾರ್ಥಿಗಳ ಬುದ್ಧಿವಂತಿಕೆ (ಯೋಗ್ಯತೆ) ಯನ್ನು ತೂಗುವತಕ್ಕಡಿಗಳಲ್ಲ. ಆದ್ದರಿಂದ ಭಾವೀರಾಷ್ಟ್ರದ ಹಿತೇಚ್ಛುಗಳೂ, ದೇಶೋದ್ಧಾರಕರೂ, ದೇಶಹಿತಚಿಂತಕರೂ ಆದ ಪ್ರಾಥಮಿಕ ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಪರೀಕ್ಷೆಯಲ್ಲಿ ಹೆಚ್ಚಿಗೆ ಪಾಸುಮಾಡಿಕೊಂಡು ಅವರನ್ನು ಅವ್ಯವಹಾರಿಗಳನ್ನು ಮಾಡುವ ಗೊಂದಲಕ್ಕೆ ತಾವು ಬೀಳದೆ ನಿಜವಾದ ಶಿಕ್ಷಣವು ಅವರಿಗೆ ದೊರೆಯುವಂತೆ ತಮ್ಮ ಧೋರಣವನ್ನಿಟ್ಟು ತಮ್ಮ ದಿನದ ಕಾರ್ಯವನ್ನು ಸಾಗಿಸತಕ್ಕದ್ದು.

ಈಗಿನ ಪ್ರಾಥಮಿಕ ಶಾಲೆಗಳಲ್ಲಿ ಮಾನಸಿಕ ಉನ್ನತಿಗೆ ಹಲಕೆಲವು ಪುಸ್ತಕಗಳೂ, ಅಂಕಗಣಿತ, ಭೂಮಿತಿ ಮೊದಲಾದ ವಿಷಯಗಳೂ ಸ್ವಲ್ಪಮಟಿಗೆ

ಸಹಾಯಕಾರಿಗಳಾಗಿವೆ. ಅವರಂತೆ ಶಾರೀರಿಕ ಬೆಳವಣಿಗೆಗೆ ತಾಲೀಮು, ಡ್ರಿಲ್, ಆಟ ಮೊದಲಾದ ಕೆಲವು ವಿಷಯಗಳೂ ಅನುಕೂಲವಾಗಿವೆ. ಆದರೆ ನೈತಿಕ ಬೆಳವಣಿಗೆಗೆ ಮಾತ್ರ ಯಾವ ಗ್ರಂಥಗಳೂ ಯಾವ ಉಪಕರಣಗಳೂ ಸಹಾಯ ಕಾರಿಗಳಿಲ್ಲ. ಆದ್ದರಿಂದಇದರ ಬೆಳವಣಿಗೆಯು ವಿದ್ಯಾರ್ಥಿಗಳಲ್ಲಿ ಹೆಚ್ಚಾಗುವಂತೆ ಪ್ರಯತ್ನಿಸುವದು ಅತಿ ಕಷ್ಟದ ಕೆಲಸವು. ಅದಕಾರಣ ನೈತಿಕ ಶಿಕ್ಷಣದ ಬೆಳವಣಿಗೆಯನ್ನು ಕೆಲಮಟ್ಟಿಗಾದರೂ ಶಾಲೆಗಳಲ್ಲಿ ಹ್ಯಾಗೆ ಮಾಡತಕ್ಕದ್ದೆಂಬಬಗ್ಗೆ ನಾಲ್ಕು ಮಾತುಗಳನ್ನು ಇಲ್ಲಿ ಹೇಳುವೆವು.

ಚಿಕ್ಕಮಕ್ಕಳಿಗೆ ನೈತಿಕ ಶಿಕ್ಷಣದ ಅನುಕರಣೀಯ ವಸ್ತುಗಳೆಂದರೆ ತಂದೆ ತಾಯಿ, ಗುರು-ಹಿರಿಯರು, ಮಿತ್ರರು ಮೊದಲಾದವರು. ನಮ್ಮ ದೇಶದ ತಂದೆ-ತಾಯಿಗಳಂತೂ ಕೇವಲ ಅಜ್ಞಾನಾಂಧಃಕಾರದಲ್ಲಿ ಮುಳುಗಿರುವರು. ಇವರಿಂದ ತಮ್ಮ ಮಕ್ಕಳಿಗೆ ನೈತಿಕ ಶಿಕ್ಷಣವು ದೊರೆಯಬೇಕೆಂದು ಎಳ್ಳಷ್ಟಾದರೂ ನಂಬಲಿಕ್ಕಾಗದು. ಯಾಕಂದರೆ ನೀತಿ ಅನೀತಿಗಳ ಕಲ್ಪನೆಯೇ ಅವರಿಗಿರುವದಿಲ್ಲ. ಒಳಿತು ಹೀನಗಳ ಭೇದಾಭೇದಾತ್ಮಕ ವಿಚಾರವು ಅವರ ತಲೆಯಲ್ಲಿ ಹುಟ್ಟುವದೇ ಇಲ್ಲ. ತಾವು ಆಡುವದು ಕೆಟ್ಟಮಾತು ಮಾಡುವದು ದುಷ್ಟಕೃತಿ ಅಂದಮೇಲೆ ತಂದೆ-ತಾಯಿಗಳ ಅನುಕರಣ ಮಾಡುವಂಥ ಬಾಲಕನು ಅವರಂತೆಯೇ ಆಗುವದು ಸಹಜವು. ಆದ್ದರಿಂದ ಶಿಕ್ಷಕಬಾಂಧವರೇ, ನೀವೇ ಆ ಮಹತ್ಪದ ಜವಾಬದಾರಿಯನ್ನು ವಹಿಸಿ ನಿಮ್ಮ ಕೈಯಲ್ಲಿ ಸಿಕ್ಕ ಕೋಮಲಮನಸ್ಸಿನ ಬಾಲಕರನ್ನು ತಿದ್ದಿ ಅವರನ್ನು ನೀತಿವಂತರನ್ನಾಗಿ ಮಾಡತಕ್ಕದ್ದು. ಅದಕ್ಕಾಗಿ ಬೇಕಾಗುವ ತಕ್ಕ ಉಪಕರಣ, ವಿಷಯಗಳ ಜೋಡಣೆಯನ್ನಾದರೂ ನೀವೇ ತಯಾರಿಸಿಕೊಳ್ಳತಕ್ಕದ್ದು. ನಮ್ಮ ಮೇಲಿನ ವರಿಷ್ಠರಮೇಲೆ ಅಥವಾ ಸಂಸ್ಥೆಯಮೇಲೆ ಆ ಹೊರೆಯನ್ನು ಹಾಕಿ ನೀವು ಕೈಮುಚ್ಚಿಕೊಂಡು ಕೂಡ್ರುವದು ಸರಿಯಲ್ಲ. ಮೆಗೂಲ್ಡ ಸಾಹೇಬರು ತಾವು ಬರೆದ "(Youth's Noble Path)" ಎಂಬ ಗ್ರಂಥದಲ್ಲಿ ನೀತಿಪಾಠದ ಕ್ರಮವನ್ನು ಚನ್ನಾಗಿ ವಿವರಿಸಿರುತ್ತಾರೆ. ಬಾಲಕನು ಶಾಲೆಗೆ ಬಂದ ದಿವಸವೇ ಅವನ ಶಿಕ್ಷಣವು ಪ್ರಾರಂಭವಾಗಲಿಕ್ಕೆಬೇಕು. ಶಾಲೆಯ ಮನೆಯೆಂದರೆ ಬಾಲಕನಿಗೆ ಒಳ್ಳೇ ನೀತಿಯನ್ನು ಕಲಿಸುವಂಥ ಮತ್ತು ಮಾನಸಿಕ, ಶಾರೀರಿಕ ಬೆಳವಣಿಗೆಗಳನ್ನು ಮಾಡುವಂಥ ಗುರುಕುಲವಾಸವೆಂತಲೂ ಶಿಕ್ಷಕನೆಂದರೆ ನೀತಿವಂತ ಮೂರ್ತಿಯೆಂತಲೂ ಗ್ರಹಿಕೆಯಾಗಲಿಕ್ಕೆಬೇಕು. ಶಿಕ್ಷಕನ ಆಚಾರ-ವಿಚಾರಗಳು ವಿದ್ಯಾರ್ಥಿಗಳಿಗೆ ಸದಾ ಅನುಕರಣೀಯವಾಗಿರಲಿಕ್ಕೆಬೇಕು. ಸುಳ್ಳುಹೇಳಬಾರದೆಂದು ವಿದ್ಯಾರ್ಥಿಗಳಿಗೆ ಪಾಠ ಕಲಿಸುವದು, ತಾವು ಮಾತ್ರ ಎಂದೂ ಸತ್ಯಮಾತನ್ನಾಡದಿರುವದು. ಚುಟ್ಟಾ ಸೇದಕೂಡದು, ಚಹಾ-ಕಾಫಿ ಕುಡಿಯಲಾಗದೆಂದು ಹುಡುಗರಿಗೆ ನೀತಿಯನ್ನು ಹೇಳುವದು ತಾವು ಅವರ ಕೈಯಿಂದಲೇ ತಂಬಾಕ, ಸಿಗರೇಟುಗಳನ್ನು ತರಿಸಿ ಅವರ ಎದುರಿಗೇ

ಸೇವವದು, ಇದೆಂಥ ನೈತಿಕ ಶಿಕ್ಷಣವು! ಇಂಥ ಡಾಂಭಿಕ ಶಿಕ್ಷಣದಿಂದ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಎಳ್ಳಷ್ಟಾದರೂ ಪರಿಣಾಮವಾಗಲಾರದು. ಆಡಿದಂತೆ ಮಾಡುವವನೇ ರೂಢಿಯೊಳಗುತ್ತಮನು. ಆದ್ದರಿಂದ ಶಿಕ್ಷಕನು ಮಾತಿನಿಂದಲೂ ಕೃತಿಯಿಂದಲೂ ತನ್ನ ವಿದ್ಯಾರ್ಥಿಗಳಿಗೆ ಉದಾಹರಣೆ ತಕ್ಕೊಳ್ಳತಕ್ಕ ವಸ್ತುವಾಗಿರಬೇಕು.

ಚಿಕ್ಕ ಮಕ್ಕಳಿಗೆ ನೈತಿಕ ಶಿಕ್ಷಣದ ಅಭಿರುಚಿಯನ್ನುಂಟುಮಾಡಲಿಕ್ಕೆ ಉತ್ತಮ ಕಥೆಗಳೂ, ಸತ್ಪುರುಷರ ಚರಿತ್ರೆಗಳೂ ಸಹಾಯಕಗಳು. ವಿದ್ಯಾರ್ಥಿಗಳಿಗೆ ಹೇಳತಕ್ಕ ಪ್ರತಿಯೊಂದು ನೀತಿಪಾಠವನ್ನು ಶಿಕ್ಷಕನು ಸ್ವಂತವಾಗಿ ರಚಿಸಿಕೊಳ್ಳಬೇಕು. ಅವುಗಳನ್ನು ಹುಡುಗರ ವಯೋಮಾನಕ್ಕನುಸರಿಸಿ ಸುಲಭ ಹಾಗು ಕಠಿಣ ಭಾಷೆಗಳಲ್ಲಿ ಹೇಳತಕ್ಕದ್ದು. ತಾನು ಹೇಳತಕ್ಕ ಕಥೆಯು ವ್ಯವಹಾರದೊಳಗಿನದಿದ್ದು ಯಾವದಾವರೊಂದು ನೀತಿಯು ಅದರಿಂದ ಹೊರಡಲಿಕ್ಕೆಬೇಕು. ಚಿತ್ರಗಳಿಲ್ಲದೆ ಕಥೆಯನ್ನು ಹೇಳುವದು ಸಣ್ಣ ಬಾಲಕರ ಮನಸ್ಸಿನ ಮೇಲೆ ಅಷ್ಟೊಂದು ಪರಿಣಾಮಕಾರಿಯಾಗಲಾರದು. ದಿನದ ಅಭ್ಯಾಸಕ್ರಮದಲ್ಲಿ ಈ ಕಥೆಯ ಪಾಠವನ್ನಿಟ್ಟುಕೊಂಡು ಪ್ರತಿಯೊಂದು ಪಾಠ ಮುಗಿದ ಬಳಿಕ ಅದರೊಳಗಿನ ನೀತಿಯ ಮಾತನ್ನು ಅವರಿಗೆ ಸ್ಪಷ್ಟವಾಗಿ ಹೇಳಿ ಅವರನ್ನು ಆ ನೀತಿಯಂತೆ ನಡೆಯಲಿಕ್ಕೆ ಹಚ್ಚಬೇಕು. ರಾಮಾಯಣ, ಮಹಾಭಾರತ, ಕುರಾನ ಇಸೋಪನೀತಿ ಮೊದಲಾದ ಗ್ರಂಥಗಳೊಳಗಿನ ಉತ್ತಮ ಕಥೆಗಳನ್ನಾರಿಸಿಕೊಂಡು ಭೂತದಯೆ, ಪರೋಪಕಾರ, ಒಕ್ಕಟ್ಟು, ಸತ್ಯತೆ, ಭಕ್ತಿ, ಸಾಹಸ ಮೊದಲಾದ ಸದ್ಗುಣಗಳು ಅವರಲ್ಲಿ ನೆಲೆಗೊಳ್ಳುವಂತೆ ಸುಲಭ ಹಾಗು ಸರಳ ಭಾಷೆಯಲ್ಲಿ ಕಥೆಗಳನ್ನು ಹೇಳತಕ್ಕದ್ದು. ಪಾರಿಭಾಷಿಕ ಶಬ್ದಗಳೂ, ಕಠಿಣಶಬ್ದಗಳೂ, ಆ ಕಥೆಯಲ್ಲಿ ಬರಲಾಗದು. ದೊಡ್ಡ ಕ್ಲಾಸಿನ ಹುಡುಗರಿಗೆ ಅವರ ನಿಬಂಧ ಪಾಠಗಳಲ್ಲಿ ಇಂಥ ನೈತಿಕ ನಿಬಂಧಗಳನ್ನೇ ಆರಿಸಿ ಬರೆಯಿಸಬೇಕು. ಮತ್ತು ಶಾಲೆಗಳಲ್ಲಿ ಪ್ರತಿದಿನ ಈ ನೀತಿಪಾಠವನ್ನು ಕಲಿಸುವದಲ್ಲದೆ ವಾರಕ್ಕೊಮ್ಮೆ ೧ ತಾಸು ಎಲ್ಲ ವಿದ್ಯಾರ್ಥಿಗಳನ್ನು ಒತ್ತಟ್ಟಿಗೆ ನೆರೆಯಿಸಿ, ಶಿಕ್ಷಕನಾಗಲಿ, ಮೇಲಿನ ಕ್ಲಾಸಿನ ವಿದ್ಯಾರ್ಥಿಗಳಾಗಲಿ ನೀತಿಯ ಪಾಠಗಳಬಗ್ಗೆ ವ್ಯಾಖ್ಯಾನ ಕೊಡತಕ್ಕದ್ದು. ಇದರಿಂದ ವಿದ್ಯಾರ್ಥಿಗಳಲ್ಲಿ ವಕ್ತೃತ್ವವೂ ಧೈರ್ಯವೂ ನೆಲೆಗೊಳ್ಳುವವು. ಮತ್ತು ದಿನಾಲು ತಪ್ಪದೆ ಸರಿಯಾಗಿ ಶಾಲೆಗೆ ಬರುವಂಥ, ಸತ್ಯವಾತಾಡುವಂಥ, ಸಂಭಾವಿತ ಹುಡುಗರನ್ನು ಹುಡುಕಿ ಆರಿಸಿ ಅವರಿಗೆ ತಕ್ಕ ಉತ್ತೇಜನವನ್ನು ಕೊಟ್ಟು ಉಳಿದವರೂ ಅವರಂತೆಯೇ ಆಗಬೇಕೆಂಬ ಏರಾಟವನ್ನು ಹುಡುಗರಲ್ಲಿ ಹುಟ್ಟಿಸಬೇಕು. ಪೂರ್ವಕಾಲದ ಸತ್ಪುರುಷರು ಅಂದರೆ ಹರಿಶ್ಚಂದ್ರ, ನಳರಾಜ, ಶ್ರೀರಾಮಚಂದ್ರ, ಧರ್ಮರಾಜ, ಗೌತುಮಬುದ್ಧ, ಸಾಕ್ರೆಟೀಸ, ಜ್ಞಾನದೇವ, ಹಾತಿಮತಾಯಿ, ಶಿವಾಜಿ ಮೊದಲಾದವರ ಚರಿತ್ರೆಗಳನ್ನು, ಅವರ ಗುಣಾನುವರ್ಣ

ನಾತ್ಮಕ ಭಾಗಗಳನ್ನು ಬೇರೆ ಬೇರೆಯಾಗಿ ಹೇಳಿ ಅವರಂತೆ ತಾವೂ ಪ್ರಸಿದ್ಧ ಪುರುಷರಾಗಬೇಕೆಂಬ ಲವಲವಿಕೆಯನ್ನು ಹುಡುಗರಲ್ಲಿ ಹುಟ್ಟಿಸತಕ್ಕದ್ದು.

ಯೋಗ್ಯ ಶಿಕ್ಷಣವನ್ನು ಪಡೆದ ಶಿಕ್ಷಕನು ತನ್ನ ದೇಶದಲ್ಲಿ ಉಪಲಬ್ಧವಾಗಿರುವ ಅನೇಕ ಉದಾಹರಣೆಗಳನ್ನೂ ಬೇರೆ ಬೇರೆ ಗ್ರಂಥಗಳಲ್ಲಿಯ ಉತ್ತಮ ಕಥೆಗಳನ್ನೂ ಆರಿಸಿಕೊಂಡು ಅವುಗಳ ಸಹಾಯದಿಂದ ನೀತಿ ಪಾಠವನ್ನು ವಿದ್ಯಾರ್ಥಿಗಳಿಗೆ ಕಲಿಸಲಿಕ್ಕೆ ಶಕ್ತನಾಗುತ್ತಾನೆ. ಅಪರಿಚಿತ ಕಥೆಗಳು ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವದಿಲ್ಲ. ಆದ್ದರಿಂದ ಅವರಿಗೆ ಗೊತ್ತಿದ್ದ ವಸ್ತುಗಳ ಸಂಬಂಧಿಸಿದ ಕಥೆಗಳನ್ನೇ ಹೇಳಿ ಪಾಠ ಕಲಿಸುವದರಿಂದ ವಿದ್ಯಾರ್ಥಿಗಳಲ್ಲಿ ಮನೋರಂಜನೆಯೂ ತಿಳುವಳಿಕೆಯೂ ಚನ್ನಾಗಿ ಆಗುತ್ತವೆ. ಇಂಥ ಪಾಠಗಳನ್ನು ಹೇಳುವದು ಮಹತ್ವದ್ದೆಂದೂ ಇದು ಒಂದು ಪ್ರಕಾರದ ನೈತಿಕ ಶಿಕ್ಷಣವಾಗಿರುವದೆಂದೂ ಎಲ್ಲರೂ ಎಂದೂ ಮರೆಯಲಾಗದು. ಸರಳತೆಯಿಂದ ಆಟಗಳನ್ನಾಡುವದೂ, ನಿಯಮಗಳಿಗನುಸಾರವಾಗಿ, ನಡೆಯುವದೂ ಸದಾಚಾರವನ್ನೂ ಕ್ರಮವನ್ನೂ ವೇಳೆಗೆ ಸರಿಯಾಗಿ ಯಾವದೊಂದು ಕೆಲಸವಾಡುವ ಗುಣವನ್ನೂ ಒಳಕೊಂಡು ನಡೆಯುವದೂ, ನೀತಿಶಿಕ್ಷಣದ ಪ್ರಗತಿಗೆ ಉತ್ತಮ ಸಾಧನಗಳಾಗಿರುವವು. ಒಟ್ಟಿಗೆ ಶಿಕ್ಷಕನ ಆಚರಣೆಯು ಶಾಲೆಯಲ್ಲಿಯಾಗಲಿ ವ್ಯವಹಾರದೊಳಗಾಗಲಿ ವಿದ್ಯಾರ್ಥಿಗಳ ನೀತಿಶಿಕ್ಷಣದಲ್ಲಿ ಒಳ್ಳೇ ಪರಿಣಾಮವನ್ನುಂಟುಮಾಡುವಂಥಾದ್ದಾಗಿರತಕ್ಕದ್ದು.

ನಮ್ಮ ಶಾಲೆಯಲ್ಲಿ ಇದೇ ಕ್ರಮದಿಂದ ಪ್ರತಿದಿನ ವಿಷಯದ ಸಂಗಡಲೂ, ವಾರಕ್ಕೊಮ್ಮೆ ಒಂದು ತಾಸು (ಪ್ರತಿಶನಿವಾರ) ನೈತಿಕ ಶಿಕ್ಷಣದ ವಿಷಯವನ್ನು ಇಡೀ ಶಾಲೆಯ ಹುಡುಗರಿಗೆ ಕಲಿಸುತ್ತ ವಿದ್ಯಾರ್ಥಿಗಳಲ್ಲಿ ಸ್ವಚ್ಛತೆ, ಒಕ್ಕಟ್ಟು, ಪರಸ್ಪರ ಪ್ರೇಮಭಾವ, ಸಹಾನುಭೂತಿ ಮೊದಲಾದ ಸದ್ಗುಣಗಳು ನೆಲೆಗೊಳ್ಳುವಂತೆ ಪ್ರಯತ್ನ ನಡೆಯಿಸಿರುವೆವು. ಹುಡುಗರಾದರೂ ವಿಶೇಷ ಹುರುಪಿನಿಂದ ನಮ್ಮ ಹೇಳಿಕೆಯ ಮೇರೆಗೆ ಅಯಾ ಗುಣಗಳನ್ನು ಅನುಕರಣಮಾಡಿ ಪ್ರತಿದಿನ ಸುಧಾರಿಸಹತ್ತಿದ್ದಾರೆ. ಶಾಲೆಯ ವಿಷಯವಾಗಿ ಹುಡುಗರಲ್ಲಿ ಪ್ರೇಮಾದರಗಳು ಹುಟ್ಟಿ ಹುಡುಗರ ಸಂಖ್ಯೆಯು ಮಿತಿಮೀರಿ ಬೆಳೆಯಹತ್ತಿದೆ. ವಿದ್ಯೆ, ವಿನಯಗಳ ಕಡೆಗೆ ಹುಡುಗರ ಹಾಗೂ ಪಾಲಕರ ಲಕ್ಷ್ಯವು ಹೆಚ್ಚಾಗಹತ್ತಿದೆ. ಈದೇ ನಮಗೆ ಆನಂದವು. ವ್ಯವಸಾಯಬಂಧುಗಳೆಲ್ಲರೂ ತಾವೂ ಆದಷ್ಟು ಮಟ್ಟಿಗೆ ನೈತಿಕ ಸುಧಾರಣೆಯ ಕಡೆಗೆ ಲಕ್ಷ್ಯಗೊಟ್ಟು ಭಾವೀ ಪ್ರಜೆಗಳನ್ನು ಉತ್ತಮ ಮಾರ್ಗಕ್ಕೆ ಹಚ್ಚುವಿರೆಂದು ನಂಬಿದ್ದೇನೆ.

ಫ. ನಾ. ಕಾಳಪ್ಪನವರ
ಹೆ. ಮಾ. ಕುರ್ತಕೋಟಿ.

ಉತ್ತಮ ಶಿಕ್ಷಕನೆಂದರೆ ಯಾರು?

"ನಮ್ಮ ಹುಡುಗನು ಏನಿಲ್ಲದಿದ್ದರೂ ಸಾಲೆಯ ಮಾಷ್ಟರಿಕೆಯನ್ನಾದರೂ ಮಾಡಲಾರನೋ?" ಎಂಬೀ ನುಡಿಯು ಅನೇಕರ ಬಾಯಿಯಿಂದ ಹೊರಡುವದನ್ನು ನಾವು ಕೇಳಬಹುದು. ಇದರ ಮೇಲಿಂದ ಸಮಾಜದೊಳಗಿನ ಬಹುತೇಕ ಜನರಲ್ಲಿ ಶಿಕ್ಷಕನ ಕೆಲಸವು ಎಂಥ ಮನುಷ್ಯನಿಗಾದರೂ ಸಾಧ್ಯವದೆಯೆಂಬ ಕಲ್ಪನೆಯು ಇಂಬಿಟ್ಟಿರುವದು ವ್ಯಕ್ತವಾಗುತ್ತದೆ. ಪರಂತು ಈ ಕಲ್ಪನೆಯು ತಪ್ಪು. ಕವಿಗಳಲ್ಲಿ ಹ್ಯಾಗೆ ವರಕವಿಗಳು ಮತ್ತು ನರಕವಿಗಳೆಂಬ ಪ್ರಕಾರಗಳಿವೆ, ಹಾಗೆಯೇ ಶಿಕ್ಷಕರಲ್ಲಿಯೂ ವರಶಿಕ್ಷಕರು ಮತ್ತು ನರಶಿಕ್ಷಕರೆಂಬ ಭೇದಗಳನ್ನು ನಾವು ಮಾಡಬಹುದು. ಎಂಥ ಕವಿಯಾದರೂ ಶೇಕ್ಸಪಿಯರ ಮತ್ತು ಕಾಲಿದಾಸ ಕವಿಗಳ ಸಾಲಿಗೆ ಹೇಗೆ ಬರಲಾರನೋ ಅದರಂತೆ ಎಂಥ ಶಿಕ್ಷಕನಾದರೂ ಪೆಸ್ತಾಲೊಟ್ಸಿ ಎಂಬ ಸ್ವಿಟ್ಸರ್ಲಂಡಿನ ಪ್ರಸಿದ್ಧ ಶಿಕ್ಷಕನ ಸಾಲಿಗೆ ಬರಲಾರನು. ಇದರ ಮೇಲಿಂದ ವರಶಿಕ್ಷಕರಲ್ಲದ ಉಪಾಧ್ಯಾಯರು ತಮ್ಮ ಜೀವನವು ವ್ಯರ್ಥವೆಂದು ನಿರಾಶರಾಗಲು ಕಾರಣವಿಲ್ಲ. ಉತ್ತಮ ಶಿಕ್ಷಕನ ಉದಾಹರಣೆಯನ್ನು ಮನಸ್ಸಿನ ಮುಂದೆ ಇಟ್ಟುಕೊಂಡು ಮನಃಪೂರ್ವಕವಾಗಿಯೂ ಎಡೆಬಿಡದೆಯೂ ದುಡಿದರೆ ಸಾಮಾನ್ಯ ಮನುಷ್ಯನಾದರೂ ಕಾಲಕ್ರಮೇಣ ಉತ್ತಮ ಶಿಕ್ಷಕನಾಗಬಹುದು. ಹಾಗಾದರೆ ಈ ಉತ್ತಮ ಶಿಕ್ಷಕನ ಲಕ್ಷಣಗಳಾವವೆಂಬದನ್ನು ನಾವು ವಿಚಾರಿಸುವಾ.

ಯೋಗ್ಯ ಶಿಕ್ಷಕನು ತನ್ನ ಹೋರೆಯ ಮೇಲೆ ನಿಜವಾದ ಪ್ರೇಮ ಉಳ್ಳವನಾಗಿರುವನು. ಬರೇ ಹೊಟ್ಟೇಕಿಚ್ಚಿಗೋಸ್ಕರ ಶಿಕ್ಷಕನ ವೃತ್ತಿಯನ್ನು ಮಾಡುವವನಿಗೆ ಹುಡುಗರ ಪ್ರೀತಿಯನ್ನು ಸಂಪಾದಿಸುವದೂ ಅವರ ಉನ್ನತಿಯನ್ನು ಹೊರಕಿಸಿಕೊಳ್ಳುವದೂ ಅಸಾಧ್ಯವು. "ಇದು ನಮ್ಮ ಮನೇ ಕೆಲಸವಲ್ಲ, ನಾವೇಕೆ ಇಷ್ಟು ದುಡಿಯಬೇಕು" ಎಂಬ ಮಾತು ಎಷ್ಟೋ ಶಿಕ್ಷಕರ ಬಾಯಿಯಿಂದ ಹೊರಬೀಳುವದು ನಮ್ಮ ಲಕ್ಷ್ಯಕ್ಕೆ ಬಂದದೆ. ಈ ತರಹದ ವಿಚಾರವುಳ್ಳ ಶಿಕ್ಷಕನು ತಾನು ಕೈಕೊಂಡ ಉದ್ಯೋಗದಲ್ಲಿ ಯಾವ ಸುಧಾರಣೆಯನ್ನೂ ಹೊಂದಲಾರನು, ಹಾಗೂ ಆತನ ಶಿಕ್ಷಣವು ಹುಡುಗರ ಮೇಲೆ ಯೋಗ್ಯರೀತಿಯಿಂದ ಪರಿಣಮಿಸಲಿಕ್ಕಿಲ್ಲ.

ಉತ್ತಮ ಶಿಕ್ಷಕನು ತನ್ನ ಕರ್ತವ್ಯದ ಉದ್ದೇಶವನ್ನು ಚೆನ್ನಾಗಿ ಅರಿತಿರುವನು. ಅದಾವದೆಂದರೆ ತನ್ನ ಕೈಕೆಳಗಿನ ಬಾಲಕರನ್ನು ಮುಂದೆ ಪ್ರಪಂಚದಲ್ಲಿ ಯೋಗ್ಯ ಸಂಸಾರಿಕರಾಗುವಂತೆಯೂ ರಾಷ್ಟ್ರದಲ್ಲಿ ಉತ್ತಮ ನಾಗರಿಕರಾಗುವಂ

ತೆಯೂ ತಯಾರಿಸುವದೇ. ಆದವರಿಂದ ಹುಡುಗರಿಗೆ ಕಲಿಸುವ ವಿಷಯಗಳನ್ನು ಅವರ ಕಾಯಿಕ ಮಾನಸಿಕ ಶಕ್ತಿಗಳನ್ನು ಬಲಪಡಿಸುವಂತೆ ಮಾತ್ರವಲ್ಲ, ಮುಂದೆ ಅವರಿಗೆ ವ್ಯವಹಾರದಲ್ಲಿ ಉಪಯೋಗವಾಗುವಂತೆ ಕಲಿಸಬೇಕು. ಅನೇಕ ಸಾರಿ ಡಿಪ್ಯುಟಿಯವರು ಯಾವದಾದರೊಂದು ವಿಷಯದಲ್ಲಿ " ಈ ಸಂಗತಿಗಳನ್ನು ನೀವು ಯಾಕೆ ತಿಳಿಸಲಿಲ್ಲ ? " ಅಥವಾ " ಈ ವಿಷಯವನ್ನು ಹೀಗೆ ಕಲಿಸಿರಿ " ಎಂದು ಆಕ್ಷೇಪವಾಡಿದರೆ ಅಥವಾ ಸೂಚಿಸಿದರೆ, ವಾಡಿಕೆಯಾಗಿ ಶಿಕ್ಷಕರು " ಇವನ್ನು ಹಿಂದಿನ ಡಿಪ್ಯುಟಿಯವರು ನಮಗೆ ಕೇಳಲೂ ಇಲ್ಲ, ಹೇಳಲೂ ಇಲ್ಲ ಮತ್ತು ಹೀಗೆ ಕಲಿಸಿದರೆ ಸಿಟ್ಟು ಮಾಡುತ್ತಿದ್ದರು " ಮೊದಲಾದ ಉತ್ತರ ಕೊಡುವರು. ಹೀಗೆ ಮಾಡುವದರ ಬದಲು ವಿಚಾರವಂತನಾದ ಶಿಕ್ಷಕನು ಡಿಪ್ಯುಟಿಯವರ ಆಕ್ಷೇಪವು ಅಥವಾ ಸೂಚನೆಯು (ಮೇಲೆ ಹೇಳಿದ) ತನ್ನ ಕರ್ತವ್ಯದ ಉದ್ದೇಶಕ್ಕೆ ಅನುಕೂಲವಜೆಯೋ ಅಥವಾ ಪ್ರತಿಕೂಲವದೆಯೋ ಎಂಬದನ್ನು ವಿಚಾರಿಸಿ, ಅನುಕೂಲವಿದ್ದರೆ ಅದನ್ನು ಸ್ವೀಕರಿಸುವನು. ಯಾಕಂದರೆ ಶಿಕ್ಷಕರು ಸಾಲೆಯಲ್ಲಿರುವದು ಯಾವನಾದರೊಬ್ಬ ಡಿಪ್ಯುಟಿಯ ದೆಸೆಯಿಂದಲ್ಲ, ಅಲ್ಲಿ ನೆರೆದಿರುವ ಹುಡುಗರ ದೆಸೆಯಿಂದ, ಎಂಬದನ್ನು ಅವರು ಚೆನ್ನಾಗಿ ಮನಗಂಡಿರಬೇಕು.

ಉತ್ತಮ ಶಿಕ್ಷಕನು ತಾನು ಕಲಿಸುವ ವಿಷಯಗಳ ಜ್ಞಾನವನ್ನು ಚೆನ್ನಾಗಿ ಮಾಡಿಕೊಂಡವನಿರುವನು. ಮನುಷ್ಯನ ಜೀವಮಾನವೆಂಬ ಮನೆಗೆ ಸಾಲೆಯಲ್ಲಿ ಕೊಡುವ ಶಿಕ್ಷಣವು ಅಸ್ತಿವಾರ (ಪಾಯಾ) ವಾಗಿರುವದು. ಈ ಅಸ್ತಿವಾರವನ್ನು ಕಟ್ಟುವಂಥ ಉಪ್ಪಾರನಾದ ಶಿಕ್ಷಕನು ತನ್ನ ಕೆಲಸವನ್ನು ಚೆನ್ನಾಗಿ ಅರಿತವನಲ್ಲದಿದ್ದರೆ ಅಸ್ತಿವಾರವು ಶಿಥಿಲವಾಗುವದು ಮತ್ತು ಬೇಗನೇ ಮುರಕಳಿಗೆ ಬರುವದು. ಆದ್ದರಿಂದ ಶಿಕ್ಷಕನು ತನ್ನ ವಿಷಯದ ಜ್ಞಾನವನ್ನು ಮಾಡಿಕೊಳ್ಳಬೇಕು ಮಾತ್ರವಲ್ಲ, ಅದನ್ನು ದಿನೇ ದಿನೇ ಬೆಳೆಸುತ್ತಾ ಇರಬೇಕು; ಹಾಗೂ ತಯಾರಿಮಾಡದೆ ಯಾವ ಪಾಠವನ್ನೂ ಕಲಿಸಬಾರದು. ಅವನು ಕಲಿಸುವ ಕಾಲದಲ್ಲಿ ಯಾವದಾದರೊಂದು ಶಬ್ದದ ಅಥವಾ ಸಂಗತಿಯ ನಿಜವಾದ ಅರ್ಥವು ತನ್ನ ಮನಸ್ಸಿಗೆ ಹೊಳೆಯದಿದ್ದರೆ, ಅವನು ಅದನ್ನು ಆ ದಿವಸ ಕಲಿಸದೆ ಅದರ ನಿಜವಾದ ಅರ್ಥವನ್ನು ಮನೆಗೆ ಹೋದಮೇಲೆ ನೋಡಿ ತಿಳಕೊಂಡು ಅವರ ಜ್ಞಾನವು ಚೆನ್ನಾಗಿ ಆದನಂತರ ಮರುದಿವಸ ಆದನ್ನು ಕಲಿಸಬೇಕೇ ಹೊರತು ತತ್ಕಾಲಕ್ಕೆ ಸ್ಥೂಲಮಾನದಿಂದ ಸರಿದೋರುವಂತೆ ಏನಾದರೊಂದು ಅರ್ಥವನ್ನು ಹುಡುಗರಿಗೆ ಹೇಳಿ ಪಾಠ ಸಾಗಿಸಿಕೊಂಡು ಹೋಗಬಾರದು. ಅನೇಕ ಶಿಕ್ಷಕರು ಹೀಗೆ ಮಾಡುವದು ತಮ್ಮ ಅಭಿಮಾನಕ್ಕೆ ಕಡಿಮೆಯೆಂದು ತಿಳಿಯುವರು; ಪರಂತು ತಮ್ಮ ಉದ್ದೇಶವನ್ನು ಅವರು ಚೆನ್ನಾಗಿ ತಿಳಿದಿದ್ದರೆ ಇಂಥ ದುರಭಿಮಾನವನ್ನು ಅವರು ಎಂದೂ ತಾಳಲಿಕ್ಕಿಲ್ಲ.

ಯೋಗ್ಯ ಶಿಕ್ಷಕನು ವಿಷಯಗಳನ್ನು ಕಲಿಸುವ ರೀತಿಯನ್ನು ತನ್ನ ಕೈಕೆಳಗಿನ ಹುಡುಗರ ಯೋಗ್ಯತೆಗೆ ಅನುಸರಿಸಿ ಆಗಿಂದಾಗ್ಗೆ ಅದಲು ಬದಲು ಮಾಡುತ್ತಿರಬೇಕು. ದಡ್ಡ ಹುಡುಗರಿಗೂ ಬುದ್ಧಿವಂತ ಹುಡುಗರಿಗೂ ಒಂದೇ ರೀತಿಯು ಉಪಯೋಗ ಬೀಳಲಿಕ್ಕಿಲ್ಲ. ಆದ್ದರಿಂದ ತನ್ನ ವರ್ಗದಲ್ಲಿರುವ ಹುಡುಗರಿಗೆ ವಿಷಯಗಳನ್ನು ಯಾವ ರೀತಿಯಿಂದ ಹೇಳಿದರೆ ಅವರಿಗೆ ಸ್ವಲ್ಪ ಕಾಲದಲ್ಲಿ ಒಳ್ಳೇ ಜ್ಞಾನವಾಗಬಹುದೆಂಬದನ್ನು ಶಿಕ್ಷಕನು ಯಾವಾಗಲೂ ವಿಚಾರಮಾಡುತ್ತಿರಬೇಕು.

ಉತ್ತಮ ಶಿಕ್ಷಕನು ತನ್ನ ಕೈಕೆಳಗಿನ ಎಲ್ಲ ಹುಡುಗರ ಮೇಲೆ ಸಮ ವೃಷ್ಟಿಯುಳ್ಳವನಾಗಿರುವನು; "ಗೌಡನ ಮಗನಿಗೆ, ದೇಸಾಯಿಯರ ಮಗನಿಗೆ ಚಲೋ ಕಲಿಸಿಬರಾಯಿತು" ಇತ್ಯಾದಿ ವಿಚಾರಕ್ಕೆ ಅವನು ಎಂದೂ ಅಸ್ಪದ ಕೊಡಲಾರನು.

ಉತ್ತಮ ಶಿಕ್ಷಕನು ಹುಡುಗರ, ಪಾಲಕರ ಮತ್ತು ತಾಯಿ-ತಂದೆಗಳ ಕೂಡ ಸಹಾನುಭೂತಿಯಿಂದ ಇರುವನು, ಹೊರತು "ನಾನು ಕಲಿತು ಹುಶಾರಾದ ಟ್ರೈಂಡ ಶಿಕ್ಷಕನು, ಈ ಹಳ್ಳಿಯ ಜನರು ಅಶಿಕ್ಷಿತರು, ಆದ್ದರಿಂದ ಇವರ ಕೂಡ ಸಹಾನುಭೂತಿಯಿಂದ ಇರಲು ಪ್ರಯತ್ನಿಸುವದು ನನ್ನ ಮರ್ಯಾದೆಗೆ ಕಡಿಮೆಯಾಗುವದು" ಎಂಬಿತ್ಯಾದಿ ವಿಚಾರದ ದುರಭಿಮಾನಕ್ಕೆ ಎಂದೂ ಬೀಳಲಾರನು. ಹಳ್ಳಿಯ ಜನರು ಅಶಿಕ್ಷಿತರಿರುವದು ಅವರ ಕೂಡ ಸಹಾನುಭೂತಿಯಿಂದ ಇರಲಿಕ್ಕೆ ಶಿಕ್ಷಕನಿಗೆ ಹೆಚ್ಚಿನ ಕಾರಣವಾಗಬೇಕು.

ಉತ್ತಮ ಶಿಕ್ಷಕನು ಯಾವಾಗಲೂ ಹುಡುಗರನ್ನು ಕೂಡಿಕೊಂಡು ವರ್ತಿಸುವನು. ಪರಂತು ತಾನು ಅವರೊಳಗೆ ಹಗುರಾಗುವಷ್ಟು ಸಲಿಗೆಯನ್ನು ಅವರಿಗೆ ಕೊಡಲಾರನು. ಅವನು ಹುಡುಗರನ್ನು ಪ್ರೀತಿಸುವನು ಮತ್ತು ಅವರ ಹಿತವನ್ನು ಬಯಸುವನು; ಹಾಗೂ ಅವರಲ್ಲಿ ತನ್ನ ವಿಷಯಕ್ಕೆ ಭಯಭಕ್ತಿಗಳನ್ನು ಹುಟ್ಟಿಸುವನು. ಶಿಕ್ಷಕನು ಕಠೋರನೆಂದಾಗಲೀ ಪ್ರೀತಿಪಾತ್ರನಲ್ಲೆಂದಾಗಲೀ ಹುಡುಗರು ತಿಳಿಯದಹಾಗೆ ಅವನ ವರ್ತನವಿರಬೇಕು.

ಚಿಕ್ಕ ಮಕ್ಕಳಲ್ಲಿ ಅನುಕರಣಶಕ್ತಿಯು ವಿಶೇಷವಾಗಿರುವದು. ಆದಕಾರಣ ಉತ್ತಮನಾದ ಶಿಕ್ಷಕನು ಇದರ ಲಾಭವನ್ನು ತಕ್ಕೊಂಡು, ಅವರಿಗೆ ಸ್ವಚ್ಛತೆ, ಸತ್ಯತೆ, ನಿಯಮಿತತನ ಮುಂತಾದ ಸುಗುಣಗಳನ್ನು ಪಾಠಗಳ ಮೂಲಕ ಕಲಿಸುವದರ ಬದಲು ತನ್ನ ವರ್ತನದಿಂದಲೇ ಕಲಿಸುವನು. ಹಾಗೂ ಚುಟ್ಟಿ ಸೇದುವದು ತಂಬಾಕು ಹಾಕಿಕೊಳ್ಳುವದು ಮುಂತಾದ ಚಟಗಳನ್ನು ಎಂದೂ ಹಚ್ಚಿಕೊಳ್ಳಲಾರನು ಅಥವಾ ಹಚ್ಚಿಕೊಂಡರೂ ಬಾಲಕರ ಸಮಕ್ಷಮದಲ್ಲಿ, ವಿಶೇಷತಃ ವರ್ಗದಲ್ಲಿ ಈ ಚಟಗಳನ್ನು ಅನುಭವಿಸಲಾರನು.

ಒಟ್ಟಿನ ಮೇಲೆ ಉತ್ತಮನಾದ ಶಿಕ್ಷಕನು ತನ್ನ ಹೋರೆಯ ಮೇಲೆಯೂ ಕೈಕೆಳಗಿನ ಹುಡುಗರ ಮೇಲೆಯೂ ನಿಜವಾದ ಪ್ರೀತಿಯುಳ್ಳವನೂ, ತನ್ನ ಉದ್ದೇಶವನ್ನು ಚೆನ್ನಾಗಿ ತಿಳಿದವನೂ, ತಾನು ಕಲಿಸುವ ವಿಷಯಗಳ ತಕ್ಕದ್ದಾದ ಜ್ಞಾನವನ್ನು ಸಂಪಾದಿಸಿದವನೂ, ಹುಡುಗರೆಲ್ಲರನ್ನು ಸಮದೃಷ್ಟಿಯಿಂದ ನಡೆಯಿಸಿಕೊಳ್ಳುವವನೂ, ಹುಡುಗರ, ಪಾಲಕರ ವತ್ತ ತಾಯಿ-ತಂದೆಗಳ ಕೂಡ ಸಹಾನುಭೂತಿಯಿಂದ ನಡೆಯುವವನೂ, ಹುಡುಗರು ಅನುಕರಣ ಮಾಡತಕ್ಕದ್ದಾದ ರೀತಿಯಿಂದ ಅವರೊಳಗೆ ತನ್ನ ಪರ್ತನವನ್ನು ಇಟ್ಟುಕೊಳ್ಳುವವನೂ, ಅವರ ಪ್ರೀತಿಗೂ ಭಯಭಕ್ತಿಗಳಿಗೂ ಪಾತ್ರನಾಗಿರುವವನೂ ಆಗಿರುವನು.

ನಾಗೇಶ ಸುಬ್ರಾವ ಉಳ್ಳಾಲ.

ಒಕ್ಕಲಿಗರೂ ಮತ್ತು ಒಕ್ಕಲತನವೂ.

ಎಲ್ಲ ಉದ್ಯೋಗಗಳಿಗೂ ಮೂಲಾಧಾರವಾದಂಥ ಒಕ್ಕಲತನದ ಉದ್ಯೋವು ಎಲ್ಲ ದೇಶಗಳಲ್ಲಿಯೂ, ಮತ್ತು ಎಲ್ಲ ಕಾಲದಲ್ಲಿಯೂ ಶ್ರೇಷ್ಠವೆನಿಸಿಕೊಂಡಿರುತ್ತದೆ. ಹೀಗಿದ್ದರೂ, ಕೃಷಿಪ್ರಧಾನವಾದ ನಮ್ಮ ದೇಶದಲ್ಲಿ, ಈ ಉದ್ಯೋಗವು ಸಾಕಷ್ಟು ಚಿತ್ತಾಕರ್ಷಕವಾಗಿರುವದಿಲ್ಲ. ಯಾಕಂದರೆ ಕೃಷಿಕೆಲಸವು ಬಹಳ ಶ್ರಮದ ಹೋರೆಯು. ಮೇಲಾಗಿ ಬಹಳ ಜನರು ಈ ಉದ್ಯೋಗದಲ್ಲಿ ತೊಡಗಿರುವರು. ಅಂದರೆ ಹಿಂದುಸ್ಥಾನದಲ್ಲಿದ್ದ ೩೧೯ ಲಕ್ಷ ಜನಸಂಖ್ಯೆಯಲ್ಲಿ ೧೩೪ ಲಕ್ಷ ಜನರು ಒಕ್ಕಲತನದಲ್ಲಿ ದುಡಿಯುತ್ತಿರುವರು. ಹೀಗಿದ್ದರೂ, ಒಕ್ಕಲತನವು ಸರಿಯಾದ ಸ್ಥಿತಿಯೊಳಗಿರುವದಿಲ್ಲ. ಸುಸ್ಥಿತಿಯಲ್ಲಿಲ್ಲದ ಧಂದೆಯ ಕಡಿಗೆ ಯಾರೂ ಲಕ್ಷ ಹಾಕುವದಿಲ್ಲ. ಹೀಗಾಗಿ ಹಿಂದುಸ್ಥಾನದ ಒಕ್ಕಲತನವು ಹಿಂದೆ ಬಿದ್ದದೆ. ಆದರೆ ಅರ್ಥಶಾಸ್ತ್ರದೃಷ್ಟಿಯಿಂದ ವಿಚಾರಮಾಡಿದಲ್ಲಿ, ಒಕ್ಕಲತನದ ಹೊರ್ತಾಗಿ ನಮ್ಮ ದೇಶದಲ್ಲಿ ಹೊಸದುಡ್ಡು ಮಾಡುವ ಉದ್ಯೋಗಗಳು ಯಾವವೂ ಇರುವದಿಲ್ಲೆಂದು ಕಂಡುಬರುತ್ತದೆ. ಇಷ್ಟಾಗಿಯೂ, ಇದರ ಏಳ್ಗೆಗಾಗಿ ಸುಶಿಕ್ಷಿತರು ಮನಸ್ಸು ಹಾಕುವದಿಲ್ಲ. ಅಶಿಕ್ಷಿತರಾದ ರೈತಭಾಂಧವರಿಗೆ, ಇದರ ಏಳ್ಗೆಯು ಹೇಗೆಯಾಗುವದೆಂಬುದು ಹೊಳೆಯದಾಗಿದೆ. ಏನಾದರೂ ಮಾಡಬೇಕೆಂದು ಕೆಲವರು ಬಯಸಿದರೆ, ಹೊಟ್ಟೆಯೊಳಗಿನ ಸಿಟ್ಟು ರಟ್ಟೆಯೊಳಗೆ ಇಲ್ಲದಂತಾಗಿ, ಎಣ್ಣೆ ತೀರಿದ ದೀಪವು ಮಿಣಿಮಿಣಿ ಮಿಣಕುವಂತೆ, ಅವರು ಮನಸ್ಸಿನಲ್ಲಿಯೇ ಮಿಣಕುತ್ತಿರುವರು.

ಯಾವದಾದರೊಂದು ಉದ್ಯೋಗವು ಪ್ರಿಯಕರ ಮತ್ತು ಲಾಭಕರವಾಗ ಬೇಕಾದರೆ, ಆ ಉದ್ಯೋಗವನ್ನು ಮಾಡುವವರು ಅದರಲ್ಲಿ ತುಂಬಾ ಮನಸ್ಸು ಹಾಕಬೇಕಾಗುವದು. ಹಾಗೆ ಆಗಬೇಕಾದರೆ, ಅವರು ಸುಶಿಕ್ಷಿತರಿರಬೇಕು. ಸುಶಿಕ್ಷಿತರೆಂದರೆ ದೊಡ್ಡ ದೊಡ್ಡ ಪರೀಕ್ಷೆ ಪಾಸಾಗಿ, ಪರರಾಷ್ಟ್ರದವರನ್ನು ಮರಿಸುವಂಥ ಉಡುಪನ್ನು ಉಡುವವರಷ್ಟೇ ಅಲ್ಲ, ತಮ್ಮ ಪ್ರತಿದಿವಸದ ಕಾರ್ಯ ಗಳನ್ನು ನಿರ್ವಿಘ್ನವಾಗಿ ನಾಗಿಸಿಕೊಂಡು ತಾನು ಹ್ಯಾಗೆ ಮಾಡಿದರೆ ತನಗೆ ಹೆಚ್ಚು ಲಾಭವಾದೀತೆಂದು ತಿಳಕೊಳ್ಳುವಷ್ಟು ಓದು, ಬರಹವ ಜ್ಞಾನ ವಿದ್ದವನಿಗೆ ಸುಶಿ ಕ್ಷಿತನೆಂದರೆ ತಪ್ಪಾಗದು. ಸಾಧಾರಣವಾಗಿ, ಮನುಷ್ಯರಲ್ಲಿ, ಈ ತರದ ಜ್ಞಾನವು ಉತ್ಪನ್ನವಾಗಬೇಕಾದರೆ, ಅವರಿಗೆ ತಕ್ಕ ಮಟ್ಟಿಗೆ ಸರಿಯಾದ ಪ್ರಾಥಮಿಕ ಶಿಕ್ಷ ಣವು ದೊರೆಯಬೇಕು. ಸರಿಯಾದ ಪ್ರಾಥಮಿಕ ಶಿಕ್ಷಣವೆಂದರೆ, ಅದು ಆ ದೇಶದ ಮುಖ್ಯ ಉದ್ಯೋಗದ ಪ್ರಗತಿಗೆ ಅನಕೂಲ ವಾದದ್ದಿರಬೇಕು. ಆದರೆ ದುರ್ದೈ ವದಿಂದ ನಮ್ಮಲ್ಲಿ ಸದ್ಯಕ್ಕೆ ದೊರೆಯುವ ಪ್ರಾಥಮಿಕ ಶಿಕ್ಷಣವು, ನಮ್ಮ ದೇಶದ ಮುಖ್ಯೋದ್ಯೋಗವಾದ ಒಕ್ಕಲತನಕ್ಕೆ ಅನಕೂಲವಾಗಿರುವ ಬದಲು ಪ್ರತಿಕೂಲ ವಾಗಿರುವದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ನಮ್ಮ ದೇಶದ ಪ್ರಗತಿಯಾಗಬೇಕಾದರೆ, ನಮ್ಮ ದೇಶದ ಜನರ ಮತ್ತು ನಮ್ಮ ದೇಶದ ಉದ್ಯೋಗದ ಪ್ರಗತಿಯಾಗಲಿಕ್ಕೇಬೇಕ.. ಇವೆರಡರಲ್ಲಿ ೧ನೆ ಯದು ಬಹಳ ಮಹತ್ವವಾದದ್ದು. ಯಾಕಂದರೆ ಎರಡನೆಯದು, ಮೊದಲನೆಯ ದರ ಮೇಲೆ ಅವಲಂಬಿಸಿರುತ್ತದೆ. ಕಾರಣ ೧ನೆಯದರ ಬಗ್ಗೆಯೇ ಇಲ್ಲಿ ಹೆಚ್ಚಾ ಗಿ ವಿವೇಚಿಸೋಣ. ನಮ್ಮ ದೇಶದ ಜನರ ಪ್ರಗತಿಯಾಗಬೇಕಾದರೆ, ನಮ್ಮ ದೇಶದ ಎಲ್ಲ ಜನರಿಗೂ ಪ್ರಾಥಮಿಕ ಶಿಕ್ಷಣವು ದೊರೆಯಬೇಕು. ಮತ್ತು ಪರಿ ಸ್ಥಿತಿಗೆ ಸರಿಯಾಗಿ, ಪ್ರಾಥಮಿಕ ಶಿಕ್ಷಣದಲ್ಲಿ ಬದಲಾವಣೆಯಾಗತಕ್ಕದ್ದು. ಆದರೆ ಪ್ರಾಥಮಿಕ ಶಿಕ್ಷಣವು ಇನ್ನೂ ಎಲ್ಲರಿಗೂ ಸಿಗುವದಿಲ್ಲ. ಯಾಕಂದರೆ ಒತ್ತಾಯದ ಶಿಕ್ಷಣವು ಅಮಲಿನಲ್ಲಿ ಬಂದಿರುವದಿಲ್ಲ. ಯಾವದಾದರೊಂದು ಸುಧಾ ರಿಸಿದ ರಾಷ್ಟ್ರದ ಇತಿಹಾಸವನ್ನು ನೋಡಿದಲ್ಲಿ, ಆ ದೇಶವು ಪ್ರಬುದ್ಧವಾಗಲು, ಒತ್ತಾಯದ ಶಿಕ್ಷಣವೇ ಅವರ ಮೊದಲನೇ ಮೆಟ್ಟಾಗಿರುವದೆಂದು ತಿಳಿದುಬರು ತ್ತದೆ. ಈಗ ಸುಧಾರಿಸಿದ ರಾಷ್ಟ್ರಗಳಲ್ಲಿ, ಸಕ್ತಿಶಿಕ್ಷಣವು ಅಮಲಿನಲ್ಲಿರುವದು. ೬ ರಿಂದ ೨೬ ವಯಸ್ಸಿನೊಳಗಿನ ತಮ್ಮ ಮಕ್ಕಳನ್ನು ಯಾವ ತಾಯಿ-ತಂದೆಗಳೂ ಸಾಲೆಗೆ ಕಳಿಸದೆ ಇರಲಾರರು. ೧೪ ವಯಸ್ಸಿನೊಳಗಿನ ಹುಡುಗರನ್ನು ಯಾರಾ ದರೂ ಆಳಿನಂತೆ ಉಪಯೋಗಿಸಿದರೆ, ಅಂಥವರಿಗೆ ಸ್ವಿಜರಲಂಡದಲ್ಲಿ ಕಠಿಣ ಶಿಕ್ಷೆ ಯಾಗುವದು. ಹೀಗಿದ್ದಮೇಲೆ, ಪ್ರಾಥಮಿಕ ಶಿಕ್ಷಣವು ಎಲ್ಲರಿಗೂ ಸಿಗದೆ ಏನು ಮಾಡೀತು? ನಮ್ಮಲ್ಲಿ ಮಾತ್ರ ಹೀಗೆ ಇರುವದಿಲ್ಲ. ಸರಕಾರದವರು ಪ್ರಾಥ ಮಿಕ ಶಿಕ್ಷಣದ ಭಾರವನ್ನು ಸ್ಥಾನಿಕ ಸಂಸ್ಥೆಯವರು ಸಾಕಷ್ಟು ಮಾಡ್ದಿಲ್ಲೆನ್ನು

ವರು. ಹೀಗಾಗಿ, ಸಕ್ತಿಶಿಕ್ಷಣದ ಬಿಲ್ಲು ಪಾಸಾಗಿ ಅನೇಕ ವರ್ಷಗಳಾಗಿದ್ದರೂ ಸಕ್ತಿ ಶಿಕ್ಷಣದ ಲಾಭವು ನನಗೆ ದೊರೆಯದಾಗಿದೆ. ಪರದೇಶದವರು ಪ್ರತಿವರ್ಷ ಪ್ರಾಥಮಿಕ ಶಿಕ್ಷಣದ ಲಾಭವು ಪರಮಾವಧಿಯಾಗಲೆಂದು, ಹಲಕೆಲವು ಮಾರ್ಪಾಟುಗಳನ್ನು ಮಾಡುತ್ತಿರುವರು. ಹುಡುಗರ ನಿರೀಕ್ಷಣ ಬುದ್ಧಿ, ದುಡಿಯುವ ಗುಣ, ಕೈಗಾರಿಕೆಯ ವಿದ್ಯೆ ಮುಂತಾದವುಗಳನ್ನು ಹೆಚ್ಚಿಸುತ್ತಿರುವರು. ಆದರೆ ನಮ್ಮ ದೇಶದಲ್ಲಿ ಈಗ ೫೦ ವರ್ಷಗಳಿಂದ ನಡೆದುಬಂದ ಪ್ರಾಥಮಿಕ ಶಿಕ್ಷಣದಲ್ಲಿ ಬದಲಾವಣೆಯಾಗಿರುವದಿಲ್ಲ.

ಪ್ರಾಥಮಿಕ ಶಿಕ್ಷಣದಿಂದ ಜನರಿಗೆ ಮತ್ತ ದೇಶಕ್ಕೆ ಎಷ್ಟರಮಟ್ಟಿಗೆ ಹಿತಾಹಿತಗಳಾಗುತ್ತಿರುತ್ತವೆಂಬುದನ್ನು ನೋಡುವವರಿಲ್ಲ. ಪ್ರಾಥಮಿಕ ಶಿಕ್ಷಣವನ್ನು ಕೊಡುವ ಅಧ್ಯಾಪಕರ ಮನಸ್ಸು ತೃಪ್ತಿಕರವಾಗಿರುವದಿಲ್ಲ. ಅವರ ಮನಸ್ಸು ತೃಪ್ತಿಕರವಾಗದಿರುವದರಿಂದ, ಅವರಲ್ಲಿ ತಾವು ಕೊಡುವ ಶಿಕ್ಷಣದಬಗ್ಗೆ ಕಳಕಳಿ ಇರುವದಿಲ್ಲ. ಹೀಗಾದಮೇಲೆ, ಪ್ರಾಥಮಿಕ ಶಿಕ್ಷಣದ ಪ್ರತಾಪವು ಹೇಗಿರಬೇಕು? ಇದಕ್ಕೆ ಒಂದೇ ಒಂದು ಉದಾಹರಣೆಯಂದರೆ ರೈತರು ತಮ್ಮ ಮಕ್ಕಳನ್ನು ಪ್ರಾಥಮಿಕ ಶಾಲೆಗಳಿಗೆ ಕಳಿಸುವದರಿಂದ, ತಮ್ಮ ಮಕ್ಕಳು ತಮಗೆ ಮತ್ತು ತಮ್ಮ ಧಂದೆಗೆ ಬಹಳ ನಿರುಪಯೋಗಿಗಳಾಗುವರೆಂದು ಅನ್ನುತ್ತಿರುವರು. ಹೀಗೇಕೆ ಅನ್ನುತ್ತಿರಬಹುದು? ಇದರೊಳಗೆ ಎಷ್ಟರಮಟ್ಟಿಗೆ ಸತ್ಯವದೆ ನೋಡೋಣ.

(೧) ಸದ್ಯಕ್ಕೆ ದೊರೆಯುವ ಪ್ರಾಥಮಿಕ ಶಿಕ್ಷಣದಲ್ಲಿ ಹುಡುಗರ ಪ್ರಕೃತಿ ಸುಧಾರಿಸುವಂತೆ ಯೋಜನೆ ಮಾಡಿರುವದಿಲ್ಲ.

(೨) ಈಗಿನ ಪ್ರಾಥಮಿಕ ಶಿಕ್ಷಣದಿಂದ ಧಂದೆಯ ಜ್ಞಾನವಾಗುವದಿಲ್ಲ. ಮೈಮುರಿದು ದುಡಿಯುವ ಗುಣವು ಬರುವದಿಲ್ಲ.

(೩) ಕೆಟ್ಟ ಚಟಗಳು ಬೆಳೆಯಹತ್ತಿವೆ. ಒಕ್ಕಲತನದ ಬಗ್ಗೆ ಮತ್ತು ಒಕ್ಕಲಿಗರ ಬಗ್ಗೆ ಸ್ವಾಭಾವಿಕ ಉಪೇಕ್ಷೆಯುಂಟಾಗುತ್ತಿರುವದು.

(೪) ೫ ನೆಯ ಇಯತ್ತೆ ಮತ್ತು ೬ ನೆಯ ಇಯತ್ತೆ ಕಲಿತು ಸಾಲೆಬಿಟ್ಟ ಹುಡುಗರು ದುಡಿಯಲು ಅಶಕ್ತರಿರುವರು. ಕೈಗಾರಿಕೆಯ ಯಾವ ಉದ್ಯೋಗವು ಗೊತ್ತಾಗುವದಿಲ್ಲ.

(೫) ಮುಲ್ಕೀ ಪರೀಕ್ಷೆ ಪಾಸಾದವರು ವಿದ್ಯಾವಂತರೆಂದು ತಿಳಿದುಕೊಳ್ಳುವರು. ಅವ ು ಮುಂದಿನ ವಿದ್ಯೆಯಬಗ್ಗೆ ಯೋಜನೆ ಇರುವದಿಲ್ಲ. ಮಾಸ್ತರಕಿ ಹೊರ್ತಾಗಿ, ಉಳಿದ ಉದ್ಯೋಗಗಳು ಅವರಿಗೆ ಸೇ ುವದಿಲ್ಲ ಮತ್ತು ಸಿಗುವದಿಲ್ಲ ಮತ್ತು ಬರುವದಿಲ್ಲ.

(೬) ಸ್ವಲ್ಪ ವಿದ್ಯಾವಂತರಾದಾಗ್ಯೂ, ಅವರ ಆಹಾರ, ಬಟ್ಟೆ ಮೊದಲಾದವುಗಳಲ್ಲಿ ಮಾತ್ರ ಹೆಚ್ಚಿನ ಬದಲಾವಣೆಯಾಗಿದೆ. ಆದರೂ ಉತ್ಪನ್ನ ಹೆಚ್ಚಿಸುವದ ಕಡೆಗೆ ಲಕ್ಷವೇ ಇಲ್ಲದಾಗಿದೆ.

(೭) ಈ ಪ್ರಕಾರ ಅಲ್ಪ ವಿದ್ಯೆ ಪಡೆದವರು ತಾವು ದುಡಿಯುವದಿಲ್ಲವಲ್ಲದೆ, ತಮ್ಮ ದುಡಿಯುತ್ತಿದ್ದ ತಾಯಿತಂದೆಗಳು ದುಡಿಯುವದನ್ನು ನೋಡುವದು ಸಹ ಅವರಿಗೆ ಆಗುವದಿಲ್ಲ.

ಈ ಪ್ರಕಾರ ಮೇಲೆ ಕಾಣಿಸಿದ ಸ್ಥಿತಿಗಳುಂಟಾಗುವದರಿಂದ, ಈ ತರದ ಪ್ರಾಥಮಿಕ ಶಿಕ್ಷಣವನ್ನು ಸಕ್ತಿಯಿಂದ ಕೊಡದೆ ಇದ್ದದ್ದೇ ವಿಹಿತವೆಂದು ಅನಿಸುತ್ತದೆ. ಆದರೆ ಇವೆಲ್ಲ ದೋಷಗಳನ್ನು ತಿಳಿದು, ಪ್ರಾಥಮಿಕ ಶಿಕ್ಷಣದಲ್ಲಿ ತಕ್ಕ ಮಟ್ಟಿಗೆ ಬದಲಾವಣೆಮಾಡಿ, ಸರಿಯಾದ ಪ್ರಾಥಮಿಕ ಶಿಕ್ಷಣವನ್ನು ಒತ್ತಾಯದಿಂದ ಕೊಡುವದು ಸಮಂಜಸವಾದದ್ದು ಸರಿಯಾದ ವಿದ್ಯೆಯ ಮುಖ್ಯ ಲಕ್ಷಣಗಳು.

(೧) ಬುದ್ಧಿ ಮತು ಮನಸ್ಸು ವಿಕಾಶಹೊಂದಿ, ಪ್ರಕೃತಿಯು ಬಲಪಡಬೇಕು.

(೨) ತಮ್ಮ ಚರಿತಾರ್ಥದಬಗ್ಗೆ ತಾವು ತಮ್ಮ ಕಾಲಿನ ಮೇಲೆ ನಿಲ್ಲಬೇಕು.

(೩) ತಮ್ಮ ಮತ್ತು ತಮ್ಮ ದೇಶದ ಉತ್ಪನ್ನವನ್ನು ಸ್ವಲ್ಪ ಮಟ್ಟಿಗಾದರೂ ಹೆಚ್ಚಿಸುತ್ತಾ ಹೋಗಬೇಕು.

ಈ ಮೂರು ಮೇಲು ಗುಣಗಳು ದೊರೆಯಲು ಅನುಕೂಲವಾದ ಶಿಕ್ಷಣವನ್ನು ಪ್ರಚಾರದಲ್ಲಿ ತರುವದು ಉತ್ತಮವಾದದ್ದು. ಸಧ್ಯಕ್ಕೆ ಪ್ರಯೋಗಾರ್ಥವಾಗಿ ಹೊರಟಿರುವ ಒಕ್ಕಲತನದ ಬಾಯಸ್ ಕ್ಲಾಸಗಳಿಂದ ಕೆಲಮಟ್ಟಿಗೆ ಸರಿಯಾದ ಶಿಕ್ಷಣವು ದೊರೆಯುತ್ತಿರುವದು. ಅಂದರೆ ಮೇಲೆ ಕಾಣಿಸಿದ ಮೂರು ಲಾಭಗಳು ಸಿಗುವವು. ಆದರೂ ಈ ಸಾಲೆಗಳಬಗ್ಗೆ ನಮ್ಮ ಮುಂದಾಳುಗಳು ಸಾಕಷ್ಟು ವಿಚಾರ ಮಾಡುತ್ತಿರುವದಿಲ್ಲ. ಈ ತರದ ವಿದ್ಯೆಯಿಂದ ಸಧ್ಯದ ಪ್ರಾಥಮಿಕ ಶಿಕ್ಷಣದಿಂದಾಗುವ ಹಾನಿಗಳಾಗದೆ, ಸರಿಯಾದ ವಿದ್ಯೆಯಿಂದಾಗುವ ಲಾಭಗಳಾಗುತ್ತವೆ. ಆದ್ದರಿಂದ ಈ ಒಕ್ಕಲತನದ ಬಾಯಸ್ ಕ್ಲಾಸುಗಳಿಗೆ ತಕ್ಕ ಉತ್ತೇಜನ ಕೊಟ್ಟು, ಇಂಥ ಕ್ಲಾಸುಗಳನ್ನು ಹೆಚ್ಚಾಗಿ ಬೆಳಿಸುವದು ಅವಶ್ಯವೆನಿಸುತ್ತದೆ.

ಈ ತರದ ವಿದ್ಯೆಕಲಿತು ಮುಲ್ಕೀ ಪರೀಕ್ಷೆ ಪಾಸಾದವರು ನೌಕರೀ ಮಾಡಬಹುದು. ಒಕ್ಕಲತನದ ಜ್ಞಾನವಾಗುನದರಿಂದ ಮತ್ತು ಪ್ರಕೃತಿ ಸದೃಢವಾಗುವದರಿಂದ, ಒಕ್ಕಲತನ ಮಾಡಬಹುದು. ಉಪದಂಥೆಗಳ ಜ್ಞಾನವಾಗಿರುವದರಿಂದ, ಗುಡಾರ, ಪಂಜೆ ಮುಂತಾದವುಗಳನು ನೇಯಬಹುದು, ಕಂಬಾರಿಕೆ ಮತ್ತು

ಬಡಿಗತನ ಮಾಡಬಹುದು. ಈ ಪ್ರಕಾರ ಅವರು ಅನೇಕರೀತಿಯಿಂದ ಸಮಾಜಕ್ಕು ಮತ್ತು ದೇಶಕ್ಕು ಉಪಯೋಗವಾಗುವರು. ಹೀಗಿದ್ದರೂ, ಇಂಥ ಉಪಯುಕ್ತ ಸಾಲೆಗಳನ್ನು ಹೆಚ್ಚಿಸಲು ಯಾರೂ ಮನಸ್ಸು ಹಾಕುವದಿಲ್ಲ. ಇಂಥ ಸಾಲೆಗಳು ಈ ಹೊತ್ತಿಗೆ ನಮ್ಮ ಕರ್ನಾಟಕದಲ್ಲಿ ೧೬ ಇರುವವು. ಅವುಗಳಲ್ಲಿ ೭ ಬೆಳಗಾಂವ ಜಿಲ್ಲೆಯಲ್ಲಿ, ೪ ಧಾರವಾಡ ಜಿಲ್ಲೆಯಲ್ಲಿ, ೩ ಬಿಜಾಪೂರ ಜಿಲ್ಲೆಯಲ್ಲಿ, ಮತ್ತು ೨ ಕಾರವಾರ ಜಿಲ್ಲೆಯಲ್ಲಿ ಇರುವವು. ಮೇಲಾಗಿ ಬೆಳಗಾಂವ ಜಿಲ್ಲೆಯಲ್ಲಿ ೫ ಸಾಲೆಗಳನ್ನೂ ಬಿಜಾಪೂರ ಜಿಲ್ಲೆಯಲ್ಲಿ ೪ ಸಾಲೆಗಳನ್ನೂ ಬೇಗನೇ ತಗೆಯುವವರಿದ್ದಾರೆ.

ಈ ತರದ ಒಕ್ಕಲತನದ ಬಾಯಸ್ ಕ್ಲಾಸುಗಳ ಸಾಲೆಗಳು ಬೆಳಿಬೆಳಿದಂತೆ, ಒಕ್ಕಲಿಗರ ಮತ್ತು ಒಕ್ಕಲತನದ ಪ್ರಗತಿಯು ಆಗುತ್ತದೆ. ಒಕ್ಕಲತನವೇ ಪ್ರಾಮುಖ್ಯವಾಗಿರುವ ನಮ್ಮ ಭರತಖಂಡದ ಪ್ರಗತಿಯಾಗುವದು. ಹೀಗಿದ್ದ ಮೇಲೆ, ತಮ್ಮ ಮತ್ತು ತಮ್ಮ ದೇಶದ ಅಭ್ಯುದಯವನ್ನು ಗಂಟುಮಾಡುವ ಸರಿಯಾದ ಪ್ರಾಥಮಿಕ ಶಿಕ್ಷಣವನ್ನು ಸಕ್ತಿಯಿಂದ ಕೊಡುವ ಅವಶ್ಯಕತೆಯು ಈಗ ಎಷ್ಟಿರುತ್ತದೆಂಬುದನ್ನು ನಮ್ಮ ಮುಂದಾಳುಗಳು ಒಮ್ಮನಸ್ಸಿನಿಂದ ವಿಚಾರ ಮಾಡಬೇಕಾಗಿ ಆಶಿಸುವೆನು.

ವಿ. ಸಿ. ಪಾವಟೆ, ಬಿ. ಏಜಿ.
ಹೆಡ್‌ಮಾಸ್ತರ ಒಕ್ಕಲತನದ ಶಾಲೆ,
ದೇವೀಹೊಸೂರ.

ಶಿಕ್ಷಣ ಪ್ರಪಂಚ.

ಕ್ವೀನ್ಸ್‌ಲ್ಯಾಂಡಿನಲ್ಲಿ ಪ್ರಾಥಮಿಕ ಶಿಕ್ಷಣದ ವ್ಯವಸಾಯ.

ಶಿಕ್ಷಣವೇ ರಾಷ್ಟ್ರದ ಯೋಗ್ಯತೆಯ ನಿಜವಾದ ಮಾಪಕ ಯಂತ್ರವು. ರಾಷ್ಟ್ರದ ಸುಸಂಘನೆಯ ಅನೇಕ ಮಹದುಪಾಯಗಳಲ್ಲಿ ಸ್ತುತ್ಯವಾದ ಶಿಕ್ಷಣ ಪದ್ಧತಿಯೇ ಶ್ರೇಷ್ಠವಾದದ್ದು. ಶಿಕ್ಷಣವು ಯಾವ ಪ್ರಕಾರದ್ದಿರುವದೋ ಆ ಪ್ರಕಾರದ ಪ್ರಗತಿಯು ದೇಶದಲ್ಲಿ ನೆಲೆಗೊಳ್ಳುವದು. ಕಾರಣ ಈಗಿನ ಸುಧಾರಿಸಿದ ರಾಷ್ಟ್ರಗಳು ಶಿಕ್ಷಣದ, ವಿಶೇಷತಃ ಪ್ರಾಥಮಿಕಶಿಕ್ಷಣದ ಮಹತ್ವವನ್ನು ಮನಗಂಡು ಸರಿಯಾದ ಶಿಕ್ಷಣವನ್ನು ಬಾಲ-ಬಾಲಕಿಯರಿಗೆ ದೊರೆಯಲು ಅವಿಶ್ರಾಂತ ಶ್ರಮಬಡುತ್ತಿರುವವು. ಈ ವಿಷಯದಲ್ಲಿ ಇಂಗ್ಲಿಷರ ವಸಹಾತವಾಗಿದ್ದ ಆಷ್ಟ್ರೇಲಿಯಾ ದ್ವೀಪದ ಒಂದು ಭಾಗವಾದ ಕ್ವೀನ್ಸ್‌ಲ್ಯಾಂಡಿನ ಉದಾಹರಣೆಯನ್ನು ಇಲ್ಲಿ ಕೊಡುವೆವು. ಸಾಮಾನ್ಯವಾಗಿ ಇದರಂತೆಯೇ ಉಳಿದ ಆ ಖಂಡದ ಭಾಗಗಳು ಇರುವವು.

ಫ್ರೆನ್ಸಲ್ಯಾಂಡದ ಕ್ಷೇತ್ರಫಲವು ಹಿಂದುಸ್ಥಾನದ ೧/೩ ದಷ್ಟು ಇರುವದು. ಜನಸಂಖೆಯು ಸುಮಾರು ೪ ಲಕ್ಷ ಇರುವದು. ನಮ್ಮ ಜಿಲ್ಲೆಯಷ್ಟು ಸಹ ಈಗಲಿಲ್ಲ. ಜನವಸತಿಯು ಸಮುದ್ರದ ದಂಡೆಗುಂಟ ನಿಬಿಡವಾಗಿದೆ. ಮಧ್ಯ ಪ್ರದೇಶದಲ್ಲಿ ಅತಿ ವಿರಳವಾಗಿದೆ. ಇಲ್ಲಿಯ ಚಿಕ್ಕ ಮಕ್ಕಳ ವಿದ್ಯಾಭ್ಯಾಸದ ಕಾರ್ಯವು ಬಹು ಪ್ರಯಾಸಕರವಾಗಿದೆ. ಆದರೂ ಅಲ್ಲಿಯ ಸರಕಾರವೂ ಜನರೂ ಮಾಡುತ್ತಿರುವ ಸಾಹಸವು ಅಭಿನಂದನೀಯವಾಗಿದೆ.

ಸಾರ್ವತ್ರಿಕ ಮತ್ತು ಒತ್ತಾಯದ ಪ್ರಾಥಮಿಕ ಶಿಕ್ಷಣವು ರೂಢಿಯಲ್ಲಿದೆ. ಎಲ್ಲಿ ನಿಧಾನ ೧೨ ಜನ ವಿದ್ಯಾರ್ಥಿಗಳು ಕೂಡಬಹುದೋ ಅಲ್ಲಿ ಒಂದು ಶಾಲೆಯು ಅವಶ್ಯವಾಗಿ ಸ್ಥಾಪಿಸಲ್ಪಡುವದು. ಸುಮಾರು ೧೬೫೦ ಶಾಲೆಗಳು ಇರುವವು. ವಿದ್ಯಾರ್ಥಿಗಳಾದರೂ ನಾಲ್ಕೈದು ಮೈಲು ದೂರದಲ್ಲಿರುವ ಊರುಗಳಿಂದಾದರೂ ಬರಬೇಕಾಗುವದು. ಅಷ್ಟಕ್ಕೂ ದೂರದಲ್ಲಿದ್ದ ವಿದ್ಯಾರ್ಥಿಗಳಿಗೆ ಕೂಡ ಶಿಕ್ಷಣದ ಲಾಭವು ದೊರೆಯಬೇಕೆಂದು ಟಪಾಲಿನ ದ್ವಾರ ಶಿಕ್ಷಣವು ಕೊಡುವ ಏರ್ಪಾಟನ್ನು ೧೯೩೪ ರಲ್ಲಿ ಮಾಡಿದ್ದಾರೆ. ಪ್ರತಿವಾರ ಟಾಯಿಪಮಾಡಿ ಪಾಠಗಳು ಹುಡುಗರ ಪಾಲಕರಿಗೆ ಕಳಿಸಲ್ಪಡುವವು. ಹುಡುಗರ ಎಕ್ಷರ ಸಾಯಿಜಗಳು ಬ್ರಿಸ್ಬೇನದ ಶಿಕ್ಷಣಾಧಿಕಾರಿಗಳಿಗೆ ಕಳಿಸಲ್ಪಟ್ಟು ಅಲ್ಲಿ ಪರೀಕ್ಷಿಸಲ್ಪಡುವವು. ಈ ಬಗೆಯ ಶಿಕ್ಷಣವನ್ನು ಸುಮಾರು ೨೫೦೦ ವಿದ್ಯಾರ್ಥಿಗಳು ಹೊಂದುತ್ತಲಿರುವರು. ಅದರೆ ಪಾಲಕರು ಅಶಿಕ್ಷಿತರಿದ್ದಲ್ಲಿ ಈ ಯೋಜನೆಯ ಲಾಭವೂ ಕೂಡಾ ಲಭಿಸಲಾರದು. ಅದು ಕಾರಣ ಇನ್ನೊಂದು ಯೋಜನೆಯನ್ನು ಸರಕಾರದವರು ಮಾಡಿರುವರು. ಊರಿಂದೂರಿಗೆ ಸಂಚಾರಮಾಡುವ ಶಿಕ್ಷಕರನ್ನು ನೇಮಿಸಿರುವರು. ಕೇವಲ ಪಶ್ಚಿಮ ಭಾಗದಲ್ಲಿಯ ೧೪ ಜಿಲ್ಲೆಗಳು ಈ ಶಿಕ್ಷಕರ ಅಧಿಕಾರದಲ್ಲಿ ಅವೆ. ಅವರು ಪ್ರತಿವರ್ಷ ಒಟ್ಟು ೬೦೦೦ ಮೈಲು ಮೋಟಾರುಗಳಿಂದ ಸಂಚರಿಸುವರು. ಸಂಚಾರದ ಕ್ಷೇತ್ರವು ೩ ಲಕ್ಷ ಚೌ. ಮೈಲು ಆಗುವದು. ಕುರುಡರು, ಮೂಕರು, ಹುಚ್ಚರು ಆದ ಹುಡುಗರಿಗೂ ಕೂಡ ಶಾಲೆಗಳನ್ನು ತೆಗೆದಿರುವರು. ಧಂದೆಯ ಶಿಕ್ಷಣವನ್ನು ದೊಡ್ಡ ಶಾಲೆಗಳಲ್ಲಿ ಕೊಡುವರು. ಬಾಲಕರಿಗೆ ಲೋಹ, ಚರ್ಮ, ಕಟ್ಟಿಗೆ ಮುಂತಾದವುಗಳಲ್ಲಿ ಕೆಲಸಮಾಡಲು ಕಲಿಸುವರು. ಬಾಲಕಿಯರಿಗೆ ಅಡಿಗೆ ಮಾಡುವದನ್ನೂ ಹೊಲಿಯುವದನ್ನೂ ಹೆಣೆಯುವದನ್ನೂ ಕಲಿಸುವರು. ಅಲ್ಲದೆ ಆ ದೇಶದ ಮುಖ್ಯ ಉದ್ಯೋಗ ಒಕ್ಕಲತನದ ವಿದ್ಯೆಯನ್ನು ವಿಶೇಷ ಕಲಿಸುವರು.

೧೬೫೦ ಪ್ರಾಥಮಿಕ ಶಾಲೆಗಳಲ್ಲಿ ೩/೪ ತೀರ ಸಣ್ಣ ಸಾಲೆಗಳಿರುವವು. ಇವೆಲ್ಲ ಒಬ್ಬ ಶಿಕ್ಷಕನಿಂದಲೇ ನಡೆಯುತ್ತಿರುವವು. ಕಳೆದ ಮಹಾ ಯುದ್ಧದ ಪೂರ್ವದಲ್ಲಿ ಟ್ರೇಂಡ ಶಿಕ್ಷಕರು ತೀರ ಕಡಿಮೆ ಇದ್ದರು. ಈಗ ಎಲ್ಲರೂ ಟ್ರೇಂಡ ಶಿಕ್ಷಕರೇ ಇರುವರು. ಮತ್ತು ಉತ್ತಮ ತರಗತಿ ಶಿಕ್ಷಣವು ದೊರೆಯುವದಕ್ಕಾಗಿ ೧೯೧೪ ರಲ್ಲಿ ಪ್ರಾಥಮಿಕ ಶಿಕ್ಷಣರ ಟ್ರೇನಿಂಗ ಕಾಲೇಜು ಸ್ಥಾಪಿಸಲ್ಪ

ಬ್ಬಿತು. ಇದಲ್ಲದೆ ಅಮೇರಿಕಾ ಮತ್ತು ಇಂಗ್ಲಂಡಗಳಿಗೆ ಉಚ್ಚತರದ ಶಿಕ್ಷಣ ಪದ್ಧತಿಯನ್ನು ಕಲಿಯುವದಕ್ಕೋಸ್ಕರ ಅನೇಕ ವಿದ್ವಾಂಸರನ್ನು ಸರಕಾರದ ವರು ಕಳಿಸುತ್ತಿರುವರು. ಇದೆಲ್ಲದರ ಮೇಲಿಂದ ಆಸ್ಟ್ರೇಲಿಂಯಾದಲ್ಲಿ ಸರಕಾರವೂ ಜನರೂ ಪ್ರಾಥಮಿಕ ಶಿಕ್ಷಣದ ಬಗ್ಗೆ ಎಷ್ಟು ಜಾಗ್ರತರಾಗಿರುವರೆಂಬದು ಗೊತ್ತಾಗುವದಲ್ಲದೆ ನಮ್ಮ ದೇಶದಲ್ಲಿ ಈ ವಿಷಯದಲ್ಲಿ ಎಷ್ಟು ದುರ್ಲಕ್ಷ್ಯವಿರುವದೆಂಬದು ಒಡೆದು ಕಾಣುವದು.

---

೨ ಬೆಳಗಾಂವ ಜಿಲ್ಲಾ ಸ್ಕೂಲಬೋರ್ಡ ಗ್ಯಾಝೇಟು: —

ಬೆಳಗಾಂವ ಜಿಲ್ಲಾ ಸ್ಕೂಲಬೋರ್ಡಿನವರು ತಮ್ಮದೊಂದು ಸ್ವಂತ ತ್ರೈಮಾಸಿಕವನ್ನು ಬೇಗನೆ ಹೊರಡಿಸುವವರಿದ್ದಾರೆಂದು ಸ್ಕೂಲಬೋರ್ಡ ಜೇರಮನ್ನರಾದ ಶ್ರೀಯುತ ಬಿ. ಬಿ. ಮನುದಾಪೂರ ಇವರು ತಿಳಿಸುತ್ತಾರೆ.

೩ ಸಿನೇಮಾ ದ್ವಾರ ಶಿಕ್ಷಣ: —

ಲಾಹೋರದ ಮುನಸಿಪ್ಯಾಲಿಟಿ ಸ್ಕೂಲಬೋರ್ಡಿನವರು ಸಿನೇಮಾದ ಸಹಾಯದಿಂದ ವಿದ್ಯಾರ್ಥಿಗಳಿಗೆ ವಸ್ತುಜ್ಞಾನವನ್ನು ಮಾಡಿಕೊಡುವದು ಒಳ್ಳೇ ಲಾಭದಾಯಕವೆಂದು ಬಗೆದು ಒಂದು ಸಂಘವನ್ನು ಸ್ಥಾಪಿಸಿದ್ದಾರೆ. ಈ ಸಂಘದವರು ಮನೋರಂಜಕ ಮತ್ತು ಪ್ರಯೋಜನಕ ಫಿಲ್ಮಗಳನ್ನು ಸಿದ್ಧಪಡಿಸುವರು. ಎಳೆ ಮಕ್ಕಳಿಗೆ ಕೇವಲ ಪುಸ್ತಕಗಳ ಮೇಲಿಂದ ಅಧ್ಯಯನ ಮಾಡಿಸುವದಕ್ಕಿಂತಲೂ ದೃಶ್ಯಗಳ ಸಹಾಯದಿಂದ ಕಲಿಸುವದು ಸುಲಭವು. ನಿಧಾನ ಮ್ಯಾಜಿಕ್‌ಲ್ಯಾಂಟರ್ನ ಸಹಾಯದಿಂದ ಆರೋಗ್ಯ ವಿಜ್ಞಾನ, ಶಾಸ್ತ್ರೀಯವಿಷಯ, ಭೂವರ್ಣನೆ ಮುಂತಾದ ವಿಷಯಗಳನ್ನು ತಿಳಿಸುವದು ಅತ್ಯಂತ ಲಾಭದಾಯಕವು.

ವಿನೋದ.

(೧)

ಪಂಡಿತ:—ನೀನು ಯಾರು ?
ವಿದ್ಯಾರ್ಥಿ:—ನಾನು ಹುಡುಗ.
ಪಂಡಿತ:—ಎಲೋ ನಿನ್ನ ಹೆಸರೇನು ?
ವಿದ್ಯಾರ್ಥಿ:—ನನ್ನ ಹೆಸರೇ ! ಶಿರೋಮಣಿ.
ಪಂಡಿತ:—ಮೂರ್ಖನಲ್ಲವೇನು.

ವಿದ್ಯಾರ್ಥಿ:—ಇವೆರಡೂ ಕೂಡಿದರೆ ಇಬ್ಬರಿಗೂ ನಡೆಯುತ್ತದೆ.
ಪಂಡಿತ:—ಅದು ಹೇಗೆ.
ವಿದ್ಯಾರ್ಥಿ:—ಶಿರೋಮಣಿ ಅಂದರೆ ನನಗೆ ನಡೆಯುತ್ತದೆ ಮೂರ್ಖನಂದರೆ ತನಗೆ ನಡೆಯುತ್ತದೆ. ಆದ್ದರಿಂದ ಇವೆರಡನ್ನೂ ಕೂಡಿಸಿ ಮೂರ್ಖ ಶಿರೋಮಣಿ ಅಂದರೆ ಇಬ್ಬರಿಗೂ ಸಮಾಧಾನವಾಗುತ್ತದೆ.
ಪಂಡಿತ:—ಹೌದೊ ಧೂರ್ತಾ!

---

(೨)

ಶಿಕ್ಷಕ:—ಅರಡಿ ಅಂದರೇನು?
೧ನೇ ವಿ:—ಷಟ್ಪದಿ.
ಶಿ:— ಷಟ್ಪದಿ ಅಂದರೆ ಏನು?
೧ನೇ ವಿ:—ಅರಡಿ.
ಶಿ:—ಏನು ಮೂರ್ಖಾ ಒಂದಕ್ಕೊಂದು ಹೇಳಿದರೆ.
೧ನೇ ವಿ:—ಹೌದರಿ ಶಬ್ದಾರ್ಥದಲ್ಲಿ ಹೀಗೇ ಬರೆದದೆ.
ಶಿ:—(೨ನೇ ವಿದ್ಯಾರ್ಥಿಗೆ) ನೀ ಹೇಳು ನೋಡುವಾ.
೨ನೇ ವಿ:—ಅರಡಿ ಅಂದರೆ ಆರು ಕಾಲುಳ್ಳದ್ದು.
ಶಿ:—ಹಾಗಾದರೆ ಒಂದು ಉದಾಹರಣೆಯನ್ನು ಕೊಡು.
೨ನೇ ವಿ:—ಬೆಂಚ.

ಶಿ:—ಶಾಬಾಶ್ ಒಳ್ಳೇ ಉದಾಹರಣೆಯನ್ನು ಕೊಟ್ಟೆ (೩ನೇ ವಿದ್ಯಾರ್ಥಿಗೆ) ನೀನು ಸರಿಯಾದ ಉದಾಹರಣೆಯನ್ನು ಕೊಡು.
೩ನೇ ವಿ:—ಮಾಸ್ತರ ನೀವರಿ.
ಶಿ:—ಏನಂದೆ!
೩ನೇ ವಿ:—ಹೌದರಿ ನಿಮಗೆ ಎರಡುಕಾಲು ನಿಮ್ಮ ಕುರ್ಚಿಗೆ ನಾಲ್ಕು ಅಂತೂ ನಿಮಗೆ ಆರುಕಾಲರಿ.

ಶಿ:—ಹಾ! ಹಾ! ನೀನು ಅವನಕಿಂತ ಹೆಚ್ಚಿನ ಪಂಡಿತ (ತನ್ನ ಮಗನಾದ ೪ನೇ ವಿದ್ಯಾರ್ಥಿಗೆ) ಅರಡಿ ಅಥವಾ ಷಟ್ಪದಿ ಎಂತ ಯಾವದಕ್ಕೆ ನೀನು ಓದಿದ ಕವಿತೆಯಲ್ಲಿ ಹೇಳಿದೆ.
೪ನೇ ವಿ:—ಅರಡಿ ಅಂದರೆ ಭ್ರಮರ, (ಗುಂಗೀಹುಳ).
ಶಿ:—(ಸಂತೋಷದಿಂದ) ಸೈ ಹುಡುಗರೇ ಎಲ್ಲರೂ ಕೇಳಿಕೊಳ್ಳಿರಿ ಮತ್ತು ನೆನಪಿನಲ್ಲಿಡರಿ. ಜೇನ್ನೊಣಕ್ಕೆ ಆರುಕಾಲುಗಳಿರುತ್ತವೆ.

ಅದಕ್ಕೆ ಕವಿಗಳು ವಾಡಿಕೆಯಾಗಿ ಷಟ್ಪದಿ, ಅರೆಡಿ ಅಂದರೆ ಆರುಕಾಲುಳ್ಳದ್ದು ಅಂತ ಅನ್ನುವರು.

---

(೩)

ಪರೀಕ್ಷಕ:—ಪಂಚತ್ವವನ್ನು ಹೊಂದು ಅಂದರೆ ಏನು ?

ವಿದ್ಯಾರ್ಥಿ:—ಸಾಯು ಎಂದರ್ಥ.

ಪಂಡಿತ:—ಅದು ಹೇಗೆ ಬಂತು.

ವಿದ್ಯಾರ್ಥಿ:—ಶವವನ್ನು ನಾಲ್ಕು ಜನರು ಹೊತ್ತಿರುವರು, ಐದನೇಯವನು ಮುಂದೆ ಬೆಂಕಿಯನ್ನು ಹಿಡಿದುಕೊಂಡು ಹೋಗುತ್ತಿರುವನು, ಆದ್ದರಿಂದ ಪಂಚತ್ವವನ್ನು ಹೊಂದು ಅಂದರೆ ಐದು ಮಂದಿಯುಳ್ಳವನಾಗು ಅಂದರೆ ಸಾಯು ಎಂದು ಬಂತು.

ಪಂಡಿತ:—ಶಾಬಾಶ್ ಚನ್ನಾಗಿ ತಿಳಿದುಕೊಂಡಿರುವೆ.

---

(೪)

ಪರೀಕ್ಷಕ:—ನೀನು ವೈಕುಂಠರಾಯರ ಮಗನೋ ?

ವಿದ್ಯಾರ್ಥಿ:—ಹೌದರಿ.

ಪಂಡಿತ:—ಅವರು ಎಲ್ಲಿ ಇದ್ದಾರೆ.

ವಿದ್ಯಾರ್ಥಿ:—ಸದಾಮಂದಿರದಲ್ಲಿ.

ಪಂಡಿತ:—ಅವರು ನನ್ನ ಪರಮ ಸ್ನೇಹಿತರು, ಅವರನ್ನು ಕಾಣಬೇಕೆನ್ನುವೆನು. ಅವರಿಗೆ ನಾನು ಬಂದದ್ದು ತಿಳಿಸುವಿಯಾ.

ವಿದ್ಯಾರ್ಥಿ:—ಇಷ್ಟು ಬೇಗನೆ ತಿಳಿಸುವದು ನನ್ನಿಂದಾಗದು.

ಪಂಡಿತ:—ಹಾಗಾದರೆ ಅವರಿದ್ದಲ್ಲಿಗೆ ನನ್ನನ್ನು ಕರೆದುಕೊಂಡು ನಡೆ.

ವಿದ್ಯಾರ್ಥಿ:—ಅದೂ ನನ್ನಿಂದ ಆಗದು, ನಿಮಗೆ ಜೀವ ಬೇಡಾಗಿದ್ದರೆ ನೀವೇ ಹೋಗಬಹುದು.

ಪಂಡಿತ:—ಏನು ಹುಚ್ಚಾ ಹೀಗಂದರೆ.

ವಿದ್ಯಾರ್ಥಿ:—ನಾನು ಹಚ್ಚನಲ್ಲರಿ ನನ್ನ ತಂದೆಯವರು ಸದಾ ಮುಂದಿರದಲ್ಲಿ (ಸುಡುಗಾಡಿನಲ್ಲಿ) ಇರುವರು.

ಪಂಡಿತ:—ಹೀಗೋ ವೈಕುಂಠರಾಯರು ವೈಕುಂಠ ವಾಸಿಗಳಾಗಿರುವರೋ !

ಸಂಪಾದಕ.

ಸ್ಕೂಲಬೋರ್ಡಿನ ಕಾರಭಾರ.

ಸ್ಕೂಲಬೋರ್ಡಿನಲ್ಲಿ ಪಾಸಾದ ಮುಹತ್ವದ ತರಾಪುಗಳು.

ತಾರೀಖು ೨೭-೨-೨೪

ಹಾಜರ ಇದ್ದ ಸಭಾಸದರು.

೧ ಶ್ರೀ. ಎಸ್. ಕೆ. ಹೊಸಮನಿ. (ಚೇರಮನ್.)
೨ ,, ಜಿ. ಆರ್. ನಲವಡಿ. (ವ್ಹಾಯಿಸ್ ಚೇರಮನ್.)
೩ ,, ವ್ಹಿ. ಬಿ. ಜೋಶಿ.
೪ ,, ಡಿ. ಎಲ್. ಪಾಟೀಲ.
೫ ,, ಬಸನಗೌಡಾ ಪಾಟೀಲ.
೬ ,, ಲಿಂಗಪ್ಪಾ ಬೂದಿಹಾಳ.
೭ ,, ಚನ್ನಪ್ಪಗೌಡಾ ಪಾಟೀಲ.
೮ ,, ಬಸಪ್ಪಾ ಕಲ್ಲಣ್ಣವರ.
೯ ,, ಯಲ್ಲಪ್ಪಾ ಸಾಂಬ್ಯಾಣಿ.
೧೦ ಖಾ. ಸಾ. ಖುದಾವಂದ.

೧ ವಿದ್ಯಾಖಾತೆಯ ಡಾಯರೆಕ್ಟರರಿಂದ ೫೧ ಜನ ಶಿಕ್ಷಕರನ್ನು ನೇಮಿಸಿಕೊಳ್ಳುವ ಬಗ್ಗೆ ಮಂಜೂರ ಬಂದದ್ದರಿಂದ ಕಡೆಗೆ ಕಾಣಿಸಿದ ೫೧ ಜನ ಉಮೇದವಾರರನ್ನು ನೇಮಿಸಿಕೊಳ್ಳತಕ್ಕದ್ದೆಂದು ಸರ್ವಾನುಮತದಿಂದ ಪಾಸಾಯಿತು.

೨ ಸರಕಾರದ ಟ್ರೆಝುರಿಯಲ್ಲಿಟ್ಟರೆ ಬಡ್ಡಿ ಬರುವದಿಲ್ಲೆಂದೂ ಕರ್ನಾಟಕ ಸೆಂಟ್ರಲ್ ಬ್ಯಾಂಕಿನಲ್ಲಿ ಇಟ್ಟರೆ ಬಡ್ಡಿಯು ಬರುತ್ತದೆಂದೂ ಒಂದು ಲಕ್ಷ ರೂಪಾಯಿಗಳನ್ನು ಒಂದು ವರ್ಷದ ಮುದ್ದತಿ ಠೇವಿನಲ್ಲಿ ಇಡತಕ್ಕದ್ದೆಂದು ಸರ್ವಾನುಮತದಿಂದ ಪಾಸಾಯಿತು.

೩ ಆಫೀಸಿನಿಂದ ತಯಾರಿಸಲ್ಪಟ್ಟ ೧೯೨೪-೨೫ ಸಾಲಿನ ಮೂಲ ಅಂದಾಜು ಪತ್ರಿಕೆಯು ಸರ್ವಾನುಮತದಿಂದ ಪಾಸಾಯಿತು.

೪ ಬೋರ್ಡಿನಿಂದ ಹೊಸದಾಗಿ ತೆಗೆಯಲ್ಪಟ್ಟ ಹೆಂಣುಮಕ್ಕಳ ಶಾಲೆಗಳಿಗೆ ಕಸೂತಿಬಾಯಿ ಮತ್ತು ಚಾಕರೀಬಾಯಿ ನೇಮಣೂಕೆಯನ್ನು ಮಂಜೂರ ಮಾಡಲಿಕ್ಕೆ ಸರಕಾರಕ್ಕೆ ವಿನಂತಿ ಮಾಡಿಕೊಳ್ಳತಕ್ಕದ್ದೆಂದು ಸರ್ವಾನುಮತದಿಂದ ಪಾಸಾಯಿತು.

೫ ಶಿಕ್ಷಣ ಖಾತೆಯ ತಾರೀಖು ೨೧-೧೦-೨೮ ನಂ. ಇ. ಜಿ. ೧೧೨೬ನೇ ಪತ್ರವು ಓದಲ್ಪಟ್ಟು ವಿಚಾರ ಮಾಡಲ್ಪಟ್ಟಿತು ಮತ್ತು ಸರಕಾರವು ಅಗ್ರಿಕಲ್ಚರಲ್ ಬಾಯ ಸ್ ಸ್ಕೂಲುಗಳಿಗೆ ಮಂಜೂರ ಕೊಡುವವರಿಗೆ ದೇವಿಹೊಸೂರ ಶೇತಕಿ ಶಾಲೆಗೆ ಬೋರ್ಡಿನ ಯಾವ ಶಿಕ್ಷಕರನ್ನು ಕಳಿಸತಕ್ಕದ್ದಲ್ಲವೆಂದು ಸರ್ವಾನುಮತದಿಂದ ನಿರ್ಧಾರವಾಯಿತು.

೨೯-೩-೨೮.

೧ ಶ್ರೀ. ಎಸ್. ಕೆ. ಹೊಸಮನಿ. (ಚೇರಮನ್)
೨ ,, ಜಿ. ಆರ್. ನಲವಡಿ. (ವ್ಹಾಯಿಸ್ ಚೇರಮನ್)
೩ ,, ಎಸ್. ಕೆ. ಬಣಗಾರ.
೪ ,, ಲಿಂಗಪ್ಪಾ ಬೂದಿಹಾಳ.
೫ ,, ಚನ್ನಪ್ಪಗೌಡಾ ಪಾಟೀಲ.
೬ ,, ಬಸನಗೌಡಾ ಪಾಟೀಲ.
೭ ,, ಯಲ್ಲಪ್ಪಾ ಸಾಂಬ್ರಾಣಿ.
೮ ,, ಬಸಪ್ಪಾ ಕಲ್ಲಣ್ಣವರ.
೯ ಮೇ. ಸೈಯ್ಯದ ಫಕರುದ್ದೀನ.
೧೦ ಶ್ರೀಮತಿ ಲಕ್ಷ್ಮೀಬಾಯಿ ಕುಂಭಕೋಣಂ.

೧ ನಾನ್‌ಲೋಕಲ್ ಅಥಾರಿಟಿ ಮುನಸಿಪ್ಯಾಲಿಟಿ ಸಾಲೆಗಳ ಬಗ್ಗೆ ೧೯೨೮-೨೯ ನೇ ಸಾಲಿನ ಅಂದಾಜು ಪತ್ರಿಕೆಯು ಸರ್ವಾನುಮತದಿಂದ ಪಾಸಾಯಿತು.

೨ ದ. ಭಾ. ಎ. ಇನಸ್ಪೆಕ್ಟರರ ತಾರೀಖು ೧೦-೩-೨೮ ನೇ ಇಸ್ವಿಯ ೫೭೪-೨೩೫ನೇ ಪತ್ರವು ಓದಲ್ಪಟ್ಟು ವಿಚಾರಿಸಲ್ಪಟ್ಟಿತು ಮತ್ತು ಸದ್ಯಕ್ಕೆ ಟ್ರೇಂಡ ಶಿಕ್ಷಕರ ಪ್ರಮಾಣವು ೧೦೦ ಕ್ಕೆ ೭೭ ರಂತೆ ಇದ್ದು ಬಹಳೇ ಹೆಚ್ಚಾಗಿರುವದರಿಂದ ಧಾರವಾಡ ಟ್ರೇನಿಂಗ ಕಾಲೇಜಕ್ಕೆ ಉಮೇದವಾರರನ್ನು ಕಳಿಸುವ ಅವಶ್ಯವಿಲ್ಲೆಂದು ಬೋರ್ಡಿನವರು ಬಗೆಯತ್ತಾರೆ. ಆದರೆ ಪ್ರಾ. ಶಿ. ೩ ನೆಯ ನಿಯಮಕ್ಕನುಸರಿಸಿ ಯೋಣ ಫೇಡ ಸಾಲೆಯ ದುರ್ಗಪ್ಪ ಹವಳಪ್ಪ ಮಾದರ ಎಂಬ ಶಿಕ್ಷಕನನ್ನು ಟ್ರೇನಿಂಗ ಸ್ಕೂಲಿಗೆ ನಿಯಮದಲ್ಲಿ ಹೇಳಿದಷ್ಟು ವೇತನವನ್ನು ಕೊಟ್ಟು ಈ ವರ್ಷ ಕಳಿಸತಕ್ಕದ್ದೆಂದು ಸರ್ವಾನುಮತದಿಂದ ಪಾಸಾಯಿತು.

೩ ಕೆಳಗೆ ಕಾಣಿಸಿದ ಹೊಸ ಶಾಲೆಗಳ ಕಟ್ಟಡಗಳನ್ನು ೧೯೨೮-೨೯ ನೇ ಸಾಲಿನಲ್ಲಿ ಕಟ್ಟಿಸುವ ಕೆಲಸವನ್ನು ಲೋ. ಬೋರ್ಡಿನವರು ಕೈಕೊಳ್ಳಬೇಕೆಂದು ಮತ್ತು ಇನ್ನೂ ಕೆಲವು ಕಟ್ಟಡಗಳ ಬಗ್ಗೆ ಸಿಫಾರಸ ಮಾಡಬೇಕೆಂದು ಸರ್ವಾನುಮತದಿಂದ ಪಾಸಾಯಿತು.

ನಂ.	ಗ್ರಾಮದ ಹೆಸರು.	ತಾಲೂಕ.	ಹುಡುಗರಿಗೆ ಇಂಬು.
೧	ನವಲೂರ (ಕನ್ನಡ-ಉರ್ದು).	ಧಾರವಾಡ.	೧೨೦ + ೪೦
೨	ಗುತ್ತಲ (ಉರ್ದುಶಾಲೆ)	ಕರ್ಜಗಿ.	೬೦
೩	ಕುಸ್ಕೂರ.	ರಾಣೇಬಿನ್ನೂರ.	೧೦೦
೪	ನೇಸ್ವಿ.	ಕೋಡ.	೮೦
೫	ಚಿನ್ನಮುಳಗುಂದ.	,,	೧೨೦
೬	ನೀರಲಗಿ.	ಬಂಕಾಪೂರ.	೪೦
೭	ಶರೇವಾಡ.	ಹುಬ್ಬಳ್ಳಿ.	೮೦
೮	ಶಿವಳ್ಳಿ.	ಧಾರವಾಡ.	೪೦
೯	ಹಾವನೂರ (ಬೆಳಿಸಿದ್ದು).	ಕರ್ಜಗಿ.	೧೪೦
೧೦	ನದಿಹರ್ಲಹಳ್ಳಿ.	ರಾಣೇಬಿನ್ನೂರ.	೬೦
೧೧	ಗುಜಮಾಗಡಿ.	ರೋಣ.	೪೦

ಧಾರವಾಡ ಜಿಲ್ಲೆಯೊಳಗಿನ ಲೊ. ಬೋ. ಹೊಸ ಶಾಲೆಗಳು.

ಉರ್ದು ಗಂಡುಹುಡುಗರ ಶಾಲೆಗಳು.

೧ ದೇವಿಹೊಸೂರ.
೨ ಹೆಬಸೂರ.
೩ ಹತ್ತಿಮತ್ತೂರ.
೪ ಶಿರೋಳ.
೫ ಬೆಳಗಾಲಪೇಠ.

ಉರ್ದು ಹೆಣ್ಣುಮಕ್ಕಳ ಶಾಲೆಗಳು.

೬ ನವಲಗುಂದ.
೭ ಹಿರೇಕೇರೂರ.

ಕನ್ನಡ ಹೆಣ್ಣುಮಕ್ಕಳ ಶಾಲೆಗಳು.

೮ ಇಂಗಳಗಿ.
೯ ಹರ್ತಿ.
೧೦ ಬ್ಯಾಹಟ್ಟಿ.
೧೧ ಉಣಕಲ್ಲ.
೧೨ ಹಾಂಸಭಾವಿ.
೧೩ ಕೊಂಣೂರ.
೧೪ ಶಿರೋಳ.
೧೫ ಹೊಳಿ ಆಲೂರ.

ಕನ್ನಡ ಗಂಡು ಹುಡುಗರ ಶಾಲೆಗಳು.

(ಬಂಕಾಪೂರ ತಾಲೂಕ).
೧೬ ಮಂತ್ರೋಡಿ.
೧೭ ಮುಗಳಿ.
೧೮ ಪಾಣೇಗಟ್ಟಿ.
೧೯ ಧುಂಡಸಿ (ಲಮಾಣಿ ತಾಂಡೆ.)
(ಧಾರವಾಡ ತಾಲೂಕ).
೨೦ ಮಾರಡಗಿ.
೨೧ ಸಿಂಗನಹಳ್ಳಿ.
೨೨ ಬೇಲೂರ.
(ಗದಗ ತಾಲೂಕ).
೨೩ ನಾಗಸಮುದ್ರ.
೨೪ ಬಿಂಕದಕಟ್ಟಿ.
(ಹಾನಗಲ್ಲ ತಾಲೂಕ).
೨೫ ಹಿರೇಹುಲ್ಲಾಳ.
೨೬ ಯಳವತ್ತಿ.
೨೭ ಕೂಡಲ.
(ಹುಬ್ಬಳ್ಳಿ ತಾಲೂಕ).
೨೮ ಗೋಕುಲ.
೨೯ ಕಂಪ್ಲಿಕೊಪ್ಪ.
೩೦ ಬಿಳೇಬಾಳ.
(ಕಲಘಟಗಿ ತಾಲೂಕ).
೩೧ ರಾಮನಾಳ.
(ಕರ್ಜಗಿ ತಾಲೂಕ).
೩೨ ಭರಡಿ.
೩೩ ಹಳೇರಿತ್ತಿ.
೩೪ ಗುಂಡೇನಹಳ್ಳಿ.
೩೫ ಕೊರಡೂರ.
೩೬ ಬಸಾಪೂರ.
೩೭ ಹಿರೇಲಿಂಗಧಳ್ಳಿ.
(ಕೋಡ ತಾಲೂಕ).
೩೮ ಚಿಕ್ಕ ಕಬ್ಬೂರ.
೩೯ ಅರಳಿಕಟ್ಟಿ.
೪೦ ಮತ್ತೂರ.
೪೧ ಫಲಪುಜ.
(ನವಲಗುಂದ ತಾಲೂಕ).
೪೨ ಬೆಳಹಾರ.
೪೩ ಗೊಬ್ಬರಗುಂಪಿ.
(ರಾಣೆಬೆನ್ನೂರ ತಾಲೂಕ).
೪೪ ಬೇಲೂರ.
೪೫ ಚಿಕ್ಕಕುರವತ್ತಿ.
೪೬ ಲಿಂಗಧಳ್ಳಿ.
೪೭ ಮಾಗೋಡ.
೪೮ ಮೋಟಿಬೆನ್ನೂರ (ಧೇಡಸ್ಕೂಲ).
೪೯ ಎರೆಕುಪ್ಪಿ.
(ರೋಣ ತಾಲೂಕಾ).
೫೦ ಕಳಕಾಪೂರೆ.

ಹೊಸದಾಗಿ ತೆಗೆದ ಶಾಲೆಗಳಬಗ್ಗೆ ನೇಮಿಸಿದ ಶಿಕ್ಷಕರು

ಮುಸಲ್ಮಾನರು.

೧ ಅಬ್ದುಲ್ ಮುನಾಫ, ಮಹಮ್ಮೂದಸಾಬ, ಉಪ್ಪಿನ ಬೆಟಗೇರಿ (ಉರ್ದು)
೨ ಮಹಮ್ಮದಹುಸೇನ, ಮಕ್ತುಮಸಾಬ ಸೋಮನಕೊಪ್ಪ (,,)
೩ ಮೋದೀನಸಾಬ ಮದಾರಸಾಬ ಮುಲ್ಲಾ, ಬದಲೀಮಾಸ್ತರ ಸವಡಿ (,,)
೪ ಬಿ. ಜಿ. ಕಾಗದ, ಬದಲೀ ಮಾಸ್ತರ ಪಾಪನಾಶಿ (ಕನ್ನಡ)
೫ ಕೆ. ಬಿ. ಪಿಂಜಾರ ,, ,, ಶಿಂಗಟರಾಯನಕೇರಿ (,,)
೬ ಕೆ. ಜಿ. ಕಿಲ್ಲೇದಾರ ,, ,, ಕುಡುಪಲಿ (,,)
೭ ಇಮಾಮಸಾಬ ನೂರಸಾಬ ಯಾಲಕ್ಕಿ, ಅಬ್ಬಿಗೇರಿ (,,)

ಇತರ ಜಾತಿಯವರು

೧	ಬಸವ್ವಾ ಸುಣಗಾರ ಆಲೂರ ಹಾನಗಲ್ಲ	ಕಲಾಲ.
೨	ಹನಮಂತಪ್ಪಾ ಭೀಮಪ್ಪಾ ನಾವಳ್ಳಿ ಗುಡಿಸಾಗರ	ಗೊಲ್ಲ.
೩	ರಾಮಪ್ಪಾ ಬಸಪ್ಪಾ ಅನವಾಲ ಸಾ॥ ಹೆಬಸೂರ	,,
೪	ಎಲ್ಲಪ್ಪಾ ಸಂಣಪ್ಪಾ ಗೊಂದಲಗೇರ ಸಾ॥ ಯಾವಗಲ್ಲ	ಗೊಂದಲಗೇರ.
೫	ಶಿವನಗೌಡಾ ಬಸನಗೌಡಾ ಸಂಕನಗೌಡರ ಸಾ॥ ಪಡೇಸೂರ	ಜೈನ.
೬	ಮಹಾದೇವ ಜಿನ್ನಪ್ಪಾ ಅಪ್ಪಣ್ಣವರ ಸಾ॥ ಮಲ್ಲಿಗವಾಡ	,,
೭	ಭೀಮದಾಸ ವೆಂಕದಾಸ, ದಾಸರನಾಗನೂರ	ನವಲಗುಂದ ದಾಸರ.
೮	ತಿರಕಪ್ಪಾ ಭರಮಪ್ಪಾ ಮಾದರ ಸಾ॥ ಕುಸ್ಕೂರ	ಅಸ್ಪೃಶ್ಯ.
೯	ಹುನುಮಂತ ತಲ್ಲಘಟ್ಟ	,,
೧೦	ಅಮೃತರಾವ ಮಾಧವರಾವ ಘೋರ್ಪಡೆ, ನೂಲ್ವಿ	ಮರಾಠಾ.
೧೧	ತಿಪ್ಪಣ್ಣಾ ಎಲ್ಲಪ್ಪಾ ಗಂಗಾಧರ (ಬದಲೀಮಾಸ್ತರ) ಧುಮ್ಮವಾಡ	,,
೧೨	ಹಣಮಾಬಾಯಿ ಬೆಗಳ್ಳಿ, ಬದಲೀ ಮಿಸ್ಟ್ರೆಸ್ ಕಳಸ	,,
೧೩	ಜೀವಪ್ಪಾ ಫಕೀರಪ್ಪಾ ತಳವಾರ ಕೋಟುಮಚಗಿ	ತಳವಾರ.
೧೪	ಮುಡಿಯಪ್ಪಾ ಫಕೀರಪ್ಪಾ ಗುಳಗುಂಡಿ ಬಳಗಾನೂರ	,,
೧೫	ಬಾಲಪ್ಪಾ ಪರಸಪ್ಪಾ ಮ್ಯಾಗೇರಿ ಎರಿಬೇಲೇರಿ	,,
೧೬	ಬಸಪ್ಪಾ ಫಕೀರಪ್ಪಾ ತಳವಾರ, ಅಡ್ನೂರ	,,

೧೭ ಶಿದ್ದಪ್ಪಾ ಲಿಂಗಪ್ಪಾ ಜ್ಯಾಬಂಣವರ ಸಾ॥ ಕುಸುಗಲ್ಲ ಕುರಬರು.
೧೮ ಫಕೀರಪ್ಪಾ ಭರಮಪ್ಪಾ ಕೊಂಗವಾಡ ,,
೧೯ ಹೊನಕೇರಪ್ಪಾ ಜುಮ್ಮಪ್ಪಾ ನಾಯಕರ ಅಬ್ಬೀಗೇರಿ ,,
೨೦ ರಾಮಪ್ಪಾ ಫಕೀರಪ್ಪಾ ಮುಶಪ್ಪನವರ ಸಾ॥ ಯರಗುಪ್ಪಿ ,,
೨೧ ಮಹಾದೇವಪ್ಪಾ ಎಲ್ಲಪ್ಪಾ ಕುಸುಗಲ್ಲ ಇಂಗಳಹಳ್ಳಿ ,,
೨೨ ಬಸಪ್ಪಾ ಎಲ್ಲಪ್ಪಾ ಗಿರಡ್ಡಿ ಹಳೀಕೇರಿ (ನವಲಗುಂದ) ರಡ್ಡೇರ.
೨೩ ಭೀಮಪ್ಪಾ ಕೃಷ್ಟಪ್ಪಾ ಕೆತ್ತೂರ ಕರ್ಲವಾಡ ,,
೨೪ ಭೀಮನಗೌಡಾ ಹನಮಂತಗೌಡಾ ಪಾಟೀಲ ಕೊಂಣೂರ. ,,
೨೫ ಚಿನ್ನಪ್ಪಗೌಡಾ ಮುದಿಗೌಡಾ ಗಡ್ಡೀಗೌಡರ
ಸಾ॥ ರಡ್ಡೇರ ನಾಗನೂರ. ,,
೨೬ ರಿಂದವ್ವಾ ಕೋಂ ತಿಮ್ಮಪ್ಪಾ ನಲವಡಿ ,

ಬ್ರಾಹ್ಮಣರು.

೧ ಮಹಾದೇವ ಜೀವಾಜಿ ಗಳಿಗಿ ಲಕ್ಕುಂಡಿ
೨ ಜಗನ್ನಾಥ ಲಕ್ಷ್ಮಣ ಕುಲಕರ್ಣಿ ಕಲಘಟಗಿ (ಬದಲೀ ಅ.) ನವಲಗುಂದ
೩ ಸೋಮರಾವ ವೆಂಕಟೇಶ ಕುಲಕರ್ಣಿ ಹಳ್ಳೀಕೇರಿ (ಗದಗ)
೪. ಭೀಮಾಜಿ ಹನುಮಂತ ಸಬ್ನೀಸ ಧುಂಡಸಿ
೫ ವಿನಾಯಕ ಹಣಮಂತ ಕಾನಡೆ ಕರ್ಜಗಿ

ಲಿಂಗಾಯತರು

೧ ರುದ್ರಗೌಡಾ ಉಜ್ಜನಗೌಡಾ ಪಾಟೀಲ
೨ ವೀರಪ್ಪಾ ರಾ. ಎಲಿಗಾರ (ಬದಲೀ ಮಾಸ್ತರ) ನಿಗದಿ ದೀವಿಗಿಹಳ್ಳಿ.
೩ ಶಿದ್ರಾಮಪ್ಪಾ ಅಂಗಡಿ ಕರ್ಲವಾಡ
೪ ಗೂಳಯ್ಯಾ ಬಸಯ್ಯಾ ಮಠದ ಬದಲಿ ಮಾಸ್ತರ ಶಲವಡಿ
೫ ವಿರುಪಾಕ್ಷಪ್ಪಾ ರಾಮಾಣಿ (ಬದಲಿ ಮಾಸ್ತರ) ಹುಲಕೋಟಿ
೬ ಲಕ್ಷ್ಮಣಗೌಡಾ ದಾನಪ್ಪಗೌಡಾ ಪಾಟೀಲ ಸಾ॥ ಬಲ್ಲರವಾಡ
ತಾ॥ ನವಲಗುಂದ
೭ ಬಸವಂಣೆಯ್ಯಾ ರಾಚಯ್ಯಾ ಕಂಬಾಳಿಮಠ
೮ ಭೀಮನಗೌಡಾ ಲಿಂಗನಗೌಡಾ ಪಾಟೀಲ ಬೆನಕನಕೊಪ್ಪ
ತಾ॥ ನವಲಗುಂದ
೯ ಲಿಂಗಪ್ಪಾ ಬಸಪ್ಪಾ ಡೊಣಗಣ್ಣವರ ಸಾ॥ ಹಳ್ಳಿಯಾಳ
೧೦ ಫಕೀರಪ್ಪಾ ಚನ್ನಪ್ಪಾ ಕೋಳಿವಾಡ ಸಾ॥ ಕೋಳಿವಾಡ
೧೧ ತಿಮ್ಮಪ್ಪಾ ಸಂಗಪ್ಪಾ ಸವಡಿ ಸಾ॥ ರೋಣ
೧೨ ಮಲ್ಲನಗೌಡಾ ರೇಕನಗೌ ಪಾಟೀಲ ಬಳಗಾನೂರ

ಶಿಕ್ಷಕರು ಕಡಿಮೆ ಇದ್ದ ಶಾಲೆಗಳಿಗೋಸುಗ ನೇಮಿಸಲ್ಪಟ್ಟ ೫೧ ಜನ ಅಸಿಷ್ಟಂಟ ಶಿಕ್ಷಕರು.

ಅಸ್ಪೃಶ್ಯರು.

೧ ದೇವಪ್ಪಾ ಗಂಗವ್ವಾ ಕಾಳಿ ಹಾವನೂರ (ಕರ್ಜಗಿ)
೨ ಯಲ್ಲಪ್ಪಾ ಕೆಂಚಪ್ಪಾ ಮುಚಿಗಾರ (ಕಲಘಟಗಿ).

ಮುಸಲ್ಮಾನರು.

ಉರ್ದು ಶಾಲೆಗಳಬಗ್ಗೆ.

೧ ಮಹಾಬೂಬ ಜಕಾತಿ, ಬಂಕಾಪೂರ
೩ ರಾಜೇಖಾನ ಅಬ್ದುಲ್‌ಖಾನ ಲೋಡಿ, ನರಗುಂದ
೩ ಮಹಮ್ಮದಸಾಬ ಮಹಾಬೂಬಸಾಬ, ಕೋಟಮುಚಗಿ
೪ ಅಮೀನಸಾಬ ರಾಜೇಸಾಬ ಕಿಲ್ಲೇದಾರ
೫ ಅಬ್ದುಲ್‌ಖಾದರ ಅಬ್ದುಲ್‌ಕಾಸೀಮ ಸಿಗ್ಗಾಂವ
೬ ಪಖುರುದ್ದೀನ ಬುಡನಸಾಬ ತುಮ್ಮಿನಕಟ್ಟಿ
೭ ಅಬ್ದುಲ್‌ವಹಾಬ ಮೋದಿನಸಾಬ ಖಾಜಿ, ಅಂಣಿಗೇರಿ
೮ ಮುಸ್ತಾಫಾ ಮಖಾನದಾರ, ಗದಗ

ಕನ್ನಡ ಶಾಲೆಗಳಿಗೆ.

೯ ಮಹಮ್ಮದಗೌಸ ಹುಶೇನಸಾಬ ಸಿವಮೊಗ್ಗಾ, ಹಿರೇಕೆರೂರ
೧೦ ಹುಸೇನಸಾಬ ಇಮಾಮಸಾಬ ಪಿಂಜಾರ, ಹುಲಕೋಟಿ
೧೧ ಅಬ್ದುಲ್ ಗಫಾರ ರಾಜೇ ಅಮ್ಮದ ಪೀರಜಾದೆ, ನವಲಗುಂದ

ಇತರ ಜಾತಿಯವರು.

೧	ಭರಮಪ್ಪಾ ರಾಮಪ್ಪಾ ವಡ್ಡರ) ಸಿರಗುಪ್ಪಿ	ವಡ್ಡರ
೨	ರಾಮಾ ಧನಜಿ ಲಮಾಣಿ	ಲಮಾಣಿ
೩	ಕೆಂಚಪಾ ಲಿಂಗಪ್ಪಾ ತಳವಾರ, ದಾಸ್ತಿಕೊಪ	ತಳವಾರ
೪	ಪಕ್ಕೀರಪ್ಪಾ ಯಮನಪ್ಪಾ ತಳವಾರ ತೋಗನೂರ	,,
೫	ದೇವೇಂದ್ರಪ್ಪಾ ಉಡಚಪ್ಪ ಅಡವಿಯವರ ಕಾಡನಪೂರ	,,
೬	ಹನಮಂತಪ್ಪಾ ಯಲ್ಲವ್ವಾ ತಳವಾರ	,,
೭	ಪಕ್ಕೀರಪ್ಪಾ ಹನಮಪ್ಪಾ ನಾಯಕರ, ಅಮರಗೊಳ ನವಲಗುಂದ	ಕುರಬರ
೮	ಮಹಾದೇವಪ್ಪಾನಿಂಗಪ್ಪಾ ಹೊನ್ನಿಹಳ್ಳಿ ಸಿರಗುಪ್ಪಿ, ಹುಬ್ಬಳ್ಳಿ	,,
೯	ಸಿದ್ದಪ್ಪಾ ಪಕ್ಕೀರಪ್ಪಾ ಬಡಪಕ್ಕೀರಪ್ಪನವರ ಮಲ್ಲಿಗವಾಡ	,,
೧೦	ಬಸಲಿಂಗಪ್ಪಾ ಮಲ್ಲಪ್ಪಾ ಕಸವಾಲ, ಡಂಬಳ ಗದಗ	,,
೧೧	ಶಿವರಾಯಪ್ಪಾ ಸಂಗಪ್ಪಾ ಗ್ಯಾನಪ್ಪನವರ ಅಮರಗೋಳ ನವಲಗುಂದ	,,

೧೨ ಯಲ್ಲಪ್ಪಾ ರಾಜಪ್ಪಾ ಖೇತ್ರಿಖಾನನವರ, ಕಲಘಟಗಿ ಮರಾತರು.
೧೩ ಸಂಗಪ್ಪಾ ರಾಮಪ್ಪಾ ಹವಾಲದಾರ ಅಂಣೇಗೇರಿ ,,
೧೪ ಪಕ್ಕೀರಪ್ಪಾ ಬಸಪ್ಪಾ ಆರೇರ, ಕೊಂಕಣ ಕುರಹಟ್ಟಿ, ಹುಬ್ಬಳ್ಳಿ ,,
೧೫ ತಾರಾಸಿಂಗ ಗೋವಿಂದಸಿಂಗ ಬಳಗಾನೂರ ರಜಪೂತ.
೧೬ ರಾಮಚಂದ್ರ ವೆಂಕಟೀಶ ಬಸಿಡೋಣಿ ಕುರಗೋವಿನಕೊಪ್ಪ
ನವಲಗುಂದ ಇತರ.
೧೭ ಹನಮಂತಪ್ಪಾ ಪರಶುರಾಮಪ್ಪಾ ಪತಂಗಿ ಕೋಟಮುಚಗಿ ಗದಗ ,,
೧೮ ಸೋಮಪ್ಪಾ ಮಲ್ಲಪ್ಪಾ ವಿಭೂತಿ ರಾಣೇಬಿನ್ನೂರ ,,
೧೯ ಮಾನಪ್ಪಾ ಲಿಂಗಪ್ಪಾ ಕಮ್ಮಾರ ಅಳಗವಾಡಿ ನವಲಗುಂದ ಪಂಚಾಳರು.
೨೦ ಚೆಳ್ಳನಗೌಡಾ ಮರಿಗೌಡಾ ಪಾಟೀಲ ನವಲಗುಂದ ಜೈನರು.

ರಡ್ಡೇರು.

೧ ವೆಂಕಪ್ಪಾ ಪಕ್ಕೀರಪ್ಪಾ ಮಾಕೊಳ್ಳ, ಹೆಬಸೂರ ಹುಬ್ಬಳ್ಳಿ
೨ ಬಸವರಡ್ಡಿ ವೆಂಕರಡ್ಡಿ ನಾವಳ್ಳಿ ತಿರ್ಲಾಪೂರ
೩ ಗೋವಿಂದಪ್ಪಾ ಅಡಿವೆಪ್ಪಾ ಕುರಟ್ಟಿ ಅಳಗವಾಡಿ
೪ ಭೀಮರಡ್ಡಿ ಹನಮರಡ್ಡಿ ರಡ್ಡೇರ ಹುಲಿಹಳ್ಳಿ ರೋಣ

ಲಿಂಗಾಯತರು.

೧ ಎ. ಎಚ್. ಹಿರೇಮಲ್ಲಾಪೂರ ಮಂಟೂರ ಹುಬ್ಬಳ್ಳಿ
೨ ಸೊಲಬಯ್ಯಾ ಸೋಮಯ್ಯಾ ಸಾಲೀಮಠ, ಬೆಳವಟಗಿ, ನವಲಗುಂದ
೩ ಕ್ಯಾತಪ್ಪಾ ಬಸಪ್ಪಾ ಕಮಡೊಳ್ಳಿ, ಕಿರೇಸೂರ, ಹುಬ್ಬಳ್ಳಿ
೪ ಸೋಮಪ್ಪಾ ಯಲ್ಲಪ್ಪಾ ಕಮಡೊಳ್ಳಿ, ಕಿರೇಸೂರ, ಹುಬ್ಬಳ್ಳಿ
೫ ತೋಟಪ್ಪಾ ಸಂಕಪ್ಪಾ ಚಿಪ್ಪಡಿ, ಇಬ್ರಾಹಿಮಪೂರ, ನವಲಗುಂದ
೬ ಅಡವೆಯ್ಯಾ ಸಂಗಯ್ಯಾ ಹಾಳಕೇರಿ ಶಬ್ಬೀಗೇರಿ, ರೋಣ
೭ ಹೊಳಿಯಪ್ಪಾ ಅಯ್ಯಪ್ಪಾ ಕುರಹಟ್ಟಿ, ಸವಡಿ, ರೋಣ
೮ ಚನ್ನಪ್ಪಾ ಮರಿಯಪ್ಪಾ ಮುಂಗಲಿ, ದಾಸ್ತೀಕೊಪ್ಪ, ಕಲಘಟಗಿ
೯ ವೀರಪ್ಪಾ ನಾಗಪ್ಪಾ ನೆಗಳೂರ, ಬೆಳಗಾಲಪೇಟ
೧೦ ಬಸಪ್ಪಾ ಮಲ್ಲಪ್ಪಾ ಬೆಂತೂರ, ಕುರ್ತಕೋಟಿ, ಗದಗ
೧೧ ಲಿಂಗಪ್ಪಾ ಸಿವಪ್ಪಾ ನಾಯಕರ, ನಲವಡಿ, ನವಲಗುಂದ
೧೨ ಸಿದಲಿಂಗಪ್ಪಾ ಸಿದಬಸಪ್ಪಾ ಹೊಸೂರ, ಸಿಡೇನೂರ
೧೩ ಮಹಾದೇವಪ್ಪಾ ದೊಡ್ಡಹಾಲಪ್ಪಾ ಹರಿಹರ, ಇಟಗಿ, ರಾಣೇಬಿನ್ನೂರ
೧೪ ಗದಿಗೆಪ್ಪಾ ಸೋಮಪ್ಪಾ ಕೆರೂರ, ಹತ್ತೀಮತ್ತೂರ, ಕರ್ಜಗಿ

ಧಾರವಾಡ ಜಿಲ್ಲಾ ಸ್ಕೂಲ ಬೋರ್ಡಿನ

ಸನ್ ೧೯೨೮-೨೯ ಸಾಲಿನ ಅಂದಾಜ ಪತ್ರಿಕೆಯು

ಆಯುದ ಬಾಬುಗಳು.

ಬಾಬುಗಳು.	ರೂ.	ಅ.	ಪೈ
ಎಜ್ಯುಕೇಶನ್ ಸೆಸ್ಸ.	೬೭೦೭೪	೦	೦
ಅಬಕಾರಿ ಉತ್ಪನ್ನ.	೫೦೧೯	೦	೦
ಶಾಲೆಗಳಿಂದ ಫೀ. ವಸೂಲ.	೧೬೦೪೧	೦	೦
ಸರಕಾರದಿಂದ ಗ್ರ್ಯಾಂಟು.	೭೩೫೪೪೬	೦	೦
ಡೆಪಾಸ್ಟಾಕ ಮತ್ತು ಪುಸ್ತಕಗಳ ಮಾರಾಟ.	೧೫೦	೦	೦
ಸರಕಾರದಿಂದ ಸಾಲ.	೧೦೦೦೦	೦	೦
ಕಂಟ್ರಾಕ್ಟರರಿಂದ ಅಡ್ವಾನ್ಸ	೧೨೦೩೭	೦	೦
ವಾರಲೋನದ ಮೇಲಿನ ಬಡ್ಡಿ	೬೦೦	೦	೦
ಶಾಲೆಗಳ ಕಟ್ಟಡಗಳ ಬಗ್ಗೆ ಸರಕಾರದಿಂದ ಗ್ರ್ಯಾಂಟು....	೪೫೧೫	೦	೦
ಒಟ್ಟು ಬೆರೀಜು.	೮೯೩೧೯	೦	೦
ಹೋದ ವರ್ಷದ ಶಿಲ್ಕು.	೨೬೬೦೧೮	೦	೦
ಅಂತೂ.	೧೧೫೪೮೧೭	೦	೦

ಧಾರವಾಡ ಜಿಲ್ಹಾ ಸ್ಕೂಲಬೋರ್ಡಿನ

ಸನ: ೧೯೨೮-೨೯ ಸಾಲಿನ ಆಂದಾಜಪತ್ರಿಕೆಯ

ವ್ಯಯದ ಬಾಬುಗಳು.

ಬಾಬುಗಳು.	ರೂ	ಆ.	ಪೈ.
ಶಿಕ್ಷಕರ ಪಗಾರ.	೬೦೩೪೦೭	೦	೦
ಟ್ರೇಂಡ ಶಿಕ್ಷಕರಿಗೆ ಭಡತಿ.	೬೭೪೪	೦	೦
ಅನ್‌ಟ್ರೇಂಡ ಶಿಕ್ಷಕರಿಗೆ ಭಡತಿ.	೫೬೦	೦	೦
ಹೆಡ್‌ಮಾಸ್ತರರ ಮತ್ತು ೧ನೇ ಅಸಿಸ್ಟಂಟರ ಅಲಾವನ್ಸ. ...	೫೦೪೬೬	೦	೦
ಕಸೂತಿ ಬಾಯಿ ಪಗಾರ.	೬೭೨೦	೦	೦
ಚಾಕರರ ಪಗಾರ.	೬೪೪೪	೦	೦
ಬಾಡಿಗಿ.	೭೯೫೦	೦	೦
ಸಾದಿಲವಾರ.	೧೫೦೨೫	೦	೦
ಟ್ರಾವಲಿಂಗ ಅಲಾವನ್ಸ.	೧೮೦೦	೦	೦
ಫರ್ನಿಚರ.	೧೫೦೦	೦	೦
ಪುಸ್ತಕ ಮತ್ತು ನಕಾಶೆಗಳು.	೭೧೦	೦	೦
ಇನಾಮು.	೨೦೦	೦	೦
ಕ್ರಿಮಿನಲ್ ಟ್ರಾಯಿಬ ಹುಡುಗರಿಗೆ ಪುಸ್ತಕ	೨೦೦	೦	೦
ಹಿಂದುಳಿದ ವರ್ಗದ ಜಾತಿಯ ವಿದ್ಯಾರ್ಥಿಗಳಿಗೆ ಪುಸ್ತಕ ...	೫೦೦	೦	೦
ಅಸ್ಪೃಶ್ಯ ವರ್ಗದ ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಪಾಟಿ ...	೨೫೪೦	೦	೦
ವಾರ ಅಲಾವನ್ಸ.	೭೪೪೦	೦	೦
ಎಡ್ಮಿನಿಸ್ಟ್ರೇಟಿವ್ಹ ಆಫೀಸರ ಪಗಾರ.	೪೮೦೦	೦	೦
ಎಂಟು ಜನ ಸುಪರವಾಯಝುರರ ಪಗಾರ	೮೦೪೦	೦	೦
ಆರುಜನ ಕಾರಕೂನರ ಪಗಾರ.	೪೭೧೦	೦	೦
ಹನ್ನೆರಡುಜನ ಸಿಪಾಯರ ಪಗಾರ.	೨೧೯೬	೦	೦
ಎ ಓ. ಆಫೀಸರ ಸಾದಿಲವಾರ.	೨೫೮	೦	೦
ಸುಪರವಾಯಝುರರ ಸಾದಿಲವಾರ.	೬೦೦	೦	೦
ಎ. ಓ. ಸ್ಟೇಶನರಿ.	೫೦೦	೦	೦
ಎ ಓ. ಟಪಾಲ ಖರ್ಚು.	೧೫೦೦	೦	೦
ಸುಪರವಾಯಝುರರ ಟಪಾಲ ಖರ್ಚು.	೨೦೦	೦	೦
ಎಡ್ಮಿನಿಸ್ಟ್ರೇಟಿವ್ಹ ಆಫೀಸರನ ಫಿರ್ತಿ ಅಲಾವನ್ಸ	೧೮೦೦	೦	೦
ಸುಪರವಾಯಝುರರ ಫಿರ್ತಿ ಅಲಾವನ್ಸ	೪೦೦೦	೦	೦
ಚೀಅರಮನ್ನರ ಫಿರ್ತಿ ಅಲಾವನ್ಸ.	೧೬೦೦	೦	೦
ಮೆಂಬರ ಫಿರ್ತಿ ಅಲಾವನ್ಸ.	೨೪೦೦	೦	೦
ಎ. ಓ. ಮತ್ತು ಸ್ಟಾಫ್ ಪ್ರಾರಂಭದ ಖರ್ಚು	೧೨೫೦	೦	೦
ಸ್ಕೂಲಬೋರ್ಡ ಆಫೀಸ ಲಾಯಬ್ರರಿ ಪುಸ್ತಕಗಳು.	೨೦೦	೦	೦
ಕಡಿಮೆ ಜನ ಶಿಕ್ಷಕರಿದ್ದ ಶಾಲೆಗಳ ಬಗ್ಗೆ ೫೦ ಜನ ಹೆಚ್ಚಿನ ಅಸಿಸ್ಟಂಟರ ಪಗಾರ. ...	೧೪೧೨೦	೦	೦

ಬಾಬುಗಳು	ರೂ.	ಅ.	ಪ
ಹೊಸದಾಗಿ ತೆಗೆಯುವ ೫೦ ಶಾಲೆಗಳ ಬಗ್ಗೆ ...	೨೨೦೦೦	೦	
ಸೆಕ್ಷನ್ನ ೨೬ (೩) ನೇದರ ಪ್ರಕಾರ ಪ್ರಾಕ್ಟಿಕಲ್ ಶಿಕ್ಷಣ ಬಗ್ಗೆ ...	೫೦೦೦	೦	
ಗಾನಟಿ ಶಾಲೆಗಳ ಶಿಕ್ಷಕರ ಪಗಾರ. ...	೨೧೬	೦	
ಗಾನಟಿ ಶಾಲೆಗಳ ಸಾಮಿಲವಾರ.	೯೬೮	೦	
ಗಾನಟಿ ಶಾಲೆಗಳ ಬಾಡಗಿ.	೨೯೨	೦	
ಕಾಂಟ್ರಾಕ್ಟರರಿಗೆ ಡಿಪಾಜಿಟಿ ಹಣ ಪರತ ಕೊಡುವದು. ...	೫೮೦	೮	
ಸೆಕ್ಷನ್ನ ೨೯ ನೇ ದರ ಪ್ರಕಾರ ರಿಫಂಡು.	೩೮೦	೮	
ಮ್ಯೂನಿಸಿಪಲ್ಯಾಲಿಟಿನಿಂದ ಖರ್ಚು.	೭೮೦	೮	
ಸ್ಕೂಲಮೇಷ್ಟರ ಆಫೀಸಿನ ಬಾಡಗಿ.	೨೫	೦	
ಪ್ರಮಿನಷ್ ಟ್ರಾಯಬ ಶಾಲೆಗಳಿಗೆ ಮುನಸಿಪಾಲ್ಟಿ ಗ್ರ್ಯಾಂಟು ...	೫೭೬	೦	
ಗಾನಟಿ ಶಾಲೆಗಳಿಗೆ ಗ್ರ್ಯಾಂಟು.	೬೦೦	೦	
ಪ್ರೈವಿಟಿಕ ಶಾಲೆಗಳಿಗೆ ಸ್ಕಾಲರಶಿಪ್ಪು.	೧೫೫೬೮	೦	
ಮುಸಲ್ಮಾನ ಹೆಣ್ಣು ಮಕ್ಕಳಿಗೆ ಸ್ಕಾಲರಶಿಪ್ಪು ...	೨೬೪೮	೦	
ಪೆನ್ಶನ್ ಫಂಡ.	೪೦೦	೦	
ಪಾನಗಿ ಛಾಪಖಾನೆಯಲ್ಲಿ ಮಾಡಿಸಿದ ಛಾಪನಾವಳಿ. ...	೫೫೦	೦	
ಸರಕಾರಿ ಛಾಪಖಾನೆಯಲ್ಲಿ ಮಾಡಿಸಿದ ಛಾಪನಾವಳಿ. ...	೫೦	೦	
ಇತರ ಮತ್ತು ಆಕಸ್ಮಿಕ ಕಾರಣಗಳ ಬಗ್ಗೆ	೫೦	೦	
ಹೊಸ ಕಟ್ಟಡಗಳ ಬಗ್ಗೆ.	೫೦೦೦	೦	
ಹಳೆ ಶಾಲೆಗಳ ಸ್ಪೇಶಲ್ ರಿಪೇರಿ.	೮೪೬೪	೦	
ಸಾಧಾರಣ ರಿಪೇರಿ	೧೦೫೦೦	೦	
ಪಾಲಿಟೀನ ಬಾಂಡಿನಲ್ಲಿ ಠೇವು.	೧೦೦೦೦	೦	
ಒಟ್ಟು ಖರ್ಚು.	೯೧೪೪	೦	೦
೩೧-೩-೩೪ ದಿವಸದ ಶಿಲ್ಕು.	೨೪೩೨೧	೦	
ಅಂತೂ	೧೧೫೪೧೪	೦	

ಟೀಪು— ಡಿ॥ ಲೋಕಲ್ ಬೋರ್ಡಿನ ಆಡಳಿತೆಯಲ್ಲಿದ್ದ ಮುನಸಿಪ್ಯಾಲಿಟಿ ಶಾಲೆಗ ಆಯವ್ಯಯದ ಅಂದಾಜು ಪತ್ರಿಕೆಯು ಮುಂದಿನ ಸಂಚಿಕೆಯಲ್ಲಿ ಕೊಡಲ್ಪಡುವದು

ಲೇಖಕರಿಗೆ ಸೂಚನೆಗಳು.

೧ ಲೇಖಗಳನ್ನು ಸುವಾಚ್ಯ ಅಕ್ಷರದಲ್ಲಿ ಕಾಗದದ ಒಂದೇ ಮಗ್ಗಲಿಗೆ ಮಾರ್ಜನ ಇಟ್ಟು ಬರೆದು ಕಳುಹಿಸಬೇಕು.

೨ ಶ್ಲೋಕಗಳನ್ನೂ ಗ್ರಂಥಗಳೊಳಗಿನ ಅವತರಣಿಕೆಗಳನ್ನೂ ಹೆಚ್ಚು ಜಾಗ್ರತೆಯಿಂದ ಬರೆಯಬೇಕು.

೩ ಪ್ರಾಥಮಿಕ ಶಿಕ್ಷಣ ವಿಷಯವಲ್ಲದೆ, ಐತಿಹಾಸಿಕ, ವಾಂಙ್ಮಯ, ಶಾಸ್ತ್ರೀಯ, ನೈತಿಕ, ಮುಂತಾದ ವಿಷಯಗಳನ್ನು ಕುರಿತು ಬರೆದ ಲೇಖಗಳು ಸ್ವೀಕರಿಸಲ್ಪಡುವವು

೪ ಚಿಕ್ಕ ಚಿಕ್ಕ ಲೇಖಗಳಿಗೆ ಬೇಗನೆ ಇಂಬು ದೊರೆಯಬಹುದು.

೫ ಮೂಲ ವಿಷಯಕ್ಕೆ ವ್ಯತ್ಯಾಸ ಬಾರದಂತೆ ಲೇಖಗಳಲ್ಲಿ ಹೆಚ್ಚು ಕಡಿಮೆ ಮಾಡುವ ಅಧಿಕಾರವು ಸಂಪಾದಕರಿಗೆ ಉಂಟು.

೬ ಸ್ವೀಕರಿಸದೆ ಇದ್ದ ಲೇಖಗಳನ್ನು ತಿರುಗಿ ಕಳುಹಿಸುವ ನಿರ್ಬಂಧವಿಲ್ಲ.

ವಾಚಕರಲ್ಲಿ ವಿನಂತಿ.

ಈ ಪತ್ರಿಕೆಯನ್ನು ಹೊರಡಿಸುವ ಯೋಜನೆಯ ಬಗ್ಗೆ ಸ್ಕೂಲ್ ಬೋರ್ಡಿನ ಕಡೆಯ ನಿರ್ಧಾರವು ಜೂನ ತಿಂಗಳ ಆದಿಯಲ್ಲಿ ಆದದ್ದಾಯಿತು. ಇದರ ಪೂರ್ವ ಸಿದ್ಧತೆ ಮತ್ತು ವ್ಯವಸ್ಥೆಗೆ ಕೆಲವು ದಿವಸಗಳು ಹಿಡಿದದ್ದಾಯಿತು. ವರ್ಷಾರಂಭದಿಂದಲೇ ಪತ್ರಿಕೆಯನ್ನು ಪ್ರಾರಂಭಿಸಬೇಕಾದುದರಿಂದ, ಈ ಪ್ರಥಮ (ಎಪ್ರಿಲ) ಸಂಚಿಕೆಯ ಪ್ರಕಟನೆಗೆ ಜೂನ ತಿಂಗಳ ಕೊನೆಗಂಡಿತು. ಆದರೆ ಮೇ, ಜೂನ ಸಂಚಿಕೆಗಳನ್ನು ಜುಲೈ ತಿಂಗಳ ಕೊನೆಯೊಳಗಾಗಿ, ಜುಲೈ, ಅಗಷ್ಟ ಸಂಚಿಕೆಗಳನ್ನು ಅಗಷ್ಟ ತಿಂಗಳ ಕೊನೆಯೊಳಗಾಗಿ ಪ್ರತ್ಯೇಕ ಪ್ರಕಟಿಸುವೆವು. ಆದ್ದರಿಂದ ಮುಂದಿನ ಸಂಚಿಕೆಗಳು ಹೊರಡುವ ಕಾಲಾವಧಿಯು ತೀರ ಸಮೀಪಿಸಿದ್ದರಿಂದ ಲೇಖಕರು ತಡೆಯಿಲ್ಲದೇ ಲೇಖಗಳನ್ನು ಕಳುಹಿಸುವರೆಂದು ಕೋರಿಕೆ.

ಪ್ರಕಾಶಕ

ಪತ್ರ ವ್ಯವಹಾರವನ್ನು ಮ್ಯಾನೇಜಿಂಗ ಏಡಿಟರ ಎಚ್. ಎಫ್ ಕಟ್ಟೀಮನಿ, ಬಿ
ಇವರ ಕೂಡ ಮಾಡತಕ್ಕದ್ದು.